ಗಂಭೀರವಾಗಿ ಪರಿಗಣನೆ ಮಾಡಬೇಕು. ಮತ್ತು ಹೊಸ ಶಾಸಕರಿಗೆ ಮಾದರಿಯಾಗುವ ರೀತಿಯಲ್ಲಿ ಅವರು ನಡೆದುಕೊಳ್ಳಬೇಕು ಎಂದು ಅವರಿಗೆ ತಿಳಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ನೀವು ನಿನ್ನೆ ಒಂದು ತರಹ ಡ್ರೆಸ್- ಹಾಕಿದ್ದೀರಿ, ಇವತ್ತು ಒಂದು ತರಹ ಹಾಕಿದ್ದೀರಿ, ನಿಮ್ಮನ್ನು ಗುರುತು ಹಿಡಿಯುವುದು ಹೇಗೆ?

ಒಬ್ಬ ಮಾನ್ಯ ಸದಸ್ಯರು : ನಿನ್ನೆ ತುಂಬಾ ಸೆಕೆ ಇದ್ದ ಕಾರಣ ಸ್ವಲ್ಪ ಬೆವರು ಬಂದಿತು ಇದರಿಂದ ಕೊಳೆ ಜಾಸ್ತಿಯಾಯಿತು, ಅದಕ್ಕೆ ಹೊಸದಾಗಿ ಹಾಕಿಕೊಂಡು ಬಂದಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ವಿರೋಧ ಪಕ್ಷದವರ ಅಭಿಪ್ರಾಯಕ್ಕೆ ನನ್ನ ಪೂರ್ಣ ಸಹಮತ ಇದೆ. ಬಹುಶಃ ಬಸ್ ಮಾಲೀಕರು ಬಂದಿದ್ದಾರೆ ಅವರ ಜೊತೆ ಏನೋ ಸಭೆ ನಡೆಸುತ್ತಿರ ಬಹುದು ಎಂದು ಕಾಣುತ್ತದೆ. ಇಲ್ಲಿ ಮಾನ್ಯ ಸದಸ್ಯರು ಏನು ಹೇಳುತ್ತಾರೆ ಅದನ್ನು ಎಲ್ಲಾ ಬರೆದುಕೊಂಡು ಅವರ ಗಮನಕ್ಕೆ ತರುತ್ತೇನೆ. ಇನ್ನು ಅಧಿಕಾರಿಗಳು ಇಲ್ಲಿ ಇರಬೇಕು ಎಂದು ನಾವು ಆಜ್ಞೆ ಕೊಟ್ಟಿದ್ದೇವೆ. ಕೆಲವರು ಸಕಾಲಕ್ಕೆ ಬಂದಿಲ್ಲ ಅಂಥವರಿಗೆ ಎಚ್ಚರಿಕೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ ಎಂದು ತಮ್ಮ ಮೂಲಕ ಸಭೆಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳಿಕೆ ಕೊಟ್ಟಿದ್ದರು ನನ್ನ ಕ್ಷೇತ್ರದಲ್ಲಿ ಬಸ್ ಇಲ್ಲದೆ ವಿದ್ಯಾರ್ಥಿಗಳ ಜೀವನ ಹಾಳಾಗುತ್ತಾ ಇದೆ. ಪರೀಕ್ಷೆಗೆ ಹೋಗಿ ಅಟೆಂಡ್ ಮಾಡುವುದಕ್ಕೆ ಆಗುತ್ತಾ ಇಲ್ಲ.

ಅಧ್ಯಕ್ಷರು : ನೀವು ಇದನ್ನು ಪಂಚಾಯಿತಿ ಮಾಡಬೇಡಿ, ಇದು ಅಸೆಂಬ್ಲಿ. ನಿನ್ನೆ ಎಲ್ಲಾ ಅಷ್ಟು ಸವಿಸ್ತಾರವಾಗಿ ಚರ್ಚೆ ಮಾಡಿದ್ದೀರಿ.

ಶ್ರೀ ಅರಗ ಜ್ಞಾನೇಂದ್ರ : ಅವರು ಹೇಳಿದ್ದರು ಸಹ ಏನೂ ಪರಿಣಾಮವಾಗಲಿಲ್ಲ.

1995-96ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಈ ಆಯವ್ಯಯ ಚರ್ಚೆ ಈ ವರ್ಷದಲ್ಲಿ ಪ್ರಮುಖವಾದಂತಹ ಚರ್ಚೆ, ಈ ಸಭೆಯ ಕಾರ್ಯಕಲಾಪ ಬಹಳ ಸುದೀರ್ಘವಾಗಿ ಇರಬೇಕು ಎನ್ನತಕ್ಕದ್ದು ಎಲ್ಲರ ಅಭಿಲಾಷೆ ಮತ್ತು ಅನಿಸಿಕೆ. 'ಮತ್ತು ಕರ್ತವ್ಯ. ಈ ಸಂದರ್ಭದಲ್ಲಿ ಆಯವ್ಯಯ ಚರ್ಚೆ ಕೇವಲ ಎರಡು ದಿವಸಗಳಿಗೆ ಮಾತ್ರ ಸೀಮಿತವಾಗಿದೆ. ಇದು ಪ್ರಜಾಪ್ರಭುತ್ವಕ್ಕೆ ಒಳ್ಳೆಯ ಆರೋಗ್ಯಕರವಾದ ಲಕ್ಷಣವಲ್ಲ. ನೀವು ಏನೇ ಕಥೆಯನ್ನು ಹೇಳಬಹುದು. ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯತ್ ಚುನಾವಣೆಯಿತ್ತು. ಆದುದುರಿಂದ ಈ ಸದನವನ್ನು ಕರೆಯುವುದು ತಡವಾಯಿತು. ಅದಕ್ಕಾಗಿ ಆಯವ್ಯಯವನ್ನು ಬಹಳ ಆತುರಾತುರವಾಗಿ ಚರ್ಚಿಸುತ್ತಿದ್ದೇವೆ ಎಂದು, ಕಡಿಮೆ ದಿವಸಗಳನ್ನು ಕರೆದಿದ್ದೇವೆ, ಎನ್ನುವ ವಾದವಿದೆಯಲ್ಲ, ಅದು ಒಂದು ವಾದಕ್ಕೆ ವಸ್ತುವಾಗಬಹುದು. ಅಷ್ಟೇ ಹೊರತು ಪ್ರಾಮಾಣಿಕತೆಗೆ ಬಹಳ ದೂರ. ಸಾಮಾನ್ಯವಾಗಿ ಈ

ಸದನವನ್ನು ಕನಿಷ್ಟ 100 ದಿವಸಗಳಾದರೂ ನಡೆಸಬೇಕು, 100 ದಿವಸಗಳು ಯಾವ ಯಾವ ಕಾಲದಲ್ಲಿ ನಡೆಸಕ್ಕದ್ದು ಎಂಬ ಬಗ್ಗೆ ನಿರ್ಧಾರವಾಗಬೇಕು. ಲೋಕಸಭೆ ಹೇಗೆ ಆಯಾ ಕಾಲಕ್ಕೆ ತಕ್ಕಂತೆ ಯಾವುದೇ ಸಂದರ್ಭದಲ್ಲಿ ಏನೇ ನಡೆದರೂ ದೇಶದಲ್ಲಿ ಆಯಾ ಕಾಲಕ್ಕೆ ತಕ್ಕಂತೆ ಲೋಕ ಸಭೆ ಸೇರುತ್ತದೆ. ನಾವೂ ಸಹ ಅದೇ ರೀತಿ ಶಾಸನಸಭೆಯನ್ನು ಕಾಲಕಾಲಕ್ಕೆ ನಡೆಸುವಂತಹ ವ್ಯವಸ್ಥೆಯನ್ನು ಪ್ರಾಮಾಣಿಕವಾಗಿ ಮತ್ತು ಕಟ್ಟುನಿಟ್ಟಾಗಿ ಆಚರಣೆಗೆ ತರುವಂತಹ ವ್ಯವಸ್ಥೆಗೆ ನಾವು ಹೋಗಬೇಕಾಗಿದೆ. ಆ ವ್ಯವಸ್ಥೆಗೆ ಹೋಗಬೇಕಾದರೆ ತಾವು ಮತ್ತು ಸರ್ಕಾರ ಮತ್ತು ವಿರೋಧಪಕ್ಷದ ಮುಖಂಡರೆಲ್ಲರೂ ಕುಳಿತು ಪ್ರಾಮಾಣಿಕವಾದಂತಹ ಚರ್ಚೆಯನ್ನು ಮಾಡಿ ಒಂದು ತೀರ್ಮಾನಕ್ಕೆ ಬರಬೇಕು. ಆದರೆ ಸರ್ಕಾರ 100 ದಿವಸಗಳ ಕಾಲ ಶಾಸನಸಭೆಯನ್ನು ಕರೆಯುವುದಕ್ಕೆ ಅವರ ಮನಸ್ಸಿನಲ್ಲಿ ಏನಿದೆಯೋ ನನಗೆ ಗೊತ್ತಿಲ್ಲ. ಹಿಂದಿನ ಮಾನ್ಯ ಎಸ್.ಎಂ. ಕೃಷ್ಣರವರು ಇದ್ದಾಗ 100 ದಿವಸಗಳ ಅಧಿವೇಶನವನ್ನು ಕರೆಯಬೇಕಂಬ ವಾದ ಚರ್ಚೆಯ ವಸ್ತುವಾಗಿತ್ತು. ತಾವು ಸಹ ಇತ್ತೀಚೆಗೆ ಮೈಸೂರಿನಲ್ಲಿ ನಡೆದಂತಹ ಶಾಸಕರ ಸಭೆಯಲ್ಲಿ ಕೆಲವು ಕಡೆ 100 ದಿವಸಗಳ ಕಾಲ ಈ ಸದನ ಆಗಬೇಕೆಂಬ ಬಗ್ಗೆ ತಾವು ಹೇಳಿದ್ದೀರಿ. ನಾನು ಅದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ಈ ರೀತಿ 100 ದಿವಸಗಳ ಸಭೆ ಸೇರಿದಾಗ ಸರ್ಕಾರದ ಅನೇಕ ಆಗುಹೋಗುಗಳ ಮತ್ತು ಸರ್ಕಾರದ ಅನೇಕ ವಿಚಾರಗಳ ಬಗ್ಗೆ ಚರ್ಚೆ ನಡೆಸತಕ್ಕಂಥ ಅವಕಾಶ ಸದಸ್ಯರಿಗೆ ಸಿಕ್ಕುತ್ತದೆ, ಎಂದು ತಮಗೆ ಹೇಳುತ್ತೇನೆ. ಮಹಾ ನಗರಪಾಲಿಕೆಗಳು ಮತ್ತು ಪುರಸಭೆಗಳು ತಿಂಗಳಿಗೆ ಕನಿಷ್ಟ ಮೂರು ಸಾರಿ ಸಭೆ ಸೇರುತ್ತಾರೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಹೇಳುತ್ತಿದ್ದಾರೆ ಹಾಗೆ ತಿಂಗಳಿಗೊಂದು ಒಂದು ಸಾಮಾನ್ಯ ಸಭೆ ವಿಷಯಗಳ ಮೇಲೆ ಒಂದರೆಡು ಸಭೆಗಳು ನಡೆಯುತ್ತವೆ.

ಶ್ರೀ ವಾಟಾಳ್ ನಾಗರಾಜ್ : ಆ ಸಭೆಗಳಾದರೂ ತಿಂಗಳಿಗೆ ಮೂರು ಸಾರಿ ಸೇರುತ್ತವೆ. ನಮ್ಮದು ಆಯವ್ಯಯವೂ ಸೇರಿದಂತೆ 6 ತಿಂಗಳಿಗೆ ನೇರವಾಗಿ ಲೇಖಾನುದಾನವನ್ನು ಪಡೆಯುತ್ತಿದ್ದೀರಿ. 6 ತಿಂಗಳು ಕರೆಯಲೇಬೇಕು ಎನ್ನುವ ಉದ್ದೇಶವಿಲ್ಲ, 6 ತಿಂಗಳಕೊನೆ ಒಂದು ದಿವಸವಿದೆ ಎನ್ನುವಾಗ ನೀವು ಅನಿಸುವುದೇನೆಂದರೆ ನಮ್ಮ ನಮ್ಮ ಅನುಕೂಲಕ್ಕೆ ತಕ್ಕಂತೆ ಈ ಸಭೆಯನ್ನು ನಡೆಸಿಕೊಂಡು ಹೋಗಬಾರದು. ಸರ್ಕಾರ ಯಾವುದು ಬರುತ್ತದೆಯೋ ಅವರು ಅವರ ಅನುಕೂಲಕ್ಕೆ ತಕ್ಕಂತೆ ಈ ಸಭೆಯನ್ನು ನಡೆಸಿಕೊಂಡು ಹೋದರೆ ಇದು ಸರ್ಕಾರದ ಅಧೀನವಾದ ಸಭೆಯಾಗುತ್ತದೆಯೇ ಹೊರತು ಸರ್ವೋಚ್ಚ ಸಭೆಯಾಗುವುದಿಲ್ಲ. ಇದು ಬಹಳ ಎತ್ತರವಾದಂತಹ ಸಭೆ, ಪ್ರಜಾಪ್ರಭುತ್ವದಲ್ಲಿ ಸಂವಿಧಾನದಲ್ಲಿ ಈ ಸಭೆಗೆ ಇರುವಂತಹ ಮಹಾ ಶಕ್ತಿ ಬೇರೆ ಯಾವ ಸಭೆಗೂ ಇಲ್ಲ. ಈ ಸಭೆಯನ್ನು ನಾವು ತೀರ ಕಡೆಗಣಿಸಿ ನಮ್ಮ ಇಚ್ಛೆಗೆ ಬಂದಾಗ ಸಭೆಯನ್ನು ಕರೆಯುವಂತಹ ಈ ವ್ಯವಸ್ಥೆ ಏನು ಇದೆ ಇದು ಹೋಗಬೇಕು. ತಾವು ಇದರ ಬಗ್ಗೆ ಸರ್ವ ಪ್ರಯತ್ನ ಪಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯ ಮನವಿಯನ್ನು ಮಾಡುತ್ತೇನೆ. ಹಿಂದೆ 75 ರಿಂದ 90 ದಿವಸಗಳು ಸಭೆ ನಡೆದದ್ದು ಇದೆ. ಆದರೆ ಇತ್ತೀಚಿನ ದಿವಸಗಳಲ್ಲಿ ಕೇವಲ 30 ದಿವಸಗಳು ನಡೆಯಿತು. ಹೋದ ಸಾರಿಯೂ ಸಹ ಆಯವ್ಯಯದ ಚರ್ಚೆ ಕೇವಲ ಮೂರು ದಿವಸಗಳು ಹಿಂದಿನ ಸರ್ಕಾರ ಇದ್ದಾಗ ನಡೆಯಿತು. ಅದಕ್ಕೆ ನಾನು ತಮಗೆ ಹೇಳುವುದೇನೆಂದರೆ ಈ ಆಯವ್ಯಯದ ಮೇಲೆ ಪರಿಣಾಮಕಾರಿಯಾದಂತಹ ಚರ್ಚೆಯಾಗಬೇಕು.

ಆಯವ್ಯಯದ ಅಧಿವೇಶನೆಂದರೆ ಅದಕ್ಕೆ ಬಹಳ ಹೆಚ್ಚಿನ ಗಾಂಭೀರ್ಯ ಇದೆ, ಶಕ್ತಿ ಇದೆ ಎನ್ನುವಂತಹ ವ್ಯವಸ್ಥೆಯಾಗಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿಯನ್ನು ಮಾಡಿಕೊಳ್ಳುತ್ತೇನೆ. ಈಗ ವಿಧಿ ಇಲ್ಲದೆ ಎಲ್ಲರೂ ಎರಡು ದಿವಸಗಳಲ್ಲಿ ಸಾರಸಗಟಾಗಿ ಮಾತನಾಡಿ ಅಂದರೆ ರೇಸ್‌ನ ಓಟದಲ್ಲಿ ಓಡಿ ನಾವು ನಮ್ಮ ಕೈಯಲ್ಲಿ ಆಗಿದ್ದನ್ನು ಹೇಳಿ ನಮ್ಮ ಕರ್ತವ್ಯ ಮುಗಿಯಿತು ಎನ್ನುವ ದೃಷ್ಟಿಯಿಂದ ಆಗುತ್ತಿದೆ. ಇದು ಪ್ರಾಮಾಣಿಕ ಚಿಂತನೆ, ಚರ್ಚೆಯಾಗಬೇಕಾಗಿರುವುದರಿಂದ ಈ ಸಭೆಯಲ್ಲಿ ಕೇವಲ ಎರಡು ದಿವಸಗಳ ಕಾಲ ಆಯವ್ಯಯದ ಚರ್ಚೆಯನ್ನು ಮಾಡಿ ಮುಂದುವರಿಸಿದರೆ ಇದಕ್ಕೆ ಅಷ್ಟು ಮಹತ್ವ ಬರುವುದಿಲ್ಲವೆಂದು ತಾವು ಅಂದುಕೊಳ್ಳುತ್ತೀರೆಂದು ನನಗೆ ಅನಿಸುತ್ತಿದೆ. ಮಾನ್ಯ ಸಿದ್ದರಾಮಯ್ಯನವರು ಮೊದಲನೆಯ ಆಯವ್ಯಯವನ್ನು ಈ ಸದನದಲ್ಲಿ ಮಂಡಿಸಿದ್ದಾರೆ. ಇವರ ಸರ್ಕಾರ ಬಂದು ಮೂರು ತಿಂಗಳಾಗಿದೆ. ಮಾನ್ಯ ಸಿದ್ದಾರಾಮಯ್ಯನವರು ಬಹಳ ಹಸನ್ಮುಖಿಗಳು ಯಾವಾಗಲೂ ನಗುತ್ತಿರುತ್ತಾರೆ, ಆದರೆ ಅವರು ನಗುವನ್ನು ಈ ಆಯವ್ಯಯದಲ್ಲಿ ಸ್ವಲ್ಪ ತೋರಿಸಿಲ್ಲ. ನಾವು ಸಾರಸಗಟಾಗಿ ಇದರಲ್ಲಿ ಗ್ರಾಮೀಣ ಚಿಂತನೆ ಇಲ್ಲವೆಂದಾಗಲಿ ಅಥವಾ ನೀವು ಮಾಡಿರುವುದು ಸರಿಯಿಲ್ಲವೆಂದು ಆಗಲೇ ಹೇಳುವುದಿಲ್ಲ. ಮಾನ್ಯ ಸಿದ್ದರಾಮಯ್ಯನವರು ನಡೆದುಕೊಂಡು ಬಂದ ದಾರಿ, ಅವರ ಸಿದ್ಧಾಂತದಲ್ಲೆ ಅನೇಕ ವಿಚಾರಗಳ ಬಗ್ಗೆ ನಂಬಿದ್ದೇನು. ಆಯವ್ಯಯವನ್ನು ಹಣಕಾಸಿನ ಸಚಿವರು ಬಹಳ ಜೋರಾಗಿ ಹೊಸದಾಗಿ ಸೃಷ್ಟಿ ಮಾಡುತ್ತಾರೆಂಬ ಉದ್ದೇಶ ಇತ್ತು. ಆದರೆ ನೀವು ಪರಿಣಾಮಕಾರಿಯಾಗಿ ಚಿಂತನೆ ಮಾಡಲಿಲ್ಲವೇನೂ ಎಂಬ ಸಂಶಯ ನನ್ನನ್ನು ಕಾಡುತ್ತಿದೆ. ತಾವು ಏನು ಸಲಹೆಗಳನ್ನು ಕೊಟ್ಟಿದ್ದೀರಿ ಅದನ್ನು ತೀರ ಮೆಚ್ಚದೇ ಇರತಕ್ಕಂಥದ್ದೇನಲ್ಲ. ನೀವು ಬಂದು ಮೂರು ತಿಂಗಳಾಗಿದೆ. ನೀವು ಸರಿಯಾಗಿ ಕೆಲಸ ಮಾಡಿದ್ದೀರಿ ಎನ್ನುವುದಕ್ಕೆ ಹಿಂದೇಟು ಹಾಕುತ್ತೇವೆ. ಮುಂದಿನ ವರ್ಷ ನೀವು ಆಯವ್ಯಯದಲ್ಲಿ ಏನು ಮಾಡಿದ್ದೀರಿ ಎಂಬುದರ ಬಗ್ಗೆ ದೊಡ್ಡ ವ್ಯಾಜ್ಯವಾಗುತ್ತದೆ. ಇವತ್ತು ತಾವು ಬಹಳ ಕಲ್ಪನೆ ಇಟ್ಟುಕೊಂಡಿದ್ದೀರಿ, ಅನೇಕ ವಿಚಾರಗಳನ್ನು ಮಾಡಿದ್ದೀರಿ. ನಾನು ತಮ್ಮಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡುವಾಗ, ನಾನು ನಮ್ಮ ಶಾಸಕಾಂಗದ ವ್ಯವಸ್ಥೆಗೆ ಮತ್ತೆ ತಿರುಗಿ ಹೋಗುತ್ತೇನೆ. ಅಧ್ಯಕ್ಷರೆ, ಮಾನ್ಯ ಕೌಜಲಗಿಯವರು ಅಧ್ಯಕ್ಷರಾಗಿದ್ದಾಗ ಅವರ ಕೋಣೆಯಲ್ಲಿ ನಾನು ಮಾತನಾಡಿದ್ದೆ, ಅಧ್ಯಕ್ಷರು ಎಂದಾಗ ನಮ್ಮೆಲ್ಲರಿಗೂ ಬಹಳ ಎತ್ತರವಾದಂಥ ಸ್ಥಾನ ಮತ್ತು ಅಲ್ಲಿ ಆ ಪೀಠವನ್ನು ಸಹ ಯಾರೂ ಸುಮ್ಮನೆ ಎತ್ತರವಾಗಿ ಇಟ್ಟಿಲ್ಲ ಮತ್ತು ಲೋಕ ಸಭೆಯಲ್ಲೂ ಅಷ್ಟೆ. ನಮ್ಮ ಜೊತೆಯಲ್ಲೇ ಒಟ್ಟಿಗೆ ಇಡಬಹುದಾಗಿತ್ತು ಆದರೆ ಸದನ ನಡೆಯುವಾಗ ಆ ವ್ಯಕ್ತಿತ್ವ ಬಹಳ ಎದ್ದುಕಾಣುತ್ತದೆ. ಸದನ ಮುಗಿದಮೇಲೆ ಆ ವ್ಯಕ್ತಿತ್ವಕ್ಕೆ ನಾವು ಕೊಡತಕ್ಕಂಥ ವಿಚಾರಗಳು ಏನು ಇದು ಬಹಳ ಗಂಭೀರವಾದಂಥ ಚಿಂತನೆ. ಆದ್ದರಿಂದ ಇದಕ್ಕೆ ಏನು ಹಣಕಾಸಿನ ಕೊರತೆಯೇ? ಏನು ಕೊರತೆ ಇರಬಹುದು? ಮಾನ್ಯ ಅಧ್ಯಕ್ಷರೆ, ತಮ್ಮ ಕೊಠಡಿಯಲ್ಲಿ ನಾನು ಮಾತನಾಡಿದ್ದೆ, ಅಧ್ಯಕ್ಷರು ಅನೇಕ ಕಡೆ ಪ್ರವಾಸ ಹೋದಾಗ ಒಬ್ಬ ಪೋಲಿಸರು ಬೆಂಗಾವಲಿಗೆ ಇರುವುದಿಲ್ಲ. ನಾನು ತಮಗೆ ಹೇಳುತ್ತೇನೆ ಮುಖ್ಯಮಂತ್ರಿಗಳು ಆ ಸ್ಥಾನದಲ್ಲಿ ಕಾರ್ಯಾಂಗದಲ್ಲಿ ಅತ್ಯಂತ ಎತ್ತರರಾದವರು. ಅದರ ಬಗ್ಗೆ ನನ್ನ ವಾದ ಇಲ್ಲ. ನಾವೇನು ಸದನದಲ್ಲಿ ಇದ್ದೇವೆಯೇ, ಈ ಸದನ ಮತ್ತು ಸದನದ ವ್ಯವಸ್ಥೆ, ಸದನದ ಅಧ್ಯಕ್ಷರು, ಅದಕ್ಕೆ ಕೊಡತಕ್ಕಂಥ ಮನ್ನಣೆಯನ್ನು ನಾಳೆ ಇವರು ಬರಬಹುದು, ಇನ್ನೊಬ್ಬರು ಬರಬಹುದು, ಆ ಪೀಠದ ಗಾಂಭೀರ್ಯತೆ, ಆ ಪೀಠದ ವ್ಯಕ್ತಿತ್ವಕ್ಕೆ ನಾವು ಹೆಚ್ಚಿನ ಮಹತ್ವವನ್ನು ಕೊಡಬೇಕಾದದ್ದು ನಮ್ಮ ಕರ್ತವ್ಯ. ಕಾರ್ಯಾಂಗದಲ್ಲಿ

ನಮ್ಮ ಮುಖ್ಯಮಂತ್ರಿಗಳ ಹಿಂದೆ ಬೆಂಗಾವಲು ಹೋಗತಕ್ಕಂಥದ್ದು, ಗೃಹಮಂತ್ರಿಗಳು ಹಿಂದೆ ಬೆಂಗಾವಲು ಹೋಗತಕ್ಕಂಥದ್ದು. ಅಧ್ಯಕ್ಷರಾದವರು ಯಾವ ಜಿಲ್ಲೆಗೆ ಹೋದರೂ ಒಬ್ಬ ಅಧಿಕಾರಿಯು ಅವರನ್ನು ಭೇಟಿ ಮಾಡದೆ ಇರತಕ್ಕಂಥದ್ದು. ಅದೇ ಈ ಸದನದಲ್ಲಿ ಅವರು ಸರ್ವೋಚ್ಚ ಆದರೆ ಪಾರ್ಲಿಮೆಂಟಿನ ಸದಸ್ಯರುಗಳಿಗೆ ಪ್ರತ್ಯೇಕವಾದ ಕಳಕಳಿ ಇದೆ. ಮತ್ತು ಈ ಸದನದ ಕಾರ್ಯದರ್ಶಿ, ಈ ಕಾರ್ಯದರ್ಶಿ ಆ ಕಾರ್ಯದರ್ಶಿ ಅಂತ ವ್ಯತ್ಯಾಸ ಏನೂ ಇಲ್ಲ, ಕಾರ್ಯದರ್ಶಿಗಳು ಅಂಥ ಅಂದರೆ ಎಲ್ಲಾ ಒಂದೆ, ವಿಧಾನಮಂಡಲದ, ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ ಎಲ್ಲಾ ಒಂದೆ. ಆದರೆ ಆ ಕಾರ್ಯದರ್ಶಿಗಳಿಗೆ ಸಿಗತಕ್ಕಂಥದ್ದು ವ್ಯವಸ್ಥೆ ಇದೆಯಲ್ಲ ಅದು ಈ ವಿಧಾನ ಮಂಡಲದ ಕಾರ್ಯದರ್ಶಿಗಳಿಗೆ ಸಿಗುತ್ತಿಲ್ಲ. ಅಂದರೆ ಅವರು ಯಾರೋ ಪಂಚಾಯಿತಿ ಕಾರ್ಯದರ್ಶಿ ಇರಬೇಕು ಎಂದು ತಿಳಿದುಕೊಂಡಿದ್ದಾರೆ. ಅವರನ್ನು ಪಂಚಾಯಿತಿ ಕಾರ್ಯದರ್ಶಿ ಎಂದು ತಿಳಿದುಕೊಂಡು ಅವರಿಗೆ ರೂಂ ಖಾಲೀ ಇಲ್ಲ ಅಂತ ಮೂರನೆಯದೋ ನಾಲ್ಕನೆಯದೋ ರೂಂನ್ನು ಕೊಡಿ. ಇಲ್ಲ ವಿಧಾನಮಂಡಲ ಅದಕ್ಕೆ ಒಂದು ವ್ಯವಸ್ಥೆ, ಆ ಕಾರ್ಯದರ್ಶಿಯನ್ನು ಆಮೇಲೆ ಕರೆದು ಕುಳ್ಳಿರಿಸಿ ಆಮೇಲೆ ಒಂದು ಮೊದಲನೆಯ ಕೊಠಡಿಯನ್ನು ಕೊಡುತ್ತಾರೆ ಅಂಥ ಕಾಣುತ್ತದೆ. ಇಲ್ಲದಿದ್ದರೆ ಇವರಿಗೆ ಗ್ರಾಮಪಂಚಾಯಿತಿಯ ಕಾರ್ಯದರ್ಶಿ ತರಹ ವ್ಯವಸ್ಥೆ. ಅಧ್ಯಕ್ಷರೇ ತಾವು ಈ ಸದನದಲ್ಲಿ ಬಹಳ ಎತ್ತರರಾದವರು ತಾವು ಮನಸ್ಸು ಮಾಡಿದರೆ ಈ ಅಧಿಕಾರಿಗಳನ್ನು ಹಿಗ್ಗಾಮುಗ್ಗಾಗಿ ಚರ್ಚೆಯ ವಸ್ತುವನ್ನಾಗಿ ಎಳೆಯಬಹುದು. ಚರ್ಚೆಯ ವಸ್ತುವಾಗಿ ಎಳೆಯುವುದಕ್ಕೆ ಅವರಿಗೆ ಸಂಪೂರ್ಣವಾದ ಸ್ವಾತಂತ್ರ ಇದೆ. ಅಂದರೆ ಮರ್ಯಾದೆ ಕೊಟ್ಟಹಾಗೆ ಅದಲ್ಲ ಪ್ರಶ್ನೆ. ಅಧ್ಯಕ್ಷರು ಸರ್ವ ಸಾರ್ವಭೌಮತ್ವ ಇರುವ ಸಭೆಯ ಅಧ್ಯಕ್ಷರು. ಅವರು ಯಾವುದೇ ಒಂದು ಜಿಲ್ಲೆಗೆ ಪ್ರವಾಸ ಹೋದಾಗ, ಅಲ್ಲಿಗೆ ಹೋದನಂತರ ಜಿಲ್ಲೆಯ ಹಿರಿಯ ಅಧಿಕಾರಿಗಳು ಅವರಿಗೇನು ಕಾರ್ಯ ಮಾಡಿಕೊಡಬೇಕಾಗಿಲ್ಲ, ಹೋಗಿ ಭೇಟಿ ಮಾಡಿ ತಾವು ಬಂದಿರಿ, ಏನು ಸ್ವಾಮಿ, ಎತ್ತ ಎಂದು ಕೇಳತಕ್ಕಂಥ ಸೌಜನ್ಯ, ಸರ್ಕಾರದವರ ಶಿಷ್ಟಾಚಾರ ಅಂಥ ಇದೆಯಲ್ಲ, ಆ ಶಿಷ್ಟಾಚಾರವನ್ನು ಅಳವಡಿಸಿ ಆ ಅಧ್ಯಕ್ಷರ ವ್ಯವಸ್ಥೆಯನ್ನು ನಮ್ಮ ಕರ್ನಾಟಕದಲ್ಲಿ ಲೋಕ ಸಭೆಯಷ್ಟೆ ಪವಿತ್ರವಾದಂಥ ಬೇರೆ ಬೇಕೆ ಕಡೆ ಬೇರೆ ಬೇರೆ ರಾಜ್ಯಗಳಲ್ಲಿ ಅಧ್ಯಕ್ಷರಿಗೆ ಇರತಕ್ಕಂಥ ಹೆಚ್ಚಿನ ಮಹತ್ವ, ಅದು ಎಷ್ಟೇ ಖರ್ಚಾಗಲಿ, ಅದರ ಹಣಕಾಸು ಎಷ್ಟೇ ಬರಲಿ ಅದರ ಬಗ್ಗೆ ತಾವು ಬಹಳ ತೀವ್ರ ಚಿಂತನೆ ಮಾಡಬೇಕು ಎಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಇನ್ನು ವಾಟಾಳ್ ನಾಗರಾಜ್‌ರವರು ಇಲ್ಲಿ ಶಾಸಕರ ಹಕ್ಕಿನ ಬಗ್ಗೆ ಕೇಳಿದರು, ಅಂತ ಬಹಳ ಜನ ತಪ್ಪು ಅಭಿಪ್ರಾಯ ತಿಳಿದುಕೊಂಡು ಬಿಟ್ಟಿದ್ದಾರೆ. ಹಕ್ಕು ಎಂದರೇನು ? ನಾವು ಬಿಸಿನೀರು ಕೊಡಿ, ಹಾಸಿಗೆ ಕೊಡಿ, ಮಂಚ ಕೊಡಿ, ಕುಡಿಯುವುದಕ್ಕೆ ವಿಸ್ಕಿ ಕೊಡಿ ಎಂದು ನಾವು ಯಾರು ಕೇಳಲಿಲ್ಲ. ನಾವು ಶಾಸಕರಾಗಿದ್ದೇವೆ. ಈಗ ನಮ್ಮ ಅಂಗಾಂಗವನ್ನೆಲ್ಲಾ ಕಡಿದುಹಾಕಿ ಒಬ್ಬ ಹೆಳವನ ರೀತಿಯಲ್ಲಿ ಮಾಡಿದ್ದಾರೆ. ಇದು ಇಲ್ಲ ಇಲ್ಲ ಎಂದು ನೀವು ಹೇಳಿದರೆ ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ, ಕಾರಣ ಏನು ಅಂಥ ಹೇಳಿದರೆ ಗ್ರಾಮೀಣ ಪ್ರದೇಶಗಳಿಂದ ಬಂದಿರತಕ್ಕಂಥ ನನಗೂ ಇವತ್ತು ಅರ್ಥವಾಗಿದೆ. ಅದೇ ನಾನು ಪಟ್ಟಣಪ್ರದೇಶಗಳಲ್ಲಿ ಇದಿದ್ದರೆ ಈ ಮಾತನ್ನು ಆಡುತ್ತಾ ಇರಲಿಲ್ಲ ಏಕೆಂದು ಹೇಳಿದರೆ ಇಲ್ಲಿ ಆ ವ್ಯವಸ್ಥೆ ಇಲ್ಲ, ಅಲ್ಲಿನ ವ್ಯವಸ್ಥೆಯೆ ಬೇರೆ ಇಲ್ಲಿನ ವ್ಯವಸ್ಥೆ ಬೇಕಲ್ಲ

ಅವರು ಕೆಲಸ ಮಾಡಬೇಕಲ್ಲ ಏನು ಕೆಲಸ ಮಾಡುವುದು. ನೀವು ವರ್ಷಕ್ಕೆ ನಲವತ್ತು ದಿನ ಶಾಸನಸಭೆಯನ್ನು ಸೇರುತ್ತೀರಿ, ಶಾಸನಸಭೆಯನ್ನು ಬಿಟ್ಟುಬಿಟ್ಟು ಮಿಕ್ಕೆಲ್ಲಾ ನಾವು ಏನು ಕೆಲಸವನ್ನು ಮಾಡುವುದು, ಬೇಡವೆ ಗ್ರಾಮದ ಕೆಲಸ, ತಾಲ್ಲೂಕಿನ ಕೆಲಸ, ಜನಪರ ಕೆಲಸ ಮಾಡಬೇಕಾದರೆ ವ್ಯವಸ್ಥೆ ಏನು? ಆ ವ್ಯವಸ್ಥೆಯ ದೃಷ್ಟಿಯಿಂದ ನಾವು ಚಿಂತನೆ ಮಾಡಬೇಕೇ ಹೊರತು ಅದನ್ನು ಬಿಟ್ಟು, ಇಲ್ಲ ನಮ್ಮ ವಾಟಾಳ್ ನಾಗರಾಜ್‌ರವರು ನಮ್ಮ ಹಕ್ಕು ಅಂದರು. ಅಂದರೆ ಹಕ್ಕಿಗಿಂತ ಹೆಚ್ಚಾಗಿ.. ನಾನು ಎಂದೂ ಕೇಳಲಿಲ್ಲ ನಮ್ಮ ಹಕ್ಕು ಅಂಥ. ರೂಮ್ ಕೊಡಿ, ಅದು ಕೊಡಿ ಎಂದು ಕೇಳಲಿಲ್ಲ. ಆ ಬಗ್ಗೆ ನಮ್ಮ ಚರ್ಚೆಯೇ ಇಲ್ಲ ಶಾಸಕರಾದವರು ಅಲ್ಲಿ ಏನು ಕೆಲಸಮಾಡಬೇಕು ಎನ್ನತಕ್ಕಂಥ ಚಿಂತನೆ ಆಗಬೇಕು ಎಂಬುದು ನನ್ನ ಅತ್ಯಂತ ಪ್ರಾಮಾಣಿಕವಾದಂಥ ಮನವಿ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇನ್ನು ಮನಸ್ಸನ್ನು ಮಾಡಿಲ್ಲ ನಿನ್ನೆ ಮೊನ್ನೆಯಲ್ಲಿ ಸಭೆಯನ್ನು ಕರೆಯಬೇಕಾಗಿತ್ತು, ಸಭೆಯನ್ನು ಕರೆದು ಶಾಸಕರುಗಳಿಗೆ ಆ ಕ್ಷೇತ್ರದಲ್ಲಿ, ಆ ತಾಲ್ಲೂಕಿನಲ್ಲಿ ಏನೇನು ಕೆಲಸ ಮಾಡಬೇಕು ಎನ್ನತಕ್ಕಂಥ ಒಂದು ವ್ಯವಸ್ಥೆಯನ್ನು ಮಾನ್ಯಮುಖ್ಯಮಂತ್ರಿಗಳು ಮಾಡಿ ಸರ್ಕಾರದಿಂದ ಆದೇಶವನ್ನು ಹೊರಡಿಸಬೇಕು ಎನ್ನತಕ್ಕಂಥದ್ದು ಇದು ನಿರ್ಧಾರ. ಈ ಆದೇಶ ಈ ಕ್ಷಣದವರೆಗೂ ಹೊರಡಿಸಿಲ್ಲ ಅದನ್ನು ಹೊರಡಿಸುವ ಬಗ್ಗೆ ಅವರು ಗಮನಹರಿಸಲಿ ಎನ್ನುವ ಮಾತನ್ನು ಮತ್ತೊಮ್ಮೆ ತಮ್ಮ ಮೂಲಕ ನಾನು ತಿಳಿಸುತ್ತ, ಮಾನ್ಯ ಅರ್ಥಸಚಿವರು ಕೆಲವು ವಿನಾಯಿತಿಗಳನ್ನು ಕೊಟ್ಟಿದ್ದಾರೆ ಈ ವಿನಾಯಿತಿಗಳು ಅಪಹಾಸ್ಯವಾಗಿದೆ. ಅದು ಯಾರು ನಿಮಗೆ ಹೇಳಿದರೋ ಗೊತ್ತಿಲ್ಲ. ತಿಥಿ ಕಾರ್ಡುಗಳಿಗೆ ನಮ್ಮ ವಿನಾಯಿತಿ ಕೊಟ್ಟಿದ್ದೀರಿ, ತಿಥಿ ಕಾರ್ಡು ಅಂದರೆ ಬೇಗ ಬೇಗ ನಾವು ಹೋಗಬಹುದು ಎಂದು. ತಿಥಿ ಕಾರ್ಡುಗಳಿಗೆ ವಿನಾಯಿತಿಯನ್ನು ಕೊಟ್ಟಮೇಲೆ ನಮಗೆ ಏನು ಸೀಮೆಎಣ್ಣೆಗೆ ವಿನಾಯಿತಿ ಅಂದರೆ ಕ್ಯೂನಲ್ಲಿ ನಿಂತುಕೊಂಡು ಹೋಗಿ ಸೀಮೆಎಣ್ಣೆಯನ್ನು ತಂದು ಬಿಡುತ್ತೇವೆ. ಕಡ್ಲೆ ವಿನಾಯಿತಿ ಉಂಟು, ಅಕ್ಕಿ ವಿನಾಯಿತಿ ಉಂಟು, ರಾಗಿ ವಿನಾಯಿತಿ ಉಂಟು. ಈ ತಿಥಿ ಕಾರ್ಡಿಗೆ ವಿನಾಯಿತಿ ಕೊಟ್ಟಿದ್ದೀರಲ್ಲ ಪರಿಸ್ಥಿತಿ ಹೇಗೆ? ಇದು ನಿಜವಾಗಲೂ ಈ ವಿನಾಯಿತಿಯನ್ನು ನಿಮಗೆ ಯಾರು ಕೇಳಿದ್ದರು, ಯಾರಾದರು ಸತ್ತವರು ಕೇಳಿದ್ದರೆ? ಸತ್ತವರ್‍ಯಾರಾದರು ನಮ್ಮ ಕಾರ್ಡಿಗೆ ವಿನಾಯಿತಿ ಕೊಡಿ ಎಂದು ಹೇಳಿ ಸತ್ತಿದ್ದರೆ ಅದು ಆಗಬಹುದು. ಇದು ಕೇಳಿದರೂ ಕೊಡಬಾರದಿತ್ತು. ನಮಗೆ ನಿನ್ನೆಯಿಂದ ಬಹಳ ನಿಕಟ ಬಂದುಬಿಟ್ಟಿದೆ. ಇದೇನು ತಿಥಿ ಕಾರ್ಡು ಕೊಟ್ಟಿಲ್ಲಬಿಟ್ಟರು ನಮ್ಮ ಪರಿಸ್ಥಿತಿ ಏನು? ನಮ್ಮ ಅಂದರೆ ಸಾರ್ವಜನಿಕರು, ಜನ ನಾವೆಲ್ಲ ಇದೇನು?

ಶ್ರೀ ಸಿದ್ದರಾಮಯ್ಯ : ಮಾನ್ಯ ವಾಟಾಳ್ ನಾಗರಾಜ್‌ರವರೆ, ಈಗ ಸತ್ತವರು ಯಾವುದಕ್ಕೂ ಕೂಡ ದುಡ್ಡು ಕೊಡುವುದಿಲ್ಲ ಸತ್ತವನು ತೆಂಕ್ಲೊ, ಬಡವನೋ, ಅಂಥ ಹೇಳುತ್ತಾರೆ. ಅವರ ವಾರಸ್ಸುದಾರರು ಉಳಿದುಕೊಂಡರೆ ದುಡ್ಡು ಕೊಡಬೇಕಾಗುತ್ತದೆ ಕಾರ್ಡ್‌ನ್ನು ಮಾಡಿಸುವುದಕ್ಕೆ.

ಶ್ರೀ ವಾಟಾಳ್ ನಾಗರಾಜ್ : ಆಯಿತು ಈಗ ಸತ್ತವನು ತೆಂಗಲೊ, ಬಡವನೋ ಅಂಥ ಇದೆಯಲ್ಲ ಸ್ವಾಮಿ, ಅದು ಗ್ರಾಮ್ಯ, ಮುಂದಕ್ಕೆ ಹೋಗುವುದಿಲ್ಲ. ಆ ತಂಕಲೋ ಬಡವನೋ ಎಂಬುದರ ಬಗ್ಗೆ ವ್ಯಾಖ್ಯಾನ ಮಾಡಿದರೆ ಒಂದು ಸಾವಿರ ಪುಟಗಳನ್ನು ಬರೆಯಬಹುದು. ತೆಂಕಲೋ ಬಡವನೋ ಎಂದು ಹೇಳುತ್ತೇವೆ ಸತ್ತವನು ನಿಜ. ಆದರೆ ಜಾತಿಗಳ ರುದ್ರಭೂಮಿ ಇದೆಯಲ್ಲ.....

ಒಬ್ಬ ಮಾನ್ಯ ಸದಸ್ಯರು : ಅಧ್ಯಕ್ಷರೆ, ಸತ್ತವರೂ ಕೂಡ ಇವತ್ತು ಸ್ಮಶಾನದಲ್ಲಿ ನೆಮ್ಮದಿಯಾಗಿ ಮಲಗುತ್ತಿಲ್ಲ. ಹೂತು ಆರು ತಿಂಗಳಾಗಲಿಲ್ಲ ಆಗಲೇ ಹೆಣದ ಮೂಳೆಗಳನ್ನು ಎತ್ತುಕೊಂಡು ಹೋಗುವ ಮಟ್ಟಕ್ಕೆ ಬಂದುಬಿಟ್ಟಿದೆ, ಫೈನಲ್ ರಸ್ಟಿಂಗ್ ಪ್ಲೇಸ್ ಅದು. ಅವನೂ ನೆಮ್ಮದಿಯಾಗಿ ಇವತ್ತು ಇಲ್ಲ, ಆ ಮಟ್ಟಕ್ಕೆ ಬಂದುಬಿಟ್ಟಿದ್ದಾರೆ. ಆ ಮೂಳೆಗಳನ್ನೆಲ್ಲಾ ಆಸ್ಪತ್ರೆಗಳಿಗೆ ಎತ್ತಿಕೊಂಡು ಹೋಗುತ್ತಿದ್ದಾರೆ ಬೇಕಾದರೆ ಬನ್ನಿ ಉದಾಹರಣೆಗೆ ತೋರಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ನಮಗೆ ಇದೊಂದು ವಿನಾಯಿತಿ ಬೇಡ. ಕೈಮುಗಿದು ಕೇಳುತ್ತೇನೆ ಸ್ವಾಮಿ ನಾನು ಯಾವತ್ತು ವಿನಾಯಿತಿ ಕೊಡಿ ಎಂದು ಕೇಳುವವನಲ್ಲ ಆದರೆ ತಿಥಿಕಾರ್ಡಿಗೆ ಮಾತ್ರ ವಿನಾಯಿತಿ ಬೇಡ. ದಯಮಾಡಿ ವಾಪಸ್ಸು ತೆಗೆದುಕೊಂಡು ಬಿಡಿ ಅದು ಬಹಳ ಕಷ್ಟ ಏಕೆಂದರೆ ಸಾಯುವುದಕ್ಕೆ ಮುಂಚೆ ಅರ್ಜಿ ಹಾಕಿರಬೇಕು ನನ್ನ ತಿಥಿ ಕಾರ್ಡಿಗೆ, ಕೊಡಿ ಅಂತ ಹೇಳಿದರೆ ಇದು ಅರ್ಥವಿಲ್ಲದ್ದು ಹೀಗೆ ಕೊಡಬೇಕೆಂದರೆ ಅರ್ಥವಿಲ್ಲದ್ದು ಪ್ರತಿ ಮನೆಯವರು, ಪ್ರತಿ ಕುಟುಂಬದವರು, ಅಧ್ಯಕ್ಷರೆ ಇದು ಬಹಳ ಅಪಾಯದ ಸಂಕೇತ, ನಾನು ಬಹಳ ಅತ್ಯಂತ ಜಾಗರೂಕತೆಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಮತ್ತು ನಾನು ಒಂದು ಸಲಹೆಯನ್ನು ಕೊಡುತ್ತಿದ್ದೇನೆ ಇದನ್ನು ತೆಗೆದು ಇನ್ನಾವುದಕ್ಕಾದರೂ ಬೇರೆಯದಕ್ಕೆ ಹಣವನ್ನು ಬಿಡುಗಡೆ ಮಾಡಿ ಆಮೇಲೆ ಅದರ ಪಕ್ಕದಲ್ಲೇ ನೀವು ಹೊಸ ಮನೆ ಕಟ್ಟುವವರಿಗೆ, ಹೊಸಮನೆ ಕಟ್ಟಬೇಕು ತಿಥಿ ಕಾರ್ಡಿಗೆ ತಾವು ಹೋಗಬೇಕು, ಹೊಸಮನೆ ಕಾರ್ಡುಗಳಿಗೋಸ್ಕರ ಕೊಟ್ಟಿದ್ದೀರಿ ಕಟ್ಟಿಕಟ್ಟಿ ಸುಸ್ತಾಗಿ ಅವನು ಸಾಲಸೂಲ ಕೊಡಲಾರದೆ ಮುಂದಕ್ಕೆ ಅಲ್ಲಿಗೆ ಹೋಗಬೇಕು, ಅಂದರೆ ತಿಥಿಕಾರ್ಡಿಗೆ. ಇದು ಒಂದಕ್ಕೊಂದು ಸಾಮರಸ್ಯ, ಸಂಬಂಧ ಎರಡೂ ಇಲ್ಲ, ಇದು ಹಾಸ್ಯವಾಗಿರಬಹುದು...

10.10 ಪಿ.ಎಂ

ಶ್ರೀ ಸಿದ್ದರಾಮಯ್ಯ : ನಾನು ಹೊಸದಾಗಿ ಹೇಳಿಲ್ಲ. ಮನೆ ಕಟ್ಟುವುದಕ್ಕಾಗಲೀ ಅಥವಾ ಸಾಯುವುದರ ಬಗ್ಗೆಯಾಗಲೀ ಯಾವುದೇ ಸಂಬಂಧ ಇಲ್ಲ. ವೈಜ್ಞಾನಿಕವಾಗಿ ಯೋಚನೆ ಮಾಡಬೇಕು. ಸತ್ತವರ ದಾರಿಯಲ್ಲಿ ಹೋಗಬಾರದು. ಈ ತರಹ ನೋಡಲು ಬರುವುದಿಲ್ಲ. ಸ್ಮಾಲ್ ಪ್ರಿಂಟರ್ಸ್ ಅಸೋಸಿಯೇಷನ್‌ನವರು ನಮಗೆ ಒಂದು ಮನವಿಯನ್ನು ಕೊಟ್ಟಿದ್ದರು. ಲಗ್ನಪತ್ರಿಕೆಗಳು ತಿಥಿ ಕಾರ್ಡುಗಳು ಪ್ರಿಂಟ್ ಮಾಡುವುದಕ್ಕೆ ಜಾಸ್ತಿ ದುಬಾರಿಯಾಗುತ್ತದೆ. ಆಫ್‌ಸೆಟ್ ಪ್ರಿಂಟರ್ಸ್ ಜೊತೆಯಲ್ಲಿ ಪೈಪೋಟಿ ಮಾಡಲು ಆಗುವುದಿಲ್ಲವೆಂದು ಹೇಳಿದ್ದರು. ಆದುದರಿಂದ ನಾನು ಇದರಲ್ಲಿ ಸ್ವಲ್ಪ ಕಡಿಮೆ ಮಾಡೋಣ ಎಂದು ತಿಳಿದುಕೊಂಡು ಮಾಡಿದ್ದೇವೆ. ಅದು ಬಿಟ್ಟರೆ ಇನ್ನೇನೂ ಉದ್ದೇಶವಿಲ್ಲ. ಅವರ ಒತ್ತಾಯದ ಮೇಲೆ ಮಾಡಿದ್ದೇವೆ. ಏಕಾಏಕಿ ನಾವು ಮಾಡಿದ್ದಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವರ ಒತ್ತಾಯ ಇದ್ದರೂ ಸಹ ತಿಥಿ ಕಾರ್ಡಿಗೆ ಬೇಡ ಬಿಡಿ ಎಂದು ನೀವು ನಿರ್ಧಾರ ತೆಗೆದುಕೊಳ್ಳಬೇಕಾಗಿತ್ತು. ಹನ್ನೊಂದೂವರೆ ಸಾವಿರ ಕೋಟಿ ರೂಪಾಯಿಗಳ ಆಯವ್ಯಯವನ್ನು ಮಂಡಿಸುವ ಸಂದರ್ಭದಲ್ಲಿ ತಿಥಿ ಕಾರ್ಡುಗಳ ಬಗ್ಗೆ ಹೇಳಿದ್ದೀರಿ. ನಮಗೆ ಭಯ ಬಂದಿದೆ. ಇದು ಆಗಬಾರದಿತ್ತು. ಇನ್ನು ನೀವು ಬ್ರಾಂಡ್ ಇಲ್ಲದೇ ಇರುವ ಹಲ್ಲುಪುಡಿಗಳಿಗೆ

ತೆರಿಗೆಯನ್ನು ಕಡಿಮೆ ಮಾಡಿದ್ದೀರಿ. ಬ್ರಾಂಡ್ ಇಲ್ಲದೇ ಇರುವುದು ಎಂದರೆ ಇದ್ದಿಲು, ಮಣ್ಣು, ಬೇವಿನಕಡ್ಡಿ, ಬೂದಿ, ರಂಗೋಲೆ, ಇವುಗಳೆಲ್ಲಾ ಬರುತ್ತವೆ. ಬ್ರಾಂಡ್ ಇಲ್ಲದೇ ಇರುವುದು ಎಂದರೆ ಏನು? ನಾನು ಮೂವತ್ತು ವರ್ಷಗಳ ಹಿಂದೆ ಪ್ರವಾಸ ಹೋಗಿದ್ದಾಗ ಸ್ವಲ್ಪ ಧೂಳು ತೆಗೆದುಕೊಂಡು ಹಲ್ಲು ಉಜ್ಜುತ್ತಿದ್ದೆ. ಇದ್ದಿಲಿನಿಂದ ಉಜ್ಜುತ್ತಿದೆ. ಮಣ್ಣು, ರಂಗೋಲೆ ಪುಡಿಯಿಂದ ಹಲ್ಲು ಉಜ್ಜುತ್ತಿದ್ದರು. ಈಗ ನಂಜನಗೂಡು ಹಲ್ಲುಪುಡಿ ಇದೆ. ಅದಕ್ಕೆ ವಿನಾಯಿತಿ ಇದೆಯೇ?

ಶ್ರೀ ಸಿದ್ದರಾಮಯ್ಯ : ಬ್ರಾಂಡ್ ಎಂದರೆ ಕೊಲ್ಗೇಟ್ ಬರುತ್ತದೆ. ನಂಜನಗೂಡು ಹಲ್ಲುಪುಡಿ ಎಂದರೆ ಮೈಸೂರು ಜಿಲ್ಲೆಯಲ್ಲಿ ಬಹಳ ಪ್ರಚಾರದಲ್ಲಿತ್ತು. ಬಹಳ ಜನ ಉಪಯೋಗಿಸುತ್ತಿದ್ದರು. ಅದರಲ್ಲಿ ಸ್ವಲ್ಪ ಆಯುರ್ವೇದದ ಔಷಧಿಗಳು ಇರುತ್ತಿದ್ದವು. ಈಗ ಗುಡಿ ಕೈಗಾರಿಕೆಗಳಲ್ಲಿ ಈ ಹಲ್ಲು ಪುಡಿಯನ್ನು ತಯಾರು ಮಾಡುತ್ತಿದ್ದಾರೆ. ಈ ತರಹ ಹಲ್ಲುಪುಡಿಗಳಿಗೆ ಈ ವಿನಾಯಿತಿ ಸಿಗುತ್ತದೆ. ಆ ತರಹ ಹಲ್ಲುಪುಡಿಗಳು ಹಳ್ಳಿಗಳಲ್ಲಿ ಎಲ್ಲಾ ಅಂಗಡಿಗಳಲ್ಲಿ ಸಿಗುತ್ತವೆ. ಅದರ ಮೇಲೆ ನಾವು ತೆರಿಗೆ ವಿನಾಯಿತಿಯನ್ನು ನೀಡಿದ್ದೇವೆ. ಈ ಕೊಲ್ಗೇಟ್‌ಗೆ ಅಲ್ಲ. ಕೊಲ್ಗೇಟ್ ಬ್ರಾಂಡ್ ಕ್ಯಾಟಗರಿಯಲ್ಲಿ ಬರುತ್ತದೆ. ಈ ಕೊಲ್ಗೇಟ್ ಮುಂತಾದವುಗಳು ಸಾಮಾನ್ಯ ಜನರಿಗೆ ಸಿಗುವುದಿಲ್ಲ. ಆದುದರಿಂದ ಅದಕ್ಕೂ ಇದಕ್ಕೂ ಬಹಳ ವ್ಯತ್ಯಾಸ ಇದೆ. ಬೇವಿನಕಡ್ಡಿ, ರಂಗೋಲೆ ಪುಡಿಗೆ ಅಲ್ಲ ನಾವು ವಿನಾಯಿತಿ ಕೊಡುತ್ತಿರುವುದು.

ಶ್ರೀ ವಾಟಾಳ್ ನಾಗರಾಜ್ : ಈಗ ಗುರುತು ಇಲ್ಲದೇ ಇರತಕ್ಕ ವಸ್ತುಗಳು ಹಲವಾರು ಇವೆ. ನಂಜನಗೂಡಿನ ಹಲ್ಲುಪುಡಿಯನ್ನು ಸದ್ವೈದ್ಯ ಶಾಲೆಯವರು ತಯಾರು ಮಾಡುತ್ತಿದ್ದಾರೆ. ಬ್ರಾಂಡ್ ಎಂದರೇ ಏನು?

ಶ್ರೀ ಕೆ.ಎನ್. ನಂಜೇಗೌಡ : ಬ್ರಾಂಡ್ ಎಂದರೆ ಟ್ರೇಡ್ ಅಥಾರಿಟಿ ಆಫ್ ಇಂಡಿಯಾದಲ್ಲಿ ಅಂಗೀಕಾರ ಪಡೆದುಕೊಂಡಿರುವುದು. ವೀಕ್ಕೋ ಟರ್‌ಮರಿಕ್ ಎಂದು ನಾವು ಏನು ಹೇಳುತ್ತೇವೆ, ಅದರಲ್ಲಿ ಹೆಚ್ಚು ಪಾಲು ಅರಿಶಿನ ಇರುತ್ತದೆ. ಅಲ್ಲಿ ರಿಜಿಸ್ಟರ್ ಆಗಿದ್ದರೆ ಅದು ಬ್ರಾಂಡ್ ಆಗುತ್ತದೆ. ರಿಜಿಸ್ಟರ್ ಆಗದದ್ದು ಮಾರಾಟ ಮಾಡುತ್ತಿರುವ ಹಲವಾರು ವಸ್ತುಗಳು ಇವೆ. ಅವುಗಳನ್ನು ಅನ್‌ಬ್ರಾಂಡೆಡ್ ಎಂದು ಕರೆಯುತ್ತೇವೆ.

ಶ್ರೀ ಸಿದ್ದರಾಮಯ್ಯ : ಕೊಲ್ಗೇಟ್‌ನ್ನು ಮಲ್ಟಿ ನ್ಯಾಷನಲ್ಸ್‌ನವರು ತಯಾರು ಮಾಡುತ್ತಿದ್ದಾರೆ. ಶ್ರೀಮಾನ್ ನಾಗೇಗೌಡರು ಹೇಳಿದಂತಹ ವಿಚಾರ ಕೂಡ ಸರಿಯಾಗಿದೆ ಕೆಲವು ಹಲ್ಲುಪುಡಿಗಳು ಇವತ್ತು ಸಣ್ಣ ಸಣ್ಣ ಗುಡಿ ಕೈಗಾರಿಕೆಗಳಲ್ಲಿ ತಯಾರು ಆಗುತ್ತಿವೆ. ಈ ಹಲ್ಲುಪುಡಿಗಳು ಹಳ್ಳಿಗಳಲ್ಲಿ ವ್ಯಾಪಾರವಾಗುತ್ತಿವೆ. ಇದನ್ನು ನಾವು ಅನ್‌ಬ್ರಾಂಡೆಡ್ ಎಂದು ಕರೆಯುತ್ತೇವೆ. ದೊಡ್ಡ ದೊಡ್ಡ ಕಂಪನಿಗಳು ಮಾತ್ರ ಬ್ರಾಂಡ್ ಆಗಿರುವುದರಿಂದ ಅವುಗಳು ಮಾತ್ರ ರಿಜಿಸ್ಟರ್ ಆಗಿರುತ್ತವೆ. ಈ ಅನ್‌ಬ್ರಾಂಡೆಡ್ ಇರತಕ್ಕದ್ದು ಸಾಮಾನ್ಯ ಹಳ್ಳಿಗಳಲ್ಲಿ ಹಾಗೂ ಸಣ್ಣ ಸಣ್ಣ ನಗರಗಳಲ್ಲಿ. ಅಲ್ಲಿನ ಸಾಮಾನ್ಯ ಜನರು ಇವುಗಳನ್ನು ಉಪಯೋಗಿಸುತ್ತಾರೆ. ಕೊಲ್ಗೇಟ್ ಪಾಮೋಲೀವ್ ಅಂತಹ ಹಲ್ಲುಪುಡಿಗಳು ಬ್ರಾಂಡೆಡ್ ಹಲ್ಲುಪುಡಿಗಳು. ಅವುಗಳು ಸಾಮಾನ್ಯ ಜನರ ಕೈಗೆ ತಾಗದೇ ಇರತಕ್ಕವು. ಅವುಗಳು ಹಳ್ಳಿಗಾಡಿನಲ್ಲಿ ವ್ಯಾಪಾರಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನೀವು ಏನೇನೋ ಹೇಳಿ ನನ್ನ ದಾರಿ ತಪ್ಪಿಸಲು ಹೋಗುತ್ತಿದ್ದೀರಿ. ಇದ್ದಿಲು, ಮಣ್ಣು, ರಂಗೋಲೆ ಪುಡಿ ಇವುಗಳಿಗೆ ನೀವು ವಿನಾಯಿತಿ ಕೊಡುತ್ತಿರುವುದು. ಅದರಲ್ಲಿ ಏನು ಅನುಮಾನ ಇಲ್ಲ. ನೀವು ಮಾಡಿರುವುದು ಶಾಭಾಷ್‌ಗಿರಿ ಕೊಡುವಂಥಾದ್ದು ಏನೂ ಅಲ್ಲವೆಂದು ನನಗನಿಸುತ್ತದೆ.

ಶ್ರೀ ಸಿದ್ದರಾಮಯ್ಯ : ನೀವು ಹಳ್ಳಿಯಿಂದ ಬಂದಿರುವವರು. ನೀವು ಈ ರೀತಿ ಹೇಳಿದರೆ ಇನ್ನು ಯಾರು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಬೆಂಗಳೂರಿನ ಜನತೆಯನ್ನು ಕರ್ನಾಟಕದಿಂದ ಬೇರ್ಪಡಿಸುತ್ತಿದ್ದೀರಿ. ಕರ್ನಾಟಕದ ಏಕೀಕರಣಕ್ಕೋಸ್ಕರ 1956ರಿಂದ ಎಷ್ಟು ಹೋರಾಟ ನಡೆಯಿತು ಎಂಬುದು ಎಲ್ಲರಿಗೂ ಗೊತ್ತಿದೆ. ಹೈದರಾಬಾದ್ ಕರ್ನಾಟಕ. ಈ ಕಡೆ ಕರ್ನಾಟಕ ಎಲ್ಲಾ ಸೇರಿ ಒಟ್ಟಿಗೆ ಆಗಿದ್ದೇವೆ. ಆದರೆ ಶ್ರೀಮಾನ್ ಸಿದ್ದರಾಮಯ್ಯನವರು ಈ ಏಕೀಕರಣ ತತ್ವಕ್ಕೆ ವಿರುದ್ಧವಾಗಿ ತೆರಿಗೆಯಲ್ಲಿ ಬೆಂಗಳೂರಿಗೆ ಬೇರೆ ಕರ್ನಾಟಕದ ಜನರಿಗೆ ಬೇರೆ ಎಂದು ಮಾಡಿದ್ದಾರೆ. ಬೆಂಗಳೂರಿನ ಜನ ಏನು ಪಾಪ ಮಾಡಿದ್ದಾರೆ? ನೀವು ಡೀಸಲ್ ಮೇಲೆ ಪೆಟ್ರೋಲ್ ತೆರಿಗೆ ಹಾಕಿದ್ದೀರಿ. ಅವರು ಏನು ಪಾಪ ಮಾಡಿದ್ದಾರೆ? ಸ್ವಲ್ಪ ತಾವು ಹೇಳಬೇಕು. ತಾವು ಈಗ ಸಧ್ಯದಲ್ಲಿ ಬೆಂಗಳೂರಿನಲ್ಲೇ ಇದ್ದೀರಿ. ಮಂತ್ರಿಗಳೆಲ್ಲಾ ಇರುವುದು ಇಲ್ಲೇ ತಾನೇ, ರಾಜ್ಯಪಾಲರು ಇರುವುದು ಇಲ್ಲೇ ತಾನೇ, ಸ್ವಲ್ಪ ಹೆಚ್ಚು ಕಡಿಮೆ ಸರ್ಕಾರ ನಡೆಸತಕ್ಕ ವ್ಯವಸ್ಥೆಯಲ್ಲಿ ಎಲ್ಲರೂ ಇಲ್ಲಿಯೇ ಇದ್ದಾರೆ. ನಿಮಗೆ ಯಾರಿಗೂ ಕರುಣೆ ಬರಲಿಲ್ಲವೇ, ಪ್ರೀತಿ ಬರಲಿಲ್ಲವೇ ಈ ಊರಿನ ಮೇಲೆ. ಹಿಗ್ಗಾಮುಗ್ಗ ಬೆಂಗಳೂರಿನ ಜನರನ್ನು ಎಳೆಯುತ್ತಿದ್ದೀರಿ. ಒಂದು ಕಡೆ ತೆರಿಗೆಯನ್ನು ಮತ್ತೊಂದು ಕಡೆ ದೇಶ ವಿದೇಶಗಳಿಂದ ಕೈಗಾರಿಕೆಗಳವರನ್ನು ಇಲ್ಲಿಗೆ ಕರೆಯಿಸುತ್ತಿದ್ದೀರಿ. ಬೆಂಗಳೂರನ್ನು ಹಿಡಿದುಕೊಂಡು ಖಿಚಿಡಿ ಮಾಡುತ್ತಿದ್ದೀರಿ. ಹಿಂದೆ ಒಂದು ಕಾಲದಲ್ಲಿ ಜಗಳಗಳು ಆದಾಗ ಪುಂಡುಗಂದಾಯವನ್ನು ಹಾಕುತ್ತಿದ್ದರು. ಶ್ರೀಮಾನ್ ನಿಜಲಿಂಗಪ್ಪನವರ ಕಾಲದಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಒಂದು ಸಾರಿ ನನಗೆ ಜ್ಞಾಪಕವಿರುವಂತೆ ಎರಡು ಜಾತಿಗಳ ಜಗಳ ಆದಾಗ ಈ ಪುಂಡುಗಂದಾಯವನ್ನು ಹಾಕಿದ್ದರು. ಈ ಪುಂಡುಗಂದಾಯ ರೀತಿಯಲ್ಲಿ ತಾವು ಬೆಂಗಳೂರಿನ ಜನರಿಗೆ ತೆರಿಗೆಯನ್ನು ಹಾಕುತ್ತಿದ್ದೀರಿ. ನಮ್ಮ ಮೇಲೆ ನೀವು ಬಹಳ ಗಂಭೀರವಾದ ನಾಜೂಕಾದ ವಿನಯದಿಂದ ತೆರಿಗೆಯನ್ನು ಹಾಕುತ್ತಾ ಇದ್ದೀರಿ. ಒಂದು ರೀತಿಯ ಪುಂದುಗಂದಾಯವನ್ನು ಪ್ರಾಮಾಣಿಕ ನಾಗರೀಕರ ಮೇಲೆ ಕರ್ನಾಟಕದ ರಾಜಧಾನಿಯ ನಾಗರೀಕರ ಮೇಲೆ ಕರ್ನಾಟಕದ ಹೃದಯದಂತಿರುವ ಬೆಂಗಳೂರು ನಗರದ ನಾಗರೀಕರ ಮೇಲೆ ತಾವು ಹಾಕುತ್ತಿದ್ದೀರಿ. ಈ ವಾದವನ್ನು ನಾವು ಎಂದಿಗೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ತಾವು ಉತ್ತರ ಕೊಡುವಾಗ ಈ ಪುಂದುಗಂದಾಯ ಧಾಟಿಯನ್ನು ಬಿಟ್ಟು ಅದನ್ನು ಹಿಂತೆಗೆದುಕೊಂಡಿದ್ದೇವೆ ಎಂಬುದನ್ನು ಹೇಳಬೇಕು. ನಿಜವಾಗಿ ಬೆಂಗಳೂರಿನ ಜನ ಏನು ಪಾಪ ಮಾಡಿದ್ದಾರೆ. ಬೆಂಗಳೂರನ್ನು ಕಟ್ಟಿದಂತಹ ಮಹನೀಯ ಕೆಂಪೇಗೌಡರು ಅವರ ಕಲ್ಪನೆಯಂತೆ ಅವರ ಮುಂದಿನ ದೂರದೃಷ್ಟಿಯಿಂದ ಇವತ್ತು ಬೆಂಗಳೂರು ನಗರದ ಜನತೆ ದಿಕ್ಕಾಪಾಲಾಗಿ ಎಲ್ಲಾ ಕಡೆಯಿಂದ ಹೊಡೆತವನ್ನು ತಿನ್ನುತ್ತಿದೆ. ಒಂದು ರೀತಿಯಲ್ಲಿ ಇಲ್ಲಿಯ ಪರಿಸರ

ಹಾಳಾಗಿದೆ. ಸಾರಿಗೆ ವ್ಯವಸ್ಥೆ ಹಾಳಾಗಿದೆ, ಬೆಳೆವಣಿಗೆ ಹಾಳಾಗಿದೆ. ಉಸಿರು ಕಟ್ಟುವಂತಹ ವಿಷದ ವಾತಾವರಣ ಇಲ್ಲಿ ಸೃಷ್ಟಿಯಾಗಿದೆ. ಬೆಂಗಳೂರಿನ ವಾತಾವರಣ ನಾಶ ಆದಾಗ ಅನಾರೋಗ್ಯ ಉಂಟಾಗಿ ರೋಗಗಳು ಹರಡುವ ಸಾಧ್ಯತೆಗಳಿವೆ. ಪರಿಸ್ಥಿತಿ ಈ ರೀತಿ ಇರುವಾಗ ಬೆಂಗಳೂರಿನ ನಾಗರೀಕರ ಮೇಲೆ ಗಾಯದ ಮೇಲೆ ಬರೆ ಎಳೆಯುವಂತಹ ರೀತಿಯಲ್ಲಿ ನೀವು ಈ ತೆರಿಗೆಗಳನ್ನು ಹಾಕಿದ್ದೀರಿ. ಇದು ಸರಿಯಲ್ಲ. ಅದು ಜನಸಾಮಾನ್ಯರ ಮೇಲೆ ಹೋಗುತ್ತದೆ. ಇದು ವರ್ಗೀಕರಣ ಆಗಿದೆ. ಬೆಂಗಳೂರು ಬೇರೆ ಮತ್ತೊಂದು ಬೇರೆ ಎಂಬ ವರ್ಗೀಕರಣ ಮಾಡುವುದು ಸರಿ ಅಲ್ಲ. ಬೆಂಗಳೂರಿನ ಬೆಳವಣಿಗೆಗೆ ಸದಾ ಹಣವನ್ನು ಕ್ರೋಢೀಕರಿಸಬೇಕೆಂದು ಹೇಳಿದ್ದೀರಿ. ಬೆಂಗಳೂರಿನ ಜನ ಒಬ್ಬರೇ ಹಣ ಕೊಡಬೇಕಾಗಿದೆ. ಬೆಂಗಳೂರಿಗೆ ವಿದೇಶಿಯರನ್ನು ಕರೆಯುತ್ತೀರಿ. ಇಲ್ಲೆಲ್ಲಾ ಬೇರೆ ಭಾಗದ ಜನ ಬರುತ್ತಾರೆ ಅದನ್ನು ನಾವು ಗಮನಿಸಬೇಕು. ಬೆಂಗಳೂರು ಕರ್ನಾಟಕದ ಒಂದು ಅವಿಭಾಜ್ಯ ಅಂಗ. ಬೆಂಗಳೂರಿನ ಜನ ನಾಲ್ಕುವರೆ ಕೋಟಿ ಕನ್ನಡಿಗರಲ್ಲಿ ಸೇರಿದ್ದಾರೆ. ಆದರೆ ಬೆಂಗಳೂರಿನ ಜನರನ್ನು ವರ್ಗೀಕರಣ ಮಾಡಿ ಬೇರೆ ಜನರನ್ನು ಎತ್ತಿಕಟ್ಟುವಂಥಾದ್ದು ನಿಜವಾಗಿಯು ಶೋಭೆ ಅಲ್ಲ. ನೀವು ನಿಮ್ಮ ಋಣವನ್ನು ತೀರಿಸಲು ಪ್ರಯತ್ನ ಮಾಡಿ. ನೀವು ಬೆಂಗಳೂರಿನಲ್ಲಿ ಇದ್ದೀರಿ. ಈ ಋಣವನ್ನು ನೀವು ತೀರಿಸಲೇಬೇಕು. ಇಲ್ಲಿ ವರ್ಗೀಕರಣ ಮಾಡುತ್ತೀರಿ ಎಂದರೆ ಅದು ಸಾಧ್ಯವಿಲ್ಲ. ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ನೀವು ಬೆಂಗಳೂರು ನಗರದಲ್ಲಿ ಪೆಟ್ರೋಲ್ ಮತ್ತು ಡೀಸೆಲ್‌ಗಳ ಬೆಲೆಯನ್ನು ಏರಿಸಿ ಅವರ ಮೇಲೆ ಹೊರೆಯನ್ನು ಹಾಕಿದ್ದೀರಿ. ಇದನ್ನು ಕೂಡಲೇ ರದ್ದು ಮಾಡುತ್ತೀರೆಂದು ತಾವು ತಮ್ಮ ಉತ್ತರದಲ್ಲಿ ಹೇಳಬೇಕು. ತಾವು ಈ ಆಯ-ವ್ಯಯದಲ್ಲಿ ನೆರಳಿನ ಭಾಗ್ಯ ವಿಚಾರದ ಬಗ್ಗೆ ಹೇಳಿದ್ದೀರಿ. ನೆರಳಿನ ಭಾಗ್ಯ ಯೋಜನೆಯಡಿಯಲ್ಲಿ ಪ್ರತಿಕ್ಷೇತ್ರದಲ್ಲಿ 300-350ಮನೆಗಳನ್ನು ಕೊಡತಕ್ಕ ವ್ಯವಸ್ಥೆ, ಮನೆಗಳಿಗೆ ಹಂಚುಗಳನ್ನು ಕೊಡತಕ್ಕದ್ದು ಎಂಬುದರ ಬಗ್ಗೆ ಯೋಜನೆಯಲ್ಲಿ ಹೇಳಿದ್ದೀರಿ. ಇದರಿಂದ ಬಹಳ ಅನುಕೂಲವಾಗುತ್ತದೆ. ಗೋಡೆ ಕಟ್ಟಿದ್ದೀರಿ, ಮೇಲೆ ಛಾವಣಿ ಮಾಡಿದರೆ ಅದು ಉಪಯೋಗ ಆಗುತ್ತದೆ.

ಶ್ರೀ ಸಿದ್ದರಾಮಯ್ಯ : ಮರದ ಸಾಮಾನುಗಳು ಬಹಳ ದುರುಪಯೋಗ ಆಗುತ್ತಿದ್ದವು.

ಶ್ರೀ ವಾಟಾಳ್ ನಾಗರಾಜ್ : ವ್ಯವಸ್ಥೆ ಬೇರೆ, ದುರುಪಯೋಗವನ್ನು ತಡೆಯಲು ನೀವು ಕ್ರಮಕೈಗೊಳ್ಳಬೇಕು. ಈ ಚಿಂತನೆ ಮುಂದುವರಿಯಬೇಕು. ನೆರಳಿನ ಭಾಗ್ಯ ಮುಂದುವರಿಯಬೇಕು. ನನ್ನ ಕ್ಷೇತ್ರದಲ್ಲಿ ಬಹಳ ಅಪಾರವಾದ ಎರಡು ಜನಾಂಗ ಹಾಗೂ ಹಿಂದುಳಿದ ವರ್ಗದವರು ಇದ್ದಾರೆ. ಇದು ಮೇಲು, ಸಕ್ಕರೆ ಶೆಟ್ಟಿ ಜನಾಂಗ ಹಾಗೂ ಉಪ್ಪಾರ ನಾಯಕ ಜನಾಂಗ. ಇವರುಗಳಿಗೆ ಮನೆಗಳನ್ನು ಒದಗಿಸಲು ಹೊಸ ಚಿಂತನೆಯನ್ನು ಮಾಡಿ. ಇದಕ್ಕೆ ವಿಶೇಷವಾಗಿ ತಾವು ಹಣವನ್ನು ಮುಡುಪಾಗಿಡಬೇಕು. ಈ ನೆರಳಿನ ಭಾಗ್ಯ ಯೋಜನೆಗೆ ಹಿಂದಿನ ರೀತಿಯಲ್ಲಿ ತಾವು ಹಣವನ್ನು ಇಡಬೇಕು ಎಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಮತ್ತೊಂದು ಅತಿ ಮುಖ್ಯವಾದ ವಿಷಯ ಏನೆಂದರೆ ಹೆಣ್ಣುಮಕ್ಕಳಿಗೆ ಶೌಚಾಲಯ ಒದಗಿಸುವ ಬಗ್ಗೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಸಹ ಹೆಣ್ಣುಮಕ್ಕಳಿಗೆ ಪ್ರತ್ಯೇಕವಾದ ವ್ಯವಸ್ಥೆ ಮಾಡಲಿಲ್ಲ. ಹಳ್ಳಿಗಾಡಿನಲ್ಲಿ ಹೆಣ್ಣುಮಕ್ಕಳಿಗೆ ಸ್ವಾತಂತ್ರ್ಯವೇ ಇರಲಿಲ್ಲ? ಅವರ ಸೂರ್ಯ ಮುಳುಗಡೆಯಾದ ಮೇಲೆ ಬೇಲಿ ಪಕ್ಕಕ್ಕೆ ಕುಳಿತುಕೊಳ್ಳಬೇಕು. ಇಡೀ

ಕರ್ನಾಟಕದ ಪ್ರತಿ ಹಳ್ಳಿ ಹಳ್ಳಿಯಲ್ಲೂ ಇದೇ ವ್ಯವಸ್ಥೆ ಇದೆ. ಸ್ವಲ್ಪ ಹೆಚ್ಚು ಕಡಿಮೆ ಎರಡು ಕೋಟಿ ಮಹಿಳೆಯರಲ್ಲಿ ಶ್ರೀಮಂತರನ್ನು ಬಿಟ್ಟರೆ ಕನಿಷ್ಟ ಪಕ್ಷ ಒಂದು ಕೋಟಿ ಮಹಿಳೆಯರು ಈ ಬೇಲಿ ಪಕ್ಕದಲ್ಲಿ ಹೋಗತಕ್ಕ ಪರಿಸ್ಥಿತಿಯಲ್ಲಿದ್ದಾರೆ. ಈ ಒಂದು ಅಪಮಾನಕರವಾದ ಪರಿಸ್ಥಿತಿಗೆ ನಾವೆಲ್ಲಾ ನಾಚಿಕೆ ಪಟ್ಟುಕೊಳ್ಳಬೇಕು. ಹಾಗೂ ತಲೆ ತಗ್ಗಿಸಬೇಕು. ಈ ವ್ಯವಸ್ಥೆ ಮುಂದುವರಿಯಬಾರದು. ಈ ವ್ಯವಸ್ಥೆಯನ್ನು ಮೊದಲು ನೀವು ಬೇಕಾದರೆ ದುಡ್ಡಿಲ್ಲದಿದ್ದರೆ ಎರಡು ರಸ್ತೆ ಕೆಲಸವನ್ನು ನಿಲ್ಲಿಸಿ ಚಿಂತೆ ಇಲ್ಲ ಆದರೆ ಆ ಕೆಲಸವನ್ನು ಮಾತ್ರ ನಿಲ್ಲಿಸಬಾರದು. ಹೆಣ್ಣುಮಕ್ಕಳ ಒಂದು ಸ್ವಾತಂತ್ರ್ಯ ಹರಣ ಏನಾಗಿದೆ ಅದನ್ನು ಭರಿಸಲಿಕ್ಕೆ ತಾವು ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳಬೇಕು. ಹಳ್ಳಿಗಳಲ್ಲಿ ಆಯಾ ಬೀದಿಗಳಲ್ಲಿ ಈ ವ್ಯವಸ್ಥೆಯನ್ನು ಒದಗಿಸಬೇಕು. ಶೌಚಾಲಯಕ್ಕೆ ಸ್ಥಳ ಮತ್ತು ನೀರಿನ ವ್ಯವಸ್ಥೆ ಕಲ್ಪಿಸಬೇಕು ಶೌಚಾಲಯಕ್ಕೆ ನೀರಿನ ವ್ಯವಸ್ಥೆ ಇಲ್ಲದಿದ್ದರೆ ಈ ಯೋಜನೆ ವಿಫಲವಾಗುತ್ತದೆ. ಇನ್ನು ಎರಡನೆಯದಾಗಿ ಇದಕ್ಕೆ ಎಷ್ಟೇ ಹಣ ಖರ್ಚಾದರೂ ಚಿಂತೆ ಇಲ್ಲ, ಈ ಶೌಚಾಲಯವನ್ನು ಕಟ್ಟಿಸಿಕೊಡಲಿಕ್ಕೆ ಪ್ರಾಥಮಿಕವಾದ ಚಿಂತನೆ ತಮ್ಮಲ್ಲಿ ಇರಬೇಕು ಎನ್ನತಕ್ಕ ಮಾತನ್ನು ನಾನು ಅತ್ಯಂತ ಕಳಕಳಿಯಿಂದ ಹೇಳುತ್ತೇನೆ. ಈ ಬಗ್ಗೆ ತಾವು ಎಷ್ಟು ಪರಿಣಾಮಕಾರಿಯಾಗಿ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಿ ಎಂಬುದು ಗೊತ್ತಿಲ್ಲ. ಕನಿಷ್ಟ ಪಕ್ಷ ಒಂದು ಹಳ್ಳಿಯಲ್ಲಿ ಐದು ಕಡೆಯಾದರೂ ಇದನ್ನು ಮಾಡಬೇಕು. ಅನೇಕ ಕೋಮುಗಳು ಇರುತ್ತವೆ. ಆಯಾಯ ಬೀದಿಗಳಲ್ಲಿ ಈ ವ್ಯವಸ್ಥೆಯನ್ನು ಒದಗಿಸಬೇಕು. ಬೇಲಿ ಪಕ್ಕದಲ್ಲಿ ಅವರು ಪ್ರಾಣದ ಹಂಗನ್ನು ತೊರೆದು ಹೋಗಬೇಕಾಗಿದೆ, ಅಲ್ಲಿ ಹಾವಿನ ಕಾಟ ಇರುತ್ತದೆ. ಹಾಗೂ ಯಾರಾದರೂ ಬಂದರೆ ಅಥವಾ ಬೆಳಕು ಬಂದರೆ ತಕ್ಷಣ ಎದ್ದುನಿಲ್ಲಬೇಕಾಗುತ್ತದೆ. ಈ ಪರಿಸ್ಥಿತಿಯನ್ನು ನೀವು ತಪ್ಪಿಸಿ. ನಿಮಗೆ ಪುಣ್ಯ ಬರುತ್ತದೆ. ಹಾಗೂ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ.

ಶ್ರೀ ಬಿ. ಮುನಿಯಪ್ಪ : ಕೊನೆಯ ಪಕ್ಷ ಜಾತಿ ಹಾಗೂ ಉಪ ಜಾತಿಗಳನ್ನು ವಿಂಗಡಿಸಬಾರದು. ಕೊನೆಯ ಪಕ್ಷ ಇಲ್ಲಿಯಾದರೂ ಜಾತಿ ಹಾಗೂ ಉಪ ಜಾತಿಗಳನ್ನು ಮರೆಯೋಣ.

ಅಧ್ಯಕ್ಷರು : ಕೋಮುಗಳ ಬಗ್ಗೆ ಅವರು ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಒಂದು ಆರೋಗ್ಯದ ನಿಧಿ ಎಂದು ತಾವು ಮಾಡಿದ್ದೀರಿ. ಉದ್ದೇಶ ಒಳ್ಳೆಯದು ಇದೆ. ಈ ನಿಧಿಗೆ ಹತ್ತು ಕೋಟಿ ರೂಪಾಯಿ ಎಂದು ಇಟ್ಟಿದ್ದೀರಿ. ಉಳಿದ ತೊಂಭತ್ತು ಕೋಟಿ ರೂಪಾಯಿಗೆ ಆಕಾಶ ಹಾಗೂ ಮೋಡವನ್ನು ನೋಡುತ್ತಿದ್ದೀರಿ. ಮಳೆ ಬರುತ್ತದೆ ಕಾದು ನೋಡೋಣ ಎಂದು. ಮಳೆ ಬಂದಿಲ್ಲ ಎಂದರೆ ನಿಮ್ಮದು ಏನು ವ್ಯವಸ್ತೆ? ಹತ್ತು ಕೋಟಿ ರೂಪಾಯಿ ಮಾತ್ರ ಇಟ್ಟಿದ್ದೀರಿ. ಇನ್ನು ತೊಂಭತ್ತು ಕೋಟಿ ರೂಪಾಯಿ ಬೇಕು. ಈ ತೊಂಭತ್ತು ಕೋಟಿ ಸಂಪನ್ಮೂಲಗಳನ್ನು ಪಡೆಯಲು ನೀವು ಕೈಗಾರಿಕೆಯವರಿಂದ ಹಾಗೂ ಬೇರೆಯವರಿಂದ ಪಡೆದುಕೊಳ್ಳುತ್ತೀರಿ ಎಂದು ಹೇಳಿದ್ದೀರಿ. ಇಂತಹದ್ದನ್ನು ನೀವು ಅನೇಕ ಕಡೆ ಹೇಳಿದ್ದೀರಿ. ಈ ಯೋಜನೆ ಅತ್ಯಂತ ಮುಖ್ಯವಾದುದು. ಇದರಲ್ಲಿ ಬೇರೆ ಮಾತೇ ಇಲ್ಲ. ಈ ಯೋಜನೆಯನ್ನು ತಾವು ಜಾರಿಗೊಳಿಸಬೇಕಾದರೆ ಇನ್ನು ತೊಂಭತ್ತು ಕೋಟಿ ಸಂಪನ್ಮೂಲಗಳನ್ನು ಪಡೆಯಲು ದೇಶಪಾಂಡೆಯವರ ಕಡೆ ತೋರಿಸಿದ್ದೀರಿ. ಅದೆಲ್ಲಾ ಕ್ರೋಢೀಕರಣ ಆಗಿ ಬರುವವರೆಗೆ ನಿಮ್ಮ ಪರಿಸ್ಥಿತಿ ಏನು?

ಶ್ರೀ ಸಿದ್ದರಾಮಯ್ಯ : ನಿಮ್ಮ ಪ್ರಕಾರ ಈ ದೇಶದಲ್ಲಿ ದಾನಿಗಳೇ ಇಲ್ಲವೇ? ಸಹಾಯ ಮಾಡತಕ್ಕ ಜನ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ದಾನಿಗಳನ್ನು ನಂಬಿಕೊಂಡು ನೀವು ಮುಂದಕ್ಕೆ ಬೆಳೆಯಲು ಆಗುವುದಿಲ್ಲ. ಈ ಕಾರ್ಯಕ್ರಮ ಚೆನ್ನಾಗಿದೆ. ಆದರೆ ಹತ್ತು ಕೋಟಿ ರೂಪಾಯಿ ಮಾತ್ರ ಇಟ್ಟಿದ್ದೀರಿ.

ಶ್ರೀ ಕೆ.ಎನ್. ಪುಟ್ಟಣ್ಣಯ್ಯ : ಮಾನ್ಯ ಸದಸ್ಯರ ಅಭಿಪ್ರಾಯ ಏನೆಂದರೆ ನೀವು ಹತ್ತು ಕೋಟಿ ರೂಪಾಯಿ ಇಟ್ಟಿದ್ದೀರಿ. ಈ ಯೋಜನೆಯ ಪ್ರತಿಫಲ ನಮಗೆ ದೊರಕಬೇಕಾದರೆ ನೂರು ಕೋಟಿ ರೂಪಾಯಿಗಳು ಬೇಕು. ನೀವು ಕೇವಲ ಪುಸ್ತಕದಲ್ಲಿ ಮಾತ್ರ ಇಟ್ಟುಕೊಳ್ಳದೇ ಅನುಷ್ಠಾನಕ್ಕೆ ತರಬೇಕು ಎಂಬುದೇ ಹಿರಿಯ ಸದಸ್ಯರ ಆಸೆ ಅದನ್ನು ನಾನು ಪುಷ್ಟೀಕರಿಸುತ್ತೇನೆ.

ಶ್ರೀ ಸಿದ್ಧರಾಮಯ್ಯ : ಈ ಕೆಲಸವನ್ನು ನಾವು ನೀವು ಎಲ್ಲರೂ ಸೇರಿ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಇದನ್ನು ಜಾರಿಗೆ ತನ್ನಿ. ಅಪನಂಬಿಕೆ ಆಗಬಾರದು. ಇನ್ನು ಕನ್ನಡ ಸಂಸ್ಕೃತಿ ಬಗ್ಗೆ ಮಾತನಾಡುತ್ತೇನೆ. ಶ್ರೀ ಸಿದ್ದರಾಮಯ್ಯನವರು ಹಿಂದೆ ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿದ್ದರು. ಈ ಒಂದು ವಿಚಾರದಲ್ಲಿ ಎಷ್ಟು ದುಃಖ ಆಗಿದೆ ಎಂದರೆ....

ಶ್ರೀ ಸಿದ್ದರಾಮಯ್ಯ : ಹೊಸ ಕಾರ್ಯಕ್ರಮ ಮತ್ತು ಹಳೆಯದೂ ಇದೆ.

ಶ್ರೀ ವಾಟಾಳ್ ನಾಗರಾಜ್ : ಎಲ್ಲಾ ಕಾರ್ಯಕ್ರಮ ಏನು ಇವೆ ಇದೆಲ್ಲಾ ಸೇರಿದರೆ ಒಂಭತ್ತೂವರೆ ಕೋಟಿ. ಇಡೀ ಕನ್ನಡ ಸಂಸ್ಕೃತಿ ಸಾಹಿತ್ಯ ಎಲ್ಲಾ ಸೇರಿ ಒಂಭತ್ತವರೆ ಕೋಟಿ ರೂಪಾಯಿ ಮಾತ್ರ ಇಟ್ಟಿದ್ದೀರಿ. ನಮ್ಮ ರಾಜ್ಯದ ಭವಿಷ್ಯ ನಮ್ಮ ರಾಜ್ಯದ ಒಂದು ಅತ್ಯಂತ ಪ್ರಾಮಾಣಿಕ ಚಿಂತನೆ ಏನೆಂದರೆ ಆಡಳಿತ ಭಾಷೆ ಕನ್ನಡ ಆಗಬೇಕು ಎಂದು. ಕನ್ನಡ ಸಾಹಿತ್ಯದ ಬಗ್ಗೆ, ಕನ್ನಡ ಸಂಸ್ಕೃತಿಯ ಬಗ್ಗೆ ಕನ್ನಡ ನೆಲೆ ಇದರ ಬಗ್ಗೆ ನಾವು ಹೋದ ಕಡೆಯಲ್ಲೆಲ್ಲಾ ಉದ್ದುದ್ದಾಗಿ ಭಾಷಣ ಮಾಡುತ್ತೇವೆ. ಆದರೆ ಇದಕ್ಕೆ ಹೆಚ್ಚಿನ ಹಣ ಇಲ್ಲ? ಈ ಕನ್ನಡ ಸಂಸ್ಕೃತಿ ಸಚಿವರಿಗೆ ಇರಬೇಕು. ಯಾರೋ ಒಬ್ಬ ರಾಜ್ಯ ಮಂತ್ರಿಗಳಿಗೆ ಕೊಡತಕ್ಕದ್ದು ಸರಿಯಲ್ಲ. ಇದು ನಮ್ಮ ರಾಜ್ಯ ಒಂದು ಕಿರೀಟ. ನಮ್ಮ ಕಣ್ಣು, ನಮ್ಮ ಹೃದಯ, ನಮ್ಮಭಾಷೆ ಅದುದರಿಂದ ಇದು ಒಬ್ಬ ಸಚಿವ ಸಂಪುಟ ದರ್ಜೆಯ ಸಚಿವರ ಕೈಯಲ್ಲಿ ಇರಲೇ ಬೇಕು ಅಂತ ಅನೇಕ ಬಾರಿ ಇದನ್ನು ಹೇಳಿಕೊಂಡು ಬಂದಿದ್ದೇನೆ.

ಮಾನ್ಯ ಅಧ್ಯಕ್ಷರೇ, ಕನ್ನಡದ ಬೆಳವಣಿಗೆಯ ಬಗ್ಗೆ ಯಾವ ಸರ್ಕಾರವು ಪ್ರಾಮಾಣಿಕವಾಗಿ ಚಿಂತನೆ ಮಾಡಲಿಲ್ಲ. ಮಾನ್ಯ ಬಂಗಾರಪ್ಪನವರಾಗಲೀ, ಮಾನ್ಯ ವೀರೇಂದ್ರ ಪಾಟೀಲ್‌ರವರಾಗಲೀ, ಮಾನ್ಯ ವೀರಪ್ಪಮೊಯಿಲಿಯವರಾಗಲಿ, ಎಲ್ಲರೂ ಕೂಡ ಇದನ್ನು ಒಂದು ರೀತಿಯಾಗಿ ಕರುಬೇವಿನಸೊಪ್ಪಿನ ತರಹ ನೋಡಿದರು, ಊಟಕ್ಕೆ ವಗ್ಗರಣೆ ಹಾಕಿದ ರೀತಿ. ಇವೊತ್ತು ಅಪಮಾನ, ಅಗೌರವ ಮತ್ತು ನಾಚಿಕೆ ಪಡತಕ್ಕಂಥ ಪರಿಸ್ಥಿತಿ ಈ ಕನ್ನಡದ ವ್ಯವಸ್ಥೆ ಆಗಿರತಕ್ಕಂಥದ್ದು. ಹಿಂದಿನ ಸರ್ಕಾರ ಹೇಳಿತು, ಆಡಳಿತ ಭಾಷೆ ಕನ್ನಡದವರು ಏಪ್ರಿಲ್ ಒಂದರಿಂದ ಎಂದು. ಆಗ ನಾನು ಹೇಳಿದ್ದೆ, ಮತ್ತು ದೇಶಪಾಂಡೆಯವರು ಹೇಳಿದ್ದರು, ಆಡಳಿತ ಭಾಷೆ ಕನ್ನಡವನ್ನು ಏಪ್ರಿಲ್ ಒಂದರಿಂದ

ತರುತ್ತಿದ್ದೀರಿ, ಏಪ್ರಿಲ್ ಒಂದು ಮೂರ್ಖರ ದಿನ. ಅಂದು ಕನ್ನಡಿಗರನ್ನು ಮೂರ್ಖರನ್ನಾಗಿ ಮಾಡಬೇಡಿ ಎಂದು ಹೇಳಿದ್ದೆ. ಅದಕ್ಕೆ ಆ ಸರ್ಕಾರದವರು ಏಪ್ರಿಲ್ ಒಂದು ಇಂಗ್ಲೀಷರಿಗೆ ಮೂರ್ಖರ ದಿನ ಎಂದು ಹೇಳಿದ್ದರು. ಏನು ಇಂಗ್ಲೀಷರ ಮೂರ್ಖರ ದಿನ, ಕನ್ನಡದವರ ಮೂರ್ಖರ ದಿನ ಎಂದು ಇದೆಯೆ? ಎಲ್ಲರಿಗೂ ಗೊತ್ತಿದೆ ಏಪ್ರಿಲ್ ಒಂದು ಮೂರ್ಖರ ದಿನ ಎಂದು. ಆಡಳಿತ ಭಾಷೆ ಕನ್ನಡ ಏಪ್ರಿಲ್ ಒಂದರಿಂದ ಎಂಬ ನಾಮ ಫಲಕವನ್ನು ವಿಧಾನಸೌಧದ ನಾಲ್ಕು ಕಡೆಗಳಲ್ಲಿಯೂ ಹಾಕಿದ್ದರು. ಆ ಫಲಕಕ್ಕೆ ರಾಜ್ಯ ಸಚಿವರಾಗಿದ್ದ ಶ್ರೀ ವಿಶ್ವನಾಥ್‌ರವರ ಭಾವಚಿತ್ರವನ್ನು ಹಾಕಿದ್ದರು, ಅವರ ನಂತರ ಶ್ರೀ ಆರ್.ಎನ್. ನಾಯಕ್‌ರವರ ಭಾವಚಿತ್ರವನ್ನು ಹಾಕಿದ್ದರು. ಈಗ ಆ ನಾಮಫಲಕಗಳು ಇಲ್ಲ ಮತ್ತು ಭಾವಚಿತ್ರವೂ ಇಲ್ಲ. ಅವರು ಹಾಕಿದ್ದ ನಾಮ ಫಲಕದಲ್ಲಿ 'ಕನ್ನಡವೇ ಸತ್ಯ ಕನ್ನಡವೇ ನಿತ್ಯ' ಎಂದು ಇತ್ತು. ಸ್ವಲ್ಪ ಕಾಲದ ನಂತರ ಆ ಫಲಕದಲ್ಲಿ ಕೆಲವು ಅಕ್ಷರಗಳು ಕಳೆದುಹೋಗಿ ಅಪಾರ್ಥವನ್ನು ಸೂಚಿಸುತ್ತಿತ್ತು. ಇದನ್ನು ಗಮನಿಸುವಷ್ಟು ತಾಳ್ಮೆಯೂ ಕೂಡ ಸರ್ಕಾರಕ್ಕೆ ಇರಲಿಲ್ಲ. ಸ್ವಾಮಿ, ನಾವು ಮತ್ತು ನೀವು ಕನ್ನಡ ಭಾಷೆ ರಾಜ್ಯದ ಆಡಳಿತ ಭಾಷೆ ಎಂಬುದನ್ನು ರಾಜ್ಯಾಂಗಬದ್ಧವಾಗಿ, ಪ್ರಾಮಾಣಿಕವಾಗಿ ಈ ಸದನ, ಸರ್ಕಾರ ಒಪ್ಪಿವೆ. ಆದರೆ ಕನ್ನಡವನ್ನು ಆಡಳಿತ ಭಾಷೆಯಾಗಿ ಎಲ್ಲಿ ಮಾಡಿದ್ದೀರಿ? ಏನೂ ಮಾಡಿಲ್ಲ. ಆಡಳಿತ ಕನ್ನಡದಲ್ಲಿಲ್ಲ. ತಾವು ಇದನ್ನು ಒಪ್ಪುತ್ತೀರೋ, ಇಲ್ಲವೋ ನನಗೆ ಗೊತ್ತಿಲ್ಲ. ಶ್ರೀ ಸಿದ್ದರಾಮಯ್ಯನವರು ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು, ನೀವು ಏನು ಕನ್ನಡ ಆಡಳಿತ ಭಾಷೆ ಎಂದು ಮುಂದುವರಿಸುತ್ತಿದ್ದೀರೋ, ಇದಕ್ಕೆ ಒಂದು ಪರಿಣಾಮಕಾರಿಯಾದ ಯೋಜನೆ ಇಲ್ಲ, ಹಣವಿಲ್ಲ, ಒಂದು ಒಳ್ಳೆಯ ವ್ಯವಸ್ಥೆ ಇದು ಯಾವುದೂ ಇಲ್ಲ.

ಶ್ರೀ ಸಿದ್ದರಾಮಯ್ಯ (ಹಣಕಾಸು ಸಚಿವರು) : ಮಾನ್ಯ ವಾಟಾಳ್‌ರವರೇ, ಕನ್ನಡ ಆಡಳಿತ ಭಾಷೆ ಆಗಬೇಕು ಎಂದು ಸುಮಾರು 20 ವರ್ಷಗಳಿಂದ ಸರ್ಕಾರೀ ಆದೇಶಗಳು ಹೋಗುತ್ತಿದೆ, ಸುತ್ತೋಲೆಗಳು ಹೋಗುತ್ತಿದೆ. ಕೇವಲ ಯೋಜನೆಗಳ ಮುಖಾಂತರ ಕನ್ನಡವನ್ನು ಆಡಳಿತ ಭಾಷೆ ಮಾಡುವುದಕ್ಕೆ ಹೋದರೆ ಅದು ಮೂರ್ಖತನ ಮತ್ತು ಅವಿವೇಕತನವಾಗುತ್ತದೆ. ಕನ್ನಡ ಆಡಳಿತ ಭಾಷೆಯಾಗಬೇಕು, ಕನ್ನಡದಲ್ಲಿ ವ್ಯವಹಾರ ಮಾಡಬೇಕು ಎನ್ನತಕ್ಕಂಥ ಮನಸ್ಸು ಅಧಿಕಾರಿಗಳಿಗೆ ಮತ್ತು ಸರ್ಕಾರದವರಿಗೆ ಬಂದಾಗ ಮಾತ್ರ ಪೂರ್ಣವಾಗಿ ಕನ್ನಡ ಆಡಳಿತ ಭಾಷೆಯಾಗುತ್ತದೆ. ನಾನೂ ಕೂಡ ಕನ್ನಡ ಬಂದಾಗ ಮಾತ್ರ ಪೂರ್ಣವಾಗಿ ಕನ್ನಡ ಆಡಳಿತ ಭಾಷೆಯಾಗುತ್ತದೆ. ನಾನೂ ಕೂಡ ಕನ್ನಡ ಕಾವಲು ಸಮಿತಿ ಅಧ್ಯಕ್ಷನಾಗಿ ನೋಡಿದ್ದೇನೆ. ಕನ್ನಡದಲ್ಲಿ ಆಡಳಿತ ನಡೆಸಬೇಕು ಎನ್ನುವುದಕ್ಕೆ ಸ್ವಲ್ಪ ಹಿಂದೇಟು ಇದೆ. ಅದು ಹೋದರೆ ಕನ್ನಡ ಆಡಳಿತ ಭಾಷೆ ಆಗಿಯೇ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಅದು ಹೇಗೆ ಹೋಗುತ್ತದೆ? ಅದಕ್ಕೆ ಮಂತ್ರ ಹಾಕಬೇಕೆ? ಅಥವಾ ಹರಿಕಥೆ ಮಾಡಿಸಬೇಕೇ? ಈ ಯೋಜನೆ, ಆಡಳಿತ ಭದ್ರತೆ, ಇಲ್ಲಿ ಆತ್ಮ ಶೋಧನೆ, ಆತ್ಮ ಚಿಂತನೆ, ಆತ್ಮ ಶಕ್ತಿ ಇದು ನಮ್ಮಲ್ಲಿ ಬೇಕು. ತಾವು ಯೋಜನೆ ಅಂದರೆ ಅದು ಮೂರ್ಖತನ ಎಂದು ಹೇಳಿದರೆ ಹೇಗೆ? ಇವೊತ್ತು ಸರ್ಕಾರದ ಆದೇಶಗಳು ಇಂಗ್ಲೀಷ್‌ನಲ್ಲಿವೆ, ಶಾಸಕಾಂಗದ ಆದೇಶಗಳು ಇಂಗ್ಲೀಷ್‌ನಲ್ಲಿವೆ, ಮಾನ್ಯ ಅಧ್ಯಕ್ಷರೆ, ನಮ್ಮ ಇವೊತ್ತಿನ ಮಾನ್ಯ ಮುಖ್ಯಮಂತ್ರಿಗಳು, ಮಣ್ಣಿನ ಮಗ ಎಂದೆನಿಸಿಕಂಡಿರುವ ಶ್ರೀಮಾನ್ ಹೆಚ್.ಡಿ. ದೇವೇಗೌಡರ ಭಾಷೆ ಇಂಗ್ಲೀಷ್. ನಾನು ಕನ್ನಡ ಪ್ರಭ ಪತ್ರಿಕೆಯಲ್ಲಿ ಒಂದು

ವರದಿಯನ್ನು ಓದಿದೆ. ಯಾವುದೋ ಒಂದು ಸಮಾರಂಭದಲ್ಲಿ ಶ್ರೀಮಾನ್ ದೇವೇಗೌಡರವರು ಒಂದು ಅಕ್ಷರವನ್ನು ಎಡಬಿಡದೆ ಇಂಗ್ಲೀಷ್‌ನಲ್ಲಿ ಮಾತನಾಡಿದರು ಎಂಬ ವರದಿಯನ್ನು ಓದಿದೆ.

ಶ್ರೀ ಆರ್.ವಿ. ದೇಶಪಾಂಡೆ (ಕೈಗಾರಿಕಾ ಸಚಿವರು) : ನಮ್ಮ ರಾಜ್ಯಕ್ಕೆ ಫಾರಿನ್ ಡೆಲಿಗೇಟ್ಸ್ ಬಂದಿರುತ್ತಾರೆ. ಅಲ್ಲಿ ಕನ್ನಡದಲ್ಲಿ ಮಾತನಾಡಿದರೆ ಅವರಿಗೆ ಏನು ಅರ್ಥವಾಗುತ್ತದೆ? ಯಾವ ಸಂದರ್ಭದಲ್ಲಿ ಅವರು ಮಾತನಾಡಿದರು ಎಂಬುದನ್ನು ತಾವು ನೋಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಪಶ್ಚಿಮ ಬಂಗಾಳದಲ್ಲಿ ವಿಯೆಟ್‌ನಾಮ್‌ನ ಒಂದು ಸಮ್ಮೇಳನ ನಡೆಯಿತು. ಅಲ್ಲಿ ಜ್ಯೋತಿಬಸುರವರು ಮತ್ತು ಹಿಂದಿನ ಪ್ರಧಾನಿಯಾಗಿದ್ದ ಮಾನ್ಯ ಚಂದ್ರಶೇಖರ್‌ರವರು ಇದ್ದರು. ನಾನು ದೂರದರ್ಶನದಲ್ಲಿ ನೋಡುತ್ತಿದ್ದೆ. ಪಶ್ಚಿಮ ಬಂಗಾಳದ ಮೇಯರ್‌ರವರು ಮತ್ತು ಬೇರೆ ಬೇರೆ ಕಡೆಗಳಿಂದ ಬಂದಿದ್ದವರೆಲ್ಲಾ ಇದ್ದರು. ಆಗ ಶ್ರೀಮಾನ್ ಜ್ಯೋತಿಬಸುರವರು ಯಾವ ಭಾಷೆಯಲ್ಲಿ ಮಾತನಾಡಿದರು, ಅವರೇನು ಇಂಗ್ಲೀಷನಲ್ಲಿ ಮಾತನಾಡಿದ ರೇನು? ಅವರು ಮಾತನಾಡಿದ್ದುದು ಬಂಗಾಳಿ ಭಾಷೆ, ಮೇಯರ್‌ರವರ ಭಾಷೆ ಬಂಗಾಳಿ ಭಾಷೆ.

ಶ್ರೀ ಆರ್.ವಿ. ದೇಶಪಾಂಡೆ : ಒಂದು ನಿಮಿಷ, ಕನ್ನಡದಲ್ಲಿ ಮಾತನಾಡಿದರೆ ಏನೂ ತೊಂದರೆ ಆಗುವುದಿಲ್ಲ. ಆದರೆ ಯಾವ ಉದ್ದೇಶಕ್ಕಾಗಿ ಫಾರಿನ್ ಡೆಲಿಗೇಟ್ಸ್ ಬಂದಿದ್ದರು. ಯಾವ ಉದ್ದೇಶಕ್ಕಾಗಿ ಆ ಒಂದು ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೋ, ಅಂಥ ಸಂದರ್ಭದಲ್ಲಿ ನಾವು ಅವರಿಗೆ ಸರ್ಕಾರದ ನೀತಿ ಏನು, ಸರ್ಕಾರದ ಕಾರ್ಯಕ್ರಮಗಳು ಏನು, ಸರ್ಕಾರ ಏನು ರಿಯಾಯಿತಿ ಕೊಡುತ್ತದೆ ಮತ್ತು ಏನು ಉತ್ತೇಜನಗಳನ್ನು ಕೊಡುತ್ತದೆ ಎಂಬುದನ್ನು ಕನ್ನಡದಲ್ಲಿ ನಾವು ಹೇಳಿದರೆ ಅವರಿಗೇ ಇವೆಲ್ಲವೂ ಗೊತ್ತೇ ಆಗುವುದಿಲ್ಲ. ನಾನು ಒಪ್ಪಿಕೊಳ್ಳುತ್ತೇನೆ, ಯಾವುದೇ ಒಂದು ಕನ್ನಡ ಸಂಸ್ಕೃತಿಯ ಕಾರ್ಯಕ್ರಮವಾಗಲಿ ಅಲ್ಲಿ ಶೇಕಡ 15 ರಿಂದ 20 ಜನ ಕನ್ನಡದವರಿದ್ದು ಶೇಕಡ 80ರಷ್ಟು ಬೇರೆಯವರಿದ್ದರೂ ಕೂಡ ಅಲ್ಲಿ ಕನ್ನಡದಲ್ಲಿ ಮಾತನಾಡಿದರೆ ತಪ್ಪಾಗುವುದಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ಇಂಗ್ಲೀಷನಲ್ಲಿ ಮಾತನಾಡಿದರೆ ನೀವು ಸಹಕರಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಇದೇನು ಕೊಟ್ಟು ತೆಗೆದುಕೊಳ್ಳುವ ವ್ಯವಹಾರವಲ್ಲ, ಇದು ಮದುವೆ ಮನೆ ಕೆಲಸವಲ್ಲ, ಇದು ಆಡಳಿತ ನಡೆಸತಕ್ಕಂಥವರಿಗೆ ಪ್ರಾಮಾಣಿಕತೆ ಬೇಕು. ಈಗ ವಿದೇಶದಿಂದ ಒಬ್ಬರು ಡೆಲ್ಲಿಗೆ ಬರುತ್ತಾರೆ. ನೀವು ಯಾವ ಭಾಷೆಯಲ್ಲಿ ಮಾತನಾಡುತ್ತೀರಿ? ಇಂಗ್ಲೀಷನಲ್ಲಿ ಮಾತನಾಡುತ್ತೀರೇನು? ಇಲ್ಲಿ ಇಬ್ಬರ ಮಧ್ಯೆ ಆ ಕಡೆ, ಈ ಕಡೆ ಕೂತಿರುತ್ತಾರೆ. ಆದುದರಿಂದ ಕರ್ತವ್ಯ ಶಕ್ತಿ ತಮಗೆ ಬೇಕು. ಇದರಲ್ಲಿ ನೀವು ಏನೂ ಹಿಂದುಮುಂದು ನೋಡತಕ್ಕದ್ದಲ್ಲ. ಸ್ವಾಮಿ ತಮಗೆ ಹೇಳುತ್ತೇನೆ, ನೀವು ಯಾರು ಬೇಜಾರನ್ನು ನನ್ನ ಮೇಲೆ ಮಾಡಿಕೊಳ್ಳಬಾರದು. ಇದು ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ವರದಿಯ ಪುಸ್ತಕ. ಇದು ಮೊದಲನೇ ಪುಟ. ಮೊದಲನೇ ಪುಟ ಕನ್ನಡದಲ್ಲಿರುವುದನ್ನು ಬಿಟ್ಟರೆ ಒಳಗಡೆ ಕನ್ನಡದ ಅಕ್ಷರ ಒಂದು ಕಡೆಯೂ ಇಲ್ಲ. ಎಷ್ಟು ಮೋಸ, ಡ್ಯೂಪ್ ಮಾಡುತ್ತಾರೆ ನಮ್ಮಂಥ ತಿಳಿದವರನ್ನು. ನೀವು ಬೇಕಾದರೆ ನೋಡಿ ಇದಕ್ಕಿಂತ ಮೋಸ ಬೇಕೇ? ಇದು ಕನ್ನಡದ ಆಡಳಿತ, ಕನ್ನಡದ ವ್ಯವಸ್ಥೆ, ಕನ್ನಡದ ಪರಿಸ್ಥಿತಿ. ನಮಗೇನಾದರೂ ಸರ್ವಾಧಿಕಾರ

ಕೊಟ್ಟರೆ ಈ ರೀತಿ ಮೋಸ ಮಾಡಿರುವವರನ್ನು ಕನಿಷ್ಠ ಹತ್ತು ವರ್ಷ ಜೈಲಿಗೆ ಹಾಕಿಸುತ್ತೇನೆ. ಅವರು ಯಾರೇ ಆಗಿರಲಿ ಅವರನ್ನು ಹತ್ತ ವರ್ಷ ಎಡಬಿಡದೇ ಜೈಲಿಗೆ ಕಳುಹಿಸುತ್ತೇನೆ.

ಶ್ರೀ ಎಂ.ಆರ್. ರಾಮೇಗೌಡ : ಮೊನ್ನೆ ಜಾಲಪ್ಪನವರು ಹೇಳುತ್ತಿದ್ದರು, ನಾವು ಅಲ್ಲಿ ಬೇಕಾದರೂ ಕುಳಿತುಕೊಳ್ಳಬಹುದು, ಇಲ್ಲಿ ಬೇಕಾದರೂ ಕುಳಿತುಕೊಳ್ಳಬಹುದು. ಅಂತ ನಮ್ಮದು ಪರ್ಮನೆಂಟ್ ಜಾಗ ಎಂದು... ಆದ್ದರಿಂದ ಅಧಿಕಾರ ಸಧ್ಯಕ್ಕೆ ಇಲ್ಲ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇವರ ತರಹ ಸರ್ಕಾರ ಪರ ಸಹಾಯಕ ಸದಸ್ಯನಾಗುವುದು, ಈ ರೀತಿ ನಾನು ಎಂದೂ ಹೋಗುವುದಿಲ್ಲ. ಈ ವಿಚಾರದಲ್ಲಿ ಮಾನ್ಯ ಅಧ್ಯಕ್ಷರೇ, ಅವರ ಮೇಲೆ ದಯೆ ಇಲ್ಲ ಅವರ ಸ್ನೇಹದ ಬಗ್ಗೆ ನನಗೆ ತಕರಾರು ಏನೂ ಇಲ್ಲ. ಈ ವಿಚಾರದಲ್ಲಿ ಅವರು ಎದೆ ಮುಟ್ಟಿಕೊಂಡು ಹೇಳಲಿ, ಅವರು ಆತ್ಮಪೂರ್ವಕವಾಗಿ ಹೇಳಲಿ. ನಾನು ಹೇಳುವ ಮಾತು ಇದು ಹಾಸ್ಯವಾಗಿರಬಹುದು, ಮಾಧುರ್ಯವಾಗಿರಬಹುದು, ಸಂದರ್ಭ ಬಂದಾಗ ಹಾಸ್ಯ ಇರಬೇಕಾಗುತ್ತದೆ. ಆದರೆ ಈ ವರದಿಯನ್ನು ಹರಿದುಹಾಕಬಾರದು, ಎಂದು ಇದೆ. ಆದರೆ ನಾನು ಹರಿದು ಹಾಕಲು ಸಿದ್ದನಿದ್ದೇನೆ ಇದಕ್ಕೆ ನಾಳೆ ನನ್ನ ಮೇಲೆ ಅವರು ಹಕ್ಕುಚ್ಯುತಿ ತರುವುದಕ್ಕೆ ಸಿದ್ದರಿದ್ದಾರೆ. ಇರಲಿ, ಆದರೆ ನನ್ನ ಉಸಿರು ಇರುವವರೆಗೂ ಕನ್ನಡಕ್ಕಾಗಿ ಹೋರಾಡುತ್ತೇನೆ. ನೀವು ಸಾವಿರ ಹಕ್ಕುಚ್ಯುತಿ ತಂದರೂ ಕೂಡ ಹರಿಯುವುದು ನನ್ನ ಧರ್ಮ, ಏಕೆಂದರೆ ಈ ರೀತಿಯ ಕನ್ನಡದ ವ್ಯವಸ್ಥೆಯನ್ನು ನಾನು ಪ್ರತಿಭಟನೆಯ ಮುಖಾಂತರ ಸೂಚಿಸಲಿಲ್ಲ ಎಂದು ಹೇಳಿದರೆ ಇದು ಅಕ್ಷಮ್ಯ ಅಪರಾಧ ಆಗುತ್ತದೆ. ಇಂಥ ವ್ಯವಸ್ಥೆ ಕನ್ನಡಕ್ಕಾಗಿರತಕ್ಕಂಥ ಅಗೌರವ, ಇದು ನಿಜವಾಗಿಯೂ ಕೂಡ ಯಾರಿಗೂ ಸಂತೋಷ ತರತಕ್ಕಂಥದ್ದಲ್ಲ ಎಂಬ ಮಾತನ್ನು ಹೇಳಿ ಇದನ್ನು ನಿಮ್ಮ ಬಾವಿಗೆ ಎಸೆಯುತ್ತೇನೆ.

10.40 ಎ.ಎಂ.

ಅಧ್ಯಕ್ಷರು : ನೀರಿಲ್ಲದೇ ಇರತಕ್ಕ ಭಾವಿ.

ಶ್ರೀ ವಾಟಾಳ್ ನಾಗರಾಜ್ : ಇನ್ನು ತುಮಕೂರು ಜಿಲ್ಲಾಪರಿಷತ್ತಿಗೆ ಸೇರಿದ ವರದಿ. ಕಳೆದ ಮೂರು ದಿವಸಗಳಿಂದ ಬಹಳ ಎಚ್ಚರಿಕೆಯಿಂದ ನೋಡಿದ್ದೇನೆ, ಒಂದೇ ಒಂದು ಅಕ್ಷರವೂ ಸಹ ಕನ್ನಡದಲ್ಲಿ ಇಲ್ಲ. ಇದನ್ನು ಬಾವಿಗೆ ಎಸೆಯುತ್ತೇನೆ. ಕಾರವಾರ ಅಭಿವೃದ್ಧಿ ಪ್ರಾಧಿಕಾರ, ಇದರ ವರದಿ ಕೂಡ ಇಂಗ್ಲೀಷ್‌ನಲ್ಲಿದೆ. ಇದನ್ನು ಕನ್ನಡದಲ್ಲಿ ಮಾಡುವುದಕ್ಕೆ ಆಗಲಿಲ್ಲವೇ?

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೆ ಕಾರವಾರವನ್ನು ಬಾವಿಗೆ ಹಾಕಬೇಡಿ. ಅದು ಸಮುದ್ರಕ್ಕೆ ಹತ್ತಿರವಿದೆ..........

ಶ್ರೀ ವಾಟಾಳ್ ನಾಗರಾಜ್ : ಇದು ಧಾರವಾಡ ಸ್ವಾಮಿ, ಇದು ಕೆಲವರಿಗೆ ನೋಟವಾಗಿರಬಹುದು, ಕೆಲವರಿಗೆ ಹಾಸ್ಯವಾಗಿರಬಹುದು, ನಿಮ್ಮ ರಾಜ್ಯದ ವ್ಯವಸ್ಥೆ ಹೀಗೆ ಆಗಬಾರದು, ನಾನು ನೇರವಾಗಿ ಅಧಿಕಾರಿಗಳ ಗ್ಯಾಲರಿಗೆ ಹೇಳುತ್ತೇನೆ, ನೀವು ನಿಮ್ಮ ಆತ್ಮ ಪರಿಶುದ್ಧವಾಗಿ ಈ ನಾಡಿನಗಾಳಿ ಬೆಳಕು

ತೆಗೆದುಕೊಳ್ಳತಕ್ಕಂತಹ ಜನ, ನಿಮಗೆ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ, ನಿಮ್ಮ ಆಡಳಿತದ ಬದಲಾವಣೆ ಪ್ರಾಮಾಣಿಕವಾಗಿ ಕನ್ನಡಕ್ಕೆ ಆಗಲಿ. ನನಗೆ ಯಾವುದನ್ನು ಮೆಚ್ಚಿಸಿಕೊಳ್ಳಬೇಕು ಎಂಬ ಇಚ್ಛೆಯಿಲ್ಲ.

ಶ್ರೀ ಹೆಚ್. ಶಿವಪ್ಪ : ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್, ನೇರವಾಗಿ ಮಾನ್ಯ ಸದಸ್ಯರು ಅಧಿಕಾರಿಗಳಿಗೆ ಅಡ್ರಸ್ ಮಾಡಬಹುದೇ?

ಶ್ರೀ ವಾಟಾಳ್ ನಾಗರಾಜ್ : ನಾನು ಆ ರೀತಿ ಹೇಳುವ ಉದ್ದೇಶವಿಲ್ಲ. ತಮ್ಮ ಮೂಲಕ ನೇರವಾಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು : ನನಗೆ ಅರ್ಥವಾಗಿದೆ, ನಮ್ಮಿಬ್ಬರ ನಡುವೆ ಒಡಂಬಡಿಕೆ ಇದೆ.

ಶ್ರೀ ವಾಟಾಳ್ ನಾಗರಾಜ್ : ಇದು ಧಾರವಾಡ ಜಿಲ್ಲಾಪರಿಷತ್ತಿನ ವಾರ್ಷಿಕ ವರದಿ. ಕನ್ನಡ ನಾಡಿನ ಗಂಡು ಮೆಟ್ಟಿದ ನೆಲ, ದ.ರಾ. ಬೇಂದ್ರೆ ಹುಟ್ಟಿದಂತಹ, ಬೆಳೆದಂತಹ, ಕನ್ನಡದ ಕವಿ ಪುಂಗವರು, ಪಾಟೀಲ ಪುಟ್ಟಣ್ಣನವರು ಇರತಕ್ಕಂತಹದ್ದು, "ಕನ್ನಡವೇ ಸತ್ಯ - ಕನ್ನಡವೇ ನಿತ್ಯ" ಉದಯವಾಗುತ್ತಿದ್ದ ಹಾಗೆ ತಕ್ಕಂಥ ಧಾರವಾಡ ಜಿಲ್ಲಾ ಪರಿಷತ್ತನ ಹಣೆಬರವೂ ಇಷ್ಟೆ ಸ್ವಾಮಿ.

ಅಧ್ಯಕ್ಷರು : ವಾಟಾಳ್‌ರವರೇ ಹರಿಯುವ ಕಾರ್ಯಕ್ರಮವನ್ನು ಸಾಂಕೇತಿಕವಾಗಿ ಮಾಡಿದ್ದೀರಿ ಈಗ ಎಲ್ಲಾ ಹರಿದಂತೆ ಲೆಕ್ಕ ಭಾಷಣ ಮುಂದುವರೆಸಿ.

(ಗೊಂದಲ)

ಶ್ರೀ ವೈ. ರಾಮಕೃಷ್ಣ : ಸ್ವಾಮಿ ಏತಕ್ಕೆ ಕನ್ನಡದಲ್ಲಿ ಮುದ್ರಣ ಮಾಡಿಸಿಲ್ಲ? ಅದನ್ನು ಹೇಳಬೇಕು. ಮಂತ್ರಿಗಳು ಸುಮ್ಮನೆ ನಗುತ್ತಾ ಕುಳಿತ್ತಿದ್ದಾರೆ.

ಅಧ್ಯಕ್ಷರು : ಮುಂಜುನಾಥರವರೆ ದಯಮಾಡಿ ಸ್ವಲ್ಪ ಕುಳಿತುಕೊಳ್ಳಿ

ಶ್ರೀ ಮಂಜುನಾಥ್ ಸಿ. ಕುನ್ನೂರ್: ಅಧ್ಯಕ್ಷರೆ, ಹೊಸಬರು ನಾವು ಬಹಳ ಜನ ಇದ್ದೇವೆ. ನಾವೂ ಕೂಡ ಮಾತನಾಡಬೇಕೆಂಬ ಆಸೆಯಿದೆ. ನಾವು ನೋಡುತ್ತಾ ಇದ್ದೇವೆ, ವಿಫುಲವಾದಂತಹ ಅವಕಾಶವನ್ನು ಹಿರಿಯರಿಗೆ ಕೊಟ್ಟುಬಿಡುತ್ತೀರಿ. ಹಿಂದುಗಡೆ ಕುಳಿತುಕೊಂಡಿರತಕ್ಕಂತಹ ನಮಗೆ ಇದುವರೆವಿಗೂ ನ್ಯಾಯ ಸಿಕ್ಕಿಲ್ಲ. ಹೊಸಬರಾದ ನಮಗೆ ಸದನದಲ್ಲಿ ಅನ್ಯಾಯವಾಗಿದೆ. ಈಗ ಬಜೆಟ್ ಮೇಲೆ ಪ್ರಾಶಸ್ತ್ಯ ನೀಡುತ್ತಿದ್ದೀರಿ, ಬಜೆಟ್‌ನ ಹೊರತಾದ ವಿಷಯಗಳಿಗೂ ತಾವು ಅವಕಾಶ ಮಾಡಿಕೊಡುತ್ತಿದ್ದೀರಿ. ನಮಗೆ ಕಾನೂನು ಚೌಕಟ್ಟಿನ ಅಡ್ಡಿ ತೋರಿಸುತ್ತೀರಿ. ಇದರಿಂದ ನಮಗೆ ಬಹಳ ಅನ್ಯಾಯವಾಗಿದೆ. ತಾವು ಇದಕ್ಕೆ ಅವಕಾಶ ಮಾಡಿಕೊಡಬಾರದು. ಸದನದ ಒಳಗಡೆ ಹಿರಿಯರು ಕಿರಿಯರು ಒಂದೇ. ಹಿರಿಯತನಕ್ಕೆ ಮನ್ನಣೆ ಕೊಡಬೇಕು ನಿಜ. ಅದನ್ನು ಬಿಟ್ಟು, ವಿಷಯಕ್ಕೆ ಹೊರತಾದ ವಿಷಯಗಳಿಗೆ ಅವಕಾಶ ಕೊಟ್ಟರೆ ನಾವು ಇಟ್ಟುಕೊಂಡಿರುವ ಕೊಶ್ಚನ್‌ಗಳಿಗೆ, ವಿಷಯಗಳಿಗೆ 5 ವರ್ಷದಲ್ಲಿ ಯಾವಾಗ

ಅವಕಾಶ ಸಿಗುತ್ತದೆ? ಅದಾದರೂ ನಿಗದಿಯಾದರೆ ಇನ್ನು ಎರಡು ವರ್ಷ ಬಿಟ್ಟು ಕೇಳುತ್ತೇವೆ. ನಮಗೆ ಟ್ರೈನಿಂಗ್ ಬೇರೆ ಕೊಟ್ಟಿದ್ದೀರಿ.

ಅಧ್ಯಕ್ಷರು : ತಮ್ಮ ಮನಸ್ಸಿನಲ್ಲಿ ಏನು ಭಾವನೆ ಬಂದಿದೆ, ವಾಟಾಳ್ ನಾಗರಾಜ್‌ರವರು ಹೀಗೆ ಮಾತನಾಡಬೇಕು, ಬಜೆಟ್ ಹೊರತಾದ ವಿಷಯಗಳನ್ನು ಮಾತನಾಡುತ್ತಿದ್ದಾರೆ ಎನ್ನುವುದು. ಅದು ತಪ್ಪು ಕಲ್ಪನೆ. ಸಾಮಾನ್ಯ ಚರ್ಚೆ ನಡೆಯುವಾಗ ಆಡಳಿತಕ್ಕೆ ಸಂಬಂಧಿಸಿದಂತೆ ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡತಕ್ಕಂತಹ ಅವಕಾಶ ಸದಸ್ಯರುಗಳಿಗೆ ಇದೆ. ನೀವು ಏನು ಅಬ್ಜೆಕ್ಷನ್ ರೈಸ್ ಮಾಡಿದ್ದೀರಿ ಅದನ್ನು ನಿನ್ನೆಯೇ ಮಾಡಬೇಕಾಗಿತ್ತು. ನಿನ್ನೆ ಮಾಡಿದ್ದರೆ ನನಗೆ ಅನುಕೂಲವಾಗುತ್ತಿತ್ತು. ನಿನ್ನೆ ಯಾರೂ ನೀವು ಮಾಡಲಿಲ್ಲ ಅದರಿಂದ ನನಗೆ ತೊಂದರೆಯಾಯಿತು.

ಶ್ರೀ ವೈ. ರಾಮಕೃಷ್ಣ : ಇದು ಸಂತೋಷಕರವಾದ ಘಟನೆಯಲ್ಲ. ಇದು ವಿಷಾದಕರವಾದ ಘಟನೆ. ಕನ್ನಡ ನಾಡಿನಲ್ಲಿ, ಕನ್ನಡ ಬೆಳೆಯಬೇಕು, ಕನ್ನಡದಲ್ಲಿ ಮಾತನಾಡಬೇಕು, ಈ ಒಂದು ಸತ್ಸಂಪ್ರದಾಯವನ್ನು ಬೆಳೆಸಬೇಕೆಂದು ತೀರ್ಮಾನ ಮಾಡಿದ್ದೇವೆ. ಅದಕ್ಕೋಸ್ಕರ ಪ್ರತ್ಯೇಕವಾದ ಇಲಾಖೆ, ಪ್ರತ್ಯೇಕವಾದ ಮಂತ್ರಿಗಳು ಇದ್ದಾರೆ. ಇವತ್ತು ಇಂತಹ ಘಟನೆ ನಡೆಯುತ್ತಿದ್ದರೂ ಕೂಡ ಇಂಗ್ಲೀಷನಲ್ಲಿ ಏತಕ್ಕೆ ಬಂತು? ಕನ್ನಡದಲ್ಲಿ ಏತಕ್ಕೆ ಮಾಡುವುದಕ್ಕೆ ಆಗಲಿಲ್ಲ ಎನ್ನುವುದಕ್ಕೆ ಸಮಜಾಯಿಷಿಯನ್ನು ಸರ್ಕಾರದವರು ಕೊಡಬೇಕಲ್ಲ? ಈಗ ಮಾನ್ಯ ಸದಸ್ಯರು ಎಷ್ಟು ಪುಸ್ತಕಗಳನ್ನು ಹರಿದರು? ನಾನು ತಮ್ಮ ಮೂಲಕ ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಇನ್ನು ಮುಂದೆ ಇದಕ್ಕೆ ಅವಕಾಶ ಮಾಡಿ ಕೊಡಬಾರದು, ಇದಕ್ಕೆ ಅವರು ವಿವರಣೆ ಕೊಡಬೇಕೆಂದು ಕೇಳುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ತಾವು ನನಗೆ ಕೊಟ್ಟಿರತಕ್ಕಂತಹ ಸಮಯವನ್ನು ಸದುಪಯೋಗಪಡಿಸಿಕೊಳ್ಳಬೇಕೆಂಬುದು ನನ್ನ ಪ್ರಾಮಾಣಿಕ ಚಿಂತನೆ. ನನ್ನ ಬೆಳವಣಿಗೆ ಈ ನಾಡಿನ ಬೆಳವಣಿಗೆ, ನಾಡಿನ ಅಭಿವೃದ್ಧಿ, ಕರ್ನಾಟಕದ ಚಿಂತನೆ, 1960 ಸೆಪ್ಟೆಂಬರ್ 7ನೇ ತಾರೀಖಿನಂದು ನನ್ನ ಪರಿಚಯ ತಮಗೆ ಗೊತ್ತಿರುವಂತೆ ತಿಂಗಳುಗಟ್ಟಲೆ ಲಾಕಪ್‌ನಲ್ಲಿ ಹಾಕಿದ್ದರು. 1960ನೇ ಇಸವಿಯಲ್ಲಿ ಕನ್ನಡದ ಬಗ್ಗೆ ಮೆರವಣಿಗೆ ಮಾಡಿದಾಗ ನನ್ನನ್ನು ಬೂಟ್ ಕಾಲಿನಲ್ಲಿ ಹೊಡೆದರು. ನಾನೇನು ಇಲ್ಲಿ ಮಂತ್ರಿಯಾಗಬೇಕು ಎನ್ನುವ ವಾದವಲ್ಲ. ನನ್ನ ಹೃದಯದಲ್ಲಿ ಇರತಕ್ಕಂತಹ ಪ್ರಾಮಾಣಿಕ ನೋವಿನಿಂದ ಇದನ್ನು ಹೇಳುತ್ತಿದ್ದೇನೆ; ನಾನು ಎಲ್ಲೇ ಹೋಗಲಿ, ಕನ್ನಡ ಬಿಟ್ಟು ಬೇರೆನು ಮಾತನಾಡತಕ್ಕಂಥವನಲ್ಲ. ನಮ್ಮ ವಿಷಯ ಸಮಿತಿಯು ದೆಹಲಿಗೆ ಅಧ್ಯಕ್ಷರ ಜೊತೆ ಹೋದಾಗ, ಲೋಕಸಭೆಯ ಸ್ಪೀಕರ್‌ರವರು ಹೇಗಾದರೂ ಮಾಡಿ ಇಂಗ್ಲೀಷ್‌ನಲ್ಲಿ ನನ್ನ ಜೊತೆ ಮಾತನಾಡಿಸಬೇಕೆಂದು ಆದರೆ, ನಾನು ಕನ್ನಡದಲ್ಲೇ ಮಾತನಾಡಿದೆ. ನಮ್ಮ ಅಧ್ಯಕ್ಷರ ಜೊತೆಯಲ್ಲಿ, ನಮ್ಮ ಕಾರ್ಯದರ್ಶಿಯವರು ಅದನ್ನು ಕನ್ನಡಕ್ಕೆ ದರ್ಜುಮೆ ಮಾಡಿದರು. ನನ್ನ ವ್ಯವಸ್ಥೆಯಲ್ಲಿ ನನ್ನದೇ ಆದ ಪ್ರಾಮಾಣಿಕ ಚಿಂತನೆ. ದೇಶಪಾಂಡೆಯವರೆ ತಮಗೆ ಗೊತ್ತಿದೆ, ಪ್ರಧಾನಮಂತ್ರಿಗಳ ಹತ್ತಿರ ಹೋದಾಗ ಕನ್ನಡದಲ್ಲೇ ಮಾತನಾಡಿದೆ. ಅವರಿಗೆ ಅರ್ಥವಾಯಿತೋ ಬಿಟ್ಟಿತೋ ಅದು ಬೇರೆ ಪ್ರಶ್ನೆ. ಕನ್ನಡದಲ್ಲಿ ಮಾತನಾಡಿದದ್ದಕ್ಕೆ ದಿವಂಗತ ಶ್ರೀಮತಿ

ಇಂದಿರಾಗಾಂಧಿಯವರನ್ನು ನೋಡಲಿಕ್ಕೆ ಹೋದಾಗ ಮಹಾಜನ ವರದಿ ವಿಚಾರದಲ್ಲಿ, ನಾನು ಕನ್ನಡದಲ್ಲೇ ಮಾತನಾಡಿದೆ. ತಕ್ಷಣ ಸರೋಜಿನಿ ಮಹಿಷಿಯವರು ಕನ್ನಡಕ್ಕೆ ಅದನ್ನು ತರ್ಜುಮೆ ಮಾಡಿದರು. ನನ್ನ ಆದಂಥ ತತ್ವ, ಸಿದ್ಧಾಂತ ನೀತಿಗಳಿವೆ. ಕಣ್ಣು ಮುಂದೆ ನೋಡುತ್ತಿದ್ದೇವೆ, ಕರ್ನಾಟಕ ರಾಜ್ಯ ಬುರುಡೆ ಆಗಬಾರದು, ಜನತೆಗೆ, ಕೊಡತಕ್ಕಂತಹ ಭರವಸೆ ಪೊಳ್ಳು ಭರವಸೆಯಾಗಬಾರದು. ಈ ರಾಜ್ಯದ ಆಡಳಿತ ಸಮಗ್ರವಾಗಿ ಕನ್ನಡದಲ್ಲೇ ಆಗಬೇಕು, ಕನ್ನಡದಲ್ಲೇ ನಡೆಯಬೇಕು. ಕರ್ನಾಟಕದ ಬೆಳವಣಿಗೆ ಬಗ್ಗೆ ಚಿಂತನೆ ಮಾಡತಕ್ಕಂಥವರು, ಅವರ ಭಾಷೆಯಲ್ಲೇ ಚಿಂತನೆ ಮಾಡಬೇಕು. ಅದನ್ನು ಪ್ರತಿಭಟನೆ ಮಾಡಲಿಕ್ಕೆ ಇದು ಒಂದು ಒಳ್ಳೆಯ ಅವಕಾಶ ಸ್ವಾಮಿ, ಉತ್ತರ ಕನ್ನಡದವರಿಗೂ ಇದೇ ಪರಿಸ್ಥಿತಿ ಎಂದು ಹೇಳುತ್ತೇನೆ. ಇದರಲ್ಲಿ ಮಡಿವಂತಿಕೆ ಏನು ಸ್ವಾಮಿ? ಇದು ನನಗೆ ಅರ್ಥವಾಗುವುದಿಲ್ಲ. ಮಡಿವಂತಿಕೆ ಎಂದರೆ ಹೇಗಿರಬೇಕು? ಸ್ವಾಮಿ ಹಾಗೆ ಹೀಗೆ ಅಂತ ನಾವು ಜೋಗುಳ ಹಾಡಬೇಕು. ಇದರಲ್ಲಿ ಮಡಿವಂತಿಕೆ ಏಕೆ? ಪ್ರಾಮಾಣಿಕತೆಯನ್ನೇ ಹೇಳಲಿಕ್ಕೆ ಮಡಿವಂತಿಕೆ ಏನೂ ಇಲ್ಲ. ಮಡಿವಂತಿಕೆ ಬಗ್ಗೆ ನಾನು ಏನು ಬೇಕಾಗಿತ್ತು ಎಂಬುದನ್ನು ಪ್ರಾಮಾಣಿಕವಾಗಿ ನಾನು ಹೇಳುತ್ತೇನೆಂಬುದು ತಮಗೆ ಗೊತ್ತಿದೆ. ಆದ್ದರಿಂದ ತಾವು ಬೇಜಾರು ಮಾಡಿಕೊಳ್ಳಬಾರದು. ತಮಗೆ ಗೊತ್ತಿರಬಹುದು, ನಮ್ಮ ಹಿಂದಿನ ಸಭೆಯಲ್ಲಿ ಆಡಳಿತ ಭಾಷೆ ಕನ್ನಡವೆಂದು ಹೇಳಿದ್ದಿರಿ, ಮಂತ್ರಿಗಳ ಕೊಠಡಿಗಳ ಮುಂದೆ ಇಂಗ್ಲೀಷನಲ್ಲಿ ನಾಮಫಲಕ ಇದೆ ಅಂತ ಹೇಳಿ ನಾನು ಟಾರು ಬಳಿದೆ ಆಗ ಯಾರಾದರೂ ಕನ್ನಡದ ಬಗ್ಗೆ ಅಭಿಮಾನ ಇರತಕ್ಕಂಥಹ ಶಾಸಕರು ನನ್ನ ಜೊತೆಗೆ ಬನ್ನಿ ಅಂತ ಹೇಳಿದೆ. ತಾವು ನೆನೆಸಿಕೊಳ್ಳಬೇಕು. ಬಾಬಗೌಡರು ಮತ್ತು ಶ್ರೀಮಾನ್ ನಂಜುಂಡಸ್ವಾಮಿಯವರು ತಕ್ಷಣ ಎದ್ದುಬಂದರು. ನಾವೆಲ್ಲ ತಕ್ಷಣ ಹೊರಗೆ ಹೋಗಿದ್ದು ಪತ್ರಿಕೆಗಳಲ್ಲಿ ಬಂದಿತ್ತು. ಅಂದರೆ ಟಾರು ಬಳಿದಿದ್ದು, ಟಾರು ಡಬ್ಬ ತಂದಿದ್ದು ನಿಜ. ಅದು ನಮ್ಮ ಸಂಸ್ಕೃತಿಯಲ್ಲಿ, ವ್ಯವಸ್ಥೆ, ಅಭಿಮಾನದ ವಿಚಾರವಾಗುತ್ತದೆ. ನಾವು ಅದು ಸರಿಯಿಲ್ಲವೆಂದು ಹೇಳತಕ್ಕ ವಾದ ತಮ್ಮ ಮನಸ್ಸಿಗೆ ನೋವು ಆಗುವುದಿಲ್ಲವೆಂದು ಅಂದುಕೊಂಡಿದ್ದೇನೆ ಇದರಲ್ಲಿ ಕೆಲವು ದೋಷ ಇದೆ. ಕೊನೆಯದಾಗಿ ನನ್ನ ಕೈಯಲ್ಲಿರತಕ್ಕದ್ದು ಉತ್ತರ ಕನ್ನಡ ಜಿಲ್ಲೆಯದು. ಇದರ ವ್ಯವಸ್ಥೆಯೂ ಅಷ್ಟೆ (ಕೆಲವು ಕಾಗದಗಳನ್ನು ಹರಿದು ಹಾಕಿದರು) ಇನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಬಗ್ಗೆ ಹೇಳುವುದಾದರೆ ಒಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ರಚನೆ ಆಗಿದೆ. ಈ ಸಭೆಯಲ್ಲಿ ನಾವು ಪ್ರಾಧಿಕಾರಕ್ಕೆ ಹೆಚ್ಚಿನ ಅಧಿಕಾರ ಕೊಡಬೇಕೆಂದು ಹೇಳಿ ತಿದ್ದುಪಡಿ, ಚರ್ಚೆ, ಮಸೂದೆ ಪಾಸ್ ಮಾಡಿದ್ದೇವೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಒಂದು ವ್ಯವಸ್ಥಿತವಾದ ಆಡಳಿತ ಭಾಷೆಯನ್ನು ಜಾರಿಗೆತರುವಲ್ಲಿ ಆ ಸಂಸ್ಥೆಗೆ ಹೆಚ್ಚಿನ ಅಧಿಕಾರ, ಬೆಂಬಲ ಇದೆ. ಇವತ್ತು ಏನಾಗಿದೆ, ಮೂರನೆಯ ಮಹಡಿಯಲ್ಲಿ ಕನ್ನಡದ ಅಭಿವೃದ್ಧಿ ಪ್ರಾಧಿಕಾರದ ಕೊಠಡಿಗೆ ಬೀಗ ಹಾಕಿದ್ದಾರೆ. ಅದರಲ್ಲಿ ಇದ್ದಂತಹ ಅಧ್ಯಕ್ಷರನ್ನು ಹೊರಗಟ್ಟಿದ್ದಾರೆ. ಅಲ್ಲಿ ಕೆಲಸ ಮಾಡುತ್ತಿದ್ದವರನ್ನು ಪೋಲೀಸ್‌ನವರಿಗೆ ಕೊಡುತ್ತೇವೆಂದು ಹೆದರಿಸಿದ್ದಾರೆ. ಇದು ನನಗೆ ಬಹಳ ನೋವು ಆಯಿತು. ಮುಂದಿನ ಅಧ್ಯಕ್ಷರು ಯಾರೇಬರಲಿ, ಇದರಲ್ಲಿ ರಾಜಕಾರಣ ಬೇಡ. ಸಂಬಂಧಪಟ್ಟಂತಹ ಸಾಹಿತ್ಯ, ಸಂಸ್ಕೃತಿ, ಕನ್ನಡಕ್ಕೆ ಸಂಬಂಧಪಟ್ಟ ಅಕಾಡೆಮಿ ಆಗಲಿ, ಕನ್ನಡ ಪ್ರಾಧಿಕಾರವಾಗಲಿ ಅವು ನಿಮ್ಮ ರಾಜಕಾರಣಕ್ಕೆ ಬರುವುದಿಲ್ಲ. ಗೃಹ ಮಂಡಳಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಸಾರಿಗೆ ಸಂಸ್ಥೆ ಇಂತಹ ಅಧ್ಯಕ್ಷರುಗಳನ್ನು ಬೇಕಾದರೆ ರಾಜೀನಾಮೆ

ಕೊಡಿ ಎಂದು ಕೇಳಿ. ಸಾಹಿತ್ಯ ಕ್ಷೇತ್ರದಲ್ಲಿ ದುಡಿದಂತಹ ಅನೇಕ ಹಿರಿಯರು, ದಿಗ್ಗಜರು ಆ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ನೀವು ಏಕ್‌ದಂ ಒಂದೇಸಾರಿ ಎಲ್ಲಾರಿಗೂ ಒಂದೇ ಮಂತ್ರ ಅಂತ ಹೇಳಿ ರಾಜೀನಾಮೆ ಕೊಡಿ ಎಂದು ಕೇಳಿದ್ದರಿಂದ ಅವರೂ ರಾಜೀನಾಮೆ ಕೊಟ್ಟರು. ಎಲ್ಲಾ ಅಕಾಡೆಮಿಗಳಲ್ಲಿ ಕೆಲಸ ನಿಂತಿದೆ, ಪರಿಣಾಮಕಾರಿಯಾದ ಕೆಲಸ ನಡೆಯುತ್ತಾ ಇಲ್ಲ. ಸಂಪೂರ್ಣ ಮುಚ್ಚಿವೆ. ಈ ಮೂರನೆಯ ಮಹಡಿಯಲ್ಲಿರತಕ್ಕಂಥ ಪ್ರಾಧಿಕಾರದ ಬಗ್ಗೆ ನಾನು ನೇರವಾಗಿ ಸರ್ಕಾರಕ್ಕೆ ಕೇಳುತ್ತಾ ಇದ್ದೇನೆ ನಿಮಗೆ ಇದರ ಅಧ್ಯಕ್ಷರು ಏನು ಮಾಡಿದ್ದರು, ಆ ಅಧ್ಯಕ್ಷರು ಬೇಡ. ಮತ್ತೊಬ್ಬ ಅಧ್ಯಕ್ಷರನ್ನು ನೇಮಕಮಾಡಿಕೊಳ್ಳಿ. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕೊಠಡಿಗೆ ಬೀಗ ಹಾಕಿದ್ದಾರೆ ನಮಗೆ ನೋವಾಗುತ್ತದೆ, ನಾನು ಮೂರನೆಯ ಮಹಡಿಗೆ ಹೋಗಿ ನೋಡಿದಾಗ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕೊಠಡಿಗೆ ಬೀಗ ಹಾಕಿದೆ. ಅಲ್ಲಿದ್ದಂಥ ಕೆಲಸಗಾರರುಗಳನ್ನೆಲ್ಲ ಹೊರಹಾಕಿದ್ದಾರೆ. ನನಗನ್ನಿಸುತ್ತದೆ ನಿಮ್ಮ ನೀತಿಯೇನು? ಇದರ ವ್ಯವಸ್ಥೆಯೇನು? ಇದು ಅಲ್ಲ. ಅಭಿವೃದ್ಧಿ ಪ್ರಾಧಿಕಾರಗಳಿಗೆ ಅಧ್ಯಕ್ಷರುಗಳನ್ನು ಮಾಡುವುದು ರಾಜಕಾರಣವಲ್ಲ. ಡಾ. ಸಿದ್ದಲಿಂಗಯ್ಯನವರನ್ನು ಬೇಕಾದರೆ ಮಾಡಿ ಅವರ ಬಗ್ಗೆ ನನಗೆ ಬಹಳ ಗೌರವವಿದೆ. ಮತ್ತು ಅವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಿ ಬಹಳ ಸಂತೋಷಪಡುತ್ತೇನೆ. ನಾನು ಅದರ ಬಗ್ಗೆ ಚಿಂತನೆಯಿಲ್ಲ, ಸಂತೋಷ ಪಡೋಣ. ತಾವು ಈಗ ಮಾಡತಕ್ಕಂತಹ ಐದು ನಾಮಕರಣಗಳು ಏನಿವೆ ಅವು ರಾಜಕೀಯ ನಾಮಕರಣ ಆಗಬಾರದು. ಒಂದು ಶಕ್ತಿ ಇರತಕ್ಕ, ಅಯಾಯಾ ಕ್ಷೇತ್ರದಲ್ಲಿ ದುಡಿದಿರತಕ್ಕ, ದುಡಿಯುತ್ತಿರತಕ್ಕ ವ್ಯಕ್ತಿಗಳನ್ನು ನಾಮಕರಣ ಮಾಡಬೇಕು. ಈ ಸದನವನ್ನು ಕಟ್ಟಿಸಿದಂಥ ಮಹಾನ್ ವ್ಯಕ್ತಿ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ನಾಮಕರಣ ಎಂಬುದಕ್ಕೆ ಶಕ್ತಿಕೊಟ್ಟರು. ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ನಾಮಕರಣ ಎಂಬುದಕ್ಕೆ ಶಕ್ತಿಕೊಟ್ಟರು. ಶ್ರೀಮಾನ್ ಟಿ. ಚೌಡಯ್ಯನವರು, ಶ್ರೀ ಗುಬ್ಬಿ ವೀರಣ್ಣನವರು ಇನ್ನು ಎಂಥೆಂಥವರನ್ನೇ ನಾಮಕರಣ ಮಾಡಿದ್ದರು. ಶ್ರೀಮಾನ್ ಆರ್. ಗುಂಡೂರಾಯರನ್ನೇ ತಾವು ನೆನೆಸಿಕೊಳ್ಳಬೇಕು. ಅವರು ಶ್ರೀಮತಿ ಬಿ. ಜಯಮ್ಮನವರನ್ನು ನಾಮಕರಣ ಮಾಡಿದ್ದರು. ನಿಮಗೆ ಮೂರು ಜನ, ಐದು ಜನ ನಾಮಕರಣ ಸದಸ್ಯರು ಬೇಕು. ಅವರು ರಾಜಕಾರಣಕ್ಕೆ ನೇಮಕ ಆಗಬಾರದು. ತಾವು ಸಾಹಿತ್ಯ ಕ್ಷೇತ್ರ ಸಂಗೀತ, ಕವಿಗಳು, ವಿಜ್ಞಾನಿಗಳು ಕ್ರೀಡಾಪಟ್ಟುಗಳು ಹೀಗೆ ಯಾರನ್ನಬೇಕಾದರೂ ತಾವು ಮಾಡಬೇಕು. ಆದರೆ ಅದನ್ನು ಬಿಟ್ಟು ರಾಜಕಾರಣ ಮಾಡತಕ್ಕ ವ್ಯವಸ್ಥೆ ಸರಿಯಿಲ್ಲ. ಬೆಂಗಳೂರಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ನಿಮ್ಮ ಸರ್ಕಾರ ಬೀಗವನ್ನು ಹಾಕಿ ಇಡೀ ಸಮಗ್ರ ಕನ್ನಡಿಗರಿಗೆ ಅಪಮಾನವನ್ನು ಮಾಡಿದ್ದೀರಿ. ಸಮಗ್ರ ಕನ್ನಡಿಗರು ತಲೆ ತಗ್ಗಿಸುವ ರೀತಿಯಲ್ಲಿದೆ. ಈಗ ಇದ್ದಂತಹ ಅಧ್ಯಕ್ಷರು ಅವರು ಏನೇ ಇರಲಿ, ನನಗೆ ಅವರ ಬಗ್ಗೆ ಬಹಳ ಗೌರವ ಇದೆ, ಜಿ. ನಾರಾಯಣರವರು ಆಗಲಿ, ಹಿಂದೆ ಇದ್ದಂತಹ ಪಾಟೀಲ್ ಪುಟ್ಟಪ್ಪನವರಾಗಲಿ, ಅವರೆಲ್ಲ ಕೆಲಸ ಮಾಡಿದಂತಹ ಜನ. ಈ ಅಭಿವೃದ್ಧಿ ಪ್ರಾಧಿಕಾರವನ್ನು ಮುಚ್ಚಿಸಿ ಅವರಿಗೂ ಮನೆಗೂ ಹೋಗಿ ಅಂತ ಹೇಳಿದರೆ ಅದು ಎಷ್ಟು ಸಮಂಜಸ? ತಾವು ಈಗ ಆ ಬೀಗವನ್ನು ತೆಗಿಸಿ ಹಿಂದೆ ಇದ್ದ ಅಧ್ಯಕ್ಷರನ್ನು ಅಲ್ಲಿ ಕೂಡಿಸುವುದು ನಿಮಗೆ ಸೇರಿದ್ದುದು. ನೀವು ಜಿ. ನಾರಾಯಣರವರನ್ನು ಕರೆದು ಕೂಡಿಸಿ ಅಥವಾ ಬೇರೆ ಅಧ್ಯಕ್ಷರನ್ನು ಬೇಕಾದರೆ ಮಾಡಿ. ಅದು ನಿಮಗೆ ಬಿಟ್ಟದ್ದುದ್ದು. ಅವರು ಬೇಡ ಅಂದ ತಕ್ಷಣ ಇನ್ನೊಬ್ಬರನ್ನು ಕರೆದುಕೊಂಡು ಬಂದು ಅಲ್ಲಿ

ಕೊಡಿಸಿ ಆಗ ಅದರಿಂದ ನಿಮಗೆ ಗೌರವ ಬರುತ್ತದೆ. ಇವತ್ತೇ ತಾವು ಸರ್ಕಾರಕ್ಕೆ ತಿಳಿಸಿ, ಇವತ್ತೇ ಇದನ್ನು ಮಾಡಬೇಕು. ನೀವು ಮಾಡಲಿಲ್ಲ ಅಂತ ಹೇಳಿದರೆ ತಪ್ಪಾಗುತ್ತದೆ. ನಮ್ಮ ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರು ಇವತ್ತು ಇಲ್ಲ ಅವರಿಗೆ ಎಲ್ಲಾ ಕಡೆಯ ಪ್ರಾಮಾಣಿಕ ಚಿಂತನೆ ಇದೆ. ಕನ್ನಡದ ಬಗ್ಗೆ ಒಲವು ಇದೆ. ಇದಕ್ಕಾಗಿ ನಾನು ಅವರನ್ನೂ ಮೆಚ್ಚುತ್ತೇನೆ ಆದರೆ ಅವರು ಮಾಡಿಕೊಂಡಿರುವ ಪರಿಸ್ಥಿತಿ ಅಂದರೆ ಅಕಾಡೆಮಿಗಳನ್ನು ಮುಚ್ಚುಬಿಟ್ಟರು, ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ಮುಚ್ಚಿಬಿಟ್ಟರು, ಈ ರೀತಿ ಮಾಡುತ್ತಾ ಹೋದರೆ ಇದು ಒಳ್ಳೆಯದಲ್ಲ. ನನಗನ್ನಿಸುತ್ತದೆ ನೀವು ಕನ್ನಡದ ಗೋಮಾಳವನ್ನು ಮುರಿದಿದ್ದೀರಿ. ಗೋಮಾಳೆ ಎಂದರೆ ಬಹಳ ಜನರಿಗೆ ಗೊತ್ತಿಲ್ಲ. ನನಗೆ ನಿಮಗೆ ಗೊತ್ತು. ಇದಕ್ಕೆ ಒರಟು ಭಾಷೆಯೇ ಸರಿ ಹಿಸುಕುವುದು ಎಂಬ ಪದ ಸರಿಯಲ್ಲ, ಮುರಿದಿದ್ದಾರೆ. ಈ ಪರಿಸ್ಥಿತಿ ಕನ್ನಡಕ್ಕೆ ಬರಬಾರದು, ನಿನ್ನೆ ತಾನೇ ಹಾ.ಮಾ. ನಾಯಕರು ಬಹಳ ದುಃಖದಿಂದ ಹೇಳಿದ್ದಾರೆ ಕನ್ನಡಕ್ಕೆ ಯಾರಿಂದಲೂ ಗೌರವವಿಲ್ಲ, ಕನ್ನಡ ಆಡಳಿತ ಭಾಷೆ ಇಲ್ಲ, ಇದೆಲ್ಲ ಬರಿ ಬುರುಡೆ ಅಂತ ಹೇಳಿದ್ದಾರೆ. ಇದನ್ನು ತಪ್ಪಿಸಿ ಬೇರೆ ದಿಕ್ಕಿನಲ್ಲಿ ಹೋಗಬೇಕಾದರೆ ಇದರ ಬಗ್ಗೆ ಪ್ರಮಾಣಿಕ ಚಿಂತನೆ ಆಗಬೇಕಾದುದು ಆದ್ಯ ಕರ್ತವ್ಯ ಎನ್ನತಕ್ಕ ಮಾತನ್ನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ ಸ್ವಾಮಿ, ಗಡಿನಾಡು ಅಭಿವೃದ್ಧಿಗೆ ತಮ್ಮದು 10 ಕೋಟಿ ರೂಪಾಯಿ ಬರುತ್ತದೆ, ಈ ಗಡಿನಾಡು ಅಭಿವೃದ್ಧಿಗೆ ಕಲ್ಪನೆ, ಚಿಂತನೆ ಇದು ಬರಬೇಕಾದರೆ ನಾನೇ ಕಾರಣ. ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಈ ರಾಜ್ಯದ ಮುಖ್ಯಮಂತ್ರಿಯಾದ ಬೆಳಿಗ್ಗೆಯೇ ನಾನು ಅವರನ್ನು ಭೇಟಿ ಮಾಡಿ, ಅವರಿಗೆ ತಿಳಿಸಿದೆ. ಅವರು ತಕ್ಷಣ ಇದನ್ನು ಅರಿತುಕೊಂಡು ಪ್ರೆಸ್‌ಕ್ಲಬ್‌ನಲ್ಲಿ ಪತ್ರಿಕಾ ಸಂದರ್ಶನವಿದ್ದಾಗ ಗಡಿನಾಡ ಅಭಿವೃದ್ಧಿಗೋಸ್ಕರ 5 ಕೋಟಿ ರೂಪಾಯಿಗಳನ್ನು ಈ ವರ್ಷದಿಂದ ಇಡುತ್ತೇವೆ ಎಂದರು. ಈ ಗಡಿ ಅಭಿವೃದ್ಧಿ ಬಗ್ಗೆ ಹೇಳುವುದಾದರೆ ಇವತ್ತು ಎಲ್ಲಾ ಕಡೆ ಅಭಿವೃದ್ಧಿ ಕಾರ್ಯ ಕುಂಠಿತವಾಗಿದೆ. ಬರೀ ಮನೆ, ರಸ್ತೆ, ದೀಪ, ಕೊಡುವುದಲ್ಲ, ಇದರ ಜೊತೆಗೆ ಭಾಷೆಯ ಬೆಳವಣಿಗೆ, ಕನ್ನಡ ಸಂಸ್ಕೃತಿಯ ಬೆಳವಣಿಗೆ, ಕಲೆ, ಸಾಹಿತ್ಯ ಚಟುವಟಿಕೆ, ಇವುಗಳ ಬೆಳವಣಿಗೆಗೆ ನೀವು ಪರಿಣಾಮಕಾರಿಯಾದ ಗಮನ ಕೊಡಬೇಕಾಗಿರುವುದರಿಂದ ಮಾನ್ಯ ಹಣಕಾಸಿನ ಸಚಿವರನ್ನು ನೇರವಾಗಿ ಪ್ರಾರ್ಥನೆ ಮಾಡುತ್ತೇನೆ. ದಯಮಾಡಿ ನೀವು ಈ ಗಡಿನಾಡು ಅಭಿವೃದ್ಧಿಗೆ ಧಾರಾಳವಾಗಿ ನೂರು ಕೋಟಿ ರೂಪಾಯಿಗಳನ್ನು ಕೊಡಿ ಎಂದು ಕೇಳುತ್ತೇನೆ. ಈಗಿರತಕ್ಕಂಥದ್ದು ಕೇವಲ 10 ರಿಂದ 15 ಕೋಟಿ ರೂ.ಗಳು ನಿಮ್ಮ ಕಾಲದಲ್ಲಿ ನೀವು ಗಡಿನಾಡು ಅಭಿವೃದ್ಧಿಗೆ ಬರೀ ರಸ್ತೆ, ಮನೆಗಳಲ್ಲ, ಅಲ್ಲಿನ ಬೇರೆ ಚಟುವಟಿಕೆಗಳಾದ ಕನ್ನಡ ಸಂಸ್ಕೃತಿ, ಸಾಹಿತ್ಯ ಕರೆಯ ಚಟುವಟಿಕೆಗಾಗಿ ತಾವು ಹೆಚ್ಚಿನ ಹಣವನ್ನು ಮುಡುಪಾಗಿ ಇಡಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ, ಹೊರನಾಡ ಕನ್ನಡಿಗರು ಯಾರು? ಕಾಸರಗೋಡು, ಅಕ್ಕಲಕೋಟೆ, ಅದವಾನಿ, ಸೊಲ್ಲಾಪುರ, ಜತ್ತ ಈ ತರಹ ಹೊರನಾಡ ಕನ್ನಡಿಗರು ಎಷ್ಟು ಇದ್ದಾರೆ ಅವರನ್ನು ನಾವು ಕೇಳುವುದೇ ಇಲ್ಲ. ಅವರ ಬಗ್ಗೆ ನಾವು ಗಮನ ಹರಿಸಿಲ್ಲ. ನನಗನ್ನಿಸುತ್ತದೆ ಕನಿಷ್ಟ ಈ ವರ್ಷದಲ್ಲಾದರೂ ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಹಣಕಾಸಿನ ಸಚಿವರನ್ನು ಕೈಮುಗಿದು ಪ್ರಾರ್ಥನೆ ಮಾಡುತ್ತಾ ಇದ್ದೇನೆ. ಹೊರನಾಡ ಕನ್ನಡಿಗರ ಸಾಹಿತ್ಯ ಸಂಸ್ಕೃತಿಯ ಬೆಳವಣಿಗೆಗಾಗಿ ಕನಿಷ್ಟ 5 ಕೋಟಿ ರೂಪಾಯಿಗಳನ್ನಾದರೂ ಇಡಿ ಅವರ ಸಾಹಿತ್ಯ ಬೆಳವಣಿಗೆ ಚಿಂತನೆ

ಇದಕ್ಕೆ ಒಂದು ಸಮೀಕ್ಷೆ ನಡೆಯಲಿ ಹೊರನಾಡ ಕನ್ನಡಿಗರ ಸಮಗ್ರ ಸಮೀಕ್ಷೆ ನಡೆಯತಕ್ಕಂತ ವ್ಯವಸ್ಥೆ ಆಗಲಿ. ಆದ್ದರಿಂದ ಅಧ್ಯಕ್ಷರೇ, ಕನಿಷ್ಟ 5 ಕೋಟಿ ರೂಪಾಯಿಗಳನ್ನು ಇಡಬೇಕೆಂದು ಹೇಳಿ ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಮತ್ತು ಸರ್ಕಾರದ ಭಾಷಾ ನೀತಿ ಸ್ಪಷ್ಟವಾಗಿರಬೇಕು. ಕನ್ನಡದಲ್ಲಿ ಆಡಳಿತ ಎಂದು ನಿರ್ಧಾರ ಆದಮೇಲೆ ಕನ್ನಡ ಮಾಧ್ಯಮದಲ್ಲಿ ಯಾರು ಪರೀಕ್ಷೆಯಲ್ಲಿ ಮುಂದು ಬರುತ್ತಾರೆ, ಪರೀಕ್ಷೆಯನ್ನು ತೆಗೆದುಕೊಂಡಿರುತ್ತಾರೆ, ಅವರಿಗೆ ಉದ್ಯೋಗದಲ್ಲಿ ಹೆಚ್ಚಿನ ಅವಕಾಶ ಅಂತ ಹೇಳಿ. ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಉದ್ಯೋಗದಲ್ಲಿ ಹೆಚ್ಚಿನ ಅವಕಾಶ ಎನ್ನುವಂತದ್ದನ್ನು ಸ್ಪಷ್ಟಪಡಿಸಿ ಹೇಳಿ ತಾವು. ನೇರವಾಗಿ ಆದೇಶ ಹೊರಡಿಸಿ, ಆಗ ಕನ್ನಡ ಮಾಧ್ಯಮಕ್ಕೆ ಉದ್ಯೋಗದ ಭರವಸೆ ಸಿಕ್ಕಿದಾಗ ಅದು ನೇರವಾಗಿ ಬರುತ್ತದೆ. ಇವತ್ತು ನಮ್ಮಲ್ಲಿ ಐಎಎಸ್, ಐಪಿಎಸ್ ಅಧಿಕಾರಿಗಳು ಇದ್ದಾರೆ, ನಾವು ರಾಜಕಾರಣಿಗಳು ನಾವು ಏನೇ ಹೇಳಿದರೂ ಐಎಎಸ್, ಐಪಿಎಸ್ ಅಧಿಕಾರಿಗಳು ನೇರವಾಗಿ ಆಡಳಿತ ಅವರ ಕೈಯಲ್ಲಿ ಇರತಕ್ಕಂಥದ್ದು, ಅವರು ಕನ್ನಡದ ಆಡಳಿತದ ಬಗ್ಗೆ ಚಿಂತನೆ ವಹಿಸಬೇಕು, ಪ್ರಾಮಾಣಿಕತೆ ವಹಿಸಬೇಕು. ತಮಗೆ ನಾನು ಹೇಳಬೇಕಾದರೆ ನಮ್ಮ ಐಎಎಸ್, ಐಪಿಎಸ್ ಅಧಿಕಾರಿಗಳ ಪಟ್ಟಿ ನೋಡಿದರೆ 70 ಭಾಗ ಹೊರಗಿನವರು. ನಾನು ಅವರನ್ನು ಟೀಕೆ ಮಾಡುತ್ತಾ ಇಲ್ಲ, ಗೇಲಿ ಮಾಡುತ್ತಾ ಇಲ್ಲ 70 ಭಾಗ, ಬೇರೆ ಮಾತೇ ಇಲ್ಲ. ನಾವು ಅವರಿಂದ ಏನು ಕನ್ನಡದ ಬೆಳವಣಿಗೆ ಬಗ್ಗೆ ನಿರೀಕ್ಷೆ ಮಾಡಬೇಕು ಎನ್ನತಕ್ಕಂಥದ್ದು, ನಾನು ಅತ್ಯಂತ ನೋವಿನಿಂದ ಹೇಳುವಂತಹ ಪ್ರಸಂಗ ಬಂದಿದೆ. ಆದ್ದರಿಂದ ಇದರ ಬಗ್ಗೆ ಒಂದು ಪರಿಣಾಮಕಾರಿಯಾದಂತಹ ವ್ಯವಸ್ಥೆ ಆಗಬೇಕು ಎನ್ನತಕ್ಕಂಥದ್ದನ್ನು ತಮ್ಮಲ್ಲಿ ನಾನು ಮನವಿ ಮಾಡುತ್ತಿದ್ದೇನೆ. ನನಗೆ ಅನ್ನಿಸುತ್ತದೆ, ಕಲ್ಲಿನ ಮೇಲೆ ತಲೆಯನ್ನು ಹೊಡಕೊಂಡರೆ ಎಷ್ಟು ಪರಿಸ್ಥಿತಿಯೇ, ಭಾಷೆ ಬಗ್ಗೆ ಅಷ್ಟೇ ಪರಿಸ್ಥಿತಿಯಾಗಿದೆ. ನನ್ನ ಜೀವನದ ಉದ್ದಕ್ಕೂ ಹೀಗೆಯೇ ಆಗಿದೆ. ಆದರೆ ಹಣೆ ಗಟ್ಟಿಯಾಗಿದೆ ಹೊಡೆದುಕೊಳ್ಳುತ್ತಾ ಇದ್ದೇನೆ. ಇದನ್ನೇ ಡಿ.ವಿ.ಜಿ.ಯವರು ಹೇಗೆ ಹೇಳುತ್ತಾರೆ ಎಂಬುದನ್ನು ಮಾನ್ಯ ನಂಜೇಗೌಡರಿಗೆ ಹೇಳುತ್ತೇನೆ.

ಎದ್ದೆದ್ದು ಬೀಳುತಿಹೆ
ಗುದ್ದಾಡಿ ಸೋಲುತಿಹೆ
ಗದ್ದಲವ ತುಂಬಿ
ಪ್ರಸಿದ್ಧನಾಗುತಿಹೆ
ಉದ್ಧರಿಸುವೆನು ಜಗವ
ಎನ್ನುತಿಹೆ, ಸಖನೆ,
ನಿನ್ನ ಉದ್ಧಾರ ಎಷ್ಟೋ

ಇದು ನನಗೆ ಅನ್ವಯಿಸುತ್ತದೆಯೋ ಏನೋ ಅನ್ನಿಸುತ್ತದೆ. ಅದು ನನಗೇ ಹೇಳಿಕೊಳ್ಳಬೇಕಾಗಿದೆ. ಅದು ನನಗೆಯೋ ?..........

ಅಧ್ಯಕ್ಷರು : ನಿಮ್ಮ ಪರಿಚಯ ಆದಮೇಲೆ ಡಿ.ವಿ.ಜಿ.ಯವರು ಇದನ್ನು ಬರೆದರು ಏನು ?

ಶ್ರೀ ವಾಟಾಳ್ ನಾಗರಾಜ್ : ಇಲ್ಲ ಇಲ್ಲ. ಅಂದರೆ ನಾನು ಡಿ.ವಿ.ಜಿ. ಅವರನ್ನು ಸನ್ಮಾನ ಮಾಡಲು ಅವರ ಮನೆ ಬಾಗಿಲಿಗೆ ಹೋಗಿದ್ದೆ. ಆ ಸಂದರ್ಭದ ಎರಡು ನೆನಪುಗಳನ್ನು ತಮ್ಮ ಗಮನಕ್ಕೆ ತರಬಯಸುವೆ. ನಾನು, ನಮ್ಮ ಮಾಜಿ ಮೇಯರ್ ಆದ ತಿವಾರಿಯವರು ಪಿ. ರಾಮದೇವ್‌ರವರು ಅವರು ಇಲ್ಲ, ನಾವು ಎಲ್ಲಾ ಡಿ.ವಿ.ಜಿ. ಅವರ ಮನೆಗೆ ಹೋಗಿದ್ದೆವು. ನಗರ ಮಹಾಪಾಲಿಕೆ ವತಿಯಿಂದ ಸನ್ಮಾನ ಮಾಡುತ್ತೇವೆಂದು ಹೇಳಿ, ಎದುರುಗಡೆ ಡಿವಿಜಿಯವರು ಇದ್ದರು. ವಾಟಾಳ್ ನಾಗರಾಜು ನನ್ನ ಶತ್ರು ಎಂದರೆ. ಏಕೆ ಸ್ವಾಮಿ ಎಂದೆ. ನೀನು ಕರ್ನಾಟಕ ಅಂತೀಯೇ, ನಾನು ಮೈಸೂರು ಅಂತನೇ ಇರಲಿ ಎಂದು ಹೇಳುತ್ತೇನೆ ಎಂದು ಅದು ಅವರ ಸಂತೋಷ, ಅಭಿಮಾನ ದ.ರಾ. ಬೇಂದ್ರೆಯವರ ಮನೆಗೇ ಹೋಗಿದ್ದೆವು. ಅ ನಂತರ ಕುವೆಂಪುರವರ ಮನೆಗೆ ಹೋದಾಗ ಅವರು ಹೊರಗಡೆ ಬಾಗಿಲಿನಲ್ಲಿ ನಿಂತಿದ್ದರು.

ಶ್ರೀ ಎಚ್.ಎನ್. ನಂಜೇಗೌಡ : ಅಧ್ಯಕ್ಷರೇ, ಡಿ.ವಿ.ಜಿ. ಮಾತಿನಲ್ಲೇ ಒಂದು ಸಮಾಧಾನ ಹೇಳಬಹುದು.

ಜಗವನು ಮುದ್ದಿಸದ ಅದೇಕೆಂದು ಕೊರಗುತಿಹೆ ವಾಟಾಳ್,
ಮಗುನೀ ಶಕ್ತರಿಗೆ ಲೋಕಕ್ಕೆ ಸ್ಪರ್ಧಿ, ಹೆಗಲ ಹೊರೆ ಪುಟ್ಟಿದರೆ
ಎಲ್ಲಂ ಇರುತಿರೆ ನಿನ್ನ ರಗಳೆ ಯಾರಿಗೆ ಬಿಡು ವಾಟಾಳ್.

(ನಗು)

ಶ್ರೀ ವಾಟಾಳ್ ನಾಗರಾಜ್ : ಏಕೆ ನಾನು ನಂಜೇಗೌಡರನ್ನು ಕುರಿತು ಹೇಳಿದೆ ಎಂದರೆ ಈ ಡಿವಿಜಿಯವರ ಮಂಕುತಿಮ್ಮನ ಕಗ್ಗ ಬಹಳಷ್ಟು ಕರಗತ ಮಾಡಿದ್ದಾರೆ. ನಾಲಗೆ ಮೇಲೆ ಕರೆಗಟ್ಟಿದೆ. ನಾನು ಅವರು ಕುಳಿತುಕೊಂಡು ಅನೇಕ ಬಾರಿ ಚರ್ಚೆ ಮಾಡಿದ್ದೇವೆ. ಬಹುಶಃ 5 ವರ್ಷಗಳ ಹಿಂದೆ ಸೇರಿದ್ದೆವು ಅಂತ ಅಂದುಕೊಂಡಿದ್ದೇನೆ. ಆದ್ದರಿಂದ ಬೇಂದ್ರೆಯವರ ಮನೆಗೆ ನಾನು ಹೋದಾಗ ಅಧ್ಯಕ್ಷರೇ, ಪಾಪ ಇನ್ನೂ ನನ್ನ ಕಣ್ಣ ಮುಂದೇ ಇದೆ. ಅವರು ಹೊರಗಡೆ ನಿಂತಿದ್ದರು. ನಾನು ರಾಮದೇವ್ ಮೇಯರ್ ತಿವಾರಿ ಮೂವರು ಹೋದಾಗ, ಯಾರ‍್ಯಾರು ಬಂದಿದ್ದೀರಿ ಅಂದರು ಆಗ ನಾನು, ವಾಟಾಳ್ ನಾಗರಾಜ್ ತಿವಾರಿ ಎಂದೆ. ನಾನು ಏಕೆ ಹೊರಗೆ ನಿಂತಿದ್ದೇನೆ ಗೊತ್ತೋ? ಅಂದರು, ಯಾವನೇ ಬಂದಿದ್ದರೂ ನಿಲ್ಲುತ್ತಿರಲಿಲ್ಲ. ಈ ವಾಟಾಳ್ ಬಂದಿದ್ದಾನಲ್ಲ ಅದಕ್ಕೆ ನಿಂತೆ. ಅಂದರೆ ಎಷ್ಟು ಆತ್ಮೀಯತೆ, ಪ್ರೀತಿ, ರಾಷ್ಟ್ರ ಕುವೆಂಪು ನನಗೆ ಅಂತು ಬಹಳ ಸಂಬಂಧ. ಹಿಂದೆ ಶಾಸನ ಸಭೆಗೆ ಗೆದ್ದಾಗ ಅವರ ಮನೆಗೆ ಹೋದಾಗ, ಆಗ ಸ್ವಲ್ಪ ಅವರಿಗೆ ಅಷ್ಟು ಮರೆವು ಇರಲಿಲ್ಲ. ಬಹಳ ದಿವಸ ಮಧ್ಯೆ ಅವರ ಮನೆಗೆ ಹೋಗಿರಲಿಲ್ಲ. ಅವರ ಮನೆಗೆ ನಾನು ಹೋದಾಗ ಇಷ್ಟು ದಿವಸ ಏಕೆ ತಡವಾಗಿ ಬಂದಿದ್ದೀಯಾ ಅಂದರು. ನಾನು ಚುನಾವಣೆಯಲ್ಲಿ ಸೋತಿದ್ದೇನೆ ಅಂದೆ. ಅದಕ್ಕೆ ಅವರು ಚುನಾವಣೆಯ ಸೋಲಿಗೂ ನನ್ನ ಮನೆಗೆ ಬರುವುದಕ್ಕೂ ಏನು ಸಂಬಂಧ ಅಂದರು. ಈಗ ನಾನು ಗೆದ್ದಿದ್ದೇನೆ. ಅದಕ್ಕೆ ತಮ್ಮನ್ನು ನೋಡಲು ಬಂದಿದ್ದೇನೆ ಅಂದೆ. ಶಾಸನ ಸಭೆಯಲ್ಲಿ ಕನ್ನಡದ ಧ್ವನಿ ಮಾತನ್ನು ಆಡಿ ನಾನು ಎಲ್ಲರ ಮನೆ ಬಾಗಿಲಿಗೆ ಹೋಗಿ ಸನ್ಮಾನ ಮಾಡಿದ್ದೇನೆ. ಕಾರಂತರ ಮನೆ ಬಾಗಿಲಿಗೆ ಹೋಗಿದ್ದೇನೆ.

ಇಲ್ಲೇ ಇದ್ದ ಶ್ರೀ ಇದಿನಬ್ಬ ಕನ್ನಡದ ಮಹಾಕವಿ, ಅವರ ಮನೆಗೆ ಹೋಗಿದ್ದೇನೆ. ಇದರಲ್ಲಿ ಯಾವ ಭೇದಭಾವನೆ ಇಲ್ಲದೆ ಪ್ರಾಮಾಣಿಕವಾಗಿ ಇದನ್ನು ನಾನು ಹೇಳಿದ್ದೇನೆ. ನನ್ನ ಒಂದು ತೀರ್ಮಾನವನ್ನು ತಮಗೆ ಹೇಳುತ್ತೇನೆ. ಈ ಎರಡು ಕವಿತೆಗಳು ಅತ್ಯಂತ ಸುಂದರವಾದಂತಹದ್ದು. ಅದು ಏನು ನಾನು ಎಷ್ಟು ಹೇಳಿದರೂ ಪರಿಸ್ಥಿತಿ ಏನು? ನಾವು ಬಹಳ ಹೇಳಿದ್ದೇವೆ. ನಾನು ನೀವು, ನೀವು ನಾವು, ಎಲ್ಲರೂ ಜನರಿಗೆ ಏನು ಮಾಡಿದ್ದೇವೆ? ನಿಸ್ಸಾರ್ ಅಹಮದ್, ಬಹಳ ಸುಂದರವಾಗಿ ಹೇಳಿದ್ದಾರೆ. ಆ ಕಾಲದಲ್ಲಿ ನಮ್ಮನ್ನೆಲ್ಲ ನೋಡಿ ಬರೆದರೋ ಏನೋ? ನಮ್ಮನ್ನೆಲ್ಲ ನೋಡಿ ನಮ್ಮ ರಾಜಕಾರಣ ನೋಡಿ ಬರೆದಿರುವ "ಕುರಿಗಳು ಸಾರ್ ಕುರಿಗಳು" ಹೀಗಿದೆ.

"ಕುರಿಗಳು ಸಾರ್, ಕುರಿಗಳು
ಸಾಗಿದ್ದೇ ಗುರಿಗಳು.
ಮುಂದೆಯಲಿ ಒಂದಾಗಿ,
ಸ್ವಂತಿಕೆಯೆ ಬಂದಾಗಿ,
ಇದರ ಬಾಲ ಅದು,
ಮತ್ತೆ ಅದರ ಬಾರ ಇದು ಮೂಸಿ,
ದನಿಕುಗ್ಗಿಸಿ, ತಲೆ ತಗ್ಗಿಸಿ,
ಹುಡುಕಿ ಹುಲ್ಲು ಕಡ್ಡಿ ಮೇವು,
ಅಂಡೆಯುವ ನಾವು ನೀವು
ಕುರಿಗಳು ಸಾರ್, ಕುರಿಗಳು
ಕುರಿಗಳು ಸಾರ್, ಕುರಿಗಳು
ನಮಗೋ ನೂರು ಗುರಿಗಳು.

ಎಡದಿಕ್ಕಿಗೆ ಬಲದಿಕ್ಕಿಗೆ
ಒಮ್ಮೆ ದಿಕ್ಕುಪಾಲಾಗಿ
ಒಮ್ಮೆ ಅದೂ ಕಳೆದುಕೊಂಡು
ತಾಟಸ್ಥದಿ ದಿಕ್ಕೆಟ್ಟು
ಹೇಗೆ ಹೇಗೋ ಏಗುತಿರುವ
ಬರೀ ಕಿರುಚಿ ರೇಗುತಿರುವ
ನೊಣಕೂತರೆ ಬಾಗುತಿರುವ
ತಿನ್ನದಿದ್ದರೂ ತೇಗುತಿರುವ
ಹಿಂದೆ ಬಂದರೆ ಒಡೆಯದ,
ಮುಂದೆ ಬರಲು ಹಾಯದ,
ಅವರು, ಇವರು, ನಾವುಗಳು
ಕುರಿಗಳು ಸಾರ್, ಕುರಿಗಳು.

ನಮ್ಮ ಕಾಯ್ವ ಕುರುಬರು,
ಪುಟಗೋಸಿಯ ಮೊನ್ನೆತಾನೆ
ಕಿತ್ತು ಪಂಚೆ ಉಟ್ಟವರು.
ಶಾನುಭೋಗ ಗೀಚಿದ್ದಕ್ಕೆ
ಹೆಬ್ಬೆಟ್ಟನ್ನು ಒತ್ತುವವರು
ಜಮಾಬಂದಿಗೆ ಅಮಲ್ದಾರ
ಬರಲು ನಮ್ಮೊಳು ಒಬ್ಬನನ್ನು
ಮೆಚ್ಚಿ ಮಸೆದ ಮಚ್ಚ ಹಿರಿದು
ಹಿರಿದು ಕಚಕ್ಕೆಂದು ಕೊಚ್ಚಿ ಕತ್ತ,
ಬಿರಿಯಾನಿಯ ಮೆಹರಬಾನಿಮಾಡಿ
ಕೈಯ ಜೋಡಿಸುತ್ತಾ
ಕಿಸೆಗೆ ಹಸಿರು ನೋಟು ತುರುಕಿ,
ಸುಡಿಗೆ ಬೆಣ್ಣೆ ಹಚ್ಚುವವರು
ಬಿಸಿಲಿನಲ್ಲಿ ನಮ್ಮ ದೂಡಿ,
ಮರದಡಿಯಲಿ ತಾವು ಕೂತು
ಮಾತು, ಮಾತು, ಮಾತು, ಮಾತು.

ಮಾತಿನ ಗೈರತ್ತಿನಲ್ಲೇ
ಕರಾಮತ್ತ ನಡೆಸುವವರು
ನಮ್ಮ ಮೈಯ ತುಪ್ಪಟವ
ರವಷ್ಟೂ ಬಿಡದೆ ಹಾಗೆ ಸವರಿ,
ಕಂಬಳಿಗಳ ನೇಯುವಂಥ
ಯೋಜನೆಗಳ ಹಾಕುವವರು.

ನಾವು, ನೀವು, ಅವರು, ಇವರು
ಕುರಿಗಳು ಸಾರ್, ಕುರಿಗಳು
ಮಚ್ಚಿನ ಆ ಮೆಚ್ಚಿನಲ್ಲಿ
ಅದರಾಳದ ಕಿಚ್ಚಿನಲಿ
ಮನೆಮಾಡಿವೆ ಹುಚ್ಚಿನಲ್ಲಿ
ನಮ್ಮೆಲ್ಲರ ಗುರಿಗಳು
ಕುರಿಗಳು ಸಾರ್, ಕುರಿಗಳು".

ಏಕೆ ಈ ಮಾತನ್ನು ನಾನು ಹೇಳುತಿದ್ದೇನೆ ಎಂದರೆ ನಮ್ಮ ವಾದ ಎಷ್ಟು? ನಮ್ಮ ರಾಜಕಾರಣ ಎಲ್ಲಿಗೆ ಹೋಗಿದೆ, ಎಲ್ಲಿಗೆ ತಲುಪಿದ್ದೇವೆ, ಎನ್ನುವ ಮಟ್ಟದಲ್ಲಿ ಇದು ತಲುಪಿದೆ. ನಿನ್ನೆಯ ದಿನ ಈ ಸದನವಲ್ಲಿ ಅನೇಕ ಸ್ನೇಹಿತರುಗಳು ಮಾತನಾಡಿದರು. ಅದರಲ್ಲಿ ಶ್ರೀಮಾನ್ ಬಂಗಾರಪ್ಪನವರು,

ಮೊಯಿಲಿಯವರು, ಅವರು ಇಬ್ಬರೂ ಒಂದು ರೀತಿ. ಅವರ ಮಾತು, ಅವರ ಧಾಟಿ ನೋಡಿದಾಗ ಪಾಪ ಮಧ್ಯೆ ಇಬ್ಬರು ಸಿಕ್ಕಿ ಒದ್ದಾಡುತ್ತಿರುವುದು ನೋಡಿ ನಾನು ಸುಸ್ತು ಹೊಡೆದುಬಿಟ್ಟೆ.

11.10 ಎ.ಎಂ

ನಮ್ಮ ಧರ್ಮಸಿಂಗ್ ಅವರು, ಈ ಕಡೆ ನಮ್ಮ ಕೌಜಲಗಿ ಅವರು, ಆ ಕಡೆ ಖರ್ಗೆಯವರು. ಯಾರ ಕಡೆ ತಿರುಗಬೇಕು ಅವರು? ಮೊಯ್ಲಿಪರ ಹೂಂ ಅನ್ನೋಣವೇ ಅಥವಾ ಬಂಗಾರಪ್ಪನವರ ಪರ ಹೂಂ ಅನ್ನೋಣವೇ? ಎಷ್ಟು ಇಕ್ಕಟ್ಟಿಗೆ ಸಿಕ್ಕಿದ್ದರು ಎಂದರೆ ಬಹಳ ಕಷ್ಟ ಪರಿಸ್ಥಿತಿ. ನೋಡುತ್ತಿದ್ದೇನೆ ಅವರನ್ನು, ಇವರು ನನ್ನದು ನನ್ನದು ಅನುತ್ತಾರೆ, ಇವರು ಈ ಕಡೆ ನೋಡಬೇಕೋ, ಅವರು ನನ್ನದು ನನ್ನದು ಅಂತಾರೆ. ಇವರು ಮಧ್ಯೆ ಸಿಕ್ಕಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ಅಲ್ಲಿ ಸಿಕ್ಕಿಕೊಂಡವರು ಇಬ್ಬರೆ, ಧರ್ಮಸಿಂಗ್ ಮತ್ತು ಕೌಜಲಗಿ ಅವರು. ಖರ್ಗೆಯವರು ಅವರ ಬಲಗಡೆ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲ, ಆದರೂ ನಿನ್ನೆ ಅವರ ಪರಿಸ್ಥಿತಿ ನನಗೆ ಅರ್ಥವಾಗುತ್ತಾ ಇತ್ತು. ಒಂದು ಕಡೆ ಚೆಲ್ಲಾಟ, ಒಂದು ಕಡೆ ಪ್ರಾಣ ಸಂಕಟ. ಈ ವಾದ ನನಗೆ ಅತ್ಯಂತ ಬಹಳ ನೋವಿನಿಂದ ಕಂಡಿತು. ಅವರು ನನಗೆ ಏನೂ ಹೇಳುವ ಹಾಗಿಲ್ಲ, ಅನುಭವಿಸುವ ಹಾಗಿಲ್ಲ. ಇಬ್ಬರೂ ನನ್ನದು ನನ್ನದು ಅಂತ. ಇದು ಒಂದು ಪರಿಸ್ಥಿತಿ. ಇದು ಒಂದು ಟಾಂಗ್ ಕೊಡುವ ಕೆಲಸ ಅಂತ. ಹಳ್ಳಿಗಳ ಕಡೆ ಟಾಂಗ್ ಕೊಟ್ಟು ಬಂದೆಯಾ ಎಂದು ಹೇಳುತ್ತಾರೆ ಹಾಗೆ. ವೀರೇಂದ್ರ ಪಾಟೀಲರಿಗೆ ಬಂಗಾರಪ್ಪನವರು ಟಾಂಗ್ ಕೊಟ್ಟರು, ಬಂಗಾರಪ್ಪನವರಿಗೆ ಮೊಯ್ಲಿಯವರು ಟಾಂಗ್ ಕೊಟ್ಟರು. ಇದು ಟಾಂಗ್ ಕೊಡುವ ಕೆಲಸವಾಗಿ ಕೊನೆಗೆ ಎಲ್ಲರಿಗೂ ಟಾಂಗ್ ಕೊಟ್ಟು ಇವರು ಬಂದು ಇಲ್ಲಿ ಕುಳಿತುಕೊಂಡರು.

ಶ್ರೀ ಟಿ.ಹೆಚ್. ನಾರಾಯಣ ಸ್ವಾಮಿ : ಮೊಯಿಲಿಯವರಿಗೆ ಜನ ಕೊಟ್ಟರು;

ಶ್ರೀ ವಾಟಾಳ್ ನಾಗರಾಜ್ : ಮೊಯಿಲಿಯವರಿಗೆ ನಾಗೇಗೌಡರಿಂದ ಹಿಡಿದು ಎಲ್ಲರೂ ಕೊಟ್ಟಿಬಿಟ್ಟಿದ್ದಾರೆ. ಆ ಪ್ರಶ್ನೆ ಬೇರೆ. ಆದರೆ ಒಂದು ಸಂತೋಷ. ಇವರದು ಒಂದು ಒಕ್ಕೂಟ ವ್ಯವಸ್ಥೆ ಈ ಸರ್ಕಾರ. ಹಿಂದೆ ಕೇಂದ್ರದಿಂದ ಮುಖ್ಯಮಂತ್ರಿಗಳನ್ನು ನೇಮಕ ಮಾಡುತ್ತಿದ್ದರು. ಪ್ರಜಾಪ್ರಭುತ್ವ ಯಾವುದೂ ಇರಲಿಲ್ಲ. ಐ.ಎ.ಎಸ್. ಅಧಿಕಾರಿಗಳು, ಐ.ಪಿ.ಎಸ್. ಅಧಿಕಾರಿಗಳನ್ನು ನೇಮಕ ಮಾಡುವ ರೀತಿ ಮಾಡುತ್ತಿದ್ದರು. ಬಂಗಾರಪ್ಪನವರಾಗಲೀ, ಮೊಯ್ಲಿಯವರಾಗಲೀ ನೇಮಕ ಆದದ್ದು ಹೀಗೆ. ಆದರೆ ಇಲ್ಲಿ ಒಂದು ಒಕ್ಕೂಟ ವ್ಯವಸ್ಥೆ ಇದೆ. ಈ ವ್ಯವಸ್ಥೆಯನ್ನು ನಾವು ಇಲ್ಲಿ ಕಾಣುತ್ತಿದ್ದೇವೆ. ಈ ಒಕ್ಕೂಟ ವ್ಯವಸ್ಥೆ ಒಂದು ಇಂಜಿನ ಇದ್ದಹಾಗೆ. ರೈಲ್ವೆ ರೈಲ್ ಇದ್ದಹಾಗೆ. ಈ ಒಕ್ಕೂಟ ವ್ಯವಸ್ಥೆಗೆ ಇಂಜಿನ್ ಜೆ.ಹೆಚ್. ಪಟೇಲರು. ಈ ಒಕ್ಕೂಟ ವ್ಯವಸ್ಥೆ ಯಾರು ಯಾರು ಎಂದರೆ ಬೊಮ್ಮಾಯಿಯವರು, ರಾಮಕೃಷ್ಣ ಹೆಗಡೆಯವರು ಮತ್ತು ದೇವೇಗೌಡರು. ಇವರದು ಒಂದು ಸಾಮರಸ್ಯ ಒಕ್ಕೂಟದ ವ್ಯವಸ್ಥೆ. ಮೂರೂ ಜನಕ್ಕೆ ಸಂಬಂಧಪಟ್ಟಂಥ ಮಂತ್ರಿಗಳು, ಮೂರೂ ಜನ ಹೇಳತಕ್ಕಂಥ ಮಾತು ಕೇಳತಕ್ಕಂಥದ್ದು. ಇದು ಬಹಳ ಸಾಮರಸ್ಯವಾಗಿದೆ ಎನ್ನುವುದಕ್ಕೆ ಈ ಮೂರೂ ಜನ ಬಹಳ.... ಇಲ್ಲಿ ಒಂದು ಚೀಟಿ ಇಟ್ಟಿದ್ದೆ, ನಿಮ್ಮ ವ್ಯವಸ್ಥೆ ಬಗ್ಗೆ......

ಒಬ್ಬ ಮಾನ್ಯ ಸದಸ್ಯರು : ಏನು ಕವನವೇ?

ಶ್ರೀ ವಾಟಾಳ್ ನಾಗರಾಜ್ : ಅಲ್ಲ ಅಲ್ಲ, ಕವನ ಅಲ್ಲ. ಕವನ ಬೇಡ ಎಂದು ಹೇಳಿದಿರಲ್ಲ. ಜಾಲಪ್ಪನವರು ಇದೇನು ಕನ್ನಡ ಸಾಹಿತ್ಯ ಪರಿಷತ್ತು ಕೆಟ್ಟು ಹೋಯಿತೇ ಅಂತ ಅಂದುಬಿಟ್ಟರು. ಇನ್ನು ನಾವೇನು ಮಾಡೋಣ ಇಲ್ಲಿ. ಆಯಿತು ಬಿಡಿ. ಅದು ಏನು ಅಂತ ಅಂದರೆ ನಾನು ಇಲ್ಲಿ......

ಶ್ರೀ ಸಿದ್ದರಾಮಯ್ಯ : ಸಾಮೂಹಿಕ ನಾಯಕತ್ವ, ಸಾಮೂಹಿಕ ಜವಾಬ್ದಾರಿ.

ಶ್ರೀ ವಾಟಾಳ್ ನಾಗರಾಜ್ : ಅವರು ಹೇಳಿದಷ್ಟು ಮಂತ್ರಿಗಳು, ಇವರು ಹೇಳಿದಷ್ಟು ಮಂತ್ರಿಗಳು, ಅವರು ಹೇಳಿದಷ್ಟು ಮಂತ್ರಿಗಳು, ಮೂರೂ ಜನ ಹೇಳಿದಷ್ಟು ಮಂತ್ರಿಗಳು.

ಶ್ರೀ ಸಿದ್ದರಾಮಯ್ಯ : ಸಾಮೂಹಿಕ ಪ್ರಜಾ ತಂತ್ರ.

ಶ್ರೀ ವಾಟಾಳ್ ನಾಗರಾಜ್ : ಈ ಒಕ್ಕೂಟ ವ್ಯವಸ್ಥೆ, ಸಮೃದ್ಧ, ಸಜೀವ ಮತ್ತು ಸ್ವಾಭಿಮಾನಿ ದೇವೇಗೌಡರು ಸ್ವಾಭಿಮಾನಿ ಹೆಗ್ಗಡೆಯವರು ಸಮೃದ್ಧ, ಬೊಮ್ಮಾಯಿಯವರು ಸಜೀವ. ಈ ಮೂರು ಸೇರಿ ಒಕ್ಕೂಟ. ಸಜೀವ, ಸಮೃದ್ಧ ಮತ್ತು ಸ್ವಾಭಿಮಾನಿ ಈ ಮೂರರ ಒಕ್ಕೂಟ. ಈ ರೈಲು ಇಂಜಿನ್ ಎಳೆಯುವುದಕ್ಕೆ ಜೆ.ಹೆಚ್. ಪಟೇಲರು. ಇಂಜಿನ್ ಅದು. ಅದು ನಿಂತರೆ ರೈಲನ್ನು ಹಿಂದಕ್ಕೆ ಬೇಕಾದರೂ ಎಳೆಯಬಹುದು, ಮುಂದಕ್ಕೆ ಬೇಕಾದರೂ ಎಳೆಯಬಹುದು, ರೈಲು ಇಂಜಿನ್ನನ್ನು ಯಾವ ಕಡೆ ಬೇಕಾದರೂ ಜೋಡಿಸಬಹುದಲ್ಲ. ಆದ್ದರಿಂದ ಈ ಒಕ್ಕೂಟದ ವ್ಯವಸ್ಥೆ, ಇದು ಎಷ್ಟರಮಟ್ಟಿಗೆ.... ನನಗೇನೂ ದೇಶಪಾಂಡೆಯವರೇ ತಾವು 5 ವರ್ಷ ಇರಬೇಕು ಎನ್ನುವುದು ನನ್ನ ಪ್ರಾಮಾಣಿಕವಾದ ಅಭಿಪ್ರಾಯ. ನಾನಂತೂ, ನಿಮ್ಮನ್ನು ಕಾಲು ಎಳೆಯಬೇಕು ಎನ್ನತಕ್ಕವನಲ್ಲ. ಏಕೆಂದರೆ ನಾನು ಅಲ್ಲಿ ಬರುವ ಹಾಗೂ ಇಲ್ಲ, ನಾನು ಇಲ್ಲೇ ಇರುವವನೆ.

ಶ್ರೀ ಆರ್.ವಿ. ದೇಶಪಾಂಡೆ : ನಮಗೆ ಅದರ ಬಗ್ಗೆ ಸಂಶಯ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಅದು ಏಕೆ ಸಂಶಯ ಇಲ್ಲ. ನಾಳೆ ನಮ್ಮ ಪಕ್ಷವೇ ಅಧಿಕಾರಕ್ಕೆ ಬಂದರೆ ನೀವು ಏನು ಮಾಡುತ್ತೀರಿ?

(ನಗು)

ಆದ್ದರಿಂದ ನಿಮ್ಮೆಲ್ಲರನ್ನೂ ನಾನು ಸ್ವಾಗತಿಸಲು ಸಿದ್ಧ. ನಿಮಗೆ ಯಾವತ್ತು ಅಸಮಾಧಾನ ಬರುತ್ತೋ ಅವತ್ತು ನನ್ನ ಜೊತೆಯಲ್ಲಿ ಬರಬಹುದು. ದೇಶಪಾಂಡೆ ಅವರು, ಸಿದ್ಧರಾಮಯ್ಯನವರು ಎಲ್ಲರೂ ನಮಗೆ ಬಹಳ ಬೇಕಾದವರು. ಅದರ ಬಗ್ಗೆ ನನ್ನದು ಏನೂ ಅಭ್ಯಂತರ ಇಲ್ಲ. ಆದರೆ ಬರುವುದೇ ಇಲ್ಲ ಎಂತ ಹೇಳುವುದಕ್ಕಾಗುವುದಿಲ್ಲ.

ಶ್ರೀ ಸಿದ್ಧರಾಮಯ್ಯ : ಅದು 5 ವರ್ಷಗಳಾದ ಮೇಲೆ ತಾನೆ

ಶ್ರೀ ವಾಟಾಳ್ ನಾಗರಾಜ್ : 5 ವರ್ಷಗಳಾದ ಮೇಲೆ ಎನ್ನುವುದನ್ನು ನಾನೂ ಒಪ್ಪುತ್ತೇನೆ. 5 ವರ್ಷ ನಿಮ್ಮ ಅಧಿಕಾರ ಬಿಟ್ಟು ಇಳಿಯಿರಿ ಎಂದು ನಾನು ಪ್ರಾಮಾಣಿಕವಾಗಿಯೂ ಹೇಳುವುದಿಲ್ಲ.

ಇದ್ದರೆ ಸಂತೋಷ. ಆದರೆ ನಿಮ್ಮ ಒಕ್ಕೂಟ ವ್ಯವಸ್ಥೆ ಬಗ್ಗೆ ನನಗೆ ಸ್ವಲ್ಪ ಚಿಂತೆ ಅಷ್ಟೆ. ಏಕೆಂದರೆ ಯಾವುದಾದರೂ ಒಂದು ಸೂತ್ರ ಕಿತ್ತು ಹೋದರೂ ಪಟ ಅಲ್ಲಾಡಿಬಿಡುತ್ತದೆ. ಈ ಮೂರು ಸೂತ್ರ ಒಂದು ಪಟಕ್ಕೆ. ಪಟವನ್ನು ತಾವು ನೋಡಿದ್ದೀರಿ. ಒಬ್ಬರು ಹಿಡಿದಿರುತ್ತಾರೆ. ಆ ಪಟದ ಸೂತ್ರ ಕೆಟ್ಟು ಹೋದರೆ ಗೋತಾ ಹೊಡೆಯುತ್ತದೆ.

ಶ್ರೀ ಎಂ. ಪಿ. ಪ್ರಕಾಶ್ : ಬಾಲಂಗೋಚಿ ಇಲ್ಲದಿದ್ದರೆ ಗೋತಾ ಹೊಡೆಯುವುದು.

ಶ್ರೀ ವಾಟಾಳ್ ನಾಗರಾಜ್ : ಬಾಲಂಗೋಚಿ ಇಲ್ಲದಿದ್ದರ ತಿರುಗುತ್ತದೆ. ಸೂತ್ರ ಕಿತ್ತು ಹೋದರೆ ಕಂಪ್ಲೀಟ್ ನೆಗೆದು ಬೀಳುತ್ತದೆ. ಆದ್ದರಿಂದ ಈ ಮೂರು ಒಕ್ಕೂಟದ ಸೂತ್ರ ಇವೆಯಲ್ಲ, ಇವುಗಳಲ್ಲಿ ಯಾವುದಾದರೊಂದು ಸೂತ್ರ ಹೆಚ್ಚು ಕಡಿಮೆ ಆಗದ ರೀತಿ ಆ ಇಂಜಿನ್ ಎಳೆದುಕೊಂಡು ಹೋಗ ಬೇಕು. ಇಲ್ಲಾ ಅಂದರೆ ಎಲ್ಲಾದರೂ ಉರುಳಿಬಿಡುತ್ತದೆ. ಆದ್ದರಿಂದ ನಾನೇನೋ ಮಾಡುತ್ತಾರೆ ಅಂತ ಅಂದುಕೊಂಡಿದ್ದೇನೆ. ಈ ಒಕ್ಕೂಟ ಯಶಸ್ವಿಯಾಗಲಿ. ಶ್ರೀ ಮೇಟಿ ಅವರೆ, ನೀವು ಯಾವತ್ತು ಹೆಬ್ಬಾವು ಹಿಡಿಯುತ್ತೀರೋ ನನಗೆ ಗೊತ್ತಿಲ್ಲ. ನೀವು ಎಂದಾದರೂ ಹಿಡಿಯಿರಿ. ಆ ಪ್ರಶ್ನೆ ಬೇರೆ. ನಿಮಗೆಲ್ಲಾ ಒಳ್ಳೆಯದು ಆಗಲಿ. ಅದರ ಬಗ್ಗೆ ನಾನೇನೂ ತಲೆಕೆಡಿಸಿಕೊಳ್ಳಬೇಕಾಗಿಲ್ಲ.

ಶ್ರೀ ಟಿ.ಹೆಚ್. ನಾರಾಯಣ ಸ್ವಾಮಿ : ನಮಗೆಲ್ಲಾ ಸಾಮೂಹಿಕ ಒಕ್ಕೂಟ ವ್ಯವಸ್ಥೆ ಇದೆ. ತಮ್ಮ ವ್ಯವಸ್ಥೆ ಏನು ಸಾರ್? ಒಂಟಿ ವ್ಯವಸ್ಥೆಯೇ?

ಶ್ರೀ ವಾಟಾಳ್ ನಾಗರಾಜ್: ನನ್ನದು ಏಕ ಪ್ರಭುತ್ವ. ಆದ್ದರಿಂದ ಚಿಂತೆ ಪಡಬೇಕಾಗಿಲ್ಲ. ನಿಮ್ಮದು ಫಜೀತಿ ಆಗುತ್ತಾ ಇದೆ. ಬೆಳಿಗ್ಗೆ ಒಂದು, ಸಂಜೆ ಒಂದು, ಮಧ್ಯಾಹ್ನ ಒಂದು ಆದ್ದರಿಂದ ಈ ಒಕ್ಕೂಟದ ವ್ಯವಸ್ಥೆ ರಷ್ಯಾದಲ್ಲೇ ಬಿದ್ದು ಹೋಯಿತು. ಆದ್ದರಿಂದ ನಿಮ್ಮಲ್ಲಿ ಏನಾದೀತು ಎನ್ನುವ ಚಿಂತೆ ನನಗೆ ಇದೆ. ಆದರೆ ನೀವು ಹಾಗೆ ಆಗಲಾರಿರಿ, ಆಗಬಾರದು ಎನ್ನುವುದು ನನ್ನ ಆಶಯ. ಅದರ ಬಗ್ಗೆ ಸ್ಪಷ್ಟವಾದ ನಿರ್ಧಾರ ಇದೆ ಅಧ್ಯಕ್ಷರೆ,

ಶ್ರೀ ಸಿದ್ದರಾಮಯ್ಯ : ನಮ್ಮ ಭಾರತದ ವ್ಯವಸ್ಥೆಯೂ ಒಕ್ಕೂಟ ವ್ಯವಸ್ಥೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಭಾರತದ ವ್ಯವಸ್ಥೆಯಾ ಒಕ್ಕೂಟ ವ್ಯವಸ್ಥೆ ಸರಿ. ಆದರೆ ನಿಮ್ಮ ತರಹದ ಒಕ್ಕೂಟ ವ್ಯವಸ್ಥೆ ಅಲ್ಲ. ಅದರ ಬಗ್ಗೆ ಬೇರೆ ಮಾತೇ ಇಲ್ಲ. ಮಾನ್ಯ ಅಧ್ಯಕ್ಷರೇ, ನನಗೆ ತಾವು ಕಾಲವನ್ನು ಕೊಟ್ಟಿದ್ದೀರಿ, ಇನ್ನೊಂದಷ್ಟು ಹೊತ್ತು ಕೊಟ್ಟಿದ್ದರೆ ಚೆನ್ನಾಗಿ ಇತ್ತು. ಆದರೆ ಏನೋ ಗಡಿಯಾರ ನೋಡುವುದನ್ನು ನೋಡಿದರೆ ನಾನು ತಮ್ಮ ತಾಳ್ಮೆಯನ್ನು ಪರೀಕ್ಷೆ ಮಾಡಬಾರದು ಎಂದು ಹೇಳಿ, ಈಗ ಗ್ರಾನ್ಟೈಜ್‌ಗಳ ಬಗ್ಗೆ ಏಕೆಂದರೆ ಇವರು ಮಾನ್ಯ ಹಣಕಾಸಿನ ಸಚಿವರು

ಅಧ್ಯಕ್ಷರು : ರಾಜ್ಯಪಾಲರ ಭಾಷಣ ಬೇರೆ ಇದೆಯಲ್ಲ.

ಶ್ರೀ ವಾಟಾಳ್ ನಾಗರಾಜ್ : ಆದ್ದರಿಂದ ತಮ್ಮ ಮಾತಿಗೆ ಬೆಲೆ ಕೊಟ್ಟು, ತಾವು ನನಗೆ ಸಮಯ ಕೊಟ್ಟಿದ್ದಕ್ಕಾಗಿ ನಿಮಗೆ ಎರಡೂ ಕೈ ಜೋಡಿಸಿ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಶ್ರೀ ನಂಜೇಗೌಡರು.

ಶ್ರೀ ಹೆಚ್.ಎನ್. ನಂಜೇಗೌಡ : ಸನ್ಮಾನ್ಯ ಅಧ್ಯಕ್ಷರೇ......

ಶ್ರೀ ಎಲ್. ಆರ್. ಶಿವರಾಮೇಗೌಡ : ಸನ್ಮಾನ್ಯ ಸಭಾಧ್ಯಕ್ಷರೇ, ನಮಗೆಲ್ಲಾ ಸಮಯ ಯಾವಾಗ ಕೊಡುತ್ತೀರಿ ಹೇಳಿ. ಯಾವಾಗದರೂ ಕೊಡಿ ಚಿಂತೆ ಇಲ್ಲ. ಆದರೆ ಯಾವಾಗ ಕೊಡುತ್ತೀರಿ ಅಂತ ಹೇಳಿ.

+ ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ) : ಸನ್ಮಾನ್ಯ ಸಭಾಧ್ಯಕ್ಷರೆ, ನನಗೆ ಸ್ವಲ್ಪ ಮುಜುಗರ ಪರಿಸ್ಥಿತಿ ನಮ್ಮ ಪಕ್ಷದ ಹೊಸದಾಗಿ ಬಂದಿರತಕ್ಕ ಸದಸ್ಯರುಗಳು ಈ ಸದನದ ಎಲ್ಲ ಸದಸ್ಯರ ಆ ಅಭಿಪ್ರಾಯಗಳನ್ನೂ ಪ್ರತಿಬಿಂಬಿಸಿದ್ದಾರೆ. ನಾನಾದರೂ ಅಂದುಕೊಂಡೆ, ಸ್ವಲ್ಪ ಅಲ್ಲಿ ಇಲ್ಲ, ಆ ಕಡೆಯಿಂದ ಮಂತ್ರಿಗಳು ಪ್ರವೇಶ ಮಾಡುವುದನ್ನು ಬಿಟ್ಟರೆ ಮಾನ್ಯ ಸದಸ್ಯರು ಯಾರೂ ಕೂಡ ಹೆಚ್ಚಿಗೆ ಮಾತನಾಡಿಲ್ಲ. ಈ ಕಡೆ ಕೂಡ ನಮ್ಮ ಹೊಸ ಸದಸ್ಯರು ಮಾತನಾಡದೆ ಮುಂದಿನ ಸಾಲಿನಲ್ಲಿರುವವರೇ ಸದನದ ಹೆಚ್ಚಿನ ಕಾಲವನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆ. ನಿಜ ಹೇಳಬೇಕೆಂದರೆ, ನನ್ನಲ್ಲಿ ಆ ಉತ್ಸಾಹ ಇಲ್ಲ. ಯಾರು ಏನು ಅಂದುಕೊಳ್ಳುತ್ತಾರೋ ಗೊತ್ತಿಲ್ಲ. ಇದನ್ನು ಪ್ರಸ್ತಾಪ ಮಾಡಿದ ಉದ್ದೇಶವೆಂದರೆ, ತಮ್ಮ ಮೂಲಕ ಮಾನ್ಯ ಸಭಾನಾಯಕರನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಸದಸ್ಯರು ಚರ್ಚೆಯಲ್ಲಿ ಭಾಗವಹಿಸುವ ಹಕ್ಕನ್ನು ನಾವು ಏನು ಅನಿವಾರ್ಯವಾಗಿ ಮೊಟಕು ಮಾಡುತ್ತಿದ್ದೇವೆ, ಇದನ್ನು ಸರಿದೂಗಿಸಲು ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯ ಬಗ್ಗೆ ನಾಲ್ಕು ದಿವಸಗಳ ಕಾಲ ವಿಸ್ತಾರ ಮಾಡಿ ಎಲ್ಲರಿಗೂ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಹೀಗೆ ಭಾಗವಹಿಸುವಂಥ ಕಾಲದಲ್ಲಿ ಸರ್ಕಾರದವರು ಅಂದರೆ ಜನತಾದಳದವರು ಏನು ಎಲೆಕ್ಷನ್ ಮ್ಯಾನಿಫಸ್ಟೊದಲ್ಲಿ ಹೇಳಿದ್ದಾರೆ ಅದರ ಬಗ್ಗೆ ಆಗಲಿ, ಅಥವಾ ಅವರ ಪಾಲಿಸೀಸ್ ಪ್ರೋಗ್ರಾಂ ಬಗ್ಗೆ ಆಗಲಿ ಅಥವಾ ಸರ್ಕಾರದವರು ಮಾಡಿಕೊಂಡಿರತಕ್ಕ ಪ್ರೆಯಾರಿಟೀಸ್ ಬಗ್ಗೆ ಆಗಲಿ ಈಗ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ದಯವಿಟ್ಟು ಆ ವಿಚಾರಗಳನ್ನು ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯ ಸಮಯದಲ್ಲಿ ಪ್ರಸ್ತಾಪ ಮಾಡಿದರೆ ಹೆಚ್ಚು ಸೂಕ್ತ. ಹಿಂದೊಮ್ಮೆ ಇದೇ ಸಭೆಯಲ್ಲಿ ತಾವೇ ಕೊಡಿಸಿದಂಥ ಅಪ್ಪಣೆಯನ್ನು ಮಾನ್ಯ ಸಭಾನಾಯಕರು ಒಪ್ಪಿಕೊಂಡರು. ಅದೇನೆಂದರೆ ಈ ನೀರಾವರಿಯ ಬಗ್ಗೆ ಒಂದು ವಿಶೇಷವಾದ ಚರ್ಚೆಯನ್ನು ನಡೆಸೋಣ ಎಂದು. ಆದ್ದರಿಂದ ನೀರಾವರಿಯ ಬಗ್ಗೆ ಕೂಡ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆ ಚರ್ಚೆಯನ್ನು ನಿರೀಕ್ಷೆ ಮಾಡಿ ಆ ಚರ್ಚೆಯನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆ ಚರ್ಚೆಯನ್ನು ನಿರೀಕ್ಷೆಮಾಡಿ ಆ ಚರ್ಚೆಯನ್ನು ಪ್ರಸ್ತಾಪ ಮಾಡುವುದಿಲ್ಲವೆಂದು ನಾನು ಹೇಳುತ್ತೇನೆ. ಇನ್ನು ಹೊಸದಾಗಿ ಬಂದಿರತಕ್ಕ ಸದಸ್ಯರುಗಳ ಅಭಿಪ್ರಾಯಗಳೇನು ಎಂಬುದನ್ನು ಈ ಅಧಿವೇಶನದಲ್ಲೇ ನಾವು ತಿಳಿದುಕೊಳ್ಳುವುದಕ್ಕೆ ತಾವು ಅವಕಾಶವನ್ನು ಮಾಡಿ ಕೊಡುತ್ತೀರೆಂದು ಭಾವಿಸಿ ಎಲ್ಲರ ಸಹನೆಯನ್ನು ಕೋರಿ ಒಂದೆರಡು ಮಾತಿನಲ್ಲಿ ನನ್ನ ಭಾಷಣವನ್ನು ಬೇಗನೆ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಕಡೆಯಿಂದ ನಮ್ಮ ನಾಯಕರಾದ ಮಾನ್ಯ ಯಡಿಯೂರಪ್ಪನವರು ಮಾತನಾಡಿದರು. ಮಾಜಿ ಮುಖ್ಯಮತ್ರಿಗಳಿಬ್ಬರು ತಮ್ಮದೇ ಆದ ಧಾಟಿಯಲ್ಲಿ

ಮಾತನಾಡಿದರು. ಇವತ್ತು ಮಾಜಿ ಮುಖ್ಯಮಂತ್ರಿಗಳಿಬ್ಬರೂ ಇಲ್ಲ. ಅವರು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಅದೇ ರೀತಿ ಸದನದಲ್ಲಿ ಇವತ್ತು ಮುಖ್ಯಮಂತ್ರಿಗಳೂ ಇಲ್ಲ, ಉಪ ಮುಖ್ಯಮಂತ್ರಿಗಳೂ ಇಲ್ಲ. ಅವರೂ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಮುಖ್ಯ ಕಾರ್ಯದರ್ಶಿಯವರೂ ಇಲ್ಲ. ಹಣಕಾಸಿನ ಕಾರ್ಯದರ್ಶಿಯವರು ಇದ್ದಾರೋ ಇಲ್ಲವೋ ಗೊತ್ತಿಲ್ಲ. ನಮ್ಮ ಸಾಧನೆಗಳ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟುಕೊಂಡು ಇಬ್ಬರು ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಮೊಯಿಲಿಯವರೂ ಮತ್ತು ಮಾನ್ಯ ಬಂಗಾರಪ್ಪನವರೂ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇಬ್ಬರೂ ಬಹಳ ಪ್ರಬಲವಾಗಿ ಪ್ರಸ್ತಾಪ ಮಾಡಿಕೊಂಡಿದ್ದಾರೆ. ಆದರೆ ಇನ್ನೂ ಕೆಲವನ್ನು ಅವರು ಪ್ರಸ್ತಾಪ ಮಾಡಬಹುದಿತ್ತು. ಅದರಲ್ಲಿ ನಾನು ಉದಾಹರಣೆಗೆ ಒಂದೆರಡು ಹೇಳಬಹುದಲ್ಲಾ. ಉದಾಹರಣೆಗೆ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಅವರ ಮನೋಭೂಮಿಕೆ ಎಷ್ಟು ಸಿದ್ಧವಾಗಿತ್ತೆಂದರೆ, ಕಾವೇರಿ ವಿಚಾರದಲ್ಲಿ ಗಲಾಟೆಯಾದ ಸಂದರ್ಭದಲ್ಲಿ, ಇಡೀ ಬೆಂಗಳೂರು ನಗರವೇ ಹತ್ತಿ ಉರಿಯುತ್ತಿದ್ದಂಥ ಸಂದರ್ಭದಲ್ಲಿ ಸ್ಪೆಷಲ್ ಪ್ಲೇನ್‌ನಲ್ಲಿ ಪೂನಾಕ್ಕೆ ಹೋಗಿ ಸಂಗೀತವನ್ನು ಕೇಳುವಷ್ಟು ಮನೋ ಸ್ಥೈರ್ಯ, ಮನೋ ಭೂಮಿಕ ಅವರಲ್ಲಿ ಇತ್ತು. ಇದು ಬಹಳ ದೊಡ್ಡ ಸಾಧನೆ. ಇದನ್ನು ಎಲ್ಲ ಮುಖ್ಯ-ಮಂತ್ರಿಗಳೂ ಮಾಡುವುದಕ್ಕೆ ಸಾಧ್ಯವಿಲ್ಲ. ಅದೇರೀತಿ ಕ್ಲಾಸಿಕ್ ಕಂಪ್ಯೂಟರ್ ಕೇಸ್ ವಿಚಾರವೂ ಎಲ್ಲರಿಗೂ ಗೊತ್ತಿದೆ. ಅದೂ ಒಂದು ಸಾಧನೆ ಎಂದು ನಾವು ಹೇಳಬಹುದು. ಮಾನ್ಯ ಮೊಯಿಲಿಯವರು ಹೇಳುವುದಾದರೆ, ಅವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಮಾನ್ಯ ಸಾಂಧ್ರಾರವರೂ ಮಂತ್ರಿಗಳಾಗಿದ್ದರು. ಅವರು ಹೇಳಿದ್ದೇ ಹೇಳಿದ್ದು. ಅವರು ಏನು ಹೇಳಿದರು. ಹೌಸಿಂಗ್ ಬೋರ್ಡ್ ಮುಖಾಂತರ ಆಶ್ರಯ ಯೋಜನೆಯನ್ನು ಮಾಡಿದ್ದರಲ್ಲಿ ಹಣದ ಲೂಟಿಯಾಗಿದೆ, ಅಂತ. ಪತ್ರಿಕೆಗಳನ್ನು ನೋಡುತ್ತಿದ್ದವರಿಗೆ ಏನು ಅನಿಸುತ್ತಿತ್ತು ಎಂದರೆ, ಇವರು ಯಾರನ್ನಾದರೂ ನೇಣುಹಾಕಿಬಿಡುತ್ತಾರೋ ಏನೋ, ಅದರಲ್ಲೂ ಮಾನ್ಯ ತಿಮ್ಮಪ್ಪನವರನ್ನು ನೇಣುಹಾಕಿಬಿಡುತ್ತಾರೋ ಏನೋ ಎನ್ನತಕ್ಕ ಅನುಮಾನ ಬರಬೇಕು. ಏಕೆಂದರೆ ಅವರು ಹೌಸಿಂಗ್ ಬೋರ್ಡ್ ಅಧ್ಯಕ್ಷರಾಗಿದ್ದರು. ಆ ಒಂದು ವೇಳೆಯಲ್ಲಿ ಆ ಸಿಟ್ಟಿನಲ್ಲಿ ಹೇಳುತ್ತಿದ್ದರು. ಅವರು ಮುಖ್ಯಮಂತ್ರಿ ಆಗಿದ್ದಾಗ ನಿಜವಾಗಿಯೂ ಒಂದು ದೊಡ್ಡ ಸಾಧನೆ ಯನ್ನೇ ಮಾಡಿದರು. ಕಾಗೋಡು ತಿಮ್ಮಪ್ಪನವನರನ್ನು ಮಂತ್ರಿಯನ್ನಾಗಿಯೇ ಮಾಡಿಕೊಂಡರು. ಒಳ್ಳೆಯ ವಿಚಾರ. ಅದು ಅವರ ಒಂದು ದೊಡ್ಡ ಸಾಧನೆ. ಜೊತೆಗೆ ಪಟ್ಟಣಗಳಲ್ಲಿ ಶೌಚಾಲಯವನ್ನು ನಿರ್ಮಾಣ ಮಾಡುವ ಕೆಲಸ ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ಶುರುವಾಯಿತೋ ಅಥವಾ ಮಾನ್ಯ ಮೊಯಿಲಿಯವರ ಕಾಲದಲ್ಲಿ ಶುರುವಾಯಿತೋ ಗೊತ್ತಿಲ್ಲ. ಈ ಯೋಜನೆಗೆ ಮಂಜೂರಾದ ಹಣ 28 ಕೋಟಿ 50 ಲಕ್ಷ, 71 ಸಾವಿರದ 437 ರೂ. ಇದರಲ್ಲಿ 6 ಜನ ಕಂಟ್ರಾಕ್ಟರ್‌ಗಳು. ಅಂದರೆ ಕಂಪನಿಗಳು ಏಕೆಂದರೆ ಕಂಟ್ರ್ಯಾಕ್ಟರುಗಳೆಂದು ರಿಜಿಸ್ಟರ್‌ರನ್ನೇ ಮಾಡಿಸಿಲ್ಲ. ಇದಕ್ಕೆ ಸರ್ಕಾರೀ ದಾಖಲೆಯೇ ಇಲ್ಲ. ಆ 6 ಜನರ ಜೊತೆ 4 ಜನರು ಸೇರಿ ಒಟ್ಟು 10 ಜನರಿಗೆ ಇವರು ಎಷ್ಟು ಹಣವನ್ನು ಕೊಟ್ಟಿದ್ದಾರೆಂದರೆ, 28, 50, 71, 437 ರೂ.ಗಳನ್ನು ಅಡ್ವಾನ್ಸ್ ಕೊಟ್ಟಿದ್ದಾರೆ. ಅಪರಾಧಿಗಳು ಯಾರು? ಎನ್‌ಕ್ವೈರಿ ಏನಾಯಿತು? ಮೊಯಿಲಿಯವರು ಅವರನ್ನು ಏನು ಮಾಡಿದರು? ಇದೆಲ್ಲಾ ಇವರ ಮಹಾ ಸಾಧನೆಗಳಲ್ಲವೇ? ಎಲ್ಲಿಯೂ ಶೌಚಾಲಯಗಳೇ ಆಗಿಲ್ಲ. ಆ ಪ್ರಶ್ನೆ ಬೇರೆ. 38 ಪಟ್ಟಣಗಳಲ್ಲಿ ಎಲ್ಲೂ

ಕೂಡ ಶೌಚಾಲಯಗಳಿಲ್ಲ. ಅವುಗಳನ್ನು ನಾವು ಹುಡುಕಬೇಕಾಗಿದೆ. ಅಲ್ಲೆಲ್ಲೋ ಬಿದ್ದಿದ್ದ ಹಳೇ ಪೈಪುಗಳನ್ನು ಜೋಡಿಸಿಯೋ ಏನೋ ಮಾಡಿದ್ದಾರೆ. ಅದು ಏನಾಯಿತು? ನಾನು ಏತಕ್ಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಈ ಸಾಧನೆಗಳ ಬಗ್ಗೆ ನಿಮ್ಮ ಈ ಸರ್ಕಾರ ಅನಿಸಿಕೆಗಳು ಏನೆಂಬುದು ನಮಗೆ ಅರ್ಥವಾಗಬೇಕು. ನೀವು ಏನು ಮಾಡುತ್ತೀರಿ ಅಪರಾಧಿಗಳಿಗೆ ಮಾನ್ಯ ಮೊಯಿಲಿಯವರು ಬಹುಮಾನಗಳನ್ನು ಕೊಟ್ಟರು. ಹೌಸಿಂಗ್ ಬೋರ್ಡ್ ಅಧ್ಯಕ್ಷರನ್ನು ಮಂತ್ರಿಯನ್ನಾಗಿಯೇ ಮಾಡಿಕೊಂಡರು. ಮಾನ್ಯ ಬಂಗಾರಪ್ಪನವರಿಗೆ ಒಂದು ಮಾತನ್ನು ನಾನು ಹೇಳಿದ್ದೆ. ಒಬ್ಬನಿಗೆ ಮೇಸ್ತ್ರಿ ಕೆಲಸ ಮಾಡುವುದಕ್ಕೆ ಬರುವುದಿಲ್ಲ ಅವರನ್ನು ಹೆಡ್‌ಮಾಸ್ಟರ್ ಆಗಿ ಮಾಡಿ ಎಂದು. ನಾನು ಒಮ್ಮೆ ನಮ್ಮ ಅಡ್ವೋಕೇಟ್ ಜನರಲ್‌ರವರ ಬಗ್ಗೆ ಮಾತನಾಡುವಾಗ ಈ ಮಾತನ್ನು ಹೇಳಿದ್ದೆ. ಮಾನ್ಯ ಮೊಯಿಲಿಯವರೂ ಅದನ್ನೇ ಮಾಡಿದರು. ನೀವು ಏನು ಮಾಡಿದಿರಿ ಎಂಬುದು ನಮಗೆ ಅರ್ಥವಾಗಬೇಕಲ್ಲಾ. ಅದಕ್ಕೋಸ್ಕರ ನಾನು ಪ್ರಾಸ್ತಾವಿಕವಾಗಿ ಅದನ್ನು ಪ್ರಸ್ತಾಪ ಮಾಡಿದೆ. ರೆಫರನ್ಸ್‌ಗೆ ನಾನು ಅನೇಕ ದಾಖಲೆಗಳನ್ನು ತಂದಿದ್ದೆ. ಆದರೆ ಕಾಲಾವಕಾಶ ಇಲ್ಲದಿರುವುದರಿಂದ ಬಹಳ ಬ್ರೀಫ್ ಆಗಿ ಹೇಳುತ್ತೇನೆ ನಿಮಗೆ ಎಲ್ಲವೂ ಗೊತ್ತಾಗುತ್ತದೆ. ನಾವು ಶುರು ಮಾಡಿದರೆ ಯಾವ ರಾಗ ಎಂದು ಗೊತ್ತಾಗುತ್ತದೆ. ಆದಿತಾಳವೋ, ಜಂಪ ತಾಳವೋ, ಎಂಬುದು ಗೊತ್ತಾಗುತ್ತದೆ. ಇದು ಹೊಸದೇನೂ ಅಲ್ಲದೇ ಇರುವುದರಿಂದ ನಾನು ಮತ್ತೆ ಇದನ್ನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮೊಯಿಲಿಯವರ ಸಾಧನೆಗಳ ಬಗ್ಗೆ ಪತ್ರಿಕೆಗಳಲ್ಲಿ ಒಂದು ಮಾತು ಬಂದಿದೆ. ಆದೇನೆಂದರೆ,

"Chief Minister Veerappa Moily entering into a clandestine agreement with the India Hotels Company Ltd for transferring valuable land and other properties of the State worth a few hundred crores of rupees to the Taj Group of Hotels under the disguise of promoting tourism despite serious objection raised by the department of Finance and Law.

ಎಲ್ಲಿತ್ತು ಇವರ ಸಾಧನೆ? ಈ ಸಾಧನೆಯನ್ನು ನಾನೇನೂ ಹೇಳುತ್ತಿಲ್ಲ. ಈ ಸಾಧನೆಯನ್ನು ಹೇಳಿದವರು ಯಾರು ಎಂದರೆ, ಜನತಾದಳದ ಉಪಾಧ್ಯಕ್ಷರು. ಅವರು ಈ ಸಾಧನೆಗಳ ಬಗ್ಗೆ ಪತ್ರಿಕಾ ಗೋಷ್ಠಿಯನ್ನು ಕರೆದು ಮಾತನಾಡಿದರಂತೆ. ಇದರ ಬಗ್ಗೆ ನಿಮ್ಮ ಸರ್ಕಾರದ ಪ್ರತಿಕ್ರಿಯೆ ಏನು? ನೀವು ಏನು ಮಾಡುವವರಿದ್ದೀರಿ? ಅದು ಯಾವ ಹಂತದಲ್ಲಿದೆ? M.O.U.ಗೆ ಸೈನ್ ಆಗಿತ್ತೆ? ಸೈನ್ ಆಗಿದ್ದುದು ಏನಾಯಿತು? ಈ ಸಾಧನೆಗಳ ಬಗ್ಗೆಯೂ ತಾವು ಹೇಳಿದರೆ ಸೂಕ್ತ ನಾನು ಅಲ್ಲೊಂದು ಇಲ್ಲೊಂದು ಏತಕ್ಕೆ ಹೇಳುತ್ತಿದ್ದೇನೆಂದರೆ, ಅನಿವಾರ್ಯವಾಗಿ ನಾವು ವಿವಿಧ ಇಲಾಖೆಗಳ ಮೇಲಿನ ಬೇಡಿಕೆಯ ಚರ್ಚೆಯನ್ನು ಕೈಬಿಟ್ಟಿದ್ದೇವೆ. ಆದ್ದರಿಂದ ನಾವು ಅಲ್ಲೊಂದು, ಇಲ್ಲೊಂದು ವಿಚಾರಗಳನ್ನು ಹೇಳಬೇಕಾಗುತ್ತದೆ. ಮಧ್ಯೆ ಮಧ್ಯೆ ಮಂತ್ರಿಗಳು, ಉಪ ಮುಖ್ಯಮಂತ್ರಿಗಳೂ ಪ್ರವೇಶ ಮಾಡಿ ಅವರ ಸಾಧನೆಗಳನ್ನು ಹೇಳುತ್ತಾರೆ. ಜೊತೆಗೆ ಈ ಬಜೆಟ್ ಪುಸ್ತಕದಲ್ಲಿ 89ನೇ ಇಸವಿಯವರೆಗೂ ಅವರ ಸಾಧನೆಗಳ ಬಹಳ ಭಾರಿಯಾಗಿದ್ದುವು ಅನಂತರ ಟ್ರ್ಯಾಕ್ ತಪ್ಪಿತು ಎನ್ನುವ ಮಾತನ್ನೂ ಹೇಳಿದ್ದಾರೆ. ನಿಮ್ಮ ಸಾಧನೆಗಳ ಬಗ್ಗೆಯೂ ನಾವು ಹೇಳುತ್ತೇವೆ. ಆದರೆ 83 ರಿಂದ 89ರವರೆಗೆ ನಿಮ್ಮ ಸರ್ಕಾರ

ಅಧಿಕಾರದಲ್ಲಿದ್ದುದರಿಂದ ಅದರ ಸಾಧನೆ ಮತ್ತಿತರ ವಿಚಾರಗಳ ಬಗ್ಗೆ ಈ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಚರ್ಚೆ ಆಗದೇ ಇರತಕ್ಕ ಒಂದೆರಡು ವಿಚಾರಗಳ ಬಗ್ಗೆ ನಾವು ಹೇಳಬೇಕಾಗುತ್ತದೆ. ಅವರಲ್ಲಿ ಪ್ರಮುಖವಾಗಿದ್ದುದರಿಂದ ಅದರ ಸಾಧನೆ ಮತ್ತಿತರ ವಿಚಾರಗಳ ಬಗ್ಗೆ ಈ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಚರ್ಚೆ ಆಗದೇ ಇರತಕ್ಕ ಒಂದೆರಡು ವಿಚಾರಗಳ ಬಗ್ಗೆ ನಾವು ಹೇಳಬೇಕಾಗುತ್ತದೆ. ಅವರಲ್ಲಿ ಪ್ರಮುಖವಾದುದು ಏನೆಂದರೆ ರಾಮಕೃಷ್ಣ ಹೆಗಡೆಯವರು ಮತ್ತು ಜೆ.ಹೆಚ್. ಪಟೇಲರು ಅಂದರೆ ಆಗಿನ ಮುಖ್ಯಮಂತ್ರಿಗಳು ಮತ್ತು ವಿದ್ಯುತ್ ಮಂತ್ರಿಗಳು ಕೇರಳ ರಾಜ್ಯದಿಂದ 1.35 ಮಿಲಿಯನ್ ಯೂನಿಟ್ಸ್ ಪವರ್ ಆನ್ ಡೈಲಿ ಬೇಸಿಸ್ ನಮ್ಮ ಕರ್ನಾಟಕಕ್ಕೆ ಬರುತ್ತಿತ್ತು. ಇದನ್ನು ಯಾರಿಗೋಸ್ಕರ ತಂದರು? ಈಗ 1.36 ಮಿಲಿಯನ್ ಯೂನಿಟ್ಸ್ ಬೆಂಗಳೂರು ವಾಟರ್ ಸಪ್ಲೈ ಬೋರ್ಡ್‌ಗೆ ಬೇಕಾಗಿದೆ. ಕೇವಲ ಇವತ್ತೇ ಅಲ್ಲ ಅವತ್ತೂ ಕೂಡ ಕರೆಂಟ್ ಇಲ್ಲ ಎಂಬ ಕೂಗು ಇದ್ದೇ ಇತ್ತು. ಪವರ್ ಸಪ್ಲೈ ಇಲ್ಲ, ನೀರನ್ನು ಪಂಪ್ ಮಾಡುವುದಕ್ಕಾಗುತ್ತಿಲ್ಲ ಎಂದು ದೂರುಗಳು ಇದ್ದೇ ಇದ್ದವು. ಆದರೂ ಇವರು ತಂದರು. ಇದನ್ನು ಯಾರಿಗೋಸ್ಕರ ತಂದರು. ಕೆಲವು ಖಾಸಗೀ ಕೈಗಾರಿಕೋದ್ಯಮಿಗಳಿಗೋಸ್ಕರ ತಂದರು. ಅವರಲ್ಲಿ ಗ್ರ್ಯಾಫಿಕ್ ಇಂಡಿಯಾ ಲಿಮಿಟೆಡ್‌ನವರಿಗೆ ಬಲ್ಕ್ ಕನ್‌ಸಂಷನ್. ಒಬ್ಬರೂ ಮುಖ್ಯಮಂತ್ರಿ, ಒಬ್ಬರು ವಿದ್ಯುತ್ ಮಂತ್ರಿ ತಮ್ಮ ಸ್ಥಾನ ಬಲವ, ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಪರರಾಜ್ಯದಿಂದ ಕರೆಂಟನ್ನು ತಂದರು. ಅದು ಬಹಳ ಗಂಭೀರವಾಯಿತು. ಆ ರಾಜ್ಯಗಳಲ್ಲಿ ಆ ಮಂತ್ರಿ ಕ್ಲಾಂಡೆಸ್ಟೈನ್ ಡೀಲ್ ಮಾಡಿದ್ದಾರೆಂದು ಕೇಸ್ ಬುಕ್ ಮಾಡಿದ್ದಾರೆ. ಆದರೆ ಅಷ್ಟಕ್ಕೆ ಅದು ನಿಂತಿಲ್ಲ. ಶ್ರೀಮಾನ್ ಹೆಗ್ಡೆಯವರಿಗೂ, ಶ್ರೀಮಾನ ಜೆ.ಹೆಚ್. ಪಟೇಲರವರಿಗೂ ವಿಟ್ನೆಸ್ ಬಾಕ್ಸ್‌ಗೆ ಕರೆದಿದ್ದಾರೆ. ಅದಕ್ಕೆ ಹೋಗಲು ಮಾನ್ಯ ಹೆಗಡೆಯವರೂ ಒಪ್ಪಿಕೊಂಡಿದ್ದಾರೆ. ಅದು ನಮಗೆ ಗೊತ್ತಾಗಬೇಕಲ್ಲ! ನಮ್ಮ ಮಾಜಿ ಮುಖ್ಯಮಂತ್ರಿ ಅಬೆಟರೋ, ಕಂಡ್ಯೂಟೋ, ಅಪರಾಧಿಯೋ.........

ಒಬ್ಬ ಮಾನ್ಯ ಸದಸ್ಯರು : ಪಾಯಿಂಟ್ ಆಫ್ ಆರ್ಡರ್. ಮಾನ್ಯ ಹೆಗಡೆಯವರು ಇಲ್ಲಿ ಇಲ್ಲದಿರುವುದರಿಂದ ಅವರ ಬಗ್ಗೆ ಈಗ ಪ್ರಸ್ತಾಪ ಮಾಡತಕ್ಕದ್ದು ಅನಗತ್ಯ. ಆ ಪಕ್ಷಕ್ಕೆ ಮಾನ್ಯ ನಂಜೇಗೌಡರು ಸೇರಿದ್ದರು, ಈಗ ಅದನ್ನು ಬಿಟ್ಟು ಬೇರೆ ಹೋಗಿದ್ದಾರೆ. ಅದನ್ನು ಅವರು ಗಮದಲ್ಲಿಟ್ಟುಕೊಳ್ಳಬೇಕು.

ಶ್ರೀ ಬಿ.ಆರ್. ಕೃಷ್ಣಮೂರ್ತಿ : ಮಾನ್ಯ ನಂಜೇಗೌಡರು ಜನತಾ ದಳದಲ್ಲಿದ್ದರು.

SRI H.N. NANJEGOWDA : I am an all rounder. I am going in search of good people, good people. I have come to the good company now.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೊನ್ನೆ ತಾನೇ ಜಾಯಿನ್ ಆಗಿದ್ದಾರೆ. ಇನ್ನೂ ನೋಡಬೇಕಲ್ಲ.

MR. SPEAKER : So for so good ಎಂದು ಹೇಳಲಿಲ್ಲವೆ?

ಶ್ರೀ ಹೆಚ್. ಎನ್.ನಂಜೇಗೌಡ : ಪ್ರಶ್ನೆ ಏನೆಂದರೆ, ಅಲ್ಲಿಂದ ಕರೆಂಟ್‌ನ್ನು ಖಾಸಗಿಯವರಿಗಾಗಿ ತರುತ್ತಾರೆ, ತಂದು ಗ್ರಾಫೈಟ್‌ನವರಿಗೆ, ಸರಾಯಿ ಮಾಡುವಂಥ ಖಾಸಗಿ ಕೈಗಾರಿಕೋದ್ಯಮಿಗಳಿಗೆ ಎಷ್ಟಕ್ಕೆ ಕರೆಂಟ್ ಮಾರಾಟ ಮಾಡಿದ್ದೀರಿ? ಕೆಇಬಿ, ಇದೆ, ನೆಟ್‌ವರ್ಕ್ ಇದೆ. ಈ ಒಂದು ಆಸ್ತಿ ಇದು ಸೃಷ್ಟಿ ಆಗಬೇಕಾದರೆ, ಇಲ್ಲಿ ಇರಬೇಕಾದರೆ ರಾಜ್ಯದಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗುತ್ತದೆ. ರಾಜ್ಯದ ಸಾಮಾನ್ಯ ಜನ ಸಾಕಷ್ಟು ತೆರಿಗೆಯನ್ನು ಕೊಟ್ಟಿದ್ದಾರೆ. ಇದನ್ನು ಉಪಯೋಗಿಸಿಕೊಂಡು ಖಾಸಗಿಯವರಿಗೆ ಕೊಟ್ಟಿದ್ದಾರೆ. ಒಂದು ಯೂನಿಟ್ ಅನ್ನು ಎಷ್ಟಕ್ಕೆ ಕೊಟ್ಟಿರಿ? ಬೇರೆಯವರಿಗೆ ಎಷ್ಟಕ್ಕೆ ಕೊಡುತ್ತಿದ್ದೀರಿ? ಗ್ರಾಫೈಟ್ ಆಫ್ ಇಂಡಿಯ ಲಿಮಿಟೆಡ್‌ನ 8 ಜನರಿಗೆ 1.35 ಮಿಲಿಯನ್ ಯೂನಿಟ್ ಅನ್ನು ಯಾವ ರೇಟಿನಲ್ಲಿ ಕೊಟ್ಟಿರಿ? ಇದನ್ನು ನಾವು ಕೇಳುವುದು ಬೇಡವೆ? 64 ಪೈಸೆ ಹಾಗೆ ಒಂದು ಯೂನಿಟ್‌ಗೆ ಕೊಡುತ್ತೀರಿ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವುದನ್ನು ಕೇಳಿದರೆ ನಂಜೇಗೌಡರಿಗೆ ಕಾನೂನು ಗೊತ್ತಿದೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ, ಕೆಲವು ಉದ್ದಿಮೆಗಳಿಗೆ ಬೇರ ರಾಜ್ಯಗಳಿಂದ ವಿದ್ಯುತ್ ಕೊಂಡುಕೊಂಡು ಬಂದು ನಾವು ಇಲ್ಲಿ ಸರಬರಾಜು ಮಾಡುತ್ತೇವೆ, ಅದಕ್ಕೆ ಹತ್ತು ಪರ್ಸೆಂಟ್ ಕಮಿಷನ್ ತೆಗೆದುಕೊಳ್ಳುತ್ತೇವೆಂದು ಹಿಂದೆಯೂ ಹೇಳಿದ್ದಾರೆ, ಈಗಲೂ ಹೇಳುತ್ತೇವೆ. ಈಗಲೂ ಕಾನೂನು ಜಾರಿಯಲ್ಲದೆ. ಗ್ರಾಫೈಟ್ ಆಫ್ ಇಂಡಿಯದವರು ಕೇರಳಕ್ಕೆ ಹೋಗಿ ಕರೆಂಟ್ ತಂದಿದ್ದಾರೆ. ಕೇರಳ ಎಲೆಕ್ಟ್ರಿಸಿಟಿ ಬೋರ್ಡಿನ ದರ ನನಗೆ ಗೊತ್ತಿಲ್ಲ. ಉದ್ಯಮ ನಮ್ಮಲ್ಲಿ ಇದೆ That is a power intensive industry. We were about to ask them to leave the State. ನಾವು ಬದುಕುವುದಕ್ಕೆ ಕೇರಳದಿಂದ ಕೊಂಡು ಕೊಂಡು ಬರುತ್ತೇವೆ, ಇಷ್ಟು ಸಹಾಯ ಮಾಡಿ ಎಂದರೆ ಇಲ್ಲ ಹೋಗು ಎಂದು ಹೇಳುತ್ತೀರಾ? ಮಾನ್ಯ ರಾಮಕೃಷ್ಣ ಹೆಗಡೆಯವರು ಮಾಡಿದರೋ ಅಥವಾ ನಾನು ಫಿಕ್ಸ್ ಮಾಡಿದೆನೋ? ಕೇರಳ ಕೋರ್ಟಿನಲ್ಲಿ ಏನು ಕೇಸ್ ಫೈಲ್ ಮಾಡಿದ್ದಾರೆಂದರೆ ಅಂದಿನ ರೇಟಿಗೆ ಹೋಲಿಸಿದರೆ ಭಾರಿ ಕಡಿಮೆ ರೇಟಿಗೆ ಗ್ರಾಫೈಟ್ ಆಫ್ ಇಂಡಿಯಾ ಅವರಿಗೆ ಕೊಟ್ಟಿದ್ದಾರೆಂದು ಅಲಿಗೇಷನ್ ಇದೆ. ಆ ಕೋರ್ಟಿನಿಂದ ಸಮನ್ಸ್ ಬಂದಿತ್ತು. ನಾನು ಯಾರೋ ಒಬ್ಬ ವಕೀಲರಿಗೆ ಹೇಳಿದೆ. ಕೋರ್ಟಿನಿಂದ ಸಮನ್ಸ್ ಬರುವುದು, ಕೇಸ್ ಹಾಕುವುದು ಬಹಳ ದೊಡ್ಡ ಅಪರಾಧವೆ? ಕೇರಳದ ಗ್ರಿಡ್‌ನಿಂದ ನಮಗೆ ತಿಳಿಸಿ ಯೂನಿಟ್ ಕಾಸ್ಟ್ ಅನ್ನು ಅವರೇ ಫಿಕ್ಸ್ ಮಾಡಿಕೊಂಡದ್ದು. We have nothing to do with it.

ಶ್ರೀ ಹೆಚ್.ಎನ್. ನಂಜೇಗೌಡ : ಇದು ಅವರು ಹೇಳುವಷ್ಟು ಸುಲಭವಾಗಿಲ್ಲ. ಏಕೆಂದರೆ ಕರ್ನಾಟಕದ ಮಾಜಿ ಮುಖ್ಯ ಮಂತ್ರಿಗಳು ವಿಟ್‌ನೆಸ್ ಬಾಕ್ಸ್‌ನಲ್ಲಿ ನಿಂತು ಕೊಳ್ಳುವುದಕ್ಕೆ ಒಪ್ಪಿಕೊಂಡು ಆಗಿದೆ. ಮಾನ್ಯ ಪಟೇಲರು ಯಾವಾಗ ಹೋಗಿದ್ದರು ಕೇರಳದ ಮಂತ್ರಿಗಳ ಜೊತೆ ಮಾತನಾಡುವುದಕ್ಕೆ ಅದೆಲ್ಲ ನಾನು ಹೇಳಬಲ್ಲೆ. ನೀವು ನನ್ನನ್ನು ಕೆಡುಕುವುದರಿಂದ ಉಪಯೋಗ ಇಲ್ಲ.

ಶ್ರೀ ಜೆ.ಹೆಚ್.ಪಟೇಲ್: ಏನು ರೇಟ್ ಫಿಕ್ಸ್ ಮಾಡಿದ್ದಾರೆಂದು ನಮಗೆ ಗೊತ್ತಿಲ್ಲ. ಕೇರಳದ ಮಂತ್ರಿಗಳು ಬಂದಿದ್ದರು ನನ್ನ ಮನೆಗೆ ಬಂದಿದ್ದರು........

ಶ್ರೀ ಹೆಚ್. ಎನ್.ನಂಜೇಗೌಡ : ಬೆಂಗಳೂರು ನೀರು ಸರಬರಾಜಿಗೆ ಕರೆಂಟ್ ಇಲ್ಲದಿದ್ದಾಗ?

ಶ್ರೀ ಜೆ.ಹೆಚ್. ಪಟೇಲ್ : ಬೆಂಗಳೂರು ವಾಟರ್ ಸಪ್ಲೈ ನಿಂತದ್ದು ಕರೆಂಟ್ ಇರಲಿಲ್ಲ ಎಂದು.

ಶ್ರೀ ಹೆಚ್.ಎನ್. ನಂಜೇಗೌಡ : ರೈತರ ಪಂಪುಸೆಟ್ಟಿಗೆ ಎಷ್ಟು ಲೋಡ್ ಇರುತ್ತದೆಂದು ಎಲ್ಲರಿಗೂ ಅನುಭವ.

ಶ್ರೀ ಆರ್.ವಿ. ದೇಶಪಾಂಡೆ : ತಾವೇ ಹೇಳುತ್ತಿದ್ದೀರಿ, ಹೆಗಡೆಯವರನ್ನು ಮತ್ತು ಜೆ.ಹೆಚ್. ಪಟೇಲರನ್ನು ವಿಟ್‌ನೆಸ್‌ಗೆ ಕರೆದಿದ್ದಾರೆಂದು. ವಿಟ್‌ನೆಸ್‌ಗೆ ಕರೆದರೆ ಏನು ತಪ್ಪಿದೆ? ಅಬೇಟರ್ ಇರಬೇಕಾದರೆ, ವಿಟ್‌ನೆಸ್ ಇರಬೇಕಾದರೆ ಯಾರು ಕಂಪ್ಲೈಂಟ್ ಮಾಡಿದ್ದಾರೆ. They would not have asked them to appear as witnesses. they also rely them as witnesses.

ಶ್ರೀ ಹೆಚ್.ಎನ್. ನಂಜೇಗೌಡ : ಅವರು xx ಮಾಡುತ್ತಿದ್ದರೆ ಮುಖ್ಯ ಮಂತ್ರಿಗಳು ನೋಡಿಕೊಂಡು ಕುಳಿತಿದ್ದರು ಅಂದುಕೊಳ್ಳೋಣ...

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಇಷ್ಟು ದಿನ ಮಲಗಿದ್ದೀರಾ ? Sir, I object. He should withdraw that.

(ಗೊಂದಲ)

ಇದರ ಬಗ್ಗೆ ಎಷ್ಟು ಲಘುವಾಗಿ ಮಾತನಾಡುತ್ತಿದ್ದೀರಿ? You should have made this charge long back. Sir, it should go out of record.

MR. SPEAKER : I will examine.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ನಂಜೇಗೌಡರಂಥ ಮಾನ್ಯ ಸದಸ್ಯರು ಇದರ ಬಗ್ಗೆ ಸಾಕಷ್ಟು ಅನುಭವ ಇರುವವರು ಮೊದಲು ಏನು ಹೇಳಿದರು ಅಂದರೆ ಸ್ಲೋ, ಅಂದ ತಕ್ಷಣ ರಾಗ ಗೊತ್ತಾಗುತ್ತದೆ. ಆ ತಾಳ ಈ ತಾಳ ಎಂದು, ಬೇತಾಳ ಆಗಬಾರದು ನೀವು. ಉಳಿದವರಿಗೆ ನಾನು ಇದನ್ನು ಹೇಳುವುದಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಸಾಧನೆ ಹೇಳಿಕೊಂಡಿದ್ದರಲ್ಲಿ ಈ ಸಾಧನೆಯನ್ನು ಹೇಳಬೇಕಾಗಿತ್ತಲ್ಲ. ಗ್ರಾಫೈಟ್ ಆಫ್ ಇಂಡಿಯಾ ಲಿಮಿಟೆಡ್ ಅವರಿಗೆ ನೀವು ಕರೆಂಟ್ ತಂದು ಕೊಟ್ಟು ಇಂಡಸ್ಟ್ರಿ ನಡೆಸುವುದಕ್ಕೆ ಸಹಾಯ ಮಾಡುತ್ತಿದ್ದೀರಿ. ನೀವು ಅದಕ್ಕೆ ಕೇರಳ ಕೋರ್ಟಿನಲ್ಲಿ ಸಾಕ್ಷಿ ಹೇಳುವುದಕ್ಕೆ ಹೋಗುತ್ತೀರಿ ಎಂದು ಹೇಳಿದೆ. ತಾವು ಹೇಳಿದ್ದಕ್ಕೆ ನಾನು ಆ ಮಾತನ್ನು ಹೇಳಿದೆ. ಆದರೆ ತಾವು ಸಿಟ್ಟಿಗೆದ್ದಿರಿ.

ಶ್ರೀ ಎಂ. ಪಿ. ಪ್ರಕಾಶ್ : ಕೇರಳ ಕೆ.ಇ.ಬಿ.ಯವರು ಶೇ. 10ರಷ್ಟು ಕಮೀಷನ್ ತೆಗೆದುಕೊಂಡಿದ್ದಾರೆ ಎಂಬ ಆಪಾದನೆ ಮಾಡತಕ್ಕದ್ದಾಗಲೀ, ಕಳ್ಳತನ ಮಾಡತಕ್ಕದ್ದಾಗಲೀ ಆ ಪ್ರಶ್ನೆ ಉದ್ಭವಾಗುವುದಿಲ್ಲ. ಇದು ತಮಗೆ ಗೊತ್ತಿದ್ದು ಈ ರೀತಿ ಆಪಾದನೆ ಮಾಡುವುದು ಆಗಬಾರದು.

XX ಈ ಪದವನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಹೆಚ್.ಎನ್. ನಂಜೇಗೌಡ : ನೀವು ಇನ್‌ಫ್ಲೂಯೆನ್ಸ್ ಮಾಡುವುದಕ್ಕೆ ನಿಮ್ಮ ಅಧಿಕಾರವನ್ನು ಸಾಕಷ್ಟು ಉಪಯೋಗಿಸಿದ್ದೀರಿ. ನಾನು ಶಾಸಕನಾದಾಗ ಹೇಳಿದ ಮಾತಿಗೆ ಶಾಸಕನಾಗದೇ ಇರುವಾಗ ಹೇಳುವ ಮಾತಿಗೂ ವ್ಯತ್ಯಾಸ ಇರುವುದಿಲ್ಲವೆ? ಒಬ್ಬ ಮುಖ್ಯಮಂತ್ರಿಗಳು ಹೇಳುವ ಮಾತಿಗೆ ಬೇರೆಯವರು ಹೇಳುವ ಮಾತಿಗೂ ಇರುವುದಿಲ್ಲವೇ?

(ಗೊಂದಲ)

SRI M.P. PRAKASH : You are not sound in your arguments, therefore, you want to stop it.

ಶ್ರೀ ಹೆಚ್. ಎನ್. ನಂಜೇಗೌಡ : ನಾನು ಆಪಾದನೆ ಮಾಡಲಿಲ್ಲ. ಈ ಸಾಧನೆ ಹೇಳಿ ಎಂದು. 1983 ರಿಂದ 1989ರವರೆಗೆ ಇರುವಾಗ ಆಯಿತಲ್ಲ. ಇದರ ಬಗ್ಗೆ ಜಂಬ ಕೊಚ್ಚಿಕೊಳ್ಳಿ...

(ಗೊಂದಲ)

ನನಗೆ ಶ್ರೀ ಜೆ.ಹೆಚ್. ಪಟೇಲರದ್ದು ಒಂದು ತಾಪತ್ರಯ. ಈ ಸಂದರ್ಭದಲ್ಲಿ ಅವರ ಒಂದು ಭಾಷಣ ನೆನಪಿಗೆ ಬರುತ್ತದೆ. ಲಾಳ ಯಾರು, ಕುದುರೆ ಯಾರು ಎಂದು. ಖರ್ಗೆಯವರೆ ನೀವು ಇದನ್ನು ತಿಳಿದುಕೊಳ್ಳಬೇಕು. ಒಂದು ದಿನ ಮಾನ್ಯ ಜೆ.ಹೆಚ್. ಪಟೇಲರು ಭಾಷಣ ಮಾಡಿದರು. ಲಾಳಕ್ಕೆ ಏನಪ್ಪ ಕೆಲಸ? ಕುದುರೆ ಇದ್ದರೆ ಲಾಳಕ್ಕೆ ಕೆಲಸ, ಕುದುರೆ ಇಲ್ಲದಿದ್ದರೆ? ನಾನು ಕುದುರೆ ಈ ಲಾಳಕ್ಕೆ ಏನು ಕೆಲಸ ಎಂದರು. ಇವತ್ತು ಅವರೇ ಲಾಳ ಆಗಿದ್ದಾರೆ. ಕುದುರೆ ಬೇರೆಯವರು ಆದರು. ಅದು ಇರಲಿ. ಆ ಬಗ್ಗೆ ಹೆಚ್ಚಿಗೆ ವಿಡಂಬನೆ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಕುದುರೆ ಚೆನ್ನಾಗಿ ಓಡಿದರೆ ಸಾಕು.

ಶ್ರೀ ಹೆಚ್.ಎನ್. ನಂಜೇಗೌಡ : ಏಕೆ, ಕುದುರೆ ಚೆನ್ನಾಗಿ ಓಡುತ್ತದೆಯೋ ಇಲ್ಲವೋ ಎಂದು ಅವರಿಗೆ ಅನುಮಾನವೇ? ಅದು ಏನೇ ಇರಲಿ ಇನ್ನು 1995-96ರ ಬಜೆಟ್ ವಿಚಾರಕ್ಕೆ ಬರೋಣ. ಅವರು ಬೆನ್ನು ಚಪ್ಪರಿಸಿಕೊಂಡದ್ದು, ಇವರ ಬೆನ್ನು ಇವರೇ ಚಪ್ಪರಿಸಿಕೊಂಡದ್ದು ಎಲ್ಲಾ ಪ್ರಸ್ತಾಪ ಮಾಡಿದ್ದಾಯಿತು. ಒಂದು ಪ್ರೊಪೋಸಲ್-ಕಾಂಪೊಸಿಟ್ ರೇಟ್ ಫಾರ್ ಅಗ್ರಿಕಲ್ಚರ್ ಇನ್‌ಕಮ್ ಎಂದು ಹಿಂದೆ 250,300 ರೂಪಾಯಿ ಇತ್ತು. ಇದು ವಸೂಲು ಆಗುತ್ತಿರಲಿಲ್ಲ. ಈಗ ಮತ್ತೆ ಹಾಕಿದ್ದಾರೆ. ವ್ಯವಸಾಯಗಾರರ ಮೇಲೆ ಏನು ಚಾರ್ಜ್ ಇದೆ. ಅದನ್ನು ನಾನೀಗ ಓದುವುದಕ್ಕೆ ಹೋಗುವುದಿಲ್ಲ. ಇವತ್ತಿನ ದಿವಸ ಬೆಂಗಳೂರಿನವರ ಮೇಲೆ ಬೇರೆ ತೆರಿಗೆ ಹಾಕಿದ್ದೀರಿ.

ಶ್ರೀ ಸಿದ್ದರಾಮಯ್ಯ : ವ್ಯವಸಾಯಗಾರರ ಮೇಲೆ ಅಲ್ಲ. ಕಾಫಿ ಪ್ಲಾಂಟರ್‌ಗಳ ಮೇಲೆ ಅಷ್ಟೇ.

ಶ್ರೀ ಹೆಚ್. ಎನ್. ನಂಜೇಗೌಡ : ವ್ಯವಸಾಯಗಾರರು ಅಂದರೆ ಎಲ್ಲಾ ವ್ಯವಸಾಯ ಮಾಡತಕ್ಕ ರೈತರಿಗೆ ಅನ್ವಯವಾಗುತ್ತದೆ.

ಶ್ರೀ ಬಿ.ಬಿ. ಶಿವಪ್ಪ : ಇವರು ರೈತರಲ್ಲವೇ?

ಶ್ರೀ ಸಿದ್ದರಾಮಯ್ಯ : ಇದು ಕಾಫಿ ಬೆಳೆಯತಕ್ಕ ರೈತರಿಗೆ ಅಷ್ಟೇ.

11.40 ಎ.ಎಂ

ಶ್ರೀ ಎಚ್.ಎನ್. ನಂಜೇಗೌಡ : ಓದಿದ್ದು ಪ್ಯಾರಾ 151. ನಾನು ಏತಕ್ಕೆ ಹೇಳುತ್ತೇನೆ ಅಂದರೆ...

ಶ್ರೀ ಸಿದ್ದರಾಮಯ್ಯ : ಅಗ್ರಿಕಲ್ಚರ್ ಇನ್‌ಕಂ ಟ್ಯಾಕ್ಸ್ ಎಂದು ಬರುವುದರಿಂದ ಬೇರೆ ಎಲ್ಲಾ ಎಗ್ಜೆಂಪ್ಟ್ ಆಗಿದೆ.

ಶ್ರೀ ಎಚ್.ಎನ್. ನಂಜೇಗೌಡ : ಕಾಫಿ ತೋಟದವರು ಎರಡು ವರ್ಷಗಳ ಹಿಂದೆ ಎಷ್ಟು ಸಾಲ ಮಾಡಿಕೊಂಡಿದ್ದರು ಎಲ್ಲೆಲ್ಲಿ ಆಸ್ತಿ ಏನು ಮಾಡಿದ್ದರು ಎಲ್ಲಾ ನನಗೆ ಗೊತ್ತಿದೆ. ನಾನೂ ಹಾಸನ ಜಿಲ್ಲೆಯಿಂದ ಬರುವವನು. ಈಗ ಎರಡು ವರ್ಷಗಳಿಂದ ರೇಟ್ ಏರಿದೆ. ಹಳೇ ಸಾಲ ತೋರಿಸಿಕೊಳ್ಳುವುದಕ್ಕೆ ಅವರಿನ್ನೂ ಕಷ್ಟಪಡುತ್ತಿದ್ದಾರೆ. ಅವರು ಮುಗ್ಗುರಿಸಲಿ ಎಂಬುದು ನಿಮ್ಮ ಅಪೇಕ್ಷೆ. ಇರಲಿ. ನಾನು ಏತಕ್ಕೆ ಈ ವಿಚಾರ ತೆಗೆದುಕೊಂಡೆ ಎಂದರೆ ಈ ಬಜೆಟ್ ಮಣ್ಣಿನ ಮಕ್ಕಳಾದ ದೇವೇಗೌಡರ ಹಿತೈಷಿಗಳು ಮಾಡಿರತಕ್ಕ ಬಜೆಟ್ ಅಲ್ಲ. ಅವರ ಹಿತಶತ್ರುಗಳು ತಯಾರು ಮಾಡಿರುವಂಥ ಬಜೆಟ್ ಎಂದು ನಾನು ಭಾವನೆ ಮಾಡುತ್ತೇನೆ. ಯಾವುದೇ ಕೇಳಲಿ ರಿಸೋರ್ಸ್ ಇಲ್ಲ. ದುಡ್ಡು ಸಾಲದು. ಟ್ಯಾಕ್ಸ್ ಹಾಕುತ್ತೇವೆ ಎಂದು ಹೇಳುತ್ತಾರೆ. ಅಧ್ಯಕ್ಷರೇ, ಸರ್ಕಾರ ಅನ್ನಿಸಿಕೊಂಡವರು ? ಲೂಟಿ ಆಗುವುದನ್ನು ನೋಡಬೇಡವೇ ಹೊಸದಾಗಿ ತೆರಿಗೆ ಹಾಕಿ ಹಾಕಿ ಜನಗಳ ಜೇಬು ಕತ್ತರಿಸುವುದನ್ನೇ ನೋಡುತ್ತೀರೋ ಅಥವಾ ಸರ್ಕಾರ ಕತ್ತರಿಸುವ ಜನರನ್ನು ನೋಡುತ್ತೀರೋ ನೀವು. ಅವರನ್ನೂ ನೋಡಬೇಕಲ್ಲ. ಸ್ವಾಮಿ ಅಧ್ಯಕ್ಷರೇ, "Government orders probe into 1000 crore land deal" ಇದನ್ನು ಯಾರು ಹೇಳಿದವರು ಜಾಲಪ್ಪನವರೇ? ನೀವೇ ಹೇಳಿದ್ದೀರಿ. "Police Commissioner orders probe" into DCP's connivence with land grabbers" ಎಂದು ಮಾಡಿದಿರಿ ಎನ್‌ಕ್ವೈರಿ? ಕಮಿಷನರ್ ಹೇಳುತ್ತಾರೆ - The Commissioner was made to eat his humble pie and give statement that the concerned DCP is not responsible. ಗೊತ್ತಾಗಬೇಕಲ್ಲ ಇವರ ಆಡಳಿತ ವೈಖರಿ ನಮಗೆ, ಏನೇನು ಮಾಡುತ್ತಾರೆ ಎಂಬುದು ಗೊತ್ತಾಗಬೇಕಲ್ಲ. ಈಗ ಸ್ವಾಮಿ ಅಧ್ಯಕ್ಷರೇ, ತಮ್ಮ ಮುಖಾಂತರ ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಉಪಮುಖ್ಯಮಂತ್ರಿಗಳಿದ್ದಾರೆ. ರೆವಿನ್ಯೂ ಮಿನಿಸ್ಟರ್ ಇದ್ದಾರೆ. ಏತಕ್ಕೆ ಹೇಳುತ್ತೇನೆ ಎಂದರೆ ಎಲ್ಲಾ ಪಟ್ಟಣಗಳಲ್ಲಿ ಇವತ್ತು ದೇವಸ್ಥಾನದ ಜಮೀನು ಸರ್ಕಾರಿ ಜಮೀನು, ಕಾರ್ಪೋರೇಷನ್ ಜಮೀನು ಯಾವುದು ಉಳಿದುಕೊಂಡಿದೆ? ಎಷ್ಟೆಷ್ಟು ರೆಕಾರ್ಡ್ಸ್ ತಿದ್ದಿ ಲೂಟಿ ಮಾಡಿದ್ದಾರೆ? ಸ್ಮಶಾನಗಳು ಸೈಟ್ ಮಾಡಿ ಎಷ್ಟೆಷ್ಟು ಲೂಟಿ ಮಾಡಿದ್ದಾರೆ? ದಯಮಾಡಿ ಸ್ಪೆಷಲ್ ಡೆಪ್ಯೂಟಿ ಕಮಿಷನರ್‌ನ್ನು ಹಾಕಿ ಪ್ರತಿ ಜಿಲ್ಲೆಗೆ ಆದಷ್ಟು ಜಾಗ್ರತೆ ಅವರಿಗೆ ಅಸಿಸ್ಟ್ ಮಾಡುವುದಕ್ಕೆ ಬೇಕಾದಂಥ ಸ್ಟಾಫ್ ಕೊಟ್ಟು ಎನ್‌ಕ್ವೈರಿ ಮಾಡಿಸುತ್ತೀರಾ? ನಿಮಗೆ ಪ್ರಾಮಾಣಿಕವಾಗಿ ಕೆಲಸಗಳು ಆಗಬೇಕು ಅಂದರೆ ಎನ್‌ಕ್ವೈರಿ ಮಾಡಿಸುತ್ತೀರಾ ನೀವು?

ಶ್ರೀ ಆರ್.ಎಲ್. ಜಾಲಪ್ಪ : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ನಂಜೇಗೌಡರು ಬಹಳ ಒಂದು ಗಂಭೀರವಾದ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದು ಸರ್ಕಾರದ ಗಮನಕ್ಕೂ ಈಗಾಗಲೇ

ಬಂದಿದೆ. ಹಲವಾರು ಕಡೆಗಳಲ್ಲಿ ನಾವು ಎನ್‌ಕ್ವೈರಿ ಗೂ ಕೂಡ ಆರ್ಡರ್ ಮಾಡಿದ್ದೇವೆ. ಮತ್ತು ಒಂದು ಯೋಜನೆ ಕೂಡ ನಮ್ಮಲ್ಲಿದೆ. ಅದೇನೆಂದರೆ ಪ್ರತಿಯೊಂದು ಜಿಲ್ಲೆಗೆ ಒಬ್ಬ ಸ್ಪೆಷಲ್ ಡೆಪ್ಯೂಟಿ ಕಮೀಷನರ್‌ನ್ನು ಹಾಕಿ 6 ತಿಂಗಳೊಳಗೆ ಪ್ರತಿಯೊಂದು ಹಳ್ಳಿಗೂ ಹೋಗಿ ನಮ್ಮ ಗೋಮಾಳಗಳು, ಕೆರೆ ಅಂಗಳಗಳು, ಗುಂಡುತೋಪು ಹಾಗೂ ದೇವಸ್ಥಾನದ ಜಮೀನುಗಳು ಎಲ್ಲೆಲ್ಲಿ ಒತ್ತುವರಿಯಾಗಿದೆ, ಯಾರು ಯಾರು ಒತ್ತುವರಿ ಮಾಡಿಕೊಂಡಿದ್ದಾರೆ ಅದರ ಬಗ್ಗೆ ಎಗ್ಸಾಸ್ಟೀವಾಗಿ ಒಂದು ರಿಪೋರ್ಟ್ ಕೊಡಿ ಎಂದು ಕೇಳಬೇಕೆಂದು ಒಂದು ತೀರ್ಮಾನ ತೆಗೆದುಕೊಂಡಿದ್ದೇನೆ. ಇನ್ನು 15 ದಿವಸದಲ್ಲಿ ಈ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ನಾನು ನಂಜೇಗೌಡರಿಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀ ಎಚ್.ಎನ್. ನಂಜೇಗೌಡ : ಎನಕ್ವೈರಿಗೆ ಏನೇನು ಮಾಡಬೇಕು ಇವರು ಎನ್ನುವುದಕ್ಕೆ ಹೇಳುತ್ತೇನೆ. ದುಡ್ಡು ಹೇಗೆ ಹೋಗುತ್ತದೆ? ಖಜಾನೆಗೆ ಹೋಗದೆ ದುಡ್ಡು ಹೇಗೆ ಸೋರಿಹೋಗುತ್ತಿದೆ ಗೊತ್ತೇನು? ಒಂದೇ ಒಂದು ಕೇಸ್ ಹೇಳುತ್ತೇನೆ. ಅಪಾರವಾಗಿದೆ ಅಂಥದ್ದು. ಅದೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ಒಂದೋ ಎರಡೋ ಹೇಳುತ್ತೇನೆ. ಬೆಂಗಳೂರು ಅಧಿಕ ವಿಶೇಷ ಜಿಲ್ಲಾಧಿಕಾರಿಗಳು, ನಗರ ಭೂಪರಿಮಿತಿ, ಕುಮಾರಾಪಾರ್ಕ ಪಶ್ಚಿಮ ಇವರ ನ್ಯಾಯಾಲಯದಲ್ಲಿ. ಕೆಲವು ಪೋಸ್ಟ್ ಇವೆ ಅಧ್ಯಕ್ಷರೆ, ಇವರು ಗುಟ್ಟಾಗಿ ಹರಾಜಿಗಿಟ್ಟರೆ ಆ ಪೋಸ್ಟ್‌ಗಳಿಗೆ ಅಧಿಕಾರಿಗಳು ಎರಡು ಕೋಟಿ ಕೊಡುವವರಿದ್ದಾರೆ. ಏಕೆಂದರೆ ಎರಡು ಕೋಟಿ ಎರಡು ತಿಂಗಳಲ್ಲೇ ಮಾಡಿಕೊಳ್ಳಬಹುದು ಅವರು. ಇದೊಂದು ಉದಾಹರಣೆ ಹೇಳುತ್ತೇನೆ. ಇದರಲ್ಲಿ ಏನಾಗುತ್ತದೆಂದರೆ ಅರ್ಬನ್ ಸೀಲಿಂಗ್‌ಗೆ ಮೀರಿ ದಂಥ ಜಮೀನು. ಮೊದಲು ಇವರು ಸ್ಟೇಟ್‌ಮೆಂಟೂ ಕೊಟ್ಟುಬಿಟ್ಟರು ಇಷ್ಟಿಷ್ಟಿದೆ ಎಂದು. ಅರ್ಬನ್ ಸೀಲಿಂಗ್ ಒಳಗೆ ಬರುವುದಿಲ್ಲ, ಮೇಲೆ ಬರುತ್ತದೆ ಎಂದು ಆಯಿತು. ಸುಮ್ಮನಿದ್ದರು ಪಾಪ. ಆಮೇಲೆ ಒಬ್ಬ ಡೆವಲಪರ್ ಬಂದ ಇವರ ಜೊತೆಗೆ. ಏಕೆಂದರೆ ಅಧ್ಯಕ್ಷರೆ, ಡೆವಲಪರ್ಸ್ ಎಂದರೆ ಸಾಮಾನ್ಯವಾಗಿ ಹೊರಗಿನವರೇ ಇರುತ್ತಾರೆ. ನಮ್ಮ ಅಧಿಕಾರಿಗಳು ಎಷ್ಟು ಬುದ್ಧಿವಂತರು ಅಂದರೆ ತುಂಬಾ ಅವರು ಸುಸಂಸ್ಕೃತರು. ಕೆಲವು ಅಧಿಕಾರಿಗಳು ಇದ್ದಾರಲ್ಲ ಅವರು ಸಾಮಾನ್ಯ ಜನರ ಜೊತೆ ವ್ಯವಹಾರವನ್ನೇ ಮಾಡುವುದಿಲ್ಲ. ಎಲ್ಲಾ ಫೈವ್ ಸ್ಟಾರ್‌ನವರ ಜೊತೆಯಲ್ಲಿ. ಆ ಫೈವ್‌ಸ್ಟಾರ್ ಹೋಟೆಲೆಗೆ ಕರೆದುಕೊಂಡು ಹೋಗುವವರ ಜೊತೆಯಲ್ಲೇ ಅವರ ಎಲ್ಲಾ ವ್ಯವಹಾರಗಳು. ಬಹಳ ಜನ ಡೆವಲಪರ್ಸ್ ಆದರು. ಸ್ವಾಮಿ, ಅಧ್ಯಕ್ಷರೇ, ನಾನು ಹೇಳುತ್ತಿದ್ದೇನೆ, ಬೆಂಗಳೂರು ಸುತ್ತ ಕೊಟ್ಟಿರತಕ್ಕ ಜಮೀನಿದೆಯಲ್ಲ ಎಲ್ಲಾ ರೈತರ ಜಮೀನು ತಾನೆ? ರೈತರು ಕೇಳಿದಾಗ ಒಬ್ಬನಿಗೆ ಕನ್‌ವರ್ಷನ್‌ಗೆ ಅವಕಾಶ ಕೊಟ್ಟಿದ್ದರೆ, ಒಬ್ಬನಿಗೆ ಡೀನೋಟಿಫೈ ಮಾಡಿಕೊಟ್ಟಿದ್ದರೆ, ಒಬ್ಬನಿಗೆ ಛೇಂಜ್ ಆಫ್ ಲ್ಯಾಂಡ್‌ಗೆ ಇವರು ಪರ್ಮಿಷನ್ ಕೊಟ್ಟಿದರೆ ನಾನು ಮೂಗು ಕುಯ್ಯಿಸಿಕೊಳ್ಳುತ್ತೇನೆ. ಹಾಗೆ ಮಾಡಲಿಲ್ಲ. ಹೊರಗಡೆಯವರಿಗೆ ಕೊಟ್ಟರು. ಇವರು ವಿಲ್ ಪ್ರೊಡ್ಯೂಸ್ ಮಾಡಿದಿರು. ಎಗ್ಸೆಂಪಷನ್ ಕೊಡುವುದಕ್ಕಾಗಲಿಲ್ಲ. ಡೆವಲಪರ್ ಬಂದ ಮೇಲೆ ನಾಲ್ಕು ಭಾಗ ಆಗಬೇಕು ಅಗ್ರಿಮೆಂಟ್ ಪ್ರಕಾರ. ಅಂದರೆ ವಿಲ್ ಪ್ರಕಾರ, ಕಾನೂನು ಪ್ರಕಾರ. ಇಲ್ಲಿ ಫೈಲ್ ಇದೆ. ಇಲ್ಲಿ 5 ಭಾಗ ಮಾಡಿದರು. 5ನೇ ಭಾಗ ಯಾವುದು? ಡೆವಲಪರ್ಸ್ ಅಂದಮೇಲೆ ಒಬ್ಬೊಬ್ಬ ಪಾಲುದಾರರು ಇರುತ್ತಾರಲ್ಲ ಆ ನಾಲ್ಕು ಜನರಲ್ಲಿ ಅವನ ಮಗನಿಗೆ ಒಂದು ಷೇರು ಕೊಡಿಸುತ್ತಾರೆ. ಈಕ್ವಲ್ ಷೇರ್ ಕೊಡಿಸುತ್ತಾರೆ. ಇದರ ಕಥೆ ಏನೆಂದರೆ ಅಧ್ಯಕ್ಷರೆ, ಇನ್‌ಕಂ ಟ್ಯಾಕ್ಸ್

ಕ್ಲಿಯರೆನ್ಸ್ ತೆಗೆದುಕೊಳ್ಳಬೇಕಲ್ಲ ಸೆಕ್ಷನ್ 37(1)ರ ಪ್ರಕಾರ. 367 ಲಕ್ಷ ರೂಪಾಯಿಗೆ ಮಾರಾಟಕ್ಕೆ ಎಂದು ಪರ್ಮಿಷನ್ ಕೊಡಿಸುತ್ತಾರೆ. ಪರ್ಮಿಷನ್ ಕೊಟ್ಟಾಗಿದೆ. ಇದನ್ನು ಕಳುಹಿಸಿಕೊಡುತ್ತೇನೆ ತಮಗೆ. ಇದು ಗೌರ್ನಮೆಂಟ್ ಆರ್ಡರ್. ಈಗ ರಿಜಿಸ್ಟರ್ ಆಗುವುದಿಲ್ಲ. ಪರ್ಮಿಷನ್ ತೆಗೆದುಕೊಂಡು ಬಿಟ್ಟರು. ಏಕೆಂದರೆ ರೈಡ್ ಮಾಡುತ್ತಾರಲ್ಲ! ಜಾಯಿಂಟ್ ಡೆವಲಪರ್ ಮತ್ತೊಂದು ಮಗದೊಂದು ಇಂಥದ್ದು ಆಗಬೇಕಲ್ಲ. ಇಂಥದ್ದರ ವಿಚಾರಣೆ ಆಗಬೇಕಲ್ಲ. ಆಮೇಲೆ ನೋಡಿ, ಇನ್ನೊಂದು ಕೇಸ್ ಇದೆ. ಇದರ ಬಗ್ಗೆ ದೊಡ್ಡ ಫೈಲ್ ಇದೆ. ತಮಗೆ ಕಳುಹಿಸಿಕೊಡುತ್ತೇನೆ ಇದನ್ನು. ಕಪಾಲಿ ಥಿಯೇಟರ್ ಪಕ್ಕದ ದೇವಸ್ಥಾನದ ಜಮೀನು. ದೇವಸ್ಥಾನದ ಜಮೀನನ್ನು ಕೇಳುವವರು ದಿಕ್ಕಿಲ್ಲ. ಸಿಕ್ಕಿದವರಿಗೆ ನೀರುಂಡೆ ಎಂದು ನಮ್ಮ ಹಳ್ಳಿ ಕಡೆ ಗಾದೆ ಹೇಳುತ್ತಾರೆ. ಎಲ್ಲೆಲ್ಲಿ ಯಾರು ಯಾರು ಹೊಡೆದುಕೊಂಡು ಲೂಟಿ ಮಾಡಿಕೊಂಡು ಹೋಗಬಹುದು. ಜನ ಹೇಳುತ್ತಾರೆ ಈ ಜಮೀನು 8 ರಿಂದ 10 ಕೋಟಿ ರೂಪಾಯಿ ಬೆಲೆ ಬಾಳುತ್ತದೆ ಎಂದು. ಅಲ್ಲಿ ಅಂಗಡಿಗಳಾಗಿವೆ. ಒಳಗಡೆ ಒಂದು ಗದ್ದಿಗೆ ಇದೆ. ಅದನ್ನೂ ಒಡೆದು ಅಂಗಡಿ ಮಾಡಿದ್ದಾರೆ. ಪೂಜೆ ಮಾಡುವ ಪೂಜಾರಿ ಅಲ್ಲಿಯೇ ಇದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಇದೆಲ್ಲಾ ನಮ್ಮ ಕಾಲದ್ದಲ್ಲ. ಹಿಂದೆ ಆಗಿದ್ದನ್ನು ಹೇಳುತ್ತಿದ್ದಾರೆ. ಏಕೆಂದರೆ ಜನ ಹೊರಗಡೆ ತಪ್ಪು ತಿಳಿದುಕೊಳ್ಳಬಾರದು. ಏನಪ್ಪ ಇವರು ಬಂದು ಮೂರು ತಿಂಗಳಾಗಿದೆ ಅಷ್ಟರಲ್ಲೇ ಇವರೆಲ್ಲಾ ಲೂಟಿ ಮಾಡಿದ್ದಾರೆ ಎಂದು ಜನ ತಿಳಿದುಕೊಳ್ಳಬಾರದು. ಆದ್ದರಿಂದ ಹೇಳುತ್ತಿದ್ದೇನೆ.

ಶ್ರೀ ಎಚ್.ಎನ್. ನಂಜೇಗೌಡ : ನಾನು ಇವರ ಮೇಲೆ ಹೇಳಲಿಲ್ಲ. ಇವರು ಕಮಿಟಿ ಮಾಡಿದ್ದೇನೆ ಎಂದು ಹೇಳಿದರಲ್ಲ ಬರೀ ಕಮಿಟಿ ಮಾಡಿದರೆ ಆಗುವುದಿಲ್ಲ. ಇಂಥದ್ದು ಯಾವುದು ಯಾವುದು ಇದೆ ಇಂಥದ್ದೆಲ್ಲಾ ನೋಡಬೇಕಲ್ಲ? ಕಪಾಲಿ ಥಿಯೇಟರ್ ಪಕ್ಕದಲ್ಲಿ ಇರುವುದನ್ನು ನೀವು ಹರಾಜು ಹಾಕಿದರೆ 10 ಕೋಟಿ ರೂಪಾಯಿ ಆದಾಯ ಬರುತ್ತದಲ್ಲ. ಅದು ಬಂದರೆ ಸಾಮಾನ್ಯ ಜನರ ಜೇಬಿಗೆ ಕತ್ತರಿ ಹಾಕುವಹಾಗಿಲ್ಲ. ಕಾಫಿ ಪುಡಿ ರೇಟ್ ಏರಿಸುವ ಅವಶ್ಯಕತೆ ಇಲ್ಲ. ಆ ಉದ್ದೇಶದಿಂದ ಹೇಳುತ್ತೇನೆ ನಾನು. ಇನ್ನೊಂದು, ಬನಶಂಕರಿ ದೇವಸ್ಥಾನದ ಜಮೀನಿನ ಕಥೆ ಏನು? ಬನಶಂಕರಿ ದೇವಸ್ಥಾನದ ಜಮೀನು 25 ಎಕರೆ. 25 ಎಕರೆ ವಿತರಣೆಯೂ ಆಗಿಹೋಯಿತು. ರಾಜಕಾರಣಿಗಳು ಸೇರಿ ಸೈಟು ಮಾಡಿಬಿಟ್ಟರು. ಅದನ್ನು ಕೇಳುವುದು ಬೇಡವೆ?

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಬನಶಂಕರಿ ದೇವಸ್ಥಾನಕ್ಕೆ ಸೇರಿದ ಜಮೀನನ್ನು ಹೇಳುವವರು ಕೇಳುವವವರು ಇಲ್ಲ. ಹಾಗೆಲ್ಲಾ ವಿತರಣೆಯಾಗಿದೆ. ಸನ್ಮಾನ್ಯ ಸದಸ್ಯರು ಹೇಳುತ್ತಾ ಇರುವುದು ನಿಜ. 25 ಎಕರೆ ಜಮೀನಿನಲ್ಲಿ ಯಾರನ್ನೂ ಹೇಳಲಿಲ್ಲ ಕೇಳಲಿಲ್ಲ, ಸೈಟ್ ವಿತರಣೆ ಮಾಡಿಬಿಟ್ಟರು ಆಶ್ರಯ ಯೋಜನೆಯಲ್ಲಿ. ಎಲ್ಲಾ ಗುಡಿಸಲು ಹಾಕಿಕೊಂಡಿದ್ದಾರೆ. ಇವತ್ತು ಪರಿಸ್ಥಿತಿ ಹೇಗಿದೆ ಎಂದರೆ ಗುಡಿಸಲುಗಳಿಂದ ಬರುವ ಕೊಚ್ಚೆ ನೀರು ದೇವಸ್ಥಾನದ ಕಾಂಪೌಂಡ್ ಒಳಗಡೆ ಬರುತ್ತಿದೆ. ದೇವಸ್ಥಾನದ ಒಳಗಡೆ ಸೀಪಿಂಗ್ ಆಗುತ್ತಿದೆ. ಏನೇನಾಗಿದೆ ಕಂಡುಹಿಡಿಯಿರಿ ಎಂದು ಈಗಾಗಲೇ 10 ದಿವಸದ ಹಿಂದೆ ಎಂದು ಕಾಣುತ್ತದೆ ಸಿ.ಓ.ಡಿ.ಗೆ ರೆಫರ್ ಮಾಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾರು ಅವ್ಯವಹಾರ ಮಾಡಿದ್ದಾರೆ ಅವರು ಶಾಸಕರೋ ಆಗಿರಬಹುದು. ಮತ್ತೊಬ್ಬರು ಇರಬಹುದು. ಪುಡಾರಿಗಳು ಇರಬಹುದು. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದನ್ನು ಮಾಡಿ. ಆದರೆ ಈ ರೀತಿ ಅವ್ಯವಹಾರಕ್ಕೆ ಪೋಷಕರಾಗಿ ನಿಂತುಕೊಂಡು ಮಾಡುತ್ತಿರುವಾಗ, ಏಕೆ ಇರಬೇಕು ಸ್ವಾಮಿ ಅಲ್ಲಿ ಕುಂತಿರುವ ವ್ಯವಸ್ಥೆ ರಾಜಕಾರಿಣಿಗಳು ಬಂದಾಗ ನಾವು ಇರಲಿ, ಮತ್ತೊಬ್ಬರು ಇರಲಿ, ಇಂತಹ ಅವ್ಯವಹಾರದಲ್ಲಿ ತೊಡಗಿದಾಗ ಅದು ಆಗದ ಹಾಗೆ ಕೇಳುವುದಕ್ಕೆ ಒಬ್ಬ ಚೀಫ್ ಸೆಕ್ರೆಟರಿ, ದೊಡ್ಡ ಸಿಬ್ಬಂದಿ ಅದಕ್ಕೆಲ್ಲಾ ದೊಡ್ಡದಾಗಿ ಬೊಕ್ಕಸದಲ್ಲಿ 60 ಭಾಗ ಸಂಬಳ ಕೊಡುತ್ತಿದ್ದೇವೆ. ಯಾರು ಈ ರೀತಿ ಲೂಟಿ ಮಾಡುವುದರಲ್ಲಿ ಬೆಂಬಲ ಕೊಟ್ಟು ಸಹಕಾರ ಕೊಟ್ಟು, ದಾಖಲೆಗಳನ್ನು ತಿದ್ದಿ, ಕಾನೂನು ಬಾಹಿರವಾಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅಂಥ ಅಧಿಕಾರಿ ಎಲ್ಲೇ ಇರಲಿ, ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಕು. ಅವನು ರಿಟೈರ ಆದಮೇಲೆ ಅವನ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? 100 ದಿವಸ ಕಳೆದು ಹೋಯಿತು. ಒಂದು ವಾರದಲ್ಲಿ ಅದಕ್ಕೆ ಸಂಬಂಧಪಟ್ಟ ಅಧಿಕಾರಿಯನ್ನು ಸಸ್‌ಪೆನ್ಸ್‌ನಲ್ಲಿಟ್ಟು, ಇನ್ನು ಮುಂದೆ ಈ ರೀತಿ ನಮ್ಮ ಸರ್ಕಾರದಲ್ಲಿ ಮುಂದೆ ಮಾಡಬಾರದು ಎನ್ನುವ ಎಚ್ಚರಿಕೆಯನ್ನು ಕೊಡುತ್ತೀರಾ?

ಶ್ರೀ ಆರ್. ಎಲ್. ಜಾಲಪ್ಪ : ಪತ್ರಿಕೆಗಳಲ್ಲಿ ತಾವು ನೋಡಿರಬಹುದು. ಒಂದು ಸಿ.ಓ.ಡಿ. ರಿಪೋರ್ಟ್ ಇಂಟೀರಿಯಂ ರಿಪೋರ್ಟ್‌ನ್ನು ನಮಗೆ ಕೊಟ್ಟಿದ್ದರು. ಅದರ ಮೇಲೆ ನಾನು 3 ಜನನೋ, 4 ಜನನೋ ತಹಸೀಲ್ದಾರ್‌ರವರನ್ನು ಸಸ್‌ಪೆಂಡ್ ಮಾಡಿದೆ. ನನ್ನ ಸ್ನೇಹಿತರಾದ ಮಾನ್ಯ ಪ್ರಕಾಶ್‌ರವರೂ ಬಿ.ಡಿ.ಓ.ಗಳನ್ನೂ ಕೂಡ ಸಸ್‌ಪೆಂಡ್ ಮಾಡಿರು. ಆದರೆ ನಮ್ಮ ದುರಾದೃಷ್ಟ, ಅವರ ಅದೃಷ್ಟ ಕೆ.ಎ.ಟಿ.ಗೆ ಹೋಗಿ ಸ್ಟೇ ಆರ್ಡರ್ ತೆಗೆದುಕೊಂಡು ಬಂದು ಅಲ್ಲೇ ಕಂಟಿನ್ಯೂ ಆಗುತ್ತಿದ್ದಾರೆ. ಫೈನಲ್ ರಿಪೋರ್ಟ್ ನಮಗೆ ಕೊಡಿ ಎಂದು ಸಿ.ಓ.ಡಿ.ಯವರಿಗೆ ರೆಫರ್ ಮಾಡುತ್ತಾ ಇದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಡಿವಿಜನಲ್ ಕಮೀಷನರ್ ಲೆವಲ್‌ನಲ್ಲಿ ಮಾಡಿ ಡೆಪ್ಯೂಟಿ ಕಮೀಷನರ್ ಲೆವಲ್‌ನಲ್ಲಿ ಮಾಡಿ.

ಶ್ರೀ ಹೆಚ್.ಎನ್. ನಂಜೇಗೌಡ : ಸರ್ಕಾರಕ್ಕೆ ಎಷ್ಟು ಉದಾಹರಣೆಗಳನ್ನು ಹೇಳಲಿ. ಇನ್ನೊಂದು ಉದಾಹರಣೆಯನ್ನು ಹೇಳುತ್ತೇನೆ. ಕೋರಮಂಗಲ ಲೇಔಟ್. 94 ಸೈಟು ಹಂಚಿಕೆ ಆಯಿತು. ಅವು ಎಷ್ಟು ಬೆಲೆಗೆ ಹೋಗಬಹುದು, ಈ 94 ಸೈಟು. ಸುಮಾರು 65-70 ಕೋಟಿ. ಕೋರಮಂಗಲ ಲೇಔಟ್ ಅಂದರೆ ಬಿ.ಡಿ.ಎ. ಲೇಔಟ್. ಬಿ.ಡಿ.ಎ.ದ್ದನ್ನು ನಾನು ಈಗ ಹೇಳುತ್ತಿರುವುದು. ಈ 94 ಸೈಟು ಪ್ರಾಡಲೆಂಟಾಗಿ ಅಲಾಟ್ ಆಯಿತು. ಹೇಗೆ ಫ್ರಾಡಲೆಂಟ್ ಆಗಿ ಅಲಾಟಾಯಿತು ಅಂದರೆ ಬ್ಯಾಂಕಿಗೆ ಹಣ ಕಟ್ಟಬೇಕು. ಚಲನ್ ಫೋರ್ಜರಿ ಮಾಡುವುದು. ಬ್ಯಾಂಕ್ ಸೀಲನ್ನು ಫೋರ್ಜರಿಯಾಗಿ ಮಾಡಿ ಹಾಕಿದರು. ಅಲ್ಲಿಗೆ ಅಪ್ಲಿಕೇಷನ್ ಬಂದ ಹಾಗೆ ಆಯಿತಲ್ಲ. ಬಿ.ಡಿ.ಎ. ಚಲನ್ ತಲುಪಿತು. ದುಡ್ಡು ಜಮಾ ಆಗಲಿಲ್ಲ. ಏಕೆಂದರೆ ಇವರು ಬ್ಯಾಂಕಿಗೆ ಕಟ್ಟಲೇ ಇಲ್ಲವಲ್ಲ. ಒಂದು ಆಮೇಲೆ....

ಅಧ್ಯಕ್ಷರು : ಮಾನ್ಯ ಶ್ರೀ ನಂಜೇಗೌಡರೆ you have been making some very relevant and serious charges. ರೇಟನ್ನು ಸ್ಪೆಸಿಫೈ ಮಾಡಿಬಿಡಿ. ಏಕೆಂದರೆ ಅವರು ಎದ್ದು ಒಂದು ಸಾರಿ

ಕ್ಲಾರಿಫಿಕೇಷನ್ ಅನ್ನು ಕೊಟ್ಟರು. ನಾನು ಬಂದ ಮೇಲೆ ಆಗಿಲ್ಲ ನಾನು ಬಂದು ಮೂರೇ ತಿಂಗಳಾಗಿರುವುದು ಎಂದು ಪ್ರತಿ ಸಲ ಈ ರೀತಿಯಾಗುವುದು ಬೇಡ. ನಾನು ಏನು ಹೇಳುತ್ತಿದ್ದೇನೆಂದರೆ, if the charges are pertaining to the period after he has assumed office, what I say is, he is responsible and he is liable for answer. If it is a thing that has occurred prior to his assuming office, it is a matter for him to investigate into the matter. This is to make the things clear. ಮಧ್ಯೆ ಮಧ್ಯೆ ಹೇಳುವುದು ಬೇಡ.

ಶ್ರೀ ಹೆಚ್. ಎನ್. ನಂಜೇಗೌಡ : ಆಯಿತು. ಇದೂ ಕೂಡ ಇವರು ಬರುವುದಿಕ್ಕಿಂತ ಮುಂಚೆ ವಿಚಾರಣೆ ಆಗಿತ್ತು. ಆಮೇಲೆ ಸೈಟ್ ಅಲಾಟ್‌ಮೆಂಟ್ ಆರ್ಡರ್ ಕೊಡಬೇಕಲ್ಲ, ಬಿ.ಡಿ.ಎ. ಸೆಕ್ರೆಟರಿ ಸಹಿ ಕೂಡ ಅಡ್ರಸ್ ಇತ್ತೋ 94 ಜನ ಏನು ಸೈಟನ್ನು ತೆಗೆದುಕೊಂಡಿದ್ದರು, ಅವರಿಗೆ ನೋಟೀಸ್ ಕೊಟ್ಟರು. ಬಂದು ನೀವು ಅಪಿಯರ್ ಆಗಿ ಎಂದು. ಇವೆಲ್ಲಾ ಬೇನಾಮಿ. ಅಲ್ಲಿರುವವರೇ ಹೊಡೆದಿರುತ್ತಾರೆ. ಯಾರೋ ಒಬ್ಬರು ಹೊಡೆದಿರುತ್ತಾರೆ. ನಾಲಕ್ಕೇ ಜನ ಬಂದೋವರು. ಇನ್ನು 90 ಜನ ಬರಲೇ ಇಲ್ಲ. ಇದರಲ್ಲಿ ಒಂದು ರಾಕೆಟ್ ಒಂದು ಉದಾಹರಣೆಯನ್ನು ಹೇಳಿದ ಕೋರಮಂಗಲದ್ದು. ಇಂತಹವು ಅನೇಕವು ಇವೆ. 94 ಅಲ್ಲ, 940 ಅಲ್ಲ. 9400 ಆಗಿರಬಹುದು ಇಂತಹ ಕೇಸುಗಳು. ಫೋರ್ಜರಿ ಮಾಡಿರುವುದು. ಸರ್ಕಾರದ ಖಜಾನೆಗೆ ದುಡ್ಡೂ ಬರದೇನೆ, ದುಡ್ಡೂ ಬಂದಿಲ್ಲ ಸೈಟಂತೂ ಹೋಗಿವೆ. ಅವು ಕ್ರಯ ಬೇರೆ ಆಗಿವೆ. ಈ 94 ಸೈಟುಗಳ ಬಗ್ಗೆ ಏಕೆ ಹೇಳಿದೆ ಅಂದರೆ ಇಂತಹದ್ದರ ಬಗ್ಗೆ ವಿಚಾರಣೆಯಾಗಬೇಕು. Whether this was done under the very nose of the Chairman ಎಂದು ಗೊತ್ತಾಗಬೇಕಲ್ಲವೇ? ಯಾರು ಛೇರ್ಮನ್ ಇದ್ದವರು? ಈ ರೀತಿ ಫೋರ್ಜರಿ ಕೆಲಸ ಮಾಡಿ ಎಂದು ಸರ್ಕಾರ ಏನಾದರೂ ಡೈರೆಕ್ಷನ್ ಕೊಟ್ಟಿದೆಯೋ? ಇವೆಲ್ಲಾ ಸಾಮಾನ್ಯ ಜನರಿಗೂ ಅರ್ಥವಾಗಬೇಕು. ನಮ್ಮ ಆಸ್ತಿ ಉಳಿಯಬೇಕು. ಪಬ್ಲಿಕ್ ಪ್ರಾಪರ್ಟಿ. ಬಿ.ಡಿ.ಎ.ಗೆ ದುಡ್ಡಾದರೂ ಬರಬೇಕಲ್ಲ. ದುಡ್ಡೂ ಇಲ್ಲ. ಸೈಟೂ ಇಲ್ಲ. ಎಲ್ಲ ಫೋರ್ಜರಿ ಡಾಕ್ಯುಮೆಂಟ್ಸ್ ಇದನ್ನು ತಾವು ವಿಚಾರಣೆ ಮಾಡಬೇಕು. ಈಗ ತಾವು ವಾಸ್ತವಿಕವಾಗಿ ಕೆಲವರನ್ನು ಅರೆಸ್ಟ್ ಮಾಡಬೇಕಾಗಿತ್ತು. ಅದು ಆಗಲಿಲ್ಲ. ನಾನು ಏಕೆ ಇದನ್ನು ಎತ್ತಿದೆ ಅಂದರೆ ಇದರಲ್ಲಿ ಇನ್ವಾಲ್ವ್ ಆಗಿರತಕ್ಕಂತಹವರು ರಕ್ಷಣೆ ಪಡೆಯುವುದಕ್ಕೆ ಸರ್ಕಾರದ ಮೇಲೆ ಭಾರಿ ಒತ್ತಡ ತರುತ್ತಾ ಇದ್ದಾರೆ. ಶ್ರೀಮಾನ್ ನಾಗೇಗೌಡರೆ, ಹೇಳುತ್ತಾ ಇದ್ದೇನೆ. ಇಂಥಾದ್ದು ವಿಚಾರಣೆ ಯಾರೂ ಮಾಡಲಿಲ್ಲ. ಹೈರೈಸ್ ಬಿಲ್ಡಿಂಗ್ ಪರ್ಮಿಷನ್ ಕೊಡುತ್ತಾ ಇರತಕ್ಕಂಥಹದ್ದು ಇದೂ ಒಂದು ರಾಕೆಟ್. ಅದನ್ನೂ ಸ್ವಲ್ಪ ವಿಚಾರಣೆ ಮಾಡಿ ಇಂತಹದ್ದು 10 ಉದಾಹರಣೆ ಕೊಡಬಲ್ಲೆ. ಒಂದೊಂದು ಸಾರಿ ನನಗ್ನಿಸುತ್ತದೆ ಬಿ.ಡಿ.ಎ. ಮುಚ್ಚಿಬಿಡಬೇಕು. ಏಕೆ ಮುಚ್ಚಿಬಿಡಬೇಕು? ಉತ್ತರ ಕೊಡುವುದಕ್ಕೆ ಇವತ್ತು ಆಗದೆ ಹೋದರೆ ಇನ್ನೆರಡು ದಿವಸ ಬಿಟ್ಟು ಹೇಗೋ ರಾಜ್ಯಪಾಲರ ಭಾಷಣ ನಡೆಯುತ್ತದೆ. 5-6 ವರ್ಷಗಳಿಂದ 8 ವರ್ಷಗಳಿಂದ ಯಾವುದಾದರೂ ಒಂದು ಇಸವಿ ಇಟ್ಟುಕೊಳ್ಳಿ. ಈ ಬಿ.ಡಿ.ಎ. ನಲ್ಲಿ ಎಷ್ಟು ಸೈಟನ್ನು ಹಂಚಿದ್ದಾರೆ ಬಡವರಿಗೆ? 6ನೇ ಸಾರಿ ಅಪ್ಲೈ ಮಾಡಿದವರು ನನ್ನ ಹತ್ತಿರ ಬಂದಿದ್ದರು. ಈ ಜನರಿಗೆ ಸೈಟನ್ನು ಹಂಚಿದ್ದಾರೋ? ಹಂಚುವವರು ಇದ್ದಾರೋ, ಇಲ್ಲ. ನನಗೆ ಗೊತ್ತಿರುವ ಹಾಗೆ ಇವರು ಮಾಡಿರುವ ಕೆಲಸದಿಂದ ಬಡ ಜನರಿಗೆ ಸೈಟು ಕೇಳಿದವರಿಗೆ ಸೈಟನ್ನು ಹಂಚುವುದಕ್ಕೆ ಆಗಿಲ್ಲ. 4-5 ವರ್ಷಗಳಿಂದ ಹೇಳಿಕೊಳ್ಳುವಂತಹ ಯಾವುದೇ ಸೈಟನ್ನು ಹಂಚಿಲ್ಲ. ಆದರೆ

ಸೈಟು ಹಂಚಿದ್ದಾರೆ. ಇವರು ಮಾಡಿರುವುದು, ಸ್ವೀ ಸೈಟನ್ನು ಹಂಚಿರತಕ್ಕಂತಹದ್ದು, ಲೇಔಟ್ ಗ್ರೂಪ್ ಹೌಸಿಂಗ್‌ಗೆ ಅಪ್ರೂವಲ್ ಕೊಡುತ್ತಾ ಇರತಕ್ಕಂತಹದ್ದು. ಡೀ-ನೋಟಿ ಫಿಕೇಷನ್ ಆಫ್ ಲ್ಯಾಂಡ್, ಇದನ್ನು ಮಾಡಿದ್ದಾರೆ. ಚೇಂಜ್ ಆಫ್ ಲ್ಯಾಂಡ್ ಯೂಸ್ ಅದನ್ನು ಮಾಡತಕ್ಕಂತಹದ್ದು. ಇವೆಲ್ಲಾ ದಾಖಲಾತಿಗಳು. ಲೇಔಟ್ ಗ್ರೂಪ್ ಹೌಸಿಂಗ್. ಸೀರಿಯಲ್ ನಂಬರ್, ಬಿ.ಡಿ.ಎ. ಮೀಟಿಂಗ್‌ನ ಸಬ್ಜೆಕ್ ನಂ. ಎಷ್ಟೆಷ್ಟು ಎಕರೆ ಇದೆ ಯಾರ್‍ಯಾರು ಪಾರ್ಟೀಸ್ ಯಾರ್‍ಯಾರು ರಹೇಜ, ಇನ್ನೊಬ್ಬರು ಯಾವನು ಬಿಲ್ಡರ್‍ರು ಅಂತ ಎಲ್ಲಾ ಇದೆ ನನ್ನ ಹತ್ತಿರ. ನೂರಾರು ಎಕರೆ ಲೇಔಟ್ ಗ್ರೂಪ್ ಹೌಸಿಂಗ್ ಇದಕ್ಕೆ ಕೊಟ್ಟಿರತಕ್ಕಂತಹ ಪರ್ಮಿಷನ್ ಇದು ಹೆಚ್ಚಿಗೆ ಆಗಿರತಕ್ಕಂತಹದ್ದು. ಒಂದು ಎರಡೂ ಮೂರು ಮಾತ್ರ 94ನೇ ಇಸವಿಯಲ್ಲೇ ಆಗಿವೆ. 16-3-94, 15-6-93, ಅದು ಬಿಟ್ಟರೆ, 1.1.194, ಸಬ್ಜೆಕ್ಟ್ ನಂ. 3/94 19-3-94 ಅದೇಕೋ ಹಳೆ ಸಬ್ಜಕ್ಟ್ 11/9419-3-94. ನೋಡಿ ಕೊಳ್ಳಿ. ಆ ಲಿಸ್ಟನ್ನು ಕಳುಹಿಸಿಕೊಡುತ್ತೇನೆ. ಅಫಿಸಿಯಲ್ ಲಿಸ್ಟ್ ಮುಖ್ಯಮಂತ್ರಿಗಳು ಹೇಳಿದರು ಅವತ್ತು. ನಮ್ಮನಾಯಕರು ಮಾತನಾಡತಕ್ಕ ಕಾಲದಲ್ಲ, ಇನ್‌ಫರ್ಮೆಷನ್ ಕೊಡಿ ಅಂದರೆ ನನ್ನನ್ನು ರೈಲು ಹತ್ತಿಸಿದರು. 1967ನೇ ಇಸವಿನಲ್ಲಿ ಅಷ್ಟೊಂದು ಮಾತನಾಡುತ್ತಿದ್ದೀರಿ, ಇಷ್ಟೊಂದು ಮಾನತಾಡುತ್ತೀದ್ದೀರಿ. ನಾನು ಏರೋಪ್ಲೇನನ್ನೇ ಹತ್ತಿಬಿಟ್ಟೆ ಅವತ್ತಿನ ದಿವಸ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಅಪ್ಪಣೆ ಕೊಟ್ಟರೆ ಒಂದು ಮಾತನ್ನು ಹೇಳುತ್ತೇನೆ. ನಮ್ಮ ನಂಜೇಗೌಡರು ಕಂಠ ಶೋಷಣೆ ಮಾಡಿಕೊಳ್ಳುತ್ತಿದ್ದಾರೆ. ಯಾರ ಮುಂದೆ ಮಾತನಾಡುತ್ತಿದ್ದೀರಿ? ಯಾರು ಮುಂದೆ ಮಾತನಾಡುತ್ತಿದ್ದೀರಿ? ಸಂಯುಕ್ತ ಕರ್ನಾಟಕ ಪತ್ರಿಕೆಯನ್ನು ತರಿಸಿ ನೋಡಿ. ಯಾವ ಗುಲ್ಬರ್ಗ ಜಿಲ್ಲೆಯಲ್ಲಿ ಚುನಾವಣೆ ಸಮಯದಲ್ಲಿ ಸುಮಾರು 58 ಲಕ್ಷ ರೂಪಾಯಿಗಳ ಅರ್‍ಯಾಕ್‌ನ್ನು ಚುನಾವಣೆ ಸಮಯದಲ್ಲಿ ದುರುಪಯೋಗ ಮಾಡಿಕೊಳ್ಳುತ್ತಿದ್ದವರನ್ನು ಧೈರ್ಯವಾಗಿ ಮದನಗೋಪಾಲ್ ಎಂಬ ಡೆಪ್ಯೂಟಿ ಕಮೀಷನರ್ ಹಿಡಿದರು, ತನ್ನ ಲೈಫನ್ನು ರಿಸ್ಕ್ ತೆಗೆದುಕೊಂಡರು. ಈ ಸಮಯದಲ್ಲಿ ಜನರನ್ನು ವರ್ಗಾವಣೆ ಮಾಡುತ್ತಿದ್ದಾರೆ. ವರ್ಗಾವಣೆ ಸಂದರ್ಭ ಅಲ್ಲ. ಯಾರನ್ನು ಕರೆದು ಸನ್ಮಾನ ಮಾಡಬೇಕಾಗಿತ್ತೋ ಯಾರ ಕಾಲದಲ್ಲಿ ನೋವನ್ನು ನಲಿವನ್ನು ಅನುಭವಿಸಿ ಒಬ್ಬ ಷೆಡ್ಯೂಲ್ಡ್ ಕ್ಯಾಸ್ಟ್ ಮ್ಯಾನ್ ಒಬ್ಬ ಧೈರ್ಯವಾಗಿ ಕೆಲಸ ಮಾಡುತ್ತಿದ್ದನೋ ಅಂಥವರಿಗೆ ವರ್ಗಾವಣೆ ಮಾಡುವಂತಹ ಸಂದರ್ಭ ಇಲ್ಲದಿದ್ದರೂ ಅವರನ್ನು ವರ್ಗಾವಣೆ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ : ಒಂದು ನಿಮಿಷ ಎಲ್ಲಿಂದ ಎಲ್ಲಿಗೆ ಹೋಗುತ್ತಿದ್ದೀರಿ?

ಒಬ್ಬ ಮಾನ್ಯ ಸದಸ್ಯರು : ಪಾಯಿಂಟ್ ಆಫ್ ಆರ್ಡರ್ ಸಾರ್.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ವಿಷಯಾಂತರ ಮಾಡುತ್ತಿಲ್ಲ. ನಾನು ನಂಜೇಗೌಡರಿಗೆ ಹೇಳುತ್ತಿದ್ದೇನೆ ದಯಮಾಡಿ ಬಜೆಟ್ ವಿಷಯಕ್ಕೆ ಬನ್ನಿ ಅಂತ ಈ ಸರ್ಕಾರದ ಬಗ್ಗೆ ಉಳಿದ ದಾಖಲೆಗಳನ್ನು ನಾನು ಕೊಡುತ್ತೇನೆ. ನೀವು ಹೇಳುತ್ತಿರುವುದು ಸರಿ ಇದೆ. ಆದರೆ ಎಮ್ಮೆ ಚರ್ಮದವ್ರರು.

ನೀವು ಹೇಳುತ್ತಿರುವುದು ಇವರ ಮೇಲೆ ಪರಿಣಾಮವಾಗುತ್ತದೆಯೋ ಇದನ್ನೆಲ್ಲಾ ಹೇಳುವುದರಿಂದ ಸರಿಯಾಗುವುದಿಲ್ಲ. ಅದರ ಬದಲು ಇನ್ನೇನೋ ಆಗುತ್ತದೆ ಎನ್ನುವ ಭಯ. ನನಗೆ ಆದ್ದರಿಂದ ಯಾವುದೇ ಕಾನ್ಫಿಡೆನ್ಶಿಯಲ್ ರಿಕಾರ್ಡುಗಳನ್ನು ಇಲ್ಲಿ ಹೇಳಬೇಡಿ. ಹೇಳಿದರೆ ಅನಾಹುತವಾಗುತ್ತದೆಯೇ, ಹೊರತು ನಿಮಗೆ ನ್ಯಾಯ ಸಿಗುವುದಿಲ್ಲ ಎನ್ನುವುದನ್ನು ತಮ್ಮ ಮೂಲಕ ಈ ಕಡೆಯಲ್ಲಿ ಕುಳಿತವರಿಗೆ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಹಿಂದೆ. ಜೆ.ಎಚ್. ಪಟೇಲ್‌ರವರು ಹೇಳಿದರು. ತಾವು ಯಾವ ವಿಚಾರವನ್ನು ಅಪ್ರಿಷಿಯೇಟ್ ಮಾಡಬೇಕಾಗಿತ್ತೋ, ವಿಶೇಷವಾಗಿ ಅವರಿಗೆ ಪ್ರೋತ್ಸಾಹವನ್ನು ಕೊಡಬೇಕಾಗಿತ್ತೋ, ಅಂತಹವರಿಗೆ ಏಕಾಏಕಿ ವರ್ಗಾವಣೆ ಮಾಡುತ್ತೀರಿ ಎಂದು ಹೇಳಿದರೆ ಪ್ರಾಮಾಣಿಕ ಅಧಿಕಾರಿಗಳಿಗೆ ಇಲ್ಲಿ ಕಾಲ ಇದೆಯೇ? ಯಾರಾದರೂ ಕೆಲಸ ಮಾಡುವುದಕ್ಕೆ ಸಾಧ್ಯ ಇದೆಯೇ?

MR. SPEAKER : Is he punished? Is he suspended? Transfer is a matter of administrative process. Why do you take up these things? ಅವರು ಸರ್ಕಾರದ ಪರವಾಗಿ ಏನು ಹೇಳುತ್ತಾರೆ ಹೇಳಲಿ.

ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯಮಂತ್ರಿಗಳು) : ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಒಂದು ವಿನಂತಿ ದಯವಿಟ್ಟು ಕೂಗಬೇಡಿ. ಮಾನ್ಯ ನಂಜೇಗೌಡರು ಹೇಳುತ್ತಿದ್ದ ವಿಷಯ ಬೇರೆ. ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದೇ ಬೇರೆ. ಎಮ್ಮೆಚರ್ಮದ ಸರ್ಕಾರವೆಂದು ಹೇಳಿದರು. ಹಾಗೆಲ್ಲ ಹೇಳಬಾರದು. ನಮ್ಮ ಚರ್ಮ ನಿಮ್ಮ ಚರ್ಮದಷ್ಟೆ ತೆಳುವಾಗಿದೆ. ಅದಕ್ಕಿಂತ ತೆಳುವು ಇಲ್ಲದಿರುಬಹುದು ಆದರೆ ನಿಮ್ಮ ಚರ್ಮದಷ್ಟೆ ತೆಳುವು ಇದೆ. ನಿಮ್ಮ ಕಣ್ಣಿಗೆ ಏನು ಕಾಣುತ್ತದೆ ನಮಗೂ ಅದೇ ಕಾಣುತ್ತದೆ. ನಂಜೇಗೌಡರು ಹೇಳುತ್ತಿದ್ದ ವಿಷಯ ನಮ್ಮ ಸರ್ಕಾರದ್ದು ಅಲ್ಲ. ಅವರು ತೆಗೆದುಹಾಕಿದ ಎಲ್ಲಾ ಹೊಲಸು, ಅದಕ್ಕೆ ಯಾರು ಉತ್ತರ ಕೊಡಬೇಕಾಗಿತ್ತೋ ಅವರು ಇವತ್ತು ಈ ಸ್ಥಾನದಲ್ಲಿ ಇಲ್ಲ. ಅಂತಹದ್ದು ಆಗಿದೆ. ಮಾನ್ಯ ನಂಜೇಗೌಡರು ಹೇಳಿದ ಪ್ರತಿಯೊಂದು ವಿಷಯವೂ ನಿಜ. ಅವರು ಮಾಡಿದ ಪಾಪಕ್ಕೆ ನಾವು ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾತನಾಡುವ ಕಾಲದಲ್ಲಿ ಒಂದು ತಪ್ಪು ಶಬ್ದ ಹೇಳಿದೆ. ಮದನ್‌ಗೋಪಾಲ್ ಶೆಡ್ಯುಲ್ಡ್ ಕ್ಯಾಸ್ಟ್ ಎಂದು. ಅವರು ಷಡ್ಯೂಲ್ಡ್‌ಕಾಸ್ಟ್ ಜನಾಂಗದ ಬಗ್ಗೆ ಕಳಕಳಿ ಇರುವ ಒಬ್ಬ ಆಫೀಸರ್. ಅವರನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಎನ್ನುವುದು ತಪ್ಪು.

ಶ್ರೀ ಕೆ.ಎನ್.ನಾಗೇಗೌಡ : ಅಧ್ಯಕ್ಷರೇ, ಒಂದು ನಿಮಿಷ. I am raising a Point of Order. ಮಾನ್ಯ ಯಡಿಯೂರಪ್ಪನವರು ಅನುಭವಸ್ಥರು ಎಂದು ಭಾವಿಸಿಕೊಂಡಿದ್ದೇನೆ. ಮಾನ್ಯ ಉಪ ಮುಖ್ಯಮಂತ್ರಿಗಳು ಅನುಭವಸ್ಥರು ಎಂದು ಭಾವಿಸಿಕೊಂಡಿದ್ದೇನೆ. ವಿರೋಧಪಕ್ಷದ ನಾಯಕರು ಒಬ್ಬ ಅಧಿಕಾರಿಯ ಹೆಸರು ಹಿಡಿದು ಆ ಅಧಿಕಾರಿ ಉತ್ತಮ, ಅವನು ಷೆಡ್ಯೂಲ್ಡ್ ಕಾಸ್ಟ್, ಅವನಿಗೆ ಸನ್ಮಾನ ಮಾಡಬೇಕು ಎನ್ನತಕ್ಕ ಪದ ಏನಿದೆ ಅವರು ಯಾವುದೇ ಷೆಡ್ಯೂಲ್ಡ್ ಕಾಸ್ಟ್ ಇರಲಿ, ಬ್ಯಾಕ್‌ವರ್ಡ್ ಕ್ಲಾಸ್ ಇರಲಿ ಒಕ್ಕಲಿಗನಾಗಿರಲಿ ಒಬ್ಬ ಅಧಿಕಾರಿಯ ಬಗ್ಗೆ ಇಲ್ಲಿ ಆ ರೀತಿ ಹೇಳುವುದು ಸರಿಯಲ್ಲ. ನಾನು ವಿರೋಧಪಕ್ಷದಲ್ಲಿ ಬಹುಶಃ ಏಳೆಂಟು ವರ್ಷ ಕೆಲಸ ಮಾಡಿದ್ದೇನೆ. ಆ ತರಹ ಹೇಳುವುದು ಸರಿಯಲ್ಲ.

ಹೆಂಡ ಹಿಡಿಯುವುದು ಅವನು ಡ್ಯೂಟಿ ಟ್ರಾನ್ಸ್‌ಫರ್ ಅಡ್ಮಿನಿಸ್ಟ್ರೇಟಿವ್ ಮ್ಯಾಟರ್. ಹೆಸರು ಹೇಳ ತಕ್ಕದ್ದು ರಾಂಗ್ ಪಾರ್ಲಿಮೆಂಟರಿ ಪ್ರೊಸೀಜರ್ ನಲ್ಲಿ ಒಬ್ಬ ಆಫೀಸರ್‌ನ್ನು ಡಿಫೆಂಡ್ ಮಾಡತಕ್ಕದ್ದು, It is most unfortunate ವಿರೋಧಪಕ್ಷದ ನಾಯಕರಿಗೆ ಹೇಳುತ್ತಿದ್ದೇನೆ ಇನ್ನು ಮುಂದೆ ಆ ರೀತಿ ಹೇಳಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಏನಿದೆ ಸ್ವಾಮಿ ? ನಾನು ಹೆಚ್ಚು ಮಾತನಾಡುವುದಿಲ್ಲ ನಾನು ಏನು ಹೇಳುವುದಕ್ಕೆ ಹೊರಟಿದ್ದೆ ಎಂದರೆ ವ್ಯಕ್ತಿಯ ಬಗ್ಗೆ ಪ್ರಸ್ತಾಪ ಮಾಡಿದ್ದು, ಅವರು ಬಿಜಾಪುರದಲ್ಲಿದ್ದರು ಅಲ್ಲಿಂದ ಒಂದು ವರ್ಷದಲ್ಲಿಯೇ ವರ್ಗಾವಣೆ ಮಾಡಿದರು. ಗುಲ್ಬರ್ಗಾದಲ್ಲಿದ್ದರು ಅಲ್ಲಿ ಒಂದು ವರ್ಷ ಆಗಲಿಲ್ಲ ಈಗಾಗಲೇ ಟ್ರಾನ್ಸ್‌ಫರ್ ಚುನಾವಣೆಯ ಸಂದರ್ಭದಲ್ಲಿ ಬಿಗಿ ನಿಲುವನ್ನು ತೆಗೆದುಕೊಂಡಂತಹ ವ್ಯಕ್ತಿ. ಈ ರೀತಿಯ ಅಧಿಕಾರಿಗೆ ಶಹಭಾಷ್‌ಗಿರಿ ಕೊಟ್ಟು ಉತ್ತೇಜನ ಕೊಡಬೇಕೆಂದು ಹೇಳಿದ್ದೇನೆ. ವರ್ಗಾವಣೆ ಇಲ್ಲದ ಸಂದರ್ಭದಲ್ಲಿ ವರ್ಗಾವಣೆ ಮಾಡಲಾಗಿದೆ ಇಡೀ ಗುಲ್ಬರ್ಗ ಬಂದ್ ಆಗುತ್ತಿದೆ. ಆ ಅಧಿಕಾರಿಗೆ ಅಷ್ಟು ಗೌರವ ಇರಬೇಕಾದರೆ ನಿಮ್ಮ ಸರ್ಕಾರದಲ್ಲಿ ಪ್ರಾಮಾಣಿಕ ಅಧಿಕಾರಿಗಳ ಬಗ್ಗೆ ನಿಲುವೇನು ಎಂದು ತಿಳಿದುಕೊಳ್ಳುವುದಕ್ಕೆ ಪ್ರಸ್ತಾಪ ಮಾಡಿದ್ದೇನೆಯೇ ಹೊರತು ಅಧಿಕಾರಿಯ ಪರವಾಗಿ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರಾದ ಯಡಿಯೂರಪ್ಪನವರು ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಮದನಗೋಪಾಲನಾಯಕರವರು ಮೊದಲನೆಯದಾಗಿ ಅವರು ಷೆಡ್ಯೂಲ್ಡ್ ಕಾಸ್ಟ್ ಆಫೀಸರ್ ಅಲ್ಲ. ಏಕೆ ಷಡ್ಯೂಲ್ಡ್ ಕಾಸ್ಟ್ ಆಫೀಸರ್ ಎಂದು ಹೇಳುತ್ತೀರಿ? ಆ ರೀತಿ ಹೇಳುವುದು ಬೇಡ. ಪ್ರಶ್ನೆ ಇಷ್ಟೆ, ಅವರು ಕೇಳತಕ್ಕದ್ದು ಒಬ್ಬ ಒಳ್ಳೆಯ ಅಧಿಕಾರಿ ದಕ್ಷ ಅಧಿಕಾರಿ. ಅಂತಹ ಅಧಿಕಾರಿಗಳನ್ನು ಈಗಾಗಲೇ ಕೇಂದ್ರಸರ್ಕಾರದವರು ಅವರನ್ನು ಡೆಪ್ಯೂಟೇಷನ್ ಮೇಲೆ ತೆಗೆದುಕೊಂಡಿದ್ದಾರೆ. ಫಸ್ಟ್ ಏಪ್ರಿಲ್ ಅಥವಾ 2-3ಕ್ಕೆ ಹೋಗುತ್ತಿದ್ದಾರೆ. 15 ದಿವಸದ ಸಲುವಾಗಿ ಅವರಿಗೆ ಟ್ರಾನ್ಸ್‌ಫರ್ ಮಾಡತಕ್ಕ ಕಾರಣ ಏನಿತ್ತು? ಎನ್ನುವ ಪ್ರಶ್ನೆ ಬಹುತೇಕ ಇರಬಹುದು. ಇಲ್ಲಿ ಜಾತಿಯ ಪ್ರಶ್ನೆ ಬರುವುದಿಲ್ಲ ಅವರು ಯಾವುದೇ ಜಾತಿ ಇದ್ದರೂ ಐಎಎಸ್ ಆಫೀಸರ್ಸ್ ಒಂದೇ ಜಾತಿ. ಅಧಿಕಾರಿಗಳೆಲ್ಲ ಒಂದೇ ಜಾತಿ. ಅವರು ಷೆಡ್ಯೂಲ್ಡ್ ಕಾಸ್ಟ್ ಆಫೀಸರ್ ಹಾಗೆಂದು ಹೇಳುವುದು ಬೇಡ. ಎಲ್ಲಿ ಒಳ್ಳೆಯ ಕೆಲಸ ಮಾಡುವ ಅಧಿಕಾರಿಗಳಿದ್ದಾರೆ ಅವರಿಗೆ ಮೂಲೆಗೆ ಹಾಕಿದ್ದೀರಿ. ಸುಮ್ಮನೆ ಎಲ್ಲರೂ ಮಾತನಾಡಿಕೊಂಡು ಪಾಪ ಪಾಪ ಎಂದು ಹೇಳುವುದು ಬೇಡ. ಎಲ್ಲಿ ಸಹಾಯ ಮಾಡುವುದು ಇದೆ ಅಲ್ಲಿ ಮಾಡೋಣ. ಸುಮ್ಮ ಸುಮ್ಮನೆ ಈ ತರಹ ಹೇಳಿಕೊಂಡು ಜನರಿಗೆ ಏನು ಅನಿಸುತ್ತದೆ ಅಂದರೆ ಷೆಡ್ಯೂಲ್ಡ್ ಕಾಸ್ಟ್ ಜನ ಅಂದರೆ ಒಂದು ತರಹ ಇನ್‌ಎಫಿಸಿಯೆಂಟ್ ಎಂದು ತಿಳಿದುಕೊಳ್ಳುತ್ತಾರೆ. ಒಳ್ಳಯ ಕೆಲಸ ಮಾಡುವವರು ಇದ್ದರೆ ಅವರನ್ನು ಎಲ್ಲಿಯೋ ಮೂಲೆಗೆ ಕೂಡಿಸುತ್ತೀರಿ. ಅದು ಬೇಡ. ಆದರೆ ಇನ್ನೊಂದು 15 ದಿವಸಕ್ಕೋಸ್ಕರ ಇವತ್ತು ಅವರನ್ನು ಟ್ರಾನ್ಸ್‌ಫರ್ ಮಾಡತಕ್ಕ ಅವಶ್ಯಕತೆ ಏನಿತ್ತು? ಅವರ ಮೇಲೆ ದೂರುಗಳು ಇರಲಿಲ್ಲ. ಚುನಾವಣೆಯ ಸಂದರ್ಭದಲ್ಲಿ ಅನೇಕ ತೊಂದರೆಗಳನ್ನು ಕೊಟ್ಟರು ನಾವು ಯಾರ ಮೇಲೂ ದೂರು ಕೊಡಲಿಲ್ಲ. ಅವರು ಕಾನೂನು ಪ್ರಕಾರ ಮಾಡಿಕೊಂಡು ಹೋಗುತ್ತಾರೆಂದು ಸುಮ್ಮನಾದೆವು. ಕೇಂದ್ರ ಸರ್ಕಾರ ಎಜುಕೇಷನ್ ಡಿಪಾರ್ಟ್‌ಮೆಂಟಿಗೆ ಡೆಪ್ಯುಟೇಷನ್ ಮೇಲೆ ಅವರನ್ನು ತೆಗೆದುಕೊಂಡಿದ್ದಾರೆ.

ಇನ್ನು 15-20 ದಿವಸದ ಸಲುವಾಗಿ ಟ್ರಾನ್ಸ್‌ಫರ್ ಮಾಡಬೇಕಾದರೆ ಅದರ ರಿಫ್ಲೆಕ್ಷನ್ ಬೇರೆಯವರ ಮೇಲಾಗುತ್ತದೆ. ಇಂಪಾರ್ಷಿಯಲ್ ಆಗಿ ಕೆಲಸ ಮಾಡುವವರಿಗೆ ಸರ್ಕಾರ ಸಹಿಸುವುದಿಲ್ಲವೆಂದು ತಿಳಿದುಕೊಳ್ಳುತ್ತಾರೆ. ಜನರಲ್ ಟ್ರಾನ್ಸ್‌ಫರ್‌ನಲ್ಲಿ 10-20ಅಧಿಕಾರಿಗಳಿಗೆ ಮಾಡುವಾಗ ಅವರಿಗೂ ಮಾಡಿದ್ದರೆ ತಪ್ಪೇನೂ ಇಲ್ಲ. ಒಬ್ಬರಿಗೆ ಒಂದೇ ಆರ್ಡರ್ ಹೋಗಬೇಕಾದರೆ ಇದಕ್ಕೆ ಕಾರಣವೇನು ಎನ್ನತಕ್ಕ ಸಂಶಯ ಅಲ್ಲಿರತಕ್ಕ ನಾಗರೀಕರಿಗೆ ಅವರ ಮನಸ್ಸಿನಲ್ಲಿ ಮೂಡಿದೆ ಇದನ್ನು ನೀವು ಸ್ಪಷ್ಟಪಡಿಸಬೇಕು.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಮತ್ತು ಖರ್ಗೆಯವರು ಏನು ಹೇಳಿದ್ದಾರೆ ಆ ಅಧಿಕಾರಿ ಟ್ರಾನ್ಸ್‌ಫರ್ ಆಗಿರುವುದು ನಿಜ. ಆದರೆ ಅವರ ಎಫಿಸಿಯೆನ್ಸಿ ಗುರುತಿಸಿ ಡೈರೆಕ್ಟರ್, ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟಿಗೆ ಹಾಕಿದ್ದೇವೆ. ಇದೇ ಸದನಲ್ಲಿ ಗ್ರಾನೈಟ್ ಬಗ್ಗೆ ಬೇಕಾದಷ್ಟು ಚರ್ಚೆಯಾಗಿದೆ. ಗ್ರಾನೈಟ್ ಲೂಟಿಯಾಗುತ್ತಿದೆಯೆಂದು ಹೇಳಿದ್ದೀರಿ. ಒಬ್ಬ ಬಲವಾದ ಆಫೀಸರ್ ಒಬ್ಬ ಸ್ಟ್ರಾಂಗ್ ಆಗಿರತಕ್ಕ ಆಫೀಸರ್ ಬೇಕೆಂದು ಹೇಳಿ ಅಲ್ಲಗೆ ಟ್ರಾನ್ಸ್‌ಫರ್ ಮಾಡಿದ್ದೇವೆ. ಬೇರೆ ಯಾವುದೇ ವಿಷಯಕ್ಕಲ್ಲ. ಅವರ ಮೇಲೆ ಸೇಡುತೀರಿಸಿಕೊಳ್ಳಬೇಕೆನ್ನುವುದು ಏನೂ ಇಲ್ಲ. ದಯವಿಟ್ಟು ಇದನ್ನು ಅರ್ಥಮಾಡಿಕೊಳ್ಳಬೇಕು.

ಡಾ||ಜೀವರಾಜ ಆಳ್ವ : ಮಾನ್ಯ ಮಾಲೀಕಯ್ಯ ಗುತ್ತೇದಾರರು ಗುಲ್ಬರ್ಗಾ ಜಿಲ್ಲೆಯವರು ಅವರು ಏನೋ ಸ್ವಲ್ಪ ಬೆಳಕು ಚೆಲ್ಲುತ್ತಾರೆ ದಯವಿಟ್ಟು ಅವಕಾಶ ಕೊಡಿ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಆ ಅಧಿಕಾರಿ ಕೇಂದ್ರ ಸರ್ಕಾರಕ್ಕೆ ಡೆಪ್ಯುಟೇಷನ್ ಮೇಲೆ ಹೋಗುತ್ತಾರೆಂದು ಹೇಳಿದರು ಅದು ಸರಿಯಲ್ಲ. No. That is not correct. It is not correct.

ಅಧ್ಯಕ್ಷರು : ಮಾನ್ಯ ರಮಾನಾಥ ರೈರವರು ದಯಮಾಡಿ ಕುಳಿತುಕೊಳ್ಳಿ ಇವತ್ತು 1.30ಕ್ಕೆ ಇದನ್ನು ಕ್ಲೋಸ್ ಮಾಡಬೇಕೆಂದು ಇದ್ದೇವೆ ಇನ್ನು ಸ್ವಲ್ಪ ಸಮಯ ಇದೆ. ಅದು ಸಾಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 1.30 ಗಂಟೆಗೆ ಮುಗಿಸುವುದಕ್ಕೆ ಆಗುವುದಿಲ್ಲ. 5-10 ನಿಮಿಷದವರೆಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ನಾಳೆ ಮಂತ್ರಿಗಳು ಉತ್ತರ ಕೊಡಲಿ.

MR. SPEAKER : We will have to close.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಈಗ ನನ್ನ ಅಭಿಪ್ರಾಯ ಏನೆಂದರೆ ಮಾನ್ಯ ನಂಜೇಗೌಡರು ಮಾತನಾಡುತ್ತಿದ್ದಾರೆ ಅವರು ಹಿರಿಯರಿದ್ದಾರೆ. ಅವರು ಬಜೆಟ್ ಮೇಲೆ ಮಾತನಾಡುತ್ತಿಲ್ಲ. ಅವರು ಉದಾಹರಣೆಗಳನ್ನು ಕೊಟ್ಟು ಮಾತನಾಡುತ್ತಿದ್ದಾರೆ ಆಗ ಯಾವ ಸರ್ಕಾರ ಇತ್ತು ಎಂಬುದನ್ನು ಮೆನ್‌ಷನ್ ಮಾಡಬೇಕಾಗುತ್ತದೆ.

ಅಧ್ಯಕ್ಷರು : ಇವರು ಏಕೆ ಇದ್ದಕ್ಕಿದ್ದಹಾಗೆ ಓವರ್ ಆಕ್ಟೀವ್ ಆಗಿದ್ದಾರೆ?

ಶ್ರೀ ಡಿ.ಕೆ. ಶಿವಕುಮಾರ್ : ನೀವು ಏನಾದರೂ ಮಾಡಿ ಅವರನ್ನು ಮಂತ್ರಿ ಮಾಡಿದರೆ ಅವರು ಸರಿ ಹೋಗಬಹುದು.

ಶ್ರೀ ಹೆಚ್.ಎನ್. ನಂಜೇಗೌಡ : ಕ್ಲಾಸಿಕ್ ಕಂಪ್ಯೂಟರ್ ಮೇಲೆ ಪ್ರಸ್ತಾಪ ಮಾಡಿದ್ದೇನೆ. ಅದು 5 ಕೋಟಿ ರೂಪಾಯಿ ವ್ಯವಹಾರ, ಅಡ್ವಾನ್ಸ್ ಕೊಟ್ಟಿರುವುದು ಒಂದೂವರೆ ಕೋಟಿ. ಎಷ್ಟು ಕಂಪ್ಯೂಟರ್ ಕೇಸ್ ಹಾಕುತ್ತೀರಿ? ಡೀನೋಟಿಫಿಕೇಶನ್ ಆಗಿರುವುದಕ್ಕೆ, ಲೇಔಟ್ ಅಪ್ರೂವಲ್ ಆಗಿರುವುದಕ್ಕೆ, ಗ್ರೀನ್‌ಬೆಲ್ಟ್ ಏರಿಯಾದಲ್ಲಿ ಎಕ್ಸ್‌ಮ್ಪ್‌ಷನ್ ಕೊಟ್ಟಿರುವುದಕ್ಕೆ ಗ್ರೂಪ್ ಹೌಸಿಂಗ್ ಸ್ಕೀಮ್‌ಗೆ ಅಪ್ರೂವಲ್ ಕೊಟ್ಟಿರುವುದಕ್ಕೆ, ನನ್ನ ಹತ್ತಿರ ಇರುವ ಎಲ್ಲದನ್ನು ಕ್ಯಾನ್ಸಲ್ ಮಾಡಿ ನಂಜೇಗೌಡರು ಕೇಳಿದರು ಅವರಿಗೆ ಪರ್ಮಿಶನ್ ಕೊಡುತ್ತೇವೆಂದು ಹೇಳಿ, 500 ಕೋಟಿ ಸುಲಭದಲ್ಲಿ ಲಂಚ ವಸೂಲಿ ಮಾಡಿಕೊಡುತ್ತೇನೆ. ನನಗೆ ಪರ್ಮಿಶನ್ ಕೊಡಿ ಎಲ್ಲ ಕ್ಯಾನ್ಸಲ್ ಮಾಡಿ ಇಲ್ಲಿರತಕ್ಕ ರಹೇಜ 57 ಎಕರೆ ಇನ್ನೊಬ್ಬರಿಗೆ 43 ಎಕರೆ 18 ಗುಂಟೆ ಗ್ರೂಪ್ ಹೌಸಿಂಗ್ ಸ್ಕೀಂನಲ್ಲಿ ಲೂಟಿ. ಅವರು ಮಾಡುವ ಕೆಲಸ ಬಿಟ್ಟು ಅವರು ಏನು ಮಾಡಬೇಕು ಜನಗಳಿಗೆ ಸೈಟು ಕೊಡಬೇಕು ಕೊಡಲಿ. ನಾನು ಆಗಲೇ ಹೇಳಿದ್ದೇನೆ ಇದೆಲ್ಲ 1994ರಲ್ಲಿ ನೀವು ಬರುವುದಕ್ಕೆ ಮುಂಚೆ ಆಗಿರತಕ್ಕದ್ದು ನಾನು ಏಕೆ ಹೇಳುತ್ತಿದ್ದೇನೆಂದರೆ ಒಂದೆರಡು ಸಾರಿ ಹೇಳಿದ್ದೇನೆ. If you declare that `We follow the footprints of Mr. Veerappa Moily and Mr. Bangarappa, no argument'. If you you say `No, We are not like that, We want to improve the administration, We don't want corruption, We don't want illegal things, It is O.K. ಆ ತರಹ ಸ್ಟ್ಯಾಂಡ್ ತೆಗೆದುಕೊಳ್ಳುವುದಾದರೆ ಇದನ್ನೆಲ್ಲಾ ನಿಮಗೆ ಕಳುಹಿಸಿ ಕೊಡುತ್ತೇನೆ. ಇದಕ್ಕೆ ಒಬ್ಬ ಛೇರ್ಮನ್ ಬೇಕಾ? ಇದಕ್ಕೆ ಒಬ್ಬ ಕಮೀಷನರ್ ಬೇಕೇ? ಲಂಚ ಹೊಡೆಯುವುದಕ್ಕೆ ಎರಡು ಕಾರಣಕ್ಕೆ, ಒಬ್ಬ ಮನುಷ್ಯ ತಪ್ಪು ಮಾಡಬಹುದು ಬುದ್ಧಿಯಿಲ್ಲದೆ ತಪ್ಪು ಮಾಡಬಹುದು, ತಲೆ ಕೆಟ್ಟಿದ್ದರೆ ತಪ್ಪು ಮಾಡುತ್ತಾನೆ, ಎರಡನೆಯದು ಲಂಚ ತೆಗೆದುಕೊಂಡು ತಪ್ಪು ಮಾಡುತ್ತಾನೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಇವರೆಡು ಮಾಡಿದರೂ ಅಧಿಕಾರದಲ್ಲಿ ರುವುದಕ್ಕೆ ಆಗುವುದಿಲ್ಲ. ಅವನು ಬಿಡಿಎ ಛೇರ್ಮನ್ ಆಗಲಿ ಕಮೀಷನರ್ ಆಗಲಿ ಎಲ್ಲಿ ಹೋಗಬೇಕು?

ಶ್ರೀ ಆರ.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಬಿಡಿಎ ಡೀನೋಟಿಫೈ ಮಾಡಲಿಲ್ಲ. ಇದನ್ನು ಡೀನೋಟೀಫೈ ಮಾಡಿದ್ದುದು ಹಿಂದಿನ ಸರ್ಕಾರ.

ಶ್ರೀ ಹೆಚ್.ಎನ್. ನಂಜೇಗೌಡ : ಸರ್ಕಾರ ಮಾಡಿದೆ, ನಾನು ಎಲ್ಲಾ ಒಟ್ಟಿಗೆ ಸೇರಿಸಿ ಹೇಳು ತ್ತಿದ್ದೇನೆ. ನಾನು ಏಕೆ ಹೇಳುತ್ತಿದ್ದೇನೆ ತಲೆ ಕೆಟ್ಟರೆ ಮೆಂಟಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು.

12.10 ಪಿ.ಎಂ

ಲಂಚ ತೆಗೆದುಕೊಂಡರೆ ಜೈಲಿಗೆ ಕರೆದುಕೊಂಡುಹೋಗಬೇಕು Anti-Corruption/Act Section 13 ರ ಪ್ರಕಾರ.

ಶ್ರೀ ರಮಾನಾಥರೈ : ಇವರು ಪದೇಪದೇ ಹಿಂದಿನ ಸರ್ಕಾರ ಎಂದು ಹೇಳುತ್ತಾರೆ. ಮಾನ್ಯ ಉಪಮುಖ್ಯಮಂತ್ರಿಗಳು ಪಾಪ ಮಾಡಿದವರು ಯಾರು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಬಿ.ಡಿ.ಎ. ನವರು ಡೀನೋಟಿಫೈ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಚ್.ಎನ್.ನಂಜೇಗೌಡ : ಅಧ್ಯಕ್ಷರೇ, ಇದನ್ನೂ ಕಳಿಸಿಕೊಡುತ್ತೇನೆ. ಇದು ದೊಡ್ಡ ಲಿಸ್ಟ್ ಇದೆ.

(ಗೊಂದಲ)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಅದನ್ನು ತನಿಖೆ ಮಾಡಿ ಎಂದು ಅವರು ಕೇಳುತ್ತಿರುವುದು. ತನಿಖೆ ಮಾಡುತ್ತೇವೆ ಎಂದು ಹೇಳಿ ಅಷ್ಟೆ.

ಶ್ರೀ ರಮಾನಾಥರೈ : ಉಪಮುಖ್ಯಮಂತ್ರಿಗಳು ಸರಿಯಿದೆಯೆಂದು...

ಶ್ರೀ ಎಚ್.ಎನ್. ನಂಜೇಗೌಡ : ಈಗ ಇಷ್ಟು ಹೇಳಿಬಿಟ್ಟು ನಿರ್ದಿಷ್ಟವಾಗಿ ಯಾರ ಹೆಸರಾದರೂ ಹೇಳಿದರೆ ತಾಪತ್ರಯ ಆಗುತ್ತದೆ. ಅಲ್ಲದೆ ಸರ್ಕಾರಕ್ಕೂ ಇಕ್ಕಟ್ಟು. ಸ್ವಾಮಿ, ತಮ್ಮ ಅನುಮತಿಯನ್ನು ಪಡೆದು ಈ ಒಂದು ಕಾಗದವನ್ನು ಓದುತ್ತೇನೆ.

"ಶ್ರೀಮತಿ ಹೆಚ್.ಕೆ. ಲಲಿತ, ಮ್ಯಾನೇಜಿಂಗ್ ಟ್ರಸ್ಟಿ. ಶ್ರೀಮತಿ ಸಿದ್ಧಲಿಂಗಮ್ಮ ಎಜ್ಯುಕೇಷನ್ ಟ್ರಸ್ಟ್. ಇವರು ನನಗೆ ಸಲ್ಲಿಸಿರುವ ಮನವಿಯನ್ನು ಇದರೊಡನೆ ಲಗತ್ತಿಸಿ ಕಳಿಸಲಾಗಿದೆ. ಇವರು ಸಾಣೆಗುರುವನಹಳ್ಳಿ ಅಂದರೆ ಬಸವೇಶ್ವರನಗರ, ಸರ್ವೆ ನಂ. 82/2ರಲ್ಲಿ ಸದರಿ ಟ್ರಸ್ಟ್‌ಗೆ ಸಾಮೂಹಿಕ ಭವನ, ಆಸ್ಪತ್ರೆ ಇತ್ಯಾದಿಗಳನ್ನು ನಿರ್ಮಿಸುವುದಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿವೇಶನ ನೀಡಿದ್ದು ಸದರಿ ನಿವೇಶನವು ಪರಿಷ್ಕೃತ ವ್ಯಾಪಕಾಭಿವೃದ್ಧಿ, ಯೋಜನಾ ನಕ್ಷೆಯಲ್ಲಿ ವಸತಿಗಾಗಿ ಕಾದಿರಿಸಿರುವುದರಿಂದ ಹಾಗೂ ಸದರಿ ಪ್ರದೇಶದ ನಿವಾಸಿಗಳು ಸಾಮೂಹಿಕ ಭವನ ಇತ್ಯಾದಿ ಕಟ್ಟಲು ವಿರೋಧಿಸುತ್ತಿರುವುದರಿಂದ ಈ ನಿವೇಶನದಲ್ಲಿ ಮನೆಕಟ್ಟಲು ಅನುಮತಿ ಕೊಡಬೇಕೆಂದು ಕೋರಿದ್ದಾರೆ. ಅವರ ಕೋರಿಕೆಯನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕೆಂದು ಕೋರುತ್ತೇನೆ"

ಇದನ್ನು ಯಾರು ಬರೆದರು, ಯಾರಿಗೆ ಬರೆದರು? ಯಾವ ಕಾರಣಕ್ಕಾಗಿ ಬರೆದರು? ಇದೆಲ್ಲಾ ಬೇಕಲ್ಲ. ಇರಲಿ. ಇದು ಏನಾಗಿದೆ ಎಂದರೆ ಸೈಟ್ ನಂ. 82/2 ಇದು ಸಿವಿಕ್ ಎಮಿನಿಟೀಸ್ ಸೈಟು. ಹತ್ತಿರ ಹತ್ತಿರ ಇದರ ವಿಸ್ತೀರ್ಣ 7374.95 ಸ್ಕ್ವಯರ್ ಮೀಟರ್ಸ್. ಅಂದರೆ ಹತ್ತಿರ ಹತ್ತಿರ ಎರಡು ಎಕರೆ, ಅಂದರೆ ಸುಮಾರು 3-4 ಕೋಟಿ ರೂಪಾಯಿ ಆಸ್ತಿ. ಈ ಟ್ರಸ್ಟ್ ಏನು ಬಸವೇಶ್ವರ ನಗರದಲ್ಲಿರತಕ್ಕಂಥಾದ್ದು, ಇದನ್ನು ಸಿದ್ದಲಿಂಗಮ್ಮ ಎಜ್ಯುಕೇಷನ್ ಟ್ರಸ್ಟ್‌ಗೆ ವರ್ಷಕ್ಕೆ 41,057 ರೂಪಾಯಿ ಲೀಸ್‌ಗೆ ಅಂತ ಕೊಟ್ಟರು. ಪಾಪ, ಅದು ಕೊಟ್ಟು ಆಯಿತು. ಇದು ನನ್ನ ಗಮನಕ್ಕೆ ಬಂದಾಗ ನಾನು ಅಲ್ಲಿಗೆ ಹೋಗಿ ಈ ಎಜ್ಯುಕೇಷನ್ ಟ್ರಸ್ಟ್ ಏನು ಕೆಲಸ ಮಾಡುತ್ತಿದೆ ಎಂದು ಚೆಕ್ ಮಾಡಿದೆ. ಆ ಪ್ರಶ್ನೆ ಬೇರೆ. ಹೇಳಿಕೊಳ್ಳುವಂಥ ಕೆಲಸ ಏನೂ ಅವರು ಮಾಡಿಲ್ಲ. ಆ ಟ್ರಸ್ಟ್ ಅಲ್ಲಿ ಯಾರಿಗೂ ಗೊತ್ತಿಲ್ಲ. ಆ ಪ್ರದೇಶದಲ್ಲಿ ಅದರ ಹೆಸರು ಕೇಳದವರೂ ಇದ್ದಾರೆ. ಬಹುಶಃ ಇದನ್ನು ಬೇನಾಮಿಯಾಗಿ

ರಿಜಿಸ್ಟರ್ ಮಾಡಿ ಕೊಂಡಹಾಗೆ ಕಾಣುತ್ತದೆ ಇರಲಿ. ಆಮೇಲೆ ಏನು ಆಯಿತು? ಇದನ್ನು 12.2.1992ರಲ್ಲಿ ಲೀಸ್‌ಗೆ ಕೊಟ್ಟರು. 41.057 ರೂಪಾಯಿ ವಾರ್ಷಿಕ ಬಾಡಿಗೆ ಮೇಲೆ ಬಿ.ಡಿ.ಎ./ಸಿ.ಎ. ಸೈಟ್‌ನ್ನು ಈ ಸಿದ್ದಲಿಂಗಮ್ಮ ಎಜ್ಯುಕೇಷನಲ್ ಟ್ರಸ್ಟ್‌ಗೆ ಕೊಟ್ಟರು. ಇದರ ಮ್ಯಾನೇಜಿಂಗ್ ಟ್ರಸ್ಟಿ ಶ್ರೀಮತಿ ಲಲಿತಮ್ಮ. ಆಮೇಲೆ ಏನಾಯಿತು? ಒಂದು ವರ್ಷ ಆದಮೇಲೆ 1993ರ ಮಧ್ಯದಲ್ಲಿ ಈ ಲೀಸ್‌ನ್ನು ದಯಮಾಡಿ ಅಲಾಟ್‌ಮೆಂಟ್ ಆಗಿ ಕನ್ವರ್ಟ್ ಮಾಡಿಕೊಡಿ ಎಂದು ಹೇಳಿದರು. ಪಾಪ, ಒಂದು ಲೈನು ಬರೆದರೆ ಅದು ಆಗಿಬಿಡುತ್ತದೆ. ನಮ್ಮ ಬಿ.ಡಿ.ಎ. ಚೇರ್ಮನ್ನರು ಒಬ್ಬರು promptly he agreed. Poor fellow, he agreed. ಆದರೆ ಅದ್ಯಾರೋ ಕಮೀಷನರ್ ಇದನ್ನು ಒಪ್ಪದೆ ಹೋಗಿಬಿಡುವುದೆ? ಕೊಡುವುದಕ್ಕೆ ಆಗುವುದಿಲ್ಲ ಎಂದರು. ಚೇರ್ಮನ್ನರು ಒಪ್ಪಿದಮೇಲೆ, ಅಲಾಟ್‌ಮೆಂಟ್ ಮಾಡಿಕೊಡೋಣ ಎಂದರೂ ಕಮೀಷನರ್ ಅವರು ಒಪ್ಪಲಿಲ್ಲ. ಆವಾಗ ಚೇರ್ಮನ್ನರು ಏನು ಅಂತಹ ಸುಲಭದವರು ಅಲ್ಲ. ಅವರು ಘಾಟಿ. ಕೊನೆಗೆ ಏನಾಯಿತು? ಸರ್ಕಾರದಿಂದ ಅಪ್ರೂವಲ್ ಬಂತು. ಈ ಸರ್ಕಾರದ ಅಪ್ರೂವಲ್ ಯಾವಾಗ ಬಂತು ಎಂದರೆ ಬಿಡಿಸಿ(1)ಸಿಎಚ್-ನಂಬರ್ 2613:93-94 ಆಫ್ ಜುಲೈ 1993. ಮೊದಲು ಬರೆದಿದ್ದಕ್ಕೆ ಚೇರ್ಮನ್ನರು ಕನ್ವರ್ಟ್ ಮಾಡೋಣ ಎಂದರು. ಕಮೀಷನರ್ ಅವರು ರಿಜೆಕ್ಟ್ ಮಾಡಿಬಿಟ್ಟು ಬರೆದರು. ಅದು ಯಾವುದು ನಂಬರ್ ಎಂದರೆ ಬಿಡಿಎ ಡಿಎಸ್‌ಐ:82 93-94 ದಿನಾಂಕ 27.7.1993. ನಾನು ಹೇಳಿದ್ದೇನಲ್ಲ ಚೇರ್ಮನ್ನರು ಕಡಿಮೆ ಅಸಾಮಿಯಲ್ಲ. ಸರ್ಕಾರಕ್ಕೇ ಬರೆದರು. ಕೊನೆಗೆ ಸರ್ಕಾರದಿಂದ ಆರ್ಡರ್ ಆಯಿತು. Government order conveying approval of conversion of lease into allotment under No. HUD 28 MVH 93 dtd. 13.7.93. ಸರ್ಕಾರದಿಂದ ಅಪ್ರೂವಲ್ ಆಯಿತು. ಈ ಒಂದು ಟ್ರಸ್ಟ್‌ನವರು ತೆಗೆದುಕೊಂಡಮೇಲೆ ಸಾರ್ವಜನಿಕರ ಕೆಲಸ, ಸಮಾಜದ ಕೆಲಸ ಎಂದು ಏನಾದರೂ ಮಾಡಬೇಕಲ್ಲ ಇವರು? ಇದು ಎಲ್ಲರ ಕೆಲಸ ಎಂದು ಮಾಡುವುದಕ್ಕೆ ಹೋಗಿ ಲೀಸ್ ಕೊಟ್ಟಿದ್ದು ತಪ್ಪು. ಇದು ಬೇನಾಮಿ ಸಂಸ್ಥೆಯಾಗಿದೆ. ಲೀಸ್‌ನ್ನು ಅಲಾಟ್‌ಮೆಂಟ್ ಆಗಿ ಕನ್‌ವರ್ಟ್ ಮಾಡಿದ್ದುದು ಮಹಾ ತಪ್ಪು. ಹೋಗಲಿ ಅಲ್ಲಿ ಇದು ನಿಲ್ಲುವುದಕ್ಕೆ ತಯಾರಿಲ್ಲ. ಸಾರ್ವಜನಿಕವಾಗಿ ಮಂಟಪ ಕಟ್ಟುವುದಕ್ಕೆ ಆಗುವುದಿಲ್ಲ, ಸ್ಕೂಲ ಕಟ್ಟುವುದಕ್ಕೆ ಆಗುವುದಿಲ್ಲ, ಆಸ್ಪತ್ರೆ ಕಟ್ಟುವುದಕ್ಕೆ ಆಗುವುದಿಲ್ಲ ಎಂದರೆ ಮತ್ತೇನು ಮಾಡಬಹುದು? ರೆಸಿಡೆನ್ಷಿಯಲ್ ಸೈಟ್ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಈ ಲೆಟರ್ ಯಾರು ಬರೆದರು? ಮಾಜಿ ಬಿ.ಡಿ.ಎ. ಅಧ್ಯಕ್ಷರು, ಹಾಲಿ ನಿಮ್ಮ ಮುಖ್ಯಕಾರ್ಯದರ್ಶಿಯವರು ಬರೆದಿರುವ ಪತ್ರ ಇದು. ದಿನಾಂಕ 2.3.1995 : ಮುಖ್ಯಕಾರ್ಯದರ್ಶಿ 262:95 ಇದನ್ನು ನಾನು ಕಳಿಸಿಕೊಡುತ್ತೇನೆ. ಏನು ಶಿಕ್ಷೆ ಮಾಡುತ್ತೀರೋ ಮಾಡಿ. ಇದರಲ್ಲಿ ಏನು ಬರೆದಿದ್ದಾರೆ ಎಂದರೆ ಸ್ಕೂಲು ಕಟ್ಟುವಹಾಗಿಲ್ಲ, ಆಸ್ಪತ್ರೆಯನ್ನು ಕಟ್ಟುವಹಾಗಿಲ್ಲ. ಸಾರ್ವಜನಿಕ ಸೇವೆ ಹೋಯಿತು. ಅದು ಏನು ಸೇವೆ ಮಾಡುತ್ತಾರೋ. ಈ ಮ್ಯಾನೇಜಿಂಗ್ ಟ್ರಸ್ಟಿಯಾರಿದ್ದಾರೆ, ಜನರು ಹೇಳುತ್ತಾರೆ, ಇವರು ಚೀಫ್ ಸೆಕ್ರೆಟರಿಯವರ ಚೇಂಬರ್‌ಗೆ ಬರುತ್ತಾರಂತೆ. ಇದೇನು ಸಲಹೆ ಕೊಡುವುದಕ್ಕೆ ಬರುತ್ತಾರೋ. ಬರುವವರು ಯಾರು? ಶ್ರೀಮತಿ ಲಲಿತ ಅವರು. ಇವರ ಸಲಹೆಯನ್ನು ಪಡೆಯತಕ್ಕಂಥ ಒಬ್ಬ ಚೀಫ್ ಸೆಕ್ರೆಟರಿಯವರನ್ನು ನಾವು ಇಟ್ಟುಕೊಂಡಿದ್ದೇವೆ. ಇರಲಿ, ಇದನ್ನು ಕಳಿಸಿಕೊಡುತ್ತೇನೆ. ಇನ್ನೊಂದು, ಇದನ್ನು ತಮ್ಮಗಮನಕ್ಕೆ ತರಲು

ಓದಬೇಕು ಎನಿಸುತ್ತದೆ. ಇದೊಂದು ಕ್ರಯಪತ್ರ. ಇದರ ಒಂದು ಕಾಪಿಗೆ ಅಪ್ಲೈ ಮಾಡಿದರೆ ಅದು ಸಿಗಬೇಕಾದರೆ ಎಷ್ಟು ಕಷ್ಟ ಇದೆ. ಅದಕ್ಕೇ ನಾನು ನಿನ್ನೆ ಮಾತನಾಡಲಿಲ್ಲ. ಏಕೆಂದರೆ ಈ ಪತ್ರ ಸಿಕ್ಕಿರಲಿಲ್ಲ. ಇದು ಏನು ಎಂದರೆ-

``This deed of sale made and executed this 22nd day of November, 1993 by M/s. United Towers India Private Ltd., a company registered under the Companies Act having its registered office at No. 20, Barakambha Road, New Delhi and branch office at No. 1/3 Ali Askar Road, Bangalore represented herein by its Manager and Power of Attorney holder Sri Manjunatha in favour of Mrs. S.M. Suman......."

ಇದರಲ್ಲಿ ಡೇಟ್ ಬಹಳ ಮುಖ್ಯ.

``This deed of sale made and executed this 22nd day of November, 1993....ಇರಲಿ ಅನಂತರ

"....Mrs. S.M. Suman, aged about 28 years presently residing at No. 48, Madhavnagar, Bangalore....``

ಇನ್ನೊಂದು ರೆಫರೆನ್ಸ್ ಇದೆ. ಅದನ್ನೂ ಓದಿಬಿಡುತ್ತೇನೆ. ಇದು ಭಾರಿ ಪ್ರಾಮುಖ್ಯವಾದುದು. ಮಾನ್ಯ ಜಾಲಪ್ಪನವರೇ ತಾವು ದಯವಿಟ್ಟು ಇದನ್ನು ಕೇಳಬೇಕು.

"....and whereas by an agreement dtd. 24.10.1987 entered into between the vendors and the purchasers here and the vendors have now agreed to sell and the purchaser has agreed to buy 464 Sq. Ft. of undivided shares etc.... with a flat apartment bearing No. 203............"

ಅಂದರೆ ಈ ಕ್ರಯಪತ್ರ ಆಗಿರುವುದು. This document of sale is based on agreement entered into between the parties on 24-10-1987. ಇವರ ತಂಗಿ ಸುಮನ್ ಅವಿವಾಹಿತ ಹುಡುಗಿ. Suman- unmarried girl. She was a dependent... ಈಕೆ ಅಗ್ರಿಮೆಂಟ್ ಮಾಡಿಕೊಳ್ಳುತ್ತಾಳೆ. ಯಾರ ಹತ್ತಿರ? United Towers, Delhi,..... United Towers, Delhi.. ಇವರು ಯಾರು? ಇವರಿಗೆ ಇನ್ನೊಂದು ಕಂಪನಿ ಇದೆ. ಅದೇ ಪ್ರೊಪ್ರೈಟರ್ಸ್ United Health Care Limited ಅಂತ 1987ನೇ ಇಸವಿಯಲ್ಲಿ ಏನಾಯಿತು? ಇವರಿಗೆ ಕೆ.ಎಸ್.ಐ.ಐ.ಡಿ.ಸಿ.ಯವರು ಒಂದು ಕೋಟಿ ರೂಪಾಯಿಗಳ ಸಾಲವನ್ನು ಮಂಜೂರು ಮಾಡಿದರು. ಇದರ ಚೆಕ್ ಯಾವಾಗ ಹೋಯಿತು, ಈ ಚೆಕ ಯಾವರೀತಿ ಹೋಯಿತು ಗೊತ್ತೆ. ಕೆ.ಎಸ.ಐ.ಐ.ಡಿ.ಸಿ.ಯವರು ಕೆಲವು ವಿಚಾರಗಳಿಗೆ ಅವರ ಮನೆ ಬಾಗಿಲಿಗೇ ಹೋಗಿ ಕೊಡುತ್ತಾರೆ. ಯುನೈಟೆಡ್ ಟವರ್ಸ್‌ನವರ ಮನೆ

ಬಾಗಿಲಿಗೆ, ಡೆಲ್ಲಿಗೆ ಹೋಗಿ ಕೊಡುತ್ತಾರೆ. ಅವರ ಇನ್ನೊಂದು ಕಂಪನಿ, United Health Care Ltd. ಅದರ ವಿಚಾರ ಬೇರೆ. ಸಮಯ ಬಂದು ಯಾರಾದರೂ ಪ್ರಶ್ನೆ ಮಾಡಿದರೆ, ಬೇಕಾದರೆ ಮಾತನಾಡೋಣ. ನಾನು ಕಾಲ ಹೆಚ್ಚಿಗೆ ತೆಗೆದುಕೊಳ್ಳುವುದಿಲ್ಲ. ನಾನು ಹೇಳುವುದು ಇಷ್ಟೆ. ಕೆ.ಎಸ್.ಐ.ಐ.ಡಿ.ಸಿ.ನಲ್ಲಿದ್ದಂಥ ಒಬ್ಬ ಮ್ಯಾನೇಜಿಂಗ್ ಡೈರೆಕ್ಟರ್ ಒಂದು ಕೋಟಿ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡುತ್ತಾರೆ, ಆತನ ಮಗಳು ಡಿಪೆಂಡೆಂಟ್ ಅವಿವಾಹಿತ ಹುಡುಗಿ ಒಂದು ಅಗ್ರಿಮೆಂಟ್‌ಗೆ ಸೈನ್ ಹಾಕಿಸಿಕೊಳ್ಳುತ್ತಾಳೆ. 1993ನೇ ಇಸವಿಯಲ್ಲಿ, ಆ ಅಗ್ರಿಮೆಂಟ್ ಆಧಾರದಮೇಲೆ ಒಂದು ಅಪಾರ್ಟ್‌ಮೆಂಟನ್ನು ರಿಜಿಸ್ಟರ್ ಮಾಡಿಸಿಕೊಳ್ಳುತ್ತಾಳೆ. ಈತ ಯಾರು? ನಿಮ್ಮ ಈಗಿನ ಮುಖ್ಯ ಕಾರ್ಯದರ್ಶಿ. ಇಂತಹವರನ್ನು ಕಟ್ಟಿಕೊಂಡು ಆಡಳಿತ ನಡೆಸಿ, ನಿಮ್ಮ ಆಡಳಿತ ಚೆನ್ನಾಗಿದೆ. ಇದನ್ನು ವಿಚಾರಣೆ ಮಾಡುವುದಕ್ಕೆ ನಿಮ್ಮ ಕೈಯಲ್ಲಾಗುತ್ತದೆಯೇ? ಮಾನ್ಯ ಜಾಲಪ್ಪನವರೇ ಈ ಕ್ರಯಪತ್ರವನ್ನು ಕಳುಹಿಸಿಕೊಡುತ್ತೇನೆ ಮತ್ತು ಈ ಲೆಟರ್‌ನ್ನೂ ಕಳುಹಿಸಿಕೊಡುತ್ತೇನೆ. ಇದನ್ನು ಲೋಕಾಯುಕ್ತ ಪೋಲೀಸರಿಂದ ಮಾತ್ರ ಮಾಡಿಸಬೇಡಿ. ನೀವು ಇದನ್ನು ಲೋಕಾಯುಕ್ತ ಪೋಲೀಸರಿಂದ ಮಾಡಿಸಕೂಡದು. ಏಕೆ, I have lost faith in it. ನಾನು ಕೇಳುತ್ತೇನೆ, ಬೇಕಾದರೆ, ಸಿ.ಓ.ಡಿ. ಚೀಫ್ ಕೈಯಲ್ಲಿ ಮಾಡಿಸಿ. ನನಗೇನೂ ದುಃಖವಿಲ್ಲ. ಇದು ವಿಚಾರಣೆಯಾಗಬೇಕು. ಈಗ ನಾನು ಓದಿದ್ದು, ಶ್ರೀಮಾನ್ ಮುದ್ದಪ್ಪನವರು ಕೆ.ಎಸ್.ಐ.ಐ.ಡಿ.ಸಿ. ಯಲ್ಲಿದ್ದಾಗ, ಅವರ ಮಗಳ ಹೆಸರಿಗೆ ಅಗ್ರಿಮೆಂಟ್ ಮಾಡಿಸಿ, ಲೆಟರ್ ಆನ್ ರಿಜಿಸ್ಟರ್ ಮಾಡಿಸಿಕೊಂಡಿದ್ದು. It definitely attracts the provisions of Section 13 of the Anti-Corruption Act. He should be in jail for 7 years. Is that the Government interested in punishing him? ನೀವು ಚೀಫ್ ಸೆಕ್ರೆಟರಿ ಪನಿಷ್ ಮಾಡಿ. then your bureaucracy will on its toes, they will listen to you, they will act........ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಅದು ಮಾಡದೇಹೋದರೆ, ಇಂತಹ ಪ್ರಕರಣಗಳು ನಡೆಯುತ್ತಲೇ ಇರುತ್ತವೆ, ಹೋಗುತ್ತಲೇ ಇರುತ್ತವೆ. ಅದಕ್ಕೆ ಅವಕಾಶ ಮಾಡಬೇಡಿ. ನೀವು ಒಳ್ಳೆಯ ಕೆಲಸ ಮಾಡಲಿ ಎಂದು ಜನರು ನಿಮಗೆ ವೋಟು ಕೊಟ್ಟಿದ್ದಾರೆ. ನನಗೇನೂ ಹೊಟ್ಟೆಕಿಚ್ಚು ಇಲ್ಲ. ನೀವು ಒಳ್ಳೆಯ ಹೆಸರು ತೆಗೆದುಕೊಳ್ಳಿ. "ದಂಡಿನಲ್ಲಿ ಸೋದರ ಮಾವ" ಎನ್ನುವ ಹಾಗೆ ಆಗಬಾರದು. ನಂಜೇಗೌಡ ಕಡೆಯವರು, ನಂಜೇಗೌಡರ ನೆಂಟ, ಇನ್ನೊಬ್ಬರ ಅಳಿಯ, ಇನ್ನೊಬ್ಬರ ತಮ್ಮ, ಇನ್ನೊಬ್ಬರ ಭಾವಮೈದ ಎಂಬ ಕತೆ ಹೇಳದೇ ಮಾಡಬೇಕು. ನಾನು ತಮಗೆ ಅರಿಕೆ ಮಾಡಿಕೊಳ್ಳುತ್ತೇನೆ. ಲೋಕಾಯುಕ್ತದ ಕಥೆ ಏನಾಗಿದೆ ಎಂದರೆ, ಲೋಕಾಯುಕ್ತ ವಿಚಿತ್ರ. ಶ್ರೀಮಾನ್ ವೀರಪ್ಪ ಮೊಯಲಿಯವರ ಕಾಲದಲ್ಲಿ ಎಂದು ಕಾಣುತ್ತದೆ, ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ಅಲ್ಲ. ಒಂದು ಎಕ್ಸಿಕ್ಯುಟಿವ್ ಆರ್ಡರ್ ಮಾಡಿದರು. ಈ ಲೋಕಾಯುಕ್ತ ಪೋಲೀಸ್ ಇದೆಯಲ್ಲ, ಈ ಪೋಲೀಸಿನವರು, Bureau of Investigation-Lokayuktha, Upa-Lokayuktha- ಅವರ ಕೈಕೆಳಗೆ ಇಲ್ಲ. ಇಂಡಿಪೆಂಡೆಂಟ್ ಎಂದು ಮಾಡಿದರು. ಆಗ ಒಂದು ಎಕ್ಸಿಕ್ಯುಟಿವ್ ಆರ್ಡರ್ ಅಥವಾ ಸುತ್ತೋಲೆಯನ್ನು ಹೊರಡಿಸಿದರು. ನಾನು ಒಂದೇ ಒಂದು ಉದಾಹರಣೆ ಹೇಳುತ್ತೇನೆ.ಅವರ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಮಾರ್ಚ್ 6, 1993. ಲೋಕಾಯುಕ್ತದವರಿಗೆ ಒಂದು ಪ್ರಸ್ತಾವನೆ ಕಳುಹಿಸಿಕೊಡುತ್ತಾರೆ. ಯಾರು ಎಂದರೆ, ಲೋಕಾಯುಕ್ತ

ದಲ್ಲಿರುವ ಪೋಲೀಸ್ ಚೀಫ್ he did not agree for registering the case..... ಮೊಯಿಲಿಯವರ ಕಾಲದ ಸ್ಪೆಷಲ್ ಎಕ್ಸಿಕ್ಯೂಟಿವ್ ಆರ್ಡರ್ ಇದೆಯಲ್ಲ, ಅದರ ಆಧಾರದ ಮೇಲೆ ಅವನು ಏನು ಮಾಡಿದ? ಸುಮ್ಮನೆ ಇದ್ದ ಅವರು, 6ನೇ ತಾರೀಖಿಗೆ ಒಪ್ಪದೇಹೋದರೆ, 16ನೇ ತಾರೀಖಿಗೆ ಕೇಸ್ ರಿಜಿಸ್ಟರ್ ಮಾಡಿಕೊಂಡು, ಆ ಮನೆಯನ್ನು ರೈಡ್ ಮಾಡಿಬಿಟ್ಟರು. Is that you wanted to make when you enacted this bill to make them hounding dogs....... ಲೋಕಾಯುಕ್ತ ಪೋಲೀಸಿನವರು ಬ್ಲಾಕ್‌ಮೇಲ್ ಮಾಡುತ್ತಾರೆ. ಇದೊಂದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಅವರೇ ಕೊಟ್ಟಿರತಕ್ಕ ದಾಖಲೆ. ಅವರ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಇದು ಅವಶ್ಯಕತೆ ಇದೆ. 15 ವರ್ಷದಲ್ಲಿ ಯಾರೋ ಒಬ್ಬ ಸೈಟ್ ತೆಗೆದುಕೊಂಡಿರುತ್ತಾನೆ. ಈಗ್ಗೆ 5 ವರ್ಷದಲ್ಲಿ ತೆಗೆದುಕೊಂಡಿರುತ್ತಾನೆ, ಆಗಿ ಅದಕ್ಕೆ 10-15 ಸಾವಿರ ಬಿದ್ದಿರುತ್ತದೆ. ಇವತ್ತು ಅದನ್ನು ರೈಡ್ ಮಾಡುವುದು. ಇವರೇ ಮಾರ್ಕೆಟ್ ವ್ಯಾಲ್ಯೂ ಹಾಕುವುದು ಒಂದೊಂದುಸಾರಿ ಇವರೇ ಕಂಪ್ಲೆಂಟ್ ಲೋಕಾಯುಕ್ತ ಪೋಲೀಸರೇ ಕಂಪ್ಲೆಂಟ್, ಇವರೇ ಇನ್‌ವೆಸ್ಟಿಗೇಟರ್ಸ್, ಈಗ ಇವರೇ ಜಡ್ಜಸ್ ಆಗತಕ್ಕ ಪ್ರಯತ್ನ ಒಂದು ಹೇಳುತ್ತೇನೆ, ಯಾವುದೋ ಒಂದು ರೈಡ್ ಮಾಡಿದರು. ಆ ನಿವೇಶನದ ಬೆಲೆ ಸುಮಾರು 10 ಸಾವಿರ ರೂಪಾಯಿಗಳು. ಎಂದರೆ, ಅದು ಅಲಾಟೆಡ್ ಸೈಟ್, ಡಾಕ್ಯುಮೆಂಟ್ಸ್ ಇರತಕ್ಕ ಸೈಟ್ ಅದರಲ್ಲಿ 18 ಚದರ ಮನೆ ಕಟ್ಟಿದ್ದಾರೆ. ಅದಕ್ಕೆ ಹಾಕಿರತಕ್ಕ ವ್ಯಾಲ್ಯುಯೇಷನ್ 7 ಲಕ್ಷದ 80 ಸಾವಿರ ನಾನು ಹೋಗಿ ನೋಡಿದೆ. ಏಕೆಂದರೆ, ಯಾರಾದರೂ ನೀವು ನೋಡಿದ್ದೀರಾ ಎಂದು ಕೇಳಿದರೆ ಕಷ್ಟವಾಗುತ್ತದೆಂದು ನಾನು ಹೋಗಿ ನೋಡಿದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇದು ಅಷ್ಟಕ್ಕೇ ನಿಲ್ಲಲಿಲ್ಲ. ಈ ಪುಣ್ಯಾತ್ಮರು ಏನೇನು ಫಜೀತಿ ಮಾಡುತ್ತಾರೆಂದರೆ, ಕಾಲು ಒರೆಸುವ ಮ್ಯಾಟ್ ಇನ್ನೂರು ರೂಪಾಯಿ, ಎರಡು ಟ್ಯೂಬ್ ಲೈಟ್ ಇನ್ನೂರು ರೂಪಾಯಿ, ನಾನು ಸ್ಯಾಂಪಲ್ ಓದುತ್ತೇನೆ. ಆಮೇಲೆ ಮೂರು ಪ್ಯಾಂಟ್, ಎರಡು ಷರ್ಟ್, ಎರಡು ಕೋಟು ಒಂದು ಸಾವಿರ ರೂಪಾಯಿ. ಇದು ಅವರು ಅಸೆಸ್ ಮಾಡಿರತಕ್ಕ ವ್ಯಾಲ್ಯೂ. ಒಂದು ಟೀ ಷರ್ಟ್, ಎರಡು ಪ್ಯಾಂಟ್, ಇದು ಅವನ ಮಗನ ಬಟ್ಟೆಗಳಿರ ಬೇಕು; ನಾಲ್ಕುನೂರು ರೂಪಾಯಿ. ಆಮೇಲೆ ಒಂದು ಕಾಟನ್ ಸೀರೆ, ಒಂದು ರೇಷ್ಮೆ ಪಂಚೆ, ಒಂದು ಜುಬ್ಬ, ಒಂದು ಶಲ್ಯ ಎಂಟುನೂರು ರೂಪಾಯಿ. ಇದು ಲೋಕಾಯುಕ್ತ ಪೋಲೀಸಿನವರು ಕೊಟ್ಟಿರುವುದು. ಅವರ ಹೆಸರು ಹೇಳುವುದಿಲ್ಲ. ಇದನ್ನು ನಿಮಗೆ ಕಳುಹಿಸಿಕೊಡುತ್ತೇನೆ. ಆಮೇಲೆ ನಾಲ್ಕು ರೇಷ್ಮೆ ಬ್ಲೌಸ ನಾಲ್ಕುನೂರು ರೂಪಾಯಿ. 13 ವಿವಿಧ ಬಣ್ಣದ ಬ್ಲೌಸ್ ಪೀಸಸ್ ಐದುನೂರು ರೂಪಾಯಿ, ಪ್ರಿಂಟೆಡ್ ರೇಷ್ಮೆ ಸೀರೆಗಳು, 2,500 ರೂಪಾಯಿ. ನಾನು ನೋಡಿದೆ, ಪೆಟ್ಟಿಕೋಟ್ಸ್ ಏನಾದರೂ ಇದರಲ್ಲಿ ಸೇರಿಸಿದ್ದಾರೆಯೇ ಎಂದು, ಅವು ಇದರಲ್ಲಿ ಇಲ್ಲ, ಇವುಗಳನ್ನು ಬಿಟ್ಟಿದ್ದಾರೆ. Who has to look after all these things if they misbehave. ಇದು ನಗೆಪಾಟಲಿಗೆ ಈಡಾಗತಕ್ಕಂಥಾದ್ದು. ಇವರಿಗೆ ಶಿಕ್ಷೆ ಬೇಡವೇ? ಲೋಕಾಯುಕ್ತ ಪೋಲೀಸರು ಎಂದರೆ, ಇವರೇನು ಬೇಟೆ ನಾಯಿಗಳೇ? what do they think of themselves. ಇವರನ್ನು ಏಕೆ ಬೇರೆ ಮಾಡಿದ್ದೀರಿ? They are not under the control of the Lokayuktha, Upa-Lokayuktha... ಅವರಿಗೆ ಕೇರೇ ಮಾಡುವುದಿಲ್ಲ. ಲೋಕಾಯುಕ್ತದಲ್ಲಿರತಕ್ಕ ಪೋಲೀಸಿನವರು ಒಂದು ಸುಳ್ಳು ಅರ್ಜಿ ತೆಗೆದುಕೊಳ್ಳುವುದು, ಅವರಿಗೆ

ಹೇಳಿಕಳುಹಿಸುವುದು. ಅವರು ಯಾರಿಗೆ ಬೇಕಾದರೂ ಹೇಳಿಕಳುಹಿಸುತ್ತಾರೆ. ನಾಳೆ ನಿಮ್ಮ ಚೀಫ್ ಸೆಕ್ರೆಟರಿಯವರಿಗೂ ಹೇಳಿಕಳುಹಿಸಬಹುದು. ನಿಮ್ಮ ಮೇಲೆ, ನಮಗೆ ಒಂದು ಅರ್ಜಿ ಬಂದಿದೆ ಎಂದು. ಈಗ ನಾವು ಹೇಳಿದ್ದೇವೆ, ಆದ್ದರಿಂದ ಇನ್ನೊಬ್ಬರಿಗೆ ಹೇಳಿಕಳುಹಿಸಬಹುದು. ನಾವು ಹೇಳದೇ ಇರತಕ್ಕವರ ಮೇಲೆ. ನಿಮ್ಮ ಮೇಲೆ ಅರ್ಜಿ ಬಂದಿದೆ. ವಿಚಾರಣೆ ಮಾಡುತ್ತೇವೆ ಎಂದು ಹೇಳುವುದು, ನಂತರ ವ್ಯಾಪಾರ ಮಾಡುವುದು. ನಡೆಯುತ್ತಾ ಇದೆ, ಸಾರೋದ್ಧಾರವಾಗಿದೆ. ತಹಶೀಲ್ದಾರ್, ಬಿ.ಡಿ.ಎ. ರೇಂಜ್ ಫಾರೆಸ್ಟ್ ಆಫೀಸರ್. ಈ ಫಾರೆಸ್ಟ್ ಆಫೀಸರ್ ಕತೆಯೇ ಬೇರೆ. ಅವರ ಹತ್ತಿರ ಲೂಟಿ ಮಾಡಿದ್ದಾರೆ. ಇವರು, ಚುನಾವಣೆ ನಡೆಸುವುದಕ್ಕೆ ಒಂದು ರಾಜಕೀಯ ಪಾರ್ಟಿಗೆ ಬೇಕಾದ ದುಡ್ಡು ವಸೂಲಿ ಮಾಡಿಕೊಂಡಿದ್ದಾರೆ. ಇದಕ್ಕೆ ಲೋಕಾಯುಕ್ತ ಇರುವುದು? You know the intention when we wanted this law. Now you change that independent status and bring them under the control of Lokayuktha, Upa-Lokayuktha. ಇದಲ್ಲದೇಹೋದರೆ, ಲೋಕಾಯುಕ್ತ, ಉಪ ಲೋಕಾಯುಕ್ತ ಕಿತ್ತುಹಾಕಿ. why that white elephant? ಇದು ಬೇಕಿಲ್ಲ ಅಲ್ಲವೇ, ಇದನ್ನು ಮಾಡಿ ಇಷ್ಟನ್ನು ಹೇಳಿ, ನಾನು ಹೆಚ್ಚಿಗೆ ವಿಚಾರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ತಮ್ಮ ಮುಖಾಂತರ ಒಂದು ವಿಷಯ ಪ್ರಸ್ತಾಪ ಮಾಡುತ್ತೇನೆ. starting from Sri Alexander, Sri patnaik, Sri Achuta Rao, IPS, Sri Srivatsva, IPS, Sri Gurupasad, IAS Officer Sri Maheshan, IAS Hallppanavar, IAS. ಹಾಲಪ್ಪನವರ್ ಎಂದರೆ, ಸುಲಭ ಶೌಚಾಲಯದ ನೇತಾರರು, ದುಡ್ಡು ಹೊಡೆಯುವುದರಲ್ಲಿ ನಿಮ್ಮ ಚೀಫ್ ಸೆಕ್ರೆಟರಿಯವರಿಗಿಂತ ಕುಳ್ಳವಾಗಿರುವವರು, ಪಾಪ ಎತ್ತರವಾಗಲಿ ಎಂದು ಫೈಲುಗಳನ್ನೆಲ್ಲಾ ತೆಗೆದುಕೊಂಡು, ಅದರ ಮೇಲೆ ಕುಳಿತುಕೊಂಡುಬಿಟ್ಟಿದ್ದಾರೆ. ಆ ಫೈಲುಗಳನ್ನೆಲ್ಲಾ ಸಭೆಯ ಮುಂದೆ ತಂದಿಡಿ. ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ನಾನು, ಏನೇನು ಹೆಸರುಗಳನ್ನು ಹೇಳಿದ್ದೇನೆಯೋ ಅವರ ಫೈಲುಗಳನ್ನು ತಂದಿಡಿ.

ಈ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ನಾನು ಹೇಳಿದಂತಹವರು ಯಾರು ಇದ್ದಾರೆ ಅವರ ಮೇಲೆ ಒಂದು ಸಿ ಬಿ ಐ ಎನಕ್ವೈರಿ ಮಾಡಿಸಿ ಮುಗಿಸಿಬಿಡಿ. ಅವರು ಸರ್ವೀಸ್‌ಗೆ ಬರುವುದಕ್ಕಿಂತ ಮುಂಚೆ ಎಷ್ಟು ಆಸ್ತಿ ಇತ್ತು? ಈಗ ಎಷ್ಟು ಆಸ್ತಿ ಇದೆ? ಅವರು ಸರ್ವೀಸ್‌ಗೆ ಬಂದು ಎಷ್ಟು ವರ್ಷ ಆಯಿತು. ಸ್ವಾಮಿ ನಾನು 1962ರಿಂದ ರಾಜಕೀಯದಲ್ಲಿದ್ದೇನೆ. 1967ನೇ ಇಸವಿಯಿಂದ ಒಂದಲ್ಲ ಒಂದು ಸ್ಥಾನದಲ್ಲಿ ಇದ್ದು ಕೆಲಸ ಮಾಡಿದ್ದೇನೆ. ನಾನು ಏನಾದರೂ ಒಂದು ಕಂಟೆಸ್ಸಾ ಕಾರು ತೆಗೆದುಕೊಂಡು ಓಡಿಸಿಬಿಟ್ಟರೆ ಕಣ್ಣೆಲ್ಲಾ ಕೆಂಪಾಗುತ್ತವೆ. ನಾನು ಇದುವರೆಗೂ ಬಾಡಿಗೆ ಮನೆಯಲ್ಲಿ ಇದ್ದೆ. ಈಗ ಏನೋ ಒಂದು ಸ್ವಂತ ಮನೆ ಮಾಡಿಕೊಂಡಿದ್ದೇನೆ. ಆದರೆ ಇವರನ್ನು ಯಾರು ಹೇಳುವವರು ಕೇಳುವವರು ಇಲ್ಲ. ತಾವು ದಯಮಾಡಿ ಒಂದು ಎನಕ್ವೈರಿ ಮಾಡಿಸಿ. ಆಗ ತಮಗೆ ಗೊತ್ತಾಗುತ್ತದೆ. ತಾವು ಯಾವರೀತಿ ಆಡಳಿತ ನಡೆಸುತ್ತಿದ್ದೀರಿ ಎಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಜೆ.ಹೆಚ್. ಪಟೇಲ್‌ರವರಿಗೆ ಕೇಳುತ್ತೇನೆ. ತಾವು ಆಡಳಿತ ನಡೆಸುವುದರಿಂದ ಕಾಲದಲ್ಲಿ ಪತ್ರಿಕೆಗಳಲ್ಲಿ ಬಂದಿದೆ. "Convict still in Government Service".... ಅಂತ. ಇದು ಗೌರ್ನಮೆಂಟ್ ಆಫ್ ಇಂಡಿಯಾ ಸರ್ಕ್ಯುಲರ್. ಇದರ ನಂಬರ್ ಹಾಕಿ ಬರೆಸಿದ್ದಾರೆ. ಇದನ್ನು ಕೊಡುವವರು ಯಾರು?

ಮುಖ್ಯ ಕಾರ್ಯದರ್ಶಿಗಳು ಕೊಡಬೇಕು, ಇಲ್ಲ ಹೋಂ ಸೆಕ್ರೆಟರಿ ಕೊಡಬೇಕು. ಇದು ಲೇಟೆಸ್ಟ್ ಸರ್ಕ್ಯುಲರ್. ಇದರಲ್ಲಿ ಯಾರೋ ಸಣ್ಣ ಪುಟ್ಟ ಅಧಿಕಾರಿಗಳ ಹೆಸರುಗಳನ್ನು ಬರೆಸಿದ್ದಾರೆ. ಈಗ ನಾನು ಏನು ಹೇಳಿದೆ ಆ ಹೆಸರುಗಳು ಇದರಲ್ಲಿ ಇಲ್ಲ. ನಾನು ಈ ಸರ್ಕ್ಯುಲರನ್ನು ನಿಮಗೆ ಕಳುಹಿಸಿಕೊಡುತ್ತೇನೆ. ಆ ಸರ್ಕ್ಯುಲರ್ ನಂಬರ್ ಕೊಟ್ಟು ಪತ್ರಿಕೆಗಳಲ್ಲಿ ಬರೆಸಿದ್ದಾರೆ. ಇದನ್ನು ಯಾರು ಕೊಡುತ್ತಾರೆ. ಇಂತಹವರನ್ನು ಇಟ್ಟುಕೊಂಡು ನೀವು ಆಡಳಿತ ನಡೆಸಬೇಕು ನೋಡಿ ಎಷ್ಟು ಚೆನ್ನಾಗಿರುತ್ತದ ನಿಮ್ಮ ಆಡಳಿತ? They are your enemies. I don't know. There are two groups one group have decided to bury you... ಇದನ್ನು ಎಚ್ಚರಿಕೆಯಿಂದ ನೋಡಿಕೊಳ್ಳಿ. ನೋಡಿಕೊಳ್ಳಿ ನೋಡಿಕೊಳ್ಳಿ ಎಚ್ಚರಿಕೆಯನ್ನು ಕೊಡುತ್ತೇನೆ. ನಾನು ಇಷ್ಟು ಹೇಳಿ ಹೆಚ್ಚು ಟೈಮ್ ತೆಗೆದುಕೊಳ್ಳುವುದಿಲ್ಲ. ಆದರೆ ಒಂದು ಮಾತನ್ನು ಹೇಳುತ್ತೇನೆ. ದುಡ್ಡು ಇಲ್ಲ ಅಂತ ಹೇಳುತ್ತೇವೆ. ಏನು ವ್ಯವಹಾರ ಮಾಡಬೇಕು. ಇಂಟರ್‌ನ್ಯಾಷನಲ್ ಏರ್‌ಪೋರ್ಟ್. ಎರಡೇ ಮಾತಿನಲ್ಲಿ ಮುಗಿಸುತ್ತೇನೆ. ಅಧ್ಯಕ್ಷರೇ ದೇವನಹಳ್ಳಿಯ ಹತ್ತಿರ ಮಾಡುವುದಕ್ಕೆ ಹೊರಟಿದ್ದೀರಿ. ನಾನು ಹೇಳುವುದನ್ನು ಕೇಳಿ ಈಗ ನಮ್ಮ ಟಾಟಾಸ್‌ನವರೇ ಏನೋ ಅವರೇ ನೀರಿನ ವ್ಯವಸ್ಥೆಯನ್ನು ಮಾಡಿಬಿಡುತ್ತಾರೆ ಅಂತ. ತಿಪ್ಪಗೊಂಡನಹಳ್ಳಿ ಜಲಾಶಯ. ಅಲ್ಲಿ ಒಂದು ಟೌನ್‌ಶೀಫ್ ಮಾಡುವುದಕ್ಕೆ ಕೊಟ್ಟಿದ್ದು ನಿಮ್ಮ ಸರ್ಕಾರ ಅದು ಕೋರ್ಟಿಗೆ ಹೋಯಿತು. ಕೋರ್ಟಿಗೆ ಹೋಗಿ ಅವರು ಒಂದು ಆರ್ಡರ್ ಕೊಟ್ಟರು. ನಾನು ಏನು ಹೇಳುತ್ತೇನೆ ಎನ್ನುವುದನ್ನೇ ಕೇಳುವುದಿಲ್ಲ ಅಲ್ಲ ತಾವು. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎನ್ನುವುದೇ ಗೊತ್ತಿಲ್ಲವಲ್ಲ ತಮಗೆ. ಈಗ ಏನು ಆಗಿದೆ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಅಥಾರಿಟಿ ಒಂದು ಎರಡು ಲಕ್ಷ ಜನ ಇರತಕ್ಕಂಥ ಒಂದು ಟೌನ್ ಡೆವಲಪ್ ಆಗುತ್ತದೆ. ಆ ಸಿವರೇಜ್ ನೀರು ಎಲ್ಲಾ ಬಂದು ಎಲ್ಲಿಗೆ ಹೋಗುತ್ತದೆ ಹೇಳಿ. ತಿಪ್ಪಗೊಂಡನಹಳ್ಳಿ ಜಲಾಶಯನಕ್ಕೆ ಬರುತ್ತದೆ.

ಶ್ರೀ ಬಸವರಾಜರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಮಾತನಾಡುತ್ತಿರುವುದು ನೋಡಿದರೆ ಅವರೇನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾರೋ ಅಥವಾ ಬಜೆಟ್ ಮೇಲೆ ಮಾತನಾಡುತ್ತಾರೋ ಗೊತ್ತಿಲ್ಲ. ಅವರು ಬಜೆಟ್ ಮೇಲೆ ಮಾತನಾಡುತ್ತಿದ್ದರೆ ಅವರು ಮಾತನಾಡುತ್ತಾ ಮಾತನಾಡುತ್ತಾ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಬಗ್ಗೆ ಮಾತನಾಡುತ್ತಾರೆ. ಅದು ಬಜೆಟ್‌ಗೆ ಹೇಗೆ ಸಂಬಂಧ ಬರುತ್ತದೆ?

ಅಧ್ಯಕ್ಷರು : ನಿಮ್ಮ ಮಾಹಿತಿಗೆ ತಾವು ಮಂತ್ರಿಗಳು ಆಗಿದ್ದೀರಿ. ಬಜೆಟ್ ಮೇಲೆ ಸಾಮಾನ್ಯ ಚರ್ಚೆ ಆಗುವಾಗ ಆಡಳಿತದ ಎಲ್ಲಾ ವಿಷಯಗಳ ಮೇಲೆ ಮಾತನಾಡುವುದಕ್ಕೆ ಅವಕಾಶ ಇದೆ. ತಮಗೆ ಗೊತ್ತಿಲ್ಲ. ನಾನು ತಮ್ಮ ಕ್ರಿಯಾಲೋಪವನ್ನು ತಳ್ಳಿ ಹಾಕಿದ್ದೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಕೋರಮಂಗಲದ ಕ್ರೀಡಾಂಗಣದ ಮೇಲೆ ಮಾತನಾಡಿದರೆ ಅದು ಬಜೆಟ್ ಮೇಲೆ ಮಾತನಾಡಿದಂತೆ ಆಗುತ್ತದೆಯೇ? ಅದರ ಬಗ್ಗೆ ಮಾತನಾಡಬೇಕೇ? ತಾವು ಮಂತ್ರಿಗಳಾಗಿದ್ದೀರಿ. ಮಾನ್ಯ ಅಧ್ಯಕ್ಷರೇ ಈ ಅರ್ಕಾವತಿ, ವೃಷಾಭಾವತಿ

ಆದಂತೆ ಆಗುತ್ತದೆ. ನಾನು ಹೇಳುತ್ತೇನೆ. ದಯಮಾಡಿ ಹಾಗೆ ಮಾಡಬೇಡಿ. ನೀರು ಅಲ್ಲಿ ಇಲ್ಲ, ಅದು it has been declared as drought area so far as ground water is concerned.. ನೀವು ಬೋರ್‌ವೆಲ್ ತೆಗೆದು ನೀರು ಕೊಡುತ್ತೇವೆ ಅಂದರೆ, ಸಾಧ್ಯವಿಲ್ಲ. ಅಲ್ಲಿ ಕಾವೇರಿ ಇಲ್ಲ, ತೆಗೆದುಕೊಂಡು ನಿಮ್ಮ ಲೆಕ್ಕದಲ್ಲಿ ಅಲ್ಲಿ 800 ಎಕರೆ ಜಮೀನು ಇರುವುದು . ಆದರೆ ಅದರಲ್ಲಿ ಎಷ್ಟು ಎನ್‌ಕ್ರೋಚ್ ಮಾಡಿಕೊಂಡಿದ್ದಾರೋ ಗೊತ್ತಿಲ್ಲ. ಬಿಡದಿ ಹತ್ತಿರ 2 ಸಾವಿರ ಎಕರೆ ಸರ್ಕಾರಿ ಜಮೀನು ಇದೆ. ನಾವೇನು ಹೊಟ್ಟೆ ಕಿಚ್ಚಿಗೆ ಹೇಳುತ್ತಿಲ್ಲ. ನೀವು ಹೇಗಿದ್ದರೂ ಎಕ್ಸ್‌ಪ್ರೆಸ್ ರೋಡ್ ಮಾಡಿಸಿಕೊಳ್ಳುತ್ತಿದ್ದೀರಿ. ಅಲ್ಲಿಗೆ ನೀರು ತೆಗೆದುಕೊಂಡು ಹೋಗಲು ಹತ್ತಿರ ಆಗುತ್ತದೆ. ಈ ರಿಸಿವಿಂಗ್ ಸ್ಟೇಷನ್‌ಗೆ ಸುಮಾರು 35 ಕಿಲೋಮೀಟರ್‌ಗಳು ಆಗುತ್ತದೆ ನೀವು ಇಲ್ಲಿಂದ ಅಲ್ಲಿಗೆ ನೀರು ತೆಗೆದುಕೊಂಡು ಹೋಗಬೇಕಾದರೆ. 120 ಕೋಟಿ ಎಕ್ಸ್‌ಟ್ರಾ ಖರ್ಚು ಆಗುತ್ತದೆ. ಯಾರೂ ಕೊಡುವುದಿಲ್ಲ. ಆದ್ದರಿಂದ ದಯಮಾಡಿ ನೀವು ಬದಲಾವಣೆ ಮಾಡಿಕೊಳ್ಳಿ. ಇಲ್ಲದಿದ್ದರೆ ನಾಳೆ ತೊಂದರೆ ಆಗುತ್ತದೆ. ಅದಕ್ಕೆ ನಾನು ಹೇಳುತ್ತಿದ್ದೇನೆ. ನಾನು ಭಾಷಣ ಮುಗಿಸುವುದಕ್ಕಿಂತ ಮುಂಚೆ ಇದನ್ನು ತಮಗೆ ತೋರಿಸಬೇಕು ಅಂತ. ಬೆಂಗಳೂರು ಯೂನಿವರ್ಸಿಟಿ ಬಗ್ಗೆ ಬೆಂಗಳೂರು ಯೂನಿವರ್ಸಿಟಿ ಬಗ್ಗೆ ಡೀಟೇಲ್ಸ್ ಹೇಳುವುದಕ್ಕೆ ಹೋಗುವುದಿಲ್ಲ. ಹೇಳಲು ಹೋದರೆ ಒಂದು ವರ್ಷವಾಗುತ್ತದೆ. ನಾನು ಹೇಳುತ್ತೇನೆ ಅಧ್ಯಕ್ಷರೇ ಹೊರದೇಶಗಳಲ್ಲಿ ಬೆಂಗಳೂರು ಯೂನಿವರ್ಸಿಟಿ ಡಿಗ್ರಿಗಳು ಅಂದರೆ ಮೆಡಿಕಲ್ ಇಂಜನಿಯರಿಂಗ್ ಡಿಗ್ರಿ ಆದಿಯಾಗಿ ಅಲ್ಲಿಂದ ಎನ್‌ಕ್ವೈರಿಗೆ ಕಳುಹಿಸುತ್ತಾರೆ. ನಮ್ಮ ವಿದ್ಯಾರ್ಥಿಗಳು ಅಲ್ಲಿಗೆ ಹೋದರೆ ಆ ಡಿಗ್ರಿ ಸರ್ಟಿಫಿಕೇಟುಗಳ ಬಗ್ಗೆ ವೆರಿಫಿಕೇಶನ ಅಂಡ್ ಎನ್‌ಕ್ವೈರಿಗೆ ಕಳುಹಿಸುತ್ತಾರೆ ಆ ಸರ್ಕಾರಗಳು. ಬೆಂಗಳೂರು ಯೂನಿವರ್ಸಿಟಿ ಅಷ್ಟು ಕೆಟ್ಟಿದೆ. ಎರಡು ಸಿ.ಓ.ಡಿ ರಿಪೋರ್ಟ್ಸ್ ಇವೆ. ಒಂದು ಹೈಕೋರ್ಟ್ ಆರ್ಡರ್ ಇತ್ತು. ಅಲ್ಲಿ ಆಗಿರತಕ್ಕಂಥ ಅವ್ಯವಹಾರಗಳನ್ನೆಲ್ಲಾ ಹಾಕಿ ಮುಖ್ಯಮಂತ್ರಿಗಳಿಗೆ ಒಂದು ಕಾಗದ ಬರೆದೆ. ಜ್ಯುಡಿಷಿಯಲ್ ಆರ್ಡರ್‌ಗೆ, ಪ್ರೋಬ್‌ಗೆ ಆರ್ಡರ್ ಮಾಡಿ ಏಕೆ, ಕೈ ಕಟ್ಟಿಕೊಂಡು ಕುಳಿತಿದ್ದೀರಿ It is time that Government should step in and order for a judicial probe.. ಎಂದು ಹೇಳಿದೆ ಏನು ಮಾಡಿದ್ದಾರೋ ಗೊತ್ತಿಲ್ಲ. ಈಗಲಾದರೂ ತಾವು ಉತ್ತರ ಕೊಡಬೇಕು. because all is not well in Bangalore University... ಡಿಗ್ರಿಗಳು ಮಾರಾಟ ಆಗುತ್ತಿವೆ. ಮಾರ್ಕ್ಸ್ ಸಿಕ್ಕಾಪಟ್ಟೆ ದುಡ್ಡು ಕೊಟ್ಟು ಕೊಂಡುಕೊಳ್ಳುವುದು. ಯಾರು ಏನು ಬೇಕಾದರೂ ಮಾಡಿಕೊಳ್ಳಬಹುದು. ನಾನು ಹೇಳುತ್ತೇನೆ ಕಾಮನ್ ಎಂಟ್ರನ್ಸ್ ಟೆಸ್ಟ್. ಅದರ ಬಗ್ಗೆ ಗೊತ್ತೇ ನಿಮಗೆ ಹೊರ ರಾಜ್ಯದವರು ಕೆಲವರು ಪರೀಕ್ಷೆಗೆ ಕೂರುತ್ತಾರೆ 6 ಲಕ್ಷ ಕೊಟ್ಟರೆ ಅವರು ಕೇಳಿದಷ್ಟು ಮಾರ್ಕ್ಸ್. ಕೇಳಿದ ಕಾಲೇಜು. ಪಾಪ ಪಿ.ಯು.ಸಿ. ಯಲ್ಲಿ ಆ ಹುಡುಗ ವರ್ಷವೆಲ್ಲಾ ಹೆಣ ಹೊತ್ತಾ ಹುಡುಗರ ಗತಿ ಏನು? ಇಲ್ಲಿ ದುಡ್ಡು ಕೊಟ್ಟವರಿಗೆ ಮಾರ್ಕ್ಸ್ ಹಾಕಿ ಯಾರ್‍ಯಾರಿಗೆ ಬೇಕೋ ಅವರನ್ನು ಪಾಸ್ ಮಾಡಿಸಿ ಕೊಡುವುದಕ್ಕೆ ಅದಕ್ಕೊಂದು ರ್‍ಯಾಕೇಟ್ ಇದೆ. ಇವೆಲ್ಲಾ ಇದ್ದಾವೆ.

SRI M.P. PRAKASH : All is not well in the state of Denmark..

ಶ್ರೀ ಎಚ್. ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ ಬೆಂಗಳೂರು ಯೂನಿವರ್ಸಿಟಿ ಬಗ್ಗೆ ಸೀರಿಯಸ್ ಆಗಿ ಯೋಚನೆ ಜ್ಯುಡಿಷಿಯಲ್ ಪ್ರೋಬ್‌ನ್ನು ಮಾಡಬೇಕು. ಏಕೆಂದರೆ ಭಾರಿ ಹಗುರ

ಆಗಿದೆ. ಬೀದಿ ಬೀದಿಯಲ್ಲಿ ಮಾತನಾಡಿಕೊಳ್ಳುತ್ತಾರೆ. ಬಾಲಕೃಷ್ಣರವರದ್ದು ಇ.ಎಸ್.ಶೆಟ್ಟಿಯವರದ್ದು ಇಬ್ಬರದ್ದು ಸ್ಟೇಟ್‌ಮೆಂಟ್ ಬಂದಿದೆ ಸಾರ್ವತ್ರಿಕವಾಗಿ. ನಾವು ತಲೆತಗ್ಗಿಸತಕ್ಕಂಥ ಪರಿಸ್ಥಿತಿಗೆ ಬಂದಿದ್ದೇವೆ. Now, atleast open your eyes and order for a judicial probe. ಇಷ್ಟನ್ನು ಹೇಳಿ ಮಾನ್ಯ ಅಧ್ಯಕ್ಷರೇ, ನಾನು ಇನ್ನೇನು ಮಾತನಾಡುವುದಿಲ್ಲ. ನಾನು ಹೇಳಿದಂತಹ ವಿಚಾರಗಳನ್ನು ಗಮನಿಸಿ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಏನು ಎನ್ನುವುದನ್ನು ನಾವೆಲ್ಲ ಅರ್ಥ ಮಾಡಿಕೊಂಡಿದ್ದೇವೆ. "Minority will have its say, majority will have its way". You will have your way but no doubt be cautious. Please don't punish people of Karnataka. You punish those who are guilty. ಅಷ್ಟನ್ನು ಹೇಳಿ ನಾನು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಅಧ್ಯಕ್ಷರೇ, 1995-96ರ ಬಜೆಟ್ ಮೇಲಿನ ಚರ್ಚೆಯನ್ನು ಬಹಳ ಗಂಭೀರವಾಗಿ ಚರ್ಚೆ ಮಾಡುತ್ತಾ ಇರತಕ್ಕಂಥ ಸಂದರ್ಭದಲ್ಲಿ ತಾವು ಮೊಟ್ಟ ಮೊದಲನೆಯದಾಗಿ ಆಡಳಿತ ಪಕ್ಷಕ್ಕೆ ಕೊಟ್ಟಿರತಕ್ಕಂಥಾದ್ದಕ್ಕೆ ತಮಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಾ ಒಂದು ಹೊಸ ಸಂಪ್ರದಾಯವನ್ನು ತಾವು ಈ ಸದನದಲ್ಲಿ ಹಾಕಿದ್ದೀರಿ ಅದು ಮೆಚ್ಚುವಂತಹ ಸಂಪ್ರದಾಯ. ಇಂತಹ ಒಂದು ಸಂದರ್ಭದಲ್ಲಿ ಹೆಚ್ಚು ಅವಕಾಶವನ್ನು ವಿರೋಧ ಪಕ್ಷಗಳಿಗೆ ಕೊಡತಕ್ಕಂಥಾದ್ದು ಒಂದು ಒಳ್ಳೆಯ ಸಂಪ್ರದಾಯವಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ನಾವು ಸುಮಾರು 126 ಜನ ಸದಸ್ಯರು ಇದ್ದರೂ ಸಹ ಹೆಚ್ಚು ಅವಕಾಶವನ್ನು ವಿರೋಧಪಕ್ಷಗಳಿಗೆ ಕೊಡತಕ್ಕಂಥಾದ್ದು ಅದರಲ್ಲೂ ವಿಶೇಷವಾಗಿ 3 ಜನ ಮಾಜಿ ಅರ್ಥ ಸಚಿವರಾಗಿದ್ದಂತಹವರಿಗೆ ಮತ್ತು ಅದರಲ್ಲಿ ಇಬ್ಬರು ಮುಖ್ಯಮಂತ್ರಿಗಳಾಗಿದ್ದವರಿಗೆ ವಿಶೇಷವಾಗಿ ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಟ್ಟಿರತಕ್ಕಂಥಾದ್ದು ಒಳ್ಳೆಯ ಸಂಪ್ರದಾಯ ಎಂದು ನಾನು ಭಾವಿಸಿಕೊಂಡಿದ್ದೇನೆ. ಈ ಸಂಪ್ರದಾಯವನ್ನು ಮುಂದುವರಿಸಬೇಕು ಎನ್ನುವಂಥಾದ್ದು ನನ್ನ ಅನಿಸಿಕೆ. ಕಾರಣ ಏಕೆ ಅಂತ ಹೇಳಿದರೆ ಬಹಳ ದಿವಸಗಳಿಂದ ಇಲ್ಲಿ ನಡೆದುಕೊಂಡು ಬಂದಿರತಕ್ಕಂಥ ಪದ್ಧತಿ ಏನು ಇತ್ತು ಎಂದರೆ ವಿರೋಧಪಕ್ಷದ ನಾಯಕರು ಚರ್ಚೆಯನ್ನು ಆರಂಭಿಸಿದರೆ ಎಲ್ಲಾ ರಾಜಕೀಯ ಪಕ್ಷಗಳಿಗೆ ಈ ಕಡೆ ಆ ಕಡೆ ಅವಕಾಶ ಕೊಡುತ್ತಿದ್ದುದು ಇದ್ದರೂ ಸಹ ಇಲ್ಲೂ ಸಹ ಗಂಭೀರವಾಗಿ ಚರ್ಚೆಯನ್ನು ಮಾಡಿ ವಿರೋಧಪಕ್ಷಕ್ಕೆ ಹೆಚ್ಚು ಅವಕಾಶವನ್ನು ಕೊಟ್ಟಿರತಕ್ಕಂಥಾದ್ದು ಒಳ್ಳೆಯ ಸಂಪ್ರದಾಯ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಇದರಿಂದ ನಮ್ಮ ಸರ್ಕಾರಕ್ಕೆ ಆಡಳಿತ ಮಾಡುವುದಕ್ಕೆ ಹೆಚ್ಚು ಸಹಕಾರಿಯಾಗುತ್ತದೆ. ಎಷ್ಟು ಟೀಕೆ ಬರುತ್ತದೆ ಅಷ್ಟು ಒಳ್ಳೆಯದು ಎನ್ನುವುದನ್ನು ಮನಗಂಡು ಅದನ್ನು ನಾನು ಸ್ವಾಗತ ಮಾಡುತ್ತಾ ನಾನು ಎರಡು ಮೂರು ವಿಚಾರಗಳ ಬಗ್ಗೆ ಮಾತನಾಡಲು ಇಷ್ಟಪಡುತ್ತೇನೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರಪ್ಪಮೊಯಿಲಿಯವರು ಮಾತನಾಡುವಂತಹ ಕಾಲದಲ್ಲಿ ಪ್ಲಾನ್ ಔಟ್‌ಲೇ ಬಗ್ಗೆ ಒಂದು ಮಾತನ್ನು ಹೇಳಿದರು. 1994-95ನೇ ಸಾಲಿನಲ್ಲಿ 2800 ಕೋಟಿ ಪ್ಲಾನ್ ಔಟ್‌ಲೇನಲ್ಲಿ 4 ತಿಂಗಳಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ಎನ್ನತಕ್ಕಂಥ ಮಾತನ್ನು ಕೇಳಿದರು. ಆಗ ನಾನು ಮಧ್ಯೆದಲ್ಲಿ ಮಾತನಾಡಬಾರದು ಅಂತ ಅದನ್ನು ಗುರುತು ಹಾಕಿಕೊಂಡಿದ್ದೆ. ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತಂದರೆ ಅವರು ತಪ್ಪಾಗಿ ತಿಳಿದುಕೊಳ್ಳುವುದಿಲ್ಲ ಎನ್ನತಕ್ಕಂಥ ಮಾತನ್ನು

ಹೇಳುತ್ತೇನೆ. ಏಕೆಂದರೆ ನಾನೂ ಸಹ ಅವರ ಪಕ್ಷದಲ್ಲಿ ಬಹಳ ದಿವಸಗಳ ಕಾಲ ಇದ್ದು ಕೆಲಸ ಮಾಡಿದ್ದರಿಂದ ಯವುದೇ ರಾಜಕೀಯ ಪಕ್ಷಗಳು ಇರಲಿ ಬಜೆಟ್ ಎನ್ನತಕ್ಕಂಥಾದ್ದನ್ನು ಬೇರೆ ರೀತಿಯಲ್ಲಿ ಬೇರೆ ದೃಷ್ಟಿಯಲ್ಲಿ ನೋಡತಕ್ಕಂಥಾದ್ದು ಸೂಕ್ತ ಎನ್ನತಕ್ಕ ದೃಷ್ಟಿಯಿಂದ ಒಂದು ಮಾತನ್ನು ಹೇಳುತ್ತೇನೆ. 8 ತಿಂಗಳಲ್ಲಿ 2800 ಕೋಟಿ ರೂಪಾಯಿಗಳಲ್ಲಿ ನಾವು ಖರ್ಚು ಮಾಡಿದ್ದು ಎಷ್ಟು ಅಂದರೆ 1400 ಕೋಟಿ ರೂಪಾಯಿಗಳು ಮಾತ್ರ. 1400 ಕೋಟಿ ಪ್ಲಾನ್ ಔಟ್‌ಲೇನಲ್ಲಿ ನಾವು ಎಂಟೂವರೆ ತಿಂಗಳ ಕಾಲದಲ್ಲಿ ಖರ್ಚು ಮಾಡಿದ್ದೇವೆ. ಡಿಸೆಂಬರ್ ತಿಂಗಳ ನಂತರ ಜನವರಿ ಫೆಬ್ರವರಿ ಮಾರ್ಚಿ ಇಲ್ಲಿಯವರೆಗೆ ಈ 4 ತಿಂಗಳಲ್ಲಿ 1400 ಕೋಟಿ ರೂಪಾಯಿಗಳನ್ನು ಈ ಪ್ಲಾನ್ ಔಟ್‌ಲೇನಲ್ಲಿ ಖರ್ಚು ಮಾಡಿದ್ದೇವೆ ಎನ್ನತಕ್ಕಂಥಾದ್ದನ್ನು ಅವರ ಗಮನಕ್ಕೆ ತಂದರೆ ಮಾನ್ಯ ಬಂಗಾರಪ್ಪನವರು ಒಪ್ಪುತ್ತಾರೆ ಎಂದು ನಾನು ಅಂದುಕೊಂಡಿದ್ದೇನೆ.

12.40 ಪಿ.ಎಂ

1400 ಕೋಟಿಯನ್ನು ಪ್ಲಾನ್ ಔಟ್-ಲೇಗೆ ಖರ್ಚು ಮಾಡಲಾಗಿದೆಯೆಂದು ಅವರ ಗಮನಕ್ಕೆ ತಂದರೆ ಮಾನ್ಯ ಬಂಗಾರಪ್ಪನವರು ಒಪ್ಪುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಯಾವುದೇ ಪ್ಲಾನ್ ಅನ್ನು ಫಿಕ್ಸ್ ಮಾಡಿ ಖರ್ಚು ಮಾಡುವಂಥ ಕಾಲದಲ್ಲಿ ಕೊನೆ ನಾಲ್ಕು ತಿಂಗಳು ಮಾತ್ರ ಸಿಗುತ್ತದೆ. ಈಗ 3,758 ಕೋಟಿ ರೂಪಾಯಿಗಳಷ್ಟು ಪ್ಲಾನ್‌ನಲ್ಲಿ ಫಿಕ್ಸ್ ಮಾಡಿಕೊಂಡು ಬರಲಾಗಿದೆ. ಅದರಲ್ಲಿ ಅರ್ಧ ಹಣ 8 ತಿಂಗಳಲ್ಲಿ ಖರ್ಚಾದರೆ ಇನ್ನರ್ಧ ಹಣ 4 ತಿಂಗಳಲ್ಲಿ ಖರ್ಚಾಗುತ್ತದೆ. ಹಣ ಸಂಗ್ರಹಣೆ ಮಾಡತಕ್ಕಂಥಾದ್ದರಲ್ಲಿ, ಅದು ಸೇಲ್ಸ್ ಟ್ಯಾಕ್ಸ್ ಇರಬಹುದು, ಎಕ್ಸೈಸ್ ಟ್ಯಾಕ್ಸ್ ಇರಬಹುದು, ವೆಹಿಕಲ್ ಟ್ಯಾಕ್ಸ್ ಇರಬಹುದು, ಇದನ್ನೆಲ್ಲಾ ಡಿಸೆಂಬರ್ ತಿಂಗಳಿನಿಂದಾಚೆಗೇ ಹೆಚ್ಚು ಕಲೆಕ್ಟ್ ಮಾಡುವುದು. ಆ ದೃಷ್ಟಿಯಿಂದ ಈ 4 ತಿಂಗಳಲ್ಲಿ 1400 ಕೋಟಿ ರೂಪಾಯಿ ಖರ್ಚು ಮಾಡಿರುವುದು. ಅದು ಹಿಂದಿನಿಂದ ಬಂದಿರತಕ್ಕಂಥ ಪ್ರಾಕ್ಟೀಸ್ ಎಂದು ಮಾನ್ಯ ಸದಸ್ಯರು ಭಾವಿಸಿಕೊಳ್ಳಬೇಕು. ಇನ್ನು ಮುಂದಿನ ವರ್ಷ ಯಾವ ರೀತಿ ಕಾರ್ಯಕ್ರಮ ಮಾಡುತ್ತಾರೆಂಬುದು ಬಜೆಟ್ ಅವಲಂಬಿಸಿರುತ್ತದೆ. ಜಾಸ್ತಿ ತೆರಿಗೆ ಹಾಕಿರುವ ಬಗ್ಗೆ ಮಾತ್ರ ಎಲ್ಲರೂ ಮಾತನಾಡಿ ಡೆಫಿಸಿಟ್ ಬಗ್ಗೆ ಮಾತ್ರ ಯಾರೂ ಮಾತನಾಡಿಲ್ಲ. ಈಗ 213 ಅಥವಾ 214 ಕೋಟಿ ರೂಪಾಯಿ ಕೊರತೆ ಇದ್ದರೂ, ಕೇಂದ್ರ ಸರ್ಕಾರದ 10ನೇ ಫೈನಾನ್ಸ್ ಕಮಿಷನ್‌ನಿಂದ ನಾವು ಏನು ಹಣ ನಿರೀಕ್ಷೆ ಮಾಡಿದ್ದೇರೋ ಅದು ಬಂದುಬಿಟ್ಟರೆ ಕೊನೆಯಲ್ಲಿ 80 ರಿಂದ 90 ಕೋಟಿ ಡೆಫಿಸಿಟ ಉಳಿಯಬಹುದು. ಇನ್ನೊಂದು ವಿಷಯವನ್ನು ಮಾನ್ಯ ಫೈನಾನ್ಸ್ ಮಿನಿಸ್ಟರ್‌ರವರ ಗಮನಕ್ಕೆ ತರುವುದೇನೆಂದರೆ, ಹೋದ ವರ್ಷ, ಯು.ಟಿ.ಐ. ಅಥವಾ ಎಲ.ಐ.ಸಿ. ಮತ್ತು ಇನ್ನಿತರ ಮೂಲಗಳ ಮುಖಾಂತರ ನ್ಯಾಷನಲ್ ಸೇವಿಂಗ್ಸ್ ಮಾಡಬಹುದು ಎನ್ನುವ ನಿಯಮ ಇದ್ದುದರಿಂದ 700 ಕೋಟಿ ರೂಪಾಯಿಗಳಷ್ಟು ನ್ಯಾಷನಲ್ ಸೇವಿಂಗ್ಸ್‌ನಿಂದ ಬಂದಿತ್ತು. ಆದರೆ, ಮನಮೋಹನ್ ಸಿಂಗ್‌ರವರು ಮೊನ್ನೆ ಮಂಡಿಸಿದ ಬಜೆಟ್‌ನ ಪಾಲಿನ ಪ್ರಕಾರ ನ್ಯಾಷನಲ್ ಸೇವಿಂಗ್ಸ್‌ನ್ನು ಯು.ಟಿ.ಐ. ಅಥವಾ ಎಲ್.ಐ.ಸಿ. ಅಥವಾ ಗೌರ್ನಮೆಂಟ್ ಅಂಡರ್‌ಟೇಕಿಂಗ್ಸ್‌ನಲ್ಲಿ ಮುನ್ನೂರರಿಂದ ನಾಲ್ಕುನೂರು ಕೋಟಿ ರೂಪಾಯಿಗಳವರೆಗೆ ಹೊಡೆತ ಬೀಳುತ್ತದೆ. ಆದುದರಿಂದ, ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿ ಸಣ್ಣ ಉಳಿತಾಯದಲ್ಲಿ ಈ ವರ್ಷ ಕನಿಷ್ಠ ಪಕ್ಷ 500 ಕೋಟಿ

ರೂಪಾಯಿಗಳನ್ನಾದರೂ ಮಾಡುವ ಗುರಿಯನ್ನು ಇಟ್ಟುಕೊಳ್ಳಬೇಕು. ಆಮೇಲೆ, ಮಾನ್ಯ ಮಂತ್ರಿಯವರು ಮಂಡಿಸಿರತಕ್ಕಂಥ ಶ್ವೇತಪತ್ರದಲ್ಲಿ 500 ಕೋಟಿ ರೂಪಾಯಿಗಳ ಕೊರತೆ ಕಂಡು ಬಂದಿದೆ. ಈ ಕೊರತೆಯನ್ನು ತುಂಬಲಿಕ್ಕೆ ಹಾಗೂ ಬಜೆಟ್‌ನಲ್ಲಿ ಹಾಕಿಕೊಂಡಿರತಕ್ಕಂಥ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಸರ್ಕಾರಕ್ಕೆ ಬರಬೇಕಾದ ಬಾಕಿಯನ್ನು ಕಟ್ಟುನಿಟ್ಟಾಗಿ ವಸೂಲಿ ಮಾಡಬೇಕು. ಇಲ್ಲವೆಂದರೆ ಹಾಕಿಕೊಂಡಿರುವ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಬಜೆಟ್ ಮೇಲೆ ಸನ್ಮಾನ್ಯ ಘೋರ್ಪಡೆಯವರು ಮಾತನಾಡುವಾಗ ಸೇಲ್ಸ್ ಟ್ಯಾಕ್ಸ್‌ನಿಂದ 200 ಕೋಟಿ ರೂಪಾಯಿಗಳು, ಎಕ್ಸೈಸ್‌ನಿಂದ 100 ಕೋಟಿ ರೂಪಾಯಿಗಳು, ಕೆ.ಇ.ಬಿ.ಯಿಂದಲೂ ಸಾಕಷ್ಟು ಹಣ ಬಾಕಿ ಬರಬೇಕಾಗಿದೆ. ಅದನ್ನು ಕಟ್ಟುನಿಟ್ಟಾಗಿ ವಸೂಲು ಮಾಡಬೇಕೆಂಬ ಬಹಳ ಗಂಭೀರವಾದ ವಿಷಯವನ್ನು ಹೇಳಿದ್ದಾರೆ. ಕಮರ್ಷಿಯಲ್ ಟ್ಯಾಕ್ಸ್ ಆಗಲೀ, ಎಕ್ಸೈಸ ಟ್ಯಾಕ್ಸ್ ಆಗಲೀ, ಮೋಟರ್ ವೆಹಿಕಲ್ ಟ್ಯಾಕ್ಸ್ ಆಗಲೀ ಅರಿಯರ್ಸ್ ಇದ್ದರೆ ಅದನ್ನು ಯಾರ ಮುಲಾಜೂ ಇಲ್ಲದೆ ಸರ್ಕಾರ ವಸೂಲಿ ಮಾಡಬೇಕು. ಒಂದು ಪಕ್ಷ ಅವರು ಅದರ ಬಗ್ಗೆ ಕೋರ್ಟ್‌ಗೆ ಹೋಗಿದ್ದರೆ, ಆಗಲೇ ಒಬ್ಬರು ಸನ್ಮಾನ್ಯ ಸದಸ್ಯರು ತಿಳಿಸಿದ ಹಾಗೆ ಆ ಅರಿಯರ್ಸನ್ನು ವಸೂಲಿ ಮಾಡುವುದಕ್ಕಾಗಿಯೇ ಒಂದು ವಿಶೇಷ ಟ್ರಿಬ್ಯೂನಲ್ ಅನ್ನು ಪ್ರಾರಂಭಿಸಿ ಅದರ ಮೂಲಕ ಬಾಕಿ-ವಸೂಲನ್ನು ಮಾಡಬೇಕು. ಹಾಗೆ ಮಾಡದೆ ಹೋದರೆ ಮುಂದಿನ ವರ್ಷದ ಹಣಕಾಸಿನಲ್ಲಿ 500 ಕೋಟಿ ರೂಪಾಯಿಗಳಷ್ಟು ಹೊಡೆತ ಬಿದ್ದು ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲದಂತಾಗುತ್ತದೆ. ಆಮೇಲೆ, ಈ ವರ್ಷ ಎಕ್ಸೈಸ್‌ನಿಂದ 852 ಕೋಟಿ ರೂಪಾಯಿಗಳನ್ನು ನಿರೀಕ್ಷಣೆ ಮಾಡಲಾಗಿದೆ. ನಾನು ಹೇಳುವುದೇನೆಂದರೆ, ಸೇಲ್ಸ್ ಇಂಟರ್‌ನ್ಯಾಷನಲ್ ಅನ್ನು ಮೊದಲು ರದ್ದು ಮಾಡಿ. ಅಲ್ಲೇ ಸೆಕೆಂಡ್ಸ್ ಮಾತಾಟವಾಗುತ್ತದೆ, ಅಲ್ಲಿ ಎಲ್ಲಾ ತರಹದ ಅವ್ಯವಹಾರ ನಡೆಯುತ್ತದೆ. ಅದಕ್ಕಾಗಿ ಮೊದಲು ಇದನ್ನು ರದ್ದು ಮಾಡಿ. ಇದನ್ನು ರದ್ದು ಮಾಡುವ ಬಗ್ಗೆ ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿ ಆಗಿದ್ದಾಗಲೇ ನಾವು ಒತ್ತಾಯ ಮಾಡಿದ್ದೆವು. ಮೊದಲು ಯಾವ ರೀತಿ ಡಿಸ್ಟಿಕ್ಟ್ ಲೆವೆಲ್‌ನಲ್ಲೇ ಮಾರಾಟ ಮಾಡಲಾಗುತ್ತಿತ್ತೋ ಅದೇ ವ್ಯವಸ್ಥೆ ಪುನಃ ಜಾರಿಗೆ ತರಬೇಕು ಅಥವಾ ಅದಕ್ಕಾಗಿಯೇ ಒಂದು ಸಪರೇಟ್ ಆದ ಲಿಕ್ಕರ್ ಕಾರ್ಪೊರೇಷನ್ ಆದರೂ ಮಾಡಬಹುದು. ಈ ವರ್ಷ ಸರ್ಕಾರದವರು ನಿರೀಕ್ಷೆ ಮಾಡಿರುವ 852 ಕೋಟಿ ರೂಪಾಯಿಗಳು ಎಕ್ಸೈಸ್‌ನಿಂದ ಬರಬೇಕಾದರೆ ಹೊಸ ಎಕ್ಸೈಸ್ ಪಾಲಿಸಿಯನ್ನು ತರಬೇಕಾಗುತ್ತದೆ. ಮಾನ್ಯ ಮಂತ್ರಿಯವರಿಗೆ ಗೊತ್ತಿರುವ ಹಾಗೆ ಎಷ್ಟೋ ಜನ ಬೇ-ನಾಮಿ ಹೆಸರಿನಲ್ಲಿ ಕಂಟ್ರಾಕ್ಟ್‌ಗಳನ್ನು ತೆಗೆದುಕೊಂಡು ಅರಿಯರ್ಸ್ ಕಟ್ಟದೆ ಇರುವ ಉದಾಹರಣೆಗಳು ಇವೆ. ಆಮೇಲೆ, ಇವತ್ತಿನ ದಿವಸ ಮೇಲ್ಮನೆಯಲ್ಲಿ ವಿರೋಧ ಪಕ್ಷದ ನಾಯಕರು ನಮ್ಮ ರಾಜ್ಯದಲ್ಲಿ ಪಾನ ನಿರೋಧವನ್ನು ಜಾರಿಗೆ ತರಬೇಕೆಂದು ಒತ್ತಾಯ ಮಾಡಿದ್ದಾರೆ. ಆಂಧ್ರಪ್ರದೇಶದಲ್ಲಿ ಪಾನ ನಿರೋಧವನ್ನು ಜಾರಿಗೆ ತಂದಿರುವುದರಿಂದ ಆ ರಾಜ್ಯದ ಜನರೆಲ್ಲಾ ನಮ್ಮ ರಾಜ್ಯದ ಬಾರ್ಡರ್ ಹಳ್ಳಿಗಳಿಗೆ ಬಂದು ಕುಡಿಯುತ್ತಿದ್ದಾರೆ, ಹಾಗೂ ಆ ರಾಜ್ಯದಲ್ಲಿ ಕಳ್ಳಭಟ್ಟಿ ಮುಂತಾದವು ಹೆಚ್ಚಾಗಿ ಜನರಿಗೆ ಬಹಳ ತೊಂದರೆಯಾಗಿದೆ, ಜನರ ಆರೋಗ್ಯ ಕೂಡ ಕೆಡುವುದ್ಕಕೆ ಕಾರಣವಾಗಿದೆ ಹಾಗೂ ಆ ರಾಜ್ಯಕ್ಕೆ ಪ್ರತಿ ವರ್ಷ ಆ ಬಾಬಿನಿಂದ ಬರುತ್ತಿದ್ದ 1800 ಕೋಟಿ ರೂಪಾಯಿಗಳು ನಷ್ಟವಾಗಿದೆ. ಆದ್ದರಿಂದ, ನಮ್ಮ ರಾಜ್ಯದ ಜನರ ಆರೋಗ್ಯ ರಕ್ಷಣೆಯನ್ನು ಸೂಕ್ತ

ರೀತಿಯಲ್ಲಿ ಕಾಪಾಡಿಕೊಂಡು ಬರುವ ರೀತಿಯಲ್ಲಿ ಹಾಗೂ ಸರ್ಕಾರಕ್ಕೆ ಹೆಚ್ಚು ಆದಾಯ ಬರುವಂಥ ರೀತಿಯಲ್ಲಿ 20-30 ವರ್ಷಗಳ ಹಿಂದೆ ಯಾವ ರೀತಿ ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಮಾರಾಟ ಮಾಡುವ ವ್ಯವಸ್ಥೆಯನ್ನು ಜಾರಿಗೆ ತಂದಿದ್ದರೋ ಆ ಪದ್ಧತಿಯನ್ನು ಮುಂದುವರಿಸಿದರೆ ಅದರಿಂದ ಸರ್ಕಾರಕ್ಕೆ ಬಹಳಷ್ಟು ಅನುಕೂಲವಾಗುತ್ತದೆಂಬ ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಆಮೇಲೆ ಈ ಲೋಕಲ್ ಬಾಡಿಗಳಾದ ಜಿಲ್ಲಾಪರಿಷತ್ತು ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಈ ವರ್ಷ, 620 ಕೋಟಿ ರೂಪಾಯಿಗಳನ್ನು ಸರ್ಕಾರ ನಿಗದಿ ಮಾಡಿದೆ. ಇದು ಹೋದ ವರ್ಷ ಕೊಟ್ಟಿರುವುದಕ್ಕಿಂತ 70-80 ಕೋಟಿ ಜಾಸ್ತಿ ಇದೆ. ಇದಕ್ಕಾಗಿ ಪ್ಲಾನ್ ಔಟ್-ಲೇನಲ್ಲಿ 15 ಪರ್ಸೆಂಟ್ ಇನ್‌ಕ್ರೀಸ್ ಮಾಡಲಾಗಿದೆ. ಆಮೇಲೆ ಗ್ರಾಮ ಪಂಚಾಯಿತಿಗಳಿಗೆ ವರ್ಷಕ್ಕೆ ಒಂದು ಲಕ್ಷದಿಂದ ಒಂದು ಲಕ್ಷದ 25 ಸಾವಿರ ರೂಪಾಯಿ ಕೊಡುವಂಥ ವ್ಯವಸ್ಥೆಯನ್ನು ಮಾಡಲಾಗಿದೆ. ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಈ 620 ಕೋಟಿ ರೂಪಾಯಿಗಳನ್ನು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗೆ ಏನು ಖರ್ಚು ಮಾಡುಲಾಗುತ್ತದೆ, ಅದರ ಬಗ್ಗೆ ಸರ್ಕಾರ ಹೆಚ್ಚಿನ ಗಮನಹರಿಸಬೇಕು. ವಿಕೇಂದ್ರಿಕರಣದ ಹೆಸರಿನಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಹಣ ಲೂಟಿ ಆಗುವುದನ್ನು ಮೊದಲು ತಪ್ಪಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಮಾಡತಕ್ಕಂಥ ಆಶ್ರಯ ಯೋಜನೆ ಇರಬಹುದು, ಮಿನಿ ವಾಟರ್ ಸ್ಕೀಮ್ ಇರಬಹುದು, ಬೋರ್‌ವೆಲ್ ಹಾಕಿಸುವುದು ಇರಬಹುದು, ಇದರ ಬಗ್ಗೆ ಸರ್ಕಾರ ಖರ್ಚು ಮಾಡುವ 620 ಕೋಟಿ ರೂಪಾಯಿಗಳ ಮೇಲೆ ಒಂದು ಭದ್ರವಾದ ಆಡಳಿತ ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ನಿಮ್ಮ ಎಲ್ಲಾ ಜಿಲ್ಲಾ ಪರಿಷತ್‌ಗಳಲ್ಲಿ ಎಕ್ಸಿಕ್ಯುಟಿವ್ ಇಂಜಿನೀಯರ್ಸ್ ಇದ್ದಾರೆ. ಅವರು ನೋಡಿಕೊಳ್ಳತಕ್ಕಂಥ ಕೆಲಸ ಏನೆಂದರೆ, ವಾಟರ್‌ಸಪ್ಲೈ, ರಸ್ತೆಗಳ ಕೆಲಸ ಸ್ಕೂಲ್ ಬಿಲ್ಡಿಂಗ್ಸ್, ಮುಂತಾದವುಗಳನ್ನು ನೋಡಿಕೊಳ್ಳುತ್ತಾರೆ. ಮಾನ್ಯ ಸಚಿವರೊಂದಿಗೆ ಮಾತನಾಡುವಾಗ ಒಮ್ಮೆ ನಾನು ಹೇಳಿದ್ದೆ. ಅವರು ಪಿಡಬ್ಲ್ಯೂಡಿ. ಇರಿಗೇಷನ್, ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ಸ್ ಬಂದವರು ಇದ್ದಾರೆ, ಹೀಗೆ 20-25ಜನರು ಜಿಲ್ಲಾ ಪರಿಷತ್‌ನಲ್ಲಿ ಎಕ್ಸಿಕ್ಯುಟಿವ್ ಇಂಜನೀಯರ್ಸ್ ಇದ್ದಾರೆ. ಅವರನ್ನು ನೀವು ರೂರಲ್ ಡಿಪಾರ್ಟ್‌ಮೆಂಟ್‌ಗೆ ಸರೆಂಡರ್ ಮಾಡಿ ಅಲ್ಲಿಯೇ ಅವರನ್ನು ಪರ್ಮನೆಂಟ್ ಎಂಪ್ಲಾಯೀಸ್ ತರಹದಲ್ಲಿ ಮಾಡಿ ಅಂತ. ಇಲ್ಲವಾದರೆ ಯಾವುದೇ ಕೆಲಸವು ಸರಿಯಾಗಿ ಆಗುವುದಿಲ್ಲ. ಎಷ್ಟೋ ಕೆಲಸಗಳಲ್ಲಿ ಕಂಟ್ರಾಕ್ಟರ್‌ಗಳು ರಸ್ತೆಗಳನ್ನು ಮಾಡದೇ ಹಣವನ್ನು ತೆಗೆದುಕೊಂಡಿದ್ದಾರೆ. ಮಿನಿ ವಾಟರ್‌ಸಪ್ಲೈ ವಿಚಾರದಲ್ಲಿಯೇ ಆಗಲಿ, ಹೀಗೆ ಯಾವುದೇ ಕಾರ್ಯದಲ್ಲಿಯೂ ನಮ್ಮ ಹಣವು ತುಂಬಾ ದೊಡ್ಡ ಪ್ರಮಾಣದಲ್ಲಿ ಸೋರಿ ಹೋಗುತ್ತಾ ಇದೆ. ಆದ್ದರಿಂದ ನಮ್ಮ ವಿಕೇಂದ್ರಿಕರಣವು ಸಕ್ಸೆಸ್‌ಫುಲ್ ಆಗಬೇಕಾದರೆ, ಅದಕ್ಕೊಂದು ಅರ್ಥ ಬರಬೇಕಾದರೆ ನೀವು ಕೊಟ್ಟಿರ ತಕ್ಕಂಥ 620 ಕೋಟಿ ರೂಪಾಯಿಗಳಿಗೆ ಒಂದು ಅರ್ಥ ಬರಬೇಕಾದರೆ ನೀವು ಔಟ್‌ಲೇ ಏನು ಇನ್‌ಕ್ರೀಸ್ ಮಾಡಿದ್ದೀರಿ, ಅದು ಸರಿಯಾಗಿ ಖರ್ಚು ಆಗಬೇಕಾದರೆ ಆ ಕಡೆಗೆ ಹೆಚ್ಚು ಗಮನವನ್ನು ಕೊಡಬೇಕು. ಹಾಗೆ ಗಮನ ಕೊಡುವುದರ ಮೂಲಕ ಅಲ್ಲಿರತಕ್ಕಂಥ ಆಡಳಿತವನ್ನು ಸುಧಾರಣೆ ಮಾಡುವುದಕ್ಕೆ ಕ್ರಮ ತೆಗೆದುಕೊಂಡರೆ ಬಹಳಷ್ಟು ಪ್ರಯೋಜನವಾಗುತ್ತದೆಂಬುದನ್ನು ಹೇಳುತ್ತೇನೆ.

ಮುನ್ಸಿಫ್ಯಾಲಿಟಿಗಳ ಬಗ್ಗೆ ಬಹಳ ಜನರು ಪ್ರಸ್ತಾಪ ಮಾಡಿದರು. ನಾನು ಈ ವಿಚಾರದಲ್ಲಿ ಮಾನ್ಯ ಹಣಕಾಸು ಮಂತ್ರಿಯವರ ಗಮನವನ್ನು ಸೆಳೆಯಲು ಇಷ್ಟಪಡುತ್ತೇನೆ. ಒಬ್ಬ ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿ ಕಸದ ಪೊರಕೆಯನ್ನು ತೆಗೆದುಕೊಳ್ಳಲೂ ಕೂಡ ಹಣ ಇಲ್ಲ. ಮಾತು ಎತ್ತಿದರೆ ನೀವು ಟ್ಯಾಕ್ಸ್ ಹಾಕಿ ಎಂದು ಹೇಳುತ್ತಾರೆ. ಆದರೆ ಬೇಕಾದ ಟ್ಯಾಕ್ಸ್ ಹಾಕಲೂ ಬರುವುದಿಲ್ಲ. ಹಾಗೆಯೇ ಟ್ಯಾಕ್ಸ್ ಹಾಕುವುದು ಎಷ್ಟು ಮತ್ತು ವಸೂಲಿ ಮಾಡುವುದು ಎಷ್ಟು? ಹಾಗೆಯೇ ಒಂದು ಫೈನಾನ್ಸ್ ಕಮಿಷನ್‌ನ್ನು ಮಾಡಿದರು. ಮುನ್ಸಿಪಾಲಿಟಿಗಳ ಬಗ್ಗೆ ಲೋಕಲ್ ಫೈನಾನ್ಸ್ ಇನ್‌ಸ್ಟಿಟ್ಯೂಶನ್ಸ್ ಹೇಗೆ ಮಾಡಬೇಕೆಂದು ಮಾಡಿದ್ದರು. ಜಾಕಬ್ ಕಮಿಷನ್ ಎಂದು ಮಾಡಿದ್ದರು. ಅದರಲ್ಲಿ ಒಂದಿಷ್ಟು ರಿಪೋರ್ಟ್ಸ್ ಎಲ್ಲಾ ಬಂದಿವೆ. ಆ ಶಿಫಾರಸ್ಸುಗಳನ್ನು ತಾವುಗಳು ಯೋಚನೆ ಮಾಡಬೇಕು. ಮುನ್ಸಿಫಾಲಿಟಿಗಳಿಗೆ ಅಕ್ಟ್ರಾಯನ್ನು ಹಾಕಲು ಸಾಧ್ಯವೇ ಎಂಬುದನ್ನು ರೀ-ಎಗ್ಸಾಮಿನ್ ಮಾಡಿಸಬೇಕು. ಆಕ್ಟ್ರಾಯ್ ಹಾತಕ್ಕಂಥಾದ್ದನ್ನು ನೀವು ಎಗ್ಸಾಮಿನ್ ಮಾಡದೇ ಹೋದರೆ ಯಾವುದೋ ಮುನ್ಸಿಪಾಲಿಟಿಗಳಿಗೆ ನೀವು ಕೊಡತಕ್ಕಂಥ ಮ್ಯಾಚಿಂಗ್ಗ್ ಗ್ರ್ಯಾಂಟ್ ಏನಿದೆ, ಅದರಿಂದ ಅವರು ಅಲ್ಲಿ ಸಂಬಳ ಕೊಟ್ಟುಕೊಂಡು ಕುಳಿತಿದ್ದಾರೆಯೇ ವಿನಹ ಯಾವುದೇ ಮುನ್ಸಿಪಾಲಿಟಿಗಳಿಗೆ ಒಂದು ರಸ್ತೆಗೆ ಮಣ್ಣು ಹಾಕುವುದಾಗಲೀ, ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಾಗಲೀ ಮಾಡುವುದಕ್ಕೆ ಆಗುತ್ತಾ ಇಲ್ಲ. ಇದನ್ನು ಆರ್ಥಿಕ ಅಥವಾ ರೂರಲ್ ಡೆವಲಪ್‌ಮೆಂಟ್ ಸಚಿವರು ಯಾರೇ ತೆಗೆದುಕೊಂಡರೂ ಅಡ್ಡಿ ಇಲ್ಲ. ಒಟ್ಟಾಗಿ ಆಕ್ಟ್ರಾಯನ್ನು ಹಾಕತಕ್ಕಂಥ ಒಂದು ಪದ್ಧತಿಯನ್ನು ನೀವು ಜಾರಿಗೆ ತರಲೇ-ಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರು ಕೂಡ ಜಾಕಬ್ ಕಮಿಷನ್ ರಿಪೋರ್ಟ್‌ನ್ನು ತರಿಸಿ ನೋಡಬೇಕು. ಸರ್ಕಾರಿಯೂ ಕಮಿಷನ್ ಆಗುವುದಕ್ಕಿಂತ ಮುಂಚೆಯೇ ಅದನ್ನು ಮಾಡಿದ್ದರು. ಕೇಂದ್ರ ಮತ್ತು ರಾಜ್ಯ ಸರಕಾರಗಳ ಸಂಬಂಧ ಹೇಗೆ ಇರಬೇಕೆಂಬ ಬಗ್ಗೆ ಅದರಲ್ಲಿ ಇತ್ತು.

ಶ್ರೀ ಶಾಮನೂರು ಶಿವಶಂಕರಪ್ಪ : ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಮನರಂಜನೆ ತೆರಿಗೆ ಎಂದು ಹೇಳಿ ಸರಕಾರದವರು ಕಲೆಕ್ಟ್ ಮಾಡಿ, ನಗರ ಸಭೆಯವರಿಗೆ ಅದರಲ್ಲಿ 90 ಪರ್ಸೆಂಟ್‌ನಷ್ಟು ಮೊದಲು ವಾಪಸ್ ಕೊಡುತ್ತಾ ಇದ್ದರು. ಆದರೆ ಇವೊತ್ತಿನ ದಿವಸ 66 ಪರ್ಸೆಂಟ್‌ನಷ್ಟು ಸರಕಾರ ದವರು ಹಿಡಿದುಕೊಂಡು 34 ಪರ್ಸೆಂಟ್‌ನ್ನು ಮಾತ್ರ ನಗರಸಭೆಯವರಿಗೆ ಕೊಡುತ್ತಾ ಇದ್ದಾರೆ. ದಾವಣಗೆರೆಯಲ್ಲಿ ನಗರ ಸಭೆಯಲ್ಲಿ ತುಂಬಾ ಕಷ್ಟ ಇದೆ. ಮೂರು ದಿನಗಳಿಗೆ ಒಮ್ಮೆ ನೀರು ಸಿಗುತ್ತಾ ಇಲ್ಲ. ನಗರಸಭಾ ಸದಸ್ಯರು ಜನರಿಂದ ಛೀಮಾರಿ ಹಾಕಿಸಿಕೊಳ್ಳುವಂಥ ಸ್ಥಿತಿ ಬಂದಿದೆ. ಆದ್ದರಿಂದ 90 ಪರ್ಸೆಂಟ್ ಏನು ಮೊದಲು ಕೊಡುತ್ತಾ ಇದ್ದರು ಅದನ್ನು ಈಗಲೂ ಕೊಡುವ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ನಾನು ಪ್ರಸ್ತಾಪ ಮಾಡಿದ್ದೇನೆಂದರೆ ಲೋಕಲ್ ಬಾಡೀಸ್‌ಗಳಿಗೆ 10ನೇ ಫೈನಾನ್ಸ್ ಕಮಿಷನ್‌ನವರ ಮುಂದೆ 29 ಪರ್ಸೆಂಟ್ ಇದ್ದ ಸೆಂಟ್ರಲ್ ಅಸಿಸ್ಟೆಂಟ್ಸ್ 40 ಪರ್ಸೆಂಟ್ ಬರುತ್ತದೆ ಎಂದು ನಂಬಿಕೊಂಡಿದ್ದೀರಿ, ಆ 40 ಪರಸೆಂಟ್‌ನ್ನು ಕ್ಲೈಮ್ ಮಾಡುವ ಕಾಲದಲ್ಲಿ ಎರಡು ವಿಚಾರಗಳನ್ನು ಪ್ರಧಾನವಾಗಿ ಇಟ್ಟುಕೊಂಡು ಸೆಂಟ್ರಲ್ ಟ್ಯಾಕ್ಸ್ ಪ್ಲಸ್ ಲೋಕಲ್ ಅಥಾರಿಟಿ ಟ್ಯಾಕ್ಸ್

ಟೆಂತ್ ಫೈನಾನ್ಸ್ ಕಮಿಷನ್‌ನವರ ರಿಪೋರ್ಟ್‌ನವರ ಪ್ರಕಾರವಾಗಿ 29 ಪರ್‌ಸೆಂಟ್‌ನಷ್ಟು ಕೊಡುವುದನ್ನು 40 ಪರ್ಸೆಂಟ್‌ನಷ್ಟು ಕೊಡಬೇಕೆಂದು ಏನು ಕೇಳುತ್ತಾ ಇದ್ದೀರಿ, ಅದರಿಂದ ನೀವು ಈ ಲೋಕಲ್ ಅಥಾರಿಟಿಗಳನ್ನು ನೀವು ಕೈಯಲ್ಲಿ ಹಿಡಿದುಕೊಳ್ಳಬೇಕು. ಲೋಕಲ್ ಅಥಾರಿಟಿಗಳಿಗೆ ಇವೊತ್ತಿನ ದಿವಸ ಫೈನಾನ್ಸ್ ಇಲ್ಲ, ಅವುಗಳಿಗೆ ನಾವು ಸಹಾಯ ಮಾಡಬೇಕಾದ ಕಾರಣ ನಮಗೆ ಸೆಂಟ್ರಲ್ ಅಸಿಸ್ಟೆನ್ಸ್ ಜಾಸ್ತಿ ಮಾಡಬೇಕೆಂದು ಕೇಳಿದ್ದೀರಿ, ಆದರೆ ಅವರು 40 ಪರ್ಸೆಂಟನ್ನು ಕೊಡದೇ ಹೋದಾಗ ನೀವು ಕೇಂದ್ರ ಸರ್ಕಾರಕ್ಕೆ ಕೇಳಬೇಕಾಗುತ್ತದೆ, ನಾವು ಇಲ್ಲಿ ಮುನ್ಸಿಪಾಲಿಟಿಗಳಿಗೆ, ಲೋಕಲ ಅಥಾರಿಟಿಗಳಲ್ಲಿ ಆಕ್ಟ್ರಾಯ್‌ನ್ನು ಜಾರಿಗೆ ತರುತ್ತೇವೆಂದು ಹೇಳಬೇಕಾಗುತ್ತದೆ. ಹಾಗೆ ಹೇಳಿದಾಗ ನಿಮಗೆ ಟೆಂಥ ಫೈನಾನ್ಸ ಕಮಿಷನ್‌ನವರಿಂದ 40 ಪರ್ಸೆಂಟ್‌ನಷ್ಟು ಸಹಾಯ ಸಿಗುತ್ತದೆ. ಇಲ್ಲದೆ ಹೋದರೆ ನೀವು ಲೋಕಲ್ ಆಗಿ ಆಕ್ಟ್ರಾಯ್‌ನ್ನು ಇಂಟ್ರಡ್ಯೂಸ್ ಮಾಡಲು ಅನುಕೂಲವಾಗುತ್ತದೆ. ಈ ಬಗ್ಗೆ ನಮ್ಮ ಸರಕಾರದವರು ಗಮನಕೊಟ್ಟರೆ ಮುಂದಿನ ವರ್ಷಗಳಲ್ಲಿ ಹಣಕಾಸಿನ ಬಗ್ಗೆ ಹೆಚ್ಚು ಪ್ರಯೋಜನವಾಗುತ್ತದೆ ಎನ್ನತಕ್ಕಂಥಾದ್ದನ್ನು ಹೇಳ ಬಯಸುತ್ತೇನೆ. ನಾವು ಈಗಾಗಲೇ ರೂರಲ್ ವಾಟರ್‌ಸಪ್ಲೈ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ಅದಕ್ಕೆ 154 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಅದೇ ರೀತಿಯಲ್ಲಿ ಸ್ಯಾನಿಟೇಶನ್ ಬಗ್ಗೆ 20 ಕೋಟಿಗಳನ್ನು ಒದಗಿಸಿದ್ದೇವೆ. ನನ್ನ ಸಲಹೆ ಎಂದರೆ ವಿಶ್ವಬ್ಯಾಂಕ್‌ನಲ್ಲಿ ಕುಡಿಯುವ ನೀರಿನ ಸರಬರಾಜಿಗೆ 300 ಕೋಟಿ ರೂಪಾಯಿಗಳನ್ನು ಪಡೆಯುವ ಬಗ್ಗೆ ಹೇಳಿದ್ದೀರಿ. ನಮ್ಮ ರಾಜ್ಯದಲ್ಲಿ ಸುಮಾರು ಹತ್ತುಸಾವಿರ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗಿದೆ. ಹೋದ ವರ್ಷ ನಮಗೆ ಕೇವಲ 54 ಕೋಟಿ ರೂಪಾಯಿಗಳು ಮಾತ್ರ ಬಂತು. ಇದು ಏಕೆ ಆಯಿತು? ಈ ಕುರಿತು ಬಹಳ ಶೋಚನೀಯವಾದ ವಿಚಾರ ಅಂದರೆ ಡೆಲ್ಲಿಯಲ್ಲಿನ ಕರ್ನಾಟಕ ಭವನದಲ್ಲಿ ಕಮಿಷನರ್ ಗ್ರೇಡ್‌ನ ಒಬ್ಬ ಆಫೀಸರ್ ಇದ್ದಾರೆ. ತಮಿಳುನಾಡು, ಕೇರಳ, ಒರಿಸ್ಸಾ, ಬಿಹಾರ್, ಮುಂತಾಗಿ ಎಲ್ಲಾ ರಾಜ್ಯಗಳವರು ಸೆಂಟ್ರಲ್ ಅಸಿಸ್ಟೆಂಟ್ಸ್‌ನ್ನು ಹೆಚ್ಚಿನ ಪ್ರಮಾಣದಲ್ಲಿ ತರುತ್ತಾ ಇರುತ್ತಾರೆ. ನಾವು ಎಷ್ಟು ತರುತ್ತಾ ಇದ್ದೇವೆ ಎಂಬುದನ್ನು ನೋಡಿದಾಗ ನಾವೇ ಕನಿಷ್ಟ ಪ್ರಮಾಣದಲ್ಲಿ ಪಡೆಯುವರಾಗಿದ್ದೇವೆ. ಬಿಹಾರ್ ರಾಜ್ಯ ಒಂದಕ್ಕೆ ಕುಡಿಯುವ ನೀರಿಗಾಗಿ 320 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದೇ ನಮ್ಮ ರಾಜ್ಯಕ್ಕೆ 51 ಕೋಟಿರೂ.ಗಳನ್ನು ತಂದಿದ್ದಾರೆ. ನಾವು ಡೆಲ್ಲಿಯಲ್ಲಿ ಒಂದು ಕಚೇರಿಯನ್ನು ಮಾಡಿಕೊಂಡಿದ್ದನ್ನು ಸಹ ಅವರು ಸರಿಯಾಗಿ ಈ ಕುರಿತಾದ ಕೆಲಸವನ್ನು ಮಾಡುತ್ತಾ ಇಲ್ಲ. ಅಲ್ಲಿ ನಮ್ಮ ಅಡಿಶನಲ್ ಚೀಫ್ ಸೆಕ್ರೆಟರಿ ಗ್ರೇಡ್‌ನವರನ್ನು ಹಾಕಿದ್ದೇವೆ. ಕೇಂದ್ರದಲ್ಲಿ ತಮಿಳುನಾಡು ಅಂದರೆ ಸೌತ್ ಇಂಡಿಯಾ ಎಂಬ ರೀತಿಯಲ್ಲಿ ಮಾಡಿದ್ದಾರೆ. ತಮಿಳುನಾಡಿನ ಸೆಕ್ರೆಟರಿಗಳು ಅಲ್ಲಿನ ಎಲ್ಲಾ ಉನ್ನತ ಅಧಿಕಾರಿಗಳನ್ನು ಕಂಡು ಚರ್ಚಿಸುತ್ತಾರೆ, ಬೇಕಾದಷ್ಟು ಪ್ರಾಜೆಕ್ಟ್‌ಗಳನ್ನು, ಯೋಜನೆಗಳನ್ನು ಹುಡುಕುತ್ತಾರೆ, ಅಲ್ಲಿಂದ ಸ್ಯಾಂಕ್ಷನ್ ಮಾಡಿಕೊಂಡು ಬಂದು ತಮ್ಮ ರಾಜ್ಯಕ್ಕೆ ತರುತ್ತಾರೆ. ನಮ್ಮಲ್ಲಿರತಕ್ಕಂಥ ಕಮಿಷನರ್‌ಗಳು ಅಲ್ಲಿ ಆನಂದವಾಗಿ ಊಟ ಮಾಡಿಕೊಂಡು ಚೆನ್ನಾಗಿ ಇದ್ದಾರೆ. ಇಲ್ಲಿಂದ ಬಂದಂಥ ಶಾಸಕರಿಗೆ, ಮಂತ್ರಿಗಳಿಗೆ ಕರ್ನಾಟಕ ಭವನದಲ್ಲಿ ರೂಮ್ ಕೊಟ್ಟುಕೊಂಡು ಇರುತ್ತಾರೆ. ಆ ಕೆಲಸವನ್ನು ಕೂಡ ಸರಿಯಾಗಿ ಮಾಡುತ್ತಾ ಇಲ್ಲ. ನಮ್ಮ ಆರ್ಥಿಕ ಸಚಿವರನ್ನು ಕೇಳಿಕೊಳ್ಳುವುದೇನೆಂದರೆ ನಮ್ಮ ಡೆಲ್ಲಿಯ ಕಚೇರಿಯು ಸರಿಯಾಗಿ ಕೆಲಸ ಮಾಡಬೇಕು. ಅಲ್ಲಿನ ಅಧಿಕಾರಿಗಳಿಗೆ ಅಡಿಶನ್ ಚೀಫ್ ಸೆಕ್ರೆಟರಿ ಗ್ರೇಡ್

ಕೊಟ್ಟಿದ್ದೀರಿ. ಅಲ್ಲಿ ಅವರು ನಮಗೆ ಕೇಂದ್ರ ಸರಕಾರದಿಂದ ಯಾವ್ಯಾವ ಯೋಜನೆಗಳನ್ನು ಬರುತ್ತವೆ ಅದರಲ್ಲಿ ಕುಡಿಯುವ ನೀರಿಗೆ ಎಷ್ಟು ಬರುತ್ತದೆ, ಸ್ಯಾನಿಟೇಶನ್‌ಗೆ ಎಷ್ಟು ಬರುತ್ತದೆ, ಇಲೆಕ್ಟ್ರಿಫಿಕೇಶನ್‌ಗೆ ಎಷ್ಟು ಬರುತ್ತದೆ, ರಸ್ತೆಗಳಿಗಾಗಿ ಎಷ್ಟು ಬರುತ್ತದೆ, ಆಹಾರಧಾನ್ಯಗಳಿಗಾಗಿ ಎಷ್ಟು ಬರುತ್ತವೆ, ಟೆಂಥ್ ಫೈನಾನ್ಸ್ ಕಮಿಷನ್‌ನಿಂದ ನಮಗೆ ಎಷ್ಟು ಬರುತ್ತದೆ ಎಂಬಿತ್ಯಾದಿಗಳನ್ನು ತಿಳಿದುಕೊಂಡು ಅದನ್ನು ನಮ್ಮ ರಾಜ್ಯಕ್ಕೆ ದೊರಕಿಸಿಕೊಡುವಂತಹ ಫುಲ್ ಎಕ್ಯುಪ್ಡ್ ಆಗಿರತಕ್ಕಂಥ ಅಧಿಕಾರಿಗಳನ್ನು ಸೇವಾ ಮನೋಭಾವನೆಯುಳ್ಳ ಅಧಿಕಾರಿಗಳನ್ನು ಅಲ್ಲಿ ಹಾಕಬೇಕು. ನಾರ್ಥ್ ಇಂಡಿಯನ್ ಆಫೀಸರ್ಸ್ ಯಾರಿದ್ದಾರೆ ಅವರನ್ನು ಸಾಮಾನ್ಯವಾಗಿ ಅಲ್ಲಿ ತೆಗೆದುಕೊಂಡು ಹೋಗಿ ಹಾಕುತ್ತೇವೆ. ಅವರು ಅಲ್ಲಿ ಬಹಳ ಆರಾಮವಾಗಿ ಇದ್ದು ಜೀವನ ನಡೆಸುತ್ತಾರೆ. ನಾನು ಇವೊತ್ತು ಬೆಳಿಗ್ಗೆ ಯಾರೋ ಒಬ್ಬರ ಹತ್ತಿರ ಮಾತನಾಡುವಾಗ ಅವರು ಬಿಹಾರದವರು ಇಷ್ಟು ತೆಗೆದುಕೊಂಡು ಹೋಗುತ್ತಾರೆ, ತಮಿಳುನಾಡಿನವರು ಇಷ್ಟು ತೆಗೆದುಕೊಂಡು ಹೋಗುತ್ತಾರೆ, ಎಂದೆಲ್ಲಾ ಹೇಳಿದರು. ಆದರೆ ನಮಗೆ 154 ಕೋಟಿಗಳು ಮಾತ್ರ ಸಿಕ್ಕಿದೆ. ಆದರೆ ನಮ್ಮ 10 ಸಾವಿರ ಹಳ್ಳಿಗಳಿಗೆ ಕುಡಿಯುವ ನೀರನ್ನು ಕೊಡಬೇಕಾದರೆ 300 ಕೋಟಿ ರೂಪಾಯಿಗಳು ಬೇಕಾಗುತ್ತದೆ. ನಮ್ಮ ಸರಕಾರದ ಎದುರು ಇರತಕ್ಕಂಥ ಎರಡೇ ಸವಾಲುಗಳಲ್ಲಿ ಒಂದು ಕುಡಿಯುವ ನೀರಿನ ಸಮಸ್ಯೆ, ಇನ್ನೊಂದು ವಿದ್ಯುಚ್ಛಕ್ತಿ ಸಮಸ್ಯೆಯಾಗಿದೆ. ಇವೆರಡು ತಾತ್ಕಾಲಿಕವಾದಂಥ ಸವಾಲು. ನೀರಾವರಿ ಮೂರನೆಯ ಸವಾಲಾಗಿರುತ್ತದೆ. ಇದು ನಮ್ಮ ಹಣಕಾಸಿನ ಸಚಿವರ ಮೇಲೆ ಅವಲಂಬಿಸಿರತಕ್ಕಂಥಾದ್ದು. ನಮ್ಮ ಇಲಾಖೆಗಳಿಗೆ ಯಾವರೀತಿಯಲ್ಲಿ ಹಣವನ್ನು ಒದಗಿಸಿಕೊಡುತ್ತೀರಿ, ಯಾವ ರೀತಿಯಲ್ಲಿ ಹಣವನ್ನು ಕ್ರೋಢೀಕರಿಸಿಕೊಡುತ್ತೀರಿ ? ಯಾವರೀತಿಯಲ್ಲಿ ಯೋಜನೆಗಳನ್ನು ರೂಪಿಸುತ್ತೀರಿ ಎಂಬಿತ್ಯಾದಿಗಳನ್ನು ಯೋಜನೆ ಸಚಿವರಾದ ತಮಗೆ ಬರುತ್ತದೆ. ಆದ್ದರಿಂದ ಡೆಲ್ಲಿ ಆಫೀಸ್‌ಗೆ ಕೂಡಲೇ ಸರಿಯಾದಂಥ ರೆಸಿಡೆನ್‌ಶಿಯಲ್ ಕಮಿಷನರ್‌ರನ್ನು ಮಾಡಿ, ವ್ಯವಸ್ಥೆಗೊಳಿಸಬೇಕು. ಈ ವರ್ಷವೂ ನಮಗೆ ಕುಡಿಯುವ ನೀರಿನ ಸಮಸ್ಯೆಯು ಬರಬಹುದು. ಈಗ ನೀವು ಎಲ್ಲಾ ಪೇಪರ್ಸ್‌ನ್ನು ರೆಡಿ ಮಾಡಬೇಕು. ನೀವು ವಿಶ್ವಬ್ಯಾಂಕ್ ಅಸಿಸ್ಟನ್ಸ್, ಡೆನ್ಮಾರ್ಕ್ ಅಸಿಸ್ಟನ್ಸ್, ನೆದರ್‌ಲ್ಯಾಂಡ್ ಅಸಿಸ್ಟನ್ಸ್‌ನ್ನು ಕೇಳುತ್ತಾ ಇದ್ದೀರಿ, ನಮಗೆ ಕುಡಿಯುವ ನೀರಿನ ತೊಂದರೆಯು ಬಹಳ ಇದೆ. ಹೀಗೆ ಸೆಂಟ್ರಲ್‌ನಿಂದ ಹೆಚ್ಚು ಹಣ ಬರುವ ಬಗ್ಗೆ ನಮ್ಮ ಅಧಿಕಾರಿಗಳು ಅಲ್ಲಿ ಸರಿಯಾಗಿ ಕೆಲಸ ಮಾಡುವಂತಿರಬೇಕು. ಇನ್ನೊಂದು ದುರ್ದೈವ ಅಂದರೆ ಕೇಂದ್ರ ಸರಕಾರದ ಎಲ್ಲಾ ಕಚೇರಿಗಳಲ್ಲಿ ತಮಿಳುನಾಡು ಮತ್ತು ಕೇರಳದ ಆಫೀಸರ್ಸ್ ಹೆಚ್ಚು ಇದ್ದಾರೆ. ನಮ್ಮವರು ಅಲ್ಲಿ ಯಾರೂ ಇಲ್ಲ. ಆದ್ದರಿಂದ ನಮ್ಮ ಡೆಲ್ಲಿ ಆಫೀಸನ್ನು ಕೂಡಲೇ ಎಕ್ವಿಪ್ ಮಾಡಿ ಕೇಂದ್ರದ ಹೆಚ್ಚಿನ ನೆರವು ಪಡೆಯಲು ವ್ಯವಸ್ಥೆ ಮಾಡಬೇಕು.

20 ಕೋಟಿಗಳನ್ನು ಸ್ಯಾನಿಟೇಶನ್ ಬಗ್ಗೆ ಮಾಡಿದ್ದೀರಿ. ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು. ಇವೊತ್ತು ಹಳ್ಳಿಗಳ ಕಡೆಗಳಲ್ಲಿ ಯಾವುದೇ ರೀತಿಯಾದಂಥ ಶೌಚಾಲಯಗಳು ಇಲ್ಲ. ಆದ್ದರಿಂದ ಸ್ಯಾನಿಟೇಶನ್‌ಗೆ ಏನು 20 ಕೋಟಿ ತಾವು ಕೊಟ್ಟಿದ್ದೀರಿ ಇದಕ್ಕೆ ತಾವೊಂದು ಮಾಸ್ಟರ್ ಪ್ಲಾನ್ ಮಾಡಬೇಕು. ಸಂಜೆ 6 ಗಂಟೆಯಲ್ಲಿ ಹಳ್ಳಿಯ ಕಡೆ ಹೆಂಗಸರು ನೀವು ಮೈಸೂರು ರಸ್ತೆ ಆದರೂ ನೋಡಿ ಕೋಲಾರ ರಸ್ತೆಯಾದರೂ ನೋಡಿ ಶೌಚಾಲಯ ವ್ಯವಸ್ಥೆ ಇಲ್ಲದೆ ಬೀದಿಗೆ ಬಂದು ನಿಂತಿರುವ ನತದೃಶ್ಯವನ್ನು ನಾವು ನೋಡಬೇಕಾಗುತ್ತದೆ. ಆದ್ದರಿಂದ ದಯವಿಟ್ಟು 20 ಕೋಟಿ ರೂ.ಗಳನ್ನು ಬಿಡಿಓನವರಿಗೆ ಕೊಟ್ಟು ಅವರು 20 ಶೌಚಾಲಯ ಕೊಡಿ, 30 ಶೌಚಾಲಯ ಕೊಡಿ ಎಂದು ಹೇಳುವ

ಬದಲಿಗೆ ಗ್ರಾಮೀಣಾಭಿವೃದ್ಧಿ ಇಲಾಖೆಯವರೇ ಒಂದು ಮಾಸ್ಟರ್‌ಪ್ಲಾನ್ ಮಾಡಿ, ಯಾವ ತರಹದ್ದೋ ನೀರಿಲ್ಲ, ನೀರಿಲ್ಲದೇ ಇರುವುದರಿಂದ ಓಪನ್ ಶೌಚಾಲಯ ಯಾವ ರೀತಿ ಮಾಡಬೇಕೆಂಬುದಕ್ಕೆ ಹಿಂದೆಯೆಲ್ಲ ಬೇಕಾದಷ್ಟು ಚರ್ಚೆ ಮಾಡಿದ್ದೇವೆ ಈ ವಿಚಾರದಲ್ಲಿ. ಈ ಶೌಚಾಲಯಗಳ ಬಗ್ಗೆ ಒಂದೇ ಮಾದರಿಯ ರೀತಿ ಇರುವುದನ್ನು ತಾವು ಯೋಚನೆ ಮಾಡಿ ಮಾಡಿಕೊಡಬೇಕೆಂದು ತಮಗೆ ಸಲಹೆ ಕೊಡುತ್ತೇನೆ. ಇವತ್ತಿನ ದಿವಸ ಬಹಳ ಜನ ಸದಸ್ಯರು ಮಾನ್ಯ ದೇವೇಗೌಡರ ಸರ್ಕಾರದ ಬಜೆಟ್‌ನ್ನು ಗ್ರಾಮೀಣಾಭಿವೃದ್ಧಿ ಬಜೆಟ್‌ಲ್ಲ ಎನ್ನುವ ಮಾತು ಹೇಳಿದ್ದಾರೆ. ಯಾವುದೇ ಸರ್ಕಾರ ಇದ್ದುಕೊಂಡುಹೋಗಲಿ, ಈ ಸರ್ಕಾರ ಇರಲಿ, ಆ ಸರ್ಕಾರ ಇರಲಿ, ನಾವು ತೆರಿಗೆ ಹಾಕದೆ ಹೋದರೆ ಯಾವುದೇ ಸರಕಾರ ಉದ್ಧಾರ ಆಗುವುದಿಲ್ಲ. ತೆರಿಗೆ ಕೊಡುವವರು ಯಾರು? ಬಡವರು ಯಾರೂ ತೆರಿಗೆ ಕೊಡುವುದಿಲ್ಲ. ಬಡವರ ಮೇಲೆ ತೆರಿಗೆ ಹಾಕತಕ್ಕದ್ದಲ್ಲ ಎಂಬ ಈ ಮಾತು ನಾನು ಇವತ್ತು ಹೇಳಿಲ್ಲ ನಾನು ಇದು 13ನೇ ಬಜೆಟ್ ಭಾಷಣ ಮಾಡುತ್ತಾ ಇರುವುದು, ಯಾವುದೇ ತೆರಿಗೆ ಹಾಕಬೇಕಾದರೆ ಅನುಕೂಲಸ್ಥರ ಮೇಲೆ ತೆರಿಗೆ ಹಾಕುವುದು. ಆದಾಯ ಯಾರಿಗೆ ಬರುತ್ತದೆ, ಸಂಪಾದನೆ ಯಾರು ಮಾಡುತ್ತಾರೆ ಅವರ ಮೇಲೇ ತೆರಿಗೆ ಹಾಕುವುದು. ಅಂತಹ ತೆರಿಗೆಯನ್ನು ಆ ಕಡೆ ಇದ್ದಾಗ ತೆರಿಗೆ ಹಾಕುವುದು, ಈ ಕಡೆ ಬಂದಾಗ ವಿರೋಧ ಮಾಡುವುದು ಅಲ್ಲ. ತೆರಿಗೆ ಯಾವುದಕ್ಕೆ ಹಾಕಬೇಕು ಎಷ್ಟು ಹಾಕಬೇಕು ಎಂಬುದು ಬಹಳ ಪ್ರಾಮುಖ್ಯವಾದ ವಿಚಾರ. ಇವತ್ತು ನಾವು 70 ಪರ್ಸೆಂಟ್ ರೂರಲ್‌ಗಾಗಿ ಇಟ್ಟಿದ್ದೇವೆ. ನಾನು ಮೂರು ನಾಲ್ಕು ಬಜೆಟ್‌ನ್ನು ಕಂಪೇರ್ ಮಾಡಿ ನೋಡಿದ್ದೇನೆ. ಈ 70 ಪರ್ಸೆಂಟ್ ರೂರಲ್ ಬಜೆಟ್ ಕೊಟ್ಟಿದ್ದೇವೆ ಈ ಪಾವರ್ಟಿ ಕಾರ್ಯಕ್ರಮ ಇರಬಹುದು ಮತ್ಯಾವುದೇ ಕಾರ್ಯಕ್ರಮ ಇದ್ದುಕೊಂಡು ಹೋಗಲಿ ಈ ಬಜೆಟಿನ 11 ಸಾವಿರ ಕೋಟಿ ರೂ.ನಲ್ಲಿ ಒಂದು ತಿಂಗಳಿಗೆ 150 ಕೋಟಿಯಿಂದ 180 ಪೆನ್‌ಶನ್ ಸೇರಿಸಿ ಸಂಬಳಕ್ಕೆ ತೆಗೆದರೆ ನಾನ್‌ಪ್ಲಾನ್ ವೆಚ್ಚ 50 ಪರ್ಸೆಂಟ್ ಎಂದು ಬಂದರೂ ಸಹ ಉಳಿದಿರುವ ಐದೂವರೆ ಸಾವಿರ ಕೋಟಿ ರೂ.ಗಳಲ್ಲಿ 70 ಪರ್ಸೆಂಟ್‌ನ್ನು ಗ್ರಾಮೀಣಾಭಿವೃದ್ಧಿಗಾಗಿ ಇಟ್ಟಿದ್ದೇವೆಂಬ ಮಾತು ಹೇಳುತ್ತೇನೆ, ಇನ್ನು ಒಂದೇ ಒಂದು ಮಾತು ಬಹಳ ಪ್ರಾಮುಖ್ಯವಾದ ಕಾರ್ಯಕ್ರಮ ಏಪ್ರಿಲ್‌ರಿಂದ ಅಕ್ಕಿ ಕೊಡುವ ಕಾರ್ಯಕ್ರಮ. ಇದರಲ್ಲಿ ಎರಡು ಮೂರು ಬಹಳ ಗಂಭೀರವಾದ ವಿಚಾರಗಳು ಇವೆ. ಬಹಳ ಸಂತೋಷವಾದದ್ದು ಘೋರ್ಪಡೆಯವರಂತಹ ಒಬ್ಬ ಆರ್ಥಿಕ ಚಿಂತನೆ ಇರುವಂಥವರು ಇದನ್ನು ಮಾಡಬೇಕು ಎಂದು ಹೇಳಿರುವುದು. ಕಾರ್ಡ್ ಕೊಡುವ ಕಾರ್ಯಕ್ರಮವನ್ನು ಮಾಡಬೇಕೆಂದು ಹೇಳಿರುವುದು. ಇಲ್ಲೇ ನಮ್ಮ ಆಹಾರ ಸಚಿವರಿದ್ದಾರೆ. ಇವತ್ತು ಎಲ್ಲಾ ಅಕ್ಕಿಯನ್ನು ಭಾರತ ಆಹಾರ ನಿಗಮವೇ ಕೊಡುತ್ತಿರುವುದು. ಇದಕ್ಕಾಗಿ 220 ಕೋಟಿಯನ್ನು ನಾವು ಸಬ್ಸಿಡಿಗಾಗಿ ಕೊಡುತ್ತಿದ್ದೇವೆ. ಹೋದ ವರ್ಷವೂ ಸಹ 40 ಕೋಟಿಗಿಂತ ಹೆಚ್ಚು ಸಬ್ಸಿಡಿ ಕೊಟ್ಟಿದ್ದೇವೆ. ಇವರು ಮಾಡಲೇಬೇಕಾದ ಎರಡು ವಿಚಾರಗಳೆಂದರೆ ಈ ಬೋಗಸ್ ಕಾರ್ಡ್‌ಗಳನ್ನು ಐಡೆಂಟಿಫೈ ಮಾಡುವುದು. ಒಟ್ಟು 88 ಲಕ್ಷ ಕಾರ್ಡ್ಸ್ ಇದ್ದರೆ ನೀವು ಹತ್ತು ಕೆಜಿ ಅಕ್ಕಿ ಕೊಡಬೇಕೆಂದು ಏನು ಮಾಡಿದ್ದೀರಿ ಅವಕ್ಕೆ ಸುಮಾರು 10 ಸಾವಿರ ಬೋಗಸ್ ಕಾರ್ಡ್‌ಗಳನ್ನು ರೆಡ್ಯೂಸ್ ಮಾಡಲು ಅವಕಾಶ ಇದೆ.

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಕ್ಷರೇ, ನಾವು ಗ್ರಾಮಾಂತರ ಪ್ರದೇಶದಿಂದ ಆಯ್ಕೆಯಾಗಿ ಬಂದು ಶಾಸಕರಾಗಿ ಕೆಲಸ ಮಾಡುತ್ತಿದ್ದೇವೆ. ನಗರಪ್ರದೇಶಗಳಲ್ಲಿ ಬೋಗಸ್ ಕಾರ್ಡ್ ಕೊಟ್ಟಿರುವುದು

ಕಾಣುತ್ತವೆಯೇ ವಿನಹ ನಮ್ಮ ಹಳ್ಳಿಪ್ರದೇಶಗಳಲ್ಲಿ ಗಮನಕ್ಕೇನೂ ಬಂದಿಲ್ಲ. ಕಳೆದ ಸಾರಿ ಹೊಸ ಕಾರ್ಡನ್ನು ಕೊಡುವ ದೃಷ್ಟಿಯಿಂದ ಉಪಾಧ್ಯಾಯರ ಮೂಲಕ ಫ್ಯಾಮಿಲಿ ಸೆನ್ಸಸ್ ಮಾಡಿದ್ದಾರೆ. ಆ ಪ್ರಕಾರವೇ ಕಾರ್ಡ್ ಕೊಟ್ಟಿದ್ದಾರೆ. ಇನ್ನೂ ಕೂಡ, ವಿಲೇಜ್ ಅಕೌಂಟೆಂಟ್ ಆ ಕೆಲಸ ಮಾಡಿದ್ದಿದ್ದರೆ ಕರಾರುವಕ್ಕಾಗಿ ಅವನಿಗೆ ಮನೆ ಗೊತ್ತಾಗುತ್ತಿತ್ತು. ಉಪಾಧ್ಯಾಯರುಗಳಿಗೆ ಈ ಜವಾಬ್ದಾರಿ ಕೊಟ್ಟಿದ್ದರಿಂದ ಏನಾಗಿದೆ ಎಂದರೆ ಅನೇಕ ಕಡೆ ಮನೆ ಇರುವ ಕಡೆ ಅವರು ಹೋಗಿಯೇ ಇಲ್ಲ. ಸೆನ್ಸಸ್ ಮಾಡಿಲ್ಲ. ಅಂತಹ ಜನರು ಆ·ಕಾರ್ಡ್‌ಗಳಿಂದ ಇವತ್ತ ವಂಚಿತರಾಗಿದ್ದಾರೆ. ಇವತ್ತು ಹೊಸದಾಗಿ ಅಂಥವರಿಗೆ ನೀವು ಕಾರ್ಡ್ ಕೊಡದೇ ಹೋದರೆ ನಾಳೆ 1ನೇ ತಾರೀಖಿನಿಂದ ಹೊಸದರಲ್ಲಿ ಅಕ್ಕಿ ಕೊಡುವುದು ನಿಜವಾದ ಬಡವನಿಗೆ ಸಿಗುವುದಿಲ್ಲ. ಶ್ರೀ ವಾಟಾಳ್ ನಾಗರಾಜ್‌ರವರು ಬೆಂಗಳೂರಿನಲ್ಲಿ ಇಷ್ಟು ಕಾರ್ಡ್ ಸಿಗುತ್ತವೆ ಎಂದು ಹೇಳಿದರು, ಭೆಂಗಳೂರಿನಂತಹ ನಗರದಲ್ಲಿ ಇದು ಆಗುವುದಕ್ಕೆ ಸಾಧ್ಯವಿದೆ, ನಾವೂ ಒಪ್ಪುತ್ತೇವೆ, ಆದರೆ ಗ್ರಾಮೀಣ ಪ್ರದೇಶದಲ್ಲಿ ಬೋಗಸ್ ಕಾರ್ಡ್ ಕೊಟ್ಟಿದ್ದಾರೆಂದು ಯಾವ ಆಧಾರದ ಮೇಲೆ ಹೇಳುತ್ತೀರಿ? ತಮ್ಮ ಮಳವಳ್ಳಿ ತಾಲ್ಲೂಕಿನಲ್ಲಿ ನಡೆದಿದೆಯೇನು? ನಮ್ಮ ಆಹಾರಸಚಿವರು ಇಲ್ಲಿಯೇ ಇದ್ದಾರೆ ಕಾರ್ಡ್ ನಿಜವಾದ ಜನರಿಗೆ ಸಿಗದೇ ಇದ್ದ ಸಂದರ್ಭದಲ್ಲಿ ಅವರಿಗೆ ಅಕ್ಕಿ ಕೊಡುವ ವಿಚಾರದಲ್ಲಿ ತಾವು ಏನು ಆಲೋಚನೆ ಮಾಡುತ್ತೀರಿ?

ಒಬ್ಬ ಮಾನ್ಯ ಸದಸ್ಯರು : ಈ ಬೋಗಸ್ ಕಾರ್ಡ್ ವಿಚಾರದಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಬೋಗಸ್ ಕಾರ್ಡ್‌ಗಳು ಬೇಕಾದಷ್ಟಿವೆ. ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳು ಹೊಸ ಕಾರ್ಡ್ ಕೊಡುವಾಗ ತಮ್ಮ ಕಚೇರಿಯಲ್ಲೇ ಉಳಿಸಿಕೊಂಡಿದ್ದಾರೆ. ಅದನ್ನು ಬೇಕಾದರೆ ತಾಲ್ಲೂಕು ಕಚೇರಿಗೆ ತಾವು ವಿಶೇಷವಾದ ವ್ಯವಸ್ಥೆ ಮಾಡಿ ತರಿಸಿಕೊಂಡು ನೋಡಬಹುದು ಎಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

(ಉಪಾಧ್ಯಕ್ಷರಾದ ಶ್ರೀ ಎಂ.ಎಸ್. ಪಾಟೀಲ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಶ್ರೀ ಕೆ.ಎನ್. ನಾಗೇಗೌಡ : ಉಪಾಧ್ಯಕ್ಷರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ್ದು ಕೆಲವು ಕಡೆ ಇದೆ ಆದರೆ ಎಲ್ಲಾ ಕಡೆ ಇಲ್ಲ ಅಂತಲ್ಲ. ಈಗಾಗಲೇ ಇಲಾಖೆಯವರು ಸರ್ವೆ ಮಾಡಿದ್ದಾರೆ. ಕೆಲವು ಹಳ್ಳಿ ಕಡೆ ನಿಜವಾದ ಬಡವರಿಗೆ ಇನ್ನೂ ಕಾರ್ಡ್ ಸಿಕ್ಕಿಲ್ಲ. ಅದರಲ್ಲಿ ಎರಡನೇ ಮಾತಿಲ್ಲ. ಆದರೆ 20 ಎಕರೆ ಜಮೀನಿರುವವರಿಗೆ, ಅನುಕೂಲಸ್ಥರಿಗೆ ಸಾವಿರ ತೆಂಗಿನ ಗಿಡ ಇರುವವರಿಗೆ ಸಿಕ್ಕಿರುವುದೂ ಇದೆ. ಎರಡನೆಯದು, ಒಂದೇ ಮನೆಯಲ್ಲಿ ಮೂರ್ನಾಲ್ಕು ಡಿವೈಡ್ ಮಾಡಿ ಅವರೇ ತಗೊಂಡು, ಈಗ ಆಂಧ್ರದಲ್ಲಿ ಏನಾಗುತ್ತಿದೆ ಮೊನ್ನೆ ಒಂದು ಪತ್ರಿಕೆಯಲ್ಲಿ ಎನ್‌ಟಿಆರ್‌ದು ನಾನು ಓದಿದೆ. ಅಲ್ಲಿ ಅಕ್ಕಿ ತಗೊಂಡು ಬ್ಲಾಕ್ ಮಾರುತ್ತಿದ್ದಾರಂತೆ. ರೇಶನ್ ಕಾರ್ಡ್‌ನಲ್ಲಿ ಅವರೇನು 2 ರೂ.ಗೆ ಅಕ್ಕಿ ಮಾರುತ್ತಿದ್ದಾರೆ ಅದನ್ನು ಬ್ಲಾಕ್‌ನಲ್ಲಿ ಮಾರುತ್ತಿದ್ದಾರಂತೆ. ಇದು ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಎನ್‌ಟಿಆರ್‌ರವರನ್ನು ಯಾವುದೋ ಒಂದು ಟಿವಿಯಲ್ಲಿ ಇಂಟರ್‌ವ್ಯೂ ಮಾಡಿದರು. ಅದನ್ನು ಕೇಳಿದಾಗ ಎರಡು ಕಾರ್ಯಕ್ರಮ/ ಒಂದು ಪಾನನಿರೋಧ ಕಾರ್ಯಕ್ರಮ, ಇನ್ನೊಂದು ಅಕ್ಕಿ ಕಾರ್ಯಕ್ರಮ- ಇವುಗಳ ಬಗ್ಗೆ ಒಲವು ಹೆಚ್ಚು ತೋರಿದೆ. ಆದರೆ ಪ್ರಧಾನವಾಗಿ ಕಂಡದ್ದು ಏನೊಂದರೆ ಅಲ್ಲಿ ಕಳ್ಳಭಟ್ಟಿ ಮತ್ತು ಕದ್ದು ಮಾರುತ್ತಿರುವ ಮಾತನ್ನು ಅವರು ಹೇಳಿದರು. 1700 ಕೋಟಿ ರೂ.

ಅವರು ಖರ್ಚುಮಾಡುತ್ತಿದ್ದಾರೆ. ನಾವು 220 ಕೋಟಿ, ನಮ್ಮ ಸಣ್ಣ ರಾಜ್ಯಕ್ಕೆ ನಮ್ಮ ಆರ್ಥಿಕ ವ್ಯವಸ್ಥೆಗೆ ನಮ್ಮ ವರಮಾನಕ್ಕೆ 220 ಕೋಟಿ ಜಾಸ್ತಿ ದುಡ್ಡು. ಅಂತಹ ಒಂದು ಕಾರ್ಯಕ್ರಮದಲ್ಲಿ ನೀವು ಐಡೆಂಟಿಫೈ ಮಾಡಿಮಾಡಬೇಕು. ಇನ್ನೂ ಒಂದು ಸಲಹೆ ಮಾಡುತ್ತೇನೆ ಸರ್ಕಾರಕ್ಕೆ. ಈಗಿರುವಂತಹ ಎಲ್ಲಾ ಕಾರ್ಡುಗಳನ್ನೂ ತೆಗೆದುಹಾಕಿರಿ. ಹೊಸ ಕಾರ್ಡ್‌ಗಳನ್ನು ನೀವು ಇಂಟ್ರಡ್ಯೂಸ್ ಮಾಡಿರಿ. ನಿಜವಾದ ಬಡವರಿಗೆ ಅವುಗಳನ್ನು ಕೊಡಬೇಕು.

ಶ್ರೀ ಬಿ. ಬಿ. ಶಿವಕುಮಾರ್ : ಒಂದೊಂದು ಸರ್ಕಾರ ಬಂದಾಗ ಒಂದೊಂದು ಬಣ್ಣ ಭಾವಚಿತ್ರ ಇಟ್ಟು ಅದಕ್ಕೇ ಸಾಕಷ್ಟು ಖರ್ಚ ಮಾಡಿರುವುದು ಉಂಟು. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಹೇಳುತ್ತಿದ್ದರು, 55ಲಕ್ಷಕ್ಕೆ 10 ಲಕ್ಷಕ್ಕೆ ಜಾಸ್ತಿ ಕಾರ್ಡಿದೆ, ಸಿಗಬೇಕಾದವರಿಗೆ ಸಿಗಲಿಲ್ಲ ಎಂದು. ಈಗ ನಾಗೇಗೌಡರು ಕೊಡುತ್ತಿರುವ ಸಲಹೆ ಬಹಳ ಸೂಕ್ತವಾದರೂ ಆ ಕಾರ್ಡ್‌ನ್ನೇ ಬದಲಾಯಿಸಿ ಮತ್ತೆ ಮಾಡುವುದು ಸರ್ಕಾರದ ಮೇಲೆ ಹೊರೆಯಾಗುತ್ತದೆ. ಮತ್ತೊಂದು ಬೋಗಸ್ ಕಾರ್ಡ್‌ಗಳನ್ನು ತೆಗೆಯುವುದು, ಮತ್ತು ಅರ್ಹ ವ್ಯಕ್ತಿಗಳಿಗೆ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಇನ್ನೂ ಆ ಬೆನಿಫಿಷಿರೀಸ್‌ನ್ನೂ ಹುಡುಕಿ ಕೊಡಬೇಕಾದ ಕಾರ್ಯಕ್ರಮದಲ್ಲಿ ನಿರ್ವಂಚನೆಯಿಂದ ಅಧಿಕಾರಿಗಳು ಕೆಲಸ ಮಾಡುವುದು ಸೂಕ್ತ ಎಂದು ಹೇಳಬಯಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಈಗ ಶೇಕಡ 20 ರಿಂದ 25ರಷ್ಟು ಬೋಗಸ್ ಕಾರ್ಡಿವೆ. ನಾಗೇಗೌಡರು ಹೇಳಿದ್ದುದು ಸೂಕ್ತ ಎಂದು ನನಗನ್ನಿಸುತ್ತದೆ. ಆ 25 ಪರ್ಸೆಂಟ್‌ನ್ನು ತೆಂಗಿನ ತೋಟ ಪಂಪ್‌ಸೆಟ್ ಉಳ್ಳವರಿಂದ ತೆಗೆದು ನಿಜವಾದ ಬಡವರಿಗೆ ಕೊಟ್ಟರೆ, ಕೊಡುವುದು ಬಿಡುವುದರ ಬಗ್ಗೆ ಸರ್ಕಾರ ಏನು ತೀರ್ಮಾನ ತೆಗೆದುಕೊಳ್ಳುತ್ತದೆಯೋ ತೆಗೆದುಕೊಳ್ಳಲಿ, ಭಾವಚಿತ್ರ ಅಂತೂ ಬೇಡ. ಏಕೆಂದರೆ ಅದರ ಹೊರೆ ಸರ್ಕಾರಕ್ಕೆ ಬೀಳುತ್ತದೆ. ದಯವಿಟ್ಟು ನಾಗೇಗೌಡರು ಹೇಳಿದಂತೆ ಅಧಿಕಾರಿಗಳಿಂದ ಅದನ್ನು ಪತ್ತೆ ಮಾಡಿಸಿ ಆ ಶೇಕಡ 25ರಷ್ಟನ್ನು ಬಡವರಿಗೆ ಕೊಡಿಸಬೇಕೆಂದು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ನಾಗೇಗೌಡರು ಸಾರಾಸಗಟಾಗಿ ಎಲ್ಲಾ ಕಾರ್ಡುಗಳನ್ನು ರದ್ದು ಮಾಡಬೇಕೆಂದರು ಆ ರೀತಿ ಮಾಡುವುದಲ್ಲ. ಯಾವ ಬೋಗಸ್ ಕಾರ್ಡ್‌ಗಳಿವೆ ಅವನ್ನು ಕಿತ್ತು ಹಾಕಲಿ ಮತ್ತು ಕಡುಬಡವರನ್ನು ಗುರ್ತಿಸಿ ಅವರಿಗೆ ಕೊಡುವಂತಹ ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಅಧ್ಯಕ್ಷರೇ, ಕಾರ್ಡ್ ಕಳೆದುಹೋದರೆ ಹೊಸ ಕಾರ್ಡ್ ಕೊಡುವಂತಹ ಒಂದು ವ್ಯವಸ್ಥೆ ಇವತ್ತು ತಾಲ್ಲೂಕಾಫೀಸಿನಲ್ಲಿಲ್ಲ. ಕಾರ್ಡ ಕಳೆದುಹೋದರೆ ಉಪವಾಸ ಬೀಳುವಂತಹ ಪರಿಸ್ಥಿತಿ ಇದೆ. ಕೇಳಿದರೆ ಪ್ರಿಂಟಾದ ಕಾರ್ಡಿಲ್ಲ ಎನ್ನುತ್ತಿದ್ದಾರೆ ಇದು ತೀರಾ ಅಸಾಧುವಾದ ಕಾರಣವೆಂದು ನನ್ನ ಭಾವನೆ.

ಶ್ರೀ ಎಸ್. ನಂಜಪ್ಪ (ಆಹಾರ ಸಚಿವರು) : ಅಧ್ಯಕ್ಷರೇ ಬಡವರನ್ನು ಗುರುತಿಸುವ ಕಾರ್ಯದ ಬಗ್ಗೆ ಎನ್ನುಮರೇಶನ ಮಾಡುತ್ತಿದ್ದೇವೆ. ನನ್ನ ಅನಿಸಿಕೆ ಹೊಸದಾಗಿ ಎನ್ಯುಮರೇಶನ ಮಾಡುವ ಸಂದರ್ಭದಲ್ಲಿ ಈ ಬೋಗಸ ಕಾರ್ಡಗಳನ್ನು ತೆಗೆದುಹಾಕಬೇಕೆಂದು ಮಾಡುತ್ತಿದ್ದಾರೆ.

1.10 ಪಿ.ಎಂ

ಶ್ರೀ ಕಾಗೋಡು ತಿಮ್ಮಪ್ಪ : ಯಾರ ಮುಖಾಂತರ ಕೊಡುತ್ತೀರಿ? ವಿಲೇಜ್ ಅಕೌಂಟೆಂಟರೋ ತಹಶೀಲ್ದಾರ್‌ರವರೇ?

ಶ್ರೀ ಎಸ್. ನಂಜಪ್ಪ : ಜಿಲ್ಲಾಧಿಕಾರಿಗಳ ಮುಖಾಂತರ ಮಾಡಿಸುತ್ತಿದ್ದೇವೆ. ಸನ್ಮಾನ್ಯ ಅಧ್ಯಕ್ಷರೇ, ಈ ಹಿಂದೆ, ಬಡವರು ಯಾರೆಂದರೆ, ಯಾರ ಉತ್ಪನ್ನ 6400 ರೂಪಾಯಿ ವಾರ್ಷಿಕ ವರಮಾನ ಇದೆ ಅವರು ಬಡವರು ಎಂದು, ಬಡತನ ರೇಖೆಯಿಂದ ಕೆಳಗಡೆ ಇದ್ದಾರೆ ಎಂದು ಗುರುತಿಸಿದ್ದಾರೆ. ನಮ್ಮ ಕಡೆ ನೀರಾವರಿ ಇರುವಂಥ ಪ್ರದೇಶಗಳಲ್ಲಿಯೂ ಕೂಡ ಎರಡು ಎಕರೆ, ಎರಡೂವರೆ ಎಕರೆ ಭೂಮಿ ಇರುವವರು ಕೂಡ ಬಡತನದ ರೇಖೆಯ ಕೆಳಗಡೆ ಬರುತ್ತಾರೆ. ಅವನಿಗೆ ಅಕ್ಕಿ ಬೇಕಾಗುವುದಿಲ್ಲ. ಆ ಅಕ್ಕಿಯನ್ನೆಲ್ಲ ನ್ಯಾಯಬೆಲೆ ಅಂಗಡಿಯವರು ವಿತರಣೆ ಮಾಡದೇ ಮಾರಿಕೊಳ್ಳುವ ಸಂದರ್ಭ ಇದೆ. ಬಹಳಷ್ಟು ಜನರಿಗೆ ಸಕ್ಕರೆ ಬೇಕಾಗುವುದಿಲ್ಲ. ಅವರು ಏನು ಮಾಡುತ್ತಾರೆ ಎಂದರೆ ಸಕ್ಕರೆಯನ್ನು ನ್ಯಾಯಬೆಲೆ ಅಂಗಡಿಯವರೆಗೆ ಬಿಟ್ಟು ಅದನ್ನೂ ಮಾರಿಕೊಂಡು ಹಣ ಮಾಡುವ ಒಂದು ಪರಿಸ್ಥಿತಿ ಇದೆ. ಇದು ಯಾರಿಗೆ ಅಗತ್ಯವಿದೆಯೋ ಅವರಿಗೆ ಕಾರ್ಡನ್ನು ಕೊಡುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಹೊಸ ಕಾರ್ಡನ್ನು, ಹಸಿರು ಕಾರ್ಡನ್ನು ಕೊಡುವ ವ್ಯವಸ್ಥೆಯನ್ನು ಮೇ 1ನೇ ತಾರೀಖಿನಿಂದ ನಮ್ಮ ಸರ್ಕಾರ ಕಾರ್ಯಗತ ಮಾಡುತ್ತಿದೆ. ನಮಗೆ ಅತ್ಯಂತ ಕಡುಬಡವರು ಯಾರಿದ್ದಾರೆ, ಅವರಿಗೆ ಸಹಾಯಧನ ಪದ್ಧತಿಯ ಈ ಪಡಿತರ ವ್ಯವಸ್ಥೆಯಲ್ಲಿ ಅವರಿಗೆ ಈ ಫಲ ದೊರಕಬೇಕು ಎನ್ನುವ ಒಂದು ಅಭಿಲಾಷೆ ಸರ್ಕಾರಕ್ಕೆ ಇರುವುದರಿಂದ ಮಧ್ಯವರ್ತಿಗಳು ಅನರ್ಹರು ಈ ಸಹಾಯಧನ ಪದ್ಧತಿಯ ಪಡಿತರ ವ್ಯವಸ್ಥೆಯಲ್ಲಿ ದುರ್ಲಾಭ ಪಡೆಯಬಾರದು ಎನ್ನತಕ್ಕಂಥದ್ದು ಸರ್ಕಾರ ಸದಿಚ್ಛೆ ಇರುವುದರಿಂದ ಸನ್ಮಾನ್ಯ ಸದಸ್ಯರುಗಳು ಕೊಡುವ ಸಲಹೆಗಳನ್ನು ಅಂಗೀಕಾರ ಮಾಡಿ ಈ ವ್ಯವಸ್ಥೆಯನ್ನು ಬಲಪಡಿಸುವ ದಿಕ್ಕಿನಲ್ಲಿ ನಾವು ಕಾರ್ಯೋನ್ಮುಖರಾಗಿದ್ದೇವೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಆರು ಸಾವಿರ ರೂಪಾಯಿ ನಿಗದಿ ಮಾಡಿದ್ದಾರೆ. ಇದು ಬಹಳ ಹಿಂದೆ ಮಾಡಿದಂಥಾದ್ದು. ಈ ಆರು ಸಾವಿರ ರೂಪಾಯಿಯ ಮಿತಿ ಏನಿದೆ, ಅದನ್ನು ಈ ಸಾರಿ ಮೇಲೆ ಏರಿಸುವುದಕ್ಕೆ ಪ್ರಯತ್ನ ಮಾಡುತ್ತೀರೋ, ಎಂದು ತಮ್ಮ ಮುಖಾಂತರ ಕೇಳುತ್ತೇನೆ. ಎರಡನೆಯದು ಬೋಗಸ್ ಕಾರ್ಡ್ ಎನ್ನುವುದು ಖಂಡಿತವಾಗಿಯೂ ಇದೆ. ಅದರಲ್ಲೇನು ಅನುಮಾನವೇ ಇಲ್ಲ. ಹಿಂದೆ ಮಾಡಿದಂಥ ಸಂದರ್ಭದಲ್ಲಿ ಸಾಕಷ್ಟು ಬೋಗಸ್ ಕಾರ್ಡ್‌ಗಳಿರುವುದರಿಂದ ಈ ಏರುಪೇರು ಆಗುವುದಕ್ಕೆ ಕಾರಣವಾಗಿದೆ. ಆದ್ದರಿಂದ ಅದನ್ನು ಬದಲಾವಣೆ ಮಾಡಬೇಕು. ಆದರೆ ಯಾವುದೇ ರೀತಿಯ ತನಿಖೆ ಅಥವಾ ಯಾರನ್ನೋ ಕಳುಹಿಸಿ ಅದನ್ನು ಹಿಂದಕ್ಕೆ ತರುವ ಪ್ರಯತ್ನವಾಗುವುದಿಲ್ಲ. ಇವತ್ತು ಕೇಂದ್ರ ಸರ್ಕಾರ ಕೂಡ ಕಳ್ಳನೋಟುಗಳ ಚಲಾವಣೆ ಜಾಸ್ತಿಯಾಯಿತು ಎಂದಾಗ ನೋಟಿನ ವಿನ್ಯಾಸವನ್ನೇ ಬದಲಾಯಿಸುತ್ತಾರೆ. ಆ ರೀತಿ ಕಾರ್ಡುಗಳನ್ನೇ ಒಂದು ರೀತಿ ಬದಲಾಯಿಸಿದಾಗ ಎಲ್ಲಾ ಕಾರ್ಡುಗಳು ಹೊರಗೆ ಬಂದಾಗ, ಹೊಸ ಕಾರ್ಡ್ ಕೊಡುವ ಪದ್ಧತಿ ಬಂದಾಗ ತಾವು ಹೇಳಿದಂಥ ಕ್ರಮವನ್ನು ಅನುಸರಿಸಿ ನಿಜವಾಗಿಯೂ

ಯಾರಿಗೆ ಕಾರ್ಡ್ ಸಲ್ಲಬೇಕೋ ಅವರಿಗೆ ಸಲ್ಲುವುದಕ್ಕೆ ವ್ಯವಸ್ಥೆಯಾಗುತ್ತದೆ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ನಾಗೇಗೌಡರು ಈ ರಾಜ್ಯದ ಮಾಜಿ ಮಂತ್ರಿಗಳಾಗಿ ಹಾಲಿ ಈ ಶಾಸನಸಭೆಯ ಸದಸ್ಯರಾಗಿ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಅವರು 1994-95ನೇ ಸಾಲಿನಲ್ಲಿ ಇಂಥ ಗುರುತಿನ ಚೀಟಿ ಆಗಬೇಕು ಎಂದು ಹೇಳಿ ವಾದ ಮಾಡಿದಂಥ ನಮ್ಮ ಸದಸ್ಯರು. ಇವತ್ತು ಕೊಟ್ಟಿರುವಂಥ ಪಡಿತರ ಚೀಟಿಯನ್ನು ಸಂಪೂರ್ಣವಾಗಿ ಬದಲಾವಣೆ ಮಾಡಬೇಕು ಎನ್ನುವ ಅಭಿಪ್ರಾಯವನ್ನು ಸನ್ಮಾನ್ಯ ಸದಸ್ಯರು ಕೊಡುತ್ತಿದ್ದಾರೆ.

(ಗೊಂದಲ)

ಅದು ನಿಮಗೆ ಬಿಟ್ಟಿರುವ ವಿಚಾರ. ನಾನು ನೇರವಾಗಿ ಮಾತನಾಡುತ್ತಿಲ್ಲ. ನಾನು ಅಧ್ಯಕ್ಷರೊಡನೆ ಮಾತನಾಡುತ್ತಿದ್ದೇನೆ. ನನ್ನ ದೃಷ್ಟಿಯಲ್ಲಿ ಮಾನ್ಯ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಮೇ ಪ್ರಾರಂಭದಿಂದ ನಾವು ಹೊಸ ಪಡಿತರ ಚೀಟಿಯನ್ನು ವಿತರಣೆ ಮಾಡುತ್ತೇವೆ ಎಂದು ಹೇಳಿ ವಾದ ಮಾಡುತ್ತಿದ್ದಾರೆ. ಇದಕ್ಕೆ ಖರ್ಚಾಗುವಂಥ ಹಣವೆಷ್ಟು? ಜೊತೆಗೆ ಈ ಪಡಿತರ ಚೀಟಿ ಪ್ರಿಂಟ್ ಮಾಡಿಸುವುದಕ್ಕೆ ಪಡಿತರ ಚೀಟಿ ಪಡೆಯುವಂಥ ಜನರ ಹತ್ತಿರ ಹಣವನ್ನು ತಾವು ವಸೂಲು ಮಾಡುತ್ತಿದ್ದೀರಿ. ಹಿಂದೆ ಎಲ್ಲಾ ಸರ್ಕಾರಗಳು ಇದ್ದಂಥ ಸಂದರ್ಭದಲ್ಲಿ ಪ್ರಿಂಟ್ ಮಾಡಿದಂಥ ಪಡಿತರ ಚೀಟಿಗೆ ಎರಡು ರೂಪಾಯಿಗಳಂತೆ ಹಣವನ್ನು ವಸೂಲು ಮಾಡುತ್ತಿದ್ದರು. ಅದೇ ರೀತಿ ಮುಂದಿನ ದಿನಗಳಲ್ಲಿ ಹೊಸ ಪಡಿತರ ಚೀಟಿಗೆ ಹಣವನ್ನು ತಾವು ವಸೂಲು ಮಾಡುತ್ತೀರಾ? ಇದಕ್ಕಾಗಿ ಪ್ರಿಂಟ್ ಮಾಡುವುದಕ್ಕಾಗಿ ಎಷ್ಟು ಹಣವನ್ನು ತಾವು ಖರ್ಚು ಮಾಡುತ್ತೀರಿ ಎನ್ನುವುದನ್ನು ತಾವು ದಯಮಾಡಿ ಹೇಳಬೇಕು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಅವರು ಒಂದು ಮಾತನ್ನು ಹೇಳಿದರು, ಕಳೆದ ಸಾರಿ ಆ ಕಾರ್ಡ ಮಾಡುವ ಕಾಲದಲ್ಲಿ ಕಾಂಗ್ರೆಸ್‌ನಲ್ಲಿದ್ದರು, ಆಗ ಆ ರೀತಿ ಹೇಳಿಲ್ಲ ಎಂದು ಹೇಳಿದರು. ಆದರೆ ಅವತ್ತು ಕೊಡುತ್ತಿದ್ದ ಸಬ್ಸಿಡಿ 42 ಕೋಟಿ ರೂಪಾಯಿ. ಇವತ್ತು ಕೊಡುತ್ತಿರುವಂಥದ್ದು ಬೃಹತ ಯೋಜನೆ 220 ಕೋಟಿ ರೂಪಾಯಿ. ಇದು ಒಂದು ರೂಪಾಯಿ ಜಾಸ್ತಿಯಲ್ಲ. 3.20 ಪೈಸೆ ಕೆ.ಜಿ. ಅಕ್ಕಿಗೆ ಕೊಟ್ಟರೆ 3.60 ಪೈಸೆ ಸಬ್ಸಿಡಿಯನ್ನು ಕೊಡುತ್ತಿದ್ದೇವೆ. ಏನು ರೇಟಿನಲ್ಲಿ ಅಕ್ಕಿಯನ್ನು ಕೊಡುತ್ತಿದ್ದೇವೆ, ಅದಕ್ಕಿಂತಲೂ ಜಾಸ್ತಿ ಸಬ್ಸಿಡಿಯನ್ನು ಕೊಡುತ್ತಿದ್ದೇವೆ. ಸಬ್ಸಿಡಿ ಒರಿಜಿನಲ್ ರೇಟ್‌ಗಿಂತ ಜಾಸ್ತಿ ಇದೆ. ಇದು ದೊಡ್ಡ ಬೃಹತ್ತಾದ ಯೋಜನೆ. ಆ ಒಂದು 220 ಕೋಟಿ ರೂಪಾಯಿ ಯೋಜನೆಯನ್ನು ಏನು ನಾವು ಹಾಕಿಕೊಂಡಿದ್ದೇವೆ, ಈ ಯೋಜನೆಗೆ ನಾವು ಮೊದಲೇ ಮಾಡುತ್ತಿದ್ದ ಆಹಾರ ವಿತರಣೆ ಪದ್ಧತಿಗೂ ಇವತ್ತು ಸಬ್ಸಿಡಿ ಒಂದೊಂದು ಕೆಜಿಗೆ 3-50 ಪೈಸೆ, 3-60 ಪೈಸೆ ಏನು ಸಬ್ಸಿಡಿ ಕೊಡುತ್ತಿದ್ದೇವೆ, ಅದು ದುರುಪಯೋಗಬಾರದು. ಮಾನ್ಯ ಶಿವಪ್ಪನವರು ಒಂದು ಮಾತನ್ನು ಹೇಳಿದರು. ಕೇಂದ್ರ ಸರ್ಕಾರದಲ್ಲಿ ಒಂದು ಸಾವಿರ ರೂಪಾಯಿ ನೋಟ್ ಇತ್ತು, ಅದನ್ನು ತೆಗೆದು 500 ರೂಪಾಯಿ ಎಂದು ಮಾಡಿದರು. 500 ರೂಪಾಯಿ ನೋಟ್ ಇರಲಿಲ್ಲ. ಕಾಲಕ್ಕೆ ಅನುಗುಣವಾಗಿ

ಯಾವುದರಲ್ಲಿ ಎಷ್ಟೆಷ್ಟು ಲೋಪದೋಷ ಇದೆ ಎಂದು ಹೇಳಿ ತಿದ್ದಿದರೆ ಅದಕ್ಕೆ ರಾಜಕೀಯ ಬಣ್ಣ ಬಳಿಯುವುದು ಬೇಡ ಅದಕ್ಕೆ ನಾನು ಹೇಳುವುದು 220 ಕೋಟಿ ರೂಪಾಯಿ ಅದು ದೊಡ್ಡ ಬೃಹತ್‌ಯೋಜನೆಯಾಗಿದೆ, ಹಳ್ಳಿಯ ಕಡೆ ಏನು ದುರುಪಯೋಗವಾಗುತ್ತಿದೆ. ಆಂಧ್ರದಲ್ಲಿ ಎನ್.ಟಿ.ಆರ್.ರವರು ಮಾಡಿ ಇವತ್ತಿನ ದಿವಸ ಬಹಳಷ್ಟು ಸಂಕಷ್ಟಕ್ಕೆ ಗುರಿಯಾಗಿದ್ದಾರೆ, ಎಲ್ಲಾ ಪತ್ರಿಕೆಗಳಲ್ಲಿ ತೀವ್ರವಾದಂಥ ಟೀಕೆಗಳು ಬಂದಿವೆ, ದುರುಪಯೋಗವಾಗುತ್ತಿದೆ. ಇವೆಲ್ಲವನ್ನು ಪ್ರತಿಸಲ ನಾವು ನೋಡಿ ಈಗ ಇರುವ ಉದಾಹರಣೆಗಳನ್ನು ನೋಡಿ ಕರೆಕ್ಟ್ ಮಾಡಿಕೊಳ್ಳಬೇಕು ಎಂದು ಒಂದು ಕಾರ್ಡ್‌ ಹತ್ತು ರೂಪಾಯಿ, ಎಂಟು ರೂಪಾಯಿ ಎಂದು ಕಲೆಕ್ಟ್ ಮಾಡುತ್ತಾರೆ ಎಂದು ಕಾಣುತ್ತದೆ.

ಶ್ರೀ ಎಸ್. ನಂಜಪ್ಪ : ಹೊಸದಾಗಿ ಕೊಡುವ ಕಾರ್ಡಿಗೆ ಮೂರು ರೂಪಾಯಿ ಅದರ ಬೆಲೆ. ಕಾರ್ಡುದಾರರೇ ಕೊಡುವಂಥ ಈ ಪದ್ಧತಿ ಹಿಂದೆ ಇದೆ. ಆದ್ದರಿಂದ ಅದನ್ನು ಅವರೇ ಕೊಡುವುದರಿಂದ ಸರ್ಕಾರಕ್ಕೆ ಹೆಚ್ಚಿನ ಖರ್ಚೇನೂ ಬರುವುದಿಲ್ಲ ಎಂದು ನಾನು ತಿಳಿಸುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಆದ್ದರಿಂದ ಅದನ್ನು ಮಾಡತಕ್ಕಂಥದ್ದು ಬಹಳ ಸೂಕ್ತ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಸಹಾಯಧನವನ್ನು ಹೆಚ್ಚಾಗಿ ಕೊಡುತ್ತಿದ್ದೀರಿ. ಅದಕ್ಕೆ ಕಾರ್ಡಿನ ಬಣ್ಣ ಬದಲಾವಣೆ ಮಾಡುವ ಅವಶ್ಯಕತೆ ಇಲ್ಲ. ಸರಿಯಾಗಿ ಸಮರ್ಪಕವಾಗಿ ಅನುಷ್ಠಾನ ಮಾಡಿ. ನೀವು ಸಬ್ಸಿಡಿ ಜಾಸ್ತಿ ಕೊಟ್ಟಿದ್ದೇವೆ ಎಂದು ಅಲ್ಲಿ ಇರುವ ಕಾರ್ಡ್‌ನ್ನೇ ಬದಲಾವಣೆ ಮಾಡುವುದಕ್ಕೆ ಹೋಗುತ್ತೀರಾ?

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೇ, ಇವತ್ತು ಅನೇಕ ಸ್ನೇಹಿತರು ಕೆಲವು ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದಾರೆ. ನಾವು ಬಣ್ಣ ಬದಲಾಯಿಸುವ ಕೆಲಸ ಮಾಡಬೇಡಿ ಎನ್ನುವ ಮಾತನ್ನು ಹೇಳಿದ್ದಾರೆ. ನಾವು1989ರಲ್ಲಿ ಗೆದ್ದು ಆ ಕಡೆ ಬಂದಾಗ ನಾವು ಹಸಿರು ಕಾರ್ಡನ್ನು ಕೊಡುತ್ತಿದ್ದೆವು. ಅದಕ್ಕೆ ಇಂದಿರಾಗಾಂಧಿಯವರು, ರಾಜೀವಗಾಂಧಿಯವರುದು ಬಣ್ಣ ಕಟ್ಟಿದರು. ಅವತ್ತು ಅದಕ್ಕೆ ನಾವು ವಿರೋಧ ಮಾಡಿದೆವು. ಅವತ್ತು ಪ್ರಿಂಟಿಂಗ್ ಕಾಸ್ಟ್ ಎಷ್ಟು ಎಂದು ಪ್ರಶ್ನೆ ಮಾಡಿದೆವು. ಅವತ್ತು ಇರುವ ಕಾಳಜಿ ಇವತ್ತು ಬಂದಿದೆಯಲ್ಲ. ಬಣ್ಣ ಬದಲಾಯಿಸುವುದು ಏನಲ್ಲ. ಬಣ್ಣ ಬದಲಾಯಿಸಿ ಇಂದಿರಾಗಾಂಧಿಯವರು ಫೋಟೊ ಹಾಕಿ ಕೊಟ್ಟಮೇಲೆ ಯಾರೂ ಕೂಡ ಕಾರ್ಡ್‌ನ್ನು ಇವತ್ತಿಗೂ ಕೂಡ ಕೊಟ್ಟಿಲ್ಲ. ಐದು ವರ್ಷಗಳ ಕಾಲ ಸರ್ಕಾರ ನಡೆಸಿದರೂ ಕೂಡ ಕಾರ್ಡ್ ಕೊಡುವ ವ್ಯವಸ್ಥೆ ಅವರಿಂದ ಆಗಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಇದನ್ನು ಬದಲಾವಣೆ ಮಾಡುವುದು ಸೂಕ್ತ ಇದೆ. ಇಲ್ಲದಿದ್ದರೆ ಅದನ್ನು ಮಿಸ್-ಯೂಸ್ ಮಾಡಿಕೊಳ್ಳುತ್ತಾರೆ. ಎಂದು ಹೇಳಬಯಸುತ್ತೇನೆ. ಇದೊಂದು ಬಹಳ ಮಹತ್ತರವಾದಂಥ ಯೋಜನೆ ಆಗದೆ ಈ ಯೋಜನೆಗೆ ಹೆಚ್ಚು ಗಮನವನ್ನು ಹರಿಸಬೇಕಾಗಿದೆ. ನಮ್ಮ ಸರ್ಕಾರ ಆದ್ಯತೆಯ ಮೇಲೆ ಕೇವಲ ಮೂರು ತಿಂಗಳಲ್ಲಿ ಏನು ಕೆಲಸ ಮಾಡಿದ್ದೇವೆ, ಎಂದರೆ,

ಮೊದಲನೆಯದು ಅಕ್ಕಿ ಕೊಡುವ ಯೋಜನೆ, ಎರಡನೆಯದು ರೈತರಿಗೆ ಕೃಷಿಬಡ್ಡಿಯನ್ನು ಮನ್ನಾ ಮಾಡಿದ್ದೇವೆ, ಇವೆರಡರಿಂದ ಮೂರು ತಿಂಗಳಲ್ಲಿ ದೊಡ್ಡಸಾಧನೆಗೆ ಹೆಚ್ಚು ಮಹತ್ವವನ್ನು ಕೊಟ್ಟು ಮಾಡಿದ್ದೇವೆ ಅದರಲ್ಲಿ ಈ ಅಕ್ಕಿಯನ್ನು ಕೊಡುವುದು ಒಂದು. ಅದಕ್ಕೆ ಈಗಿನಿಂದಲೇ ಅದು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿಯೇ ಎಲ್ಲಾ ರೀತಿಯಾದಂಥ ವ್ಯವಸ್ಥೆಯನ್ನು ಮಾಡಿಕೊಳ್ಳುವುದು ಬಹಳ ಸೂಕ್ತ ಎಂದು ನನ್ನ ಅನಿಸಿಕೆ. ಸಾಧ್ಯವಾದರೆ ತಾವು ಆಲ್ ಇಂಡಿಯಾ ಫುಡ್ ಮಿನಿಸ್ಟರ್ ಕಾನ್‌ಫೆರೆನ್ಸ್ ಮತ್ತೆ ಫುಡ್ ಸೆಕ್ರೆಟರಿಗಳು ಕಾನ್‌ಫೆರೆನ್ಸ್‌ಗೆ ಹೋಗುತ್ತೀರಲ್ಲ ಅಲ್ಲಿ ಚರ್ಚೆಮಾಡಿ. ಆಂಧ್ರದಲ್ಲಿ ಯಾವ ರೀತಿ ನಡೆದಿದೆ, ಬೇರೆ ಬೇರೆ ರಾಜ್ಯಗಳಲ್ಲಿ ಯಾವ ರೀತಿಯಾಗಿ ನಡೆಯುತ್ತಿದೆ, ಹಿಂದೆ ಯಾವ ರೀತಿ ಇತ್ತು ಎಂಬುದನ್ನೆಲ್ಲಾ ನೋಡಿ ಮಾಡಿ. ನಮಗೆ ಇನ್ನೂ ಟೈಮ್ ಇದೆ. ಬಹಳ ಅಚ್ಚುಕಟ್ಟಾಗಿ ಈ ಕಾರ್ಯಕ್ರಮವನ್ನು ನಡೆಸಬೇಕು. ನಿಜವಾದಂಥ ಬಡವರಿಗೆ ಅಕ್ಕಿ ಸಿಗುವಂಥದ್ದು 220 ಕೋಟಿ ರೂಪಾಯಿ ಕೊಡುತ್ತಿದ್ದೇವೆ. ಮತ್ತೆ ಇನ್ನು ಒಂದು ಬಹಳ ಪ್ರಾಮುಖ್ಯವಾದ ಎಂದು ಒಪ್ಪಿದ್ದೀರಿ. ತಾವು ಕೊಡುವಾಗ ಈ ಬಡವರಿಗೆ ಆರೋಗ್ಯ ಕೊಡತಕ್ಕ ನಿಧಿ ಏನು ಇದೆ, ಇದಕ್ಕೆ ಒಂದು ಒಳ್ಳೆಯ ಸ್ವರೂಪ ಕೊಡಬೇಕು. ಒಳ್ಳೆಯ ಸ್ವರೂಪವನ್ನು ಕೊಟ್ಟು ಅದರ ಕಾರ್ಯಕ್ರಮ ಬಡವರಿಗೆ ನಿಜವಾಗಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಬಡವರಿಗೆ ಆರೋಗ್ಯ ರೂಢಿಸುವಂತಹ ಕಾರ್ಯಕ್ರಮವನ್ನು ರೂಪಿಸಬೇಕು. ಅದು ಈ ವರ್ಷದಲ್ಲಿಯೇ ಜಾರಿಗೆ ಬರಬೇಕು. ತಾವು ಏನು 100 ಕ್ರೋರ್ಸ್ ಎಂದು ಹೇಳುತ್ತೀರಿ, ಅದನ್ನೇ ಈ ವರ್ಷವೇ ಜಾರಿಗೊಳ್ಳಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಇನ್ನೊಂದು ಬಹಳ ಉತ್ತಮವಾದಂಥ ಕೆಲಸ ಎಂದರೆ ಫ್ರೀ ಮೆಡಿಕಲ್ ಚೆಕಪ್ ಅನ್ನು ಎಸ್.ಸಿ/ಎಸ್.ಟಿ.ಗಳಿಗೆ ಹಾಗೂ ವೀಕರ್ ಸೆಕ್ಷನ್‌ಗೆ ಕೊಡುತ್ತೇವೆ ಎಂಧು ಪೈಲೆಟ್ ಪ್ರಾಜೆಕ್ಟ್ ಮಾಡಿದ್ದೀರಿ. ಇದು ಒಳ್ಳೆಯ ಕಾರ್ಯಕ್ರಮ. ಅದನ್ನು ಮಾನ್ಯ ಬಂಗಾರಪ್ಪನವರು ಹೇಳಿದ್ದರು. ನಾನೂ ಒಂದು ಕಾರ್ಯಕ್ರಮ ತಂದಿದ್ದೆ ಶುಶ್ರೂಷೆ, ಅದನ್ನು ಮುಚ್ಚಿದ್ದೀರಿ ನೀವು ಎಂದು ಹೇಳಿದರು. ಅದೂ ಅಲ್ಲದೇ ಸ್ಕೂಲ್ ಮಕ್ಕಳಿಗೆ ಇವತ್ತಿನ ದಿವಸ ಫ್ರೀ ಮೆಡಿಸಿನ್ಸ್ ಅನ್ನು ಸಪ್ಲೈ ಮಾಡುತ್ತೇವೆ ಎಂದು ಹೇಳಿದ್ದೆವು. ಮಾನ್ಯ ಗೋವಿಂದೇ ಗೌಡರು ಮೇಲ್ಮನೆಯಲ್ಲಿ ನಮ್ಮ ಕ್ಷೀರ ಯೋಜನೆಯನ್ನು ನಿಲ್ಲಿಸಿಬಿಟ್ಟಿದ್ದೇವೆ ಎಂದು ಹೇಳಿರುವುದನ್ನು ಪತ್ರಿಕೆಯಲ್ಲಿ ಬಂದಿರುವುದನ್ನು ನೋಡಿದೆ. ಈಗ ಅದನ್ನು ಏಕೆ ನಿಲ್ಲಿಸಿದ್ದಾರೆ ಎಂದು ನಮಗೆ ಗೊತ್ತಿಲ್ಲ. ತಮಗೆ ಹಣಕಾಸಿನ ಕೊರತೆ ಇರಬಹುದು ಎಂದು ನಾನು ಭಾವಿಸಿಕೊಳ್ಳುತ್ತೇನೆ. ಆದರೂ ಸಹ ಅದನ್ನು ಮತ್ತೆ ಜಾರಿಗೆ ತರುವ ಬಗ್ಗೆ ಯೋಚನೆ ಮಾಡಬೇಕು. ತಾವು ಏನು ಫ್ರೀ ಮೆಡಿಸಿನ್ ಮಕ್ಕಳಿಗೆ ಕೊಡತಕ್ಕದ್ದು. ಉಡುಪು ಕೊಡತಕ್ಕದ್ದು, ಮಕ್ಕಳ ಆರೋಗ್ಯ ಸುಧಾರಣೆಗೆ ಮೆಡಿಸಿನ್ ಕೊಡುವ ಬದಲಾಗಿ ನೀವು ಮೂಲಭೂತವಾಗಿ ಹಾಲು ಕೊಟ್ಟರೆ ಮೆಂಟಲಿ ನ್ಯೂಟ್ರೀಷನ್ ಪಾಯಿಂಟ್‌ನಿಂದ ಒಳ್ಳೆಯದಾಗುತ್ತದೆ ಎಂದು ನಾನು ಕ್ಷೀರ ಯೋಜನೆಯನ್ನು ಪ್ರಾರಂಭ ಮಾಡಿದ್ದೆ. ಆ ಕ್ಷೀರ ಯೋಜನೆ ತಮ್ಮದು, ನಮ್ಮ ಅನಿಮಲ್ ಹಸ್ಬೆಂಡ್‌ರಿಗೆ ಬರುವುದಿಲ್ಲ. ನಿಮ್ಮ ಕೇರ್‌ನಲ್ಲಿ ಅಷ್ಟು ದುಡ್ಡು ಇಲ್ಲದೇ ಇರುವುದರಿಂದ ಅದು ನಾವು ಕೊಡುತ್ತಿರುವ ಹಣ ಅದರಿಂದ ತಾವು ಏನಾದರೂ ಮಾಡಿ ಆ ಕ್ಷೀರ ಯೋಜನೆಯನ್ನು ನಿಲ್ಲಿಸಬಾರದು. ಕ್ಷೀರ ಯೋಜನೆಯನ್ನು ಜಾರಿಗೆ ತರಬೇಕು. ರೈತರ ಮಕ್ಕಳಿಗೆ ಹಾಲನ್ನು ಕುಡಿಸತಕ್ಕದ್ದು. ಕಾಲೇಜು ಮಕ್ಕಳಿಗೆ ಕುಡಿಸತಕ್ಕ ಯೋಜನೆ ಅಲ್ಲ. ರೈತರು ಮಾರುವ ಹಾಲನ್ನು

ರೈತರ ಮಕ್ಕಳು ಕುಡಿಯಲಿ ಎಂಬ ಯೋಜನೆ. ಎಷ್ಟೋ ಜನ ಐದು ಎಕರೆ, ಹತ್ತು ಎಕರೆ ಜಮೀನು ಇರತಕ್ಕವರು ನಾಲ್ಕು ಐದು ಎಮ್ಮೆ ಕಾಯುವರು, ಮತ್ತು ಹಸು ಮೇಯಿಸತಕ್ಕವರು ಕಟ್ಟಿಕೊಂಡಿರತಕ್ಕವರ ಮಕ್ಕಳು ಹಾಲು ಕುಡಿಯುವುದಿಲ್ಲ. ನಮ್ಮಂತಹ ರೈತರ ಮಕ್ಕಳಾರೂ ಹಾಲು ಕುಡಿದಿಲ್ಲ. ನಾವು ಹಾಲು ಕುಡಿದು ದೊಡ್ಡವರಾದರೂ ನಾವು ಚಿಕ್ಕವರಾಗಿದ್ದಾಗ ಹಾಲು ಕುಡಿಯುವುದಕ್ಕೆ ಸಾಧ್ಯವಾಗಲಿಲ್ಲ. ಆ ನೋವನ್ನು ನೋಡಿ ನಾವು ಆ ಯೋಜನೆ ತಂದಿದ್ದೆವು. ಅದರಿಂದ ಕ್ಷೀರ ಯೋಜನೆಯನ್ನು ರದ್ದು ಮಾಡಬಾರದು, ಅದರ ಬಗ್ಗೆ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ. ಮತ್ತು ಸಪ್ಲೈ ಆಫ್ ಮೆಡಿಸಿನ್ಸ್ ಮಕ್ಕಳಿಗೆ ಕೊಡತಕ್ಕದ್ದು ಇದರ ಬಗ್ಗೆ ಸ್ಪಷ್ಟವಾಗಿ ನಿಮ್ಮ ಯೋಜನೆಯನ್ನು ಜಾರಿಗೆತರಬೇಕು ನಾಲ್ಕು ಜಿಲ್ಲೆಗಳಲ್ಲಿ ಎಸ್.ಸಿ.:ಎಸ್.ಟಿ, ವೀಕರ್ ಸೆಕ್ಷನ್‌ಗೆ ಪೈಲಟ್ ಪ್ರಾಜೆಕ್ಟ್ ಮಾಡತಕ್ಕದ್ದು, ಹೆಲ್ತ್ ಡಿಪಾರ್ಟ್‌ಮೆಂಟಿನವರು. ಇದಕ್ಕೆ ನೀವು ಜಾಸ್ತಿ ಹಣ ಕೊಡುತ್ತಿದ್ದೀರಿ. ನಮ್ಮ ಎಜುಕೇಷನ್ ಇರಿಗೇಷನ್ ಅಂಡ್ ಪವರ್ ಸೆಕ್ಟಾರ್ಸ್ ಬಿಟ್ಟರೆ ಹೆಚ್ಚು ಗಮನ ಕೊಡತಕ್ಕದ್ದೇ ಹೆಲ್ತ್ ಡಿಪಾರ್ಟ್‌ಮೆಂಟಿಗೆ ನೀವು ಈ ಪೈಲಟ್ ಪ್ರಾಜೆಕ್ಟ್ ಮಾಡತಕ್ಕದ್ದರಲ್ಲಿ ಸ್ಕೂಲ್‌ಗೆ ಮೆಡಿಸಿನ್ ಕೊಡತಕ್ಕದ್ದು ಮತ್ತು ನಾಲ್ಕು ಡಿಸ್ಟ್ರಿಕ್ಟನ್ನು ತಾವು ಸೆಲೆಕ್ಟ್ ಮಾಡತಕ್ಕದ್ದು ಇದೆ. ವರ್ಲ್ಡ್‌ಬ್ಯಾಂಕ್ ಯೋಜನೆಯಲ್ಲಿ 500 ಕೋಟಿ ರೂಪಾಯಿ ನೀವು ಯೋಜನೆ ಮಾಡಿದ್ದುದು ನನಗೆ ಇದು ಅರ್ಥ ಆಗಲಿಲ್ಲ. ಈ 500 ಕೋಟಿ ರೂಪಾಯಿಗಳ ವರ್ಲ್ಡ್ ಬ್ಯಾಂಕಿನ ಅಸಿಸ್ಟೆನ್ಸ್‌ನಿಂದ ಅಪಗ್ರೇಡೇಷನ್ ಆಫ್ ಹಾಸ್ಪಿಟಲ್‌ಗೆ ಖರ್ಚು ಮಾಡುತ್ತೀರಿ? ಆ 500 ಕೋಟಿ ರೂಪಾಯಿ ಯಾವುದು ಎಂದು ನನಗೆ ಅರ್ಥ ಆಗಲಿಲ್ಲ. ವರ್ಲ್ಡ್ ಬ್ಯಾಂಕ್ ಅಸಿಸ್ಟನ್ಸ್‌ನಲ್ಲಿ ತಮಗೆ 500 ಕೋಟಿ ರೂಪಾಯಿ ಈ ವರ್ಷ ಸಿಕ್ಕಿದರೆ ಅಥವಾ ಇನ್ನು 4 ಅಥವಾ ಐದು ವರ್ಷದಲ್ಲಿ ಸಿಕ್ಕಿದರೆ, ರೂರಲ್ ಓರಿಯೆಂಟೇಷನ್ ಈ ಹಣ ಕೊಡಬೇಕು. ಈ 500 ಕೋಟಿ ರೂಪಾಯಿಗಳ ವರ್ಲ್ಡ್‌ಬ್ಯಾಂಕ್ ಅಸಿಸ್ಟೆನ್ಸ್ ಪಡೆಯುವುದು ಪ್ರೊಸೆಸ್‌ನಲ್ಲಿದೆ ಎಂದು ಕೇಳಿದೆ. ತಾವು ಈಗಲೇ ಯೋಜನೆ ಮಾಡತಕ್ಕದ್ದು ಸೂಕ್ತ. ತಾವು ಹಣಕಾಸಿನ ಸಚಿವರು ಆಗಿರುವುದರಿಂದ ಹಾಗೂ ಪ್ಲಾನಿಂಗ್ ಮಿನಿಸ್ಟರ್ ಸಹ ತಾವೇ ಆಗಿರುವುದರಿಂದ ಈ ಫ್ರೀ ಮೆಡಿಕಲ್ ಚೆಕಪ್ ಸಪ್ಲೈ ಆಫ್ ಮೆಡಿಸಿನ್ಸ್ ಟು ಸ್ಟೂಡೆಂಟ್ಸ್ ಎಸ್.ಸಿ./ಎಸ್.ಟಿಗಳಿಗೆ, ವೀಕರ್ ಸೆಕ್ಷನ್ಸಗೆ ನಾಲ್ಕು ಡಿಸ್ಟ್ರಿಕ್ಟ್‌ನಲ್ಲಿ ಈ ನಾಲ್ಕು ಪ್ರೊಗ್ರಾಮ್ಸ್ ಬಗ್ಗೆ ಒಂದು ಒಳ್ಳೆಯ ಸ್ವರೂಪವನ್ನು ಕೊಡಬೇಕು. ನಮಗೆ ಮುಂದಿನ ವರ್ಷಗಳಲ್ಲಿ ಆರೋಗ್ಯ ಸುಧಾರಣೆಗೆ ಹೆಚ್ಚು ಗಮನ ಹರಿಸತಕ್ಕದ್ದಕ್ಕೆ ತಾವು ಒಳ್ಳೆಯ ಸ್ವರೂಪವನ್ನು ಕೊಡಬೇಕು ಎಂದು ಹೇಳುತ್ತೇನೆ. ಇನ್ನು ಒಂದು ಮಾತನ್ನು ಹೇಳಿದರೆ ತಪ್ಪಾಗಲಾರದು. ಹಾಲಿಗೆ ಬೆಲೆ ಜಾಸ್ತಿ ಕೊಡಬೇಕು. ಹಾಲಿನ ಬೆಲೆ ಜಾಸ್ತಿ ಮಾಡದೇ ಹೋದರೆ ಇವತ್ತಿನ ದಿವಸ ಬಹಳಷ್ಟು ತಾಪತ್ರಯದಲ್ಲಿ ರೈತರು ಸಿಕ್ಕಿಕೊಳ್ಳುತ್ತಾರೆ. ನಾನು ಎರಡು ಸಾರಿ ಹಾಲಿನ ಬೆಲೆ ಜಾಸ್ತಿ ಮಾಡುವ ಬಗ್ಗೆ ಮುಂದಕ್ಕೆ ಹಾಕಿದ್ದೆ ಕಾರಣ ಏಕೆ ಎಂದು ಹೇಳಿದರೆ ಎಲ್ಲಾ ಡೈರಿಗಳು ಅವತ್ತಿನ ದಿವಸ ನಷ್ಟದಲ್ಲಿದ್ದವು. ಎಲ್ಲಾ ಡೈರಿಗಳಿಗೆ ಪ್ರಾಫಿಟ್ ಬರಲಿ ಎಂಬ ದೃಷ್ಟಿಯಿಂದ ಹಾಲಿನ ಬೆಲೆ ಜಾಸ್ತಿ ಮಾಡಲಿಲ್ಲ.

ಮುನ್ನೂರು ವೆಟರಿನರಿ ಹಾಸ್ಪಿಟಲ್‌ಗಳನ್ನು ಜಿಲ್ಲಾ ಪಂಚಾಯಿತಿಯಿಂದ ಪ್ರಾರಂಭ ಮಾಡಿದ್ದನ್ನು ರೆಗ್ಯೂಲರೈಸ್ ಮಾಡಿದ್ದೀರಿ, ಅದೇರೀತಿ ಹಾಲಿನ ಬೆಲೆಯನ್ನು ಜಾಸ್ತಿ ಮಾಡತಕ್ಕದ್ದು ಈಗ ಸೂಕ್ತವಾಗಿದೆ. ಇನ್ನು ಜಾಸ್ತಿ ದಿವಸ ಕಾಯತಕ್ಕದ್ದು ಒಳ್ಳೆಯದಲ್ಲ ಎಂದು ಹೇಳುತ್ತೇನೆ. ಕೊನೆಯದಾಗಿ ಎರಡು ಮೂರು ವಿಚಾರಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇರಿಗೇಷನ್ ಮತ್ತು ಪವರ್ ಸೆಕ್ಟಾರ್ಸ್

ಬಗ್ಗೆ. ಇನ್ನೊಂದು ಮೈನರ್ ಇರಿಗೇಷನ್‌ಗೆ ಹೆಚು ಮಾನ್ಯತೆ ಕೊಡಬೇಕು. ಮಾನ್ಯ ವೀರಪ್ಪಮೊಯಿಲಿಯವರು ಭಾಷಣ ಮಾಡುತ್ತಾ, ನೀವು ಇಂತಿಂಥ ಪ್ರಾಜೆಕ್ಟ್‌ಗೆ ಬಜೆಟ್‌ನಲ್ಲಿ ಜಾಸ್ತಿ ಮಾಡಿದ್ದೀರಿ, ಇಂತಿಂಥ ಪ್ರಾಜೆಕ್ಟ್‌ಗೆ ಬಜೆಟ್‌ನಲ್ಲಿ ಹಣ ಕಡಿಮೆ ಮಾಡಿದ್ದೀರಿ ಎನ್ನುವ ಮಾತನ್ನು ಹೇಳಿದರು. ನಾನು ಒಂದು ಮಾತು ತಮಗೆ ಹೇಳುವುದಾದರೆ ನೀವು 850 ಕೋಟಿ ರೂಪಾಯಿ ಹಣ ಅಥವಾ 900 ಕೋಟಿ ರೂಪಾಯಿ ಇಟ್ಟು 600 ಕೋಟಿ ರೂಪಾಯಿ ಖರ್ಚು ಮಾಡತಕ್ಕಂಥ ವ್ಯವಸ್ಥೆ ಬೇಡ. ಉದಾಹರಣೆಗೆ ಹೇಳುವುದಾದರೆ ನಮ್ಮ ವಿ.ಸಿ. ಅವರ ಮಾರ್ಗದರ್ಶನದಲ್ಲಿ ನಮ್ಮ ಸರ್ಕಾರ ಇದ್ದಾಗ ಮಾನ್ಯ ಡೆಪ್ಯೂಟಿ ಚೀಫ್ ಮಿನಿಸ್ಟರ್ ಶ್ರೀ ಕೃಷ್ಣ ಅವರೇ ಇರಿಗೇಷನ್ ಮಿನಿಸ್ಟರ್ ಆಗಿದ್ದರು. 25 ಕೋಟಿ ರೂಪಾಯಿ ಹಣ ಅವರು ಇಟ್ಟು ಖರ್ಚು ಮಾಡಿದ್ದುದು ಮಾತ್ರ ಏಳೂವರೆ ಕೋಟಿ ರೂಪಾಯಿ. ಈ ರೀತಿ ಹಣ ಇಟ್ಟು ಖರ್ಚು ಮಾಡದೇ ಇರತಕ್ಕದನ್ನು ಮಾಡಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎರಡೂ ಆಗುತ್ತವೆ. ಒಂದು ಸಾರಿ ಹಣ ಜಾಸ್ತಿ ಇಟ್ಟು ಬಜೆಟ್‌ನಲ್ಲಿ ತೋರಿಸುತ್ತಾರೆ, ಕಡಿಮೆ ಖರ್ಚು ಮಾಡಿರತಕ್ಕದ್ದು ಇರುತ್ತದೆ. ಕೆಲವು ಡಿಪಾರ್ಟ್‌ಮೆಂಟ್‌ಗಳಲ್ಲಿ ಉದಾಹರಣೆಗೆ ಮಾನ್ಯ ನಾಗೇಗೌಡರ ಡಿಪಾರ್ಟ್‌ಮೆಂಟ್ ಅನಿಮಲ ಹಸ್ಬೆಂಡರಿ ಡಿಪಾರ್ಟ್‌ಮೆಂಟ್‌ನಲ್ಲಿ ಕಡಿಮೆ ತೋರಿಸಿ ಹೆಚ್ಚಿಗೆ ಖರ್ಚು ಮಾಡಿದ್ದಾರೆ. ಹಾಗಾಗಿ ಒಂದೊಂದು ಸಾರಿ ವ್ಯತ್ಯಾಸಗಳು ಬರುತ್ತವೆ.

ಶ್ರೀ ಕೆ.ಎನ್. ನಾಗೇಗೌಡ : ಬಜೆಟ್‌ನಲ್ಲಿ ಪ್ರಿಯಾರಿಟಿ ಫಿಕ್ಸ್ ಮಾಡಿಕೊಳ್ಳದೇ ಹೋದರೆ ಹೀಗೆ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬಜೆಟ್ ತಮಗೆ ಕಡಿಮೆ ಇತ್ತು. ಅದಕ್ಕೆ ಯಾವ ರೀತಿ ತಾವು ಹೆಚ್ಚಿಗೆ ಮಾಡಿಕೊಂಡಿರಿ, ಏನು ಕೆಲಸ ಮಾಡಿದಿರಿ, ಎಲ್ಲೆಲ್ಲಿ ಕಟ್ ಮಾಡಿ ಅಪ್ರೋಪ್ರಿಯೇಟ್ ಮಾಡಿ ಹಾಕಿದ್ದು ಇದಕ್ಕೆ ತಾವು ಹೇಳಲಿಲ್ಲ.

ಶ್ರೀ ಕೆ.ಎಸ್. ನಾಗೇಗೌಡ : ಎಲ್ಲಿ ಕಟ್ ಮಾಡಬೇಕು ಎಂದರೆ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಕಟ್ ಮಾಡುವುದಕ್ಕೆ ಬರುವುದಿಲ್ಲ. ಪ್ಲಾನ್ ಸೈಜ್ ಫಿಕ್ಸ್ ಮಾಡಿಕೊಂಡು ಪ್ಲಾನಿಂಗ್ ಕಮೀಷನ್‌ಗೆ ಅಂಡರ್‌ಟೇಕಿಂಗ್ ಕೊಟ್ಟು ಪ್ರೈಸ್ ಫಿಕ್ಸ್ ಮಾಡಿ ಅಲೊಕೇಷನ್ ಇಟ್ಟು 10 ಪರ್ಸೆಂಟ್ ನಾವು ಕಟ್ ಮಾಡಬಹುದು. 25 ಕೋಟಿ ರೂಪಾಯಿ ಇಟ್ಟು ಕೇಳಿ ತಾವೂ ಸಹ ಮಂತ್ರಿಯಾಗಿ ಕೆಲಸ ಮಾಡಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ವತಃ ಇದು ಪ್ಲಾನಿಂಗ್ ಸ್ಕೀಮೇ....

ಶ್ರೀ ಕೆ.ಎನ್. ನಾಗೇಗೌಡ : ಹೊಸ ಸ್ಕೀಮ್. ಪ್ಲಾನ್ ಸೈಜ್ ಮಾಡಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪ್ಲಾನ್ ಸೈಜ್ ಇರಲಿಲ್ಲ. ಹಾಲಿನದು ಇಟ್ಟುಕೊಂಡು ನೀವು ನಾನ್ ಪ್ಲಾನ್ ಮಾಡಲಿಲ್ಲವೇ?

ಶ್ರೀ ಕೆ.ಎನ್. ನಾಗೇಗೌಡ : ಒಂದು ಹೆಡ್‌ನಲ್ಲಿ ಕಡಿಮೆ, ಮತ್ತೊಂದರಲ್ಲಿ ಜಾಸ್ತಿ ಮಾಡಬೇಕು. ಪ್ಲಾನ್ ಅಲೊಕೇಷನ್ ಯಾವ ರೀತಿ ಇದೆಯೋ ಆ ರೀತಿ ಖರ್ಚು ಆಗಬೇಕು. ಹಾಗಾದರೆ

ಫೈನಾನ್ಷಿಯಲ್ ಡಿಸಿಪ್ಲಿನ್ ಏಕೆ ಬೇಕು? ಯಾವುದೂ ಬೇಕಾಗಿರಲಿಲ್ಲ. ಇಷ್ಟ ಬಂದಹಾಗೆ ಖರ್ಚು ಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಪ್ಲಾನಿಂಗ್ ಡಿಪಾರ್ಟ್‌ಮೆಂಟ್, ಹಣಕಾಸು ಇಲಾಖೆ ಏಕೆ ಬೇಕು ಎಂದು ತಾವು ಕೇಳುತ್ತಿದ್ದೀರಿ. ಆಯವ್ಯಯ ಮಾಡತಕ್ಕ ಸಂದರ್ಭದಲ್ಲಿ ನಮ್ಮ ಆದಾಯ ಎಷ್ಟು, ನಾವು ಎಷ್ಟು ಖರ್ಚು ಮಾಡಬೇಕು ಎಂದು ಯೋಜನೆ ಇಟ್ಟುಕೊಂಡಿರುತ್ತೇವೆ. ಅದರ ಪ್ರಕಾರ ಹೋಗಿ ಬಿಟ್ಟರೆ ರಗಳೆ ಇರುವುದಿಲ್ಲ. ಈಗ ಮಾನ್ಯ ನಾಗೇಗೌಡರಂಥವರು ಬಹಳ ಉತ್ಸಾಹದಿಂದ ಕೆಲಸ ಮಾಡತಕ್ಕವರಿಗೆ 55 ಕೋಟಿ ರೂಪಾಯಿಗಳನ್ನು ಕೊಟ್ಟರೆ, ಇಲ್ಲ, ನಾನು 100 ಕೋಟಿ ರೂ. ಗಳನ್ನು ನನ್ನ ಇಲಾಖೆಗೆ ಖರ್ಚು ಮಾಡಲೇಬೇಕು ಎಂದರೆ, ನಿಮ್ಮಂಥವರು ಆಯವ್ಯಯ ಮಂಜೂರಾದ ಮೇಲೆ ಕೊಟ್ಟಿರತಕ್ಕ ಹಣಕ್ಕಿಂತ ಜಾಸ್ತಿ ಕೇಳುವುದಕ್ಕೆ ಹೋಗಬಾರದು ಅಂತ ಒಂದು ಡಿಸಿಪ್ಲಿನ್‌ನ್ನು ನೀವೇ ಹಾಕಿಕೊಂಡರೆ ಆಗ ಈ ವಿಚಾರ ಯಾವುದೂ ಬರುವುದಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ನ್ಯಾಷನಲ್ ಸೇವಿಂಗ್ಸ್‌ನಲ್ಲಿ ಕಲೆಕ್ಟ್ ಮಾಡಬೇಕು ಸೆಂಟ್ರಲ್ ಅಸಿಸ್ಟೆನ್ಸ್ ತೆಗೆದುಕೊಳ್ಳಬೇಕು, ಟ್ಯಾಕ್ಸ್ ಅರಿಯರ್ಸ್ ಹೀಗೆ ಕಲೆಕ್ಟ ಮಾಡಬೇಕು. ಜನರ ಜೇಬಿಗೆ ನೇರವಾಗಿ ಕೈ ಹಾಕಬಾರದು. ಫೈನಾನ್ಷಿಯಲ್ ಡಿಸಿಪ್ಲಿನ್ ತರಬೇಕು ಎಂದು ನನಗೆ ಅನಿಸುತ್ತದೆ. ಅಡಿಷನಲ್ ರಿಸೋರ್ಸ್ ಮೊಬಿಲೈಸ್ ಮಾಡಬೇಕು. ಇದಕ್ಕಾಗಿ ಸರ್ಕಾರದವರು ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ ಕಲೆಕ್ಟ್ ಮಾಡಿ, ಅರಿಯರ್ಸ್ ಕಲೆಕ್ಟ್ ಮಾಡಿ ರಿಸೋರ್ಸ್ ಮೊಬಿಲೈಸೇಷನ್ ಮಾಡಿಕೊಳ್ಳಬೇಕು ಎಂದು ಹೇಳುತ್ತೇನೆ.

ಉಪಾಧ್ಯಕ್ಷರು : ತಾವು ಮಾತನಾಡಲು ಇನ್ನು ಎಷ್ಟು ಹೊತ್ತು ಬೇಕಾಗುತ್ತದೆ?

ಶ್ರೀ ಕೆ.ಎನ್. ನಾಗೇಗೌಡ : ನಾನು ಇನ್ನು ಹೆಚ್ಚು ಹೊತ್ತು ಮಾತನಾಡುವುದಿಲ್ಲ. ನಾನು ಆಡಳಿತ ಪಕ್ಷದವನಾಗಿರುವುದರಿಂದ ನಮ್ಮ ಪರವಾಗಿ ಸಚಿವರೇ ಉತ್ತರ ಕೊಡುತ್ತಾರೆ. ಸಾಂದರ್ಭಿಕವಾಗಿ ನಾಲ್ಕಾರು ಮಾತುಗಳನ್ನು ಹತ್ತು ನಿಮಿಷಗಳಲ್ಲಿ ಹೇಳಿ ಮುಗಿಸುತ್ತೇನೆ. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿರತಕ್ಕ ಸಣ್ಣ ನೀರಾವರಿಗಳಿಗೆ ಎಷ್ಟು ಆದ್ಯತೆ ಕೊಡುತ್ತಿದ್ದೇವೆಂದರೆ, ರಾಜ್ಯದಲ್ಲಿ 40,000 ಟ್ಯಾಂಕುಗಳಿವೆ. ಸಣ್ಣ ನೀರಾವರಿಗೆ ಒದಗಿಸಿರತಕ್ಕಂಥ ಹಣ ಬಹಳ ಕಡಿಮೆಯಾಗಿದೆ. ಏತ ನೀರಾವರಿ ಯೋಜನೆಗಳಿಗೆ ಹೆಚ್ಚು ಗಮನ ಕೊಡತಕ್ಕಂಥಾದ್ದು ಅಲ್ಲ. ನೀರನ್ನು ಮೊದಲು ಸಂಗ್ರಹಿಸಿ ನಂತರ ಬೇರೆ ಕೆಲಸ ಮಾಡುವುದಕ್ಕೆ ಯೋಚಿಸಬೇಕು. ಸಣ್ಣ ನೀರಾವರಿ ಯೋಜನೆಗಳ ಅಭಿವೃದ್ಧಿಗಾಗಿ 71 ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ. ಇದರಿಂದ ಏನು ಪ್ರಯೋಜನ? ನಿನ್ನೆ ಮಾನ್ಯ ಹಿರಿಯ ಸದಸ್ಯರಾದ ಎಂ.ವೈ. ಘೋರ್ಪಡೆಯವರು ಮಾತನಾಡುತ್ತಾ ಇದರ ಬಗ್ಗೆ ಹೆಚ್ಚು ಹಣ ಕೊಡಬೇಕೆಂದು ಸೂಕ್ಷ್ಮವಾಗಿ ಒತ್ತಿ ಹೇಳಿದ್ದಾರೆ. ಹಣ ಕೊಡದೇ ಹೋದರೆ ಯಾವುದೇ ಪ್ರಯೋಜನವಾಗುವುದಿಲ್ಲವೆನ್ನುವ ಮಾತನ್ನು ತಾವು ಅರ್ಥಮಾಡಿಕೊಳ್ಳಬೇಕು. ಸಣ್ಣ ನೀರಾವರಿಗೆ ಜಾಸ್ತಿ ಹಣ ಕೊಡಬೇಕೆಂದು ತಿಳಿಸುತ್ತೇನೆ. ಇನ್ನೊಂದು ಹೊಸ ಕಾರ್ಯಕ್ರಮವನ್ನು ತಾವು ಪ್ರಾರಂಭಿಸಿದ್ದೀರಿ. ಏನೆಂದರೆ, ಪರಿಶಿಷ್ಟ ಜಾತಿ ಮತ್ತು

ಪಂಗಡದವರಿಗೆ ಸಂಬಂಧಿಸಿದಂತೆ ಸುಮಾರು 5,000 ಬೋರ್‌ವೆಲ್‌ಗಳನ್ನು ಹಾಕಿ 15,000 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವೊದಗಿಸುವುದು. ಇದರ ಕಡೆ ಹೆಚ್ಚು ಗಮನಹರಿಸುವ ನಿಟ್ಟಿನಲ್ಲಿ ನೀವು ಇದಕ್ಕೊಂದು ಟೈಮ್ ಬೌಂಡ್ ಪ್ರೋಗ್ರಾಂ ಅನ್ನು ಮಾಡಿಕೊಳ್ಳಬೇಕು. ಯಾವ್ಯಾವ ಜಿಲ್ಲೆಗಳಲ್ಲಿ ನಿಜವಾದ ಬಡವರಿದ್ದಾರೆ......

ಒಬ್ಬ ಮಾನ್ಯ ಸದಸ್ಯರು : ಸನ್ಮಾನ್ಯ ಸದಸ್ಯರಾದ ನಾಗೇಗೌಡರು ಪರಿಶಿಷ್ಟ ಜಾತಿ ಮತ್ತು ಪಂಗಡದವರ ಬಗ್ಗೆ ಹೇಳುತ್ತಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರ ಅಭಿವೃದ್ಧಿಗೋಸ್ಕರ ಸುಮಾರು ಹಣವನ್ನು ಸರ್ಕಾರದವರು ಇಟ್ಟಿದ್ದಾರೆ. ಆದರೆ, ಕಳೆದ ವರ್ಷದಲ್ಲಿ ಹಿಂದಿನ ಸರ್ಕಾರವಿದ್ದಾಗ 'ಲಂಬಾಣಿ ಅಭಿವೃದ್ಧಿ ನಿಗಮ' ರಚನೆಯಾಗಿರುವುದಾಗಿ ನಾವು ಕೇಳಿದ್ದೇವೆ. ಈಗ ಸದರಿ ನಿಗಮ ಇದೆಯೋ? ಇಲ್ಲವೋ? ಗೊತ್ತಿಲ್ಲ. ಇದ್ದರೆ ಆ ನಿಗಮಕ್ಕೂ ಸ್ವಲ್ಪ ಹಣವನ್ನು ನಿಗದಿಪಡಿಸಬೇಕೆಂದು ಮಾನ್ಯ ಅರ್ಥ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಸರ್ಕಾರ ಸಣ್ಣ ನೀರಾವರಿ ಕಡೆ ಹೆಚ್ಚು ಗಮನಹರಿಸಬೇಕೆಂದು ಹೇಳುತ್ತೇನೆ, ಕೃಷ್ಣಾ ಜಲ ಭಾಗ್ಯ ನಿಗಮದ ಬಗ್ಗೆ ಬಹಳಷ್ಟು ಸದಸ್ಯರು ಚರ್ಚಿಸಿದ್ದಾರೆ. ಇದರ ಬಗ್ಗೆ ನಾನು ಒಂದು ಮಾತನ್ನು ಹೇಳಿದರೆ ತಪ್ಪಾಗಲಾರದೆಂದು ತಿಳಿದುಕೊಂಡಿದ್ದೇನೆ. ನನಗೆ ತಿಳಿದಿರುವ ಪ್ರಕಾರ ಕೃಷ್ಣಾ ನೀರಾವರಿ ಯೋಜನೆಗೆ ಏನು ಹಣ ಹಂಚಿಕೆ ಮಾಡಿದ್ದೇವೆ, ಅದು 734 ಕೋಟಿ ಇರಲಿ, 740 ಕೋಟಿ ಇರಲಿ, ಅಷ್ಟೂ ಹಣವನ್ನು ಉಪಯೋಗಿಸಿಕೊಳ್ಳಬೇಕು. ಮಾನ್ಯ ಹಿರಿಯ ಸದಸ್ಯರಾದ ಹೆಚ್.ಎನ್. ನಂಜೇಗೌಡರು ರಾಜ್ಯದಲ್ಲಿ ಈಗ 15 ಪ್ರಾಜೆಕ್ಟ್‌ಗಳು ಪೆಂಡಿಂಗ್ ಇದ್ದು, ಕೃಷ್ಣಾ, ಕಾವೇರಿ ಯೋಜನೆ ಸೇರಿಸಿ ಇವೆಲ್ಲವನ್ನೂ ಪೂರ್ಣಗೊಳಿಸಲು 9,000 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಹೇಳಿದ್ದರು. ಆದರೆ, ನಿನ್ನೆ ಬಂಗಾರಪ್ಪನವರು ಕೃಷ್ಣ ಜಲ ಭಾಗ್ಯ ನಿಗಮದ ಬಗ್ಗೆ ಭಾಷಣ ಮಾಡುತ್ತಾ, ಸದರಿ ನಿಗಮವನ್ನು ಏನು ರಚಿಸಿದ್ದೀರಿ, 800 ಕೋಟಿ ರೂಪಾಯಿಗಳನ್ನು ಯಾವ ರೀತಿ ವಸೂಲು ಮಾಡುತ್ತೀರಿ? ಎಂದರು. ಮತ್ತು ಇದಕ್ಕಾಗಿ ಒಂದು ಆಕ್ಟ್ ತೆಗೆದುಕೊಂಡು ಬಂದಿದ್ದು, ಈ ರೀತಿ ಪ್ರತ್ಯೇಕವಾದ ನಿಗಮ ರಚಿಸುವುದಕ್ಕೆ ಅವಕಾಶವಿಲ್ಲವೆಂದೂ ಸಹ ಹೇಳಿದ್ದಾರೆ. ವಿಚಾರ ಅದಲ್ಲ. ನನಗೆ ಚೆನ್ನಾಗಿ ತಿಳಿದಿರುವ ಪ್ರಕಾರ ಆ ಆಕ್ಟ್ ಮಾಡಿರುವ ಉದ್ದೇಶವೇನೆಂದರೆ ಹಣಕಾಸು ಸಂಪನ್ಮೂಲವನ್ನು ಸಂಗ್ರಹಿಸುವುದಕ್ಕೋಸ್ಕರವಾಗಿ. ಆಕ್ಟ್ ಮಾಡಿ ಈ 800 ಕೋಟಿ ರೂಪಾಯಿಗಳನ್ನು ಸಾರ್ವಜನಿಕರಿಂದ ಸಂಗ್ರಹಿಸುತ್ತಿಲ್ಲ. ಇದರ ಬಗ್ಗೆ ಬಹಳ ಗೊಂದಲವಿರುವುದರಿಂದ ಮಾನ್ಯ ಹಣಕಾಸು ಮಂತ್ರಿಗಳು ಉತ್ತರ ಹೇಳುವಾಗ ಸ್ಪಷ್ಟವಾಗಿ ಹೇಳಬೇಕು. ನನಗೆ ತಿಳಿದಿರುವಂತೆ ಕೃಷ್ಣ ಜಲ ಭಾಗ್ಯ ನಿಗಮದಡಿ ಏನು 800 ಕೋಟಿ ರೂಪಾಯಿಗಳನ್ನು ಸಂಗ್ರಹಿಸಲಾಗುತ್ತಿದೆ, ಅದು ಬಾಂಡ ಅಲ್ಲ, ಹಣಕಾಸು ಸಂಸ್ಥೆಗಳವರಿಂದ ಮಾತ್ರ ಸಂಗ್ರಹಿಸುವಂಥ ಹಣ ಆದಾಗಿದೆ, ಸಾರ್ವಜನಿಕರಿಂದ ಸಂಗ್ರಹಿಸುವುದು ಅಲ್ಲ.

ಶ್ರೀಸಿದ್ದರಾಮಯ್ಯ (ಹಣಕಾಸು ಹಾಗೂ ಯೋಜನಾ ಸಚಿವರು) : ಈಗ ನಾವು ಏನು "ಕೃಷ್ಣ ಜಲ ಭಾಗ್ಯ ನಿಗಮ" ಎಂದು ರಚಿಸಿದ್ದೇವೆ, ಇದರಡಿ ಬಾಂಡ್‌ಗಳ ಮೂಲಕ ನೀರಾವರಿಗೋಸ್ಕರ ಹಣವನ್ನು ವಸೂಲು ಮಾಡುತ್ತೇವೆ. ಅದರ ಜೊತೆಗೆ ಪ್ಲಾನ್‌ನಲ್ಲಿ ಏನು 852 ಕೋಟಿ ರೂಪಾಯಿಗಳಿವೆ,

ಯಾವ್ಯಾವ ಸಾರ್ವಜನಿಕ ಸಂಸ್ಥೆಯ ಉದ್ದಿಮೆಗಳಿವೆ ಅಂದರೆ ಸಾಲವನ್ನು ಹೆಚ್ಚುವರಿ ಮಾಡಲು ಶಕ್ತಿ ಇರತಕ್ಕಂಥವು, ಮತ್ತು ಅದನ್ನು ನಿಭಾಯಿಸತಕ್ಕ ಶಕ್ತಿ ಇರತಕ್ಕಂಥವು ಮಾಡಿಕೊಳ್ಳಬೇಕೆಂದು ಮಾಡಿರತಕ್ಕಂಥಾದ್ದು. ಅಂದರೆ, ಹಿಂದೆ ಕೃಷ್ಣ ಜಲ ಅಭಿವೃದ್ಧಿ ನಿಗಮವೇನಿತ್ತು, ಅದನ್ನು ಮಾಡಿಕೊಂಡಿದ್ದರೆ ಅದರಿಂದ ಬರುವ ಹಣ ನಿಧಾನವಾಗುತ್ತದೆ, ಹಾಗೂ ಬಹಳ ದಿನಗಳು ನಿಂತುಹೋಗುತ್ತದೆನ್ನುವ ಕಾರಣಕ್ಕಾಗಿ ಇದು ನಿಲ್ಲುವುದು ಬೇಡವೆಂದು "ಕೃಷ್ಣ ಜಲ ಭಾಗ್ಯ ನಿಗಮ" ವನ್ನು ರಚಿಸಿದ್ದು, ಈಗ ಇದರ ಮೂಲಕ ಕೆಲಸ ಮಾಡುವುದಕ್ಕೆ ಹೊರಟಿದ್ದೇವೆ.

ಶ್ರೀ ಕೆ.ಎನ್. ನಾಗೇಗೌಡ : ನಾನು ನಿನ್ನೆಯ ದಿವಸದ 'ಪ್ರಜಾವಾಣಿ' ದಿನಪತ್ರಿಕೆಯ ಸಂಪಾದಕೀಯ ಓದಿದೆ. ಅದರಲ್ಲಿ 'ಸಾರ್ವಜನಿಕರಿಂದ ಬಾಂಡ್‌ನ್ನು ಸಂಗ್ರಹಿಸುವುದು ಬಹಳ ಕಷ್ಟವಾಗುತ್ತದೆ, ಅದು ಸಾಧ್ಯವಿಲ್ಲ' ವೆಂದು ಬರೆದಿದ್ದರು. ಗುಜರಾತ್‌ನಲ್ಲಿ ಸರ್ದಾರ್ ಸರೋವರಕ್ಕೆ ಸಂಬಂಧಿಸಿದಂತೆ ಸ್ಟೇಟ್ ಬ್ಯಾಂಕ್ ಆಫ ಇಂಡಿಯಾದವರು ಯಾವ ರೀತಿ ಮಾಡಿದ್ದಾರೋ, ಅದೇ ಮಾದರಿಯಲ್ಲಿ ನಮ್ಮ ರಾಜ್ಯದಲ್ಲೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದವರನ್ನು ನೋಡಲ್ ಏಜೆನ್ಸಿ ಯಾಗಿಟ್ಟುಕೊಂಡರೆ, ಯು.ಕೆ.ಯಿಂದ, ಎಲ್.ಐ.ಸಿ.ಯಿಂದ, ಬ್ಯಾಂಕುಗಳಿಂದ ಅವರೇ ಹಣ ಕೊಡುತ್ತಾರೆ, ಇದು ಬಹಳ ಸುಲಭವಾದ ಕೆಲಸ. ಮೊದಲ ಹಂತದಲ್ಲಿ 400 ಕೋಟಿ ರೂಪಾಯಿಗಳ ಯೋಜನೆ ಏನು ಹಾಕಿಕೊಂಡಿದ್ದೇವೆ, ಇದನ್ನು ಮೂರು ತಿಂಗಳಿನಲ್ಲಿ ಸಂಗ್ರಹಿಸಬಹುದು, ಇದನ್ನು ಸಾರ್ವಜನಿಕರಿಂದ ಸಂಗ್ರಹಿಸುವುದಲ್ಲ. ಹಣವನ್ನು ಬ್ಯಾಂಕುಗಳಿಂದ, ಹಣಕಾಸು ಸಂಸ್ಥೆಗಳಿಂದ ಸಂಗ್ರಹಿಸುವುದರಿಂದ ಬಹಳ ಸುಲಭವಾಗುತ್ತದೆ. ಮತ್ತು ಇದೊಂದು ಅತ್ಯುತ್ತಮವಾದ ಯೋಜನೆಯಾಗಿದೆ. ನೀರಾವರಿಗಾಗಿ 400 ಕೋಟಿ ರೂಪಾಯಿಗಳು ನಮಗೆ ಬಂದರೆ ಮೊದಲನೇ ಮತ್ತು ಎರಡನೇ ಹಂತದಲ್ಲಿ ಒಳ್ಳೆಯ ಕೆಲಸ ಮಾಡಬಹುದು. ಮೇ ತಿಂಗಳಿನಲ್ಲಿ ಅಥವಾ ಜೂನ್ ಅಂತ್ಯದೊಳಗಾಗಿ 400 ಕೋಟಿ ರೂಪಾಯಿಗಳನ್ನು ಸಂಗ್ರಹಿಸಬೇಕು. ಈಗಾಗಲೇ ಇದಕ್ಕೆ ಸಂಬಂಧಿಸಿದ ಎಲ್ಲಾ ಫಾರ್ಮಾಲಿಟೀಸ್ ಮುಗಿದಿರುವುದರಿಂದ, ಅಷ್ಟರೊಳಗಾಗಿ 400 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿದರೆ ಹೆಚ್ಚು ಪ್ರಯೋಜನ ಈ ಕೃಷ್ಣ ಜಲ ಭಾಗ್ಯ ನಿಗಮಕ್ಕಾಗುತ್ತದೆ.

ಡಾ|| ಜೀವರಾಜ್ ಆಳ್ವ : ಮಾನ್ಯ ಹಣಕಾಸು ಸಚಿವರು ಮಾತನಾಡುತ್ತಾ, ಇದರಲ್ಲಿ ಬಾಂಡ್ ಇದೆ ಜೊತೆಗೆ ಹಣಕಾಸು ಸಂಸ್ಥೆಗಳೂ ಸಹ ಇದೆಯೆಂದರು. You are misleading. There is a very clear contradiction in the Treasury Benches.

SRI K.N. NAGE GOWDA : There are two phases. Out of 800 crores, the first phase is of Rs. 400 crore. The second phase is of Rs, 400 crore. The first phase Rs. 400 crore comes only from financial institutions. It is correct. I am hundred percent correct. Let the Government say.

ಡಾ|| ಜೀವರಾಜ್ ಆಳ್ವ : ಅಲ್ಲಿ ಅಲ್ಲ. He is contradicting. It is ambiguous, He is challenging. ಸಿದ್ದರಾಮಯ್ಯನವರು ಇದರ ಬಗ್ಗೆ ಪೂರ್ಣ ವಿಶ್ಲೇಷಣೆ ಕೊಟ್ಟ ನಂತರವೂ ಅವರು ಅಲ್ಲನೆಂದು ಹೇಳುತ್ತಿದ್ದಾರೆ. ಆದುದರಿಂದ, ಹಣಕಾಸು ಸಚಿವರು ಈಗಲೇ ಉತ್ತರ ಕೊಡಿ.

ಶ್ರೀ ಕೆ.ಎನ್. ನಾಗೇಗೌಡ : ನೀವು ಮಿಸ್‌ಲೀಡ್ ಮಾಡುವುದಕ್ಕೆ ಹೋಗಬೇಡಿ. ಈಗಾಗಲೇ ತಾವು ಸಾಕಷ್ಟು ಮಿಸ್‌ಲೀಡ್ ಆಗಿದ್ದೀರಿ. ಆದರೆ ನಾನು ಮಿಸ್‌ಲೀಡ್ ಆಗಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವರ ಬಗ್ಗೆ ಸಾರ್ವಜನಿಕರಿಗೆ ಸ್ವಲ್ಪ ತಪ್ಪು ತಿಳಿವಳಿಕೆ ಬರುತ್ತದಾದ್ದರಿಂದ ಇದನ್ನು ಸ್ಪಷ್ಟಪಡಿಸುವುದು ಒಳ್ಳೆಯದೆಂದು ಹೇಳುತ್ತೇನೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈಗ ಕೃಷ್ಣ ಜಲ ಭಾಗ್ಯ ನಿಗಮದಡಿ ಬ್ಯಾಂಕ ಮೂಲಕ ಮೊದಲನೇ ಹಂತದಲ್ಲಿ 400 ಕೋಟಿ ರೂಪಾಯಿಗಳನ್ನು ನಾವು ಸಂಗ್ರಹಿಸುತ್ತೇವೆಂದು ಅವರು ಹೇಳಿದ್ದಾರೆ. ಎರಡನೇ ಹಂತದಲ್ಲಿ ಅದೇ ರೀತಿ 400 ಕೋಟಿ ರೂಪಾಯಿಗಳಾದರೆ ಒಂದು ವರ್ಷದಲ್ಲೆ 800 ಕೋಟಿ ರೂಪಾಯಿಗಳ ಸಂಗ್ರಹಣೆ ಮಾಡುತ್ತೇವೆ ಮತ್ತು ಇದಕ್ಕೆ 1,000 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದೇವೆಂದು ಅವರು ಸ್ಪಷ್ಟಪಡಿಸಿದ್ದಾರೆ. ಈಗ ಅವರು ಮಂಡಿಸಿರುವ 1995-96ನೇ ಸಾಲಿನ ಬಜೆಟ್‌ನಲ್ಲಿ ಅದಕ್ಕೆ ಏನೂ ಹಣ ಕೂಡ ಇಟ್ಟಿಲ್ಲ, ಎಲ್ಲವನ್ನೂ ಕನ್ನಡಿಯಲ್ಲಿ ತೋರಿಸಿ, ಕನ್ನಡಿಯೊಳಗಿನ ಗಂಟಿನಂತೆ ಇಟ್ಟಿದ್ದಾರೆ. 1,000 ಕೋಟಿ ರೂಪಾಯಿಯಲ್ಲಿ ಬಡ್ಡಿಗೆ ಮಾತ್ರ 84 ಕೋಟಿ ರೂಪಾಯಿಗಳೆಂದು ಮಾತ್ರ ತೋರಿಸಿದ್ದಾರೆ. ಇನ್‌ಟ್ಯೂಷನಲ್ ಫೈನಾನ್ಸ್‌ನಿಂದ ಪ್ಲಸ್ ಪಬ್ಲಿಕ್ ಇನ್‌ಸ್ಟಿಟ್ಯೂಷನಲ್ ಫೈನಾನ್ಸ್‌ನಿಂದ 400 ಕೋಟಿ ರೂಪಾಯಿಗಳಲ್ಲ. ಅದರಲ್ಲಿ ಇನ್ಸಟಿಷ್ಯೂಷನಲ ಫೈನಾನ್ಸನವರು ಪಾಲ್ಗೊಳ್ಳಬಹುದು, ಸಾಮಾನ್ಯ ಸಾರ್ವಜನಿಕರೂ ಪಾಲ್ಗೊಳ್ಳಬಹುದು.

ಶ್ರೀ ಕೆ.ಎನ್. ನಾಗೇಗೌಡ : ಇದರ ಬಗ್ಗೆ ನಾನು ಸಾಕಷ್ಟು ಚರ್ಚೆ ಮಾಡಿದ್ದೇನೆ. ನನ್ನ ಪಾಯಿಂಟ್ ಏನೆಂದರೆ, ಅದನ್ನು ಮಿಸ್‌ಲೀಡ್ ಮಾಡುವುದು ಬೇಡ. ಇದರ ಬಗ್ಗೆ ಸರ್ಕಾರ ಉತ್ತರ ಕೊಡುವಾಗ ಹೇಳಲಿ. 800 ಕೋಟಿ ರೂಪಾಯಿಗಳಲ್ಲಿ ಒಳ್ಳೆಯ ಯೋಜನೆ ಇದೆ. ಮೇ ಅಂತ್ಯದೊಳಗೆ ನಮಗೆ ಏನು 400 ಕೋಟಿ ರೂಪಾಯಿಗಳು ಬರುತ್ತದೆ, ಇದರಿಂದ ಕೃಷ್ಣಾ ಯೋಜನೆಯಿಂದ 734 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ for ಫೈನಾನ್ಷಿಯಲ್ ರಿಸೌರ್ಸಸ್‌ಗೆ utilisation this is the best method. ಎಂದು ಎಂಫೆಸೈಸ್ ಮಾಡುವುದು ಒಂದು.

1.40 ಪಿ.ಎಂ.

ಎರಡನೆಯದಾಗಿ ಈ 400 ಕೋಟಿ ರೂಪಾಯಿಗಳೇನಿದೆ ಅದರಲ್ಲಿ ಟರ್ಮ್ಸ್ ಮತ್ತು ಕಂಡೀಷನ್‌ಗಳು, ಇದು ಸರ್ವೀಸ್ ಚಾರ್ಜ್ ಇರಬಹುದು, ಬಡ್ಡಿಯ ವಿಚಾರವಿರಬಹುದು, ಇದರ ಬಗ್ಗೆ ಇನ್ನು ಫೈನಲೈಸ್ ಆಗಿಲ್ಲ. All the Rs. 400 crores in first phase, it is only through the financial institutions. ಅದು ಯಶಸ್ವಿಯಾದರೆ ಈ ಎರಡನೆಯ ಹಂತವಾದ 400 ಕೋಟಿ ರೂಪಾಯಿಗಳೇನಿದೆ ಅದು ಸಾರ್ವಜನಿಕರಿಂದ ಬರಬೇಕೆಂದು ತೀರ್ಮಾನವಾಗಿರತಕ್ಕದ್ದು. ಅದು ನೂರು ಪಾಲು ಸರಿ. ನನಗೆ ತಿಳಿದಮಟ್ಟಿಗೆ ಇದಕ್ಕೆ ಇನ್ನು ಹೆಚ್ಚು ಕ್ಲಾರಿಫಿಕೇಷನ್ ಇದ್ದರೆ ಸರಕಾರ ಅನಲೈಸ್ ಮಾಡಲಿ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಈ ಯೋಜನೆಯು ಉತ್ತಮವಾದ ಯೋಜನೆ. ಈ ರೀತಿಯಾದರೆ ನಾವು ನೀರಾವರಿಯನ್ನು ಮುಗಿಸಲು ಸಾಧ್ಯ. ಇನ್ನು ಕಾವೇರಿಯ ವಿಚಾರದ ಬಗ್ಗೆ

ಹೇಳುವುದಾದರೆ, ಮಾನ್ಯ ಹಣಕಾಸು ಸಚಿವರಾದ ಸಿದ್ದರಾಮಯ್ಯನವರು ಅದನ್ನು ಪೂರ್ಣ ಮಾಡುವುದಾಗಿ ಹೇಳಿದ್ದಾರೆ. ಅದಕ್ಕೆ ನನ್ನ ಅಭ್ಯಂತರವಿಲ್ಲ. ನಮಗೂ ನಿಮಗೂ ಒಪ್ಪಂದವಾಗಿದೆ. ನೀವು ವರುಣಾಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡುತ್ತೀರೋ ಅಷ್ಟೇ ಹಣವನ್ನು ಕೆಆರ್‌ಎಸ್.ಗೆ ಸಹ ಬಿಡುಗಡೆಯಾಗುತ್ತದೆಂದು ತಾವು ಮಾಡಿದ್ದೀರಿ. ಆದರೆ ಇದನ್ನು ಮೂರು ವರ್ಷಗಳಲ್ಲಿ ಮುಗಿಸಿದರೆ ಒಳ್ಳೆಯದು. ತಾವು 1997ಕ್ಕೆ ಮುಗಿಸಿಕೊಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದೀರಿ. ಅದರಲ್ಲಿ ಆಧುನೀಕರಣದ ಕೆಲಸ ಮಾತ್ರ ಪೂರ್ಣವಾಗಬೇಕು. ಇದಕ್ಕೆ ಹಿಂದಿನ ವರ್ಷ ಹಣ ಬಿಡುಗಡೆಯಾಗಲಿಲ್ಲ. ಈ ಸಾರಿ ಅದರ ಬಗ್ಗೆ ಗಮನಹರಿಸಿ ವರುಣಾಕ್ಕೆ ಎಷ್ಟು ಬಿಡುಗಡೆ ಮಾಡುತ್ತೀರೆಂದು ಹೇಳಿದ್ದೀರಿ ಅಷ್ಟು ಕಾವೇರಿಗೂ ಸಹ ಬಿಡುಗಡೆ ಮಾಡಬೇಕು. ಇನ್ನು ನಾನು ಹೆಚ್ಚು ಸಮಯ ತೆಗೆದುಕೊಳ್ಳಲು ಬಯಸದೆ, ಈ ಬಜೆಟ್ ಏನಿದೆ ಇದು ರೂರಲ್ ಓರಿಯೆಂಟೆಂಡ್ ಬಜೆಟ್ ವಿನಹ ಅರ್ಬನ್ ಬಜೆಟ್ ಅಲ್ಲ. ಇದು ಅರ್ಬನ್ ಓರಿಯೆಂಟೆಂಡ್ ಬಜೆಟ್ ಆಗಿದ್ದರೆ ಇದರಲ್ಲಿ 70 ಪರ್ಸೆಂಟ್ ಪ್ಲಾನ್ ಅಲೊಕೇಷನ್ ಇಡುತ್ತಿರಲಿಲ್ಲ. ತೆರಿಗೆಯನ್ನು ಹಾಕಿರುವುದು ಜಾಸ್ತಿ ಇರಬಹುದು, ನಗರಕ್ಕೆ ತೆರಿಗೆ ಹಾಕಿರಬಹುದು, ಮತ್ತೊಂದು ಇರಬಹುದು, ಆದರೆ ತೆರಿಗೆಯ ವಿಚಾರದ ಬಗ್ಗೆ ನಾನು ಮಾತನಾಡದೆ, ನಮ್ಮ ಸರ್ಕಾರ ಹಳ್ಳಿಗಾಡಿನ ಜನರಿಗಾಗಿ ಅದು ಆರೋಗ್ಯ ಕಾರ್ಯಕ್ರಮ ಇರಬಹುದು, ಆಹಾರದ ಕಾರ್ಯಕ್ರಮ ವಿರಬಹುದು, ನೀರಾವರಿಯ ಕಾರ್ಯಕ್ರಮವಿರಬಹುದು, ಕುಡಿಯವ ನೀರಿನ ಕಾರ್ಯಕ್ರಮವಿರಬಹುದು, ಈ ಐದು ಕಾರ್ಯಕ್ರಮಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿರುವ ದೃಷ್ಟಿಯಿಂದ ಇದು ಗ್ರಾಮೀಣ ಜನತೆಯ ಪರವಾಗಿರುವ ಬಜೆಟ್ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ಪುನಃ ಮಧ್ಯಾಹ್ನ 2-45ಕ್ಕೆ ಸಮಾವೇಶಕೊಳ್ಳುವುದು.

(ಸಭೆಯು 1-45ಕ್ಕೆ ಮುಕ್ತಾಯಗೊಂಡಿತು)

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

(ಸಭೆಯು ಮಧ್ಯಾಹ್ನ 2.40 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು)

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೇ ಮಂತ್ರಿಗಳು ಯಾರೂ ಇಲ್ಲ.

ಅಧ್ಯಕ್ಷರು : ಮಾನ್ಯ ಬೀಳಗಿಯವರು ಇದ್ದಾರೆ, ನಿಂಗಯ್ಯನವರು ಇದ್ದಾರೆ, ಬಚ್ಚೇಗೌಡರು ಇದ್ದಾರೆ, ನಾಗರಾಜಯ್ಯನವರು ಇದ್ದಾರೆ......

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಬಡ್ಜೆಟ್ ಮೇಲೆ ಚರ್ಚೆ ಮಾಡುತ್ತಿದ್ದೇವೆ. ಬರೀ ನಾಲ್ಕು ಜನ ಸಚಿವರಿದ್ದಾರೆ.

ಅಧ್ಯಕ್ಷರು : ಈಗ ಮತ್ತೊಬ್ಬರು ಸಚಿವರು ಬಂದರು. ತಾವು ಪ್ರಾರಂಭ ಮಾಡಿ, ಅವರು ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಮಾತನ್ನು ಮುಂಜಾನೆ ಕೂಡ ತಾವು ಹೇಳಿದಿರಿ. ಈಗ ಕೂಡ ಇದೇ ಮಾತನ್ನು ಹೇಳುತ್ತಿದ್ದೀರಿ. ಮಂತ್ರಿಗಳಿಲ್ಲ ಎಂದರೆ ಸರಿ, ಉಳಿದವರಿಗೆ ಏನಾಗಿದೆ. ಎಲ್ಲಾ ಸದಸ್ಯರಿಗೆ ತಮ್ಮ ಇನ್‌ಸ್ಟ್ರಕ್ಷನ್ಸ್ ಜೋರಾಗಿ ಹೋಗುತ್ತಾ ಇಲ್ಲ.

ಅಧ್ಯಕ್ಷರು : ಈಗ ಊಟದ ಸಮಯದಲ್ಲಿ ನಾನು ನಿಮ್ಮ ಕಡೆ ಇದೆ ಆದಕಾರಣ ಅವರಿಗೆ ಇನಸ್ಟ್ರಕ್ಷನ್ಸ ಕೊಡಲು ಸಾಧ್ಯವಾಗಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಲಘುವಾಗಿ ತೆಗೆದುಕೊಳ್ಳುತ್ತಿದ್ದಾರೆ. ತಾವು ಅವರನ್ನು ಕರೆದು ಛೀಮಾರಿ ಹಾಕಬೇಕು.

ಅಧ್ಯಕ್ಷರು : ಎಲ್ಲರೂ ಬರಲಿ ಎಂದು ಕಾಯುತ್ತಿದ್ದೇನೆ. ಎಲ್ಲರು ಬರಲಿ ನಂತರ ಎಲ್ಲರ ಎದುರುಗಡೆ ಛೀಮಾರಿ ಹಾಕುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಇಲ್ಲಿ ಸುಮ್ಮನೆ ರೈಸ್ ಮಾಡಬೇಕೆಂದಿಲ್ಲ. ಇಲ್ಲಿ ಪದೇ ಪದೇ ರೈಜ್ ಮಾಡುವುದಕ್ಕೆ ನಮಗೂ ಚೆನ್ನಾಗಿ ಕಾಣುವುದಿಲ್ಲ. ಆದರೆ ಒಬ್ಬ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾಗ ಯಾರೂ ಬರೆದುಕೊಳ್ಳುವವರಿಲ್ಲ, ಈ ಕಡೆ ಸೆಕ್ರೆಟರಿಗಳಿಲ್ಲ, ಆ ಕಡೆ ಮಂತ್ರಿಗಳಿಲ್ಲ, ಇದರಿಂದ ಸದನಕ್ಕೆ ಗೌರವ ಬರುವುದಿಲ್ಲ, ಇಲ್ಲಿ ಅಧಿಕಾರಿಗಳು, ಸೆಕ್ಷನ್ ಆಫೀಸರ್ಸ್, ಅಂಡರ್ ಸೆಕ್ರೆಟರಿಗಳನ್ನು ಕೂಡಿಸಿದರೆ ಹೇಗೆ?

MR. SPEAKER : One more minister came.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಮೊದಲನೆಯ ಆಯವ್ಯಯವನ್ನು ಮಂಡಿಸಿದ್ದಾರೆ. ಬಡ್ಜೆಟ್‌ನ್ನು ಮಂಡಿಸುವಾಗ ಎರಡನೆಯ ಪ್ಯಾರಾದಲ್ಲಿ "ಇಂತಹ ಅಭೂತಪೂರ್ವ ಅವಕಾಶ, ಕನ್ನಡನಾಡಿನ ಜನ ಹಿಂದಿನ ಕಾಂಗ್ರೆಸ್ ಸರ್ಕಾರವನ್ನು ಬದಲಿಸಿ ನಾವು ಸರ್ಕಾರ ರಚಿಸಲು ಮಾಡಿದ ಆಶೀರ್ವಾದದ ಫಲ" ಆ ರೀತಿ ಪ್ರಾರಂಭ ಮಾಡಿದ್ದಾರೆ. ಎಲ್ಲರಿಗೆ ಕಾಂಗ್ರೆಸ್ಸಿನ ಆಡಳಿತದ ಬಗ್ಗೆ ಬೇಸರ ಬಂದು ಅವರಿಗೆ ಅಧಿಕಾರ ಕೊಟ್ಟಿದ್ದಾರೆ. ಅವರು ಐದು ವರ್ಷಗಳ ಕಾಲ ಅಧಿಕಾರ ನಡೆಸಲಿ. ಅದಕ್ಕೆ ನನ್ನ ಭಿನ್ನಾಭಿಪ್ರಾಯ ಇಲ್ಲ. ಈಗ ರಾಜಕೀಯದ ಅಧಿಕಾರದ ಹಸ್ತಾಂತರ ಆಗಿದೆ ಎನ್ನತಕ್ಕಂಥದ್ದು ವಾಸ್ತವಿಕ. ಈ ಹಿನ್ನೆಲೆಯಲ್ಲಿ ಅವರು ಬಹುಶಃ ಹೆಚ್ಚಿನ ಜವಾಬ್ದಾರಿಯಿಂದ ಬಡ್ಜೆಟ್ ಮಂಡಿಸುತ್ತಾರೆ ಎಂದು ನಾನು ನಿರೀಕ್ಷಿಸುತ್ತಿದ್ದೆ. ಅದಕ್ಕಿಂತ ಹೆಚ್ಚಿನ ನಿರೀಕ್ಷೆಯನ್ನು ಈ ಸರ್ಕಾರದಿಂದ ನಿರೀಕ್ಷೆ ಮಾಡತಕ್ಕದ್ದು ಅವಶ್ಯಕತೆ ಇಲ್ಲ. ಏತಕ್ಕೆಂದರೆ ಹಿಂದಿನ ಸರ್ಕಾರಕ್ಕೆ ಹಾಗೂ ಈ ಅಧಿಕಾರಕ್ಕೆ ಬಂದಿರತಕ್ಕ ಸರ್ಕಾರಕ್ಕೆ ಮೂಲಭೂತವಾಗಿ ಧೋರಣೆಗಳಲ್ಲಿ ಏನೂ ಭಿನ್ನಾಭಿಪ್ರಾಯ ಇಲ್ಲ. ಯಾವುದೇ ವಿಷಯದ ಬಗ್ಗೆ ಮೂಲಭೂತ ಧೋರಣೆಗಳ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ.

ಆದರೂ ಅಧಿಕಾರದಲ್ಲಿ ಇದ್ದಾಗ ಅವರಿಂದ ಹೆಚ್ಚಾಗಿ ನಾವೇನು ನಿರೀಕ್ಷಣೆಯನ್ನು ಮಾಡಿರಲಿಲ್ಲ. ಏಕೆಂದರೆ ಅವರದೇ ಆದಂಥ ಇತಿಮಿತಿಗಳಲ್ಲಿ ಅವರು ಕೆಲಸ ಮಾಡಬೇಕಾಗಿದೆ. ಹಿಂದಿನ

ಸರ್ಕಾರದಿಂದ ಅಧಿಕಾರ ಅವರಿಗೆ ಸಿಕ್ಕಿದೆ. ಆ ಸರ್ಕಾರದ ಧೋರಣೆಗಳಿಗೂ ಈ ಸರ್ಕಾರದ ಧೋರಣೆಗಳಿಗೂ ಮೂಲಭೂತವಾದಂಥ ವ್ಯತ್ಯಾಸಗಳು ಇರಲಿಕ್ಕೆ ಇಲ್ಲ. ಆದ್ದರಿಂದ ಹೆಚ್ಚಿನ ನಿರೀಕ್ಷಣೆಯನ್ನು ಮಾಡುವುದು ಸರಿಯಲ್ಲ. ಆದರೂ ಕೂಡ ಈ ಸರ್ಕಾರಕ್ಕೆ ಒಂದು ಕನಿಷ್ಠವಾದಂಥ ಜವಾಬ್ದಾರಿ ಇದೆ. ಈ ಆಯವ್ಯಯವನ್ನು ಮಂಡಿಸುವಾಗ, ಬಜೆಟ್‌ನಲ್ಲಿ ಅವರಲ್ಲಿ ಇರತಕ್ಕಂಥ ಕಲ್ಪನೆಯಲ್ಲಿ ಇರತಕ್ಕಂಥ ಮೂಲದೋಷವನ್ನು ಇದರಲ್ಲಿ ಎತ್ತಿತೋರುತ್ತಿದೆ. ಆಯವ್ಯಯವನ್ನು ಮಂಡಿಸುವಾಗ ಒಂದು ಲೆಕ್ಕಾಚಾರ, ಆದಾಯ ಎಷ್ಟು, ಖರ್ಚು ಎಷ್ಟು ಎಂದು ಹೇಳತಕ್ಕಂಥ ಮಟ್ಟಿಗೆ ಯಾವುದೇ ಒಂದು ಬಜೆಟ್ ಸೀಮಿತ ಎಂದು ಹೇಳತಕ್ಕಂಥದ್ದು ಒಂದು ರಾಜ್ಯದ ಬೆಳವಣಿಗೆ ಆರೋಗ್ಯಕರ ಇರುವುದಿಲ್ಲವೆಂದು ನನ್ನ ಅಭಿಪ್ರಾಯ. ನನ್ನ ಪ್ರಕಾರ ಆಯವ್ಯಯ ಎಂದರೆ ಒಂದು ರಾಜ್ಯದ ಬೆಳವಣಿಗೆಗೆ ಭೌತಿಕ ಮತ್ತು ಬೌದ್ಧಿಕ ಬದ್ಧತೆ ಇರಬೇಕು. ಭೌತಿಕ ಬೆಳವಣಿಗೆಗೆ ಮತ್ತು ಬೌದ್ಧಿಕ ಬೆಳವಣಿಗೆಗೆ ಆ ಸರ್ಕಾರ ಎರಡಕ್ಕೂ ಕೂಡ ಬದ್ಧವಾಗಿರಬೇಕು. ಆದರೆ ಈ ಬಡ್ಜೆಟ್‌ನಲ್ಲಿ ಇವೆರಡಕ್ಕೂ ಅವಕಾಶವಿಲ್ಲ. ಈ ಬಡ್ಜೆಟ್‌ನಲ್ಲಿ ನಮ್ಮ ರಾಜ್ಯದಲ್ಲಿ ಶೇಕಡ 40 ರಷ್ಟು ಜನ ಬಡತನದ ರೇಖೆಗಿಂತ ಕೆಳಮಟ್ಟದಲ್ಲಿ ಜೀವನ ನಡೆಸುತ್ತಿದ್ದಾರೆ ಎಂದು ಸೂಚಿಸಿದ್ದಾರೆ. ಅಂದರೆ ಎಷ್ಟು ಭೌತಿಕ ದಾರಿದ್ರ್ಯ ಇದೆ ಎಂಬುದನ್ನು ಈ ಬಜೆಟ್ ನಮಗೆ ತೋರಿಸುತ್ತದೆ. ಒಂದು ಕಡೆ ಭೌತಿಕ ದಾರಿದ್ರ್ಯ ಇನ್ನೊಂದು ಕಡೆ ಬೌದ್ಧಿಕ ದಾರಿದ್ರ್ಯ, ಇವೆರಡೂ ದಾರಿದ್ರ್ಯಗಳು ನಮ್ಮ ರಾಜ್ಯವನ್ನು ಕಾಡುತ್ತಿರತಕ್ಕ ಸಮಸ್ಯೆಗಳು. ಇವೆರಡನ್ನೂ ನಿರ್ಮೂಲನ ಮಾಡುವುದಕ್ಕೆ ಯಾವುದೇ ಸರ್ಕಾರ ಬಡ್ಜೆಟ್ ಮಂಡನೆ ಮಾಡಿದಾಗಲೂ ಕೂಡ ಇದರ ಬಗ್ಗೆ ಒಂದು ಚಿಂತನೆ, ಯೋಚನೆ ಮತ್ತು ಗುರಿ ಇರಬೇಕಾಗುತ್ತದೆ. ಆ ಗುರಿಯನ್ನು ಕನಿಷ್ಠ ತಿಳಿಸತಕ್ಕಂಥ ಪ್ರಯತ್ನವನ್ನು ಕೂಡ ಈ ಬಡ್ಜೆಟ್‌ನಲ್ಲಿ ಇಲ್ಲ. ಭೌತಿಕ ದಾರಿದ್ರ್ಯವನ್ನು ನಿವಾರಣೆ ಮಾಡಲಿಕ್ಕೆ ತೋರಿಸಿರತಕ್ಕಂಥ ಯಾವುದೇ ಅಂಶಗಳು ಈ ಬಡ್ಜೆಟನಲ್ಲಿ ಇರತಕ್ಕಂಥ ಯಾವುದೇ ಅಂಶಗಳು ಕೂಡ ಖಂಡಿತವಾಗಿ ಪರಿಹಾರವಲ್ಲ. ನೀವೇ ಹೇಳಿರುವಂಥ ಪ್ರಕಾರ ಗ್ರಾಮೀಣ ಪ್ರದೇಶಗಳಿಗೆ 70 ಪರ್ಸೆಂಟ್ ಕೊಟ್ಟಿದ್ದೀರಿ, ಪಟ್ಟಣಗಳಿಗೆ 30 ಪರ್ಸೆಂಟ್ ಕೊಟ್ಟಿದ್ದೀರಿ, ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ನಾವು ಹೆಚ್ಚು ಗಮನವನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಒಂದು ರಾಜ್ಯ ಅಭಿವೃದ್ಧಿ ಆಗಬೇಕು ಎಂದರೆ, ಬೆಳವಣಿಗೆ ಆಗಬೇಕು ಎಂದರೆ ಅದರಲ್ಲಿ ಎರಡು ಮುಖ್ಯವಾದ ಅಂಶಗಳು ಇರಬೇಕು. ಒಂದು ಕೃಷಿ ರಂಗ, ಇನ್ನೊಂದು ಕೈಗಾರಿಕಾ ರಂಗ. ಈ ಎರಡೂ ಕೂಡ ಸಂಪೂರ್ಣವಾಗಿ ಬೆಳವಣಿಗೆ ಆಗದೇ ಹೋದರೆ ಯಾವುದೇ ರಾಜ್ಯ ತನ್ನ ಭೌತಿಕ ದಾರಿದ್ರ್ಯವನ್ನು ಕನಿಷ್ಠ ಪಕ್ಷ ಕಡಿಮೆ ಮಾಡಲಿಕ್ಕೆ, ಸಂಪೂರ್ಣ ನಿವಾರಣೆ ಮಾಡಲಿಕ್ಕೆ ಸಾಧ್ಯವಿಲ್ಲದೇ ಇದ್ದರೂ ಕೂಡ ಕನಿಷ್ಠ ಪಕ್ಷ ಭೌತಿಕ ದಾರಿದ್ರ್ಯವನ್ನು ಕಡಿಮೆ ಮಾಡಲಿಕ್ಕೆ ಸಾಧ್ಯತೆ ಇಲ್ಲ. ಈಗ ಇದರ ಜೊತೆಗೆ 244.85 ಕೋಟಿ ತೆರಿಗೆಯನ್ನು ಹಾಕಿದ್ದಾರೆ. ಈ ತೆರಿಗೆ ಹಾಕುವ ವಿಚಾರದಲ್ಲಿ ಒಂದು ಕನಿಷ್ಠವಾದಂಥ ಮೂಲಭೂತ ಧೋರಣೆ ಇರಬೇಕು. ಅದಕ್ಕೆ London School of Economicsನ ಸರ್ವೆ, ಪ್ರಕಾರ ಅವರು ಏನು ಹೇಳುತ್ತಾರೆ ಅಂದರೆ, necessity of taxation system in the world should be based on production ಯಾವುದೇ ರಾಜ್ಯ, ಸರ್ಕಾರ ತೆರಿಗೆಯನ್ನು ಹಾಕಬೇಕಾದರೆ ಮೂಲಭೂತವಾದ ಒಂದು ಪ್ರಜ್ಞೆ ಏನು ಅನುಸರಿಸಬೇಕು ಎಂದರೆ, ರಾಜ್ಯದಲ್ಲಿ ಎಷ್ಟು ಉತ್ಪಾದನೆಯಾಗುತ್ತಿದೆ

ಎಂಬುದನ್ನು ನೋಡಬೇಕು. ಆ ಉತ್ಪಾದನೆಯಿಲ್ಲದೇ ತೆರಿಗೆ ಹಾಕತಕ್ಕಂಥದ್ದು ಯಾವ ಮಟ್ಟಕ್ಕೆ ಹೋಗುತ್ತದೆ ಅಂದರೆ, ಬರೀ ತೆರಿಗೆಗಳಲ್ಲಿ ಸರ್ಕಾರವನ್ನು ನಡೆಸಿಕೊಂಡು ಹೋಗಬೇಕು ಎನ್ನತಕ್ಕಂಥದ್ದು ಮತ್ತು ಏನು ವಿಚಿತ್ರವಾದಂಥ ತರ್ಕ ಮಾಡುತ್ತಿದ್ದಾರೆ ಎಂದರೆ ನಾವು ಮಧ್ಯಮ ವರ್ಗದವರ ಜೇಬಿಗೆ ಕೈ ಹಾಕಿದ್ದೇವೆ ಬಡವರ ಜೇಬಿಗೆ ಕೈ ಹಾಕಿಲ್ಲ ಎನ್ನತಕ್ಕಂಥದ್ದು ಒಂದು ತರ್ಕವಾದರೆ, ಇನ್ನೊಂದು ಶ್ರೀಮಂತರಿಗೆ ನಾವು ಹೊರೆ ಹಾಕುತ್ತಿದ್ದೇವೆ ಬಡವರಿಗೆ ಹಾಕುತ್ತಿಲ್ಲ ಎನ್ನತಕ್ಕಂಥದ್ದು. ಇದೊಂದು ವಿಚಿತ್ರ ತರ್ಕ ultimate victim is the common man ಯಾವುದೇ ಸರ್ಕಾರ, ಯಾವುದೇ ರಾಜ್ಯ ತೆರಿಗೆಯನ್ನು ಹಾಕಿದರೆ ಅದು ultimate victim is the common man ಹೋಟೆಲ್ ಮಾಲೀಕರಿಗೆ ತೆರಿಗೆಯನ್ನು ಹಾಕುತ್ತೇವೆ ಎಂದು ಹೇಳಿದರೆ ಅವನು ಇಡ್ಲಿ ಬೆಲೆಜಾಸ್ತಿ ಮಾಡುತ್ತಾನೆ. ಡೀಸಲ್ ರೇಟ್ ಜಾಸ್ತಿ ಮಾಡಿದರೆ, ಬಸ್ ಚಾರ್ಜ್ ಜಾಸ್ತಿ ಆಗುತ್ತದೆ. ಇದು ಸೂಪರ್ ಲಾಜಿಕ್. ಅದನ್ನು ನಾವು ಆಲೋಚನೆ ಮಾಡದೆ ತೆರಿಗೆಯನ್ನು ಹಾಕತಕ್ಕಂಥದ್ದು, ಮಧ್ಯಮ ವರ್ಗದವರಿಗೆ ಹೊರೆ, ಎನ್ನತಕ್ಕಂಥದ್ದು ನನ್ನ ಅನಿಸಿಕೆ. ಇವೊತ್ತು ಶ್ರೀಮಂತರ ಮೇಲೆ ಟ್ಯಾಕ್ಸ್ ಹಾಕಿದರೆ ಅವನೇನು ತನ್ನ ಜೇಬಿನಿಂದ ಕೊಡುವುದಿಲ್ಲ. ಆತ ತನ್ನ ವಸ್ತುಗಳ ಮೇಲಿನ ಬೆಲೆಯನ್ನು ಏರಿಸಿ ಸಾಮಾನ್ಯ ಮನುಷ್ಯನಿಂದ ಮನುಷ್ಯನ ಮೇಲೆ ಹಾಕುತ್ತಾನೆ it is a simple logic ಯಾವುದೇ ಒಂದು ಟ್ಯಾಕ್ಸ ಹಾಕಿದಾಗಲೂ ಕೂಡ ಇದೇ ರೀತಿ ಇರುತ್ತದೆ. ಆದ್ದರಿಂದ ತೆರಿಗೆಯನ್ನು ವಿಧಿಸಬೇಕಾದಾಗ ಯಾವುದೇ ರಾಜ್ಯವು ತನ್ನ ರಾಜ್ಯದಲ್ಲಿ ಆಗತಕ್ಕಂಥ ಉತ್ಪಾದನೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇದೇ ಆಧಾರವಾಗಿರಬೇಕು. ನೀವು ಉತ್ಪಾದನೆಯನ್ನು ಹೆಚ್ಚು ಮಾಡಲಿಕ್ಕೆ ಯಾವ ಕ್ರಮವನ್ನು ಈ ಬಜೆಟ್‌ನಲ್ಲಿ ತೆಗೆದುಕೊಂಡಿದ್ದೀರಿ ಎಂದರೆ ಈ ಬಡ್ಜೆಟ್‌ನಲ್ಲಿ ಆ ವಿಷಯವಾಗಿ ಒಂದೇ ಒಂದು ಅಕ್ಷರವೂ ಇಲ್ಲ. ಈ ಉತ್ಪಾದನೆ ಹೆಚ್ಚು ಮಾಡಲಿಕ್ಕೆ. ಅದು ಕೈಗಾರಿಕಾ ಕ್ಷೇತ್ರ ಆಗಿರಬಹುದು ಅಥವಾ ಕೃಷಿ ಕ್ಷೇತ್ರ ಇರಬಹುದು. ಏಕೆಂದರೆ ಉತ್ಪಾದನೆ ಇವೆರಡೇ ಕ್ಷೇತ್ರದಿಂದ ಬರುವುದು. ನಾನು ಮೊದಲಿಗೆ ಕೃಷಿ ರಂಗವನ್ನೇ ತೆಗೆದುಕೊಂಡು ಉದಾಹರಣೆಯನ್ನು ಕೊಡುತ್ತೇನೆ. ಇವರು ಕೃಷಿ ರಂಗದಲ್ಲಿ ಏನು ಹೇಳುತ್ತಾರೆ ಎಂದರೆ, ಕಳೆದ ಒಂದು ದಶಕದಿಂದ ಆಹಾರದ ಧಾನ್ಯಗಳ ಉತ್ಪಾದನೆ ಮತ್ತು ಇಳುವರಿ ಸ್ಥಗಿತವಾಗಿರುವುದು ಕಳವಳಕಾರಿಯಾದ ವಿಷಯವಾಗಿದೆ. ಆಹಾರ ಧಾನ್ಯಗಳ ಉತ್ಪಾದನೆ ಸ್ಥಗಿತಗೊಂಡಿದ್ದರೂ, ಸಹಿತ ವಾಣಿಜ್ಯ ಬೆಳೆಗಳಾದ ಹತ್ತಿ,ಕಬ್ಬು, ಹೊಗೆಸೊಪ್ಪು, ಎಣ್ಣೆ ಬೀಜ ಮುಂತಾದವುಗಳು ಗಣನೀಯ ಪ್ರಮಾಣದಲ್ಲಿ ಏರಿದೆ. ಇದು ಏನು ತೋರಿಸುತ್ತದೆ ಎಂದರೆ ಕೃಷಿ ರಂಗದಲ್ಲಿ ಉತ್ಪಾದನೆ ಸ್ಥಗಿತವಾಗಿರುವುದು ಎನ್ನುವುದನ್ನು ಒಪ್ಪಿಕೊಳ್ಳಬಹುದಾಗಿದೆ. ಈ ಕೃಷಿ ರಂಗದಲ್ಲಿ ಉತ್ಪಾದನೆ ಹೆಚ್ಚು ಮಾಡಲು ಏನು ಮಾಡಬೇಕು ? ನೀವು ಬರೀ ರಸಗೊಬ್ಬರಗಳ ಮೇಲೆ ಸಬ್ಸಿಡಿ ಕೊಟ್ಟು ಬಿಟ್ಟು ಕೃಷಿರಂಗದ ಉತ್ಪಾದನೆಯನ್ನು ಹೆಚ್ಚು ಮಾಡುತ್ತೇವೆ ಎಂದು ಹೇಳುವುದು ಬಹುಶಃ ಅವಾಸ್ತವಿಕವಾದ ಸಂಗತಿ ಎಂದರೆ ಅದು ತಪ್ಪಾಗುವುದಿಲ್ಲ. ಕೃಷಿ ರಂಗದಲ್ಲಿ ಉತ್ಪಾದನೆಯನ್ನು ಮಾಡಲಿಕ್ಕೆ ಇರತಕ್ಕ ಮೂಲಭೂತವಾದ ಪ್ರಶ್ನೆ ಭೂಮಿಯ ಪ್ರಶ್ನೆ. ಉಳುವವನಿಗೆ ಭೂಮಿ ಎಲ್ಲಿಯವರೆಗೂ ಕೊಡುವುದಿಲ್ಲವೋ, ಅಲ್ಲಿಯವರೆಗೂ ಕೂಡ ಈ ಕೃಷಿ ರಂಗದ ಉತ್ಪಾದನೆಯನ್ನು ಹೆಚ್ಚು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆ ಭೂಮಿಯನ್ನು ಉತ್ಪಾದನೆ ಮಾಡತಕ್ಕವನಿಗೆ ಕೊಡಲಿಕ್ಕೆ ನಿಮ್ಮ ಬಡ್ಜೆಟ್‌ನಲ್ಲಿ ಯಾವುದಾದರೂ ಕಾರ್ಯಕ್ರಮಗಳು ಇವೆಯೇ?

ನಾವು ಕರ್ನಾಟಕಕ್ಕೆ ಸಂಬಂಧಪಟ್ಟ ಹಾಗೆ ಕೃಷಿ ಬೆಳವಣಿಗೆಯ ಕೆಲವು ಅಂಕಿ ಅಂಶಗಳನ್ನು ನೋಡಬಹುದು. ಕರ್ನಾಟಕದಲ್ಲಿ ಕೃಷಿ ಬೆಳವಣಿಗೆಯ ವೇಗ ಕರ್ನಾಟಕದಲ್ಲಿ 2.2 ರಷ್ಟು. ಆಹಾರ ಧಾನ್ಯಗಳ ಉತ್ಪಾದನೆ 75 ಲಕ್ಷ ಟನ್‌ಗಳು. ಕೃಷಿ ಯೋಗ್ಯ ಜಮೀನು 102 ಲಕ್ಷ ಹೆಕ್ಟೇರ್‌ಗಳು. ಇದು ಲೇಟೆಸ್ಟ್ ಫಿಗರ್‌ಗಳು. ಹಂಚಿದ ಹೆಚ್ಚುವರಿ ಜಮೀನು 1,25,000 ಎಕರೆಗಳು. ಹಂಚಲ್ಪಟ್ಟ ಜನ 25,000 ಕುಟುಂಬಗಳು. ಇದನ್ನು ಸ್ಪಷ್ಟವಾಗಿ ಸರ್ಕಾರ ತಿಳಿಯಬೇಕಾಗಿದೆ. ಯಾವುದೇ ಒಂದು ಸರ್ಕಾರ ಕೃಷಿ ರಂಗದಲ್ಲಿ ಉತ್ಪಾದನೆಯನ್ನು ಹೆಚ್ಚು ಮಾಡಬೇಕು ಎಂಬ ಪ್ರಾಮಾಣಿಕ ಕಳಕಳಿ ಇದ್ದರೆ ಮೊಟ್ಟಮೊದಲಿಗೆ ಅವರು ಮಾಡಬೇಕಾಗಿರತಕ್ಕಂಥ ಕೆಲಸ ಈ ಭೂಮಿಯನ್ನು ಹಂಚುವುದು. ಈ ಭೂಮಿಯನ್ನು ಹಂಚತಕ್ಕಂಥ ಕೆಲಸ ಕರ್ನಾಟಕದಲ್ಲಿ ಇವೊತ್ತಿನವರೆಗೆ ಆಗಲಿಲ್ಲ. ಇವೊತ್ತು ಕೃಷಿಗೆ ಯೋಗ್ಯವಾಗಿರತಕ್ಕಂಥ ಜಮೀನು ಮೂರುವರೆ ಲಕ್ಷ ಹೆಕ್ಟೇರ್ ಇದೆ. ನೀವು ಹಂಚಿರತಕ್ಕದ್ದು ಕೇವಲ 1,25,000 ಎಕರೆಗಳು. ನೀವು ಈ ಭೂಮಿಯನ್ನು ಹಂಚದೇ ಕೃಷಿ ರಂಗದ ಉತ್ಪಾದನೆಯನ್ನು ಹೆಚ್ಚು ಮಾಡಲಿಕ್ಕೆ ಖಂಡಿತ ಸಾಧ್ಯವಿಲ್ಲ. ಬಹುಶಃ ಈ ವಿಚಾರ ನಿಮಗೆ ಮುಂದಿನ ವರ್ಷ ಬಜೆಟ್ ಮಂಡಿಸುವಾಗ ಗೊತ್ತಾಗುತ್ತದೆ. ಏಕೆ ಇದರ ಬಗ್ಗೆ ನಿಮ್ಮ ಬಜೆಟ್‌ನಲ್ಲಿ ಕಾರ್ಯಕ್ರಮಗಳು ಇಲ್ಲ? ನೀವು ಹಂಚಿರತಕ್ಕಂಥದ್ದು 1,25,000 ಎಕರೆ ಮಾತ್ರ. ಇದು ಒಂದನೇ ಪ್ರಶ್ನೆ. ಎರಡನೇ ಪ್ರಶ್ನೆ, ಹಿಂದಿನ ಸರ್ಕಾರವನ್ನು ಹೋಲಿಕೆ ಮಾಡಿ ಹೇಳುತ್ತೇನೆ. ಭೂಮಿ ಹಂಚುವುದರಿಂದ ಕೃಷಿ ಉತ್ಪಾದನೆ ಜಾಸ್ತಿಯಾಗಿದೆ ಎಂಬುದನ್ನು ನಾನು ನಮ್ಮ ಪಕ್ಷ ಆಡಳಿತ ನೆಡಸುತ್ತಿರುವ ಪಶ್ಚಿಮ ಬಂಗಾಳದ ಕೆಲವು ಅಂಕಿ ಅಂಶಗಳನ್ನು ತಮಗೆ ಹೇಳುತ್ತೇನೆ. ಅಲ್ಲಿ ಕೃಷಿ ರಂಗದ ಬೆಳವಣಿಗೆ 6.4 ರಷ್ಟು. ಆಹಾರ ಧಾನ್ಯಗಳ ಉತ್ಪಾದನೆ 115.14 ಲಕ್ಷ ಟನ್‌ಗಳು. ಹಂಚಿಕೆಯಾಗಿರತಕ್ಕಂತಹ ಭೂಮಿ 12 ಲಕ್ಷ ಹೆಕ್ಟೇರ್. ಪ್ಲಾನಿಂಗ್ ಕಮಿಷನ್, ಎಕನಾಮಿಕ್ ಸರ್ವೆಯಲ್ಲಿ, ಇಡೀ ದೇಶದಲ್ಲಿ ಅತೀ ಹೆಚ್ಚು ಕೃಷಿ ಉತ್ಪಾದನೆ ಮಾಡತಕ್ಕ ರಾಜ್ಯ ಪಶ್ಚಿಮ ಬಂಗಾಳ ಎಂದು ಹೇಳಿದೆ. ಅವರು ಏನು ಮಂತ್ರ ಮಾಡಿಲ್ಲ, ಅವರು ಭೂಮಿಯನ್ನು ಹಂಚಿದ್ದಾರೆ. ನೀವು ಭೂಮಿ ಹಂಚಿಕೆ ಮಾಡದೆ ಕೃಷಿಯಲ್ಲಿ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಿಲ್ಲ. ಎರಡನೆಯ ಅಂಶ ಕೃಷಿರಂಗಕ್ಕೆ ಸಂಬಂಧಿಸಿದುದ್ದು, ಕೂಲಿಯ ಪ್ರಶ್ನೆ. ಎಲ್ಲಾ ಯೋಜನೆಗಳಿಗೆ ನೀವು ಹಣ ಹಾಕುತ್ತೀರಿ, ಉತ್ಪನ್ನ ಮಾಡುತ್ತೀರಿ, ಕೈಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಎಲ್ಲಿಂದ ತರುತ್ತೀರಿ? ಕೈಗಾರಿಕೆಗಳಲ್ಲಿ ಆಗತಕ್ಕಂತಹ ಉತ್ಪನ್ನಗಳನ್ನು ಮಾರಾಟ ಮಾಡಬೇಕಾದರೆ ನಿಮಗೆ ಮಾರುಕಟ್ಟೆ ಎಲ್ಲಿ? ನಿಜವಾಗಿರತಕ್ಕಂತಹದು, ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ಹಳ್ಳಿಗಾಡಿನ ಜನ. ಅವರ ಕೈಯಲ್ಲಿ ಹಣವಿದ್ದರೆ ನೀವು ಕೈಗಾರಿಕಾ ರಂಗದಲ್ಲಿ ಉತ್ಪಾದನೆ ಮಾಡುವ ಸರಕುಗಳಿಗೆ, ಕೃಷಿ ರಂಗ ಉತ್ಪಾದನೆ ಮಾಡುವ ಸರಕುಗಳಿಗೆ ಮಾರುಕಟ್ಟೆ ಸಿಗುತ್ತದೆ. ಎಲ್ಲಿಯವರೆಗೆ, ಕೃಷಿರಂಗ ಮತ್ತು ಕೈಗಾರಿಕಾ ರಂಗದಲ್ಲಿ ಉತ್ಪಾದನೆ ಆಗತಕ್ಕಂಥ ಸರಕುಗಳಿಗೆ ಮಾರುಕಟ್ಟೆ ಇರುವುದಿಲ್ಲವೋ ಅಲ್ಲಿಯವರೆಗೆ ನಿಮ್ಮ ಉತ್ಪಾದನೆ ಸಂಪೂರ್ಣವಾಗಿ ಸ್ಥಗಿತವಾಗುತ್ತದೆ. ಕೃಷಿ ಕಾರ್ಮಿಕರ ಪ್ರಶ್ನೆ ಬಂದಾಗ, ಅವರ ಕೂಲಿ ಪ್ರಶ್ನೆ ಬಂದಾಗ ನೀವು ಇಲ್ಲಿ ಏನು ಹೇಳಿದ್ದೀರಿ? ಏನೂ ಇಲ್ಲ. ಕೃಷಿ ಕಾರ್ಮಿಕರ ಕನಿಷ್ಟ ವೇತನದ ಬಗ್ಗೆ ಯಾವುದೇ ಒಂದು ಅಕ್ಷರ ಈ ಬಜೆಟ್‌ನಲ್ಲಿ ಇಲ್ಲ. ಹಾಗಾದರೆ, ಆ ಉತ್ಪಾದನೆಗಳಿಗೆ ಬೇಕಾಗಿರತಕ್ಕಂತಹ ಮಾರುಕಟ್ಟೆಯನ್ನು ಎಲ್ಲಿಂದ ತರುತ್ತೀರಿ? ಮೂರನೆಯದಾದ ಅಂಶ, ಕೃಷಿಗೆ ಸಂಬಂಧಪಟ್ಟಹಾಗೆ ರೈತ

ಬೆಳೆದ ಬೆಳೆಗಳಿಗೆ ಲಾಭದಾಯಕವಾದ ಬೆಲೆ ನಿಗದಿ ಮಾಡುವಂತಹ ಕಾರ್ಯಕ್ರಮ ಇದರಲ್ಲಿ ಇಲ್ಲ. ಸಬ್ಸಿಡಿ ಕೊಡುತ್ತೇವೆಂದು ಹೇಳುತ್ತೀರಿ. ನಾನು ಯಾವುದೇ ಸರ್ಕಾರವನ್ನು ಕೇಳುತ್ತೇನೆ, ಈ ಸಬ್ಸಿಡಿ ಕೊಡುವುದರ ಮುಖಾಂತರ, ಪರಿಹಾರಗಳನ್ನು ಕೊಡುವುದ ಮುಖಾಂತರ, ರಿಸರ್ವೇಷನ್ ಮುಖಾಂತರ ಎಷ್ಟು ವರ್ಷಗಳ ಕಾಲ ರಾಜ್ಯವನ್ನು ನಡೆಸುತ್ತೀರಿ? ರೈತ ಇವತ್ತು ಸಂಪೂರ್ಣವಾಗಿ ದಿವಾಳಿ ಆಗುತ್ತಿದ್ದಾನೆ. ಆದುದರಿಂದ ನಾನು ನೇರವಾಗಿ ಪ್ರಶ್ನೆ ಕೇಳುತ್ತಿದ್ದೇನೆ. ರೈತ ಇವತ್ತು ಎಷ್ಟೇ ಬೆಳೆದರೂ ಕೂಡ ಲಾಭವಿಲ್ಲ, ನಷ್ಟ ಅನುಭವಿಸುತ್ತಿದ್ದಾನೆ, ಪಾಪರ್ ಆಗುತ್ತಿದ್ದಾನೆ. ಅವನು ಬೆಳೆದಂಥ ಬೆಳೆಗೆ ಬೆಲೆ ನಿಗದಿಮಾಡತಕ್ಕಂತಹ ಹಕ್ಕು ಈ ದೇಶದಲ್ಲಿ ರೈತನಿಗಿಲ್ಲ. ಒಂದು ಸಣ್ಣ ಬೆಂಕಿಪೊಟ್ಟಣ ತಯಾರು ಮಾಡುವ ಮಾಲೀಕ ತನ್ನ ಬೆಂಕಿ ಪೊಟ್ಟಣಕ್ಕೆ ನಲ್ವತ್ತು ಪೈಸೆ ಎಂದು ಬೆಲೆ ನಿಗದಿ ಮಾಡುತ್ತಾನೆ. ಅವನಿಗೆ ಹಕ್ಕು ಕೊಟ್ಟಂತಹವರು ಯಾರು? ರೈತ ಬೆಳೆದಂಥ ಬೆಳೆಗೆ ಲಾಭದಾಯಕವಾದ ಬೆಲೆ ನಿಗದಿ ಮಾಡುವಂಥ ಹಕ್ಕನ್ನು ಆತನಿಂದ ಕಿತ್ತುಕೊಂಡವರು ಯಾರು? ಇದು ಮೂಲಭೂತವಾದಂಥ ಪ್ರಶ್ನೆ. ರೈತ ಪಾಪರಾದರೆ, ನಿಮ್ಮ ಕೈಗಾರಿಕಾ ರಂಗ ಎಲ್ಲಿ ಬೆಳೆಯುತ್ತದೆ? ಇದು ಸಾಮಾನ್ಯ ಆರ್ಥಿಕಜ್ಞಾನ ಇರತಕ್ಕಂತವರಿಗೆ ಅರ್ಥವಾಗುವುದಿಲ್ಲವೆ? ನಿಮ್ಮ ಕೈಗಾರಿಕೆಗಳಿಗೆ ಬೇಕಾದಂತಹ ಕಚ್ಚಾ ವಸ್ತುಗಳು, ನಿಮ್ಮ ಕೈಗಾರಿಕೆಗಳಿಗೆ ಬೇಕಾದಂತಹ ಬಂಡವಾಳ ಆತನಿಂದಲೇ ಬರಬೇಕು. ಆತನಿಗೆ ಇವತ್ತು ನಷ್ಟವಾಗುತ್ತಿದೆ. ಕೈಗಾರಿಕೆಗಳಿಗೆ ಇವತ್ತು ಕಚ್ಚಾ ವಸ್ತುಗಳಿಲ್ಲ. ನಿಮ್ಮ ಕೈಗಾರಿಕಾ ಉತ್ಪಾದನೆಗಳಿಗೆ ಇವತ್ತು ಬಂಡವಾಳವಿಲ್ಲ. ನಮ್ಮಲ್ಲಿ ಬಂಡವಾಳವಿಲ್ಲದೆ ಇರುವ ಕಾರಣಕ್ಕೋಸ್ಕರ ಕೊಜೆಂಟ್ರಿಕ್ಸ್ ಕಂಪನಿಯ ಹತ್ತಿರ ಹೋಗಿ ಒಪ್ಪಂದ ಮಾಡಿಕೊಂಡು 15 ಸಾವಿರ ಕೋಟಿ ರೂಪಾಯಿಗಳ ಬಂಡವಾಳವನ್ನು ಇವತ್ತು ಅವರು ಹೂಡುತ್ತಿದ್ದಾರೆಂದು ಹೇಳುತ್ತಿದ್ದೀರಿ. ನಿಮ್ಮ ಹತ್ತಿರ ಬಂಡವಾಳವಿಲ್ಲ. ಏತಕ್ಕೆ ಇಲ್ಲ? ಆ ಬಂಡವಾಳ ನಿಮಗೆ ಬರಬೇಕು? ತೆರಿಗೆಗಳನ್ನು ಹಾಕುವುದರ ಮೂಲಕ ಬಂಡವಾಳ ತೆಗೆದುಕೊಂಡು ಬರುತ್ತಿದ್ದೀರಿ. ತೆರಿಗೆಗಳನ್ನು ಹಾಕುವುದರ ಮೂಲಕ ಯಾರಾದರೂ ಬಂಡವಾಳವನ್ನು ತೆಗೆದುಕೊಂಡು ಬರುತ್ತೇವೆಂದು ಆಲೋಚನೆ ಮಾಡಿದರೆ ಅದು ಅನ ಎಕಾನಾಮಿಕ್ಸ್. ಅದು ಆರ್ಥಿಕ ಚಿಂತನೆಯಾಗುವುದಿಲ್ಲ. ಉತ್ಪಾದನೆ ಹೆಚ್ಚು ಮಾಡುವುದರಿಂದ ಮಾತ್ರ ನೀವು ಬಂಡವಾಳ ಹೆಚ್ಚು ಮಾಡಬಹುದೇ ಹೊರತು, ಉತ್ಪಾದನೆ ಹೆಚ್ಚು ಮಾಡುವುದರಿಂದ ಮಾರುಕಟ್ಟೆಯನ್ನು ವಿಸ್ತಾರಮಾಡಬಹುದೇ ಹೊರತು, ಬರೀ ತೆರಿಗೆ ಹಾಕುವುದರಿಂದ ಬಂಡವಾಳ ಶೇಕರಣೆ ಮಾಡುತ್ತೇವೆಂದು ಹೇಳಿದರೆ ಇದು ಸಂಪೂರ್ಣವಾಗಿ ಅವೈಜ್ಞಾನಿಕವಾದ ಚಿಂತನೆ. ಆ ಚಿಂತನೆಯನ್ನು ಬಿಡುವುದಕ್ಕೆ ನೀವು ತಯಾರಿಲ್ಲ. ಏತಕ್ಕೆ ತಯಾರಿಲ್ಲವೆಂದರೆ ನಿಮ್ಮ ಧೋರಣೆ ಹಾಗಿದೆ, ನಿಮ್ಮ ಚಿಂತನೆ ಆ ದಾರಿಯಲ್ಲಿದೆ, ನಿಮಗೆ ಆ ದೋರಣೆ ಬಗ್ಗೆ ಕನಿಷ್ಟ ಕಲ್ಪನೆ ಕೂಡ ಇಲ್ಲ. ಹೀಗಾದರೆ ಕೃಷಿರಂಗದಲ್ಲಿ ಮೂಲ ಪ್ರಶ್ನೆ ಏನಿದೆ ಎಂದರೆ, ನೀವು ಹೇಳುತ್ತೀರಿ ನೀರಾವರಿ ನೀರಾವರಿ ಎಂದು; ಕರ್ನಾಟಕ ರಾಜ್ಯದ ಮಟ್ಟಿಗೆ ಹೇಳುವುದಾದರೆ ನೀರಾವರಿ ಸೌಲಭ್ಯದಿಂದ ವಂಚಿತವಾಗಿರತಕ್ಕಂಥ ಜಿಲ್ಲೆಗಳ ಪ್ರಶ್ನೆ ಇದೆ. ಅಲ್ಲಿ ನದಿಗಳಿಲ್ಲ, ಡ್ಯಾಂಗಳಿಲ್ಲ, ಅಣೆಕಟ್ಟುಗಳಿಲ್ಲ. ಅಂತಹ ಜಿಲ್ಲೆಗಳು ನಮ್ಮ ರಾಜ್ಯದಲ್ಲಿ ಎಷ್ಟಿದೆ? ಅವುಗಳ ಪರಿಸ್ಥಿತಿ ಏನು? ನಿಮ್ಮ ದೃಷ್ಟಿಯಲ್ಲಿ ಸಮಗ್ರ ನೀರಾವರಿಯೋಜನೆ ಎಂದರೆ, ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರ್ತಿ ಮಾಡತಕ್ಕಂಥಹದ್ದು ಅಪ್ಪರ್ ಭದ್ರಾ ಪ್ರಾಜೆಕ್ಟ್ ಯೋಜನೆಯನ್ನು ಪೂರ್ತಿ ಮಾಡತಕ್ಕಂಥದ್ದು, ಕಾವೇರಿ ಜಲಾಯನ ಪ್ರದೇಶ ಅಭಿವೃದ್ಧಿ ಮಾಡತಕ್ಕಂಥದ್ದು. ಅದು ಮಾಡಬಾರದೆಂದು ನಾವು ಹೇಳುತ್ತಿಲ್ಲ. ಅದನ್ನು ಮಾಡಲೇಬೇಕು.

ಅದು ಕರ್ನಾಟಕ ರಾಜ್ಯದ ಆಸ್ತಿ. ಅದರ ಬಗ್ಗೆ ನಮಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ಒಟ್ಟು ಸಮಗ್ರ ನೀರಾವರಿ ಯೋಜನೆ ಬಗ್ಗೆ ಏನಿದೆ? ನಮ್ಮ ಕೃಷಿ ಹೆಚ್ಚಾಗಿ ಆಧರಿಸಿರತಕ್ಕಂತಹದ್ದು ಮಳೆಯ ಮೇಲೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಪೂರ್ತಿ ವರ್ಷ ಸರಾಸರಿ ಆ ಮಳೆ ಬೀಳತಕ್ಕಂಥ ಪ್ರಮಾಣ ಕಡಿಮೆಯಾಗುತ್ತಾ ಇದೆ. ಎಷ್ಟು ಕಡಿಮೆಯಾಗುತ್ತಿದೆ ಎಂಬುದನ್ನು ಲೆಕ್ಕಾ ಹಾಕುವುದಕ್ಕೆ ಸಾಧ್ಯವಿಲ್ಲ. ಅಧಿಕಾರಿಗಳು ಕೊಟ್ಟಂಥ ಲೆಕ್ಕವನ್ನು ಹೇಳುವುದಕ್ಕೆ ಹೋಗಬೇಡಿ. ನಾನು ಲೆಕ್ಕಾಚಾರದ ಮೇಲೆ ಅಥವಾ ಅಂಕಿಅಂಶಗಳ ಜಗ್ಗಾಟ ಮಾಡುವುದಕ್ಕೆ ನಿಂತಿಲ್ಲ. ಇಲ್ಲಿ ಕೆಲವರು ವಾದ ಮಾಡತಕ್ಕಂಥದ್ದು ಅಂಕಿಅಂಶಗಳನ್ನಿಟ್ಟುಕೊಂಡು ನಮ್ಮ ಸರ್ಕಾರದಲ್ಲಿ ಇಷ್ಟು ಬೆಳವಣಿಗೆಯಾಗಿತ್ತು ಎಂದು ವಾದ ಮಾಡುತ್ತಾರೆ. ಭಾರತದಲ್ಲಿ ಅಂಕಿಅಂಶಗಳನ್ನು ಆಧಾರವಾಗಿಟ್ಟುಕೊಂಡು ತಲಾದಾಯವನ್ನು ಲೆಕ್ಕಾ ಹಾಕುತ್ತಾರೆ. ಬಿರ್ಲಾನಿಗೆ ಒಂದು ದಿವಸಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳ ಆದಾಯ ಲಾಭ ಬರುತ್ತದೆ, ಒಬ್ಬ ಕೃಷಿ ಕಾರ್ಮಿಕನಿಗೆ 20 ರೂಪಾಯಿಗಳ ಕೂಲಿ ಕೊಡುತ್ತಾರೆ. 1020 ರೂಪಾಯಿ ಸೇರಿಸಿ ಸರಾಸರಿ ಲೆಕ್ಕ ಹಾಕತಕ್ಕಂತಹದ್ದು ಎಲ್ಲರಿಗೂ ಆ ಅಂಕಿಅಂಶಗಳನ್ನು ಬಿಡಿ. ವಾಸ್ತವ ಪ್ರಪಂಚಕ್ಕೆ ನಾವು ಬರಬೇಕಾಗಿದೆ. ವಾಸ್ತವ ಪ್ರಪಂಚ ಎಂದರೆ, ನೀವು ಉತ್ಪಾದನೆ ಮಾಡುವಂಥ ಬೆಳೆಗೆ ಮೂಲ ಆಧಾರವಾಗಿರತಕ್ಕಂತಹ ಅಂಶಗಳ ಬಗ್ಗೆ ನಿಮ್ಮ ಅಭಿಪ್ರಾಯ ಏನು? ಆದುದರಿಂದ ಕೃಷಿರಂಗದಲ್ಲಿ ಹೆಚ್ಚು ಉತ್ಪಾದನೆ ಮಾಡಬೇಕೆನ್ನುವ ಕಳಕಳಿ ಇದ್ದರೆ, ಉಳುವವನಿಗೆ ಭೂಮಿ ಕೊಡಿ. ಎರಡನೆಯದು ರೈತ ಬೆಳೆಯತಕ್ಕಂಥ ಬೆಳಗೆ ಲಾಭದಾಯಕ ಬೆಲೆ ಕೊಡಿ. ಕೃಷಿ ಕಾರ್ಮಿಕನಿಗೆ ಜೀವನಾವಶ್ಯಕವಾಗಿ ಬೇಕಾಗಿರತಕ್ಕಂಥ ಕನಿಷ್ಟ ವೇತನವನ್ನು ನಿಗದಿ ಮಾಡಿ. ಕನಿಷ್ಟ ವೇತನವೆಂದರೆ 16, 15, 12 ಎಂದು ನಿಗದಿ ಮಾಡದೆ, ಜೀವನಾವಶ್ಯಕತೆಗೆ ಅನುಕೂಲವಾಗತಕ್ಕಂಥ ವೇತನವನ್ನು ನಿಗದಿ ಮಾಡಬೇಕಾಗಿದೆ. ಆ ದೃಷ್ಟಿಯಿಂದಲೇ ಸಮಸ್ಯೆಯನ್ನು ನೋಡದೆ ಹೋದರೆ, ನೀವು ಕೃಷಿರಂಗದಲ್ಲಿ ಉತ್ಪಾದನೆಯನ್ನು ಏನು ನಿರೀಕ್ಷೆ ಮಾಡಿದ್ದೀರೆಂದರೆ, ಕೃಷಿರಂಗ ಉತ್ಪಾದನೆಗೆ ರಸಗೊಬ್ಬರಗಳು ಮುಖ್ಯ. ರಸಗೊಬ್ಬರಗಳಿದ್ದರೆ ಕೃಷಿ ಉತ್ಪಾದನೆ ಜಾಸ್ತಿಯಾಗುತ್ತದೆ ಎಂದು ಅಂದುಕೊಂಡಿದ್ದೀರಿ. ಕೃಷಿ ಉತ್ಪಾದನೆಯಲ್ಲಿ ಎಂಬತ್ತೈದು ಲಕ್ಷ ಟನ ಆಗುತ್ತದೆಂದು ಇಟ್ಟುಕೊಂಡಿದ್ದೀರಿ. 1983 ರಿಂದ 89ರವರೆಗೆ ನಿಮ್ಮ ಪಕ್ಷದ ಆಡಳಿತವೇ ಕರ್ನಾಟಕ ರಾಜ್ಯದಲ್ಲಿ ಇತ್ತು. ಆಗಲೇ ಕೃಷಿ ಉತ್ಪಾದನೆ ಕಡಿಮೆಯಾಗುತ್ತಾ ಬಂದಿತ್ತು. ಕೃಷಿ ಉತ್ಪಾದನೆಯಲ್ಲಿ ರಾಜ್ಯದ ಆದಾಯ 56 ರಿಂದ 64 ರವರೆಗೆ ಶೇಕಡ 4.3 ಇತ್ತು, 1964ರಿಂದ 70 ರವರೆಗೆ ಶೇಕಡ 4 ಇತ್ತು, 74ರ ನಂತರ ಶೇಕಡ 2.2ಕ್ಕೆ ಇಳಿಯಿತು. 1984-85ರಲ್ಲಿ ನೀವು ಸಾಧಿಸಿದ ಗುರಿ ಇಟ್ಟುಕೊಂಡದ್ದು 100 ಲಕ್ಷ ಟನ್, ಆದರೆ ಆದದ್ದುದು 5 ವರ್ಷಗಳಲ್ಲಿ 7ನೇ ಪಂಚವಾರ್ಷಿಕ ಯೋಜನೆಯ ಅಂತ್ಯದವರೆಗೆ 1989-90ರ ಮಧ್ಯ ವರ್ಷದಲ್ಲಿ 85 ಲಕ್ಷ ಟನ್. 8ನೇ ಪಂಚವಾರ್ಷಿಕ ಯೋಜನೆ ಪ್ರಾರಂಭದಲ್ಲಿ 85 ಲಕ್ಷ ಟನ್ ಮಾಡಿದ್ದೀರಿ. 1993-94ರ ಗುರಿ 85ಲಕ್ಷ ಟನ್‌ಗೆ ಇಳಿಸಲಾಯಿತು. ಎರಡು ಸಾವಿರ ಇಸವಿಯ ಹೊತ್ತಿಗೆ ನಮ್ಮ ಕರ್ನಾಟಕ ರಾಜ್ಯದ ಒಟ್ಟು ಆಹಾರದ ಆವಶ್ಯಕತೆ ಎಷ್ಟಿದೆ ಎಂದರೆ 150 ಲಕ್ಷ ಟನ್. ಈ ಗುರಿಯನ್ನು ಸಾಧಿಸಿದರೆ ಮಾತ್ರ ಕರ್ನಾಟಕ ರಾಜ್ಯದ ಜನತೆಗೆ ಊಟ ಕೊಡುವುದಕ್ಕೆ ಸಾಧ್ಯವಿದೆ. ಇವತ್ತು ರಾಜ್ಯದಲ್ಲಿ 65ರಿಂದ 70 ಲಕ್ಷ ಟನ್ ಉತ್ಪಾದನೆ ಮಾತ್ರವಿದೆ. ಎರಡು ಸಾವಿರ ವರ್ಷಗಳಿಗೆ ಕೇವಲ ಐದು ವರ್ಷಗಳು ಮಾತ್ರ ಬಾಕಿ ಉಳಿದಿದೆ. ನಾವು 150 ಲಕ್ಷ ಟನ್ ಉತ್ಪಾದನೆ ಮಾಡಿದರೆ ಮಾತ್ರ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಗಳಾಗುವುದಕ್ಕೆ

ಸಾಧ್ಯವಿದೆ. ಇದನ್ನು ಸಾಧಿಸಬೇಕಾದರೆ ಬರೀ ರಸಗೊಬ್ಬರಕ್ಕೆ ಸಬ್ಸಿಡಿ ಕೊಡುವುದರಿಂದ ಸಾಧ್ಯವಿಲ್ಲ. ರಸಗೊಬ್ಬರಗಳಿಗೆ ಸಬ್ಸಿಡಿ ಕೊಡಬೇಕು ಅದಕ್ಕೆ ನನ್ನ ವಿರೋಧವಿಲ್ಲ. ಈಗಿರತಕ್ಕಂಥ ಪರಿಸ್ಥಿತಿಯಲ್ಲಿ ಕೊಡಬೇಕಾಗುತ್ತದೆ, ಅದೊಂದೇ ಹೆಚ್ಚು ಮಾಡುತ್ತವೆಂದರೆ ಅದು ಖಂಡಿತಾ ಸಾಧ್ಯವಿಲ್ಲ. ಅದನ್ನು ಮೂಲಭೂತ ಪ್ರಶ್ನೆಯನ್ನಾಗಿ ತೆಗೆದುಕೊಳ್ಳಬೇಡಿ. ಕೆಲವು ಅನಿವಾರ್ಯ ಕಾರಣಗಳಿಂದ ತಾತ್ಕಾಲಿಕ ಪರಿಹಾರ ಅಷ್ಟೆ ಆಗುತ್ತದೆ.

3.10 ಪಿ.ಎಂ.

ಇನ್ನೊಂದು ಬಹಳ ಮುಖ್ಯವಾದ ಬೆಳವಣಿಗೆಯ ಅಂಶವೆಂದರೆ ಕೈಗಾರಿಕಾ ರಂಗ. ಇದರ ಬಗ್ಗೆ ಬಜೆಟ್‌ನಲ್ಲಿ ಏನು ಹೇಳಿದ್ದಾರೆಂಬುದನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ.

"ಕೈಗಾರಿಕಾ ಮತ್ತು ಸೇವಾ ವಲಯಗಳಲ್ಲಿ ಬಂಡವಾಳ ತೊಡಗಿಸುವಂಥ ಹಿತಕರ ವಾತಾವರಣ ನಿರ್ಮಿಸಲು ರಾಜ್ಯ ಸರ್ಕಾರವು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ."

ಅಂದರೆ ಇದರ ಅರ್ಥ ಏನೆಂಬುದು ನನಗೆ ಅರ್ಥವಾಗುತ್ತಿಲ್ಲ. ಹಿತಕರ ವಾತಾವರಣ ಎಂದರೆ ಎರಡು ದೃಷ್ಟಿ ಬರುತ್ತದೆ. ನನ್ನ ದೃಷ್ಟಿ ಬೇರೆ. ಹಿತಕರ ವಾತಾವರಣ ಎಂದರೆ, ಯಾವುದೇ ಒಂದು ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕ ಒಬ್ಬ ಕಾರ್ಮಿಕ ತನ್ನ ಸಂಬಳವನ್ನು ಜಾಸ್ತಿ ಮಾಡುವಂತೆ ಕೇಳಬಾರದು. ನೌಕರರು ಸಂಬಳ, ಡಿ.ಎ, ಮುಂತಾದ್ದನ್ನು ಜಾಸ್ತಿ ಮಾಡುವಂತೆ ಕೇಳಬಾರದು. ಅದಕ್ಕೋಸ್ಕರ ಅವರು ಹೋರಾಟಕ್ಕೆ ಇಳಿಯಬಾರದು. ಆಗ ಮಾತ್ರ ಹಿತಕರವಾದ ವಾತಾವರಣ ನಮ್ಮ ಕರ್ನಾಟಕದಲ್ಲಿ ಕೈಗಾರಿಕಾ ರಂಗದಲ್ಲಿ ಬರುತ್ತದೆ. ಯಾವಾಗ ಕಾರ್ಮಿಕರು ತಮ್ಮ ಸಂಬಳವನ್ನು ಜಾಸ್ತಿ ಕೇಳುತ್ತಾ ಸ್ಟ್ರೈಕ ಮಾಡುತ್ತಾರೆ ಆಗಿನ ಹಿತಕರ ವಾತಾವರಣ ಬೇರೆ ಆಗುತ್ತದೆ. ಆದ್ದರಿಂದ ನೀವು ಈ ಪ್ರಯತ್ನದಲ್ಲಿದ್ದೀರೆಂದು ಇದರಲ್ಲಿರತಕ್ಕ ಭಾವಾರ್ಥ ಎಂದು ನನ್ನ ಭಾವನೆ. ಆದರೆ ನಿಮ್ಮ ಅರ್ಥ ಏನೆಂದು ನನಗೆ ಗೊತ್ತಿಲ್ಲ. ಹಾಗೆಯೇ ಇನ್ನೂ ಮುಂದುವರೆದು ತಾವು ಏನು ಹೇಳುತ್ತಿದ್ದೀರೆಂದರೆ,

"ಕಳೆದ 3 ತಿಂಗಳ ಅವಧಿಯಲ್ಲಿ ಉನ್ನತಾಧಿಕಾರ ಸಮಿತಿಯು 1768.86 ಕೋಟಿ ರೂ.ಗಳ ಪ್ರಾಸ್ತಾವಿಕ ಬಂಡವಾಳ ಹೂಡಿಕೆಯನ್ನುಳ್ಳ ಕೈಗಾರಿಕಾ ಯೋಜನೆಗಳಿಗೆ ಮಂಜೂರಾತಿ ನೀಡಿದೆ ಸರ್ಕಾರವು ಈ ಪ್ರಾಸ್ತಾವಿತ ಬಂಡವಾಳ ಹೂಡಿಕೆಗಳು ನನಸ್ಸಾಗುವಂತೆ ಮಾಡಲು ಪ್ರಯತ್ನಿಸುತ್ತಿದೆ."

ಇದು ಹೇಗೆ? "ರಾಜ್ಯದಲ್ಲಿ ಬೃಹತ್ ಪ್ರಮಾಣದಲ್ಲಿ ಕಬ್ಬಿಣದ ಅದುರಿನ ನಿಕ್ಷೇಪ ಇದೆ. ಇದು ಉಕ್ಕು ಸ್ಥಾವರಗಳನ್ನು ಸ್ಥಾಪಿಸಲು ಅನೇಕ ಖಾಸಗಿ ಕಂಪನಿಗಳನ್ನು ಆಕರ್ಷಿಸಿದೆ."

ಅಂದರೆ ನೀವು ಖಾಸಗಿ ಕಂಪೆನಿಗಳನ್ನು ಆಕರ್ಷಿಸಿ ಕೈಗಾರಿಕಾ ರಂಗದಲ್ಲಿ ಉತ್ಪಾದನೆಯನ್ನು ಮಾಡುವುದಕ್ಕೆ ಹೊರಟಿದ್ದೀರಿ ಎಂಬುದು ಇದರ ಅರ್ಥ. ಆದರೆ, ಇಲ್ಲಿ ತಾವು ಏನು ಹೇಳುತ್ತಿದ್ದೀರಿ ನರಸಿಂಹರಾಯರ ಸರ್ಕಾರದ ಹೊಸ ಆರ್ಥಿಕ ಧೋರಣೆಯಿಂದಾಗಿ ಕೈಗಾರಿಕೆ ಹಿಂಜರಿತವಾಗಿದೆ ಎಂದು ಹೇಳಿದ್ದೀರಿ. ನರಸಿಂಹರಾವ್ ಸರ್ಕಾರದ ಹೊಸ ಆರ್ಥಿಕ ಧೋರಣೆಯ ಮೂಲ ಪಾಠವೇ ಎಲ್ಲವನ್ನೂ ಖಾಸಗೀಕರಣ ಮಾಡತಕ್ಕದ್ದು. ನರಸಿಂಹರಾವ್ ಸರ್ಕಾರದ ಹೊಸ ಆರ್ಥಿಕ ಧೋರಣೆಯನ್ನು ವಿರೋಧ ಮಾಡುತ್ತೇವೆಂದು ಹೇಳುವ ನೀವು ಇನ್ನೊಂದು ಕಡೆ ನೀವು ನಿಮ್ಮದೇ ರಾಜ್ಯದಲ್ಲಿ

ಖಾಸಗೀಕರಣವನ್ನು ಪ್ರೋತ್ಸಾಹಿಸಲು ಬೇಕಾಗಿರತಕ್ಕ ಎಲ್ಲಾ ಪ್ರಯತ್ನವನ್ನೂ ನಾವು ಮಾಡುತ್ತೇವೆಂದು ಹೇಳಿದ್ದೀರಿ. ಹಾಗಾದರೆ ಇದು ಸವಿವರವಾದ ಭಾಷಣ ಎಂದು ಹೇಳಬೇಕೋ ಅಥವಾ ನರಸಿಂಹರಾಯ ಸರ್ಕಾರ ಹೊಸ ಆರ್ಥಿಕ ನೀತಿಗೂ ನಿಮಗೂ ನೇರವಾದ ಸಂಬಂಧ ಇದೆ ಎಂದು ಹೇಳಬೇಕೋ ಎಂಬುದಕ್ಕೆ ನೀವೇ ಉತ್ತರವನ್ನು ಕೊಡಿ. ನಮ್ಮ ರಾಜ್ಯದಲ್ಲಿ ಕೈಗಾರಿಕಾ ಪರಿಸ್ಥಿತಿ ಹೇಗಿದೆ? ಈ ಕೈಗಾರಿಕಾ ಪರಿಸ್ಥಿತಿಯನ್ನು ತಾವು ನೋಡಬೇಕು. 1991ರಲ್ಲಿ ಖಾಸಗೀ ಕಂಪೆನಿಗಳು ಮುಖ್ಯವಾಗಿ ವಿದೇಶೀ ಬಂಡವಾಳವನ್ನು ಆಕರ್ಷಿಸುವುದಕ್ಕಾಗಿ ಎಲೆಕ್ಟ್ರಾನಿಕ್, ಟೆಲಿ-ಕಮ್ಯುನಿಕೇಷನ್, ಮಾಹಿತಿ ತಂತ್ರಜ್ಞಾನ, ಕೃಷಿ, ಆಹಾರ ಸಂಸ್ಕರಣ, ಚರ್ಮ, ಕೈಗಾರಿಕೆ, ಸಿದ್ಧವಸ್ತುಗಳು, ಔಷಧಿಗಳು, ರೇಷ್ಮೆ ಮುಂತಾದ ಕೈಗಾರಿಕೆಗಳನ್ನು ಮುಖ್ಯವಾದುವೆಂದು ಗುರ್ತಿಸಿದೆ. ಆದರೆ ಇದರ ಬೆಳವಣಿಗೆ ಹೇಗಾಗಿದೆ? ಇದರ ಬೆಳವಣಿಗೆಯ ಬಗ್ಗೆ ತಾವು ಸ್ವಲ್ಪ ಗಮನಹರಿಸಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಯ ಇಡೀ ಭಾರತದಲ್ಲಿ 3ನೇ ಸ್ಥಾನದಲ್ಲಿತ್ತು. ಇವತ್ತು ಅದು ಕೈಗಾರಿಕಾ ಬೆಳವಣಿಗೆಯ ಸಾಲಿನಲ್ಲಿ 9ನೇ ಸ್ಥಾನಕ್ಕೆ ಇಳಿದಿದೆ. ಮೊದಲು ನಮ್ಮ ಕರ್ನಾಟಕದಲ್ಲಿ 724 ದೊಡ್ಡ ಮತ್ತು ಮಧ್ಯಮ ಕೈಗಾರಿಕೆಗಳು ಇದ್ದವು. ಅದರ ಒಟ್ಟು ಬಂಡವಾಳ 6268 ಕೋಟಿ ರೂ. ಇದರಲ್ಲಿ ಒಟ್ಟು 2.77 ಸಣ್ಣ ಕೈಗಾರಿಕೆಗಳಿದ್ದು ಅವುಗಳ ಒಟ್ಟು ಬಂಡವಾಳ 1040 ಕೋಟಿ ರೂಪಾಯಿ. ಅಂದರೆ ದೊಡ್ಡ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳು 6368 ಕೋಟಿ ರೂ. ಮತ್ತು ಸಣ್ಣ ಕೈಗಾರಿಕೆಗಳು 1040 ಕೋಟಿ ರೂ.ಗಳ ಬಂಡವಾಳದ ಕೈಗಾರಿಕೆಗಳಲ್ಲಿ 7.8 ಲಕ್ಷ ಕಾರ್ಮಿಕರಿಗೆ ಕೆಲಸ ನೀಡಲಾಗುತ್ತಿತ್ತು. ಆದರೆ ಆ ಪರಿಸ್ಥಿತಿ ಈಗೇನಾಗಿದೆ 1,37,407 ಕೈಗಾರಿಕೆಗಳ ಒಟ್ಟು ಬಂಡವಾಳ 1,472.64 ಕೋಟಿ ರೂ. ಆದರೆ ಇವು ಎಷ್ಟು ಜನರಿಗೆ ಕೆಲಸ ಕೊಟ್ಟಿವೆ ಎಂದರೆ 9.33 ಲಕ್ಷ ಜನರಿಗೆ ಮಾತ್ರ. ಇದರ ಪರಿಣಾಮ ಏನಾಗುತ್ತದೆಂದು ತಾವು ಯೋಚನೆ ಮಾಡುತ್ತೀರಿ? ಕೈಗಾರಿಕಾ ಬೆಳವಣಿಗೆ ಇವತ್ತು ಸಂಪೂರ್ಣವಾಗಿ ಸ್ಥಗಿತವಾಗುತ್ತಿದೆ, ಕೆಳಕ್ಕೆ ಬರುತ್ತಿದೆ. ಕೈಗಾರಿಕಾ ರಂಗದಲ್ಲಿ 3ನೇ ಸ್ಥಾನದಲ್ಲಿದ್ದ ನಮ್ಮ ಕರ್ನಾಟಕ ರಾಜ್ಯ ಇವತ್ತು 9ನೇ ಸ್ಥಾನಕ್ಕೆ ಇಳಿದಿದೆ. ಮತ್ತೆ 3ನೇ ಸ್ಥಾನವನ್ನು ನೀವು ಕೈಗಾರಿಕಾ ರಂಗದಲ್ಲಿ ಪಡೆಯುವುದು ಕನಸಿನ ಮಾತು. ಏಕೆಂದರೆ ಇದರ ಬಗ್ಗೆ ನಿಮ್ಮಲ್ಲಿ ಯಾವುದೇ ಕಾರ್ಯಕ್ರಮವೂ ಇಲ್ಲ. ಈಗಿರತಕ್ಕ ಕೈಗಾರಿಕೆಗಳನ್ನು ನೀವು ಕನಿಷ್ಠವಾದರೂ ಉಳಿಸಿಕೊಳ್ಳಬಹುದು. ಆ ಕೈಗಾರಿಕೆಗಳಲ್ಲಿ ಉತ್ಪಾದನೆ ಮಾಡುವುದಕ್ಕೆ ನಿಮ್ಮ ಹತ್ತಿರ ಇರತಕ್ಕ ಒಂದೇ ಒಂದು ಮಂತ್ರ, ಅಥವಾ ಔಷಧಿ ಎಂದರೆ ಅವನ್ನೆಲ್ಲಾ ಖಾಸಗೀಕರಣ ಮಾಡತಕ್ಕದ್ದು ಅಷ್ಟೆ. ಈ ರೀತಿ ಖಾಸಗೀಕರಣವನ್ನು ಮಾಡುವುದರಿಂದ ಎಲ್ಲಾ ಸಮಸ್ಯೆಗಳೂ ಪರಿಹಾರವಾಗುತ್ತವೆಂಬ ಅಭಿಪ್ರಾಯಕ್ಕೆ ಬಂದಿರುವುದಕ್ಕೆ ಕಾರಣವೆಂದರೆ ಇವತ್ತು ನಮ್ಮಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತಿದೆ. ಏಕೆಂದರೆ ಖಾಸಗೀ ಕಂಪೆನಿಗಳು ಉದ್ಯೋಗಾವಕಾಶಗಳನ್ನು ಹೆಚ್ಚು ಮಾಡುವುದಿಲ್ಲ. ನಮ್ಮ ಕರ್ನಾಟಕ ರಾಜ್ಯದ ಮಟ್ಟಿಗಾದರೂ ತಾವು ಅಂಕಿಅಂಶಗಳನ್ನು ತೆಗೆದು ನೋಡಬೇಕು. ಸಾರ್ವಜನಿಕ ಉದ್ದಿಮೆಗಳಲ್ಲಿ ಉದ್ಯೋಗಾವಕಾಶವನ್ನು ಎಷ್ಟು ಸೃಷ್ಟಿ ಮಾಡಿವೆ, ಖಾಸಗೀ ಕೈಗಾರಿಕೆಗಳು ಎಷ್ಟು ಉದ್ಯೋಗವಕಾಶವನ್ನು ಸೃಷ್ಟಿ ಮಾಡಿವೆ, ಎಂಬುದನ್ನು ತಾವು ಲೆಕ್ಕ ಹಾಕಿ ನೋಡಿದರೆ, ಖಾಸಗೀ ಕೈಗಾರಿಕಾ ಸಂಸ್ಥೆಗಳು ಎಷ್ಟು ಉದ್ಯೋಗಾವಕಾಶಗಳನ್ನು ಸೃಷ್ಟಿ ಮಾಡಿವೆಯೋ ಅದರ 52 ಪರ್ಸೆಂಟ್‌ನಷ್ಟು ಉದ್ಯೋಗವಕಾಶಗಳನ್ನು ಸೃಷ್ಟಿ ಮಾಡಿವೆ. ಆದರೆ ಕೈಗಾರಿಕಾ ರಂಗದಲ್ಲಿ ಖಾಸಗೀಕರಣದ ಧೋರಣೆಯನ್ನು ಅನುಸರಿಸಿದ್ದರಿಂದ ನಮ್ಮ ಕರ್ನಾಟಕ ರಾಜ್ಯ ಹಿಂದೆಂದೂ ಕಾಣದೆ

ಇದ್ದಷ್ಟು ನಿರುದ್ಯೋಗ ಸಮಸ್ಯೆಯನ್ನು ಕಾಣಬೇಕಾಗುತ್ತದೆ. ಆ ನಿರುದ್ಯೋಗ ಸಮಸ್ಯೆ ನಿವಾರಣೆಗೆ ನಿಮ್ಮಲ್ಲಿ ಯಾವುದೇ ರೀತಿಯ ಕಾರ್ಯಕ್ರಮವಿಲ್ಲ. ಅಂದರೆ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಯಾವುದೇ ಕಾರ್ಯಕ್ರಮವನ್ನೂ ಹಾಕಿಕೊಳ್ಳದೇ ಇರತಕ್ಕ ಸರ್ಕಾರ ಶೇಕಡ 48 ರಷ್ಟು ಬಡತನ ರೇಖೆಯಿಂದ ಕೆಳಗೆ ಇರುವಂಥ ಜನರಿಗೆ ಈ ರಾಜ್ಯದಲ್ಲಿ ನಾವು ಬಡತನ ನಿವಾರಣೆ ಮಾಡುತ್ತೇವೆಂದು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ನಿಮ್ಮ ಕಾರ್ಯಕ್ರಮ ಏನು ಸ್ವಾಮಿ? ನೀವು ಹೇಗೆ ಬಡತನವನ್ನು ನಿವಾರಣೆ ಮಾಡುತ್ತೀರಿ? ನೀವು ಹೇಳುತ್ತಿರುವುದು ಸ್ವಯಂ ಉದ್ಯೋಗ. ಯಾವ ವಿಧವಾದ ಸ್ವಯಂ ಉದ್ಯೋಗವನ್ನು ಕೊಡುತ್ತೀರಿ? ಸ್ವಯಂ ಉದ್ಯೋಗದ ಹೆಸರಿನಲ್ಲಿ ನೀವು ಏನು ಕೊಟ್ಟಿದ್ದೀರಿ? ಅದು ನಮ್ಮ ಕರ್ನಾಟಕ ರಾಜ್ಯದಲ್ಲಿ ಯಾವ ರೀತಿ ಇಂಪ್ಲಿಮೆಂಟ್ ಆಗಿದೆ? ಯಾವ ಸ್ಥಿತಿಗೆ ಹೋಗಿದೆ ಎಂಬುದನ್ನು ತಾವು ನೋಡಬೇಕು. ಸ್ವಯಂ ಉದ್ಯೋಗದ ಹೆಸರಿನಲ್ಲಿ ಕೇಂದ್ರ ಸರ್ಕಾರದ ಒಂದು ಯೋಜನೆ ಇದೆ. ಅವರೂ ಕೂಡ ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹ ನೀಡಲು ಹಣವನ್ನು ಕೊಡುತ್ತಿದ್ದಾರೆ. ಅದರಲ್ಲಿ ಎಷ್ಟು ಕೋಟಿ ರೂ.ಗಳ ಅವ್ಯವಹಾರವಾಗಿದೆ, ಸ್ವಯಂ ಉದ್ಯೋಗದ ಹೆಸರಿನಲ್ಲಿ ಉತ್ಪಾದನೆಯನ್ನು ಎಷ್ಟು ಹೆಚ್ಚು ಮಾಡಿದ್ದಾರೆಂಬುದನ್ನು ನೋಡಿದರೆ ತಮಗೇ ಗೊತ್ತಾಗುತ್ತದೆ. ಅಂಕಿಅಂಶಗಳ ಮೂಲಕ ಗಮನಿಸಿದರೆ ತಮಗೇ ತಿಳಿಯುತ್ತದೆ. ನೀವು ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದರೆ ನಿಮಗಿರತಕ್ಕದ್ದು ಕೇವಲ ಎರಡೇ ಎರಡು ಮಾರ್ಗ. ಇಲ್ಲಿ ಎರಡು ರೀತಿಯ ನಿರುದ್ಯೋಗ ಸಮಸ್ಯೆ ಇದೆ. ವಿದ್ಯಾವಂತ ನಿರುದ್ಯೋಗಿಗಳು, ಅವಿದ್ಯಾವಂತ ನಿರುದ್ಯೋಗಿಗಳು. ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಸೃಷ್ಟಿಮಾಡುವುದಕ್ಕೇ ಒಂದು ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಅವಿದ್ಯಾವಂತ ನಿರುದ್ಯೋಗಿಗಳು ಹಳ್ಳಿಗಾಡಿನಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಅವರಿಗೆ ಕೆಲಸ ಸಿಕ್ಕಬೇಕಾದರೆ ಇರತಕ್ಕ ಒಂದೇ ಒಂದು ದಾರಿ ಎಂದರೆ, ಅವರಿಗೆ ಕೃಷಿಯೋಗ್ಯವಾದ ಭೂಮಿಯನ್ನು ನೀಡತಕ್ಕದ್ದು. ಆ ಭೂಮಿಯಲ್ಲೂ ಕೂಡ ಎರಡು ರೀತಿಯ ಭೂಮಿ ಇದೆ. ಒಂದು ಕೃಷಿಗೆ ಯೋಗ್ಯವಾದ ಸರ್ಕಾರೀ ಭೂಮಿ, ಇನ್ನೊಂದು ಕೃಷಿಗೆ ಯೋಗ್ಯವಾಗಿರತಕ್ಕ ಭೂ ಮಾಲೀಕರ ಹಿಡಿತದಲ್ಲಿರತಕ್ಕ ಹೆಚ್ಚುವರಿ ಭೂಮಿ. ಭೂಮಾಲೀಕರ ಹಿಡಿತದಲ್ಲಿರತಕ್ಕ ಹೆಚ್ಚುವರಿ ಕೃಷಿ ಭೂಮಿಯನ್ನು ಅವಿದ್ಯಾವಂತ ಹಾಗೂ ಹಳ್ಳಿಗಾಡಿನಲ್ಲಿರತಕ್ಕ ನಿರುದ್ಯೋಗಿಗಳಿಗೆ ಹಂಚತಕ್ಕದ್ದು ಒಂದು, ಮತ್ತು ಸರ್ಕಾರೀ ಹತೋಟಿಯಲ್ಲಿರತಕ್ಕ ಕೃಷಿ ಯೋಗ್ಯ ಭೂಮಿಯನ್ನು ಹಂಚತಕ್ಕದ್ದು ಇನ್ನೊಂದು. ಈಗಾಗಲೇ ಭೂ ಸುಧಾರಣೆ ಕಾಯಿದೆಗೆ ತಿದ್ದುಪಡಿಯನ್ನು ತರುತ್ತೇವೆಂದು ಹೇಳುತ್ತಿದ್ದೀರಿ. ಬಹುಶಃ ಅದು ಈಗಾಗಲೇ ಆ ತಿದ್ದುಪಡಿ ತಯಾರಾಗಿರಬಹುದು. ಕರ್ನಾಟಕದಲ್ಲಿ ಭೂಸುಧಾರಣಾ ಕಾಯಿದೆಯನ್ನು ಜಾರಿಗೆ ತಂದಂಥವರು ದಿವಂಗತ ದೇವರಾಜ ಅರಸರವರು. ಅವರಲ್ಲಿ ಎಷ್ಟೇ ಲೋಪದೋಷಗಳಿದ್ದರೂ ಕೂಡ ಕರ್ನಾಟಕದಲ್ಲಿ ನಿಜವಾಗಿ ಕೃಷಿ ಬೆಳವಣಿಗೆಗೆ ಪ್ರತೋತ್ಸಾಹ ನೀಡಿದವರು, ಅದನ್ನು ಅರ್ಥಮಾಡಿಕೊಂಡವರು ಎಂದರೆ ದಿವಂಗತ ದೇವರಾಜ ಅರಸರವರು. ಭೂ ಸುಧಾರಣಾ ಕಾಯಿದೆಯನ್ನು ಜಾರಿಗೆ ತಂದ ಉದ್ದೇಶವಾದರೂ ಏನು? ಭೂ ಮಾಲೀಕರ ಕೈಯಲ್ಲಿದ್ದ ಹೆಚ್ಚುವರಿ ಭೂಮಿಯನ್ನು ಉಳುವವನಿಗೇ ಕೊಡಬೇಕೆಂಬ ಉದ್ದೇಶ. ಇವತ್ತು ಆ ಭೂ ಪರಿಮಿತಿ ಕಾಯಿದೆಯನ್ನೇ ಬದಲಾವಣೆ ಮಾಡುತ್ತಿದ್ದೀರಿ. ಎರಡನೆಯದಾಗಿ

1978ನೇ ಇಸ್ವಿಯಲ್ಲಿ ಭೂಪರಿಮಿತಿ ಕಾಯಿದೆ ಅಡಿಯಲ್ಲಿ ಭೂಮಿಯನ್ನು ಹಂಚತಕ್ಕ ಕೆಲಸ ಸ್ಥಗಿತವಾಯಿತು. ಈಗ ಪರಿಸ್ಥಿತಿ ಏನಾಗಿದೆ, 78ನೇ ಇಸವಿ ಕಳೆದ ನಂತರ ಇವತ್ತು ಹೊಸದಾಗಿ ಶ್ರೀಮಂತ ಭೂ ಮಾಲೀಕರು ಹುಟ್ಟಿಕೊಳ್ಳುತ್ತಿದ್ದಾರೆ. ಇವತ್ತು ಶ್ರೀಮಂತ ಕುಟುಂಬಕ್ಕೆ ನೂರಾರು ಎಕರೆ ಭೂಮಿ ಇದೆ. ಅವರು ಭೂ ಪರಿಮಿತಿ ವ್ಯಾಪ್ತಿಯಲ್ಲಿ ಬರುತ್ತಿಲ್ಲ. ಇವತ್ತು ಕೃಷಿಯಲ್ಲಿ ಮೆಕ್ಯಾನೈಸೇಷನ ಜಾಸ್ತಿಯಾಗಿ ಅತ್ಯಾಧುನಿಕ ಯಂತ್ರಗಳನ್ನು ಬಳಸುವುದರ ಮೂಲಕ ಕೃಷಿಯನ್ನು ಮಾಡುವ ವ್ಯವಸ್ಥೆ ಜಾರಿಗೆ ಬಂದಿರುವುದರಿಂದ ಟೆನೆನ್ಸಿ ಪ್ರಶ್ನೆ ಕಡಿಮೆಯಾಗುತ್ತಿದೆ. ಆದರೆ ಭೂಮಿ ಮಾತ್ರ ಕೇಂದ್ರಿಕೃತ ಆಗುತ್ತಲೇ ಇದೆ. ಕೇಂದ್ರಿಕೃತ ಭೂಮಿಯನ್ನು ವಿಕೇಂದ್ರೀಕರಣ ಮಾಡಿ ಬಡವರಿಗೆ ಹಂಚತಕ್ಕ, ಉಳುವವನಿಗೇ ಭೂಮಿ ಎನ್ನತಕ್ಕ ನೀತಿ ಈ ಕರ್ನಾಟಕ ಸರ್ಕಾರದ ಮುಂದಿಲ್ಲ. ಈ ರೀತಿ ಇದ್ದಾಗ ಹಳ್ಳಿಗಾಡಿನಲ್ಲಿರತಕ್ಕ ನಿರುದ್ಯೋಗ್ಯ ಸಮಸ್ಯೆಯನ್ನು ಹೇಗೆ ಪರಿಹಾರ ಮಾಡುತ್ತೀರಿ? ನಿರುದ್ಯೋಗ ಸಮಸ್ಯೆ ಅತಿ ಹೆಚ್ಚು ಇರತಕ್ಕದ್ದು ಹಳ್ಳಿಗಾಡಿನಲ್ಲಿ. ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಕರ್ನಾಟಕ ರಾಜ್ಯದಲ್ಲಿ ಒಂದು ಕೋಟಿ50 ಲಕ್ಷದ ವರೆಗೆ ಇದೆ. ಅದಕ್ಕಿಂತ ಹೆಚ್ಚು ಹಳ್ಳಿಗಾಡಿನಲ್ಲಿ ಅವಿದ್ಯಾವಂತರಿದ್ದಾರೆ. ಅವರಿಗೆ ಉದ್ಯೋಗ ಕೊಡಬೇಕೆಂದರೆ ಭೂಮಿ ಹಂಚುವುದು ಬಿಟ್ಟರೆ ಬೇರೆ ಯಾವುದೇ ರೀತಿಯಲ್ಲಿ ಅವರ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನೀವು ಭೂಮಿಯನ್ನು ಹಂಚುವ ಕೆಲಸವನ್ನು ತಕ್ಷಣ ಪ್ರಾರಂಭ ಮಾಡಬೇಕೆಂದು ನಾನು ಸರ್ಕಾರಕ್ಕೆ ಪ್ರಾರ್ಥಿಸುತ್ತೇನೆ. ಮಾನ್ಯ ಬಂಗಾರಪ್ಪನವರ ಸರ್ಕಾರ ಇದ್ದಾಗ ಅಕ್ರಮ ಸಾಗುವಳಿಯನ್ನು ಸಕ್ರಮ ಮಾಡಬೇಕೆಂಬ ಕಾರ್ಯಕ್ರಮವನ್ನು ಜಾರಿಗೆ ತಂದರು. ಅದಕ್ಕೆ ಲ್ಯಾಂಡ್ ಗ್ರ್ಯಾಂಟ್ ಕಮಿಟಿಗಳು ಎಂದು ತಾಲ್ಲೂಕು ಮಟ್ಟದಲ್ಲಿ ಮಾಡಿದರು. ಇದರ ಬಗ್ಗೆ ತಾವು ಇನ್ನೂ ಗಮನ ಹರಿಸದೆ ಇವತ್ತು ಅವು ಕೆಲಸ ಮಾಡದೆ ಹಾಗೆ ನಿಂತಿವೆ. ಬರೀ ಕಮಿಟಿ ಹೇಗೆ ಮಾಡಬೇಕು ಎಂಬ ಬಗ್ಗೆ ನಿಮ್ಮ ಗಮನ ಇದೆಯೇ ಹೊರತು ಭೂಮಿ ಹಂಚಿಕೆ ಮಾಡುವುದು ಹೇಗೆ ಅದಕ್ಕೆ ಏನು ಕಾರ್ಯಕ್ರಮ ಇದೆ ಅದಕ್ಕೆ ಯಾವ ರೀತಿ ನೀವು ಧೋರಣೆ ಅನುಸರಿಸುತ್ತೀರಿ ಎಂಬ ಬಗ್ಗೆ ಏನೂ ಇದರಲ್ಲಿ ಇಲ್ಲ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿನ ಅವಿದ್ಯಾವಂತ ನಿರುದ್ಯೋಗಿಗಳಿಗೆ ನೀವು ಕೆಲಸ ಕೊಡುವುದರ ಬದಲು ಗ್ರಾಮೀಣ ಪ್ರದೇಶದಲ್ಲಿ ಉತ್ಪಾದನೆ ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಲ್ಲಿ ಕೃಷಿಯಲ್ಲಿ ಉತ್ಪಾದನೆ ಹೆಚ್ಚು ತರುವುದಕ್ಕೆ ಹೋಗುವುದಿಲ್ಲ. ಕೈಗಾರಿಕಾ ರಂಗದಲ್ಲಿ ಯಾವ ರೀತಿ ಇದೆ ಆ ರೀತಿ ಖಾಸಗಿ ರಂಗದಲ್ಲೂ ಉದ್ಯೋಗಾವಕಾಶ ಹೆಚ್ಚು ಮಾಡುವುದಕ್ಕೆ ಖಂಡಿತಾ ಸಾಧ್ಯವಿಲ್ಲ. ನಿರುದ್ಯೋಗ ಸಮಸ್ಯೆ ವಿಪರೀತ ಬೆಳೆಯುತ್ತಿದೆ. ನೀವು ತೆರಿಗೆಗಳನ್ನು ಹೆಚ್ಚು ಮಾಡುವುದಕ್ಕೆ ಹಲವಾರು ಕಾರಣಗಳನ್ನು ಕೊಟ್ಟಿದ್ದೀರಿ. ನಮ್ಮ ವೆಚ್ಚ ಹೆಚ್ಚಾಗುತ್ತಿದೆ. 11 ಸಾವಿರದ 1 ಕೋಟಿ ರೂಪಾಯಿ ನಮ್ಮ ವೆಚ್ಚ ಏರಿದೆ. ಇದು ಸರ್ಕಾರದ ವೆಚ್ಚ. ಇನ್ನೊಂದು ಕಡೆ ನಮ್ಮ ಆದಾಯ ಎಷ್ಟಿದೆ. ನಮ್ಮ ಆದಾಯ 10,607.86 ಕೋಟಿ ಇದೆ. ಆದಾಯ ಕಡಿಮೆ ಇದೆ. ಖರ್ಚು ಜಾಸ್ತಿ ಇದೆ. ನಿಮ್ಮ ಖರ್ಚು ಏನು ಇದೆ ಎಂದು ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. ಈಗ ನನ್ನ ಹತ್ತಿರ ಒಂದು ವರ್ಷದ ಹಿಂದಿನ ಅಂಕಿಅಂಶ ಇರಬಹುದು. ನಮ್ಮ ಕರ್ನಾಟಕ ರಾಜ್ಯದ ಒಟ್ಟು ಆದಾಯದಲ್ಲಿ 32 ಪರ್ಸೆಂಟ್ ಹಣ ಕೇವಲ ಅಧಿಕಾರಿಗಳ ಸಂಬಳ ಸಾರಿಗೆ ಮತ್ತು ಅವರ ಪೆನ್‌ಷನ್‌ಗೇ ಹೋಗುತ್ತಿದೆ. 2427 ಕೋಟಿ ರೂಪಾಯಿ ಇವತ್ತು ಸರ್ಕಾರದ ಅಧಿಕಾರಿಗಳ

ಸಂಬಳ ಮತ್ತು ಪೆನ್‌ಷನ್‌ಗೆ ಹೋಗುತ್ತದೆ ಅಂದರೆ ಒಟ್ಟು ಕರ್ನಾಟಕ ರಾಜ್ಯದ ಜನಸಂಖ್ಯೆಯಲ್ಲಿರತಕ್ಕ ಒಂದು ಪರ್ಸೆಂಟ್ ಜನರಿಗೆ 32 ಪರ್ಸೆಂಟ್ ಆದಾಯ ಹೋಗುತ್ತದೆ. 99 ಪರ್ಸೆಂಟ್‌ಗೆ ಉಳಿದ 68 ಪರ್ಸೆಂಟ್ ಭಾಗ ಖರ್ಚು ಆಗುತ್ತಿದೆ. ಇದರಲ್ಲಿ ಏನಾದರೂ ಲೋಪದೋಷ ಇದೆಯೇ ಎಂದು ಹುಡುಕಬೇಕಾಗಿದೆ. ಒಂದು ಪರ್ಸೆಂಟ್ ಜನರಿಗೆ 32 ಪರ್ಸೆಂಟ್ ಆದಾಯ ಹೋಗತಕ್ಕದ್ದು 99 ಪರ್ಸೆಂಟ್ ಜನರಿಗೆ 68 ಪರ್ಸೆಂಟ್ ಆದಾಯ ಹೋಗತಕ್ಕದ್ದು ಸರಿಯಲ್ಲ. ನಾನು ಖಂಡಿತವಾಗಿ ರಾಜಕೀಯ ಭ್ರಷ್ಟಾಚಾರವನ್ನು ಎಂದೆಂದಿಗೂ ಒಪ್ಪುವುದಿಲ್ಲ. ರಾಜಕಾರಣಿಗಳಿಗೆ ಕನಿಷ್ಟ 5 ವರ್ಷಕ್ಕೆ ಒಂದು ಸಾರಿ ಪರೀಕ್ಷೆ ಇರುತ್ತದೆ. ಅದದರಲ್ಲಿ ಅವರು ತೇರ್ಗಡೆ ಆಗಲೇ ಬೇಕು. ಆದರೆ ಅಧಿಕಾರಿಗಳಿಗೆ ಯಾವುದೇ ಪರೀಕ್ಷೆ ಇಲ್ಲ. ಅವರು ಒಂದು ಸಾರಿ ಕೆಲಸಕ್ಕೆ ಸೇರಿದರೆ ನಿವೃತ್ತಿ ಆಗುವವರೆಗೆ ಯಾವುದೇ ಪರೀಕ್ಷೆ ಇಲ್ಲ. ಏನಾದರೂ ಸರ್ಕಾರ ತೀವ್ರ ಕ್ರಮ ತೆಗೆದುಕೊಂಡರೆ ಸಸ್ಪೆನ್ಷನ್ ಮಾಡಬಹುದು. ಡಿಸ್‌ಮಿಸ್ ಮಾಡಿದರೆ ಕೋರ್ಟ್‌ಗೆ ಹೋಗುತ್ತಾರೆ. ಸಸ್ಪೆಂಡ್ ಮಾಡಿದಾಗ 75 ಪರ್ಸೆಂಟ್ ಸಂಬಳ ಕೊಡಬೇಕೆಂದು ನಿಮ್ಮ ಸರ್ಕಾರದ ನಿಯಮ ಹೇಳುತ್ತದೆ. ಹೀಗೆ ಕೆಲಸ ಮಾಡದೆ ಸಂಬಳ ತೆಗೆದುಕೊಳ್ಳಬಹುದು. ಅದಕ್ಕೆ ಇವರದ್ದೇನು ಆಕ್ಷೇಪಣೆ ಇಲ್ಲ.5 ವರ್ಷಗಳಿಗೊಮ್ಮೆ ರಾಜಾಕಾರಣಿಗಳಿಗೆ ಪರೀಕ್ಷೆ ಇಟ್ಟಿದ್ದೀರಿ. ಅದನ್ನು ನಾನು ಸಂತೋಷವಾಗಿ ಒಪ್ಪಿಕೊಳ್ಳುತ್ತೇನೆ. ಅದರಲ್ಲೇನು ಭಿನ್ನಾಭಿಪ್ರಾಯ ಇಲ್ಲ. ರಾಜಕಾರಣಿಗಳಿಗೆ ಮಾತ್ರ ಪರೀಕ್ಷೆ ಆಗಬೇಕು, ಅಧಿಕಾರಿಗಳಿಗೆ ಬೇಡವೇ, ಇಡೀ ರಾಜ್ಯದ ಆದಾಯದಲ್ಲಿ 32 ಪರ್ಸೆಂಟ್ ಕರಗಿಸುತ್ತಾ ಇರತಕ್ಕ ಇವರಿಗೆ ಯಾವುದೇ ಪರೀಕ್ಷೆ ಇಲ್ಲ. ಉಳಿದ 99 ಪರ್ಸೆಂಟ್ ಜನರಿಗೆ 68 ಪರ್ಸೆಂಟ್ ಕೊಟ್ಟು ಬಡತನ ನಿವಾರಣೆ ಮಾಡುತ್ತೇವೆ, ಖರ್ಚು ಕಡಿಮೆ ಮಾಡುತ್ತೇವೆ, ಆದಾಯ ಹೆಚ್ಚು ಮಾಡುತ್ತೇವೆ ಎಂದು ಹೇಳುತ್ತಾರೆ. ಇವತ್ತು ಒಬ್ಬ ಐಎಎಸ್ ಅಧಿಕಾರಿಗೆ ನಿಮ್ಮ ಸರ್ಕಾರದ ರೂಲ್ಸ್ ಪ್ರಕಾರ ಎಷ್ಟು ಸಂಬಳ, ಅವರಿಗೆ ಸಿಗತಕ್ಕ ಸೌಲಭ್ಯಗಳು ಏನೇನು, ಇವನ್ನೆಲ್ಲ ಲೆಕ್ಕ ಹಾಕಿ ನೋಡಿ, ನಾನು ಸಂಬಳ ಕೊಡಬೇಡಿ ಎಂದು ಹೇಳುತ್ತಿಲ್ಲ. ಕರ್ನಾಟಕ ರಾಜ್ಯದಲ್ಲಿ ಜನರು ಉತ್ಪಾದನೆ ಮಾಡಿದಂಥ ಹಣದಿಂದ ಸಂಬಳ ತೆಗೆದುಕೊಳ್ಳತಕ್ಕ ಆ ಅಧಿಕಾರಿಗಳ ವರ್ತನೆ ಹೇಗಿದೆ? ಐಎಎಸ್ ಅಧಿಕಾರಿಗಳು ಅಂದರೆ ಮೊಗಲ್ ಸಾಮ್ರಾಜ್ಯದ ಅಧಿಕಾರಿಗಳು ಇದ್ದ ಹಾಗೆ. ಅವರಿಗೂ ಕೂಡ ಜನರ ಬಗ್ಗೆ ಕಾಳಜಿ ಇರುತ್ತಿತ್ತು. ಈ ಐಎಎಸ್ ಅಧಿಕಾರಿಗಳು ಎಂದರೆ ಆಕಾಶದಿಂದ ನೇರವಾಗಿ ಬಂದಿದ್ದೇವೆ, ನಮಗಿಂತ ಬುದ್ಧಿವಂತರು ಈ ಜಗತ್ತಿನಲ್ಲಿ ಯಾರೂ ಇಲ್ಲ ಎಂಬ ಮನೋಭಾವನೆ ಅವರಲ್ಲಿ ಇದೆ. ಅವರ ಕ್ವಾಲಿಫಿಕೇಷನ್ ಮೂರು ಅಕ್ಷರ - ಐಎಎಸ್. ಅವರು ಐಎಎಸ ಓದಿರಬಹುದು, ಆದರೆ ಜನರ ಜೀವನವನ್ನು ಓದಲಿಲ್ಲ. ಕರ್ನಾಟಕ ರಾಜ್ಯದ ಭಾರತದ ಜನರ ಜೀವವನ್ನು ಐಎಎಸ್ ಅಧಿಕಾರಿಗಳು ಓದಿಲ್ಲ. ಅವರು ಓದಿದ್ದು ಅಡ್‌ಮಿನಿಸ್ಟ್ರೇಟೀವ್ ಸರ್ವೀಸ್ ಮಾತ್ರ. ಅಡ್‌ಮಿನಿಸ್ಟ್ರೇಟಿವ್ ಸರ್ವೀಸ್ ಓದಿದಾತ ಇಡೀ ರಾಜ್ಯದ ಜನರ ಬೊಕ್ಕಸವನ್ನು ಖಾಲಿ ಮಾಡುತ್ತಿದ್ದಾರೆ. ಆದರೆ ನಾವು ಏನು ಮಾಡುತ್ತಿದ್ದೇವೆ. ಅಧಿಕಾರ ವಿಕೇಂದ್ರೀಕರಣದ ಹೆಸರಿನಲ್ಲಿ ಅಧಿಕಾರಿಗಳನ್ನು ಅಲ್ಲಿ ಇಲ್ಲಿ ಕೂರಿಸುತ್ತಿದ್ದೀರಿ. ಒಂದು ಕಡೆ ಜನರಿಗೆ ಅಧಿಕಾರ ಕೊಡುತ್ತೇವೆಂದು ಹೇಳುತ್ತೀರಿ, ಜನರಿಗೆ ಸರ್ವೋಚ್ಚ ಅಧಿಕಾರ ಕೊಡುತ್ತೇವೆಂದು ಹೇಳುವಾಗ ಬಿ.ಡಿ.ಓ. ಏಕೆ? ಮುಖ್ಯ

ಕಾರ್ಯದರ್ಶಿ ಏಕೆ? ಜಿಲ್ಲಾಧಿಕಾರಿಗಳು ಏಕೆ? ಅಧಿಕಾರ ವಿಕೇಂದ್ರೀಕರಣ ಅಂದರೆ ಇದರಲ್ಲಿ ರಾಜಕೀಯ ಇದೆ. ಏಕೆಂದರೆ ಯಾವುದೇ ಸರ್ಕಾರ ಬಂದಾಗ ಅಧಿಕಾರಿಗಳ ಮುಖಾಂತರ ಎಲ್ಲವನ್ನು ತಿಳಿಸಬೇಕು.

ಅಧ್ಯಕ್ಷರು : ಪಶ್ಚಿಮ ಬಂಗಾಳದಲ್ಲಿ ಐಎಎಸ್ ಅಧಿಕಾರಿಗಳು ಇಲ್ಲವೇ?

ಶ್ರೀ ಜೆ.ಪಿ. ಶ್ರೀರಾಮರೆಡ್ಡಿ : ಐಎಎಸ್ ಅಧಿಕಾರಿಗಳ ಯಾವುದೇ ಪಾತ್ರ ಅಲ್ಲಿ ಇಲ್ಲ. ನೀವು ಬೇಕಾದರೆ ಪರೀಕ್ಷೆ ಮಾಡಬಹುದು. ಐಎಎಸ್ ಅಧಿಕಾರಿಗಳಿಗೆ ಅಲ್ಲಿ ಅಧಿಕಾರ ಕೊಡಲಿಲ್ಲ. ಗ್ರಾಮೀಣ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅವರದ್ದೇನೂ ಪಾತ್ರ ಇಲ್ಲ. ನಜೀರ್‌ಸಾಬ್ ಅವರು ಬೇರೆ ರಾಜ್ಯಗಳಲ್ಲಿ ನೋಡಿಕೊಂಡು ಬಂದು ಕಾಪಿ ಹೊಡೆದದ್ದು ಅದರ ಬಗ್ಗೆ ಯಾರದೇ ಭಿನ್ನಾಭಿಪ್ರಾಯ ಇಲ್ಲ.

(ಗೊಂದಲ)

ನಜೀರ್ ಸಾಬ್ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಅವರ ಬಗ್ಗೆ ನಿಮಗೆಷ್ಟು ಗೌರವ ಇದೆಯೋ ನನಗೂ ಅಷ್ಟೇ ಗೌರವ ಇದೆ. ಭಿನ್ನಾಭಿಪ್ರಾಯ ಖಂಡಿತಾ ಇಲ್ಲ. ದಯವಿಟ್ಟು ನೀವು ಆ ರೀತಿ ತಪ್ಪು ತಿಳಿದುಕೊಳ್ಳಬೇಡಿ. ಗ್ರಾಮೀಣ ಜನರಿಗೆ ಅಧಿಕಾರ ವಿಕೇಂದ್ರಿಕರಣ ಮಾಡುವ ಬಗ್ಗೆ ಮಾತನಾಡುತ್ತಿದ್ದೇನೆ. ವಿಕೇಂದ್ರಿಕರಣ ಆಗಲೇ ಬೇಕು, ವಿಕೇಂದ್ರಿಕರಣ ಆಗಿ ಜನರ ಕೈಗೆ ಅಧಿಕಾರ ಹೋಗಬೇಕು. ಆದರೆ ಇದು ಹೋದಂಥ ವಿಧಾನ ಹೇಗೆ? ಪಾಂಪ್ಲೆಟ್‌ಗಳಲ್ಲಿ ಕರಪತ್ರಗಳಲ್ಲಿ ನೋಡುತ್ತಿದ್ದೇವೆ, ನಿಮ್ಮ ಪವಿತ್ರವಾದ ಮತವನ್ನು ಹಾಕಿ ಅಭ್ಯರ್ಥಿಗಳನ್ನು ಗೆಲ್ಲಿಸಿ ಎಂದು. ಖಂಡಿತ ಪವಿತ್ರ ಮತ ಪಡೆಯಲಿಲ್ಲ. ಅಪವಿತ್ರ ಮತ ಪಡೆದು ಗ್ರಾಮಪಂಚಾಯಿತಿಗಳಲ್ಲಿ ಅಧಿಕಾರಕ್ಕೆ ಬಂದಿದ್ದೀರಿ. ಲಕ್ಷಗಟ್ಟಲೆ ರೂಪಾಯಿ ಖರ್ಚು ಮಾಡಿ ಹೆಂಡ ಸಾರಾಯಿ ಕೊಟ್ಟು ಎಲ್ಲ ಪಕ್ಷದವರೂ ಕೂಡ ಮತ ಪಡೆದಿದ್ದಾರೆ. ಇದು ಖಂಡಿತವಾಗಿ ಪವಿತ್ರವಾದ ಮತ ಅಲ್ಲ. ಅಧಿಕಾರ ವಿಕೇಂದ್ರೀಕರಣ ಮಾಡಿ ಎಲ್ಲರ ಕೈಗೆ ಅಧಿಕಾರ ಕೊಡಲಿಲ್ಲ.

(ಗೊಂದಲ)

ಶ್ರೀ ಎಸ್.ಆರ್. ಲಕ್ಕಯ್ಯ : ನನ್ನದೊಂದು ಕ್ರಿಯಾಲೋಪ ಇದೆ. ಈ ರಾಜ್ಯದಲ್ಲಿ 1989ರ ಚುನಾವಣೆಯಲ್ಲಿ ಸ್ತೋತ ಮೇಲೆ ನಾವು ವನವಾಸಕ್ಕೆ ಹೋದೆವು ಆದರೆ ಅವರು ಮಾಡಬಾರದ್ದು ಮಾಡಿದರು.

(ಗೊಂದಲ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಆಗ ನಮ್ಮ ಸರ್ಕಾರ ಇರಲಿಲ್ಲ. ನೀವು ಯಾರನ್ನೋ ತಿಳಿದುಕೊಂಡು ಮಾತನಾಡುತ್ತಿದ್ದೀರಿ?

ಅಧ್ಯಕ್ಷರು : ಶ್ರೀರಾಮರೆಡ್ಡಿಯವರು ಬಾಗೇಪಲ್ಲಿಯಿಂದ ಕಮ್ಯುನಿಸ್ಟ್ ಪಕ್ಷದ ವತಿಯಿಂದ ಬಂದಿದ್ದಾರೆ. ಅವರು ಕಾಂಗ್ರೆಸ್‌ನವರು ಅಲ್ಲ.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್ : ಸಾರಾಯಿ ಮತ್ತು ಹೆಂಡದ ವಿಚಾರ ಬಂದಾಗ ಏಕೋ ಲಕ್ಷ್ಮಯಯ್ಯನವರ ತಲೆ ತಿರುಗಿದ ಹಾಗೆ ಆಗುತ್ತಿದೆ.

ಅಧ್ಯಕ್ಷರು : ಅವರು ನಿಮ್ಮ ಜಿಲ್ಲೆಯವರು. ಅವರ ವಿಚಾರ ನಿಮಗೇ ಗೊತ್ತು. ನಮಗೇನು ಗೊತ್ತು? ಬೀರೂರಿನವರ ವಿಚಾರ ಚಿಕ್ಕಮಗಳೂರಿನವರಿಗೆ ಗೊತ್ತಾಗಬೇಕೇ ಹೊರತು ನಮಗೆ ಹೇಗೆ ಗೊತ್ತಾಗಬೇಕು? ನಾನು ಮತ್ತು ಶ್ರೀರಾಮ ರೆಡ್ಡಿಯವರು ಕೋಲಾರದವರು. ಮಾತನಾಡಿ ರೆಡ್ಡಿಯವರೇ. ಲಕ್ಷ್ಮಯ್ಯನವರೇ ನೀವು ಕುಳಿತುಕೊಳ್ಳಿ.

ಶ್ರೀ ಎಸ್.ಆರ್. ಲಕ್ಷ್ಮಯ್ಯ : ತಾವು ಇತಿಹಾಸವನ್ನು ನೋಡಬೇಕು.....

ಅಧ್ಯಕ್ಷರು : ಈಗ ಇತಿಹಾಸ ಬೇಡ. ಮೊದಲು ಬಜೆಟ್ ಮುಗಿಸೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ವಿಕೇಂದ್ರೀಕರಣ ಹೆಸರಿನಲ್ಲಿ ಇವತ್ತು ಈ ಹಳ್ಳಿಗಾಡಿನಲ್ಲಿ ಪರಿಸ್ಥಿತಿ ಎಷ್ಟು ಕೆಟ್ಟಿದೆ ಎಂಬುದನ್ನು ದಯವಿಟ್ಟು ಎಲ್ಲರೂ ಗಮನಿಸಬೇಕು. ಇಲ್ಲಿ ಯಾವುದೇ ಪಕ್ಷದ ಪ್ರಶ್ನೆ ಇಲ್ಲ. 12 ವರ್ಷ ವಯಸ್ಸಿನ ಹುಡುಗ ಹುಡುಗಿಯವರು ಕುಡಿಯುವುದನ್ನು ಕಲಿತಿದ್ದಾರೆ ಈ ವಿಕೇಂದ್ರೀಕರಣ ಹೆಸರಿನಲ್ಲಿ. ಇಷ್ಟರಮಟ್ಟಿಗೆ ವಿಕೇಂದ್ರೀಕರಣವನ್ನು ಕೊಲ್ಲಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ನೋಡಿ. ರಾಜಕೀಯವಾಗಿರತಕ್ಕ ಈ ಭ್ರಷ್ಟಾಚಾರವನ್ನು ನಾವು ಸಾಮಾನ್ಯ ಜನತೆಯ ಮುಂದೆ ತೆಗೆದುಕೊಂಡು ಹೋಗಿ ರಾಜಕೀಯ ಪಾವಿತ್ರತೆಯ ಬಗ್ಗೆ ಮಾತನಾಡುವುದಕ್ಕೆ ನಮಗೆ ಏನು ಅಧಿಕಾರ ಇದೆ?. ಸ್ವಾಮಿ, ಹಿಂದೆ ಏನು ಆಗಿದೆಯೋ ನನಗೆ ಗೊತ್ತಿಲ್ಲ. ನಾವು ನೋಡಿದ್ದನ್ನು ಅಷ್ಟೇ ಹೇಳುತ್ತಿದ್ದೇವೆ. ನಾನು ಯಾವುದೇ ಪಕ್ಷದ ಬಗ್ಗೆ ಹೇಳುತ್ತಿಲ್ಲ. ಚುನಾವಣೆಯಲ್ಲಿ ನಡೆದಂಥ ವಿಧಾನವನ್ನು ನಾನು ಹೇಳುತ್ತಿದ್ದೇನಷ್ಟೆ. ನಿಮಗೇನಾದರೂ ಅದರಲ್ಲಿ ಹುಳುಕಿದ್ದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ. ಯಾವುದೇ ಪಕ್ಷದ ಹೆಸರನ್ನು ನಾನು ಹೇಳಲಿಲ್ಲ. ಗ್ರಾಮ ಪಂಚಾಯಿತಿ ಚುನಾವಣೆ, ತಾಲ್ಲೂಕು ಪಂಚಾಯಿತಿ ಚುನಾವಣೆ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆ ನಡೆದಂಥ ಸಂದರ್ಭದಲ್ಲಿ ಇದ್ದಂಥ ವಾತಾವರಣವನ್ನು ಅಷ್ಟೇ ನಾನು ಹೇಳುತ್ತಿದ್ದೇನೆ. ನಿಜವಾಗಿಯೂ ಅವರ ಕೈಗೆ ಅಧಿಕಾರ ಕೊಡಬೇಕೆಂದು ಇಷ್ಟ ಇದ್ದರೆ, ಪ್ರಾಮಾಣಿಕ ಕಳಕಳಿ ಇದ್ದರೆ ನೀವು ಅವರನ್ನು ಸ್ವತಂತ್ರವಾಗಿ ಬಿಟ್ಟುಬಿಡಿ. ಯಾರಿಗಾದರೂ ಅಧಿಕಾರ ಕೊಟ್ಟುಕೊಳ್ಳಲಿ ಅವರು. ಎಲ್ಲಾ ಪಕ್ಷಗಳು ನಿಮ್ಮ ಚಿಹ್ನೆ ಹಾಕಿದ್ದೀರಿ ಸರಿ. ಓಟು ಕೇಳಿ. ಅವರಿಗೆ ಯಾರಿಗೆ ಇಷ್ಟ ಬರುತ್ತದೋ ಅವರಿಗೆ ಕೊಡಲಿ. ನಿಮ್ಮ ಉದ್ದೇಶ ಅವರಿಗೆ ಅಧಿಕಾರ ಕೊಡಬೇಕು ಅಂತ ತಾನೆ? ಹಳ್ಳಿಯಲ್ಲಿ ಏನಾಗಬೇಕು ಎಂಬುದನ್ನು ಹಳ್ಳಿಯಲ್ಲೇ ತೀರ್ಮಾನ ಆಗಬೇಕು ಅಂತ ತಾನೆ? ಆ ಉದ್ದೇಶ ಇರತಕ್ಕ ಜನಕ್ಕೆ ನೀವು ಬಿಟ್ಟುಬಿಡಿ. ಯಾರಿಗಾದರೂ ಓಟು ಹಾಕಿಕೊಳ್ಳಲಿ. ನಾನು ಹೇಳುವುದರಲ್ಲಿ ಸುಳ್ಳು ಇದ್ದರೆ ಸನ್ಮಾನ್ಯ ಅಧ್ಯಕ್ಷರು ಈ ಸಭೆಯಲ್ಲಿ ನನಗೆ ಏನು ಶಿಕ್ಷೆವಹಿಸಿದರೂ ನಾನು ತೆಗೆದುಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ಬೇಕಾದರೆ ಸರ್ವೆ ಮಾಡಿ.

ಶ್ರೀ ವಿ. ಸೋಮಣ್ಣ : ಒಂದೇ ಒಂದು ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ವೆಸ್ಟ್ ಬೆಂಗಾಲ್‌ನಲ್ಲಿ ಅಲ್ಲೂ ಕೂಡ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳನ್ನು

ಚಿಹ್ನೆಗಳ ಮೇಲೆ ಮಾಡಿದ್ದಾರೆ. ಅಲ್ಲಿ ಅವರೇನಾದರೂ ಅಧಿಕಾರವನ್ನು ವಿಕೇಂದ್ರಿಕರಣದಲ್ಲಿ ಯಾವುದೇ ವಿಚಾರದಲ್ಲಿ ಯಾವುದೇ ಪಾರ್ಟಿ ಇಲ್ಲದೆ ನಡೆಸುತ್ತಾ ಇದ್ದರೆ 18 ವರ್ಷ ಅದು ಇರುತ್ತಿತ್ತಾ ದಯಮಾಡಿ ಅವನ್ನೂ ಕೂಡ ಹೇಳಬೇಕು. ಸ್ವಲ್ಪ ಅರಿತುಕೊಳ್ಳಬೇಕಾಗಿದೆ. ಏಕೆಂದರೆ ನಾವು ಇಲ್ಲಿ ಭಾಷಣಗಳನ್ನು ಮಾಡಬಹುದು. ಅಧಿಕಾರ ವಿಕೇಂದ್ರೀಕರಣ ಮಾಡುವಾಗ ಆಯಾ ಪಕ್ಷಗಳ ಚಿಹ್ನೆಯಲ್ಲಿ ನಿಂತಂಥ ಅಭ್ಯರ್ಥಿಗಳ ಹೆಸರು ಅಲ್ಲಿರುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಅದನ್ನೇ ಹೇಳುತ್ತಿದ್ದೇನೆ ಸ್ವಾಮಿ. ನಾನು ಹೇಳುವುದು ನಿಮಗೆ ಅರ್ಥ ಆಗಲಿಲ್ಲ. ನೀವು ಚಿಹ್ನೆ ಕೊಟ್ಟಿದ್ದೀರಿ ಓಟು ಹಾಕಲಿಕ್ಕೆ. ನೀವು ಚಿಹ್ನೆ ಕೊಡಿ. ನಿಜ ಕೊಡಬೇಕು. ರಾಜಕೀಯ ಪ್ರಜ್ಞೆ ಜನರಿಗೆ ಬರಬೇಕು. ಚಿಹ್ನೆ ಕೊಡತಕ್ಕದ್ದು ರಾಜಕೀಯ ಪ್ರಜ್ಞೆ ಬರಲಿಕ್ಕೆ ಅಂತ ಹೇಳಿ. ಅದರ ಬಗ್ಗೆ ವಿರೋಧ ಇಲ್ಲ. ನಾನು ಹೇಳಿದ್ದಿಷ್ಟೆ.

ಅಧ್ಯಕ್ಷರು : ರೆಡ್ಡಿಯವರೇ, ಈ ಕಡೆ ತಿರುಗಿಕೊಂಡುಬಿಡಿ. ನನಗೆ ಅರ್ಥ ಆಗಿದೆ ಬಿಡಿ ಅವರಿಗಾಗದೇ ಇದ್ದರೆ ಹೋಗಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ವಿಕೇಂದ್ರಿಕರಣವನ್ನು ಇವತ್ತು ಅಪಹಾಸ್ಯ ಮಾಡಬಾರದು. ನನ್ನ ಒಟ್ಟು ಅಭಿಪ್ರಾಯ ಇಷ್ಟೆ. ವಿಕೇಂದ್ರಿಕರಣದ ಹೆಸರಿನಲ್ಲಿ ಅಪಹಾಸ್ಯವನ್ನು ನೀವು ಮಾಡಿದ್ದೀರಿ. ಪ್ರಾಮಾಣಿಕವಾದಂಥ ವಿಕೇಂದ್ರಿಕರಣಕ್ಕೆ ನೀವು ಪ್ರಯತ್ನ ಮಾಡಿದರೆ ನಮ್ಮ ಸಂಪೂರ್ಣ ಬೆಂಬಲ ಅದಕ್ಕಿದೆ. ಆ ರೀತಿಯಾದ ಪ್ರಾಮಾಣಿಕವಾದಂಥ ವಿಕೇಂದ್ರಿಕರಣವನ್ನು ನೀವು ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಸ್ವಾಮಿ, ಮತ್ತೆ ಗ್ರಾಮೀಣ ಪ್ರದೇಶದ ಬಗ್ಗೆ ಮಾತನಾಡುತ್ತಾ ಮೊದಲನೆಯದಾಗಿ ಆರೋಗ್ಯದ ಬಗ್ಗೆ ಹೇಳುತ್ತೇನೆ. ಆರೋಗ್ಯಕ್ಕೆ ಇಷ್ಟು ಹಣ ಎಂದು ಹೇಳಿದ್ದಾರೆ.

ಅಧ್ಯಕ್ಷರು : ತಮಗೆ ಎಷ್ಟು ಹೊತ್ತು ಬೇಕಾಗಬಹುದು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇನ್ನು ಅರ್ಧಗಂಟೆ.

ಅಧ್ಯಕ್ಷರು : ಅಷ್ಟಾಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಬೇರೆಯವರಿಗೆ ಯಾರಿಗೂ ಟೈಮ್ ನಿಗದಿ ಮಾಡಲಿಲ್ಲ ತಾವು. ನಮಗೆ ಮಾತ್ರ ಟೈಮ್ ನಿಗದಿ ಮಾಡುತ್ತಾ ಇದ್ದೀರಿ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಹೊಸ ಸದಸ್ಯರಿಗೆ ದಯವಿಟ್ಟು ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಅದಕ್ಕೇ ಕೇಳುತ್ತಿದ್ದೇನೆ. ದೊಡ್ಡವರು ಮಾತನಾಡುವಾಗ ಕೇಳುವುದಕ್ಕಾಗಲಿಲ್ಲ. ಅದಕ್ಕೋಸ್ಕರ ಅವರನ್ನೇ ಕೇಳುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು : ಮೂರು ನಾಲ್ಕು ಗಂಟೆ ಭಾಷಣ ಮಾಡಿದ್ದಾರೆ.

ಅಧ್ಯಕ್ಷರು : ಅವರು ಮಾಡಿದಾರ?

ಶ್ರೀ ವಿ. ಸೋಮಣ್ಣ : ನಮಗೆಲ್ಲಾ ಅವಕಾಶ ಕೊಡಿ ಅಧ್ಯಕ್ಷರೆ.

ಶ್ರೀ ಜಿ.ಬಿ. ಶಿವಕುಮಾರ್ : ನನ್ನದೊಂದೇ ಕೋರಿಕೆ ಅಧ್ಯಕ್ಷರೆ. ತಾವು ಬಜೆಟ್ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟಾಗ ವಿರೋಧಪಕ್ಷಗಳ ಮುಖಂಡರುಗಳು ಪಕ್ಷೇತರರು ಎಂದು ಕಾಲ ನಿಗದಿ ಮಾಡಿರುತ್ತೀರಿ. ನನಗೊಂದು ಅನುಭವ ಇದೆ ಮೇಲ್ಮನೆಯಲ್ಲೂ ಕೂಡ. ಮೊದಲು ತೆಗೆದುಕೊಳ್ಳತಕ್ಕವರು ವಿಚಾರ ಎಷ್ಟೇ ಪ್ರಾಮುಖ್ಯವಾಗಿದ್ದರೂ ಕೂಡ ಅವರ ಹಿರಿತನದ ಮೇಲೆ ಅನುಭವದ ಮೇಲೆ ಹೆಚ್ಚಿನ ವೇಳೆ ಸಹಜವಾಗಿ ಪಡೆದುಕೊಳ್ಳುತ್ತಾರೆ. ಅದೂ ಒಂದು ರೀತಿ ನಮಗೆ ಜ್ಞಾನೋದಯ ಆದಹಾಗೆ. ಆದರೆ ಹಲವಾರು ಸಲ ಎಲ್ಲಾ ಪಕ್ಷದಲ್ಲೂ ಹೊಸ ಮುಖಗಳಿರುತ್ತವೆ. ಅವರಲ್ಲೂ ಸಾಕಷ್ಟು ಪ್ರತಿಭೆ ಇರುತ್ತದೆ. ಅದನ್ನು ಅವರು ಹೊರಹೊಮ್ಮಿಸಬೇಕಾದರೆ ಅವರಿಗೆ ಸಾಕಷ್ಟು ಅವಕಾಶವನ್ನು ಕೊಡಬೇಕು. ಉಳಿದಿರತಕ್ಕ ಅವಧಿಯಲ್ಲಿ ತಾವು ಟೈಮನ್ನು ನಿಗದಿ ಮಾಡಿಬಿಡಿ. ಎಲ್ಲಾ ಇಲಾಖೆಯ ಮೇಲೆ ಎಲ್ಲಾ ವಿಚಾರದ ಪುನರುಚ್ಚಾರ ಮಾಡತಕ್ಕಂಥ ಅಗತ್ಯ. ಅವರಲ್ಲಿರತಕ್ಕ ಸಮಸ್ಯೆಯನ್ನು ತೀವ್ರವಾಗಿ ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅವಕಾಶ ಮಾಡಿಕೊಟ್ಟಹಾಗೆ ಆಗುತ್ತದೆ ಎಂದು ನನ್ನ ಪ್ರಾರ್ಥನೆ.

ಅಧ್ಯಕ್ಷರು : ಉತ್ತಮವಾದ ಸಲಹೆ. ಶ್ರೀರಾಮರೆಡ್ಡಿಯವರೇ, 5-10 ನಿಮಿಷದಲ್ಲಿ ಮುಗಿಸಿ ಇಲ್ಲದಿದ್ದರೆ ಕಷ್ಟವಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮಗೂ ಕಷ್ಟವಾಗುತ್ತದೆ ಸಾರ್.

ಅಧ್ಯಕ್ಷರು : ಇರಲಿ, ರಾಜ್ಯಪಾಲರ ಭಾಷಣದಲ್ಲಿ ಮತ್ತೆ ಅವಕಾಶ ಸಿಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಾಧ್ಯವಾದಷ್ಟು ಬೇಗ ಮುಗಿಸಿಬಿಡುತ್ತೇನೆ.

ಅಧ್ಯಕ್ಷರು : 5 -10 ನಿಮಿಷದಲ್ಲಿ ಮುಗಿಸಿಬಿಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆರೋಗ್ಯದ ಬಗ್ಗೆ ಬಜೆಟ್ಟಿನಲ್ಲಿ ಇಷ್ಟು ಹಣ ಇಟ್ಟಿದ್ದೇವೆ ಇಂಥಿಂಥ ಸೌಲಭ್ಯಗಳಿಗೆ ಎಂದು ಹೇಳಿದ್ದಾರೆ. ಈ ಆರೋಗ್ಯದ ಬಗ್ಗೆ ಇರುವ ಕಲ್ಪನೆಯೇ ತಪ್ಪು. ಮೆಡಿಕಲ್ ಎಥಿಕ್ಸ್‌ನಲ್ಲೇ ಇದೆ. `Prevention is better than cure' ಎಂದು. ಈ ಪ್ರಿವೆನ್‌ಷನ್‌ಗೆ ಮಾತ್ರ ಏನೂ ಕಾರ್ಯಕ್ರಮ ಇಲ್ಲ. ಖಾಯಿಲೆ ಬಂದಾಗ ಔಷಧಿ ಕೊಡಲಿಕ್ಕೆ ಟೆಸ್ಟ್ ಮಾಡಲಿಕ್ಕೆ ಸಹಾಯ ಮಾಡುತ್ತೀರಿ. ಅನಾರೋಗ್ಯದ ಪ್ರಶ್ನೆ ಎರಡು ರೀತಿ ಇದೆ. ನಮ್ಮ ರಾಜ್ಯದಲ್ಲಿ ಅಥವಾ ದೇಶದಲ್ಲಿ. ನೀವೇ ಹೇಳಿದ್ದೀರಿ ಇದರಲ್ಲಿ. ಏನು ಹೇಳಿದ್ದೀರಿ ಇದರಲ್ಲಿ ಅಂದರೆ "ಜನತೆಗೆ ಒಳ್ಳೆಯ ಗುಣಮಟ್ಟದ ಆರೋಗ್ಯ ಸೇವೆಯನ್ನು ಒದಗಿಸುವಲ್ಲಿ ಇತರೆ ರಾಜ್ಯಗಳಿಗಿಂತಲೂ ಮುಂದೆ ಇದ್ದ ನಮ್ಮ ರಾಜ್ಯವು ಕಳೆದ ಕೆಲವು ವರ್ಷಗಳಿಂದ, ಈ ಸ್ಥಾನದಿಂದ ಕೆಳಗಿಳಿಯುತ್ತಾ ಬಂದಿರುವುದು ಕಳವಳಕಾರಿಯಾಗಿದೆ. ನಮ್ಮ ರಾಜ್ಯದಲ್ಲಿ ಜನನ ಪ್ರಮಾಣ, ಶಿಶು ಮರಣದ ಪ್ರಮಾಣ ಇವು ದಕ್ಷಿಣದ ನೆರೆ ರಾಜ್ಯಗಳಿಗೆ ಹೋಲಿಸಿದಾಗ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿದೆ" ಎಂದು ಹೇಳಿದ್ದೀರಿ. ಏತಕ್ಕೆ? ಆಲ್ ಇಂಡಿಯಾ

ಮೆಡಿಕಲ್ ಸೈನ್ಸ್‌ನವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಇವತ್ತು ಇಡೀ ದೇಶದಲ್ಲಿ ಗರ್ಭಪಾತ ಆಗಿರುವ ಪ್ರಕರಣ 32 ಪರ್ಸೆಂಟ್ ಇದೆ. ಕರ್ನಾಟಕ ರಾಜ್ಯದಲ್ಲಿ ಕೂಡ ಸರಾಸರಿ ರಾಷ್ಟ್ರೀಯ ಸರಾಸರಿಯಷ್ಟೇ ಇದೆ. ಕಾರಣ ಏನು? ಮೊಟ್ಟ ಮೊದಲನೆಯದಾಗಿ ಪೌಷ್ಠಿಕ ಆಹಾರದ ಅಂಶಗಳ ಕೊರತೆ ಇರುವುದರಿಂದ ಗರ್ಭಿಣಿ ಸ್ತ್ರೀಯರಿಗೆ ಗರ್ಭ ನಿಲ್ಲತಕ್ಕದ್ದು ಕಷ್ಟ ಆಗಿದೆ. ಹಾಗಾಗಿ ಇವತ್ತು ಗರ್ಭಪಾತ ಆಗುತ್ತಿದೆ. ಪೌಷ್ಠಿಕ ಆಹಾರದ ಬಗ್ಗೆ, ಅವುಗಳನ್ನು ಒದಗಿಸುವ ಬಗ್ಗೆ ಅಥವಾ ಅವುಗಳು ಜನರಿಗೆ ಸುಲಭ ದರದಲ್ಲಿ ಸಿಗುವಂತೆ ಮಾಡುವುದರ ಬಗ್ಗೆ ಬಜೆಟ್‌ನಲ್ಲಾಗಲೀ ನಿಮ್ಮ ಸರ್ಕಾರದ ಮುಂದೆ ಆಗಲೀ ಯೋಜನೆ ಇಲ್ಲ. ಇವತ್ತು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಿರುವ ಪ್ರಕಾರ ಒಬ್ಬ ಮನುಷ್ಯನಿಗೆ 2600 ಕ್ಯಾಲೊರಿಗಳಷ್ಟು ಆಹಾರ ಬೇಕಾಗುತ್ತದೆ ಒಂದು ದಿವಸಕ್ಕೆ. ನಮ್ಮಲ್ಲಿ ಅಷ್ಟು ಸಿಗುತ್ತಿಲ್ಲ. ನಮ್ಮಲ್ಲಿ ಸರಾಸರಿ ಸಿಗುತ್ತಿರುವುದು 900 ಕ್ಯಾಲೊರಿಗಳು. 2600 ಕ್ಯಾಲೊರಿಗಳಷ್ಟು ಆಹಾರ ಮಿನಿಮಂ ಪೌಷ್ಟಿಕ ಆಹಾರ ಸಿಕ್ಕಿದರೆ ಮನುಷ್ಯ ಆರೋಗ್ಯವಂತನಾಗಿರುತ್ತಾನೆ. ಇಂಥ ಪರಿಸ್ಥಿತಿಯಲ್ಲಿ 900 ಕ್ಯಾಲೊರಿಗಳಷ್ಟು ಮಾತ್ರ ಸಿಗುತ್ತದೆ. ಪೌಷ್ಠಿಕ ಆಹಾರದ ಅಂಶದ ಕೊರತೆಯಿಂದಾಗಿ ಇವತ್ತು ಗರ್ಭಪಾತಗಳು ಹೆಚ್ಚಾಗುತ್ತಿವೆ. ಅದೇ ರೀತಿ ಹಲವಾರು ಕಾಯಿಲೆಗಳಿಗೆ ಕಾರಣವಾಗಿರತಕ್ಕದ್ದು ಬಡತನ. ಇವತ್ತು ನೀವೇ ಹೇಳಿರುವ ಪ್ರಕಾರ ಶೇಕಡ 40 ಪರ್ಸೆಂಟ್ ಬಡತನದ ರೇಖೆಗಿಂತ ಕೆಳಗಡೆ ಇರುವವರು; ಬಡವರಲ್ಲ. ಬಡವರು ಬೇರೆ. ಬಡತನದ ರೇಖೆ ಮತ್ತು ಬಡವರು ಎರಡರಲ್ಲಿ ವ್ಯತ್ಯಾಸ ಇದೆ ಅಧ್ಯಕ್ಷರೆ. ಬಡವರಿಗಿಂತ ಕೆಳಗೆ ಇರುವವರು ಇವರು. ಇವರು 40 ಪರ್ಸೆಂಟ್ ಇದ್ದಾರೆ. ಬಡವರು ಇವರು ಎಲ್ಲಾ ಸೇರಿದರೆ ಈ ದೇಶದಲ್ಲಿ 100ಕ್ಕೆ 80 ಜನರ ಬಡವರಿದ್ದಾರೆ. ಪೌಷ್ಠಿಕಾಂಶದ ಆಹಾರ ಸಿಗುತ್ತಿಲ್ಲ ಇವರಿಗೆ. ಪೌಷ್ಠಿಕಾಂಶದ ಆಹಾರ ಇವರಿಗೆ ಸಿಗದೇ ಇರುವುದರಿಂದ ನಾನಾ ರೀತಿಯಾದ ಖಾಯಿಲೆಗಳು ಈ ದೇಶದಲ್ಲಿ ಬರುತ್ತಿದೆ. ಪೌಷ್ಟಿಕ ಆಹಾರವನ್ನು ಒದಗಿಸುವುದಕ್ಕೆ ಬಜೆಟ್‌ನಲ್ಲಿ ಕಾರ್ಯಕ್ರಮ ಹಾಕಿದರೆ ಶಾಶ್ವತವಾಗಿ ರೋಗ ನಿವಾರಣೆ ಮಾಡುವುದಕ್ಕೆ ಸಾಧ್ಯತೆ ಇದೆ. ಅದರ ಬದಲು ರೋಗ ಬಂದರೆ ಪರೀಕ್ಷೆ ಮಾಡಿಸಿಕೊಳ್ಳುವುದಕ್ಕೆ ಅಷ್ಟೇ ಸರ್ಕಾರಇರುವುದಾದರೆ ಸಾಮಾಜಿಕ ಹೊಣೆಗಾರಿಕೆ ಏನು? ಸಾಮಾಜಿಕ ಹೊಣೆಗಾರಿಕೆಯನ್ನು ಕೈಬಿಟ್ಟು ಖಾಯಿಲೆ ಬಂದಾಗ ಪರೀಕ್ಷೆ ಮಾಡುತ್ತೇನೆ ಎಂದು ಹೇಳತಕ್ಕದ್ದು ಸರಿಯಲ್ಲ. ಎರಡನೆಯದು ಅನಾರೋಗ್ಯಕ್ಕೆ ಕಾರಣವಾಗಿರತಕ್ಕದ್ದು ಗ್ರಾಮೀಣ ಪ್ರದೇಶದಲ್ಲಿ ನೈರ್ಮಲ್ಯದ ಪ್ರಶ್ನೆ. ನೈರ್ಮಲ್ಯದ ಪ್ರಶ್ನೆ ಸಂಪೂರ್ಣವಾಗಿ ಇವತ್ತು ಗ್ರಾಮೀಣ ಪ್ರದೇಶದಲ್ಲಿ ಕೆಡಿಮೆಯಾಗಿದೆ. ಎಷ್ಟು ಕಡಿಮೆಯಾಗಿದೆ ಎಂದರೆ ನಾನು ಅದೆಲ್ಲಾ ವಿವರಗಳನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಸಾಮಾನ್ಯವಾಗಿ ಮನುಷ್ಯರು ಬದುಕುವುದಕ್ಕೆ ಬೇಕಾದ ವಾತಾವರಣ ಹಳ್ಳಿಯಲ್ಲಿಲ್ಲ. ಅಷ್ಟು ಅನಾರೋಗ್ಯಕರವಾದ ಪರಿಸ್ಥಿತಿ ಬಂದಿದೆ. ಕೆಲವು ಪಟ್ಟಣಗಳಲ್ಲಿ ಕೂಡ ಅದೇ ರೀತಿಯಾದಂಥ ಪರಿಸ್ಥಿತಿ ಇದೆ. ಈ ಅನಾರೋಗ್ಯಕ್ಕೆ ಕಾರಣವಾಗಿರತಕ್ಕ ಮೂಲ ಅಂಶಗಳನ್ನು ಪರಿಶೀಲನೆ ಮಾಡಿ ಆ ಮೂಲ ಸಮಸ್ಯೆಯನ್ನು ಪರಿಹಾರ ಮಾಡಿದರೆ ಇದಕ್ಕೆ ಎಷ್ಟು ಹಣ ಖರ್ಚು ಮಾಡಬೇಕೆಂದು ಬಜೆಟ್‌ನಲ್ಲಿ ಹೇಳುತ್ತಿದ್ದೀರೋ ಆ ಹಣವನ್ನು ಇದಕ್ಕೆ ಉಪಯೋಗಿಸಿದರೆ ಖಾಯಿಲೆಗಳನ್ನು ತಡೆಗಟ್ಟುವುದಕ್ಕೆ ಸಾಧ್ಯತೆ ಇದೆ. ಹೊಸ ತೆರಿಗೆಗಳನ್ನು ಹಾಕತಕ್ಕ ಸಂದರ್ಭ ಬಂದಾಗ ಬೆಂಗಳೂರು ನಾಗರೀಕರಿಗೆ ಪ್ರತ್ಯೇಕವಾಗಿ ಹಾಕಿದ್ದೀರಿ. ಅದರ ಬಗ್ಗೆ ಸುಮಾರು ಜನ ಸದಸ್ಯರು

ಮಾತನಾಡಿದ್ದಾರೆ. ನಾನು ಅದರ ಬಗ್ಗೆ ವಿವರವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಬೆಂಗಳೂರು ನಗರದಲ್ಲಿರತಕ್ಕವರು ಎಲ್ಲರೂ ಶ್ರೀಮಂತರು ಎಂಬ ಭಾವನೆ ನಿಮ್ಮಲ್ಲಿದೆ. ಇದು ಭಾರಿ ಅಪಾಯಕಾರಿಯಾದುದು. ಬೆಂಗಳೂರಿನಲ್ಲಿ ಎಷ್ಟು ಜನ ಬಡವರಿದ್ದಾರೆ ಸ್ಲಮ್‌ಗಳಲ್ಲಿ ಎಂಬುದು ನಿಮಗೆ ಗೊತ್ತಿದೆಯೋ ಇಲ್ಲವೋ ಪಾಪ. ಹಾಗೆಯೇ ಇನ್ನೊಂದು ಅಪಾಯಕಾರಿಯಾದ ಅಂಶ ಇದರಲ್ಲಿದೆ. ಹಳ್ಳಿ ಮತ್ತು ಪಟ್ಟಣದ ಜನರ ಮಧ್ಯೆ ಭೇದ ಹುಟ್ಟಿಸತಕ್ಕಂಥ ಒಂದು ಕಲ್ಪನೆ ಬರತಕ್ಕಂಥ ಸಾಧ್ಯತೆಗಳಿವೆ. ಇವರಿಗೆ ಹೆಚ್ಚು ತೆರಿಗೆ ಹಾಕುತ್ತೇವೆ ಎಂದರೆ ಹಳ್ಳಿಯಲ್ಲಿರುವವರು ಏನು ಆಲೋಚನೆ ಮಾಡುತ್ತಾರೆಂದರೆ ಪಟ್ಟಣದಲ್ಲಿರುವ ಜನರು ಏನು ಹಣವನ್ನು ಲೂಟಿ ಮಾಡಬಹುದಾ ಎಂದು ಹೇಳತಕ್ಕ ರೀತಿಯಲ್ಲಿ ಮಾತನಾಡುತ್ತಾರೆ. ಇದು ಖಂಡಿತವಾಗಿ ತಪ್ಪು ಬೆಂಗಳೂರಿನವರಿಗೆ ಪ್ರತ್ಯೇಕವಾಗಿ ಹಾಕಿರತಕ್ಕದ್ದು. ಔರಂಗಜೇಬನ ಕಾಲದಲ್ಲಿ ಈ ರೀತಿ ಆಗತಕ್ಕದ್ದು ಇತ್ತು. ಅದನ್ನು ಇವರಿಗೆ ಯಾರೋ ಜ್ಞಾಪಕ ಮಾಡಿರಬಹುದು ಅಂತ ಕಾಣುತ್ತದೆ. ಇನ್ನು ವಿದ್ಯುಚ್ಛಕ್ತಿ. ಇದರ ಬಗ್ಗೆ ಅಂತೂ ಸಾಕಷ್ಟು ಚರ್ಚೆಯಾಗಿದೆ. ಈ ವಿದ್ಯುಚ್ಛಕ್ತಿ ಪರಿಸ್ಥಿತಿ ಬಗ್ಗೆ ಇವತ್ತು ಇವರು ಹಾಕಿರತಕ್ಕ ಕಾರ್ಯಕ್ರಮದಿಂದ ಏನಾದರೂ ಸಮಸ್ಯೆ ಪರಿಹಾರವಾಗುತ್ತದೆ ಎಂದು ಅಂದುಕೊಂಡಿದ್ದರೆ ಅದು ಖಂಡಿತ ತಪ್ಪು. ಇದರ ಬಗ್ಗೆ ಇರತಕ್ಕ ಅಂಕಿಅಂಶಗಳು ಕೂಡ ಅದರಲ್ಲಿ ಸರಿಯಾಗಿ ಇಲ್ಲ ಎಂಬುದು ನನ್ನ ಅನಿಸಿಕೆ. ಬಜೆಟ್‌ನಲ್ಲಿ ಹೇಳುತ್ತಾರೆ, ಮತ್ತೆ ಮೊನ್ನೆ ಮಂತ್ರಿಗಳು ಮಾತನಾಡುವಾಗ ಕೂಡ ಹೇಳಿದರು, ಇವತ್ತು ನಾವು ಒಂದು ಮೆಗಾವಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಬೇಕಾದರೆ 4 ರಿಂದ 5 ಕೋಟಿ ರೂಪಾಯಿ ಖರ್ಚಾಗತಕ್ಕ ಸಾಧ್ಯತೆ ಇದೆ ಎಂದು.

3.40 ಪಿ.ಎಂ.

ಒಂದು ಮೆಗಾವಾಟ್ ವಿದ್ಯುತ್‌ಗೆ ಅಂತ ಹೇಳಿ. ಬಹುಶಃ ಅವರು ಕನ್‌ಫ್ಯೂಸ್ ಮಾಡಿಕೊಂಡಿದ್ದಾರೇನೋ ಎಂಬುದಾಗಿ ಅನ್ನಿಸುತ್ತದೆ. ಕೊಜೆಂಟ್ರಿಕ್ ಕಂಪನಿ ಜೊತೆಗೆ ಒಪ್ಪಂದ ಮಾಡಿಕೊಂಡಿದ್ದೀರಿ. ಈ ಕಂಪನಿಗಳು ವೆಸ್ಟರ್ನ್ ಕಂಟ್ರೀಸ್‌ನಲ್ಲಿರತಕ್ಕ ಕಂಪನಿಗಳು. ಇವತ್ತು ಅವರಿಗೆ ವಿದ್ಯುತ್ ಉತ್ಪಾದನೆ ಬೇಕಾಗಿಲ್ಲ. ಅವರು ಸೆಲ್ಫ್ ಸಫಿಸಿಯೆಂಟ್ ಇದ್ದಾರೆ. ಅವರಿಗೆ ಕೆಲಸ ಇಲ್ಲದೇ ಇಲ್ಲಿಗೆ ಬಂದಿದ್ದಾರೆ. ಇವತ್ತು 4 ರಿಂದ 5 ಕೋಟಿ ಖರ್ಚಾಗುತ್ತದೆ ಒಂದು ಮೆಗಾವ್ಯಾಟ್ ವಿದ್ಯುತ್ತನ್ನು ಉತ್ಪಾದನೆ ಮಾಡುವುದಕ್ಕೆ ಅಂತ ಅವರು ಹೇಳುತ್ತಿದ್ದಾರೆ. ಆದರೆ ನಮ್ಮ ದೇಶದಲ್ಲಿ ನಾವು ಉತ್ಪಾದನೆ ಮಾಡುವುದಾದರೆ ಎರಡೂವರೆ ಕೋಟಿಯಿಂದ 3 ಕೋಟಿವರೆಗೆ ಒಂದು ಮೆಗಾವ್ಯಾಟ್‌ಗೆ ಖರ್ಚಾಗತಕ್ಕಂತಹದ್ದು. ಆದರೆ ನಮ್ಮ ದೇಶದಲ್ಲಿ ಇಷ್ಟು ಕಡಿಮೆ ಖರ್ಚಿನಲ್ಲಿ ವಿದ್ಯುತ್ತನ್ನು ಉತ್ಪಾದನೆ ಮಾಡುವುದಕ್ಕೆ ಅವಕಾಶ ಇದ್ದರೂ ಕೂಡ ವಿದೇಶಿ ಕಂಪನಿಗಳಿಗೆ ಏಕೆ ಶರಣು ಹೋಗಬೇಕು ಎನ್ನುವ ಪ್ರಶ್ನೆಯನ್ನು ಇವರು ಆಲೋಚನೆ ಮಾಡಬೇಕು. ಇದರ ಜೊತೆಗೆ ವಿದ್ಯುತ್ ಸಮಸ್ಯೆಗಳಿಗೆ ಶಾಶ್ವತವಾದ ಪರಿಹಾರಕ್ಕೆ ಏನು ಕಾರ್ಯಕ್ರಮ ಇದೆ? ನಾವು ವಿದ್ಯುತನ್ನು ಹಲವಾರು ರಂಗಗಳಲ್ಲಿ ಉಪಯೋಗ ಮಾಡುತ್ತಿದ್ದೇನೆ ಅಂತ ಹೇಳುತ್ತಿದ್ದಾರೆ. ಇದಕ್ಕೆ ವಿದೇಶಿ ಕಂಪನಿಗಳಲ್ಲಿ ಉತ್ಪಾದನೆ ಮಾಡತಕ್ಕ ವಿದ್ಯುತ್‌ಗೆ ರೇಟು ವಿಪರೀತವಾಗಿ ಆಗುತ್ತದೆ. ಏಕೆಂದರೆ ಇಷ್ಟು ಲಾಭ ಕೊಡುತ್ತೇವೆಂದು ಅವರ ಜೊತೆ ಒಪ್ಪಂದ ಮಾಡಿಕೊಂಡಿದ್ದೇವೆಂದು ಅವರು ಯಾರಿಗೂ ಹೇಳಲಿಲ್ಲ. ಆದರೆ ನನ್ನ ಅನುಮಾನ ಇವರು

16 ಪರ್ಸೆಂಟ್‌ಗೋ 22 ಪರ್ಸೆಂಟ್‌ಗೋ ಒಪ್ಪಿದ್ದಾರೆ ಎನ್ನತಕ್ಕಂಥಾದ್ದು. ಏಕೆಂದರೆ ಅದಕ್ಕಿಂತ ಕಡಿಮೆಗೆ ಅವರು ಒಪ್ಪುವುದಿಲ್ಲ. ಆವಾಗ 7.00 ರೂಪಾಯಿ ಕರೆಂಟ್ ಚಾರ್ಜ ಆಗುತ್ತದೆ ಒಂದು ಯೂನಿಟ್‌ಗೆ. ಕರೆಂಟ್ ಬೆಲೆ ವಿಪರೀತ ಹೆಚ್ಚಾಗಿ ಉತ್ಪಾದನೆಯ ಮೇಲೆ ಹೊಡೆತ ಬೀಳುತ್ತದೆ ಎನ್ನತಕ್ಕ ಅಂಶವನ್ನು ಇವರು ಗಮನಕ್ಕೆ ತೆಗೆದುಕೊಳ್ಳದೆ ಹೋದರೆ ನಮ್ಮ ಉತ್ಪಾದನೆಗೆ ಭಾರಿ ಹೊಡೆತ ಬೀಳತಕ್ಕ ಎಲ್ಲಾ ಸಾಧ್ಯತೆಗಳೂ ಇವೆ. ನಮ್ಮಲ್ಲಿ ಉತ್ಪಾದನೆಯಾಗತಕ್ಕಂತಹದ್ದು ಎಷ್ಟು ನಮ್ಮ ಅವಶ್ಯಕತೆಗೆ 28,000 ಮಿಲಿಯನ್ ಯೂನಿಟ್ ಬೇಕಾಗಿದೆ; ಕರ್ನಾಟಕ ರಾಜ್ಯದಲ್ಲಿ. ಆದರೆ ಉತ್ಪಾದನೆಯಾಗತಕ್ಕಂತಹದ್ದು 21,000 ಮಿಲಿಯನ್ ಯೂನಿಟ್ ಮಾತ್ರ ನಮ್ಮ ಹತ್ತಿರ ಇದೆ. ಕೇಂದ್ರ ಮತ್ತು ರಾಜ್ಯಗಳಿಂದ ನಮಗೆ ಬರತಕ್ಕಂಥದ್ದು, 3300 ಮೆಗಾವ್ಯಾಟ್ ಉತ್ಪಾದನೆಯ ಸಾಮರ್ಥ್ಯ ಇದೆ. ಕೇಂದ್ರ ಮತ್ತು ಬೇರೆ ರಾಜ್ಯಗಳಿಂದ ತೆಗೆದುಕೊಳ್ಳುತ್ತಾ ಇರತಕ್ಕಂಥದ್ದು ನಾವು ಉತ್ಪಾದನೆ ಮಾಡತಕ್ಕಂತಹದ್ದು ಎರಡೂ ಸೇರಿ ಇಷ್ಟೆಲ್ಲಾ ಆದರೂ ಕೂಡ ಇನ್ನು ನಮಗೆ 9,000 ಮೆಗಾವ್ಯಾಟ್ ವಿದ್ಯುತ್ ಬೇಕಾಗಿದೆ. 2000 ಇಸವಿಯೊಳಗೆ 9000 ಮೆಗ್ಗಾವ್ಯಾಟ ಕರೆಂಟನ್ನು ಉತ್ಪಾದನೆ ಮಾಡುಂತಹದ್ದರಲ್ಲಿ ಸ್ಪಷ್ಟವಾಗಿ ಇವರು ಕೊಜೆಂಟ್ರಿಕ್ ಕಂಪನಿ ಜೊತೆ 1,000 ಮೆಗಾವ್ಯಾಟ್‌ಗೆ ಒಪ್ಪಂದ ಮಾಡಿಕೊಂಡಿರುವುದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಆದ್ದರಿಂದ ಜಲ ವಿದ್ಯುತ್ ಯೋಜನೆಗಳಿಂದ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಸುಲಭದಲ್ಲಿ ವಿದ್ಯುತನ್ನು ಒದಗಿಸುವುದಕ್ಕೆ ಸಾಧ್ಯತೆ ಇದೆ. ನಮ್ಮ ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿರತಕ್ಕ ಕೆಲವು ವಿಜ್ಞಾನಿಗಳು ಅದರ ಬಗ್ಗೆ ಹಲವಾರು ಪ್ರಯತ್ನಗಳನ್ನು ಮಾಡಿದ್ದಾರೆ. ಅದರ ಜೊತೆ ಅವರು ಒಂದು ಹೊಸ ಎಕ್ಸ್‌ಪೆರಿಮೆಂಟನ್ನು ಮಾಡಿದ್ದಾರೆ. ಆಸ್ಟ್ರಾ ಫಿಸಿಕ್ಸ್ ಗುಂಪಿಗೆ ಸೇರಿದ ನಮ್ಮ ವಿಜ್ಞಾನಿಗಳು ಕುಣಿಗಲ್ ತಾಲ್ಲೂಕಿನಲ್ಲಿ ಒಂದು ಹಳ್ಳಿಯಲ್ಲಿ ಎಕ್ಸ್‌ಪೆರಿಮೆಂಟ್ ಮಾಡಿದ್ದಾರೆ. ಅದನ್ನು ಸರ್ಕಾರದ ಗಮನಕ್ಕೆ ಸಲಹೆ ರೂಪದಲ್ಲಿ ತರುತ್ತಿದ್ದೇನೆ. ವೇಸ್ಟ್ ಮಾಡತಕ್ಕಂತಹ ರೇಷ್ಮೆ ಕಡ್ಡಿಯಲ್ಲೂ ಕೂಡ ಒಂದು ಹಳ್ಳಿಯಲ್ಲಿ 25, 25 ಕಿಲೋವ್ಯಾಟ್ ವಿದ್ಯುತ್ ಸರಬರಾಜು ಮಾಡತಕ್ಕಂತಹ ಎಕ್ಸ್‌ಪೆರಿಮೆಂಟ್ ಮಾಡಿದ್ದಾರೆ. ಈಗಾಗಲೇ ಅದರ ಬಗ್ಗೆ ಎಕ್ಸ್‌ಪೆರಿಮೆಂಟ್ ಮಾಡಿ ಕುಣಿಗಲ್ ತಾಲ್ಲೂಕಿನಲ್ಲಿ ಅದರ ಪ್ರಯೋಗವನ್ನು ಮಾಡಿದ್ದಾರೆ. ಅದೇ ರೀತಿ ಮಂಡ್ಯ ಜಿಲ್ಲೆಯಲ್ಲಿ ಸಣ್ಣ ಜಲ ವಿದ್ಯುತ್ ಯೋಜನೆಯಿಂದ ಕರೆಂಟನ್ನು ಉತ್ಪಾದನೆ ಮಾಡತಕ್ಕ ಮೆಥೆಡ್ಡನ್ನು ಕಂಡು ಹಿಡಿದಿದ್ದಾರೆ. ಬಹುಶಃ ಅಂತಹವರ ಜೊತೆ ಚರ್ಚೆ ಮಾಡಿ, ಕಡಿಮೆ ದರದಲ್ಲಿ ವಿದ್ಯುತ್ ಉತ್ಪಾದನೆ ಮಾಡತಕ್ಕಂತಹ ಕಾರ್ಯಕ್ರಮವನ್ನು ನೀವು ಹುಡುಕಬೇಕಾಗುತ್ತದೆ. ಅದು ಇಲ್ಲದಿದ್ದರೆ ವಿದ್ಯುತನ್ನು ವಿದೇಶಿ ಕಂಪನಿಗಳಿಂದ ಉತ್ಪಾದನೆ ಮಾಡುವುದರಿಂದ ಕನಿಷ್ಠ ನಮ್ಮ ಉತ್ಪಾದನೆಗೆ ತೀವ್ರ ರೀತಿಯ ಹೊಡೆತವಾಗುತ್ತದೆಂಬುದನ್ನು ಸರ್ಕಾರ ಗಮನಿಸಬೇಕು ಎಂದು ಹೇಳುತ್ತಿದ್ದೇನೆ. ಮತ್ತು ತೆರಿಗೆಗಳನ್ನು ಹಾಕತಕ್ಕಂಥದ್ದ. ನೀವು ಹೇಳುತ್ತಿದ್ದೀರಿ. ಶ್ರೀಮಂತರಿಗೆ ಹಾಕಿದ್ದೇವೆಂದು. ಗೋಧಿಯನ್ನು ಯಾರು ಸ್ವಾಮಿ ತಿನ್ನುವವರು? ರವೆ ಯಾರು ತಿನ್ನತಕ್ಕಂತಹವರು? ಮೈದಾ ಯಾರು ತಿನ್ನತಕ್ಕಂತಹವರು? ಬಡವರ ಮೇಲೆ ತೆರಿಗೆ ಹಾಕಲಿಲ್ಲ ಅಂತ ಹೇಳುತ್ತೀರಿ. ಇವೆಲ್ಲದರ ಮೇಲೆ ತೆರಿಗೆ ಹಾಕಿ ಕರ್ನಾಟಕ ರಾಜ್ಯಕ್ಕೆ ಬಂದ ವಾಳವನ್ನು ಕೂಡಿಸುತ್ತೇವೆ ಅಂತ ಹೇಳುವ ಕಲ್ಪನೆಯನ್ನು ದಯಮಾಡಿ ಬಿಡಿ. ಅದರ ಬದಲು ಉತ್ಪಾದನೆಯನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಿ. ಉತ್ಪಾದನೆ ಹೆಚ್ಚಾಗುವುದಕ್ಕೆ ಇರತಕ್ಕ ಅವಕಾಶಗಳು ಎರಡು.

ಒಂದು ಕೈಗಾರಿಕಾ ರಂಗವನ್ನು ಅಭಿವೃದ್ಧಿ ಮಾಡುವುದು. ಮತ್ತೊಂದು ಕೃಷಿ ರಂಗವನ್ನು ಅಭಿವೃದ್ಧಿ ಮಾಡುವುದು. ಈ ಎರಡು ಕೆಲಸಗಳನ್ನು ಮಾಡಿದರೆ ಮಾತ್ರ ನೀವು ಖಂಡಿತವಾಗಿ ಬಂಡವಾಳವನ್ನು ಶೇಖರಣೆ ಮಾಡುವುದಕ್ಕೆ ಸಾಧ್ಯ ಆಗುತ್ತದೆ. ಅದು ಇಲ್ಲದಿದ್ದರೆ ಬರೀ ತೆರಿಗೆಗಳನ್ನು ಹಾಕಿ ಬಂಡವಾಳವನ್ನು ಶೇಖರಣೆ ಮಾಡುವುದಕ್ಕೆ ಸಾಧ್ಯ ಇಲ್ಲ. ಆದ್ದರಿಂದ ಈ ಹೆಚ್ಚು ತೆರಿಗೆ ಹಾಕಿರತಕ್ಕ ಧೋರಣೆಯನ್ನು ನಾನು ವಿರೋಧ ಮಾಡುತ್ತೇನೆ. ಮತ್ತು ಬಂಡವಾಳವನ್ನು, ಉತ್ಪಾದನೆ ಹೆಚ್ಚು ಮಾಡುವುದಕ್ಕೆ ಯಾವುದೇ ಕಾರ್ಯಕ್ರಮ ಇದರಲ್ಲಿ ಇಲ್ಲದೇ ಇರುವುದರಿಂದ ಇದನ್ನು ಒಪ್ಪಲಿಕ್ಕೆ ತಯಾರಿಲ್ಲ. ಆದ್ದರಿಂದ ಇಷ್ಟು ಹೇಳುವುದಕ್ಕೆ ನನಗೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಮಾತನಾಡತಕ್ಕ ಕಾಲದಲ್ಲಿ ಕೆಲವು ದಾಖಲೆಗಳನ್ನು ಕಳುಹಿಸಿಕೊಡುತ್ತೇನೆ ಅಂತ ಹೇಳಿದ್ದೆ. ಅದನ್ನು ತಮ್ಮ ಮೂಲಕ ಸರ್ಕಾರಕ್ಕೆ ಕಳುಹಿಸಿಕೊಡುತ್ತಿದ್ದೇನೆ.

ಅಧ್ಯಕ್ಷರು : ಆಯಿತು.

+ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ ಕ್ಷೇತ್ರ) : ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಅಪ್ಪಣೆ ಕೊಡಿಸಿದ ರೀತಿಯಲ್ಲಿ ನನಗೆ ಸಿಕ್ಕಿರತಕ್ಕ ಅಲ್ಪ ಸಮಯದಲ್ಲಿ ಇಡೀ ಆಯವ್ಯಯ ಪಟ್ಟಿಯ ಬಗ್ಗೆ ಪ್ರಸ್ತಾಪ ಮಾಡದೆ, ಕೇವಲ ನಮಗೆ ಸಂಬಂಧಪಟ್ಟಂತಹ ವಿಚಾರದ ಬಗ್ಗೆ ಮಾತ್ರ ಪ್ರಸ್ತಾಪ ಮಾಡಿ ನನ್ನ ಮಾತುಗಳನ್ನು ಮುಗಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ತಪ್ಪು ನಮ್ಮದಲ್ಲ. ಸದನದಲ್ಲಿ ಇಷ್ಟು ಸುಂದರವಾಗಿ ಕಾಣತಕ್ಕ ಸದನ. ಹಲವಾರು ವರ್ಷಗಳ ನಂತರ ಕಾಣುತ್ತಿದ್ದೇವೆ. ಅತ್ಯಂತ ಉತ್ಸಾಹಭರಿತವಾದ ಶಾಸಕರು ಪ್ರತಿಯೊಬ್ಬರೂ ಮಾತನಾಡಬೇಕು ಎಂದು ಇಚ್ಛಿಸಿರತಕ್ಕ ಸಂದರ್ಭದಲ್ಲಿ ಸರ್ಕಾರ ಕೇವಲ 4 ದಿವಸಗಳಲ್ಲಿ ಆಯವ್ಯಯ ಪಟ್ಟಿಯನ್ನು ಹೇರಿಸಿ ಅರ್ಜೆಂಟ್ ಮಾಡಿ, ಅರ್ಜೆಂಟ್ ಮಾಡಿ ನಾಳೆ ಉತ್ತರ ಹೇಳಿ ಬಿಡಬೇಕು. ಸಮಯ ಆಗಿ ಹೋಯಿತು ಅಂತ ತುರ್ತು ಪರಿಸ್ಥಿತಿಯ ರೀತಿಯಲ್ಲಿ ತಂದಿರತಕ್ಕಂಥದ್ದು ತುಂಬಾ ವಿಷಾದನೀಯ. ಮುಂದೆ ಈ ರೀತಿ ಆಗಬಾರದು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈ ಸಾರಿಯ ಆಯವ್ಯಯ ಪಟ್ಟಿಯಲ್ಲಿ ಮಣ್ಣಿನಮಕ್ಕಳು, ಕಲ್ಲಿನ ಮಕ್ಕಳು, ತಾವು ಅಪ್ಪಣೆ ಕೊಡಿಸಿದ್ದೀರಿ, ಚಿನ್ನದ ಮಗ ಅಂತ ಹೇಳಿ, ಮಣ್ಣಿನ ಮಕ್ಕಳು, ಕಲ್ಲಿನ ಮಕ್ಕಳು ಇಬ್ಬರೂ ಸೇರಿ ಚಿನ್ನದ ಮಕ್ಕಳ ಅಧ್ಯಕ್ಷತೆಯಲ್ಲಿ ಕಾಫಿ ಮಕ್ಕಳ ಮೇಲೆ ಇಷ್ಟು ವಕ್ರದೃಷ್ಟಿ ಬೀರಿದಿರಲ್ಲಾ, ಇದು ಏಕೆ ಎಂದು ಪ್ರಶ್ನೆ ಮಾಡಬೇಕಾಗುತ್ತದೆ. ಟ್ಯಾಕ್ಸ್ ಹಾಕತಕ್ಕಂತಹ ಒಂದು ಪದ್ಧತಿ ಬೆಳೆದು ಬಂದಿದೆ. ಯಾವುದೇ ದೇಶದಲ್ಲಿ ಆಯವ್ಯಯ ಪ್ರಾರಂಭವಾಯಿತ ಎಂದರೆ, ಕೇಂದ್ರದಲ್ಲಿ ಇರಬಹುದು, ರಾಜ್ಯದಲ್ಲಿ ಇರಬಹುದು. ಟ್ಯಾಕ್ಸ್ ಕಡಿಮೆಯಾಗುತ್ತದೆ ಎಂದು ಯಾರೂ ನಿರೀಕ್ಷಣೆ ಮಾಡುವುದಿಲ್ಲ. ಸದ್ಯ ಇದ್ದಲ್ಲಿ ಬಿಟ್ಟರೆ ಸಾಕಷ್ಟು ಅಂತ ತೃಪ್ತಿಪಟ್ಟು ಕೊಳ್ಳತಕ್ಕ ಸಂದರ್ಭದಲ್ಲಿ ಟ್ಯಾಕ್ಸ್‌ನ್ನು ಇವತ್ತು ಕಾಫಿ ಮೇಲೆ ಹಾಕಿದ್ದಾರೆ. ಕಾಫಿ ಬೆಳೆಗಾರ ಇವರ ದೃಷ್ಟಿಯಲ್ಲಿ ಹೇಗೆ ಬಿದ್ದನೋ ಗೊತ್ತಿಲ್ಲ. ಬಹುಶಃ ಮಾನ್ಯ ಸಿದ್ದರಾಮಯ್ಯನವರು ಕಾಫಿ ಕುಡಿಯುತ್ತಾರೋ, "ಟೀ" ಕುಡಿಯುತ್ತಾರೋ ಅದೂ ಕೂಡ ನನಗೆ ಗೊತ್ತಿಲ್ಲ. ಆದರೆ ಟ್ಯಾಕ್ಸ್ ಹಾಕುವುದರಲ್ಲೂ ಒಂದು ಮಿತಿ ಇದೆ.

ಅಧ್ಯಕ್ಷರು : ಸೈಜ ನೋಡಿ ಹಾಕಿದ ಹಾಗೆ ಕಾಣುತ್ತದೆ.

ಶ್ರೀ ಬಿ.ಬಿ. ಶಿವಪ್ಪ : ನಾನೊಬ್ಬನೆ ಕಾಫಿ ಪ್ಲಾಂಟರ್ ಆಗಿದ್ದರೆ ನನ್ನ ಸೈಜು ನೋಡಿ ಹಾಕಬಹುದಿತ್ತು ಅವರು. ಆದರೆ ನನಗಿಂತ ತೆಳ್ಳಗೆ ಇರತಕ್ಕ ಕಾಫಿ ಬೆಳೆಗಾರರು ಬಹಳ ಜನ ಇದ್ದಾರೆ. ಆದರೆ ಕಾಫಿ ಬೆಳೆಯತಕ್ಕಂತಹವರೆಲ್ಲರೂ ಶ್ರೀಮಂತರಲ್ಲ. ಕಾಫಿ ಬೆಳೆಯುವುದು ಅವರಿಗೆ ಗೊತ್ತಿದ್ದ ಲೆಕ್ಕಾಚಾರದ ಪ್ರಕಾರ 100ಕ್ಕೆ 90ಭಾಗ ಅತಿ ಸಣ್ಣ ಕಾಫಿ ಬೆಳೆಗಾರರು ಇದ್ದಾರೆ. ಆದರೆ ತಾವು ಕಾಫಿ ಮೇಲೆ ಹಾಕಿರತಕ್ಕ ದರ ಏನು ಇದ, ಇದು ಕೇವಲ 3 ಜಿಲ್ಲೆಗೆ ಸೀಮಿತವಾಗಿರತಕ್ಕ, ಕೊಡಗು ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆ, ಇದು ಕೇವಲ ಕಾಫಿ ಪ್ಲಾಂಟರ್ ಮೇಲೆ ಅಲ್ಲ ನಮ್ಮ ದುರಾದೃಷ್ಟ ಪ್ಲಾಂಟರ್ ಎಂಬ ಅಕ್ಷರದ ಮೇಲೆ ತೆರಿಗೆಯನ್ನು ಹಾಕಿದ್ದಾರೆ. ಅವನು ಕೂಡ ಕೃಷಿಕ ಅವನೂ ಕೂಡ ವ್ಯವಸಾಯ ಗಾರ. ಮಳೆಯ ಆಶ್ರಯದಲ್ಲಿ ನಂಬಿರತಕ್ಕಂತಹವನು. ಕೂಲಿ ಕಾರ್ಮಿಕರನ್ನು ನಂಬಿರತಕ್ಕಂಥವನು. ಹವಾಗುಣ ಏನ ಇದೆ, ಅದನ್ನೆಲ್ಲಾ ನಂಬಿ ವ್ಯವಸಾಯ ಮಾಡತಕ್ಕಂಥವನು. ಬರತಕ್ಕ ಎಲ್ಲಾ ಕಾನೂನು ಮತ್ತು ಈ ಇಂಡಸ್ಟ್ರೀಸ್ ಒಳಗಡೆ ಬರತಕ್ಕ ಕಾನೂನಿಗೆ ಒಳಪಟ್ಟಿರತಕ್ಕ ಎರಡು ವಿಚಾರಗಳನ್ನು ಸೇರಿಸಿಕೊಂಡು ಸರ್ಕಾರಕ್ಕೆ ಯಾವುದೇ ರೀತಿಯ ತೊಂದರೆ ಕೊಡದೆ ಸರ್ಕಾರ ಹಾಕತಕ್ಕ ಎಲ್ಲಾ ತೆರಿಗೆಗಳನ್ನು ಸಮಯಕ್ಕೆ ಸರಿಯಾಗಿ ಪ್ರಾಮಾಣಿಕವಾಗಿ ಕಟ್ಟಿ, ಸರ್ಕಾರದಿಂದ ಏನೂ ಅಪೇಕ್ಷೆ ಪಡದೆ ವ್ಯವಸಾಯ ಮಾಡುತ್ತಿರತಕ್ಕ ಒಂದು ವರ್ಗ ಇದು ಎಂದು ಹೇಳಿದರೆ ತಪ್ಪಾಗಲಾರದು. ಸುಮಾರು 2-3 ತಲೆಮಾರುಗಳಿಂದ ಕಾಫಿಗೆ ಯಾವುದೇ ರೀತಿಯ ಉತ್ಸಾಹಕವಾದ ಬೆಲೆ ಇರಲಿಲ್ಲ. ಬಹುತೇಕ ಕಳೆದ ಸಾಲಿನಲ್ಲಿ ಒಂದು ರೀತಿಯ ಅನಿರೀಕ್ಷಿತ ಮತ್ತು ಅತ್ಯಂತ ಅದ್ಭುತವಾದ ಏರಿಕೆ ಕಾಫಿಗೆ ಬಂತು. ಕಾಫಿ ಬೆಳೆಗಾರರು ಹಾಳಾದಂತಹ ಪರಿಸ್ಥಿತಿಯಲ್ಲಿ ಕಾಫಿ ತೋಟಗಳೆಲ್ಲ ಸಂಪೂರ್ಣವಾಗಿ ಕೆಳಮಟ್ಟಕ್ಕೆ ಹೊಂದದಂಥ ಸಂದರ್ಭ ಕಾಫಿ ಗಿಡಗಳನ್ನು ಕಡಿದು 5 ರಿಂದ 10 ರೂಪಾಯಿಗೆ ಮಾರಿದಂಥ ಸಂದರ್ಭದಲ್ಲಿ ಇದು ಯಾವುದೇ ಸಂದರ್ಬದಲ್ಲಿ ಕಾಫಿ ಬೆಳೆಗಾರರು ತೊಂದರೆಗೆ ಸಿಕ್ಕಿಹಾಕಿಕೊಂಡಂತಹ ಪರಿಸ್ಥಿತಿಯಲ್ಲಿ ಸರ್ಕಾರ ಅವರ ರಕ್ಷಣೆ ಮಾಡಲಿಕ್ಕೆ ಬರಲಿಲ್ಲ. ಕಳೆದ ಸಾರಿ ಬಂದಂತಹ ಅದ್ಭುತವಾಗಿರತಕ್ಕ ಏರಿಕೆ ನಾನು ಮೊದಲೇ ಹೇಳಿದಹಾಗೆ ಅನಿರೀಕ್ಷಿತ. ಕಾಫಿ ಉದ್ದಿಮೆ ಈ ಮೂರು ಜಿಲ್ಲೆಗಳಲ್ಲಿ ಸೀಮಿತವಾಗಿದ್ದರೂ ಕೂಡ ನಮ್ಮ ರಾಜ್ಯದಲ್ಲಿ ಸುಮಾರು ಎರಡೂವರೆಲಕ್ಷ ಮೂರು ಲಕ್ಷ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸಿರತಕ್ಕದ್ದು ಮಾತ್ರವಲ್ಲ, ಸರ್ಕಾರ ಹೇಳತಕ್ಕ ಎಲ್ಲಾ ಸೌಲಭ್ಯಗಳನ್ನು ಒದಗಿಸಿ ಕೊಡತಕ್ಕ ಮತ್ತು ಸುಮಾರು 400 ರಿಂದ 500 ಕೋಟಿ ವಿದೇಶಿವಿನಿಯಮವನ್ನು ಗಳಿಸತಕ್ಕ ಒಂದು ಉದ್ಯಮವಾಗಿದೆ. ಇಂತಹ ಉದ್ದಿಮೆ ಮೇಲೆ ಮಾನ್ಯಮಂತ್ರಿಗಳು ಯಾವರೀತಿ ಟ್ಯಾಕ್ಸ್ ಹಾಕಿದ್ದಾರೋ ಗೊತ್ತಿಲ್ಲ. 35-40 ಸಾವಿರ ರೂಪಾಯಿಗಳನ್ನು ಒಂದು ಎಕರೆಗೆ ನಾವು ಖರ್ಚು ಮಾಡಬೇಕಾಗುತ್ತದೆ. ಕಾಫಿ ಬೆಳೆಗಾರರು ಕಾಫಿ ಬೆಳೆಯುವುದಕ್ಕೆ ಉಪಯೋಗಿಸತಕ್ಕ ಪ್ರತಿಯೊಂದು ವಸ್ತು ಒಂದಕ್ಕೆ ಸುಮಾರು 50 ರಿಂದ 60ಪಟ್ಟು ಜಾಸ್ತಿಯಾಗಿದೆ. ಗೊಬ್ಬರ ಇರಬಹುದು, ಸ್ಪ್ರೇ ಕೆಮಿಕಲ್ಸ್ ಇರಬಹುದು, ಉಪಯೋಗಿಸತಕ್ಕ ಆಯುಧಗಳು ಇರಬಹುದು ಪ್ರತಿಯೊಂದು ಸಾಮಾನು ಒಂದಕ್ಕೆ 50 ರಿಂದ 70ಪಟ್ಟು ಜಾಸ್ತಿಯಾಗಿರತಕ್ಕ ವಿಷಯ ಗೊತ್ತಿದೆ. ಕೂಲಿ ಕೂಡ ಜಾಸ್ತಿಯಾಗಿದೆ, ಇವತ್ತು ಸರ್ಕಾರ ಕೂಲಿಯನ್ನು ಯಾವುದೇ ರೀತಿಯಲ್ಲಿ ನಿಗದಿಪಡಿಸಿದ್ದರೂ ಕೂಡ ಇವತ್ತು ಕನಿಷ್ಟ ವೇತನ ಕಾಫಿ

ಬೆಳೆಗಾರರು ಕೊಡತಕ್ಕದ್ದು 50 ರೂಪಾಯಿ. 50 ರೂಪಾಯಿ ಕೊಟ್ಟರು ಗಂಡಾಳು ಬರುವುದಿಲ್ಲ. ಇಂತಹ ಪರಿಸ್ಥಿತಿಯನ್ನು ಎದುರಿಸತಕ್ಕ ಸಂದರ್ಭದಲ್ಲಿ ಅವರ ಮೇಲೆ ಹಾಕಿರತಕ್ಕ ಟ್ಯಾಕ್ಸ್.....

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಮಾನ್ಯ ಸದಸ್ಯರು ಕಾಫಿಬೆಳೆಗಾರರ ಬಗ್ಗೆ ಹೇಳುತ್ತಿದ್ದಾರೆ. ಆದರೆ ಕೃಷಿ ಕಾರ್ಮಿಕರು ಕರ್ನಾಟಕದಲ್ಲಿ ಕಾಫಿ ಪ್ಲಾಂಟೇಶಷನ್‌ಗಳಲ್ಲಿ ಅಷ್ಟೆ ಅಲ್ಲ ಕೆಲಸ ಮಾಡುತ್ತಿರುವುದು.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಸದಸ್ಯರು ತಪ್ಪು ತಿಳಿದುಕೊಂಡಿದ್ದಾರೆ. ನಾನು ಹೇಳುತ್ತಿರುವುದು ಕಾಫಿ ಬಗ್ಗೆನೇ ಎರಡೂವರೆ ಮೂರು ಲಕ್ಷ ಕೂಲಿಗಾರರಿಗೆ ಜೀವನಾಂಶ ಕೊಡುತ್ತಿರುವುದು ಕಾಫಿ ಉದ್ಯಮ. ಈ 3 ಲಕ್ಷ ಜನರಿಗೆ ಅನ್ವಯಿಸತಕ್ಕ ಈವೊಂದು ವಿಚಾರದಲ್ಲಿ ಮಾತ್ರ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಏರಿಸಿರತಕ್ಕ ರೇಟು ಅತ್ಯಂತ ಅನಿರೀಕ್ಷಿತ ಮತ್ತು ನ್ಯಾಯ ಸಮ್ಮತವಿಲ್ಲದಿರತಕ್ಕ ಒಂದು ರೇಟು ಎಂದು ತಮಗೆ ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾವುದೇ ಕಾಫಿಬೆಳೆಗಾರ ಕಳೆದ ಸಾಲಿನಲ್ಲಿ ಬಂದಂತಹ ರೇಟನ್ನು ಪಡೆಯುವುದಕ್ಕೆ ಸಾಧ್ಯವವಾಗಲಿಲ್ಲ. ಕಾರಣ ಎರಡು ತಲೆಮಾರುಗಳಿಂದ ಕಾಫಿಬೆಳೆಗಾರರಿಗೆ ಸಿಗುತ್ತಿದ್ದ ರೇಟು ಶುರುವಿನಲ್ಲಿ ಒಂದು ಸಾವಿರ ಎರಡು ಸಾವಿರ ಬರುವಾಗ ಪ್ರತಿಯೊಬ್ಬ ಕಾಫಿಪ್ಲಾಂಟರ್ ಅತ್ಯಂತ ಸಂತೋಷಪಟ್ಟರು. ಇಂಥ ರೇಟು ಜೀವಮಾನದಲ್ಲಿಯೇ ನೋಡಲಿಲ್ಲ ಅಂತ ಆ ಒಂದೂವರೆ ಸಾವಿರ 2 ಸಾವಿರದ ಎಲ್ಲ ಕಾಫಿಯನ್ನು ಮಾರಾಟ ಮಾಡಿದರು. ಕೇವಲ ಬೆರಳೆಣಿಕೆ ಜನಗಳಿಗೆ ಮಾತ್ರ ಕೊನೆಗೆ ಬಂದಂತಹ ರೇಟು ಸುಮಾರು 5 ರಿಂದ ಆರೂವರೆ ಸಾವಿರ ರೂಪಾಯಿ ಸಿಕ್ಕಿತು. ಅದು ಜಾಸ್ತಿ ಜನಗಳಿಗೆ ಸಿಗಲಿಲ್ಲ. ಬಹುತೇಕ ಸಣ್ಣ ಬೆಳೆಗಾರರು ಕಾಫಿ ಕೊಯ್ಯುವುದಕ್ಕೆ ಮೊದಲೇ ಹಣ ತೆಗೆದುಕೊಂಡು ಕಾಫಿ ಕೊಡತಕ್ಕ ಪದ್ಧತಿ ನಮ್ಮಲ್ಲಿರತಕ್ಕದ್ದು. ನಿಜವಾಗಿಯೂ ನಮ್ಮ ಬಂಡವಾಳವನ್ನು ಇವತ್ತು ಎಲ್ಲರ ಎದುರಿಗೆ ಹೇಳಿಕೊಳ್ಳುವುದಕ್ಕೆ ಸ್ವಲ್ಪ ಅಂಜಿಕೆಯಾಗುತ್ತದೆ. ನಾಳೆ ಇದು ಏನಾದರೂ ಪತ್ರಿಕೆಗಳಲ್ಲಿ ಬಂದರೆ ಪ್ಲಾಂಟರುಗಳು ನನ್ನನ್ನು ಕೇಳಿಯಾರು ನಮ್ಮ ಮರ್ಯಾದೆಯನ್ನು ಸದನದಲ್ಲಿ ಹರಾಜು ಹಾಕಿಬಿಟ್ಟೆಯೆಂದು ಕೇಳುತ್ತಾರೆ. ನಮ್ಮ ನಿಜವಾದ ಬಂಡವಾಳವನ್ನು ಕೇಳಬೇಕಾದರೆ ಬ್ಯಾಂಕುಗಳಲ್ಲಿ ಕೇಳಬೇಕು. ಯಾವುದೇ ಬ್ಯಾಂಕಿನಲ್ಲಿ ಪ್ಲಾಂಟರುಗಳ ನಿಜವಾದ ಸ್ಥಿತಿ ಅರ್ಥವಾಗುತ್ತದೆ. ಇವತ್ತು ಪ್ಲಾಂಟರುಗಳನ್ನು ಉಳಿಸುವುದಕ್ಕೆ ಹೆಚ್ಚುಕಡಿಮೆ ಸಹಾಯ ಮಾಡಿದವರು ಅಂದರೆ ಯಾವುದೇ ಸರ್ಕಾರವಲ್ಲ, ಅದು ಬ್ಯಾಂಕುಗಳು. ಬ್ಯಾಂಕುಗಳು ಪ್ಲಾಂಟರು ಯಾವುದೇ ಕಷ್ಟದ ಸ್ಥಿತಿಯಲ್ಲಿದ್ದರೂ ಹಲವಾರು ವಿಧದಿಂದ ಸಹಾಯ ಮಾಡಿ ಇವತ್ತು ಕಾಫಿ ಉದ್ಯಮವನ್ನು ಉಳಿಸಿದ್ದಾರೆ. ಅಂತಹ ಸಂದರ್ಭದಲ್ಲಿ ಇವತ್ತು ಟ್ಯಾಕ್ಸ್ ಹಾಕಿರತಕ್ಕ ದರ ಏನಿದೆ ಇದು ಅತ್ಯಂತ ಅವೈಜ್ಞಾನಿಕವಾದ ಒಂದು ದರ. ಇದನ್ನು ಖಂಡಿತವಾಗಿಯೂ ಕಡಿಮೆ ಮಾಡುತ್ತೀರಿ ಎನ್ನುವ ಭಾವನೆ ನನಗೆ ಇದೆ. ನಿಮ್ಮ ನಗುಮುಖವನ್ನು ಕಂಡರೆ ನನಗೆ ಹಾಗೆ ಅನಿಸುತ್ತಿದೆ. ಟ್ಯಾಕ್ಸ್ ಮೇಲೆ ತಾವು ಇನ್ನೊಂದ ಫಿಕ್ಸ್ ಮಾಡಿದ್ದೀರಿ. ಮಾನ್ಯ ಅರ್ಥಮಂತ್ರಿಗಳಿಗೆ ಕಾಫಿ ಉದ್ಯಮಗಳ ಬಗ್ಗೆ ಸಲಹೆಗಾರರು ಯಾರಿದ್ದಾರೋ ಗೊತ್ತಿಲ್ಲ. ಕಾಫಿ ಬೆಳೆಯತಕ್ಕ ಮಂತ್ರಿಗಳು ಇಬ್ಬರು ಇದ್ದಾರೆ.

ಶ್ರೀ ಸಿದ್ದರಾಮಯ್ಯ : ಒಂದು ಎಕರೆಗೆ ನೆಟ್ ಇನ್‌ಕಂ ಎಷ್ಟು ಬರುತ್ತದೆಂದು ಹೇಳುತ್ತೀರಾ? ಲಾಸ್ ಮತ್ತು ನೆಟ್ ಎರಡೂ ಹೇಳಿ.

ಶ್ರೀ ಬಿ.ಬಿ. ಶಿವಪ್ಪ : ಅದನ್ನು ಹೇಳಿದರೆ ನಮ್ಮ ಬಂಡವಾಳ ಪೂರ್ತಿ ಹೊರಗೆ ಬರುತ್ತದೆ.

ಅಧ್ಯಕ್ಷರು : ವ್ಯಾಪಾರಸ್ಥರ ಹಾಗೆ ಹೇಳಿ ನಿಜ ಏಕೆ ಹೇಳುತ್ತೀರಿ?

ಶ್ರೀ ಬಿ.ಬಿ. ಶಿವಪ್ಪ : ನೀವು ಕೇಳಿರುವುದರಿಂದ ನಾನು ಹೇಳಬೇಕಾಗುತ್ತದೆ. ಒಂದು ಕಾಲದಲ್ಲಿ ಸಂಬಂಧ ಬೆಳೆಸಬೇಕೆಂದು ನಾನು ಗದುಗಿಗೆ ಹೋಗಿದ್ದೆ. ಗದಗಿಗೆ ಹೋದಾಗ, ಗದುಗಿನಲ್ಲಿ ನಮ್ಮ ಬಗ್ಗೆ ಭಾರೀ ದೊಡ್ಡ ಕಲ್ಪನೆ. ಕಾಫಿಪ್ಲಾಂಟರು ಬರುತ್ತಾರೆಂದರೆ, ಮಹಾರಾಜರು ಹೋದರು ಇವರೇ ಉಳಿದುಕೊಂಡಿರುವವರು ಎನ್ನುವ ಲೆಕ್ಕಚಾರವಿತ್ತು. ಅವರು ನಮಗೆ ಕೊಡತಕ್ಕ ಆದರದ ಸ್ವಾಗತ ತೋರಿಸತಕ್ಕ ವಿಶ್ವಾಸ ಇದನ್ನೆಲ್ಲ ನೋಡಿದಾಗ ನನಗೆ ಸ್ವಲ್ಪ ಅನಿಸಿತು ಅವರು ನಮ್ಮನ್ನು ಎಲ್ಲೋ ಬೇರೆ ಆಕಾಶದಲ್ಲಿದ್ದಾಟ್ಟಿದ್ದಾರೆಂದು. ರಾತ್ರಿ ಊಟವಾದ ಮೇಲೆ ಕುಳಿತುಕೊಂಡು ಮಾತನಾಡುತ್ತಾ ಕೇಳಿದರು ತಾವು ಕೇಳಿದ ಪ್ರಶ್ನೆಯನ್ನು. ನಿಮ್ಮ ಕಾಫಿಯಲ್ಲಿ ಒಂದು ಎಕರೆಗೆ ಎಷ್ಟು ಉತ್ಪಾದನೆ ಬರುತ್ತದೆಂದು ಕೇಳಿದರು. ಅವೊತ್ತು ಕೊಟ್ಟ ಉತ್ತರವನ್ನೇ ಹೇಳಿಬಿಡುತ್ತೇನೆ. ನಾನು ಭಾರೀ ಕಷ್ಟಪಟ್ಟು ಆವೊತ್ತಿನ ರೇಟಿನಲ್ಲಿ ಸುಳ್ಳು ಹೇಳಬೇಕಾಯಿತು, ಸತ್ಯವನ್ನು ಹೇಳುವುದಕ್ಕೆ ಆಗಲಿಲ್ಲ. ಏಕೆಂದರೆ ಸತ್ಯವನ್ನು ಹೇಳಿಬಿಟ್ಟರೆ ರಾತ್ರಿಯೇ ಎಲ್ಲಿ ಆಚೆಗೆ ಕಳುಹಿಸಿಬಿಡುತ್ತಾರೋ, ಹೆಣ್ಣು ಕೊಡದೆ ಹೋಗಬಹುದು ಇವೆಲ್ಲ ಲೆಕ್ಕ ಹಾಕಿಕೊಂಡು ಒಂದು ಸುಳ್ಳು ಹೇಳಬೇಕಾದ ವಾತಾವರಣ ನಿರ್ಮಾಣವಾಯಿತು. ಖರ್ಚು ವೆಚ್ಚ ಎಲ್ಲ ಕಳೆದು 6-7 ಸಾವಿರ ಉಳಿಯುತ್ತದೆಂದು ಸುಳ್ಳು ಹೇಳಿಬಿಟ್ಟೆ ಸುಳ್ಳು. ನಮ್ಮ ಎದುರಿಗೆ ಎತ್ತರವಾದ ಯಜಮಾನರು ಇದ್ದರು ಅವರು ಏನೆಂದರೆ, ತಥ್ ಬಿಡ್ರಿ! ನಾವು ಒಂದು ಮೆಣಸಿನಕಾಯಲ್ಲಿ ತೆಗೆದುಬಿಡುತ್ತೇವೆಂದರು. ಮೆಣಸಿನಕಾಯಿಯಲ್ಲಿ ತೆಗೆದುಕೊಳ್ಳುವ ಉತ್ಪಾದನೆ ಒಂದು ವರ್ಷ ಎರಡು ವರ್ಷಕ್ಕೆ ಒಂದು ಸಾರಿ ಇಡೀ ಕಾಫಿ ತೋಟದಲ್ಲಿ ಸಿಗುವುದಿಲ್ಲ ಸ್ವಾಮಿ. ಪ್ರತಿ ವರ್ಷ ಲಾಭ ಬರುವುದಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಅಂದರೆ ಮೆಣಸಿನಕಾಯಿಯ ಮೇಲೆ ತೆರಿಗೆ ಹಾಕಿಯೆಂದು ಹೇಳುತ್ತೀರಾ?

ಶ್ರೀ ಬಿ.ಬಿ. ಶಿವಪ್ಪ : ಎರಡು ವರ್ಷಕ್ಕೆ ಒಂದು ಬೆಳೆ, ಅದು ಸರಿಯಾಗಿ ಮಳೆ ಬಂದರೆ ಮಳೆ ಬರದಿದ್ದರೆ ಬೆಳೆಯಾಗುವುದಿಲ್ಲ.

ಅಧ್ಯಕ್ಷರು : ಮೆಣಸಿನಕಾಯಿಯ ಮೇಲೆ ಹಾಕಿ ಅಂದರೆ ಡಿ.ಆರ್. ಪಾಟೀಲರು ಅಬ್ಜೆಕ್ಟ್ ಮಾಡುತ್ತಾರೆ.

ಶ್ರೀ ಬಿ.ಬಿ. ಶಿವಪ್ಪ : ಮೆಣಸಿನಕಾಯಿಯ ಮೇಲೆ ಹಾಕುವುದಕ್ಕೆ ಲೆಕ್ಕ ಸಿಗುವುದಿಲ್ಲ. ಅವರು 4 ಸಾರಿ ಬೆಳೆಯುತ್ತಾರೆ ಮೆಣಸಿನಕಾಯಿಯನ್ನು. ನಾನು ಹೇಳತಕ್ಕ ವಿಚಾರವನ್ನು ಗಮನಿಸಬೇಕು, ಇದು ತಮಾಷೆಯ ಮಾತಲ್ಲ. ಪ್ಲಾಂಟರುಗಳು ಯಾರೂ ಬದುಕುವುದಿಲ್ಲ. ನೀವು ಟ್ಯಾಕ್ಸ್ ಹಾಕಿದರೆ ನೇರವಾಗಿ ತಂದುಕೊಡತಕ್ಕ ವರ್ಗದಲ್ಲಿ ಯಾವತ್ತೂ ದ್ರೋಹ ಮಾಡಿದವರು ಅಲ್ಲಿ ಟ್ಯಾಕ್ಸ್ ಹಾಕಿದರೆ ಕೊಡತಕ್ಕವರು ಅವರು. ಅವರಿಗೆ ಕಳ್ಳತನ ಕಲಿಸತಕ್ಕ ವ್ಯವಹಾರ ಮಾಡಬೇಡಿ. ಟ್ಯಾಕ್ಸ್‌ನ್ನು ಕಡಿಮೆ ದರದಲ್ಲಿ ಹಾಕಿ ಹೆಚ್ಚಿಗೆ ವಸೂಲಿ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೇ ವಿನಹ ಟ್ಯಾಕ್ಸನ್ನು

ಅಬ್‌ನಾರ್ಮಲ್ ಆಗಿ ಹಾಕಿ ಟ್ಯಾಕ್ಸ್‌ನ್ನು ಕದಿಯುತಕ್ಕ ವ್ಯವಸ್ಥೆಯನ್ನು ನಿರ್ಮಾಣ ಮಾಡಬಾರದೆಂದು ನನ್ನ ಕಳಕಳಿಯ ಪ್ರಾರ್ಥನೆ. ಮತ್ತೊಂದು ವಿಚಾರವನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಎಕರೆಗೆ ಉತ್ಪಾದನೆಯ ಮೇಲೆ ಖರ್ಚನ್ನು ಕೊಡಬೇಕು ಎನ್ನುವ ಮಾತನ್ನು ಅವರು ಹೇಳಿದ್ದಾರೆ. 250 ರೂಪಾಯಿ ಮಿನಿಮಂ ಫಿಕ್ಸ್ ಮಾಡಿದ್ದರೆ, ಇಷ್ಟು ಬೆಳೆದರೆ ಮಾತ್ರ ಇಷ್ಟು ಖರ್ಚೆಂದು ಕೊಡಲಾಗಿದೆ. ಬುದ್ಧಿವಂತರು ಯಾರು ನಿಮಗೆ ಬುದ್ಧಿ ಹೇಳಿದ್ದಾರೋ ಗೊತ್ತಿಲ್ಲ. ಮಾತಿಗೋಸ್ಕರ ಹೇಳತಕ್ಕ ಮಾತಲ್ಲ, ತಮ್ಮ ಮುಖೇನ ಈ ಸದನದಲ್ಲಿ ಆಶ್ವಾಸನೆಯನ್ನು ಅರ್ಥಮಂತ್ರಿಗಳಿಗೆ ಕೊಡುತ್ತಿದ್ದೇನೆ. ನನ್ನದೇ ಆದಂತಹ 15 ಎಕರೆ ತೋಟವನ್ನು ಫ್ರೀ ಆಗಿ ಬರೆದುಕೊಡುತ್ತೇನೆ. ತಾವು ಹೇಳಿದಹಾಗೆ 15 ಎಕರೆ ತೋಟದಲ್ಲಿ ಕಾಫಿ ಬೆಳೆಯುವ ವ್ಯವಸ್ಥೆ ಮಾಡಿ. ಕಾಫಿ ಪ್ಲಾಂಟರುಗಳ ಕಷ್ಟಸುಖ ಎಲ್ಲ ತಮಗೆ ಗೊತ್ತಾಗಲಿ ಮತ್ತೊಮ್ಮೆ ಅರ್ಥಮಂತ್ರಿಗಳಾಗಿ ಇಲ್ಲಿಗೆ ಬಂದು ನಮ್ಮ ಮೇಲೆ ಏನು ಟ್ಯಾಕ್ಸ್ ಹಾಕುತ್ತಿರೋ ಹಾಕಿ ನಾವು ಕೊಡಲಿಕ್ಕೆ ಸಿದ್ಧರಿದ್ದೇವೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅರ್ಥಮಂತ್ರಿಗಳಾದ ಸಿದ್ದರಾಮಯ್ಯನವರೇ ದಯವಿಟ್ಟು ತೆಗೆದುಕೊಳ್ಳಿ.

ಶ್ರೀ ಕೆ.ಎನ್. ನಾಗೇಗೌಡ : ಕಾಫಿತೋಟ ತೆಗೆದುಕೊಂಡು ಫೈನಾನ್ಸ್ ಮಿನಿಸ್ಟರ್‌ಗಿರಿ ಕೊಡಿಯೆಂದು ಹೇಳುತ್ತೀರಾ?

ಶ್ರೀ ಬಿ.ಬಿ. ಶಿವಪ್ಪ : ನೀವಾಗಲಿ, ಕಾಫಿಯ ಮೇಲೆ ದರ ಏರಿಸತಕ್ಕ ವ್ಯವಸ್ಥೆಯನ್ನು ಹೇಳಿಕೊಟ್ಟಂತಹ ನಿಮ್ಮ ಅಧಿಕಾರಿಗಳಾಗಲೀ ಇದರ ಬಗ್ಗೆ ಗಮನಹರಿಸಬೇಕಾಗುತ್ತದೆ. ಟ್ಯಾಕ್ಸ್ ಏರಿಸತಕ್ಕ ವಿಚಾರವನ್ನು ಸ್ವಲ್ಪ ಸದನದಲ್ಲಿ ಎಲ್ಲಾ ಸದಸ್ಯರ ಗಮನಕ್ಕೆ ತರಬೇಕೆಂದು ಇಚ್ಛೆಮಾಡುತ್ತೇನೆ. ಕಳೆದ ಸಾಲಿನಲ್ಲಿ ಹಾಕಿದ ಟ್ಯಾಕ್ಸ್ ನೀವೇ ಯೋಚನೆ ಮಾಡಿ, ಕಳೆದ ಸಾರಿ 15 ಎಕರೆವರೆಗೆ ಟ್ಯಾಕ್ಸ ಇರಲಿಲ್ಲ. ಈ ಸಾರಿ ಎಕರೆಗೆ 1200ರಂತೆ 11 ಸಾವಿರ ಟ್ಯಾಕ್ಸ್ ಕೊಡಬೇಕಾಗುತ್ತದೆ. ಕಳೆದ ಸಾರಿ ಟ್ಯಾಕ್ಸ್ ಇದಕ್ಕೆ ಇರಲಿಲ್ಲ. ಈ ವರ್ಷ 11 ಸಾವಿರ ಟ್ಯಾಕ್ಸ್ ಮಾಡಿದ್ದೀರಿ. ಇವತ್ತು 16-20 ಎಕರೆಗೆ ಇರತಕ್ಕ ಕಾಫಿಪ್ಲಾಂಟರ್‌ಗೆ ಕಳೆದ ಸಾರಿ 1250 ರೂಪಾಯಿ ಟ್ಯಾಕ್ಸ್ ಇತ್ತು. ಈಗ 18,750 ರೂಪಾಯಿಗಳನ್ನು ಯಾವ ಅಳತೆಗೋಲಿನಲ್ಲಿ ಅಳೆದರೋ ನನಗೆ ಗೊತ್ತಿಲ್ಲ. ಯಾವ ಟೇಪು ಉಪಯೋಗಿಸಿದ್ದೀರಿ? 1250 ರೂಪಾಯಿ ಇದ್ದದ್ದು 18,750 ಆಗಿದೆ.. 20-25 ಎಕರೆ ಇರುವವರಿಗೆ 2760 ಕಳೆದ ವರ್ಷ ಟ್ಯಾಕ್ಸ್ ಹಾಕಿದ್ದರು. ಈ ವರ್ಷ ನೀವು ಟ್ಯಾಕ್ಸ್ ಹಾಕಿದ್ದು 30 ಸಾವಿರ. 25-30 ಎಕರೆವರೆಗ 4,750ರೂಪಾಯಿ ಟ್ಯಾಕ್ಸ್ ಕಳೆದ ವರ್ಷ ಇತ್ತು. ಇವತ್ತು 43,750 ಟ್ಯಾಕ್ಸ್ ಹಾಕಿದ್ದೀರಿ. 30.40 ಎಕರೆ ಇರತಕ್ಕವರಿಗೆ ಕಳೆದ ವರ್ಷ 9,950 ಟ್ಯಾಕ್ಸ್ ಇತ್ತು. ಇವತ್ತು 78, 750 ರೂಪಾಯಿ ಮಾಡಿದ್ದೀರಿ. 40-50 ಎಕರೆ ಮೇಲೆ ಬಿಟ್ಟಿದ್ದೀರಿ. ಅದಕ್ಕೆ ಕಾರಣ ಗೊತ್ತಿಲ್ಲ. ಕಳೆದ ವರ್ಷ 15,750 ಟ್ಯಾಕ್ಸ್ ಇದ್ದದನ್ನು 1,18,750 ಮಾಡಿದ್ದೀರಿ. ಇದನ್ನು ಯಾವ ರೀತಿಯ ಆಧಾರ ಇಟ್ಟುಕೊಂಡು ಈ ರೀತಿ ತಾವು ಏರಿಸಿದ್ದೀರಿ ಎಂಬುದು ನನಗೆ ಗೊತ್ತಿಲ್ಲ. ನಾನು ಆಡಿಟರ್ ಹತ್ತಿರ ಎಲ್ಲಾ ಲೆಕ್ಕಹಾಕಿ ತರಿಸಿಕೊಂಡಂಥ ಪಟ್ಟಿ. ತಾವು ಇದನ್ನು ಯಾವರೀತಿ ಬಗೆಹರಿಸುತ್ತೀರೋ ಗೊತ್ತಿಲ್ಲ. ನಮ್ಮ ಬೇಡಿಕೆ ಇಷ್ಟೇ. ಹಿಂದೆ 5 ಎಕರೆಯಿಂದ

15 ಎಕರೆವರೆಗೆ ಏನು ಮಾಫಿ ಇತ್ತು, ಅದನ್ನು ಈಗಲೂ ಕೂಡ ತಾವು ಮಾಫಿಮಾಡಬೇಕು. 16ರಿಂದ 20ಎಕರೆಗೆ ವಿಧಿಸಿರುವ ಮಿತಿ 10ಪಟ್ಟು ಜಾಸ್ತಿ ಮಾಡಿದ್ದೀರಿ. 40 ರಿಂದ 50 ಎಕರೆ ಮಿತಿಯನ್ನು 7 ಪಟ್ಟು ಜಾಸ್ತಿ ಮಾಡಿದ್ದೀರಿ. ಇದು ಏಕೆ ಹೀಗೆ ಮಾಡಿದಿರಿ ಎಂದು ನನಗೆ ಗೊತ್ತಿಲ್ಲ. ಯಾವಾಗಲೂ ಕಡಿಮೆ ಇದ್ದವರಿಗೆ ಕಡಿಮೆಯಾಗಿ, ಜಾಸ್ತಿ ಇದ್ದವರಿಗೆ ಜಾಸ್ತಿಯಾಗಬೇಕು. ಆದರೆ ನಿಮ್ಮ ಸರ್ಕಾರದಲ್ಲಿ ಜಾಸ್ತಿ ಇದ್ದವರಿಗೆ ಕಡಿಮೆಯಾಗಿ, ಕಡಿಮೆ ಇದ್ದವರಿಗೆ ಜಾಸ್ತಿ ಏರಿಸಿದ್ದೀರಿ. ಏಕೆಂದರೆ ಕಾಫಿ ಬೇಳೆಗಾರರೆಲ್ಲ ಪೂರ್ತಿಯಾಗಿ ಸಣ್ಣಹಿಡುವಳಿದಾರರು. ಈ ಮಾತನ್ನು ನಾನು ಕಳಕಳಿಯಿಂದ ಹೇಳುತ್ತಿದ್ದೇನೆ. ಸಣ್ಣ ಹಿಡುವಳಿದಾರರಿಗೆ ಪರಿಮಿತಿ ಕಡಿಮೆಯಾಗಿ, ಜಾಸ್ತಿ ಹಿಡುವಳಿದಾರರಿಗೆ ಜಾಸ್ತಿಯಾಗಿರುವುದು ವೈಜ್ಞಾನಿಕವಾದುದಲ್ಲ. ಈಗ ಕಮರ್ಷಿಯಲ್ ಟ್ಯಾಕ್ಸ್ ಆಫೀಸಿನಿಂದ ಪರ್ಮಿಟ್‌ನ್ನು ತೆಗೆದುಕೊಂಡು ಬರಬೇಕೆಂದು ಹೊಸ ನಿಯಮವನ್ನು ಮಾಡಿದ್ದೀರಿ. ಆ ಒಂದು ಜಾಗದಲ್ಲಿ ನಾವು ಲಂಚ ಕೊಟ್ಟಿರಲಿಲ್ಲ. ಅದನ್ನು ಕೊಡಬೇಕೆಂದು ಈಗ ನೀವು ಪ್ರಾರಂಭ ಮಾಡಿದ್ದೀರಿ. ಇದು ಲಂಚಕೋಸ್ಕರವೇ ಮಾಡಿದ್ದುದು. ಕೊಡದೇ ಇದ್ದರೆ ಆಗುವುದಿಲ್ಲ. ಏಕೆಂದರೆ ಇದು ವ್ಯವಹಾರ. ಇದು ನಗ್ನ ಸತ್ಯ. ಇದರಲ್ಲಿ ಮುಚ್ಚುಮರೆ ಏನೂ ಇಲ್ಲ. ಏಕೆಂದರೆ ಈ ವ್ಯವಸ್ಥೆ ಇರುವುದೇ ಹಾಗೆ. ಆದ್ದರಿಂದ ದಯವಿಟ್ಟು ಈ ವ್ಯವಸ್ಥೆಗೆ ಖಂಡಿತವಾಗಿಯೂ ಪ್ಲಾಂಟರ್ಸ್‌ನ್ನು ಎಳೆಯಬೇಡಿ. ಈ ಟ್ಯಾಕ್ಸ್ ಪದ್ಧತಿಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಏಕೆಂದರೆ ಇದರಿಂದ ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಇವರೆಲ್ಲರೂ ವಿದ್ಯಾವಂತ ಪ್ಲಾಂಟರುಗಳು ಅಲ್ಲ. ಇವರೆಲ್ಲರೂ ಕಾಫಿ ಬೆಳೆಯುವ ವ್ಯವಸ್ಥೆಯನ್ನು ಇಟ್ಟುಕೊಂಡಿರುವುದರಿಂದ, ಎಲ್ಲರೂ ಹೋಗಿ ಕರ್ಮಷಿಯಲ್ ಟ್ಯಾಕ್ಸ್ ಆಫೀಸರ್‌ನಿಂದ ಪರ್ಮಿಟನ್ನು ತರತಕ್ಕದ್ದು ಏನಿದೆ, ಇದು ಸರಿಯಾದ ವ್ಯವಸ್ಥೆ ಅಲ್ಲ. ದಯವಿಟ್ಟು ಇದನ್ನು ತಾವು ಮರುಪರಿಶೀಲನೆ ಮಾಡಬೇಕು. ಈ ಅವಿಭಕ್ತ ಕುಟುಂಬ, ಜಾಯಿಂಟ್ ಫ್ಯಾಮಿಲಿ ಎಂದು ಏನಿದೆ, ಇದರಲ್ಲಿ ಕೆಲವಾರು ಕಾರಣಗಳಿಂದ ಪ್ರಾಪರ್ಟಿಯನ್ನು ಡಿವೈಡ್ ಮಾಡಿಕೊಂಡು ಕಂಪನಿಯಾಗಿ ಮಾಡಿ ಕೊಂಡಿದ್ದಾರೆ. ಇವತ್ತು ಅವರನ್ನು ಟ್ರೇಡರ್ಸ್ ಅಂತ ಟ್ರೀಟ್ ಮಾಡುತ್ತಾರೆ. ಪ್ರತಿಯೊಬ್ಬ ಪ್ಲಾಂಟರ್ ಟ್ರೇಡರ್ ಆದರೆ ಗ್ರೋಯರ್ಸ್ ಯಾರು? ಇವತ್ತು ಇವರಿಗೆ ಹೆಚ್ಚು ಪರ್ಸೆಂಟ್ ಟ್ಯಾಕ್ಸ್ ಹಾಕುತ್ತಿದ್ದೀರಿ. ಕಾಫಿ ಬೆಳೆಯುವವರು ಪ್ರತಿಯೊಬ್ಬರೂ ಒಂದು ಪರ್ಸೆಂಟ್ ಟ್ಯಾಕ್ಸ್ ಕೊಡಬೇಕೆಂದರೆ ಯಾವ ಆಧಾರದಮೇಲೆ ಇದನ್ನು ಕಲೆಕ್ಟ್ ಮಾಡುತ್ತೀರಿ? ಇದು ಕಾಫಿ ಬೆಳೆಯುತ್ತಿರುವವರಿಗೆ ಮಾಡುತ್ತಿರುವ ಒಂದು ರೀತಿಯ ಮೋಸ. ಅವರ್‍ಯಾರೂ ನಿಮಗೆ ಮೋಸ ಮಾಡಿಲ್ಲದಿರುವಾಗ, ನೀವು ಏಕೆ ಅವರಿಗೆ ಮೋಸ ಮಾಡುತ್ತೀರಿ? ಆದ್ದರಿಂದ ದಯವಿಟ್ಟು ಇದರ ಬಗ್ಗೆ ಮರುಪರಿಶೀಲನೆ ಮಾಡ ಬೇಕಾಗುತ್ತದೆ.

ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ತಾವು ಅನುಮತಿಯನ್ನು ಕೊಟ್ಟಿರುವುದೇ ಇಷ್ಟು. ನಾನು ಭಾರಿ ಮಾತನಾಡುವ ಮನುಷ್ಯ. ತಾವು ನನ್ನ ಮಾತುಗಳನ್ನು ತಡೆಹಿಡಿದಿದ್ದೀರಿ. ಆಗಲಿ. ಇನ್ನೊಂದು ಸಂದರ್ಭ ಸಿಕ್ಕಿದಾಗ ಮಾತನಾಡುತ್ತೇನೆ. ಸರ್ಕಾರಕ್ಕೆ ತಾವು ಹೇಳಬೇಕು ಏನೆಂದರೆ, ಈ ತರಹ ಆತುರದಲ್ಲಿ ಸದನವನ್ನು ಕರೆಯಬಾರದು ಎಂದು. ನಾನು ಒಂದೇ ಒಂದು ಮಾತನ್ನು ಹೇಳುವುದಾದರೆ ದಾಸರು ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ಅಣುರೇಣುತೃಣಕಾಷ್ಠಗಳಲ್ಲಿ ಭಗವಂತನು ಇದ್ದಾನೆ ಎಂದು. ಹಾಗೆಯೇ ಮಾನ್ಯ ಸಿದ್ಧರಾಮಯ್ಯನವರ ಬಜೆಟ್‌ನ್ನು ತೆಗೆದುಕೊಳ್ಳು

ವುದಾದರೆ ಅಣುರೇಣುತೃಣಕಾಷ್ಠ ಸಾಮಾನುಗಳು ಏನಿವೆ, ಅವುಗಳಲ್ಲಿ ಇವರು ಏನನ್ನೂ ಬಿಟ್ಟಿಲ್ಲ. ಎಲ್ಲದರ ಮೇಲೂ ಟ್ಯಾಕ್ಸ್ ಹಾಕಿದ್ದಾರೆ. ಅವರು ಯಾವುದನ್ನೂ ಬಿಟ್ಟಿಲ್ಲ. ಮೋಟಾರ್ ಮೇಲೆ ಲೈಫ್‌ಟೈಮ್ ಟ್ಯಾಕ್ಸ್ ಹಾಕಿದ್ದಾರೆ. ಇನ್ನೂ ಸುಲಭವಾಗಿ ಹಣಸಂಗ್ರಹ ಮಾಡಬೇಕೆಂದರೆ ಲ್ಯಾಂಡ್ ರೆವಿನ್ಯೂ ಮೇಲೆ ಕೂಡ ಲೈಫ್‌ಟೈಮ್ ಟ್ಯಾಕ್ಸ್‌ನ್ನು ಹಾಕಿಬಿಡಿ. ಇಷ್ಟು ಹೇಳಿ ಮಾನ್ಯ ಸಭಾಧ್ಯಕ್ಷರು ತಾವೇನು ನನಗೆ ಮಾತನಾಡಲು ಅನುಮತಿಯನ್ನು ಕೊಟ್ಟಿದ್ದೀರಿ, ಅದಕ್ಕಾಗಿ ನನ್ನ ಕೃತಜ್ಞತೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಸಭಾಧ್ಯಕ್ಷರೇ, ಇವತ್ತು ಪ್ರಥಮವಾಗಿ ಸರ್ಕಾರ ಹೊಸದಾಗಿ ರಚಿತವಾದಮೇಲೆ ಯುವಕರಾಗಿರತಕ್ಕಂಥ ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಸಚಿವರಾಗಿ ಆಯವ್ಯಯವನ್ನು ಮಂಡಿಸಿದ್ದಾರೆ. ಅದಕ್ಕಾಗಿ ನಾನು ಅವರನ್ನು ಸ್ವಾಗತಿಸುತ್ತೇನೆ. ಬಹಳ ಮುಖ್ಯವಾಗಿ ಒಂದು ವಿಷಯವನ್ನು ನಾನು ಹೇಳಬೇಕು. ಏಕೆಂದರೆ ಈಗಾಗಲೇ ಮಾನ್ಯ ಅಧ್ಯಕ್ಷರು ಏನು ಅಪ್ಪಣೆ ಕೊಟ್ಟಿದ್ದಾರೆ, ಅದರಂತೆ ನಾನು ನನ್ನ ಕ್ಷೇತ್ರದ ಕೆಲವು ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಒಪ್ಪುತ್ತೇನೆ. ಒಂದು ವಿಷಯವನ್ನು ಮಾತ್ರ ಅನೇಕ ಜನರು ಮಾತನಾಡಿರತಕ್ಕಂಥ ಸಂದರ್ಭದಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. 1983ರಿಂದ 89ರವರೆಗೆ ತಾವು ಅಧಿಕಾರದಲ್ಲಿದ್ದಾಗ ರಾಷ್ಟ್ರ ರಾಜಕಾರಣದಲ್ಲಿ ಮತ್ತು ರಾಜ್ಯ ರಾಜಕಾರಣದಲ್ಲಿ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಕೇಂದ್ರ ಮತ್ತು ರಾಜ್ಯದ್ದು ಯಾವರೀತಿ ಇತ್ತು ಎಂಬುದನ್ನು ಸ್ವಲ್ಪ ಜ್ಞಾಪಿಸಿಕೊಂಡರೆ ಒಳ್ಳೆಯದೆಂದು ನಾನು ಭಾವಿಸುತ್ತೇನೆ. ರಾಜ್ಯದ ಹಣಕಾಸಿನ ಪರಿಸ್ಥಿತಿ ಎಲ್ಲಿಗೆ ಹೋಗಿತ್ತು ಎಂದರೆ, ನೂರು-ಇನ್ನೂರು ರೂಪಾಯಿಗಳು ಚೆಕ್ಕುಗಳು ಕೂಡ ಡಿಸ್‌ಆನರ್ ಆಗುವಂಥ ಪರಿಸ್ಥಿತಿ ಇತ್ತು. ಇನ್ನು ರಾಷ್ಟ್ರಮಟ್ಟದಲ್ಲಿ ಹೇಗಿತ್ತು ಎಂದರೆ ಚಿನ್ನವನ್ನೇ ಅಡವಿಡುವ ಪರಿಸ್ಥಿತಿ ಬಂದಿತ್ತು. 1989ರ ನಂತರ ಬಂದಂಥ ಸರ್ಕಾರಗಳು ಅದು ಕೇಂದ್ರದ್ದಾಗಲೀ, ರಾಜ್ಯದಾಗಲೀ, ಅಂತಹ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಎಲ್ಲರೀತಿಯ ಕ್ರಮವನ್ನು ತೆಗೆದುಕೊಂಡವು ಎಂಬ ಮಾತನ್ನು ತಾವು ಕೂಡ ಹೇಳಿದ್ದರೆ ಚೆನ್ನಾಗಿ ಇರುತ್ತಿತ್ತು. ನಾವು ಇವತ್ತು ಸರ್ಕಾರ ಬದಲಾದ ಸಂದರ್ಭದಲ್ಲಿ ಬಹಳಷ್ಟು ನಿರೀಕ್ಷೆ ಮಾಡಿದ್ದೆವು. ಆಡಳಿತದಲ್ಲಿ ನುರಿತಂಥವರು, ಬಹಳ ಅನುಭವ ಇರತಕ್ಕಂಥವರು ಆದ ಮಾನ್ಯ ಶ್ರೀ ದೇವೇಗೌಡರು ಮುಖ್ಯಮಂತ್ರಿಗಳಾಗಬೇಕಾದರೆ ಏನೊಂದು ಬಜೆಟ್‌ನ್ನು ಅವರು ಕೊಡುತ್ತಾರೆ, ಇದರಿಂದ ಬಹಳಷ್ಟು ಪರಿಣಾಮವಾಗುತ್ತದೆ ಮತ್ತು ಜನರ ಭಾವನೆಗಳಿಗೆ ಎಲ್ಲ ರೀತಿಯಿಂದ ಸ್ಪಂದಿಸುವಂಥ ಬಜೆಟ್ ಅದು ಆಗುತ್ತದೆಯೆಂಬ ಭಾವನೆಯನ್ನು ಜನರು ನಿರೀಕ್ಷಿಸಿದ್ದರು. ಬಹುಶಃ ನನಗೆ ಅನ್ನಿಸುತ್ತದೆ ಏನೆಂದರೆ ಈ ಬಜೆಟ್ ಮಂಡನೆಯಾದಮೇಲೆ ಈ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳ ಚುನಾವಣೆಯಾಗಿದ್ದರೆ, ಅದು ಬಂದಿರತಕ್ಕಂಥ ಫಲಿತಾಂಶಕ್ಕೆ ಹೊರತಾಗಿರುತ್ತಿತ್ತು ಎಂಬುದನ್ನು ತಾವು ಮರೆಯಬಾರದು. ನಿಮ್ಮ ಬಜೆಟ್ ಬಗ್ಗೆ ಜನರು ಏನು ನಿರೀಕ್ಷೆ ಮಾಡಿದ್ದರು ಮತ್ತು ಅದು ಎಷ್ಟರಮಟ್ಟಿಗೆ ಇದರಲ್ಲಿ ಪ್ರಯೋಜನವಾಗಿದೆಯೆಂಬುದನ್ನು ನೀವು ನಮಗಿಂತ ಹೆಚ್ಚಾಗಿ ಹಣಕಾಸಿನ ಸಚಿವರಾಗಿ, ಸಾಮಾನ್ಯ ಜನರ ಭಾವನೆ ಯಾವ ರೀತಯಾಗಿದೆ, ಅವರು ಯಾವ ರೀತಿ ಮಾತನಾಡಿಕೊಳ್ಳುತ್ತಾರೆ ಎಂಬುದನ್ನು ತಿಳಿದುಕೊಂಡರೆ ಗೊತ್ತಾಗುತ್ತದೆ. ನಾನು ಒಂದೇ ಒಂದು

ಮಾತನ್ನು ಹೇಳುತ್ತೇನೆ. ನೀವು ಟ್ಯಾಕ್ಸನ್ನು ಎಷ್ಟರಮಟ್ಟಿಗೆ ಹಾಕುತ್ತೀರಿ, ಬಿಡುತ್ತೀರಿ ಎನ್ನುವುದಕ್ಕಿಂತ ಹೆಚ್ಚಾಗಿ ಬಹಳ ಮುಖ್ಯವಾಗಿ ಇವತ್ತು ನೀವು ಅಧಿಕಾರದಲ್ಲಿರುವಂಥ ಸಂದರ್ಭದಲ್ಲಿ ಎಷ್ಟೊಂದು ಹಣವನ್ನು ಕ್ರೋಢೀಕರಣ ಮಾಡಬೇಕಾಗಿದೆ ಮತ್ತು ನಾವು ಇದ್ದಾಗ ಎಷ್ಟು ಮಾಡಿದ್ದೆವು ಎಂಬುದನ್ನು ನೋಡಿದಾಗ ವ್ಯತ್ಯಾಸ ಸ್ವಲ್ಪ ಹೆಚ್ಚುಕಡಿಮೆ ಇರುವಂಥಾದ್ದೇ. ಅದು ಮುನ್ನೂರು-ನಾಲ್ಕುನೂರು ಕೋಟಿ ಇರಬಹುದು ಯಾರೇ ಅಧಿಕಾರಕ್ಕೆ ಬಂದರೂ ಕೂಡ ಪ್ಲಾನಿಂಗ್ ಕಮೀಷನ್ ನಿರ್ಧಾರ ಮಾಡಿರತಕ್ಕಂಥ ಇತಿಮಿತಿಯಲ್ಲಿ ಎಲ್ಲಾ ಕೆಲಸವನ್ನು ಕೂಡ ಮಾಡಬೇಕಾಗುತ್ತದೆ. ಆದರೆ ಬಹಳ ಮುಖ್ಯವಾಗಿ ಅನೇಕ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಆಡಳಿತದಲ್ಲಿರತಕ್ಕಂಥವರು ಆಡಳಿತವೆಚ್ಚವನ್ನು ಎಲ್ಲಿಯವರೆಗೆ ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲವೋ, ಅದು ಯಾವ ಸರ್ಕಾರಗಳು ಕೂಡ ಪ್ರಗತಿಪರ ಕಾರ್ಯಗಳನ್ನು ಮಾಡಲು ಸಾಧ್ಯವಾಗುವುದಿಲ್ಲ. ಅಲ್ಲಿಯವರೆಗೆ ಯಾವುದೇ ರೀತಿಯ ಪರಿಣಾಮಕಾರಿಯಾದಂಥ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇವತ್ತು ಆಡಳಿತದಲ್ಲಿ ತೊಡಗಿಸಿರತಕ್ಕಂಥ ಬಂಡವಾಳ ಎಷ್ಟು? ನನಗನ್ನಿಸುತ್ತದೆ ಸುಮಾರು ಐದು-ಐದೂವರೆ ಲಕ್ಷ ನೌಕರರಿಗೆ ಕೊಡತಕ್ಕಂಥ ಸಂಬಳ, ಸಾರಿಗೆ, ಭತ್ಯೆ ಎಲ್ಲ ಏನಿದೆ, ಅದನ್ನು ಲೆಕ್ಕಹಾಕಿದರೆ ಶೇಕಡ 45ಕ್ಕಿಂತಲೂ ಹೆಚ್ಚು ಭಾಗವನ್ನು ಅವರಿಗಾಗಿ ವಿನಿಯೋಗ ಮಾಡುತ್ತಿದ್ದೇವೆ. ಒಂದು ಮಾತನ್ನು ನಾನು ಕೇಳುತ್ತೇನೆ. ಇವರ ಆಡಳಿತ ಕ್ರಮ ಎಷ್ಟರಮಟ್ಟಿಗೆ ಅದರ ನಿಯಂತ್ರಣ ತಪ್ಪಿದೆಯೆಂದರೆ ಯಾರೇ ಒಬ್ಬ ಅಧಿಕಾರಿ ಅವನು ಮನೆಯನ್ನು ಕಟ್ಟತಕ್ಕಂಥ ಸಂದರ್ಭ ಬಂದರೆ ಅವನು ನಮ್ಮಲ್ಲಿಗೆ ಬಂದು 'ನನ್ನನ್ನು ಒಂದು ವರ್ಷ ಕಾಲ ಸಸ್ಪೆನ್‌ಶನ್‌ನಲ್ಲಿ ಇಡಿ' ಎಂದು ಹೇಳತಕ್ಕಂಥ ಮಾತನ್ನು ನಾನು ಕೇಳಿದ್ದೇನೆ. ಇವತ್ತು ಉದ್ದೇಶಪೂರ್ವಕವಾಗಿ ಕೆಲವರು ಸಸ್ಪೆಂಡ್ ಆಗುತ್ತಾರೆ. ಏಕೆಂದರೆ ಅವರಿಗೆ ಸಸ್ಪೆಂಡ್ ಆಗಾಗ ನೂರಕ್ಕೆ ಎಂಭತ್ತರಷ್ಟು ಸಸ್ಪೆನ್‌ಶನ್ ಅಲೋಯನ್ಸ್ ಬರುತ್ತದೆ. ಅವನು ರಿಯಿನ್ಸ್ಟಿಯೇಟ್ ಆದಾಗ ಯಾವುದೇ ಎನ್‌ಕ್ವೈರಿ ಆಗುವುದಿಲ್ಲ. ನಾನು ಹೇಳುತ್ತೇನೆ, ಇವರು ಕೆ.ಸಿ.ಎಸ್.ಆರ್.ನ್ನು ಭದ್ರವಾಗಿ ಮಾಡಿಕೊಂಡಿದ್ದಾರೆ. ಅಧಿಕಾರಿಗಳು ಸರ್ವಿಸ್‌ನಿಂದ ಡಿಸ್‌ಮಿಸ್ ಆಗಿರತಕ್ಕಂಥ ಉದಾಹರಣೆಗಳು ಬಹಳ ಕಡಿಮೆ. ಇವತ್ತು ಐದೂವರೆ ಲಕ್ಷ ಜನರಲ್ಲಿ ಡಿಸ್‌ಮಿಸ್ ಆಗಿರತಕ್ಕಂಥ ಅಧಿಕಾರಿಗಳು ಬಹಳಷ್ಟು ಕಡಿಮೆ. ಏತಕ್ಕೋಸ್ಕರ ನಾನು ಈ ಮಾತನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ, ಆಡಳಿತ ದಲ್ಲಿ ನಿಯಂತ್ರಣ ತಪ್ಪಿರುವಾಗ, ಎಲ್ಲಿಯವರೆಗೆ ಅದನ್ನು ಬಿಗಿ ಮಾಡುವುದಿಲ್ಲ, ಎಲ್ಲಿಯವರೆಗೆ ಆಡಳಿತದ ವೆಚ್ಚ ಕಡಿಮೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಅಲ್ಲಿಯವರೆಗೆ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಬಜೆಟ್ ಭಾಷಣದಲ್ಲಿ ಅನೇಕ ತರಹದ ಮಾತುಗಳನ್ನು ಆಡಿದ್ದೀರಿ, ಕೇಂದ್ರ ಸರ್ಕಾರದ ವಿರುದ್ಧ ಟೀಕೆಯನ್ನು ಮಾಡಿದ್ದೀರಿ....

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : 1994ರತನಕ ಅಧಿಕಾರದಲ್ಲಿ ಇದ್ದಂಥ ತಾವೇನು ಮಾಡಿದ್ದೀರಿ?

ಶ್ರೀ ಟಿ.ಬಿ. ಜಯಚಂದ್ರ : ಅದನ್ನು ನಾನು ಹೇಳುತ್ತಿದ್ದೇನ. ನಾವು 1989ರಿಂದ 1994ರತನಕ ಮಾಡಿರತಕ್ಕಂಥ ಸಾಧನೆಗಳೇನು, ಜನರಿಗೆ ಕೊಟ್ಟಿರತಕ್ಕಂತ ಸಾಧನೆಗಳು ಏನು, ಇದು ನಿಮಗೆಲ್ಲ

ಗೊತ್ತಿರತಕ್ಕಂಥಾದ್ದು. ಆ ಭಾಗದಲ್ಲಿ ಕುಳಿತಿರತಕ್ಕಂಥ ಜನ ಹಿಂದೆ ಇಲ್ಲಿ ಕುಳಿತಿದ್ದರು. ವಿವಿಧ ಸಮಿತಿಗಳ ಸದಸ್ಯರಾಗಿ ಸರ್ಕಾರದ ಆಡಳಿತ ವೈಖರಿ ಏನು ಎಂದು ನೋಡಿದ್ದೀರಿ, ಅದನ್ನು ಅನುಭವಿಸಿದ್ದೀರಿ. ಇವತ್ತು ಆಡಳಿತ ಪಕ್ಷದಲ್ಲಿ ಕುಳಿತುಕೊಂಡು ವಿರೋಧ ಪಕ್ಷವಾದ ಹಿಂದಿನ ಸರ್ಕಾರ ಮಾಡಿದ ಒಳ್ಳೆಯ ಕೆಲಸ ಏನು ಎನ್ನುವುದರ ಬಗ್ಗೆ ಒಂದು ಮಾತನ್ನೂ ಕೂಡ ಆಡಿಲ್ಲ. ಈಗ ಹೊಸದಾಗಿ ಅಧಿಕಾರಕ್ಕೆ ಬಂದಿದ್ದೀರಿ. ಆದರೆ ಅಂತಹ ಒಂದು ಮಾತನ್ನೂ ಹೇಳುವಂಥ ಸೌಜನ್ಯವನ್ನು ನೀವು ತೋರಿಸಲಿಲ್ಲ. ನೀವು ಹಾಗೆ ತೋರಿಸುತ್ತೀರಿ ಎಂದು ನಾನು ಭಾವನೆ ಮಾಡಿದ್ದೆ. ಆದರೆ ಅದನ್ನು ನೀವು ತೋರಿಸಲಿಲ್ಲ.

4.10 ಪಿ.ಎಂ.

ಆಶ್ರಯ, ಆರಾಧನಾ ಮುಂತಾದ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೆವು. ನೀವು ಯಾವುದನ್ನೋ ದೃಷ್ಟಿಯಲ್ಲಿಟ್ಟುಕೊಂಡು ಹೇಳಬಹುದು. ಯಾವುದೋ ಒಂದು ಶಾಸಕರ ಕ್ಷೇತ್ರದಲ್ಲಿ ಅನ್ಯಾಯವಾಗಿದೆ ಎಂಬ ಮಾತನ್ನು ಹೇಳುವುದಾದರೆ, ರಾಜ್ಯದ 175 ತಾಲ್ಲೂಕುಗಳಲ್ಲಿ, 10-15 ಬಿಟ್ಟರೆ, ಉಳಿದ ತಾಲ್ಲೂಕುಗಳಲ್ಲಿ, ಯಾವುದೇ ಸಂದರ್ಭದಲ್ಲಿ ಮಾಡದೇ ಇರತಕ್ಕ ಸಾಧನೆ ನಮ್ಮ ಸರ್ಕಾರದಲ್ಲಿ ಆಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ನಾನು 1978ರಲ್ಲಿ ಶಾಸಕನಾಗಿ, ವಿಧಾನ ಸಭೆಗೆ ಆಯ್ಕೆಯಾಗಿ ಬಂದಿದ್ದೇನೆ. ಬಡವರಿಗೆ ನಿವೇಶನ ಕೊಡತಕ್ಕ ಕಾರ್ಯಕ್ರಮ ಏನಿದೆ, ಈ ರೀತಿಯಾಗಿ ಬಡವರಿಗೆ ನಿವೇಶನ ಕೊಟ್ಟಿರುವುದು ಬಹುಶಃ ದೇವರಾಜ ಅರಸರ ಕಾಲವನ್ನು ಬಿಟ್ಟಮೇಲೆ, ಈ ಎಲ್ಲಾ ಕಾರ್ಯಕ್ರಮಗಳೂ ನಿರಂತರವಾಗಿ ನಿಂತುಹೋದವು. ಆಮೇಲೆ, 1989ರ ನಂತರ, ನಮ್ಮ ಸರ್ಕಾರ ಬಂದಮೇಲೆ, ಇದಕ್ಕೆ ಹೊಸ ಚಾಲನೆ ಸಿಕ್ಕಿತು. ನನ್ನ ಅಧಿಕಾರದ ಅವಧಿಯಲ್ಲಿ, 5 ವರ್ಷಗಳಲ್ಲಿ 10 ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು ವಿತರಣೆ ಮಾಡಿದ್ದೇನೆ; ಹಂಚಿದ್ದೇನೆ, ಜನರಿಗೆ ಕೊಟ್ಟಿದ್ದೇನೆ. ಈಗಾಗಲೇ ಅಲ್ಲಿ ಜನರು ವಾಸ ಮಾಡುತ್ತಿದ್ದಾರೆ. ಇದು ಎಲ್ಲಾ ಕ್ಷೇತ್ರಗಳಲ್ಲಿಯೂ ಆಗಿರುತ್ತದೆ. ಕೆಲವುಕಡೆ ಸ್ವಲ್ಪ ಕಡಿಮೆಯಾಗಿರಬಹುದು, ಮತ್ತೆ ಕೆಲವು ಕಡೆ ಜಾಸ್ತಿಯಾಗಿರಬಹುದು. ನಿಜವಾಗಿಯೂ ನಮ್ಮ ಕಾಲದಲ್ಲಿ ಪ್ರಗತಿಯಾಗಿತ್ತು ಎಂದು ಹೇಳತಕ್ಕಂಥ ಸೌಜನ್ಯವನ್ನು ತಾವು ತೋರಿಸಬೇಕಾಗಿತ್ತು. ನಿಮ್ಮ ಬಜೆಟ್ ಭಾಷಣದ ಪುಸ್ತಕ ಬಹಳ ದೊಡ್ಡದಾಗಿ, ಭಾಷಣ ಉದ್ದವಾಗಿದೆ. ಆದರೆ, ಅದರಲ್ಲಿ ಏನಾದರೂ ತಿರುಳು ಇದೆಯೇ? ಇವತ್ತು ಜನಗಳು ಸರ್ಕಾರವನ್ನು ಬದಲು ಮಾಡಿ, ತಮ್ಮನ್ನು ಅಧಿಕಾರಕ್ಕೆ ಕೂರಿಸಬೇಕಾದರೆ, ಜನರ ಭಾವನೆಗಳಿಗೆ ಸ್ಪಂದಿಸತಕ್ಕ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಆದರೆ, ನಿಮ್ಮ ಬಜೆಟ್ ಭಾಷಣದಲ್ಲಿ ಅದು ಬಂದಿಲ್ಲವೆಂಬ ಮಾತನ್ನು ಹೇಳಿದರೆ ತಪ್ಪಾಗಲಾರದು. ನೀವು 250 ಕೋಟಿ ರೂಪಾಯಿಗಳ ಬಜೆಟ್‌ನ್ನು ಮಂಡಿಸಿದ್ದೀರಿ. ಬಹುಶಃ ಇವತ್ತು ಸಂಪನ್ಮೂಲಗಳನ್ನು ಕ್ರೋಢೀಕರಿಸುವುದರಲ್ಲಿ ವಿಫಲರಾಗಿದ್ದೀರಿ. ತಾವು ಮೂರು ತಿಂಗಳಿಂದ ಅಧಿಕಾರದಲ್ಲಿದ್ದೀರಿ. ನೀವು ಅಧಿಕಾರಕ್ಕೆ ಬರುವುದಕ್ಕ ಮುಂಚೆ, ಮೂರು ತಿಂಗಳ ಹಿಂದೆ ಚುನಾವಣೆಗಳು ಇದ್ದು, ಟಿ.ಎನ್. ಶೇಷನ್‌ರವರ ಕಟ್ಟುನಿಟ್ಟಿನ ಕ್ರಮಗಳಿಂದ ಆಡಳಿತ ನಡೆಸುವುದರಲ್ಲಿ ಕೆಲವೊಂದು ತೊಂದರೆಯಾಗಿರಬಹುದು. ಆದರೆ, ನೀವು ಮೂರು ತಿಂಗಳಾಗಿರತಕ್ಕ ಸಂದರ್ಭದಲ್ಲಿಯೂ ಕೂಡ, ಆಡಳಿತವನ್ನು ಚುರುಕಗೊಳಿಸಿ, ಸಂಪನ್ಮೂಲವನ್ನು ಕ್ರೋಢೀಕರಿಸುವುದರಲ್ಲಿ ಯಶಸ್ವಿಯಾಗಬೇಕಾಗಿತ್ತು. ಈ ಪ್ರಯತ್ನದಲ್ಲಿ ತಾವು ಸೋತಿದ್ದೀರಿ ಎಂದು ಹೇಳಿದರೆ ತಪ್ಪಾಗಲಾರದು. ಬಹಳ ಮುಖ್ಯವಾಗಿ

ಇವತ್ತು ಟ್ಯಾಕ್ಸಸ್. ಕಮರ್ಷಿಯಲ್ ಟ್ಯಾಕ್ಸಸ್, ಎಕ್ಸೈಸ್ ಮತ್ತು ಲ್ಯಾಂಡ್ ರೆವಿನ್ಯೂ ಇಂತಹ 3-4 ಬಾಬುಗಳನ್ನು ಬಿಟ್ಟರೆ, ಬೇರೆ ಬಾಬುಗಳು ಏನು ಬರುತ್ತವೆ.

ಅಧ್ಯಕ್ಷರು : ಟಿ.ಎನ್. ಶೇಷನ್ ಅಂತ ಹೇಳಿದಿರಿ, ಅದು ಏನು?

ಶ್ರೀ ಟಿ.ಬಿ. ಜಯಚಂದ್ರ : ಚುನಾವಣೆ ನಡೆಯುವಂಥ ಸಂದರ್ಭದಲ್ಲಿ, ಕಟ್ಟುನಿಟ್ಟಿನ ಕಾರ್ಯಕ್ರಮಗಳನ್ನು ತಗೆದುಕೊಳ್ಳುವುದಕ್ಕೆ ಕಷ್ಟವಿತ್ತು. ಆಡಳಿತದ ಮಿಷನರಿ ಏನಿತ್ತು, It was not active on that day with regard to collection of revenue. ಅದರ ನಂತರ ಚುರುಕು ಮಾಡಬಹುದಿತ್ತು. ನೀವು ಅಧಿಕಾರಕ್ಕೆ ಬಂದು ಮೂರು ತಿಂಗಳಾಯಿತು.

ಅಧ್ಯಕ್ಷರು : ಕಲೆಕ್ಷನ್ ಆಫ್ ರೆವಿನ್ಯೂಗೆ, ಶೇಷನ್ ಅಡ್ಡ ಬರುತ್ತಾರೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಚುನಾವಣೆಯ ಸಂದರ್ಭದಲ್ಲಿ, ಅಧಿಕಾರಿಗಳು ಚುನಾವಣೆಯ ಕೆಲಸ ಮಾಡಿದ್ದರಿಂದ, ಕಲೆಕ್ಷನ್ ಕಡಿಮೆಯಾಗಿರಬಹುದು. ಈಗಲಾದರೂ ಮಾಡಬಹುದಿತ್ತು. ಈ ಮೂರು ತಿಂಗಳೊಳಗೆ ಅಂದರೆ, ಡಿಸೆಂಬರ್‌ನಿಂದ ಇಲ್ಲಿಯವರೆಗಾದರೂ ಮಾಡಬಹುದಿತ್ತು.

ಶ್ರೀ ಟಿ.ಬಿ. ಜಯಚಂದ್ರ : ನನ್ನ ಉದ್ದೇಶವೂ ಅದೇ. ಏಕೆಂದರೆ, ನನಗೆ ಕೊಟ್ಟಿರುವುದು ಹತ್ತು ನಿಮಿಷ, ಅಷ್ಟರೊಳಗೆ ಎಲ್ಲವನ್ನೂ ಮುಗಿಸಬೇಕು. ತಾವು ಯುವಕರಿದ್ದೀರಿ, ತಾವು ಹಣಕಾಸಿನ ಖಾತೆಯ ಉಸ್ತುವಾರಿಯನ್ನೂ ಹೊತ್ತಿದ್ದೀರಿ. ಇವತ್ತು ಸಂಪನ್ಮೂಲವನ್ನು ರೂಢಿಸಬೇಕಾದರೆ, ಹೊಸದಾಗಿ ತೆರಿಗೆ ಹಾಕತಕ್ಕ ಅವಶ್ಯಕತೆ ಇರಲಿಲ್ಲ, ಹಾಕುವುದೇ ಬೇಕಾಗಿರಲಿಲ್ಲ. ನಿಮ್ಮ ಇಲಾಖೆಯಲ್ಲಿರತಕ್ಕ, ಖಾಲಿ ಬಿದ್ದಿರುವ ವೇಕೆನ್ಸಿಗಳೇನಿವೆ, ಆ ವೇಕೆನ್ಸಿಗಳನ್ನು ಪ್ರಾಮಾಣಿಕವಾಗಿ ಭರ್ತಿ ಮಾಡಿ, ಅವರಿಗೆ ಜವಾಬ್ದಾರಿಯನ್ನು ಕೊಟ್ಟು, ವಸೂಲ್ಮಾಡತಕ್ಕ ಕಾರ್ಯಕ್ರಮವನ್ನು ಮಾಡಿದ್ದರೆ, ಇವತ್ತೂ ಕೂಡ ಹೇಳುತ್ತೇನೆ. ನೀವು ಇದನ್ನು ಸಲಹೆ ರೂಪದಲ್ಲಿ ತೆಗೆದುಕೊಳ್ಳಿ. ಐದು ನೂರು ಕೋಟಿ ರೂಪಾಯಿಗಳ ಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿತ್ತು. ನಿಮ್ಮ ಕಮರ್ಷಿಯಲ್ ಟ್ಯಾಕ್ಸ್ ಆಫೀಸ್ ಎದುರುಗಡೆ ಇರತಕ್ಕಂಥ ಅವೆನ್ಯೂ ರೋಡಿನಲ್ಲಿರುವ, ಕೇವಲ ಕೆಲವೇ ಅಡಿಯಲ್ಲಿ ಇರತಕ್ಕಂಥ ಕಮೀಷನರ್ ಆಫೀಸಿಗೆ ಯಾರಾದರೂ ಹೋಗಿ ನೋಡಿ. ಅಲ್ಲಿ ಯಾರಾದರೂ ಟ್ಯಾಕ್ಸ್ ಕಟ್ಟುತ್ತಾರೆಯೇ? ಒಂದು ರೂಪಾಯಿ ತೆರಿಗೆ ಕೊಡತಕ್ಕ ಮಟ್ಟದಲ್ಲಿದ್ದಾರೆಯೇ?

ಅಧ್ಯಕ್ಷರು : ನಿಮ್ಮ ಕ್ಷೇತ್ರದ ವಿಚಾರ ಹೇಳಿ ಎಂದರೆ, ಅವೆನ್ಯೂ ರೋಡಿಗೆ ಬಂದಿದ್ದೀರಿ. ನಿಮ್ಮ ವೇಳೆ ಆಗುತ್ತಾ ಬಂತು. ಮಾನ್ಯ ಶಿವಪ್ಪನವರು ಯಾವ ಪ್ರಕಾರ ಸಹಕಾರ ಕೊಟ್ಟರು ಎಂಬುದನ್ನು ನೋಡಿದ್ದೀರಿ. ನೀವೂ ಕೂಡ ಅದನ್ನು ಪ್ರಾಕ್ಟೀಸ್ ಮಾಡಿಕೊಳ್ಳಬೇಕು. You should practice on similar lines. ಇಲ್ಲದೇ ಹೋದರೆ ಕಷ್ಟವಾಗುತ್ತದೆ. ನಿಮ್ಮ ಕ್ಷೇತ್ರ ಅವಿನ್ಯೂ ರೋಡೇ, ಕಳ್ಳಂಬೆಳ್ಳ ಅಲ್ಲವೇ?

ಶ್ರೀ ಟಿ.ಬಿ. ಜಯಚಂದ್ರ : ಬಹಳ ಮುಖ್ಯವಾಗಿ, ಕರ್ನಾಟಕದಲ್ಲಿ ಹೆಚ್ಚು ಹೆಚ್ಚು ಕೈಗಾರಿಕೆಗಳು ಬರುತ್ತಿರುವುದನ್ನು ತಾವು ನೋಡಿದ್ದೀರಿ. ಈ ವರ್ಷ ಎಸ್.ಎಸ್.ಐ. ವರ್ಷವೆಂದು ಕೇಂದ್ರ ಸರ್ಕಾರ

ದವರು ಡಿಕ್ಲೇರ್ ಮಾಡಿದ್ದಾರೆ. ಇವತ್ತು ನಿಮ್ಮ ಬಜೆಟ್ ಭಾಷಣದಲ್ಲಿ, ಕೈಗಾರಿಕೆಯನ್ನು ವೃದ್ಧಿ ಮಾಡುವುದರಲ್ಲಿ, ಅವುಗಳಿಗೆ ಬೇಸಿಕ್ ಸೌಲಭ್ಯಗಳನ್ನು ಕೊಡುವುದರಲ್ಲಿ ಪ್ರಸ್ತಾಪ ಮಾಡಿದ್ದೀರಿ. ಇವನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಸಿಕ್ ಯೂನಿಟ್ಸ್ ಎಷ್ಟಿವೆ? ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ನಲ್ಲಿರತಕ್ಕಂಥ ಸಣ್ಣ ಕೈಗಾರಿಕೆಗಳನ್ನು ರಿವೈಂಡ್ ಮಾಡುವ ಬಗ್ಗೆ ನಿಮ್ಮ ಪ್ರಯತ್ನ ಇಲ್ಲ. ನೀವು ಅಲ್ಪಸ್ವಲ್ಪ ಪ್ರಯತ್ನ ಪಟ್ಟಿದ್ದೀರಿ, ಆದರೆ, ಯಶಸ್ವಿಯಾಗಲಿಲ್ಲ. ಇವತ್ತು ಉದಾಹರಣೆಗೆ, ಮಿನಿ ಸಿಮೆಂಟ್ ಪ್ಲಾಂಟ್ ಬಗ್ಗೆ ಅನೇಕ ತರಹದ ಮನವಿಗಳನ್ನು ತಮ್ಮ ಮುಂದೆ ಇಟ್ಟಿದ್ದಾರೆ. ನೀವೇನು ಮಾಡಿದ್ದೀರಿ, ಟ್ಯಾಕ್ಸಸ್ ಕಡಿಮೆ ಮಾಡಿದ್ದೀರಿ. ಸಿಕ ಯೂನಿಟ್ಸ್‌ಗಳಿಗೆ, ಮಿನಿ ಸಿಮೆಂಟ್ ಪ್ಲಾಂಟ್ಸ್‌ಗಳಿಗೆ. ಇವತ್ತು ಎಲ್ಲಾ ರಾಜ್ಯದಲ್ಲಿ 50 ಪರ್ಸೆಂಟ್ ತೆರಿಗೆ ಕಟ್ ಮಾಡತಕ್ಕ ಸಂದರ್ಭದಲ್ಲಿ, ತಾವು ಮಾಡಿರ ತಕ್ಕಂತಾದ್ದು 2 ಪರ್ಸೆಂಟ್ ಮಾತ್ರ ಕಟ್ ಮಾಡಿದ್ದೀರಿ. ಉದಾಹರಣೆಗೆ ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ಹಾಗೂ ಕ್ಷೇತ್ರದ ಬದಿಯಲ್ಲಿ ಸುಮಾರು 8-10 ಕೈಗಾರಿಕೆಗಳು ಬರುತ್ತವೆ. ಈ ಕೈಗಾರಿಕೆಗಳಲ್ಲಿ ಸರ್ಕಾರವು ಒಂದು ನೂರು ಕೋಟಿ ರೂಪಾಯಿಗಳ ಬಂಡವಾಳವನ್ನು ಹೂಡಿದೆ. ಈ ಹಣ ವಾಪಸ್ ಬರಬೇಕಾದರೆ, 50 ಪರ್ಸೆಂಟ್ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್‌ನ್ನು ಕಡಿಮೆ ಮಾಡತಕ್ಕ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಹಳ ಮುಖ್ಯವಾಗಿ ಸಂಪನ್ಮೂಲವನ್ನು ಹೆಚ್ಚು ಮಾಡುವಂಥ ಇನ್ನೊಂದು ಇಲಾಖೆ ಎಂದರೆ, ಎಕ್ಸೈಸ್. ಈ ಎಕ್ಸೈಸ್‌ನಲ್ಲಿ 858 ಕೋಟಿ ಬರಬೇಕೆಂಬ ಮಾತನ್ನು ತಾವು ಹೇಳಿದ್ದೀರಿ. ಇವತ್ತು ನಾನು ಹೇಳುತ್ತೇನೆ. ತಾವು ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಂಡಿದ್ದೇ ಆದರೆ ಬಹುಶಃ ನನಗನಿಸುತ್ತದೆ, ಅಲ್ಲಿಯೂ ಕೂಡ ರೆವಿನ್ಯೂ ಸಂಗ್ರಹಿಸುವುದಕ್ಕೆ ಯಾವುದೇ ರೀತಿಯ ಕಷ್ಟವಾಗುವುದಿಲ್ಲ. ಸನ್ಮಾನ್ಯ ಹಣಕಾಸಿನ ಸಚಿವರಲ್ಲಿ ಒಂದು ವಿನಂತಿ. ಎಲ್ಲಾ ಕಡೆ ಟ್ಯಾಕ್ಸನ್ನು ಹಾಕಿದ್ದೀರಿ, ಎಕ್ಸೈಸ್ ಮತ್ತು ಬೇರೆ ಬೇರೆ ಬಾಬಿನಲ್ಲಿ ಮಾಡಿದ್ದೀರಿ. ಒಂದು ಮಾತ್ರ, ಎಕ್ಸೈಸ್ ಡ್ಯೂಟಿಯಲ್ಲಿ 5 ರೂಪಾಯಿಯಿಂದ ಮೂರುವರೆ ರೂಪಾಯಿಗೆ ಕಡಿಮೆ ಮಾಡಿದ್ದೀರಿ, ಇದು ಏಕೆ? ದಯಮಾಡಿ ತಾವು ಮಾತನಾಡತಕ್ಕ ಸಂದರ್ಭದಲ್ಲಿ ಇದರ ವಿವರಣೆಯನ್ನು ನಮಗೆ ಕೊಡಬೇಕು. ಇವತ್ತು ಏನಾಗಿದೆ. ಅನೇಕ ಜನರು ಮಾತನಾಡತಕ್ಕ ಸಂದರ್ಭದಲ್ಲಿ, ಹೆಂಡದ ಹೊಳೆ ಹರಿಯಿತು ಎಂದು ತಮ್ಮ ಭಾಷಣದಲ್ಲಿ ಹೇಳಿದರು. ಇದನ್ನು ಕೇಳಿದಾಗ, ಅದು ಹೇಗೆ ಹರಿಯಿತು? ನನಗನಿಸುತ್ತದೆ, ನೀವು ಕೊಟ್ಟಿರತಕ್ಕ ರಿಯಾಯಿತಿಯಿಂದ ಹರಿದಿದೆ ಎಂದು ಹೇಳಿದರೆ ತಪ್ಪಾಗಲಾರದು.

ಶ್ರೀ ಆರ್. ಎಲ್. ಜಾಲಪ್ಪ : ನೀವು 1989ರಲ್ಲಿ 179 ಜನರು ಗೆದ್ದು ಬಂದರಲ್ಲ, ಆಗ ನೀವು ಏನನ್ನು ಕುಡಿಸಿದಿರಿ. ನೀವು ಈ ತರಹ ಮಾತನಾಡಬೇಡಿ.

ಶ್ರೀ ಟಿ.ಬಿ. ಜಯಚಂದ್ರ : ಎಕ್ಸೈಸ್ ಡ್ಯೂಟಿ 5 ರೂಪಾಯಿಯಿಂದ ಮೂರುವರೆ ರೂಪಾಯಿಗೆ ಇಳಿಸಿರುವುದು, ಇವತ್ತು ಸೆಕೆಂಡ್ಸ್ ಏನಿದೆ, ಇದನ್ನು ಇಳಿಸಿದ್ದರಿಂದ ತಯಾರಾಗ ತಕ್ಕಂತಾದ್ದು. ಯಾರನ್ನು ಉಳಿಸುವುದಕ್ಕೋಸ್ಕರ ಮಾಡಿದ್ದೀರೆಂಬುದು ನನಗೆ ಗೊತ್ತಿರತಕ್ಕ ವಿಷಯವೇ. ಅದರ ಬಗ್ಗೆ ಹೆಚ್ಚಿಗೆ ಹೇಳತಕ್ಕಂಥಾದ್ದಲ್ಲ. ಬಹಳ ಮುಖ್ಯವಾಗಿ, ಮಾನ್ಯ ಜಾಲಪ್ಪನವರು ಕೇಳಬೇಕು. ಇವತ್ತು ನಮ್ಮ ಹಳ್ಳಿಗಳಲ್ಲಿ ಕುಡಿಯುವ ನೀರು ಸಿಕ್ಕುತ್ತಾ ಇಲ್ಲ; ಬೀರು ಸಿಕ್ಕುತ್ತಾ ಇದೆ. ಅಂತಹ ಪರಿಸ್ಥಿತಿಗೆ ನಾವು ತಲುಪಿದ್ದೇವೆ. ಆದ್ದರಿಂದ, ನಾನು ಕೇಳುವುದೇನೆಂದರೆ, ದಯಮಾಡಿ, ಕುಡಿಯುವ ನೀರಿನ ವ್ಯವಸ್ಥೆ

ಅಷ್ಟೊಂದು ಸುಲಭದ ಪರಿಸ್ಥಿತಿಯಾಗಿಲ್ಲ. ಇವತ್ತು ಹಳ್ಳಿಗಳ ಪಕ್ಕದಲ್ಲಿ, ಖಾಸಗಿಯವರು ಆಳವಾಗಿ ಕೊಳವೆ ಬಾವಿಗಳನ್ನು ಹಾಕುವ ದೃಷ್ಟಿಯಿಂದ, ನಮ್ಮ ಎಲ್ಲಾ ಕೊಳವೆ ಬಾವಿಗಳೂ ಬತ್ತಿ ಹೋಗಿ, ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಕೇವಲ ಹಣ ತೊಡಗಿಸುವುದರಿಂದ ಪರಿಸ್ಥಿತಿ ಸುಧಾರಣೆಯಾಗುವುದಿಲ್ಲ. ಇದಕ್ಕೆ ವಿಶೇಷವಾದ ಕಾನೂನು ತರುವ ಬಗ್ಗೆ ಬಹಳಷ್ಟು ಚಿಂತನೆ ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನನ್ನ ಕ್ಷೇತ್ರದ ಮಟ್ಟಿಗೆ ಹೇಳಬೇಕೆಂದರೆ, ನನ್ನ ಕ್ಷೇತ್ರದ ಶಿರಾ ತಾಲ್ಲೂಕಿನಲ್ಲಿ ಯಾವುದೇ ಹಳ್ಳಿಯನ್ನು ತೆಗೆದುಕೊಂಡರೂ ಕೂಡ, ಸುಮಾರು ಒಂದು ನೂರು ಹಳ್ಳಿಗಳಲ್ಲಿ, 50 ಹಳ್ಳಿಗಳಲ್ಲಿ ನೀರು ಸಿಗುತ್ತದೆ. ಅದೂ ಮಿನರಲ್ ವಾಟರ್ ಸಿಗುತ್ತದೆ. ಇಂತಹ ಪ್ರದೇಶಗಳಲ್ಲಿ, ಕಡ್ಡಾಯವಾಗಿ ಮಾಹಿತಿಯನ್ನು ತರಿಸಿ ದಯಮಾಡಿ, ಮಿನಿ ವಾಟರ್ ಸಪ್ಲೈ ಮಾಡತಕ್ಕ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಕೊಳವೆ ಬಾವಿಗಳು ಏನಾಗಿವೆ ಎಂದರೆ, ಮಾನ್ಯ ನಜೀರ್‌ಸಾಬ್‌ರವರ ಕಾಲದಲ್ಲಿ ತೋಡಿಸಿರತಕ್ಕ ಕೊಳವೆಬಾವಿಗಳು, ಕೇವಲ 100-120 ಅಡಿಯವರೆಗೆ ಮಾತ್ರ ತೆಗೆದಿದ್ದರು. ಇವತ್ತ 400-500 ಅಡಿ ಆಳ ಹೋದರೂ ನೀರು ಸಿಕ್ಕದೇ ಇರತಕ್ಕ ಪರಿಸ್ಥಿತಿಯಾಗಿರುವುದರಿಂದ, ದಯಮಾಡಿ, ಇದಕ್ಕೆ ವಿಶೇಷ ಗಮನಹರಿಸಿ, ಕೊಳವೆಬಾವಿಗಳನ್ನು ತೋಡಿಸತಕ್ಕ ವ್ಯವಸ್ಥೆಯನ್ನು ತಾವು ಮಾಡಬೇಕು. ಏಕೆಂದರೆ, ಆ ಕಾಲದಲ್ಲಿ ತೋಡಿದ್ದ ಎಲ್ಲಾ ಬಾವಿಗಳೂ ಸಂಪೂರ್ಣವಾಗಿ ಬತ್ತಿ ಹೋಗಿರುತ್ತವೆ. ಆಗ ಹೆಚ್ಚಾಗಿ ಹಳ್ಳಿಗಳಲ್ಲಿ ಊರಿಗೊಂದು ಕೆರೆ, ಒಂದು ಹಳ್ಳಕೊಳ್ಳ ಇರತಕ್ಕ ಪರಿಸ್ಥಿತಿ ಇತ್ತು. ಇವತ್ತು ಎಲ್ಲಾ ಹಳ್ಳಗಳೂ ಬತ್ತಿ ಹೋಗಿರುವುದರಿಂದ, ಇವತ್ತು ಊರ ಮುಂದೆ ಇರತಕ್ಕ ಗೋಕಟ್ಟೆಗಳನ್ನು, ಕೆರೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ತಾವು ಹೆಚ್ಚುಗಮನ ಕೊಡಬೇಕು. ತಾವು ಕೆಲವು ಕೃಷಿಕರಿಗೆ ಬಡ್ಡಿಯನ್ನು ಮನ್ನಾ ಮಾಡುವ ಕೆಲಸವನ್ನು ಮಾಡಿದ್ದೀರಿ. ನಾನು ಇದನ್ನು ಸ್ವಾಗತ ಮಾಡುತ್ತೇನೆ.

ಆದರೆ ಅದನ್ನು ಮಾಡುವಂತಹ ಸಂದರ್ಭದಲ್ಲಿ ಎಲ್ಲಾ ರೈತರಿಗೂ ಕೂಡ ಮಾಡತಕ್ಕಂಥ ಒಂದು ಕೆಲಸವನ್ನು ತಾವು ಮಾಡಬೇಕಾಗಿತ್ತು. ಪಿ.ಎಲ್.ಡಿ. ಬ್ಯಾಂಕ್‌ಗಳಲ್ಲಿ ಅಗಲೀ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಆಗಲೀ ಸಾಲ ಮಾಡಿರತಕ್ಕಂಥ ರೈತರು ರೈತರು ಅಲ್ಲವೇ? ಅವರಿಗೂ ಏತಕ್ಕೆ ಈ ಸೌಲಭ್ಯವನ್ನು ಒದಗಿಸಿ ಕೊಡಲಿಲ್ಲ ಎನ್ನುವಂತಹ ಮಾತನ್ನು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತು ತಾವು ಇವತ್ತು ಕೃಷಿಕರಿಗೆ ಸಹಾಯ ಆಗಬೇಕು ಎನ್ನುವಂತಹ ದೃಷ್ಟಿಯಿಂದ ಆಹಾರದಲ್ಲಿ ಸಬ್ಸಿಡಿ ಕೊಡುವುದರ ಮುಖೇನ 3-58 ಪೈಸೆಗೆ ಅಕ್ಕಿಯನ್ನು ಕೊಡುವಂತಹ ಒಂದು ಕೆಲಸವನ್ನು ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀರಿ. ಪ್ರಾರಂಭ ಮಾಡುತ್ತಿದ್ದೀರಿ ಆದರೆ ಒಂದು ಈ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಡಗಳ ವಿತರಣೆ ಸಾಕಷ್ಟು ಪ್ರಮಾಣದಲ್ಲಿ ಆಗಿಲ್ಲ ಮತ್ತು ಸಮರ್ಪಕವಾಗಿ ವಿತರಣೆ ಆಗಿಲ್ಲ ಎನ್ನತಕ್ಕಂಥಾದ್ದು ಕೂಡ ಒಂದು. ಹೀಗೆ ಅನೇಕ ಲೋಪದೋಷಗಳಿಂದಾಗಿ ಈ ಕಾರ್ಡಗಳನ್ನು ಹಂಚುವ ವ್ಯವಸ್ಥೆಯಲ್ಲಿ ತೀರಾ ಅಸ್ತವ್ಯಸ್ಥ ಆಗಿದೆ. ಅದನ್ನು ಸರಿಪಡಿಸತಕ್ಕಂಥ ಒಂದು ಕೆಲಸವನ್ನು ಮಾಡಬೇಕು ಎನ್ನತಕ್ಕಂಥ ಒಂದು ಮಾತನ್ನು ಹೇಳುತ್ತೇನೆ.,

ಇವತ್ತು ಬಹಳ ಮುಖ್ಯವಾಗಿ ಶಿಕ್ಷಣ ಇಲಾಖೆ ಬಗ್ಗೆ ನಾನು ಒಂದು ಸಲಹೆಯನ್ನು ಕೊಡಬೇಕಾಗಿದೆ ಸರ್ಕಾರದಲ್ಲಿ ಶಿಕ್ಷಣ ಇಲಾಖೆಗೆ ಕೊಡತಕ್ಕಂಥ ಸುಮಾರು ಮೂರನೇ ಒಂದು ಭಾಗವನ್ನು ಖರ್ಚು

ಮಾಡಿದರೂ ಕೂಡ ಉತ್ತಮವಾದ ಶಿಕ್ಷಣವನ್ನು ಕೊಡುವುದಕ್ಕ ಕಷ್ಟವಾಗುತ್ತದೆ. ಅದರ ಪರಿಸ್ಥಿತಿ ಏನು ಎನ್ನುವುದು ತಮಗೂ ಗೊತ್ತಿರತಕ್ಕಂಥಾದ್ದು. ಇವತ್ತು ರಾಜ್ಯಾಂಗ ದತ್ತವಾಗಿ ಒಂದರಿಂದ ಹತ್ತನೇ ತರಗತಿಯವರೆಗೂ ಕಡ್ಡಾಯವಾಗಿ ಏನು ಶಿಕ್ಷಣವನ್ನು ಕೊಡಬೇಕಾಗಿದೆ ಅದಕ್ಕೆ ಸರ್ಕಾರ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟು ಖಾಸಗಿಯವರು ಹೆಚ್ಚು ಬಾರದೇ ಇರುವ ರೀತಿಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರ ಹೆಚ್ಚು ಶಾಲೆಗಳನ್ನು ತೆಗೆಯುವಂಥ ಕೆಲಸ ಮಾಡಿ ಎಲ್ಲಾ ಶಾಲೆಗಳಿಗೂ ಉಪಾಧ್ಯಾಯರನ್ನು ತುಂಬುವಂತಹ ಕೆಲಸ ಮಾಡಬೇಕು. ನಮ್ಮಲ್ಲಿ ಪ್ರಾಥಮಿಕ ಶಿಕ್ಷಣದಿಂದ ಮಾಧ್ಯಮಿಕ ಶಿಕ್ಷಣಕ್ಕೆ ಶಾಲೆಗಳು ಪರಿವರ್ತನೆಯಾದಂತಹ ಸಂದರ್ಭಗಳಲ್ಲಿ ಯಾವುದೇ ರೀಯಿಲ್ಲಿ ಹುದ್ದೆಗಳು ಮಂಜೂರಾತಿ ಆಗದೇ ಇರುವಂತಹ ರೀತಿಯಲ್ಲಿ ಮಾಧ್ಯಮಿಕ ಶಾಲೆಗಳನ್ನು ಯಥೇಚ್ಛವಾಗಿ ಕೊಡುತ್ತಿದ್ದೀರಿ. ಸುಮಾರು ಹತ್ತು ವರ್ಷಗಳ ಹಿಂದೆ ಮಂಜೂರಾಗಿರುವ ಹುದ್ದೆಗಳನ್ನು ಬಿಟ್ಟರೆ ಇಲ್ಲಿಯವರೆಗೂ ಒಂದೂ ಹುದ್ದೆ ಮಂಜೂರಾಗಿರುವುದಿಲ್ಲ. ಆ ಹುದ್ದೆಗಳನ್ನು ಮಂಜೂರು ಮಾಡುವಂತಹ ಒಂಧು ಕೆಲಸವನ್ನು ತಾವು ಮಾಡಬೇಕು. ನಮ್ಮ ತುಮಕೂರು ಜಿಲ್ಲೆ ಕೂಡ ಇವತ್ತು ಸಂಪೂರ್ಣ ಸಾಕ್ಷರತಾ ಜಿಲ್ಲೆಯಾಗಿ ಪರಿವರ್ತನೆಯಾಗುವಂತಪ ಹಂತದಲ್ಲಿದೆ. ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದ ಸಹಾಯಧನದಿಂದ ಬರತಕ್ಕಂಥ ಇಂತಹ ಕಾರ್ಯಕ್ರಮಗಳು ಏನು ಇವೆ ಈ ಒಂದು ಕಾರ್ಯಕ್ರಮದ ಅನುಷ್ಠಾನದಲ್ಲಿ ಅನೇಕ ರೀತಿಯ ಲೋಪದೋಷಗಳು ನಮ್ಮ ಒಂದು ಜಿಲ್ಲೆಯಲ್ಲಿ ಆಗಿದೆ ಈ ಬಗ್ಗೆ ನಾನು ಒಂದು ಪ್ರಶ್ನೆಯನ್ನು ಸಹ ಹಾಕಿದ್ದೆ ಇವತ್ತು ಆ ಪ್ರಶ್ನೆ ಬರುವಂಥಾದ್ದು ಇತ್ತು. ನನ್ನ ಪ್ರಶ್ನೆಗೆ ಸರ್ಕಾರದಿಂದ ಉತ್ತರ ಬಂದಿದ್ದರೆ ಪರಿಸ್ಥಿತಿ ಬೇರೆ ಆಗುತ್ತಿತ್ತು ಎನ್ನುವಂತಹ ಮಾತನ್ನು ನಾನು ಹೇಳುತ್ತೇನೆ. ನಮ್ಮ ಜಿಲ್ಲೆಗೆ ಬಂದಿರತಕ್ಕಂಥ 6 ಕೋಟಿ 70 ಲಕ್ಷ ರೂಪಾಯಿಗಳಲ್ಲಿ ಸುಮಾರು 2-3 ಕೋಟಿ ರೂಪಾಯಿಗಳ ಹಣ ದುರುಪಯೋಗವಾಗಿರತಕ್ಕಂಥಾದ್ದು ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಆ ಭಾಗದ ಶಾಸಕರು ಕೂಡ ಈ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ ಈ ವಿಷಯ ಶಾಸನ ಸಭೆಗಳ ಸಮಿತಿಗಳಲ್ಲಿ ಕೂಡ ಹೆಚ್ಚು ವ್ಯಾಪಕವಾಗಿ ಚರ್ಚೆ ಆಗಿದೆ. ಈ ವಿಷಯ ಕೇಂದ್ರ ಸರ್ಕಾರದ ಗಮನಕ್ಕೂ ಕೂಡ ಹೋಗಿರುವುದರಿಂದ ಅದರ ಬಗ್ಗೆ ತಾವು ಗಮನಹರಿಸಿ ಇದರ ಬಗ್ಗೆ ಒಂದು ಎನ್‌ಕ್ವೈರಿ ಮಾಡಬೇಕು. ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣ ಯಾವುದೇ ರೀತಿಯಲ್ಲಿ ದುರುಪಯೋಗ ವಾಗಬಾರದು. ಯಾರಿಗೆ ಕೊಡತಕ್ಕಂಥ ಹಣ ಇದು ? ಬಡವರಿಗೆ ಕೊಡತಕ್ಕಂಥ ಬಡ ಮಕ್ಕಳಿಗೆ ವಿದ್ಯಾಭ್ಯಾಸ ಕೊಡತಕ್ಕಂಥ ಹಣ ದುರುಪಯೋಗವಾಗತಕ್ಕಂಥಾದ್ದನ್ನು ತಾವು ಯಾವತ್ತು ಕೂಡ ಸಹಿಸಬಾರದು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು : ರಾಜ್ಯಪಾಲರ ಭಾಷಣ ಇದೆ. ನಿಮ್ಮ ಪಾರ್ಟಿಯವರು ಇನ್ನು ಎಷ್ಟು ಹೆಸರು ಕೊಟ್ಟಿದ್ದಾರೆ ?

ಶ್ರೀ ಟಿ.ಬಿ. ಜಯಚಂದ್ರ : ಮುಗಿಸಿ ಬಿಡುತ್ತೇನೆ. ಅಧ್ಯಕ್ಷರೇ, ಮತ್ತೊಂದು ಬಹಳ ಮುಖ್ಯವಾಗಿರತಕ್ಕಂಥ ವಿಚಾರ ನಾನು ಗಮನ ಸೆಳೆಯುವ ಸೂಚನೆ ಮುಖಾಂತರ ತಮ್ಮ ಗಮನವನ್ನು ಸೆಳೆಯಬೇಕಾಗಿತ್ತು. ಹೇಮಾವತಿ ನಾಲೆಯ ಕೆಲಸಗಳು ನಿಂತು ಹೋಗಿರುವಂತಹ ಸಂದರ್ಭದಲ್ಲಿ ಹೊಸದಾಗಿ ಕೆಲಸ ಪ್ರಾರಂಭ ಮಾಡಬೇಕು ಎನ್ನತಕ್ಕಂಥಾದ್ದನ್ನು ಬಹಳ ಮುಖ್ಯವಾಗಿ ನಾನು ಮಾನ್ಯ

ಅಧ್ಯಕ್ಷರ ಮುಖೇನ ಸರ್ಕಾರದ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : ಕೃಷ್ಣಾ ಇಲ್ಲಾ, ಕಾವೇರಿ ಇಲ್ಲ, ಕುಳಿತುಕೊಳ್ಳಿ ಮುನಿಯಪ್ಪ ತಾವು ಮಾತನಾಡಿ. If you donot give respect to me I know how to assert my right.

4.40 ಪಿ.ಎಂ.

ಶ್ರೀ ಬಿ. ಮುನಿಯಪ್ಪ (ಗಾಂಧೀನಗರ) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ಸರ್ಕಾರ 1995-96ನೇ ಸಾಲಿನ ಆಯವ್ಯಯ ಪತ್ರವನ್ನು ಮಂಡಿಸಿ ಕಳೆದ ಮೂರು ದಿನಗಳಿಂದ ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. 23-3-95 ರಂದು ಕರ್ನಾಟಕ ರಾಜ್ಯ ಹಣಕಾಸಿನ ಪರಿಸ್ಥಿತಿ ಬಗ್ಗೆ ಒಂದು ಶ್ವೇತ ಪತ್ರವನ್ನು ಹೊರಡಿಸಿ ಹಳೆಯ ಸರ್ಕಾರ ರಿಜರ್ವ್ ಬ್ಯಾಂಕ್‌ನಿಂದ ಸುಮಾರು 23 ಕೋಟಿ ರೂಪಾಯಿ ಒ.ಡಿ.ಯನ್ನು ಮತ್ತು 527 ಕೋಟಿ ರೂಪಾಯಿ ಕೊಡಬೇಕಾದ ಸಾಲವನ್ನು ಇಟ್ಟಿತ್ತು ಎನ್ನತಕ್ಕಂಥ ಒಂದು ಹಿನ್ನೆಲೆಯಲ್ಲಿ ಆಯುವ್ಯಯ ಮಂಡಿಸಿರುವ ಈ ಸಂದರ್ಭ ಇದೆ. ಹೊಸ ಸರ್ಕಾರ ಕೂಡ 110 ದಿವಸಗಳ ಅವಧಿಯಲ್ಲಿ, ಈ ಕನ್ನಡ ನಾಡಿನ ಉದ್ದಗಲದಲ್ಲಿ ಜನರು ಕುತೂಹಲದಿಂದ ಕಾದು ನೋಡುತ್ತಿದ್ದ ಸಮಸ್ಯೆಗಳನ್ನು ಸ್ವಲ್ಪ ಉಸಿರಾಡುವ ವಾತಾವರಣವನ್ನು ಉಂಟು ಮಾಡಿ ಆಯುವ್ಯಯವನ್ನು ಮಂಡಿಸಿರುವ ಸಂದರ್ಭ ಇದೆ. ಮೊದಲನೇಯದಾಗಿ ನಮ್ಮ ಅರ್ಥ ಸಚಿವರು ಒಂದನೇ ತಾರೀಖು ಯುಗಾದಿ ಹಬ್ಬ ಬರಲಿದೆ ಈ ಯುಗಾದಿ ಹಬ್ಬಕ್ಕೆ ಸಿಹಿಯನ್ನು ಕೊಡುವ ಬದಲು ಬೆಲ್ಲದ ಮೇಲೆ ತೆರಿಗೆಯನ್ನು ಏರಿಸಿ ಒಂದೂವರೆ ಪರ್ಸೆಂಟ್ ಇದ್ದಂತಹ ಬೆಲ್ಲಕ್ಕೆ ಎರಡು ಪರ್ಸೆಂಟ್ ತೆರಿಗೆಯನ್ನು ಹಾಕಿ ಯುಗಾದಿ ಎಂದರೆ ಬೇವು ಬೆಲ್ಲ ಎರಡೂ ಸೇರಿಸಿ ಜೀವನದಲ್ಲಿ ಕಹಿಸಿಹಿ ಎರಡನ್ನು ಸಮಪಾಲಾಗಿ ತೆಗೆದುಕೊಳ್ಳಬೇಕು ಎನ್ನುವ ಸೂತ್ರ ಇದೆ, ಈ ಬೆಲ್ಲದ ಮೇಲೆ ಎತಕ್ಕೆ ಅವರ ದೃಷ್ಟಿ ಬಿತ್ತೋ ಈ ಒಂದು ಅರ್ಧ ಪರ್ಸೆಂಟ್‌ನಲ್ಲಿ ನೂರಾರು ಕೋಟಿ ರೂಪಾಯಿ ಸರ್ಕಾರಕ್ಕೆ ಹಣ ಬರುತ್ತದೆಂದು ನಾನು ತಿಳಿಯುವುದಿಲ್ಲ. ಯುಗಾದಿ ಹಬ್ಬವನ್ನು ಸಿಹಿಯಿಂದ ಆಚರಣೆ ಮಾಡುವ ರೀತಿಯಲ್ಲಿ ಬೆಲ್ಲದ ಮೇಲೆ ಹಾಕಿರುವ ಅರ್ಧ ಪರ್ಸೆಂಟ್ ತೆರಿಗೆಯನ್ನು ಸರ್ಕಾರ ತೆಗೆಯಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಕೆ.ಇ.ಬಿ. ಸಂಸ್ಥೆ ಏನು ಇದೆ ಅದು ಹೆಚ್ಚು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿ ಜನರಿಗೆ ಸಹಾಯ ಮಾಡುವ ದಿಸೆಯಲ್ಲಿ, ಕೆಇಬಿ ಯವರು ಖರ್ಚು ಮಾಡುವ ಡೀಜಲ್ ಮೇಲೆ ನಾಲ್ಕು ಪರ್ಸೆಂಟನ್ನು ಡೀಜಲ್ ದರದ ಮೇಲೆ ಕೊಟ್ಟಿರುವುದನ್ನು ನಾನು ಸ್ವಾಗತಿಸುತ್ತೇನೆ. ಅದೇ ರೀತಿಯಾಗಿ ಕೆಇಬಿ ಹೇಗೆ ರಾಜ್ಯ ಸರ್ಕಾರದ ಅಧೀನಕ್ಕೆ ಒಳಪಡುವಂತಹ ಸಂಸ್ಥೆಯೋ ಅದೇ ರೀತಿಯಾಗಿ ರಾಜ್ಯ ರಸ್ತೆ ಸಾರಿಗೆ ಕೂಡ ರಾಜ್ಯ ಸರ್ಕಾರದ ಒಂದು ಅಂಗ. ಈ ರಸ್ತೆ ಸಾರಿಗೆ ಸಂಸ್ಥೆಯ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಕೆ.ಇ.ಬಿ.ಗೆ 4 ಪರ್ಸೆಂಟನ್ನು ರಿಯಾಯಿತಿ ಕೊಡುವಂತಹ ಸಂದರ್ಭ ಇವತ್ತು ರಸ್ತೆ ಸಾರಿಗೆ ಸಂಸ್ಥೆಯನ್ನು ನಂಬಿ ರಾಜ್ಯದ ಉದ್ದಗಲದಲ್ಲಿ ಕೋಟ್ಯಾಂತರ ಜನ ಆ ಬಸ್ಸಿನಲ್ಲಿ ಓಡಾಡಬೇಕಾದಂತಹ ಸಂದರ್ಭದಲ್ಲಿ ರಸ್ತೆ ಸಾರಿಗೆ ಸಂಸ್ಥೆಗೆ ಸುಮಾರು 91 ಕೋಟಿ ರೂಪಾಯಿಗಳ ನಷ್ಟದಲ್ಲಿದೆ ಎನ್ನುವಂತಹ ಅಂಕಿಅಂಶಗಳನ್ನು ಒಂದು ಕಡೆ ಹೇಳಿದ್ದರೂ ಕೂಡ ಆ ಸಂಸ್ಥೆ ವಿದ್ಯಾರ್ಥಿಗಳಿಗೆ ಪೋಲೀಸರಿಗೆ ಅಂಗವಿಕಲರಿಗೆ ಮತ್ತು ಸಾಮಾಜದ

ಇತರೇ ವರ್ಗದ ಜನರಿಗೆ ಉಚಿತ ಹಾಗೂ ರಿಯಾಯಿತಿ ದರದಲ್ಲಿ ಕೊಡುವಂತಹ ಪಾಸ್‌ಗಳಿಗೆ ಅದಕ್ಕೆ ಸುಮಾರು 120 ಕೋಟಿ ರೂಪಾಯಿಗಳು ಖರ್ಚಾಗುತ್ತದೆ ಎಂದು ಹೇಳುತ್ತಿದ್ದಾರೆ. ರಸ್ತೆ ಸಾರಿಗೆ ಸಂಸ್ಥೆ ಏನು ರಾಜ್ಯದ ಉದ್ದಗಲದಲ್ಲಿ ಅದು ಬೆಂಗಳೂರು ನಗರವಾಗಿರಬಹುದು ರಾಜ್ಯದ ಯಾವ ಮೂಲೆ ಅದರೂ ಕೂಡ ಯಾವ ಬಸ್ಸುಗಳಲ್ಲಿ ಕೂಡ ಜನ ಇಲ್ಲದೆ ಅದು ನಷ್ಟದಲ್ಲಿ ನಡೆಯುವಂತಹ ಒಂದು ಸಂದರ್ಭ ಇಲ್ಲ, ಹಳ್ಳಿಗಾಡಿನಲ್ಲಿ ಬಸ್ಸುಗಳಲ್ಲಿ ಸೀಟು ಇಲ್ಲದೆ ಬಸ್ಸಿನ ಮೇಲೆ ಪ್ರಯಾಣ ಮಾಡುವುದನ್ನು ಕೋಲಾರ ಜಿಲ್ಲೆ ಆಗಿರಬಹುದು ಅಥವಾ ರಾಜ್ಯದ ಮೂಲೆಯಲ್ಲಿರುವ ಬೀದರ ಜಿಲ್ಲೆ ಆಗಿರಬಹುದು ಇದನ್ನು ನಾವು ನೋಡುತ್ತಿದ್ದೇವೆ. ಆದರೂ ಕೂಡ ಆ ಸಂಸ್ಥೆ 91 ಕೋಟಿ ರೂಪಾಯಿಗಳ ನಷ್ಟದಲ್ಲಿ ನಡೆಯುತ್ತದೆಂದು ಹೇಳುವಂತಹ ಸಂದರ್ಭ ಇದೆ. ಅಲ್ಲಿರತಕ್ಕಂಥ ಕಾರ್ಮಿಕರೂ ಕೂಡ ನಿಷ್ಠೆಯಿಂದ ಕೆಲಸ ಮಾಡಬೇಕಾದಂತಹಪರಿಸ್ಥಿತಿ ಇದೆ. ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಅಂಗೀಕಾರ ಪಡೆದಂತಹ ಒಂದು ಸಂಘ ಇದೆ ಅವರು ಮೊದಲು ಏನು ಒಪ್ಪಂದವನ್ನು ಮಾಡಿಕೊಂಡಿದ್ದಾರೋ ಆ ಒಪ್ಪಂದ ಮುಗಿದು ಮತ್ತೆ 10-5-93ರಲ್ಲಿ ಹೊಸ ಒಪ್ಪಂದ ಸರ್ಕಾರ ನೇಮಿಸಿದಂತಹ ಛೇರ್ಮನರವರು ಅಂಗೀಕಾರ ಪಡೆದಂತಹ ರಸ್ತ ಸಾರಿಗೆ ಸಂಸ್ಥೆಯ ಸಂಘದ ಕಾರ್ಮಿ ನಾಯಕರ ಜೊತೆಯಲ್ಲಿ ಮಾತನಾಡಿ ಅದು 31-12-91ಕ್ಕೆ ಹಳೆಯ ಒಪ್ಪಂದ ಮುಗಿದು 1-1-92ರಲ್ಲಿ ಹೊಸ ಒಪ್ಪಂದ ಜಾರಿ ಆಗಿ ಬರೇಬೇಕಾಗಿದೆ ಆದರೆ ಅಂಥ ಒಪ್ಪಂದ ಇನ್ನು ಜಾರಿಗೆ ಬಾರದೇ ಇರುವುದದಿಂದಾಗಿ ಆ ಕಾರ್ಮಿಕ ನಾಯಕರುಗಳು ಹೋರಾಟವನ್ನು ಮಾಡುವಂತಹ ಪರಿಸ್ಥಿತಿ ಉಂಟಾಗಿದೆ. ಇಂತಹ ಸಂದರ್ಭದಲ್ಲಿ ಅವರು ನಿಷ್ಠೆಯಿಂದ ಕೆಲಸ ಮಾಡುತ್ತಾರೆಂದು ಹೇಳುವುದಕ್ಕೆ ಬರುವುದಿಲ್ಲ. ಸರ್ಕಾರದಿಂದ ನೇಮಕವಾಗಿ ರತಕ್ಕಂಥ ಛೇರ್ಮನ್‌ರವರ ನೇತೃತ್ವದಲ್ಲಿ ಏನು ಒಪ್ಪಂದವಾಗಿದೆಯೋ ಆ ಒಪ್ಪಂದವನ್ನು ಜಾರಿಗೆ ಕೊಡಲು ಸರ್ಕಾರ ಮುಂದೆ ಬರಬೇಕು ಎನ್ನುವ ಮಾತನ್ನು ನಾನು ತಮ್ಮ ಮೂಖಾಂತರ ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ, ನಿನ್ನೆಯಿಂದ ಮಾತನಾಡಿದಂತಹ ನಮ್ಮ ರಾಜ್ಯದ ಮಾಜಿ ಮುಖ್ಯಮಂತ್ರಿಗಳು ನಾಯಕರುಗಳು ಎಡಗಡೆ ಬಲಗಡೆ ಇರತಕ್ಕಂಥ ಶಾಸಕ ಮಿತ್ರರು ಏನು ಇದ್ದಾರೆ ಹೆಚ್ಚು ಸಮಯ ....

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೇ ಬಸ್ಸುಗಳವರು ಮುಷ್ಕರ ಮಾಡಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ನಗರದಲ್ಲಿ ಯಾವ ರೀತಿಯ ಪ್ರಯಾಣಿಕರು ಇದ್ದಾರೆ ಅಂದರೆ 4 ತರಹದ ಪ್ರಯಾಣಿಕರು ಇದ್ದಾರೆ. ಸೀಟಿನಲ್ಲಿ ಕುಳಿತು ಪ್ರಯಾಣ ಮಾಡುವವರು ನಿಂತು ಪ್ರಯಾಣ ಮಾಡುವವರು ಫುಟ್‌ಬೋರ್ಡ್ ಪ್ರಯಾಣಿಕರು ಬಸ್ಸಿನ ಮೇಲೆ ಕುಳಿತು ಪ್ರಯಾಣ ಮಾಡುವರು ಇದ್ದಾರೆ. ಇದರಿಂದ ಅವರಿಗೆ ಲಕ್ಷಾಂತರ ರೂಪಾಯಿ ಆದಾಯ ಇದೆ. ಆದರೂ ಮುಷ್ಕರ ಮಾಡುತ್ತಾರೆ. ಇದು ಸರಿಯೇ ಎಂದು ನಾನು ಹೇಳಲು ಹೊರಟಿದ್ದೆ.

ಶ್ರೀ ಮುನಿಯಪ್ಪ : ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ಮಹಾ ನಗರದದ 12 ಶಾಸನ ಸಭಾ ಕ್ಷೇತ್ರಗಳಲ್ಲಿ ಒಂದು ಕ್ಷೇತ್ರವಾಗಿರುವ ಗಾಂಧಿನಗರ ಕ್ಷೇತ್ರದ ಪ್ರತಿನಿಧಿಯಾಗಿ ಬಂದಿರತಕ್ಕ ನಾನು ಹೇಳುವುದೇನೆಂದರೆ, ಏತಕ್ಕೋ ಸರ್ಕಾರದವರು ಬೆಂಗಳೂರು ಜನರ ಮೇಲೆ ಒಂದು ವಿಶೇಷವಾದ ದೃಷ್ಟಿಯಿಟ್ಟು, ಕ್ರೂರ ದೃಷ್ಟಿ ಎಂದು ನಾನು ಹೇಳುವುದಿಲ್ಲ, ಬೆಂಗಳೂರು ನಗರದ ನಿವಾಸಿಗಳು ವಿಶೇಷವಾಗಿ ದಂಡ ತೆರುವ ರೀತಿಯಲ್ಲಿ ಸರ್ಕಾರ ತೆರಿಗೆ ಹಾಕಿದೆ. ಪೆಟ್ರೋಲ್ ಮೇಲೆ ಲೀಟರ್‌ಗೆ

75 ಪೈಸೆ, ಡೀಸಲ್‌ಗೆ ಒಂದು ಲೀಟರ್‌ಗೆ 10 ಪೈಸೆ ತೆರಿಗೆ ಹಾಕಿ ಹೊರೆಯನ್ನು ಮಾಡಿದೆ. ಅದನ್ನು ಸರ್ಕಾರದವರು ಖಂಡಿತವಾಗಿ ವಾಪಸ್ ತೆಗೆದುಕೊಳ್ಳಬೇಕು. ಈಗ ಪಂಚಾಯಿತಿ ಚುನಾವಣೆ ಆಗಿದೆ, ಶಾಸನ ಸಭಾ ಚುನಾವಣೆ ಆಗಿದೆ, ನೀವು ಈ ತೆರಿಗೆ ಭಾರವನ್ನು ಬೆಂಗಳೂರು ನಗರದ ಜನತೆ ಮೇಲೆ ಹಾಕಿರುವುದನ್ನು ವಾಪಸ್ ತೆಗೆದುಕೊಳ್ಳದೆ ಹೋದರೆ, ನಾನು ನಿಮ್ಮ ಹಿತೈಷಿಯಾಗಿ ಹೇಳುತ್ತೇನೆ, ಮುಂದೆ ಬರುವ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಸರಿಯಾದ ಫಲಿತಾಂಶವನ್ನು ಕೊಡುತ್ತಾರೆ. ಇವತ್ತು ಬೆಂಗಳೂರು ಮೆಗಾಸಿಟಿ ಬಗ್ಗೆ ಮಾತನಾಡಿದ್ದೇನೆ. ಸನ್ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಬೆಂಗಳೂರು ಮಹಾ ನಗರಪಾಲಿಕೆ ಕಛೇರಿ ಮುಂದೆ ಸಬ್-ವೇ ಮತ್ತು ಸುರಂಗ ಮಾರ್ಗವನ್ನು ಮಾಡುವುದಕ್ಕೆ ಶಂಕು ಸ್ಥಾಪನೆ ನೆರವೇರಿಸಿದ್ದರು, ಆದರೆ ಮುಂದೆ ಬಂದಂಥ ಸರ್ಕಾರಗಳು ಆ ಕಾರ್ಯವನ್ನು ಮುಂದುವರಿಸಲಿಲ್ಲ. ಬೆಂಗಳೂರು ನಗರದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗಬೇಕಾದರೆ ಗಂಟೆಗಟ್ಟಲೆ ಸಮಯ ತೆಗೆದುಕೊಳ್ಳುತ್ತದೆ. ಆಮೇಲೆ ತ್ರಿಚಕ್ರ ಮತ್ತು ಇತರೆ ವಾಹನಗಳಿಗೆ ಲೈಫ್ ಟ್ಯಾಕ್ಸ್ ಹಾಕುವ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಲಾಗಿದೆ. ವಾಹನಗಳ ತೆರಿಗೆಯಿಂದ 40 ಪರ್ಸೆಂಟ್ ನಗರ ಪಾಲಿಕೆಗೆ ಬರದೆ ಬಹಳ ತೊಂದರೆಯಾಗಿದೆ. ಅನೇಕ ನಗರ ಪಾಲಿಕೆಗಳಲ್ಲಿ ಹಣ ಇಲ್ಲದೆ ಅಲ್ಲಿನ ಮೇಯರ್‌ರವರು ಸರ್ಕಾರದಿಂದ ಹಣವನ್ನು ಪಡೆದು ಕಾರ್ಮಿಕರಿಗೆ ಸಂಬಳ ಕೊಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕಾಗಿ ಎಲ್ಲಾ ನಗರ ಪಾಲಿಕೆ ಮೇಯರ್‌ಗಳು ಮತ್ತು ಕಮಿಷನರ್‌ಗಳು ಸರ್ಕಾರದ ಬಳಿ ಬಂದು ವಾಹನ ತೆರಿಗೆ ಬಾಬತ್ತು ಮತ್ತು ಆಕ್ಟ್ರಾಯ್ ಬಾಬತ್ತು ಬರಬೇಕಾದ ಹಣವನ್ನು ಕೊಡಿ ಎಂದು ಭಿಕ್ಷೆ ಪಾತ್ರೆ ಹಿಡಿದು ಬರುವುದನ್ನು ನಾನು ಕಾಣುತ್ತಿದ್ದೇನೆ. ಆ ಪರಿಸ್ಥಿತಿಯನ್ನು ಬದಲಾವಣೆ ಮಾಡುವುದಕ್ಕಾಗಿ ಸರ್ಕಾರದವರು ಕಾರ್ಯಕ್ರಮಗಳನ್ನು ತೆಗೆದುಕೊಂಡರೆ ಬೆಂಗಳೂರು ನಗರದಲ್ಲಿ ವಾಸಿಸುವ ಅರ್ಧ ಕೋಟಿ ಜನರಿಗೆ ಅನುಕೂಲ ಮಾಡಿದ ಹಾಗಾಗುತ್ತದೆ. ಜನ ದಟ್ಟಣೆ ಇರುವ ಸ್ಥಳಗಳಲ್ಲಿ ಮೇಲ್ ಸೇತುವೆ ಮತ್ತು ಸುರಂಗ ಮಾರ್ಗಗಳನ್ನು ಆದಷ್ಟು ಬೇಗ ಮಾಡಿಸಬೇಕು. ಆಮೇಲೆ, ಬೆಂಗಳೂರು ನಗರವನ್ನು ಅಭಿವೃದ್ಧಿಪಡಿಸುವ ಬಗ್ಗೆ ಮಾನ್ಯ ಜೇಕಬ್ ಹಾಗೂ ಲಕ್ಷ್ಮಣ ರಾವ್ ಅವರು ಕೊಟ್ಟಿರುವ ವರದಿಯನ್ನು ಇದುವರೆಗೆ ಗಮನಿಸಿಲ್ಲವಾದ್ದರಿಂದ ಈಗಲಾದರೂ ಸರ್ಕಾರದವರು ಆ ವರದಿಯಲ್ಲಿರುವ ಶಿಫಾರಸ್‌ಗಳನ್ನು ಜಾರಿಗೆ ತರಬೇಕೆಂದು ವಿನಂತಿ ಮಾಡುತ್ತೇನೆ. ಇನ್ನು ರೇಷ್ಮೆ ಬಟ್ಟೆ ಮೇಲೆ 4 ಪರ್ಸೆಂಟ್ ತೆರಿಗೆಯನ್ನು ಹಾಕಲಾಗಿದೆ, ಇದನ್ನು ದಯವಿಟ್ಟು ಕೈ ಬಿಡಬೇಕು. ರೇಷ್ಮೆ ಬಟ್ಟೆಯನ್ನು ನೇಕಾರಾರು ಮಾರುಕಟ್ಟೆಯಲ್ಲಿ ತೆಗೆದುಕೊಂಡು ಮಾರುವಂಥ ಸಂದರ್ಭದಲ್ಲಿ ಸರ್ಕಾರಿ ಅಧಿಕಾರಿಗಳ ಕೈಗೆ ಸಿಕ್ಕಿ ಬಹಳ ಹಿಂಸೆ ಅನುಭವಿಸುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಹಾಗೂ 4 ಪರ್ಸೆಂಟ್ ತೆರಿಗೆ ಹಾಕಿರುವುದರಿಂದ ನೇಕಾರರ ಬಾಳು ಹಸನಾಗುವುದಿಲ್ಲ ಆದುದರಿಂದ ಆ ತೆರಿಗೆಯನ್ನು ಕೈ ಬಿಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಆಮೇಲೆ ಬಡತನ ನಿವಾರಣೆ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ, ಈ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಗ್ರಾಮಾಂತರ ಪ್ರದೇಶಗಲ್ಲಿ 41 ಪರ್ಸೆಂಟ್ ಜನ ನಗರ ಪ್ರದೇಶಗಳಲ್ಲಿ 37.7 ಪರ್ಸೆಂಟ್ ಜನ ಬಡತನ ರೇಖೆಗಿಂತ ಕೆಳಗಡೆ ಇದ್ದಾರೆಂದು ಸರ್ಕಾರ ಕೊಟ್ಟಿರುವ ಅಂಕಿ ಅಂಶದಿಂದಲೇ ಗೊತ್ತಾಗುತ್ತದೆ. ಇನ್ನು ಎರಡು

ವರ್ಷಗಳು ಕಳೆದರೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಅರ್ಧ ಶತಮಾನವಾಗುತ್ತದೆ. ಇಷ್ಟು ವರ್ಷಗಳಾದರೂ ಎಲ್ಲರಿಗೂ ವಾಸಿಸಲು ಮನೆ, ಹಾಕಿಕೊಳ್ಳಲು ಬಟ್ಟೆ, ಕೆಲಸ ಮಾಡಲು ಕೆಲಸ ಕೊಡದೆ ಇರುವ ಬಗ್ಗೆ ಆಡಳಿತವನ್ನು ಹಿಂದೆ ನಡೆಸಿದವರು, ಹಾಗೂ ಈಗ ಆಡಳಿತವನ್ನು ನಡೆಸುವವರು ಮತ್ತು ಮುಂದೆ ಆಡಳಿತವನ್ನು ನಡೆಸುವಂಥವರು ತಲೆ ಬಗ್ಗಿಸಬೇಕಾಗುತ್ತದೆ. ಪ್ರತಿ ವರ್ಷ ಸಾವಿರಾರು ಜನರು ವಿಶ್ವವಿದ್ಯಾನಿಲಯಗಳಿಂದ ಡಿಗ್ರಿಗಳನ್ನು ಪಡೆದು ಹೊರ ಬಂದ ನಂತರ ಅವರೆಲ್ಲರೂ ನಿರುದ್ಯೋಗಿಗಳಾಗಿ ನಿಲ್ಲುವಂಥ ಪರಿಸ್ಥಿತಿ ನಮ್ಮ ರಾಜ್ಯ ಮತ್ತು ರಾಷ್ಟ್ರದಲ್ಲಿ ನಿರ್ಮಾಣವಾಗಿದೆ. ಅದಕ್ಕಾಗಿ ಉದ್ಯೋಗಗಳನ್ನು ಕಲ್ಪಿಸುವ ಬಗ್ಗೆ ಸರ್ಕಾರದವರು ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಸರ್ಕಾರ ಇರಬಹುದು, ಮಹಾನಗರ ಪಾಲಿಕೆ ಇರಬಹುದು, ಪುರ ಸಭೆಗಳು ಇರಬಹುದು, ಇಲ್ಲಿ ಸಾವಿರಾರು ಸಂಖ್ಯೆಯಲ್ಲಿ ಉದ್ಯೋಗಗಳು ಖಾಲಿ ಇವೆ. ಆದರೂ ಸರ್ಕಾರದವರು ಆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡದೆ ಹಾಗೇ ಬಿಟ್ಟಿದೆ. ಬೆಂಗಳೂರು ಮಹಾನಗರ ಪಾಲಿಕೆಯು ಒಂದೂವರೆ ಸಾವಿರ ಪೌರ ಕಾರ್ಮಿಕರವರನ್ನು ನೇಮಕ ಮಾಡಿಕೊಳ್ಳಲು 5 ವರ್ಷಗಳ ಹಿಂದೆ ಜಾಹೀರಾತನ್ನು ನೀಡಿದ್ದರೂ ಸಹಾ ಇದುವರೆಗೂ ಆ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರದವರು ಅನುಮತಿ ಕೊಟ್ಟಿಲ್ಲವೆಂದರೆ, ಯಾವ ರೀತಿ ಈ ದೊಡ್ಡ ನಗರವನ್ನು ಪೌರ ಕಾರ್ಮಿಕರಿಲ್ಲದೆ ಸ್ವಚ್ಛವಾಗಿ ಮತ್ತು ಚೊಕ್ಕಟವಾಗಿ ಇಡುವುದಕ್ಕೆ ಸಾಧ್ಯವೆಂದು ಸರ್ಕಾರ ಅರಿತುಕೊಳ್ಳಬೇಕಾಗಿದೆ. ಇವತ್ತಿನ ಸಮಾಜದಲ್ಲಿ ಎಲ್.ಕೆ.ಜಿ. ಮಟ್ಟದಿಂದ ವಿಶ್ವವಿದ್ಯಾನಿಲಯದ ಮಟ್ಟದವರೆಗೆ ಮಕ್ಕಳನ್ನು ಓದಿಸುವುದಕ್ಕಾಗಿ ತಂದೆ ತಾಯಿಗಳು ಮನೆಯನ್ನು ಅಡಮಾನವಿಡುತ್ತಾರೆ, ಕೆಲವರು ಮಾರಾಟ ಮಾಡುತ್ತಾರೆ, ಮತ್ತೆ ಕೆಲವರು ಅರೆ ಹೊಟ್ಟೆಯಲ್ಲಿ ಜೀವನ ಮಾಡುತ್ತಾರೆ, ಕೊನೆಗೆ ಮಕ್ಕಳು ವಿಶ್ವವಿದ್ಯಾನಿಲಯದಿಂದ ಪದವಿಯನ್ನು ಪಡೆದು ಹೊರ ಬಂದಾಗ ಅವರು ನಿರುದ್ಯೋಗಿ ಗಳಾಗುತ್ತಾರೆ. ಅದರಿಂದ ಎಷ್ಟು ಅನಾಹುತಗಳು ಆಗುತ್ತವೆಂದು ದಿನ ನಿತ್ಯ ಪತ್ರಿಕೆಗಳಲ್ಲಿ ಬರುವ ವರದಿಯಿಂದ ನಾವು ನೋಡುತ್ತಿದ್ದೇವೆ. ಅದಕ್ಕಾಗಿ ಈ ನಿರುದ್ಯೋಗ ಸಮಸ್ಯೆ ಮತ್ತು ಬಡತನವನ್ನು ಹೋಗಲಾಡಿಸಲು ಯಾವ ಯಾವ ಇಲಾಖೆಯಲ್ಲಿ ಹುದ್ದೆಗಳು ಖಾಲಿ ಇವೆಯೋ ಅವುಗಳನ್ನೆಲ್ಲಾ ಭರ್ತಿ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ. ಆಮೇಲೆ, ಮಕ್ಕಳುಗಳನ್ನು ಶಾಲೆಗೆ ಕರೆದುಕೊಂಡು ಹೋಗುವಂಥ ಮೆಟಾಡೋರ್ ವಾಹನಗಳ ಮೇಲೆ ತೆರಿಗೆಗಳನ್ನು ಹೆಚ್ಚು ಮಾಡಿದ್ದಾರೆ. ಆ ಕಾರಣಕ್ಕಾಗಿ ಮೆಟಾಡೋರ್ ವಾಹನದ ಮಾಲೀಕರುಗಳು ಇವತ್ತಿನ ದಿವಸ ಬೆಳಿಗ್ಗೆ ಮನವಿ ಪತ್ರವನ್ನು ಕೊಟ್ಟು ಅವರ ಕಷ್ಟ ಸುಖಗಳನ್ನು ಹೇಳಿಕೊಂಡಿದ್ದಾರೆ. ತಮಿಳುನಾಡು ಮತ್ತು ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಮೆಟಾಡೋರ್ ವಾಹನಗಳ ಮೇಲೆ ಹಾಕಿರುವ ತೆರಿಗೆ ಜಾಸ್ತಿ ಇಲ್ಲವೆಂದು ಹೇಳಿರುವುದು ಖಂಡಿತವಾಗಿಯೂ ತಪ್ಪು ಅಂಕಿಅಂಶಗಳಿಂದ ಕೂಡಿದೆ. ಇವತ್ತು ಹಾಕಿರುವ ತೆರಿಗೆ ಪ್ರಕಾರ ವರ್ಷಕ್ಕೆ ನಾಲ್ಕೂವರೆ ಸಾವಿರ ರೂಪಾಯಿಗಳನ್ನು ಅವರು ಕೊಡಬೇಕಾಗುತ್ತದೆ. ಆದರೆ, ಅದೇ ತಮಿಳುನಾಡು ಮತ್ತು ಬೇರೆ ರಾಜ್ಯಗಳಲ್ಲಿ ಇದರಲ್ಲಿ ಅರ್ಧದಷ್ಟು ತೆರಿಗೆ ಇದೆ ಎಂದು ನನಗೆ ತಿಳಿದು ಬಂದಿದೆ. ಇವತ್ತಿನ ದಿವಸ ಸುಮಾರು 500 ಮೆಟಾಡೋರ್ ವಾಹನಗಳು ಶಾಲಾ ಮಕ್ಕಳನ್ನು ಬೆಳಿಗ್ಗೆ ಕರೆದುಕೊಂಡು ಹೋಗಿ ಸಾಯಂಕಾಲ ಮನೆಗೆ ಕರೆದುಕೊಂಡು

ಬರುತ್ತವೆ. ಈ ತೆರಿಗೆ ಭಾರದಿಂದ ಆ ವಾಹನ ಮಾಲೀಕರಿಗೆ ಹೆಚ್ಚು ತೊಂದರೆಯಾಗಿರುವುದರಿಂದ, ಆ ತೊಂದರೆಯನ್ನು ಅವರು ಮಕ್ಕಳ ಮೇಲೆ ಹಾಕುತ್ತಾರೆ. ಅದಕ್ಕಾಗಿ ಈ ತೆರಿಗೆ ಹಾಕಿರುವ ಬಗ್ಗೆ ಮರು ಪರಿಶೀಲನೆ ಮಾಡಿ ಆ ವಾಹನ ಮಾಲೀಕರಿಗೆ ಆಗುವ ತೊಂದರೆಯನ್ನು ನಿವಾರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ವೃತ್ತಿ ತೆರಿಗೆಯನ್ನು ತೆಗೆಯುತ್ತೇವೆಂದು ಚುನಾವಣಾ ಪ್ರಚಾರ ಸಮಯದಲ್ಲಿ ತಾವು ಹೇಳಿದ್ದೀರಿ, ಆದರೆ ಅದರ ಬಗ್ಗೆ ಬಜೆಟ್‌ನಲ್ಲಿ ಏನೂ ಪ್ರಸ್ತಾಪ ಮಾಡಿಲ್ಲ. ಆ ವೃತ್ತಿ ತೆರಿಗೆಯನ್ನು ಖಂಡಿತವಾಗಿಯೂ ತೆಗೆಯಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಆಮೇಲೆ ರಾಜ್ಯದ ಶಾಂತಿ ಸುವ್ಯವಸ್ಥೆಗಾಗಿ ಈಗಿರುವ 50,853 ಪೋಲೀಸ್‌ರ ಸಂಖ್ಯೆಯಿಂದ 66,183ಕ್ಕೆ ಏರಿಸುವ ಉದ್ದೇಶವಿದೆ, ಅದಕ್ಕಾಗಿ 389 ಕೋಟಿ ರೂಪಾಯಿ ಖರ್ಚಾಗುತ್ತದೆಂದು ಹಾಗೂ ಈ ವರ್ಷ ರಾಜ್ಯದಲ್ಲಿ20 ಪೋಲೀಸ್ ಸ್ಟೇಷನ್ ಅನ್ನು ತೆಗೆಯುತ್ತೇವೆಂದು ಸರ್ಕಾರದವರು ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಇವತ್ತಿನ ದಿವಸ ಅಪರಾಧಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆಯುತ್ತಿವೆ, ಅದಕ್ಕಾಗಿ ನೂರಾರು ಪೋಲೀಸ್ ಸ್ಟೇಷನ್‌ಗಳನ್ನು ಮಾಡುವುದಲ್ಲದೆ ಹೆಚ್ಚು ಹೆಚ್ಚು ಪೋಲೀಸರನ್ನು ನೇಮಕ ಮಾಡಿಕೊಂಡು ಶಾಂತಿ ವ್ಯವಸ್ಥೆ ಮಾಡಬೇಕು. 50-60 ಕಿಲೋ ಮೀಟರ್ ದೂರದಲ್ಲಿರುವ ಗ್ರಾಮದಲ್ಲಿ ಏನಾದರೂ ಗಲಾಟೆಯಾದರೆ, ಅವರು ಪೋಲೀಸ್ ಸ್ಟೇಷನ್‌ಗೆ ಹೋಗುವುದರೊಳಗೆ 4 ಜನರು ಸತ್ತಿರುತ್ತಾರೆ. ಆದ್ದರಿಂದ, ಸಾಧ್ಯವಾದಷ್ಟು ಹತ್ತಿರದಲ್ಲಿ ಪೋಲೀಸ್ ಸ್ಟೇಷನ್‌ಗಳನ್ನು ತೆರೆಯಬೇಕು. ಪೋಲೀಸರ ಸ್ಥಿತಿಗತಿ ಏನು ಅಂತ ಕೇಳಿದಾಗ ಅವರು ಹೇಳುತ್ತಾರೆ, ಮಂತ್ರಿಗಳು ಬಂದರೆ ಅವರಿಗೆ ರಕ್ಷಣೆ ಕೊಡಬೇಕು, ರಾಜಕೀಯ ವ್ಯಕ್ತಿಗಳಿಗೆ ರಕ್ಷಣೆ ಕೊಡಬೇಕು, ಎಲ್ಲಿಯಾದರೂ ಅಕ್ಸಿಡೆಂಟ್ ಆದರೆ ಅಲ್ಲಿ ಓಡಿಹೋಗಿ ರಕ್ಷಿಸಬೇಕು, ಇಷ್ಟಾದರೂ ಕೂಡ ಅವರಿಗೆ ಕೊಡುತ್ತಿರುವಂಥ ಸಂಬಳ ಏನಿದೆ ಅದು ಬಹಳ ಕಡಿಮೆಯಾಗಿರುತ್ತದೆ. ಅದರಿಂದ ಅವರು ನೆಮ್ಮದಿಯಿಂದ ಕೆಲಸ ಮಾಡಲು ಸಾಧ್ಯವಾಗುತ್ತಾ ಇಲ್ಲ. ಎಷ್ಟೋ ಕಡೆಗಳಲ್ಲಿ ಪೋಲೀಸರ ಹತ್ತಿರ ಇರತಕ್ಕಂಥ ವಾಹನ ಮತ್ತು ಆಯುಧಗಳಿಗಿಂತ ಹೆಚ್ಚಾಗಿ ಅಪರಾಧ ಮಾಡುವವರ ಹತ್ತಿರವೇ ಆಧುನಿಕ ವಾಹನ ಮತ್ತು ಆಯುಧಗಳು ಇರುತ್ತವೆ. ಅದ್ದರಿಂದ ತುರ್ತಾಗಿ ಪೋಲೀಸ್ ಇಲಾಖೆಗೆ ಆಧುನಿಕ ವಾಹನ ಮತ್ತು ಆಯುಧಗಳನ್ನು ಒದಗಿಸಿಕೊಡಬೇಕು. ಇಲಾಖೆಗೆ 380 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದನ್ನು ಮತ್ತು 20 ಹೊಸ ಠಾಣೆಗಳನ್ನು ತೆರೆಯವುದನ್ನು ನಾನು ಸ್ವಾಗತ ಮಾಡುತ್ತೇನೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಪೋಲೀಸ್ ಇಲಾಖೆಯನ್ನು ಅಭಿವೃದ್ಧಿಪಡಿಸಬೇಕು ಮತ್ತು ಬಲಪಡಿಸಬೇಕೆಂದು ಈ ಮೂಲಕ ಒತ್ತಾಯಪಡಿಸುತ್ತೇನೆ. ನಗರ ಪ್ರದೇಶದಲ್ಲಿರತಕ್ಕಂಥ ಅಕ್ರಮ ಕಟ್ಟಡಗಳು ಏನಿವೆ, ಅವುಗಳನ್ನು ಸಕ್ರಮಗೊಳಿಸುವಂಥ ಕಾರ್ಯಕ್ರಮ 1991ರ ಅಡಿಯಲ್ಲಿ ಒಂದು ವಿಧೇಯಕವನ್ನು ತರುತ್ತೇವೆಂದು ಹೇಳಿದ್ದೀರಿ. ಅದನ್ನು ಮಾಡಬೇಕು. ಬೆಂಗಳೂರು ನಗರದಲ್ಲಿ ನಗರ ಪಾಲಿಕೆಯು ಕೆಲಸ ಮಾಡುತ್ತದೆ. ಬೆಂಗಳೂರು ನಗರದಲ್ಲಿ ಕಟ್ಟಿದಂಥ ಕಟ್ಟಡಗಳು ಏನಿವೆ, ಅವುಗಳಲ್ಲಿ ಸೆಲ್ಲಾರ್‌ನಲ್ಲಿ ಪಾರ್ಕಿಂಗ್ ಬಿಡಬೇಕೆಂದು ಕಾನೂನು ಇದ್ದರೂ ಕೂಡ ಗಾಂಧೀನಗರ ಮತ್ತು ಮೆಜೆಸ್ಟಿಕ್ ಪ್ರದೇಶದಲ್ಲಿ ಯಾವ ಕಟ್ಟಡದಲ್ಲಿಯೂ ಕೂಡ ವಾಹನಗಳನ್ನು ನಿಲ್ಲಿಸುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಆ ಜಾಗವನ್ನು ಹೆಚ್ಚ ಹಣವನ್ನು ಪಡೆದು ಬಾಡಿಗೆಗೆ ಕೊಟ್ಟಿದ್ದಾರೆ. ವಾಹನಗಳು ಬೀದಿಯ ಬದಿಯಲ್ಲಿ

ನಿಲ್ಲುತ್ತವೆ. ಹೀಗಾಗಿ ಸಂಚಾರಕ್ಕೆ ಭಾರಿ ತೊಂದರೆಯಾಗಿ ಜನರು ಓಡಾಡುವುದೇ ಕಷ್ಟವಾಗಿದೆ. ಹೀಗೆ ಅಕ್ರಮಕಟ್ಟಡಗಳನ್ನು ಕಟ್ಟುವವರಿಗೆ ಯಾವ ಅಧಿಕಾರಿಗಳು ಅವಕಾಶವನ್ನು ಕೊಡುತ್ತಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರಕಾರದವರು ಮುಂದೆ ಬರಬೇಕು. ಇವೊತ್ತು ಮಹಿಳಾ ಮತ್ತು ಮಕ್ಕಳ ಕಾರ್ಯಕ್ರಮಗದ ಬಗ್ಗೆ ಆರ್ಥಿಕ ಸಚಿವರು 20 ಕೋಟಿಗಳನ್ನು ಇಟ್ಟಿದ್ದಾರೆ. ಅದಕ್ಕಾಗಿ ಬಹಳ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ಅರ್ಧದಷ್ಟು ಸಂಖ್ಯೆಯಲ್ಲಿ ಮಹಿಳೆಯರು ಇದ್ದಾರೆ. ಅದ್ದರಿಂದ 20 ಕೋಟಿ ರೂಪಾಯಿಗಳು ಖಂಡಿತವಾಗಿಯೂ ಮಕ್ಕಳ ಮತ್ತು ಮಹಿಳೆಯರ ಅಭಿವೃದ್ಧಿಗೆ ಸಾಕಾಗುವುದಿಲ್ಲ. ಅದೇ ನಮ್ಮ ಪಕ್ಕದ ತಮಿಳುನಾಡಿನಲ್ಲಿ ಅಖಿಲ ಭಾರತ ಅಣ್ಣಾ ಡಿ.ಎಂ.ಕೆ. ಸರಕಾರ ಇದೆ. ಮುಖ್ಯಮಂತ್ರಿಯವರಾಗಿ ಶ್ರೀಮತಿ ಜಯಲಲಿತಾರವರು ಇದ್ದಾರೆ. ವರ್ಷಕ್ಕೆ 325 ಕೋಟಿ ರೂ.ಗಳನ್ನು 80 ಲಕ್ಷ ಬಡಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಕೊಡುವಂಥ ಯೋಜನೆ ಇಟ್ಟಿದ್ದಾರೆ. ಅಂಥ ಒಂದು ಯೋಜನೆಯು ದೇಶದ ಯಾವ ರಾಜ್ಯದಲ್ಲಿಯೂ ಕೂಡ ಇಲ್ಲ. ಅಂಥ ಒಂದು ಯೋಜನೆಯು ದೇಶದ ಯಾವ ರಾಜ್ಯದಲ್ಲಿಯೂ ಕೂಡ ಇಲ್ಲ. ಅಂಥ ಯೋಜನೆಯನ್ನು ನಮ್ಮಲ್ಲಿಯೂ ತರಲು ನಮಗೆ ಏನು ತಡೆ ಇದೆ? ಅದನ್ನು ಜಾರಿಗೆ ತರುವಂತೆ ಸರಕಾರವನ್ನು ಒತ್ತಾಯಿಸುತ್ತೇನೆ. ಹಳ್ಳಿಗಾಡಿನಲ್ಲಿರತಕ್ಕಂಥ ರೈತರ ಮಕ್ಕಳು, ಬಡವರ ಮಕ್ಕಳು, ಕೂಲಿಗಾರರ ಮಕ್ಕಳು, ಮುಂತಾಗಿ ಅವರುಗಳಿಗೆ ಊಟ ಕೊಡಲು ಸಾಧ್ಯವಿಲ್ಲದೆ ದನಕಾಯಲು ಶ್ರೀಮಂತರ ಬಳಿ ಕಳುಹಿಸುತ್ತಾರೆ. ಇಂಥ ಯೋಜನೆಯನ್ನು ತಂದ ಮೇಲೆ ಪಾಲಕರು ಮಕ್ಕಳನ್ನು ದನಕಾಯುವ ಕೆಲಸದಿಂದ ಬಿಡಿಸಿ ಶಾಲೆಗಳಿಗೆ ಕಳುಹಿಸುತ್ತಾರೆ. ಆ ಮಕ್ಕಳಿಗೆ ಊಟವು ಶಾಲೆಗಳಲ್ಲಿ ದೊರೆಯುತ್ತದೆ. ಅವರು ವಿದ್ಯೆಕಲಿತು ವಿದ್ಯಾವಂತರಾಗಿ ಬಡವರ ಮಕ್ಕಳು ಉತ್ತಮ ಉದ್ಯೋಗಗಳಲ್ಲಿ ಪ್ರವೇಶಿಸಲು ಅನುಕೂಲವಾಗುತ್ತದೆ. ದಯಮಾಡಿ ಅಂಥ ಯೋಜನೆಯನ್ನು ತಾವು ತರಬೇಕೆಂದು ಒತ್ತಾಯ ಮಾಡುತ್ತೇನೆ. ಇವೊತ್ತು ನಮ್ಮ ದೇಶದಲ್ಲಿನ ಎಷ್ಟೋ ಜನರು ವಿಶೇಷತಃ ಹಳ್ಳಿಗಾಡಿನಲ್ಲಿರತಕ್ಕಂಥ ನಮ್ಮ ಸಹೋದರಿಯರು, ತಾಯಂದಿರು, ಯುಗಾದಿ ಹಬ್ಬಕ್ಕೊಮ್ಮೆ ಒಂದು ಸೀರೆಯನ್ನು ತೆಗೆದುಕೊಂಡರೆ ಮತ್ತೊಂದು ಯುಗಾದಿ ಹಬ್ಬಕ್ಕೆ ಒಂದು ಸೀರೆಯನ್ನು ಕೊಂಡುಕೊಳ್ಳಲು ಕೂಡ ಕಷ್ಟಪಡುತ್ತಾರೆ. ಅಂಥ ನತದೃಷ್ಟರು ನಮ್ಮ ರಾಜ್ಯದಲ್ಲಿದ್ದಾರೆ ಎಂಬುದನ್ನು ಯಾರೂ ಮರೆಯಬಾರದು. ಅಲ್ಲಿ ತಮಿಳುನಾಡು ಸರಕಾರದಲ್ಲಿ 22 ಕೋಟಿ ರೂ.ಗಳನ್ನು ಖರ್ಚು ಮಾಡಿ, ಒಂದು ಜೊತೆ ಪಂಚೆ ಮತ್ತು ಸೀರೆ ಕೊಡುವಂಥ ಕಾರ್ಯಕ್ರಮ ಇದೆ. ಅಂಥ ಯೋಜನೆಯನ್ನು ನಮ್ಮಲ್ಲಿಯೂ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ 4 ಲಕ್ಷ ಅಂಗವಿಕಲ ಮಕ್ಕಳಿದ್ದಾರೆ ಎಂದು ತಿಳಿದು ಬರುತ್ತದೆ. ಇವೊತ್ತು ಅವರಿಗಾಗಿ ವ್ಯಾಪಾರ ಮಾಡಲು 10 ಸಾವಿರ ರೂ.ಗಳ ಸಾಲವನ್ನು ಕೊಟ್ಟು ಅವರನ್ನು ಅಭಿವೃದ್ಧಿ ಮಾಡಲು ಒಂದು ಕೋಟಿ ರೂ.ಗಳನ್ನು ಇಟ್ಟಿದ್ದೇವೆಂದು ಹೇಳುತ್ತಾರೆ. ಅದಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ. ಆದರೆ ಈ ಹಣವು ಸಾಕಾಗುವುದಿಲ್ಲ. ಇನ್ನು4-5 ಕೋಟಿ ರೂ.ಗಳನ್ನಾದರೂ ಅಂಗವಿಕಲ ಮಕ್ಕಳ ಕಲ್ಯಾಣಕ್ಕಾಗಿ ವಿನಿಯೋಗಿಸಲು ಇಡಬೇಕೆಂದು ಕೇಳಿಕೊಳ್ಳುತ್ತೇನೆ. ಗ್ರಾಮೀಣ ಅಭಿವೃದ್ಧಿಗಾಗಿ 538 ಕೋಟಿ ರೂ.ಗಳನ್ನು ಇಟ್ಟಿದ್ದನ್ನು.....

ಅಧ್ಯಕ್ಷರು : ತಾವು ಉಳಿದ ಭಾಗವನ್ನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಮಾತನಾಡಬಹುದು;

ಶ್ರೀ ಬಿ. ಮುನಿಯಪ್ಪ : ಬಹಳಷ್ಟು ಜನರು ನಮ್ಮ ಸರ್ಕಾರ, ನಿಮ್ಮ ಸರಕಾರ, ರಾಮನ ವಿಚಾರ ಇತ್ಯಾದಿಯಾಗಿ ಮಾತನಾಡಿದ್ದಾರೆ, ನಾನು ಒಳ್ಳೆಯ ಯೋಜನೆಗಳ ಬಗ್ಗೆ ಮಾತನಾಡಿದ್ದೇನೆ ಗ್ರಾಮೀಣ ಅಭಿವೃದ್ಧಿಗಾಗಿ ಹೊಸ ಸರಕಾರದವರು 650 ಕೋಟಿ ರೂ.ಗಳನ್ನು ಇಟ್ಟಿದ್ದನ್ನು ನಾನು ಸ್ವಾಗತಿಸುತ್ತೇನೆ. ಅದಕ್ಕಾಗಿ ಇನ್ನೂ ಹೆಚ್ಚಿನ ಹಣವನ್ನು ವಿನಿಯೋಗ ಮಾಡಬೇಕೆಂದು ಹೇಳಬಯಸುತ್ತೇನೆ. ಒಂದು ಕೆ.ಜಿ. ಅಕ್ಕಿಗೆ 3.20 ರೂ.ಗಳಿಗೆ ತ್ರಿವರ್ಣ ಕಾರ್ಡ್‌ಗೆ ಕೊಡುವ ಬಗ್ಗೆ ಹೇಳಿದ್ದಾರೆ. ಅದು ಸ್ವಾಗತಾರ್ಹವಾಗಿದ್ದರೂ ಅದು ಕೇವಲ ತ್ರಿವರ್ಣಕಾರ್ಡಿಗೆ ಮಾತ್ರವಲ್ಲದೆ ಎಲ್ಲಾ ಪಡಿತರ ವ್ಯವಸ್ಥೆಯ ಕಾರ್ಡ್‌ಗಳಿಗೂ ಕೊಡುವಂಥ ವ್ಯವಸ್ಥೆಯಾಗಬೇಕೆಂದು ಪ್ರಾರ್ಥಿಸಿ ಕೊಳ್ಳುತ್ತೇನೆ. ಇವೊತ್ತು ಕೊಡಗು ಜಿಲ್ಲೆಯಲ್ಲಿ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಾಫಿ ಪ್ಲಾಂಟೇಶನ್ಸ್ ಇವೆ. ಕಾಫಿ ಪ್ಲಾಂಟೇಶನ್‌ಗಳ ಮೇಲೆ ಹೊಸ ತೆರಿಗೆಯನ್ನು ಹಾಕಿದ್ದಾರೆ. ಕಾಫಿ ಬೀಜವನ್ನು ಬೆಳೆಯುವವರ ನೋವಿನ ಬಗ್ಗೆ ಅನೇಕರು ಮಾತನಾಡಿದ್ದಾರೆ. ಕಾಫಿಯನ್ನು ನಾವು ವ್ಯವಸಾಯದ ಅಡಿಯಲ್ಲಿಟ್ಟಿದ್ದೇವೆ. ಬೆಂಗಳೂರಿನಲ್ಲಿರತಕ್ಕಂಥ ಎಷ್ಟೋ ನರ್ಸರಿಗಳು ನಗರದ ಜನರಿಗೆ ಹೂವು ಮತ್ತಿತರ ಗಿಡಗಳನ್ನು ಒದಗಿಸುತ್ತಾ ಇವೆ. ಅದನ್ನು ಕೂಡ ಕಮರ್ಷಿಯಲ್ ಅಡಿಯಲ್ಲಿಟ್ಟು ಅವರಿಗೆ ಅನಾನುಕೂಲ ಮಾಡಿದ್ದೀರಿ. ಅದನ್ನು ತೆಗೆಯಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅರ್ಥ ಸಚಿವರು ಜನರಿಗೆ ಅನುಕೂಲವಾಗುವ ಅನೇಕ ಯೋಜನೆಗಳ ಬಗ್ಗೆ ಹೇಳಿದ್ದಾರೆ, ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಹಾಗೆಯೇ ಅಂಬೇಡ್ಕರ್ ಯೋಜನೆಯಡಿಯಲ್ಲಿ 25 ಸಾವಿರ ಮನೆಗಳನ್ನು ಕಟ್ಟಿಸಿಕೊಡುವ ಒಂದು ಯೋಜನೆಯನ್ನು ಕೂಡ ಹಾಕಿಕೊಂಡಿದ್ದಾರೆ. ಅದು ಒಳ್ಳೆಯ ಕಾರ್ಯಕ್ರಮ. ಇನ್ನೂ ಅನೇಕ ವಿಚಾರಗಳನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಈ ಹೊಸ ಕರಗಳನ್ನು, ಹೊಸ ತಿದ್ದುಪಡಿಗಳನ್ನು ತೆಗೆಯಬೇಕೆಂದು ನಾವೇನು ಹೇಳಿದ್ದೇವೆ, ಹಾಗೆ ಮಾಡಿದರೆ ನಿಮಗೆ ಖಂಡಿತವಾಗಿಯೂ ಒಳ್ಳೆಯದಾಗುತ್ತದೆಂಬ ಮಾತನ್ನು ಹೇಳಿ ಕೊನೆಯದಾಗಿ ರೇಸ್‌ಕ್ಲಬ್‌ಗೆ 170 ಲಕ್ಷ ತೆರಿಗೆ ಇದ್ದುದನ್ನು ಹೆಚ್ಚಿಸಿ 190 ಲಕ್ಷ ಎಂದು ಮಾಡಿದ್ದಾರೆ. ರೇಸ್ ಕ್ಲಬ್‌ಗೆ ಹೋಗುವವರು ಯಾರು ಬಡವರು, ಅನ್ನ ಬಟ್ಟೆ ಇಲ್ಲದವರು ಅಲ್ಲ, ಅಂಥ ರೇಸ್ ಕ್ಲಬ್‌ನ ಮೇಲೆ ಬೇಕಾದರೆ ಹೆಚ್ಚಿನ ತೆರಿಗೆಯನ್ನು ಹಾಕಿ ಅವರ ಮೇಲೆ ನಿಮ್ಮ ಕ್ರೂರ ದೃಷ್ಟಿಯನ್ನು ಬೀರ ಬಹುದಾಗಿದೆ. ಕೊನೆಯದಾಗಿ ವಿರೋಧ ಪಕ್ಷಗಳವರು ಕೊಟ್ಟ ಸಲಹೆಗಳನ್ನು ಮನ್ನಣೆ ಮಾಡಿ ಈ ಕರಭಾರದಿಂದ ಜನಸಾಮಾನ್ಯರನ್ನು ಮುಕ್ತರನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನನಗೆ ಅವಕಾಶ ಕೊಟ್ಟ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಜಿ.ಬಿ. ಶಿವಕುಮಾರ್ (ಕರೆಗೋಡು) : ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟ ತಮಗೆ ಮೊದಲಿಗೆ ಧನ್ಯವಾದಗಳನ್ನು ಸಮರ್ಪಣೆ ಮಾಡುತ್ತೇನೆ. ನನಗೆ ಮೇಲ್ಮನೆಯಲ್ಲಿ ದೇವರ ದಯೆಯಿಂದ್ದ ಕೆಲಸ ಮಾಡುವ ಅವಕಾಶ ಸಿಕ್ಕಿತ್ತು. ಅಲ್ಲಿ ಅನುಭವಿಗಳ, ಹಿರಿಯರ ಮಾರ್ಗದರ್ಶನ ಪಡೆಯುವ ಅವಕಾಶವು ಸಿಕ್ಕಿತ್ತು. ಹಲವಾರು ಅಂಥ ಹಿರಿಯರು ಅದರಲ್ಲಿಯೂ ಮಾನ್ಯ ಸುಬ್ಬಯ್ಯನವರು, ರಾಮಸ್ವಾಮಿಯವರು ಮುಂತಾಗಿ ರಾಜಕೀಯ ಪರಿಣತರ ಅನುಭವದ ಮಾತುಗಳನ್ನು ಕಾರ್ಯಗಳನ್ನು ನೋಡುವ, ಕೇಳುವ ಅವಕಾಶ ಸಿಕ್ಕಿತ್ತು.

ಮಾನ್ಯ ಅಧ್ಯಕ್ಷರೇ, ಇದು ನಮ್ಮ ಸರಕಾರ ಇಟ್ಟಿರತಕ್ಕಂಥ ಚೊಚ್ಚಲು ಬಜೆಟ್. ಇದರಲ್ಲಿ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಒತ್ತು ಕೊಡತಕ್ಕಂಥಾದ್ದನ್ನು ಹೃತ್ಪೂರ್ವಕವಾಗಿ ಸ್ವಾಗತ ಮಾಡತಕ್ಕಂಥಾದ್ದು. ಅದಕ್ಕೆ ಪೂರಕವಾಗಿ ನುಡಿದಂತೆ ನಡೆಯುವ ಸರಕಾರ ಎಂಬಂತೆ ಕಳೆದ ಎರಡು ವರ್ಷಗಳಿಂದ ಅಧಿಕಾರ ವಿಕೇಂದ್ರೀಕರಣ ಮಾಡತಕ್ಕಂಥ ಸವಲತ್ತು ನೆನೆಗುದಿಗೆ ಬಿದ್ದಿತ್ತೋ ಅದನ್ನು ಕಾರ್ಯರೂಪಕ್ಕೆ ತಂದು ಜನತೆಯ ಆಶೀರ್ವಾದವನ್ನು ಪಡೆದು ಈ ರಾಜ್ಯದಲ್ಲಿ ನಮ್ಮ ಪಕ್ಷಕ್ಕೆ ಅಧಿಕಾರವನ್ನು ತಂದು ಕೊಟ್ಟಂಥ ಸಮಸ್ತ ಜನತೆಗೆ ನನ್ನ ಗೌರವವನ್ನು ಸಮರ್ಪಣೆ ಮಾಡುತ್ತೇನೆ.

ಶ್ರೀ ಜಿ.ಬಿ. ಶಿವಕುಮಾರ್ : ನಮಗಿರುವ ಮೂಲಭೂತ ಸಮಸ್ಯೆಗಳಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್, ಕುಡಿಯುವ ನೀರಿನ ಸಮಸ್ಯೆ ಹಾಗೂ ಸಾರಿಗೆ ಸಮಸ್ಯೆ ಈ ಮೂರರ ಬಗ್ಗೆ ನಾನು ಪ್ರಸ್ತಾಪಿಸಬೇಕಾಗಿದೆ. ಇವತ್ತು ದಿವಂಗತ ನಜೀರ್ ಸಾಬ್‌ರವರನ್ನು ನಾವು ನೆನೆಸಿಕೊಳ್ಳಬೇಕಾಗಿದೆ. ಅಶುದ್ಧ ನೀರನ್ನು ಕುಡಿದು ಅನೇಕ ರೋಗರುಜಿನಗಳಿಗೆ ಗುರಿಯಾಗಿದ್ದ ನಮ್ಮ ಗ್ರಾಮೀಣ ಜನತೆ ದಿ. ನಜೀರ್‌ಸಾಬ್‌ರವರು ಯಾವುದೇ ಧರ್ಮಕ್ಕೇ ಸೇರಿದ್ದರೂ ಸಹ, ನಾವು ದೇವರನ್ನಂತೂ ಕಣ್ಣಲ್ಲಿ ಕಂಡಿಲ್ಲ. ಅಂಥ ವ್ಯಕ್ತಿಯನ್ನು ನೆನಪಿಸಿಕೊಳ್ಳಬೇಕಾದ್ದು ಕರ್ತವ್ಯವೆಂದು ನಾನಾದರೂ ಭಾವಿಸುತ್ತೇನೆ. ಇವತ್ತು ಒಂದು ತಪ್ಪನ್ನು ಯಾವುದೇ ಸರ್ಕಾರ ಮಾಡಿದ್ದರೂ ಒಪ್ಪಿಕೊಳ್ಳಲೇಬೇಕು. ಆ ದಿವಸ ಈ ಹೊಸ ವ್ಯವಸ್ಥೆಯನ್ನು ಜಾರಿಗೆ ತಂದಾಗ ಏನಾಯಿತು ಎಂದರೆ ನನ್ನ ಕೆಲವು ಸಹೋದ್ಯೋಗಿಗಳು ಹೇಳುತ್ತಿದ್ದರು 80 ಅಡಿಗೆ ನೂರು ಅಡಿಗೆ ನೀರು ಸಿಕ್ಕಿತು ಅಂತ. ಅವತ್ತು ಏನು ಜಿಯಾಫಿಸಿಕಲ್ ಸರ್ವೆ ಕನಸೆಪ್ಟ್‌ನ್ನು ಪೂರ್ತಿ ಅರ್ಥಾನೇ ಮಾಡಿಕೊಳ್ಳದೇ 80 ಅಡಿಗೆ ತೋಡಿದ್ದರೂ 200 ಅಡಿಗೆ ತೋಡಿದ್ದೇವೆ ಎಂದು ತಪ್ಪು ಲೆಕ್ಕ ಕೊಟ್ಟಿರುವುದು ಉಂಟು. ಇವತ್ತು ಈ ವಾಟರ್‌ಟೇಬಲ್ ರಿಸೀಡಾಗುತ್ತಾ ಕೆಳಗೆ ಹೋದಷ್ಟು ಮತ್ತೆ ಆಗ್‌ಮೆಂಟೇಶನ್‌ಗೆ ಫರ್ದರ್ ಡೀಪನ್ ಮಾಡುವುದೋ ಅಥವಾ ಅಲ್ಲೇನಾದರೂ ಬೇರೇನಾದರೂ ಸೇರಿಕೊಂಡು ಬ್ಲಾಕ್ ಆಗಿದ್ದರೆ ಫಿಶಿಂಗ್ ಮಾಡುವುದೋ ಇದಕ್ಕೆ ನೆಕ್ಸ್ಟ್ ಬಂದ ಇಲಾಖಾ ಅಧಿಕಾರಿಗಳು ಹೋದಾಗ ಅವರಿಗೆ ಗೊತ್ತಾಯಿತು. 80 ಅಡಿ ತೆಗೆದು 200 ಅಡಿ ತೆಗೆದಿದ್ದೇವೆಂದು ಲೆಕ್ಕ ಕೊಟ್ಟಿದ್ದಾರೆಂಬುದು. ನಾನು ಹಿಂದೆ ವಿಧಾನಪರಿಷತ್ತಿನಲ್ಲಿ ಇದರ ಬಗ್ಗೆ ಬಹಳ ವಿಶದವಾಗಿ ಚರ್ಚೆಗೆತ್ತಿಕೊಂಡು ಇದನ್ನು ಕೇಳಿದಾಗ ಬಾಯಿಮುಚ್ಚಿಸಿದರು, ಬೇಡಿ ಬೇಡಿ ಆ ಗೋಳು ಬೇಡಿ, ಪಾಪ ಆ ನಜೀರ್‌ಸಾಬ್ ಹೆಸರು ಎತ್ತಿಕೊಂಡು ಇದನ್ನೆಲ್ಲ ಏತಕ್ಕೆ ಚರ್ಚೆ ಮಾಡ್ತೀರಿ ಅಂತ. ನಜೀರ್ ಸಾಬ್ ಹೆಸರಲ್ಲ, ಆ ಇಲಾಖಾ ಅಧಿಕಾರಿಗಳು ಎಷ್ಟರಮಟ್ಟಿಗೆ ತಪ್ಪು ಮಾಡಿದ್ದಾರೆಂದು ಎಳೆಎಳೆಯಾಗಿ ನಾನು ಬಿಡಿಸಿ ಹೇಳಿದಾಗ ಬೇಡಿ ಮುಂದಕ್ಕೆ ಹೋಗಿ ಎಂದರು. ಇವತ್ತು ಕೂಡ ಮೊದಲನೆಯ ತಪ್ಪಾಗಿರುವುದು ಅಧ್ಯಕ್ಷರೇ ಅಲ್ಲ. ಎಷ್ಟರವರೆಗೆ ಅವರು ತೋಡಬೇಕಾಗಿತ್ತು ಎಷ್ಟರವರೆಗೆ ತೋಡಿದ್ದಾರೆ ಈ ಲೆಕ್ಕ ಪೂರ್ಣಪ್ರಮಾಣವಲ್ಲಿಲ್ಲ. ಈಗ ಅಲ್ಲಿಂದ ಪೈಪ್ಡ್ ವಾಟರ್ ಸಪ್ಲೈಗೆ ಬಂದರೆ ಮಿನಿವಾಟರ್ ಅಥವಾ ಎನ್‌ಆರ್‌ಡಬ್ಲ್ಯೂಎಸ್ ಯಾವುದೋ ಒಂದು ಯೋಜನೆಗೆ ಬಂದಿವಿ. ಅದು ಬಂದ ತಕ್ಷಣ ಏನಾಯಿತು ಅದರಲ್ಲೂ ಕೂಡ ಗುತ್ತಿಗೆದಾರರು ಇಲಾಖೆಯವರ ಜೊತೆಗೆ ಶಾಮೀಲಾಗಿ 3 ಅಡಿ ಪೈಪನ್ನು ನೆಲದಲ್ಲಿ ಹೂತುಕೊಂಡು ಹೋಗಬೇಕಾದಂತಹ ಕಠಿಣ ಕಾನೂನಿದ್ದರೂ ಅವರು ಅವರನ್ನು ಅಜೆಸ್ಟ್ ಮಾಡಿಕೊಂಡು ಒಂದಡಿ ಒಂದೂವರೆ ಅಡಿಗೆ

ಹೂತುಕೊಂಡು ಹೋಗಿ ಟೈರ್‌ಗಾಡಿ ಹೋದರೂ ಅವು ಪೈಪ್ ಒಡೆದು ಹೋಗುತ್ತವೆ, ನಡೆದುಕೊಂಡು ಹೋದರೂ ಪೈಪ್ ಒಡೆದು ಹೋಗುತ್ತವೆ. ಜನರಿಗೆ ಈ ರೀತಿ ಸೌಲಭ್ಯ ಕೊಟ್ಟು ಜೊತೆಯಲ್ಲೇ ಅನಾನುಕೂಲತೆಯನ್ನೂ ತೆಗೆದುಕೊಂಡು ಹೋಗುವಂತಹ ಒಂದು ಪರಿಸ್ಥಿತಿ ಒದಗಿಬಂದಿದೆ. ಅದರಿಂದ ನಾನು ಈಗ ಸರ್ಕಾರಕ್ಕೆ ಕೊಡುವ ಸಲಹೆ ಅದರೂ ಇಷ್ಟೆ : ಜಿಲ್ಲಾಪರಿಷತ್ ಇಂಜನಿಯರಿಂಗ್ ವಿಭಾಗದಲ್ಲಿ ಪ್ರತಿ ತಾಲ್ಲೂಕಾ ಮಟ್ಟದಲ್ಲಿ ಬರುವಂತಹ ಇಂಜನಿಯರಿಂಗ್ ವಿಭಾಗದಲ್ಲಿ ಈ ಏನು ಕುಡಿಯುವ ನೀರಿಗೆ ಅದು ಹ್ಯಾಂಡ್ ಪಂಪಿರಬಹುದು, ಮಿನಿವಾಟರ್‌ಸಪ್ಪೈ ಇರಬಹುದು, ಮೇಜರ್ ವಾಟರ್ ಸಪ್ಪೈ ಇರಬಹುದು, ಅದಕ್ಕೆ ಬೇಕಾದ ಬಿಡಿಭಾಗಗಳು ಉಪಕರಣಗಳ ಕೊರತೆ ಸಾಕಷ್ಟು ಇದೆ. ನೀವು ಯಾವುದೇ ಇಲಾಖೆಗೆ ಕೇಳಿದರೆ ಬೆಂಡ್ ಪೈಪಿದ್ದರೆ ಸಪ್ಪೈನೆ ಇಲ್ಲ ಅಥವಾ ನಮ್ಮ ಕೋಟ ಮುಗಿದುಹೋಗಿದೆ ಅಥವಾ ನಮ್ಮ ಬಜೆಟ್ ಮುಗಿದುಹೋಗಿದೆ ಎನ್ನುವ ಉದಾಹರಣೆ ಕೊಡುವುದನ್ನು ಬಿಟ್ಟರೆ ಬೇರೆ ಯಾವುದೇ ರೀತಿಯಲ್ಲಿ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಸರ್ಕಾರಕ್ಕೆ ನಾನು ಸಲಹೆ ಕೊಡುತ್ತೇನೆ, ಜಿಲ್ಲಾಪರಿಷತ್ ಇಂಜನಿಯರಿಂಗ್ ವಿಭಾಗ ಏನಿದೆ ಅಲ್ಲಿ ಪ್ರಥಮ ಆದ್ಯತೆಯನ್ನು ಕುಡಿಯುವ ನೀರಿಗೆ ಕೊಡಲೇಬೇಕೆಂದಿದ್ದರೆ ಪ್ರತಿ ಇಲಾಖೆಗೂ ಬೇಕಾದ ಬೇರೆಬೇರೆ ಕೆಪಾಸಿಟಿಯ ಪಂಪ್‌ಗಳಿರಬಹುದು ಬಿಡಿ ಭಾಗಗಳಿರಬಹುದು, ಪೈಪ್‌ಗಳಿರಬಹುದು ಆ ಎಸ್‌ಪಿಡಿ ರೇಟ್ ವ್ಯತ್ಯಾಸವಾಗಿದೆ, ಸಿಮೆಂಟ್ ಪೈಪಿಲ್ಲ, ಹಲವಾರು ಯೋಜನೆಗಳನ್ನು ಪ್ರಾರಂಭ ಮಾಡಿದಂಥವು ಅವು ನಿಗದಿತ ವೇಳೆಗೆ ಮುಗಿಸದೇ ಇರಬೇಕಾದರೆ ಇದು ಮೂಲ ಕಾರಣ. ಯಾವಾಗಲೋ ಒಂದು ಸಲ ನಾವು ಪೂಜೆ ಮಾಡಿ ತೆಗೆದರೆ ನಮ್ಮ ಜಿಲ್ಲೆಯಲ್ಲಿ 91-92ರಿಂದ ಈವರೆಗೂ ಲೆಕ್ಕ ಹಾಕಿಕೊಂಡರೆ ಹಲವಾರು ಕಾರ್ಯಕ್ರಮ ಇದೇ ರೀತಿ ನಿಂತಿರಲು ಕಾರಣ ಏನೆಂದರೆ ಸಾಕಷ್ಟು ಪ್ರಮಾಣದಲ್ಲಿ ಹಣ ಒದಗಿಸದೇ ಇರುವುದು ಮತ್ತು ಈ ವ್ಯವಸ್ಥಿತವಾದ ವರ್ಕ್‌ಶಾಪ್, ಬಿಡಿ ಭಾಗಗಳಿರಬಹುದು ಅಥವಾ ಹ್ಯಾಂಡ್‌ಪಂಪ್ ಕೆಟ್ಟುಹೋಗಲಿ ಮಿನಿಸ್ಟರ್ ಸಪ್ಪೈ ಇರಬಹುದು ಅದಕ್ಕೆ ಬೇಕಾದ ಸಿಬ್ಬಂದಿ ಮತ್ತು ಉಪಕರಣಗಳ ಕೊರತೆ ಇದನ್ನು ಪ್ರತಿ ಜಿಲ್ಲಾ ವಿಭಾಗ ತಾಲೂಕು ವಿಭಾಗದಲ್ಲಿ ಸುಸಜ್ಜಿತವಾದ ಒಂದು ವರ್ಕ್‌ಶಾಪನ್ನಿಟ್ಟು ಕೊಂಡರೆ ಪ್ರಾಯಶಃ ಏನು ತೊಂದರೆ ಎದುರಿಸುತ್ತಿದ್ದೇವೆ ಅದನ್ನು ಬಗೆಹರಿಸಲು ಸಾಧ್ಯವಾಗುತ್ತದೆ. ಮತ್ತೊಂದು, ವಿದ್ಯುತ್ ಸಮಸ್ಯೆ ಹಿಂದಿನ ಸರ್ಕಾರದವರು ಅಷ್ಟು ಇಷ್ಟು ಮಾಡಿದರು ಅದರಿಂದ ಈ ಸ್ಥಿತಿ ಬಂತು ಎಂಬುದು ಬೇಡಿ. ನಾವು ಇನ್ನು ಮುಂದೆ 5 ಸಾವಿರ ಮೆಗಾವ್ಯಾಟ್‌ಗೆ ತೆಗೆದುಕೊಂಡು ಹೋಗಿ 2 ಸಾವಿರದ ಇಸವಿಗೆ ಬರೀ ಟ್ಯೂಬ್ ಲೈಟೇ ಉರಿಸುತ್ತೇವೆ ಅನ್ನುವುದು ಬೇಡಿ ಈ ವಾಸ್ತವಸ್ಥಿತಿ ಇವತ್ತೇನಿದೆ ಈ ಕೊರತೆಯಲ್ಲಿ ನಾವು ಯಾವ ರೀತಿ ವ್ಯವಹಾರ ನಡೆಸಿಕೊಳ್ಳಬೇಕು ? ನನ್ನ ಸಲಹೆಯಾದರೂ ಇಷ್ಟೆ. ಜಿಲ್ಲಾ ಮಟ್ಟದಲ್ಲಿ ಅಲ್ಲಿನ ಶಾಸಕರು ಉದ್ದಿಮೆದಾರರು ಕೈಗಾರಿಕೆಗಳವರು ವ್ಯಾಪಾರಸ್ಥರನ್ನೆಲ್ಲ ಕರೆದು ನಮಗಿರುವ ಪ್ರಮಾಣದಲ್ಲಿ ನಾವು ಯಾವ ರೀತಿ ಹಂಚಿಕೊಂಡು ಯಾವ ವೇಳೆಯಲ್ಲಿ ನೀರಾವರಿಗೆ ಪಂಪ್‌ಸೆಟ್ ಓಡಿಸಬೇಕು, ಯಾವ ವೇಳೆಯಲ್ಲಿ ಉದ್ದಿಮೆದಾರರು ವಿದ್ಯುತ್ ಉಪಯೋಗಿಸಬೇಕು ಎನ್ನುವುದನ್ನು ಗೊತ್ತುಮಾಡಿಕೊಳ್ಳಬೇಕು. ನಾವು ಇವತ್ತೆಲ್ಲರ ಶಾಪಕ್ಕೆ ಗುರಿಯಾಗಿದ್ದೇವೆ, ಸರ್ಕಾರ ಇವತ್ತು ನಾವು ನಡೆಸುತ್ತಿದ್ದರೂ ದೂಷಣೆಗೆ ಗುರಿಯಾಗುವ ಪರಿಸ್ಥಿತಿ ನಮಗೆ ಇಂದು ಒದಗಿಬಂದಿದೆ. ಅದೃಷ್ಟವಶಾತ್ ನಮ್ಮ ವಿದ್ಯುತ್ ಖಾತೆಯ ಉಪಮುಖ್ಯಮಂತ್ರಿಗಳು

ಬಂದರು. ನಾನು ಇಂಜಿನಿಯರಿಂಗ್ ಓದುವಾಗ ಕ್ಯಾರಿಓವರ್ ಸಿಸ್ಟಂ ಅಂತ ಇತ್ತು. ಈ ವಿದ್ಯುತ್ ಕೊರತೆಯಿಂದ ಮಕ್ಕಳು ಓದುವುದಕ್ಕೆ ಆಗದಿರುವುದರಿಂದ ಯಾವುದೇ ಪರೀಕ್ಷೆ ಇರಲಿ ಈ ಸಲ ಪುಕ್ಕಟೆ ಪಾಸ್ ಮ್ಯಾಡಿ ಮುಂದಿನ ವರ್ಗಕ್ಕೆ ಕಳುಹಿಸುವ ಹಾಗೆ ಮಾಡಿಬಿಟ್ಟರೆ ನಾವೆಲ್ಲರೂ ಬೈಸಿಕೊಳ್ಳುವುದು ತಪ್ಪುತ್ತದೆ ಎಂಬುದು ನನ್ನ ಅಭಿಪ್ರಾಯ ಇವತ್ತು ಗ್ರಾಮೀಣ ಪ್ರದೇಶದಲ್ಲಿ ಹೇಗೋ ಮುಂದಕ್ಕೆ ಹೋದರೆ ಸಾಕು. ಈ ಸಲ ಪರೀಕ್ಷೆಗೇ ತಗೊಳ್ಳುವುದು ಬೇಡವೋ, ಅವರಿಗೆಲ್ಲ ಮುಂದಕ್ಕೆ ತೇರ್ಗಡೆ ಅಂತ ಕಳಿಸಿಬಿಟ್ಟರೆ ಕ್ಯಾರಿ ಓವರ್ ಅಂತ ಕೊಟ್ಟರೆ ನಾವು ನಿಜವಾಗಿಯೂ ಶಾಪದಿಂದ ವಿಮುಕ್ತರಾಗುತ್ತೇವೆ ಎಂದು ಪ್ರಾಮಾಣಿಕ ಅಭಿಪ್ರಾಯ. ಗ್ರಾಮೀಣ ಪ್ರದೇಶವಾಗಲಿ ಪಟ್ಟಣ ಪ್ರದೇಶವಾಗಲಿ ಇವತ್ತು ಆ ಸಮಸ್ಯೆ ಇರುವುದಕ್ಕೆ ನಾನಾದರೂ ಸಲಹೆ ಕೊಡುವುದು ಈ ಪರಿಸ್ಥಿತಿಯನ್ನು ನಾವು ಯಾವ ರೀತಿ ಎದುರಿಸಬೇಕು? ಕೊರತೆಯನ್ನು ಯಾವ ರೀತಿ ನೀಗಿಸಬಹುದು? ನಿರ್ದಾಕ್ಷಿಣ್ಯವಾಗಿ ಇವತ್ತು ನಾವು what we save is what we earn ಎಂಬ ನಂಬಿಕೆ ಇಟ್ಟುಕೊಂಡಿದ್ದೇನೆ. ವಿದ್ಯುತ್ತಿನ ಏನು ಕಳ್ಳತನ ಮಾಡುತ್ತಿದ್ದಾರೆ ನಮ್ಮ ರಾಜ್ಯದಲ್ಲಿ ಅವರನ್ನು ತಪ್ಪಿಸಿದರೆ ಮುಂದಕ್ಕೆ ಯಾವ ಮೆಗಾವ್ಯಾಟೂ ಬೇಕಾಗಿಲ್ಲ. ಅವರು ತೋರಿಸುವುದೇ ಒಂದು ಅಲ್ಲಿ ಆಗುತ್ತಿರುವುದೇ ಒಂದು. ಪ್ರತಿಯೊಬ್ಬ ಕೈಗಾರಿಕೆಯವನು ಯಾವುದೇ ಒಂದು ವಿಶಿಯಸ್ ಸರ್ಕಲಿನ ಸಂಪರ್ಕವಿಟ್ಟು ಕೊಂಡಿದ್ದಾನೆ. ಅವನು 5 ಸಾವಿರ ಯೂನಿಟನ್ನು ಉಪಯೋಗಿದರೆ ಅವನ ಬಿಲ್ 10-15ನೇ ತಾರೀಖೋ ಮೀಟರ್ ಓದಲಿಕ್ಕೆ ಬರುತ್ತಾರೆಂದರೆ ಒಂದರೆಡು ದಿವಸ ಮುಂಚೆ ಯಾರೋ ಇದ್ದಾರೆಂತೆ, ಅದಕೊಂಡು ರ್ಯಾಕೆಟ್ ಇದೆಯಂತೆ, ಅವರನ್ನು ಕರೆದುಬಿಟ್ಟು ತಿರುಗ 5 ಸಾವಿರದ್ದು ಹೋಗಿ 500ಕ್ಕೆ ಬಂದುಬಿಟ್ಟರೆ ಅವನಿಗೆ 1-50 ರೂ. ಏನೋ ರೇಟಿರುತ್ತಲ್ಲ 50 ಪರ್ಸೆಂಟ್ ಅವನಿಗಂತೆ 50 ಪರ್ಸೆಂಟ್ ಉದ್ದಿಮೆದಾರನಿಗೆ ಉಳಿಯುತ್ತದೆ. ಇವನು ಕೊಡುವುದೇ ಬಿಲ್ಲು. ಇವತ್ತು ಕರ್ನಾಟಕ ವಿದ್ಯುತ್ ಇಲಾಖೆ transmission and distribution, system improvement and maintenance ಕೆಪಿಸಿ, ಜನರೇಶನ್‌ಗೆ production of energyಗೆ ನಾವು ಯಾವುದಕ್ಕೆ ಎಷ್ಟು ಒತ್ತು ಕೊಡಬೇಕೆಂದು ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆ, ಅದನ್ನು ಒಂದು ಕಡೆಗೆ ಇಡುವುದರ ಜೊತೆಗೆ ಇವತ್ತಿರುವ ವ್ಯವಸ್ಥೆಯಲ್ಲಿ ನಿರ್ದಾಕ್ಷಿಣ್ಯವಾಗಿ ಇಷ್ಟು ವೇಳೆ ವಿದ್ಯುತ್ತನ್ನು ನಾವು ಕಡಿತ ಮಾಡಿಯೇ ಮಾಡುತ್ತೇವೆ, ಉದ್ದಿಮೆದಾರರಾಗಲಿ, ವಾಣಿಜ್ಯದವರಾಗಲಿ ಕೈಗಾರಿಕೆಯವರಾಗಲಿ ಯಾರೇ ಆಗಲಿ, ಆದರೆ ಸಂಜೆ ವೇಳೆ ಡೊಮೆಸ್ಟಿಕ್ ಪರ್ಪಸ್‌ಗೆ ಏನು ನಾವು ಲೈಟಿಂಗ್ ಕೊಡುತ್ತೇವೆ ಮಕ್ಕಳ ವಿದ್ಯಾ ಭ್ಯಾಸದ ದೃಷ್ಟಿಯಿಂದ ಅದನ್ನು ಮಾತ್ರ ಗ್ರಾಮೀಣ ದೇಶವಾಗಲಿ ಪಟ್ಟಣ ಪ್ರದೇಶವಾಗಲಿ ಅದಕ್ಕೆ ಗುಣಮಟ್ಟದ ವಿದ್ಯುತ್ ಕೊಡುವುದಕ್ಕೆ ನಾವು ಏನು ಕಟ್ಟುನಿಟ್ಟಿನ ಎಷ್ಟೇ ನಿರ್ದಾಕ್ಷಿಣ್ಯವಾದ ಕ್ರಮವನ್ನಾದರೂ ತೆಗೆದುಕೊಳ್ಳಲಿ ಅದನ್ನು ಸ್ವಾಗತಿಸುತ್ತೇವೆ. ಅದಕ್ಕೆ ಸಹಕರಿಸುತ್ತೇವೆ. ಪ್ರತಿ ಸರ್ಕಾರವೂ vote catching principle, ಚಪ್ಪಾಳೆ ತಟ್ಟಿಸಿಕೊಳ್ಳುವ ಯೋಜನೆ ಮಾಡಿಕೊಂಡು ಹಾಳಾದೆವು. ಒಬ್ಬರು ಅರ್ಧಕ್ಕೆ ರಿಯಾಯಿತಿ ಕೊಟ್ಟರು ಮತ್ತೊಬ್ಬರು ಪುಗಸಟ್ಟೆ ಕೊಟ್ಟರು. ಇವತ್ತು ಎದೆತಟ್ಟಿ ಒಬ್ಬ ಪ್ರಾಮಾಣಿಕ ಎನ್ನುವ ರೈತ ಹೇಳಿಕೊಳ್ಳಲಿ 10 ಎಚ್‌ಪಿಯವರೆಗೆ ಆತನಿಗೆ ಕರೆಂಟ್ ಚಾರ್ಜಿಲ್ಲ ಎಂದು ಮಾಡಿದ್ದಾರೆ. ಅನ್ನ ಕೊಡುವ ರೈತ ಮೋಸಗಾರ ಆಗುವುದಿಲ್ಲ ಎಂಬ ನಂಬಿಕೆ ನನಗಿದ್ದರೂ ಇವತ್ತೇನು ಮಾಡುತ್ತಿದ್ದಾರೆ ಕೆಲವು

ಪ್ರದೇಶದಲ್ಲಿ, 10 ಎಚ್‌ಪಿ ಒಂದು ಬಾವಿಯಿಂದ ಎರಡನೇ ಬಾವಿಗೆ ನೀರು ಹೊಡೆದುಕೊಳ್ಳುತ್ತಾರೆ. ಅಲ್ಲೊಂದು 10 ಎಚ್‌ಪಿ ಹಾಕಿಕೊಂಡು ಇನ್ನೊಂದು ಮೂರನೇ ಹಂತ ತೆಗೆದುಕೊಳ್ಳುತ್ತಾನೆ. ಇವರು ಸರ್ಕಾರಕ್ಕೆ ಕಂದಾಯವನ್ನೂ ಕಟ್ಟುತ್ತಿಲ್ಲ. ವಿದ್ಯುತ್ತಿಗೆಂದು ಮೂರು ಕಾಸನ್ನೂ ಕೊಡುತ್ತಿಲ್ಲ. ನಾವು ಇವತ್ತು ಓಟ್ ತಗೊಳ್ಳುವ ರಾಜಕಾರಣಿ ಸಂಬಳ ತೆಗೆದುಕೊಳ್ಳುವ ಅಧಿಕಾರಿಗಳು. ದೇಶಭಕ್ತಿ ಇರಬಹುದು ಪ್ರಾಮಾಣಿಕತೆ ಇರಬಹುದು ಈ 90 ಕೋಟಿ ಜನತೆಯಲ್ಲಿ ನಾನೂ ಒಬ್ಬ ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದೇ ಇಲ್ಲ. ವೋಟ್ ತೆಗೊಳ್ಳುವ ರಾಜಕಾರಣಿ, ಸಂಬಳ ತೆಗೆದುಕೊಳ್ಳುವ ಅಧಿಕಾರಿ, ಮುಗಿದು ಹೋಯಿತು, ಇವರಿಬ್ಬರೇ ಸಿಕ್ಕಿರುವುದು ಇವರಿಗೆ. ತಾವು ಮಾತ್ರ ಎಲ್ಲವನ್ನೂ ಮುಚ್ಚಿಕೊಳ್ಳಬೇಕು. ಯಾವುದೇ ಸರ್ಕಾರ ಏನೇ ಮಾಡಬೇಕಾದರೂ ಯಾರನ್ನಾದರೂ ಬಲಿಪಶು ಮಾಡಲೇಬೇಕು. ಗ್ರಾಮೀಣಪ್ರದೇಶ ಮತ್ತು ನಗರ ಪ್ರದೇಶಕ್ಕೂ ಅಂತರ ಬಗ್ಗೆ ಹೇಳುವುದಾದರೆ ಕೆಲವು ವಿಚಾರಗಳಿವೆ, ನಿಮ್ಮ ನಗರಪ್ರದೇಶದಲ್ಲಿರುವ ಸೌಕರ್ಯವನ್ನು ಹೋಲಿಸಿಕೊಂಡರೆ ಗ್ರಾಮೀಣಪ್ರದೇಶದಲ್ಲಿ 10 ಪರ್ಸೆಂಟಿದೆಯಾ ಸ್ವಾಮಿ? ಇವತ್ತು 75 ಭಾಗ ಈ ದೇಶದಲ್ಲಿ ವಾಸಿಸುವ ಗ್ರಾಮೀಣಪ್ರದೇಶದವರ ಬಗ್ಗೆ ಒತ್ತು ಜಾಸ್ತಿಕೊಟ್ಟು ಹಲವಾರು ಶಾಸಕರು ನಗರಗಳಲ್ಲಿರುವವರು ಅವರಿಗೆ N+1 ಅಂತ ಗಣಿತದಲ್ಲಿ. ಒಂದು ಕೊರತೆಯಾದರೂ ಸಹಿಸಲಾರರು, ನಾವು ಒಂದು ಕೊಟ್ಟರೆ ತೃಪ್ತಿಪಡುವ ಅಲ್ಪತೃಪ್ತರು ಗ್ರಾಮೀಣ ಪ್ರದೇಶದ ರೈತರು. ಇವತ್ತು ಅವರ ಬಗ್ಗೆ ಹೆಚ್ಚು ಒಲವು ತೋರುವ ಕಾರ್ಯಕ್ರಮ ಹಾಕಿಕೊಂಡಿದ್ದರೆ ಅದನ್ನು ಸ್ವಾಗತಿಸಬೇಕು. Haves & Havenots ಎನ್ನುವುದು ಶ್ರೀ ದೇವರಾಜಅರಸರು ಹೇಳುತ್ತಿದ್ದರು ಸಂಘರ್ಷ ಉಳ್ಳವರಿಗೂ ಇಲ್ಲದೇ ಇರುವವರಿಗೂ ಎಷ್ಟು ಅಂತರ ಆಗುತ್ತಿದೆ ಎಂದರೆ ಅದನ್ನು ಸರಿಯಾದ ಸಮತೋಲನದಲ್ಲಿ ತೆಗೆದುಕೊಂಡು ಹೋಗಲು ಯಾವುದೇ ಸರ್ಕಾರ ಏನೇ ಕಾರ್ಯಕ್ರಮ ಹಾಕಿಕೊಂಡು ಅವನ್ನು ನಾವು ಸ್ವಾಗತಿಸಲೇಬೇಕೆಂಬುದನ್ನು ಇವತ್ತು ನಮ್ಮ ಸರ್ಕಾರ ಏನು ಈ ಬಜೆಟ್‌ನಲ್ಲಿ ತಂದಿದೆ, ಒಂದು ಕಟ್ಟುನಿಟ್ಟಾಗಿ ಜಾರಿಗೆ ತರುವುದನ್ನು ಮಾಡಬೇಕು. ಇಲ್ಲಿ 20 ಅಂಶದ ಕಾರ್ಯಕ್ರಮ 344 ರಲ್ಲಿದೆ. ವಾರ್ಷಿಕ ಗುರಿ ಎನ್ನುವ ಒಂದು ಪದ ಇದೆ. ಅದನ್ನು ದಯಮಾಡಿ ಸರ್ಕಾರ ಮಾಸಿಕ ಎಂದು ಮಾಡಿಬಿಟ್ಟರೆ ಒಳ್ಳೆಯದು. ಏಪ್ರಿಲ್‌ನಿಂದು ಮಾರ್ಚಿವರೆಗೆ 12 ತಿಂಗಳೂ ಮಾಸಿಕ ಗುರಿ, ಯಾವ ಇಲಾಖೆಗೆ ಏನೇನು ನಾವು ನಿಗದಿಪಡಿಸಿರುತ್ತೇವೋ ಪ್ರತಿ ತಿಂಗಳು ಇಷ್ಟನ್ನು ಖರ್ಚು ಮಾಡಿದ್ದೇವೆ, ಇಷ್ಟು ಪ್ರಗತಿಯಾಗಿದೆ ಎನ್ನುವುದನ್ನು ನಾವು ತೋರಿಸಲೇಬೇಕು. ನಮ್ಮ ಸರ್ಕಾರಿ ಅಧಿಕಾರಿಗಳಾಗಲಿ, ಯಾರೇ ಆಗಲಿ ಚಾಲನೆ ಬರುವುದು ಜನವರಿಯಾದಮೇಲೆಯೇ. ಜನವರಿಯಿಂದ ಮಾರ್ಚಿವರೆಗೆ ಏನು ದೇಶಪ್ರೇಮ ಅವರಿಗೆ. ಪ್ರಾಮಾಣಿಕತೆ. ಭಾನುವಾರವೂ ಆಫೀಸಿಗೆ ಹೋಗುತ್ತೇವೆ ಎನ್ನುತ್ತಾರೆ. ಭಾನುವಾರ ಸುಮ್ಮನೆ ಹೋಗುವುದಿಲ್ಲ ಅವರು. ಎಲ್ಲಾದರೂ ಕೂಡ ಏನಾದರೂ ಒಂದೊಂದು ಇದ್ದೇ ಇರುತ್ತದೆ. ಪ್ರಾಮಾಣಿಕ ಅಧಿಕಾರಿಗಳಿಗೆ, ಪ್ರಾಮಾಣಿಕ ನೌಕರರಿಗೆ ಅತ್ಯಂತ ಗೌರವ ಕೊಡುವುದರ ಮೂಲಕ ನಾನು ಹೇಳುತ್ತೇನೆ. ಆದರೆ ಇವತ್ತು ರಾಜಾಕಾರಣಿಗಳಾಗಲಿ, ಅಧಿಕಾರಿಗಳಾಗಲಿ ಶೇಕಡ90 ಭಾಗ ಒಂದಲ್ಲ ಒಂದು ರೀತಿ ಕೆಟ್ಟುಹೋಗಿದ್ದೇವೆ ಎನ್ನುವುದು. ಅವರು ನಮ್ಮಕಡೆ ತೋರಿಸುತ್ತಾರೆ, ನಾವು ಅವರ ಕಡೆ ತೋರಿಸುತ್ತೇವೆ. ವ್ಯವಸ್ಥೆಯನ್ನು ಬಿಗಿ ಮಾಡದೇ ಹೋದರೆ ಇವತ್ತು ಸಾರ್ವಜನಿಕರೇ ನಮ್ಮ ಮೇಲೆ ರೊಚ್ಚಿಗೆದ್ದು ಮೇಲೆ ಬೀಳುವ

ಸನ್ನಿವೇಶ ದೂರವಿಲ್ಲ ಎನ್ನುವುದನ್ನು ಬಹುಶಃ ರಾಜಕಾರಣಿಗಳಾದ ನಾವು ನೌಕರ ವರ್ಗದವರು ಅರ್ಥಮಾಡಿಕೊಳ್ಳಬೇಕಾದಂಥ ಸಮಯ ಅತ್ಯಂತ ಸನ್ನಿಹಿತ ಎಂದು ನಾನಾದರೂ ಭಾವನೆ ಮಾಡಿಕೊಳ್ಳುತ್ತೇನೆ. ಈ ದೃಷ್ಟಿಯಿಂದ ಮಾಸಿಕ ಗುರಿ ಎಂದು ಹೇಳಿ ನಿಗದಿ ಪಡಿಸಿ ಮಾಡಬೇಕು ಎನ್ನುವುದು. ಸಾಮಾಜಿಕ ನ್ಯಾಯ ಇದರಲ್ಲಿ ಬರುವ ವಿಚಾರ, ಈ ಯೋಜನೆ ಬಂದಿದ್ದು ಪ್ರಾಯಶಃ 1969ನೇ ಇಸವಿಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಕಾಲದಲ್ಲಿ ಬ್ಯಾಂಕ್ ರಾಷ್ಟ್ರೀಕರಣವಾದ ಮೇಲೆ ಆಮೇಲೆ ಹಲವಾರು ಯೋಜನೆಗಳು ಕಾರ್ಯಕ್ರಮಕ್ಕೆ ಬಂದಿವೆ. ನಾನು ಒಂದು ಪ್ರಶ್ನೆ ಕೇಳುತ್ತೇನೆ, ಆ ದಿವಸದಿಂದ ಇಲ್ಲಿಯವರೆಗೆ ಬಡವರಿಗೆ ಕೊಟ್ಟಿರುವ ಹಸು, ಬಡವರಿಗೆ ಕೊಟ್ಟಿರುವ ಎಮ್ಮೆ, ಕೋಳಿ, ಕುರಿ, ಇವೆಲ್ಲ ಬದುಕಿದ್ದರೆ 75 ರೂಪಾಯಿ ಮಾಂಸವಾಗುತ್ತಿತ್ತೇ ಕೆ.ಜಿ.ಗೆ? ಮೊಟ್ಟೆ ಒಂದೂವರೆ ರೂಪಾಯಿಯಾಗುತ್ತಿತ್ತೇ? ಎಂಟು ರೂಪಾಯಿ ಹಾಲು ಆಗುತ್ತಿತ್ತೇ? ಹಲ್ಲಗೆರೆ ಸಂತೆಯಲ್ಲಿ ಒಂದು ಹಸುವನ್ನು ತೆಗೆದುಕೊಳ್ಳುವುದು. ಬೇರೆ ಸಂತೆಯಲ್ಲಿ ಮಾರುವುದು. ಈ ಮಾತನ್ನು ಏತಕ್ಕೆ ಹೇಳುತ್ತೇನೆ ಎಂದರೆ ಬಡವರಿಗೆ ಎಂದು ಸಾಮಾಜಿಕ ನ್ಯಾಯ ಕಲ್ಪಿಸಿಕೊಡುವ ಸೌಲಭ್ಯವನ್ನು ಕಟ್ಟುನಿಟ್ಟಾಗಿ ಆ ಫಲಾನುಭವಿಗಳು ಪಡೆಯುವುದಕ್ಕೆ ಅವರಿಗೂ ನಿರ್ಬಂಧವನ್ನು ನಾವು ಹಾಕಲಿಲ್ಲ. ಅದು ಜಾರಿಗೆ ತರಬೇಕಾದಂಥ ಅಧಿಕಾರಿಗಳು ಕೂಡ ನಿರ್ಲಕ್ಷ್ಯ ಮಾಡಿದರು ಎಂದು ಹೇಳುತ್ತೇನೆ. ಈ ಊರಿನಲ್ಲಿ ತಿಮ್ಮ ಎಂದು ಸಾಲ ತೆಗೆದುಕೊಳ್ಳುತ್ತಾರೆ. ಮುಂದಿನೂರಿನಲ್ಲಿ ಬೊಮ್ಮ ಎಂದು ಸಾಲ ತೆಗೆದುಕೊಳ್ಳುತ್ತಾನೆ. ನಮ್ಮ ದೇಶದ ಸಂಪನ್ಮೂಲವನ್ನು ಇದೊಂದು ಕಟ್ಟುನಿಟ್ಟಾಗಿ ಕೊಡಲೇಬೇಕು ಎಂದು ಕೊಟ್ಟುಕೊಂಡು ಬಂದಿದ್ದರೆ ಒಂದು ಕುಟುಂಬದಲ್ಲಿ ಮುದುಕರು, ಇದೇ ರೀತಿ ವಿಧವೆಯರು ಇರುತ್ತಾರೆ, ಅವರಿಗೆ ಮಾಸಾಶನ, ಕೈಕಾಲೋ ಮುರಿದು ಕೊಂಡಿರುತ್ತಾರೆ, ಅವನಿಗೆ ಅಂಗವಿಕಲ. ಇನ್ಯಾರೋ ಬಾಣಂತಿ ಬಸಿರಿ, ಅವರಿಗೊಂದು. ಹೀಗೆ ಮನೆಯಲ್ಲಿರುವವರಿಗೆಲ್ಲ ನಾವು ಒಂದಲ್ಲ ಒಂದು ರೀತಿ ಸೌಲಭ್ಯ ಕೊಟ್ಟು ಎಲ್ಲರನ್ನೂ ನಾವು ಸೋಮಾರಿಗಳನ್ನಾಗಿ ಇಟ್ಟು ಬಿಟ್ಟಿದ್ದೇವೆ. ಇವತ್ತು ಕೆಲಸಕಾರ್ಯಕ್ಕೆ ಯಾರೂ ಬರುವುದಿಲ್ಲ. ಯಜಮಾನ ಯಾರಾದರೂ ಭೂಮಿ ಉಳುವವರು ಹೋಗಿ ಸೌಲಭ್ಯಕೊಟ್ಟು ಬಿಟ್ಟೆವು. ಹೋಗಲಿ, ಅವನಾದರೂ ಉದ್ಧಾರವಾದನೇ? ಇಂದಿರಾ ಆವಾಸ ಅದರೂ ತೆಗೆದುಕೊಳ್ಳಿ, ಆಶ್ರಯವಾದರೂ ತೆಗೆದುಕೊಳ್ಳಿ. ಯಾವ ಮನೆಯನ್ನಾದರೂ ತೆಗೆದುಕೊಳ್ಳಿ. ಒದ್ದರೆ ಬಿದ್ದುಹೋಗುವ ಒಂದು ಮನೆ. ಈ ಒಂದು ಹಿನ್ನೆಲೆಯಲ್ಲಿ ನಾನು ಸರ್ಕಾರಕ್ಕೆ ಒಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ ಎಂದರೆ, ಏನು ಮನೆ ಕಟ್ಟಿಕೊಳ್ಳುವುದಕ್ಕೆ ಆಶ್ರಯ ಯೋಜನೆಯಲ್ಲಿ 'ಅಂದು ನೀರು, ಇಂದು ಸೂರು' ಎಂದು ನೋಡಿದೆ ನಮ್ಮ ಸರ್ಕಾರದ್ದು. ಅದನ್ನು ಸ್ವಾಗತಿಸುತ್ತೇನೆ. ಆದರೆ ಆ ವ್ಯವಸ್ಥೆಗೆ ಆ ಫಲಾನುಭವಿಯೇ ನೀವು ಕಟ್ಟಿಕೊಳ್ಳಿ ಎಂದು ಅವಕಾಶ ಮಾಡಿಕೊಡಬೇಕು. ಗುತ್ತಿಗೆದಾರರಿಗೆ ಅಲ್ಲಿ ಕೊಟ್ಟರೆ ಜೇನು, ಕಿತ್ತವನು ಕೈ ನೆಕ್ಕದೆ ಇರುವುದಿಲ್ಲ ಎನ್ನುವ ಗಾದೆ. ಇದೆ ನೀವು ಯಾವ ಕೆಲಸಕ್ಕಾದರೂ ಕೈ ಹಾಕಲಿ. ಕತ್ತರಿ ಎನ್ನುವ ಪದ ಬರದೇ ಹೋದರೆ ಅವರು ತಿಂದಿದ್ದು ಜೀರ್ಣವೇ ಆಗುವುದಿಲ್ಲ ದರಿದ್ರ. ಯಾವುದೇ ತೆಗೆದುಕೊಳ್ಳಿ. ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ. ಮದುವೆ ದುಡ್ಡಿನಲ್ಲಿ ಒಂದು ಒಂದು ಹತ್ತು ರೂಪಾಯಿ ಕದಿಯಬಹುದು, ಗೃಹಪ್ರವೇಶದಲ್ಲಿ ಹತ್ತು ರೂಪಾಯಿ ಕದಿಯಬಹುದು, ಅವರ ಅಪ್ಪಅಮ್ಮನ ತಿಥಿಯಲ್ಲೂ ಕದ್ದುಬಿಡುತ್ತಾರೆ. ಅಷ್ಟು

ಭ್ರಷ್ಟಾಚಾರದ ಪರಮಾವಧಿಯನ್ನು ತಲುಪಿರುವ ಈ ದರಿದ್ರ ಸ್ಥಿತಿಯಲ್ಲಿ ಅನಿವಾರ್ಯತೆ ಎಂದರೆ ನಮ್ಮ ಪ್ರಜಾಪ್ರಭುತ್ವದಲ್ಲಿ ಇಸ್ಲಾಂಮಿಕ್ ಲಾ ಎಂದು ಏನೊ ಹೇಳುತ್ತಾರೆಲ್ಲ, ಪಿಕ್‌ಪಾಕೆಟ್ ಮಾಡಿದರೆ ಕೈ ಕತ್ತರಿಸುತ್ತಾರೆ. ಇನ್ನೊಂದು ಏನೊ ಮಾಡಿದರೆ ರಸ್ತೆಯಲ್ಲಿ ನಿಲ್ಲಿಸಿ ಕಲ್ಲಿನಲ್ಲಿ ಹೊಡೆಸುತ್ತಾರೆ. ಅಥವಾ ಅನಾಚಾರವೋ ವ್ಯಭಿಚಾರವೋ ಮಾಡಿದರೆ ಇನ್ನೇನೋ ಕತ್ತರಿಸುತ್ತಾರೆ ಎಂದು. ಆ ರೀತಿ ನಮ್ಮ ದೇಶಕ್ಕೆ ಬೇಕು. ನಮ್ಮ ಪ್ರಜಾಪ್ರಭುತ್ವದಲ್ಲಿ ಯಾವ ಅಧಿಕಾರಿ ಕೋಟ್ಯಾಂತರ ರೂಪಾಯಿ ಹೊಡೆದದ್ದನ್ನು ಲಂಕೇಶ್ ಪತ್ರಿಕೆಯಲ್ಲಿ ಅವನ ಬಗ್ಗೆ ಒಂದು ದಿವಸ ಗುಣಗಾನ ಮಾಡುವುದನ್ನು ಬಿಟ್ಟರೆ ಅವನನ್ನು ಸಸ್ಪೆಂಡ್ ಮಾಡಿದರೂ ಅವನು ಮನೆಗೆ ಹೋದ ಎಂದು ಒಂದು ಫ್ರೆಷ್ ಮೆಮೊರಿ ಎಂದು ಓದಿಕೊಳ್ಳುವುದು ಬಿಟ್ಟರೆ ಮಾರನೇ ದಿವಸ ಅವನು ಒಬ್ಬ ಹೊಸ ಆಳು. ಇನ್ನಾವುದೋ ಸರ್ಕಾರ ಬಂದಾಗ ಆರು ತಿಂಗಳು ಆದಮೇಲೆ ಅವನು ಇನ್ನಾವುದೋ ಇಲಾಖೆಗೆ. ಇವತ್ತು ಏನೆಂದರೆ ತಿಂದರೆ ಟೈಮ್ ಆಗುತ್ತದೆ ಎಂದು ಜನರು ನುಂಗುತ್ತಿದ್ದಾರೆ. ಇವತ್ತು ನಮ್ಮ ಭ್ರಷ್ಟ ರಾಜಕಾರಣಿಗಳು ಭ್ರಷ್ಟ ಅಧಿಕಾರಿಗಳು ಇವರ ಹತ್ತಿರ ಇರುವ ಕಪ್ಪುಹಣವನ್ನು ನೀವು ಏನಾದರೂ ಯಾವುದಾದರೂ ಏಜೆನ್ಸಿ ಮೂಲಕ ಹಿಡಿದುಬಿಟ್ಟರೆ ನೀವು ಯಾರ ಮೇಲೂ ಟ್ಯಾಕ್ಸ್ ಹಾಕಬೇಕಾಗಿಲ್ಲ. ನೀವೆಲ್ಲ ಕೃಷ್ಣ, ಕಾವೇರಿ ಐದು ಸಾವಿರ ಮೆಗಾವ್ಯಾಟ್ ಎಲ್ಲಾ ಒಂದು ವರ್ಷದಲ್ಲಿಯೇ ಮಾಡಬಹುದು. ಅಷ್ಟು ದುಡ್ಡು ಇಟ್ಟಿದ್ದಾರೆ. ಇದು ಪ್ರಾಮಾಣಿಕ ಅಭಿಪ್ರಾಯ. ಏತಕ್ಕೆ ಈ ಮಾತನ್ನು ಹೇಳುತ್ತೇನೆ ಎಂದರೆ ನನ್ನ ಹಿನ್ನೆಲೆ ನಾನು ಪ್ರಾಮಾಣಿಕ ರಾಜಕಾರಣಿಯ ಹೊಟ್ಟೆಯಲ್ಲಿ ಹುಟ್ಟಿದವನು. ಈ ಸದನಕ್ಕೆ ಎರಡು ಬಾರಿ ಸದಸ್ಯರಾಗಿದ್ದಂಥ ನನ್ನ ದಿವಂಗತ ತಂದೆಯವರು ಸಾಹುಕಾರ ಚನ್ನಯ್ಯನವರನ್ನು 1957ನೇ ಇಸವಿಯಲ್ಲಿ ಸೋಲಿಸಿ ಬಂದಂಥವರು. ಅವತ್ತಿನ ದಿವಸ 14 ಆಣೆ, 12 ಆಣೆ ಗ್ಯಾಲನ್ ಪೆಟ್ರೋಲ್. ಅವತ್ತು ನಮಗೆ ನಮ್ಮ ಅಪ್ಪನಿಗೆ ಜನರು ದುಡ್ಡು ಕೊಟ್ಟು ವೋಟು ಕೊಟ್ಟರು. ಇವತ್ತು ನನಗೂ ಅಷ್ಟೆ. ನನ್ನ ಮನೆಯ ಒಂದು ಕಾಸನ್ನು ಪೈಸೆ ಖರ್ಚು ಮಾಡದೆ ಪುಣ್ಯಾತ್ಮರು ಜನರು ಕಾಸು ಕೊಟ್ಟು ಆಶೀರ್ವಾದ ಮಾಡಿ ಗೆಲ್ಲಿಸಿರುವ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ "Charity should begin at home" ಏನು ಎಂದರೆ ಇದು ನನ್ನ ಪ್ರಾಮಾಣಿಕವಾ ಅಭಿಪ್ರಾಯ. ಇವತ್ತು ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ. ಅಧಿಕಾರಿಗಳಿಗೆ ನಾವು ಹೇಳುವುದಾದರೆ ನಾವು ರಾಜಕಾರಣಿಗಳು. ನಾವು ವಿಶ್ವಾಸದಿಂದ ಹೇಳಬೇಕು. ಎರಡು ಕೈ ಸೇರಿದರೆ ಮಾತ್ರ ಚಪ್ಪಾಳೆ. ಒಂದೇ ಕೈಯಲ್ಲಿ ಚಪ್ಪಾಳೆಯನ್ನು ಹೊಡೆಯುವುದಕ್ಕೆ ಸಾಧ್ಯವೇ? ಖಂಡಿತಾ ಇಲ್ಲ. ಒಂದು ನಿದರ್ಶನ ಹೇಳುತ್ತೇನೆ. ಇದನ್ನು ಅಪ್ರಸ್ತುತ ಎಂದು ಭಾವನೆ ಮಾಡಿಕೊಳ್ಳಬೇಡಿ. ಯಾವುದೋ ಒಂದು ಸಣ್ಣಕೆಲಸಕ್ಕೆ ಬಂದೆ. ನೀವು ತಪ್ಪು ತಿಳಿದುಕೊಳ್ಳಬೇಡಿ, ನಿಮ್ಮ ಪಕ್ಷಕ್ಕೆ ಇದನ್ನು ತೆಗೆದುಕೊಳ್ಳಿ ಎಂದು ಲಂಚ ಕೊಡುವುದಕ್ಕೆ ಬಂದಾಗ ಜನಗಳ ಮುಂದೆ ಅವನಿಗೆ ಕಪಾಳಕ್ಕೆ ಹೊಡೆದು ಕಳುಹಿಸಬೇಕು. ನನಗೆ ಅನ್ನ ತಿಂದು ರೂಢಿಯೇ ಹೊರತು ಪಾಯಿಖಾನೆ ತಿಂದು ರೂಢಿಯಿಲ್ಲ. ಚುನಾವಣಾ ಸಮಯದಲ್ಲಿ ಶ್ರಾವಣ ಶನಿವಾರ ಶಬರಿಮಲೈಯವರು ಭಿಕ್ಷೆ ಕೇಳುತ್ತಾರಲ್ಲ, ಆ ಸಮಯದಲ್ಲಿ ನಾನು ಮಡಿಲು ಒಡ್ಡುತ್ತೇನೆ, ಆ ಸಮಯದಲ್ಲಿ ಏನಾದರೂ ನಿನಗೆ ನನ್ನ ಉಪಕಾರ ಸ್ಮರಣೆಗೆ ಬಂದರೆ ಕೊಡಯ್ಯ, ತೆಗೆದುಕೊಂಡು ಹೋಗು ಎಂದು ಹೇಳಬೇಕು. ಈ ದಿವಸದವರೆಗೂ ನನ್ನ ಬದುಕು ಹಾಗೆಯೇ ಸ್ವಾಮಿ. ಇದನ್ನು ಈ ಮೂಲಕ ಅತ್ಯಂತ ಕಳಕಳಿಯಿಂದ ಹೇಳುತ್ತೇನೆ. ನನ್ನ ಸಹೋದ್ಯೋಗಿ ಹಲವಾರು ಜನ ಹಿರಿಯ ಸದಸ್ಯರಿದ್ದಾರೆ, ಬಹಳ ಎತ್ತರಕ್ಕೆ ಬೆಳೆದಂಥ ಧೀಮಂತ

ನಾಯಕರುಗಳು ನಮ್ಮ ಮುಂದೆ ಇದ್ದಾರೆ, ಏನೇ ಇದ್ದರೂ ಕೂಡ ಇವತ್ತು ನಮ್ಮಿಂದ ಪ್ರಾಮಾಣಿಕತೆ ಪ್ರಾರಂಭವಾಗಬೇಕು. ನಂತರ ಅವರನ್ನು ಹತೋಟಿಯಲ್ಲಿಡಬಹುದು.

ಶ್ರೀ ಎಸ್. ರಾಜಣ್ಣ (ಭಾರತೀನಗರ).: ಮಾನ್ಯ ಅಧ್ಯಕ್ಷರೇ, ಮನುಷ್ಯನಿಗೆ ಬದುಕುವುದಕ್ಕೆ ಆಸೆ ಇರಬೇಕು. ದುರಾಸೆ ಬಿಟ್ಟುಬಿಟ್ಟರೆ ಯಾವ ತೊಂದರೆಗಳು ಅಡಚಣೆಗಳು ಬರುವುದಿಲ್ಲ. Desire is the cause of misery ಎಂದು ಬುದ್ಧ ಹೇಳಿದ್ದಾನೆ.

ಶ್ರೀ ಜಿ.ಬಿ. ಶಿವಕುಮಾರ್ : ಮಂತ್ರಿಗಳು ಬಹಳ ಕಠಿಣ ಎಂದರೆ ಯಾವ ಪಿಎ, ಪಿಎಸ್‌ಗಳು ಮುಟ್ಟುವುದಿಲ್ಲ. ಒಂದು ನಿದರ್ಶನ ಹೇಳುತ್ತೇನೆ, ಚುನಾವಣೆಗೆ ಮೊದಲು ಈ ತಾಲ್ಲೂಕು ಪಂಚಾಯಿತಿ ಚುನಾವಣೆಗಳ ಮೊದಲು ಈ ತಾಲ್ಲೂಕು ಪಂಚಾಯಿತಿ ಚುನಾವಣೆಗಳ ಮೊದಲು ನಮ್ಮ ಕ್ಷೇತ್ರದಲ್ಲಿ ಅಂಗನವಾಡಿಗೆ ಒಂದು ಇಂಟರ್‌ವ್ಯೂ ಆಯಿತು. ಅಧಿಕಾರಿಗಳು ನಾವೆಲ್ಲ ಕಲೆತು ಆ ಗ್ರಾಮದವರಿಗೆ ಹೇಳಿದವು. ಇದು ಬಡವರಿಗೆ ಕೊಟ್ಟಿರುವ ಒಂದು ಕಾರ್ಯಕ್ರಮ. ಅವರ ಹೊಟ್ಟೆಯ ಮೇಲೆ ಹೊಡೆಯಬೇಡಿ. ನಿಮ್ಮ ವಿವೇಚನೆಗೆ ಬಿಡುತ್ತೇನೆ, ಅವನು ಯಾವ ಪಕ್ಷವೋ ಯಾವ ಜಾತಿಯೋ, ಬಡವರನ್ನು ಬಡವರನ್ನು ಕರೆದುಕೊಂಡು ಬಂದು ಕಲಿಸಿ ಕೊಡಿ. ಅವರು ಕೊಟ್ಟಂಥ ಅಭಿಪ್ರಾಯದ ಮೇಲೆ ಸೆಲೆಕ್ಟ್ ಮಾಡಿದೆವು. ಆಗ ಸುತ್ತಮುತ್ತ ಕೆಲವು ಸಿಬ್ಬಂದಿ ಇದ್ದವರು ಯಾರನ್ನು ಸೆಲೆಕ್ಟ್ ಮಾಡಿದೆವು ಎಂದು ನೋಡಿಕೊಂಡರು. ತಕ್ಷಣ ಚುನಾವಣೆ ಬಂತು. ನೀತಿಸಂಹಿತೆ ಮೇಲೆ ನಮ್ಮ ಜಿಲ್ಲಾಧಿಕಾರಿಗಳು ಇದು ಪ್ರಕಟಣೆ ಮಾಡಿದರೆ ರಾಜಕೀಯ ಲಾಭವಾಗುತ್ತದೆ ಎಂದು ಹೇಳಿ ತಡೆಹಿಡಿದರು. ಯಾರನ್ನು ಸೆಲೆಕ್ಟ್ ಮಾಡಿದ್ದಾರೆ ಎಂದು ಗೊತ್ತಾಗಿ ಹೋಯಿತು. ನಾನು ಎಷ್ಟೇ ಪ್ರಾಮಾಣಿಕ ಎಂದು ಹೊಗಳಿಕೊಂಡರೂ ಅಲ್ಲಿ ಗೊತ್ತಿರುವವರು ಎಲ್ಲಾ ಆಗಿದೆ, ಮುಂದಿನ ತಿಂಗಳು ಇದನ್ನು ಅನೌನ್ಸ್ ಮಾಡುತ್ತಾರೆ ಎಂದು ಐದು ನೂರು, ಒಂದು ಸಾವಿರ ರೂಪಾಯಿ ಕಿತ್ತುಕೊಂಡರು. ಅವರೆಲ್ಲೊ ಹೋಗಿ ಪೇಪರ್ ಸ್ಟೇಟ್‌ಮೆಂಟ್ ಕೊಟ್ಟರು ಪೇಪರ್‌ಗೆ. ಶಿವಕುಮಾರ್‌ರವರು ಶಾಸಕರಾದಂಥವರು ಈ ರೀತಿ ಮಾಡಿದ್ದಾರೆ ಎಂದು. ನಾನು ಒಂದು ಕರೆ ಕೊಟ್ಟೆ. ಯಾವ ಹೆಣ್ಣುಮಗು ನಾನು ಈ ಕೆಲಸಕ್ಕೆ ಲಂಚ ಕೊಟ್ಟಿದ್ದೇನೆ ಎಂದು ಧೈರ್ಯವಾಗಿ ಬಂದು ನನಗೆ ಹೇಳಿದರೆ ಅವಳಿಗೆ ಕೆಲಸ ಖಾತ್ರಿ ಮಾಡುತ್ತೇನೆ, ಯಾರಿಗೆ ಹಣ ಕೊಟ್ಟಿದ್ದೇನೆ ಎಂದು ಹೇಳಿದರೆ ಅವನನ್ನು ಜೀವಂತ ಬಿಡುವುದಿಲ್ಲ. ನೀವು ನನಗೆ ಬಂದು ಹೇಳಿದರೆ ಮಾತ್ರ ಕೆಲಸ ಖಾತ್ರಿ ಎಂದು ಸ್ಟೇಟ್‌ಮೆಂಟನ್ನು ಕೊಟ್ಟೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ನಾವು ಕೇವಲ ಅಧಿಕಾರಿಗಳು ಇದನ್ನು ಬಯಸುತ್ತಾರೆ, ಅವರು ಬಯಸುವುದಿಲ್ಲ ಎಂದು ಹೇಳುವುದಲ್ಲ. ನಮ್ಮಲ್ಲಿ ಅದೊಂದು ಶುರುವಾದರೆ ಅಧಿಕಾರಿಗಳು ಹೆದರುತ್ತಾರೆ, ಎಲ್ಲರೂ ಹೆದರುತ್ತಾರೆ. ಆ ಒಂದು ನಿಯತ್ತಿನಲ್ಲಿ ಕೆಲಸ ಮಾಡಿದರೆ ಪ್ರಾಮಾಣಿಕ ಕಾರ್ಯಕ್ರಮ ಯಾವುದೇ ನೀವು ತನ್ನಿ. ಅದಕ್ಕೆ ಹೆಸರು ಬೇರೆ ಅಷ್ಟೆ. ನಮ್ಮ ಕಡ್ಲೂರಿನಲ್ಲಿ ಚಿಕ್ಕದಾಸ, ಮಂಡ್ಯದಲ್ಲಿ ಮೋಸಸ Franklin ಆಗುತ್ತಾನೆ. ಇದು ಇರುವ ಪರಿಸ್ಥಿತಿ. ನೀವು ನೆರಳು ಎಂದರೆ ಆಶ್ರಯ. ಪದಗಳಿಗೇನು? ಹೊಸ ಹೊಸ ಪದಗಳು ಡಿಕ್ಷನರಿಯಲ್ಲಿ ಬೇಕಾದಷ್ಟು ಸಿಗುತ್ತವೆ. ಅವುಗಳ ಅರ್ಥ ಮಾತ್ರ ಒಂದೇ. ನಮ್ಮ commitment to the poor ಅದು ಕಾರ್ಯಗತವಾಗ ಬೇಕಾದರೆ ನಾವು ನೂರು ಪರ್ಸೆಂಟ್ ನಮ್ಮಿಂದ ಶುರುವಾಗಿ ಕೊನೆ ತಲುಪುವವರೆಗೆ ಪಿಲ್‌ಫರೇಜಸ್

ಆಗಬಾರದು. ಬೇರೆ ಯಾವುದರಲ್ಲಿ ಕೈ ನೆಕ್ಕಿಕೊಂಡು ಲಂಚ ಹೊಡೆದರೂ ಹೊಡೆದುಕೊಳ್ಳಲಿ. ಬಡವರಿಗೆ ಕೊಡುವ ಯೋಜನೆ, ಐಆರ್‌ಡಿಪಿ, ಆ ಬಿಡಿಓ ಆಫೀಸಿನಲ್ಲಿ ದುಡ್ಡು ಕೊಡದೇ ಮುಂದಕ್ಕೆ ಹೋಗುವ ಹಾಗೆ ಇಲ್ಲ. ಆಶ್ರಯ ಮನೆ ಯೋಜನೆ, ಅಲ್ಲಿ ಹೋಗಿ ಕಂಟ್ರಾಕ್ಟರ್ ಸಿಮೆಂಟ್ ಕದಿಯದೆ ಬಿಡುವುದಿಲ್ಲ. ಏನು ಅನಿಷ್ಟ ಸ್ಥಿತಿಗೆ ತೆಗೆದುಕೊಂಡು ಹೋಗಿ ನಾವು ಇಟ್ಟಿದ್ದೇವೆ ಎಂದರೆ ಅಷ್ಟಾದರೂ ಅಲ್ಪತೃಪ್ತರು ಮೇಲೆ ಏಳಲಾರ. ಅವನೇನಾದರೂ ಮೇಲೆ ಇದ್ದರೆ ಇಲ್ಲದವರು ಉಳ್ಳವರ ಮೇಲೆ ಎದ್ದರೆ ನಾವು ಸರ್ವನಾಶ. ಕ್ರಾಂತಿ ಸನ್ನಿಹಿತ ಆಗುತ್ತದೆ. ಇದನ್ನು ಈಗಲಾದರೂ ಕೂಡ ನೋಡಿ ಎಚ್ಚೆತ್ತುಕೊಂಡು ನಾವು ರಾಜಕಾರಣಿಗಳು, ಅಧಿಕಾರಿಗಳು ಆ ಬಡವರ ದೃಷ್ಟಿಯಿಂದ ಪ್ರಾಮಾಣಿಕ ಸೇವೆ ಮಾಡುವುದಕ್ಕೆ ಹೋಗಬೇಕೆಂದು ಹೇಳುತ್ತೇನೆ.

5.10 ಪಿ.ಎಂ.

ಜನತೆಗೆ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ತಂದಿದ್ದೀರಿ. ಪಂಚಾಯತಿ ಕೇಂದ್ರ ಇವೆ, ತಾಲ್ಲೂಕ್ ಪಂಚಾಯತಿ ಕೇಂದ್ರ ಇದೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಸನ್ಮಾನ್ಯ ಸಾರಿಗೆ ಸಚಿವರು ಇಲ್ಲಿ ಇಲ್ಲ. ಗ್ರಾಮೀಣ ಸಾರಿಗೆ ವ್ಯವಸ್ಥೆ ಹೇಳತೀರದು. ಗ್ರಾಮೀಣ ಸಾರಿಗೆಯಲ್ಲಿ ನಾವು ಇವತ್ತು ಪಾಸ್ ಕೊಟ್ಟಿದ್ದೇವೆ. ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ. ಅವರಿಗೆ ಇವತ್ತು ಸೀಟು ಇಲ್ಲ. ಈ ಮೂಲಕ ಸರ್ಕಾರಕ್ಕೆ ತಮ್ಮ ಮೂಲಕ ಗೌರವದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದಾಯ ದೃಷ್ಟಿ ಒಂದು ಕಡೆ ಇಡಿ. ಈ ಹಾಳಾದ್ದು ಸಿನೆಮಾ ಪ್ರದರ್ಶನ, ಐದೈದು ಇದೆಯಲ್ಲಾ ಪಟ್ಟಣದಲ್ಲಿ, ನಗರದಲ್ಲಿ, ದಯಮಾಡಿ ಅದನ್ನು ನಿಲ್ಲಿಸಿ. ತಾವು 'ಕಾಲೇಜಲ್ಲಿ ಓದುವಾಗ ಬಹುಶಃ ಶುಕ್ರವಾರ, ಶನಿವಾರ, ಭಾನುವಾರ ಮಾತ್ರ ಮ್ಯಾಟನಿ, ಮಾರ್ನಿಂಗ್ ಶೋ ಇತ್ತು ಎಂದು ಕಾಣುತ್ತದೆ. ನಮ್ಮ ಕಾಲದಲ್ಲಿ. ನಾವು ಇಂಜಿನಿಯರಿಂಗ್ ಓದುವಾಗ ಯಾವುದೋ ಶನಿವಾರ, ಭಾನುವಾರ ಮ್ಯಾಟನಿ ಮಾರ್ನಿಂಗ್ ಶೋ ಇರುತ್ತಿತ್ತು. ಇವತ್ತು 9.30ಕ್ಕೆ ನಮ್ಮ ಗ್ರಾಮದ ಜನರು ಸಿನೆಮಾ ಥಿಯೇಟರ್ ಹತ್ತಿರ ನಿಂತಿರುತ್ತಾರೆ. ಅದೇನು ಸಿನೆಮಾದಿಂದ ಕಲಿಯುತ್ತಾರೋ, ಗೊತ್ತಿಲ್ಲ. ಏನು ಅನುಕರಣೆ ಮಾಡುತ್ತಾರೋ ಗೊತ್ತಿಲ್ಲ. ಅದೊಂದು ದರಿದ್ರ ರೋಗ ಬಂದು ಬಿಟ್ಟು ಮನೆಯಲ್ಲಿ ಅಡುಗೆ ಮಾಡುವ ಹಾಗೆ ಇಲ್ಲ. ಕಂಕುಳಲ್ಲಿ ಮಗುವನ್ನು ಸಿಗಿಸಿಕೊಂಡು ಒಂಭತ್ತೂವರೆಗೆ ಬರುತ್ತಾರೆ. ಮಕ್ಕಳಿಗೇ ಎಂದು ಬಸ್ ಹಾಕಿದ್ದಾರೆ, ಸಿನೆಮಾ ನೋಡಲು ಜನ ಬರುತ್ತಾರೆ, ಇಲ್ಲ ಮಧ್ಯವರ್ತಿಗಳು ಬರುತ್ತಾರೆ. ಟಾಪ್‌ಮೇಲೆ ಬರುತ್ತಾರೆ, ಹೇಳತೀರದು ಗ್ರಾಮೀಣ ಪ್ರದೇಶದಲ್ಲಿನ ಸಾರಿಗೆ ವ್ಯವಸ್ಥೆ ಬಗ್ಗೆ. ಅಧಿಕಾರ ವಿಕೇಂದ್ರೀಕರಣ ಮಾಡಿ ಅಲ್ಲಿ ಗ್ರಾಮ ಪಂಚಾಯತಿಗೋ ತಾಲ್ಲೂಕೂ ಪಂಚಾಯತಿಗೊ ಕಛೇರಿಗೋ ಹೋಗಿ ನಮ್ಮ ಜನ ಪಡೆಯಬೇಕಾದಂತಹ ಸೌಲಭ್ಯ ಪಡೆಯಬೇಕಾದರೆ ಕಷ್ಟ. ಆ ಪಂಚಾಯತಿ ಕೇಂದ್ರಕ್ಕೆ ಕನಿಷ್ಟ ಒಂದು ಹೈಸ್ಕೂಲು ಬೇಕು; ಒಂದು ಪಶುವೈದ್ಯ ಶಾಲೆ ಬೇಕು, ಒಂದು ಪ್ರಾಥಮಿಕ ಆರೋಗ್ಯ ಘಟಕ ಬೇಕು. ಒಂದು ಬ್ಯಾಂಕಿನ ವ್ಯವಸ್ಥೆ ಬೇಕು. ಈ ಎಲ್ಲಾ ಇನ್‌ಫ್ರಾಕ್ಚರ್ ಇರುವಂತಹದಕ್ಕೆ ಮಾತ್ರ ಕೇಂದ್ರ ಕೊಡಿ ಎಂದಾದ ಮೇಲೆ ಇದನ್ನು ಕೊಡಬೇಕಾದ್ದು ಸರ್ಕಾರದ ಕೆಲಸ ಅಲ್ಲವೇ? ಆ ದೃಷ್ಟಿಯಿಂದ ಕೊಡಬೇಕು. ಇಲ್ಲಿ ಒಂದು ಸೆಕೆಂಡ್ ಬಸ್‌ಗೆ ನಾವು ಗುದ್ದಾಡುತ್ತಿರುವಾಗ ನಮ್ಮಲ್ಲಿ ಒಂದು ಗಂಟೆಗೆ ಒಂದು ಬಸ್

ಎಲ್ಲಾ ಗ್ರಾಮೀಣ ಪ್ರದೇಶದ ಹಳ್ಳಿಗಳಿಗೆ ಪಂಚಾಯತಿ ಕೇಂದ್ರ ಇರಬಹುದು, ಇವಕ್ಕೆ ವ್ಯವಸ್ಥೆ ಮಾಡ ತಕ್ಕದ್ದಕ್ಕೆ ತಾವು ಬಹಳ ಒಂದು ಆದ್ಯತೆಯನ್ನು ಕೊಡಬೇಕು ಎಂದು ಈ ಮೂಲಕ ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೊಂದು ಮುಖ್ಯ ವಿಚಾರ ಎಂದರೆ ಸ್ವಯಂ ಉದ್ಯೋಗ. ಮಾನ್ಯ ಸಭಾಧ್ಯಕ್ಷರೆ, ಇವತ್ತು ನೆನೆಸಿಕೊಳ್ಳಬೇಕು, 15 ಸಾವಿರ 25 ಸಾವಿರ, 35 ಸಾವಿರ ಎಂದು ಮೂರು ಅಂಕಿಗಳನ್ನು ಕೊಟ್ಟರು. ರಾಜೀವ್‌ಗಾಂಧಿ ಅವರು ಇಂದಿರಾಗಾಂಧಿ ಅವರು ಅಲ್ಲಿಂದ ಬಂದು ಕೊಟ್ಟರು. 95 ಭಾಗ ಸಂಪೂರ್ಣವಾಯಿತು, ಎಂದೆರಡು ಬ್ಯಾಂಕ್‌ಗಳು ಸೇರಿ ಒಂದೊಂದು ಬ್ಯಾಂಕ್ ಆಯಿತು. ಯಾವುದೇ ಸಂಸ್ಥೆಯ ಕೆಚ್ಚಲಿಗೇ ಕೈಹಾಕತಕ್ಕ ಸ್ಥಿತಿಗೆ ನಾವು ತಲುಪಿದ್ದೇವೆ. ಕೆಚ್ಚಲಲ್ಲಿ ನಾವು ಹಾಲು ಕರೆದುಕೊಂಡು ಕುಡಿಯಬೇಕಾದವರು ಕೆಚ್ಚಲನ್ನೇ ಕತ್ತರಿಸುವಂತಹ ಕೆಲಸ ಆಯಿತು. ಇವತ್ತು ಬ್ಯಾಂಕಿನಿಂದ ಸೌಲಭ್ಯ ಪಡೆದುಕೊಳ್ಳುತ್ತೇವೆ, ಆ ಸಾಲ ವಾಪಸ್ ಕಟ್ಟುವ ಹಾಗೆ ಇಲ್ಲ. ಗೊಬ್ಬರದ ಅಂಗಡಿಯೋ ಸೈಕಲ್ ಶಾಪೋ. ಏನೋ ನಮ್ಮಂತಹವರ ಶಿಫಾರಸ್ ತೆಗೆದುಕೊಳ್ಳುವುದು ಅಥವಾ ಇನ್ನೊಂದು ಶಿಫಾರಸ್ಸೋ ತೆಗೆದುಕೊಳ್ಳುವುದು ಸಾಲ ತೆಗೆದುಕೊಂಡ ನಂತರ ಸಾಲ ವಾಪಸ್ ಕಟ್ಟುವ ಹಾಗೆ ಇಲ್ಲ. ಬ್ಯಾಂಕ್‌ನವರು ಇವತ್ತು ಪ್ರಾಮಾಣಿಕರನ್ನು ಕಾಮಾಲೆ ರೋಗದ ದೃಷ್ಟಿಯಿಂದ ನೋಡುವ ಹಾಗೆ ಆಗಿದೆ. ಅವರ ದೃಷ್ಟಿಗೆ ಎಲ್ಲರೂ ಕೂಡ ಹಳದಿಯಾಗಿ ಕಾಣಿಸುತ್ತಾರೆ. ಅವರ ದೃಷ್ಟಿಯಲ್ಲಿ ಎಲ್ಲರೂ ವಂಚಕರೇ, ಮೋಸಗಾರರೇ. ಉದ್ದಿಮೆದಾರರೇ ಆಗಲೀ ಯಾರೇ ಆಗಲಿ ಪ್ರಾಮಾಣಿಕರು ಸಾಲ ತೆಗೆದುಕೊಳ್ಳಬೇಕಾದರೆ ಅವರನ್ನು ಸರಿಯಾಗಿ ನೋಡತಕ್ಕ ದೃಷ್ಟಿಯಲ್ಲಿ ಕೊರತೆ ಇದೆ. ಅವರ ಪರಿಸ್ಥಿತಿ ಬಗ್ಗೆ ಕೊರತೆ ಇದೆ. ಅದರಿಂದ ನಾನು ಮೊದಲೇ ಕೇಳಿಕೊಂಡ ಹಾಗೆ ಪ್ರಾಮಾಣಿಕತೆ ದೇಶದಲ್ಲಿರತಕ್ಕ ಎಲ್ಲರಿಗೂ ಬರಬೇಕಾದ್ದು ನಮ್ಮ ಒಂದು ಆದ್ಯ ಕರ್ತವ್ಯ. ಒಂದೇ ಒಂದು ಮಾತು ಕನ್ನಡದ ಬಗ್ಗೆ ಹೇಳುತ್ತೇನೆ. ಬೆಳಿಗ್ಗೆ ನಮ್ಮ ಹಿರಿಯ ಸದಸ್ಯರಾದ ಮಾನ್ಯ ವಾಟಾಳ್ ನಾಗರಾಜ್ ಅವರು ಅವರದೇ ರೀತಿಯಲ್ಲಿ ಕನ್ನಡದ ಬಗ್ಗೆ ಅಭಿಮಾನವನ್ನು ವ್ಯಕ್ತ ಮಾಡಿದರು. ವಿಧಾನ ಪರಿಷತ್ತಿನಲ್ಲಿ ಯಾರಾದರೂ ಇಂಗ್ಲೀಷ್‌ನಲ್ಲಿ ಮಾತನಾಡಿದರೆ ನಾವು, ಸಿದ್ಧಲಿಂಗಯ್ಯನವರು ಕನ್ನಡ ಕನ್ನಡ ಎಂದು ಮಧ್ಯೆ ಕೂಗಿಕೊಳ್ಳುವುದೇ ನಮಗೆ ರೋಗ ಆಗಿತ್ತು. ಈ ಮೂಲಕ ನಾನು ವಿನಂತಿ ಮಾಡಿಕೊಳ್ಳುವುದು ಇಷ್ಟೇ. ಇವತ್ತು ಎಲ್ಲಿ ಜಾರಿಗೆ ತರಬೇಕು ಕನ್ನಡವನ್ನು? ನಾವು ರಾಜಕಾರಣಿಗಳು, ಜನ ಪ್ರತಿನಿಧಿಗಳು, ಪಂಚಾಯತಿ ಸದಸ್ಯರಿಂದ ಹಿಡಿದು ಮುಖ್ಯ ಮಂತ್ರಿಯವರೆಗ್ಗೆ, ಸರ್ಕಾರೀ ನೌಕರ 'ಡಿ' ಗುಂಪಿನಿಂದ ಹಿಡಿದು ಐಎಎಸ್‌ವರೆಗೆ ನ್ಯಾಯಾಲಯದಲ್ಲಿ ಕೂಗುತ್ತಾನಲ್ಲ, ಚೆನ್ನ ಬೋರ ಎಂದು ಅವನಿಂದ ನ್ಯಾಯಾಧೀಶರವರೆಗೆ ಈ ಆಂಗ್ಲ ಭಾಷೆಯ ವ್ಯಾಮೋಹ ಹೋಗದಿದ್ದರೆ ಕಷ್ಟ. ನಮ್ಮ ಕರ್ನಾಟಕ ರಾಜ್ಯ ಮಿನಿ ಭಾರತ. ನಾನು ಹಲವಾರು ರಾಜ್ಯಗಳಲ್ಲಿ ಪ್ರವಾಸ ಮಾಡಿದ್ದೇನೆ. ಬೇರೆ ಯಾವುದೇ ರಾಜ್ಯದಲ್ಲಿ ಭಾಷಾ ಪ್ರೇಮ ಎಷ್ಟು ಇದೆ ಎಂದರೆ ಎಷ್ಟೇ ಪಾಂಡಿತ್ಯ ಪಡೆದಿದ್ದರೂ ಸಹ ಬಹಳ ಅಗತ್ಯ ಇದ್ದರೆ, ಇವನು ಹೊರಗಿನವನು ಎಂದು ಗೊತ್ತಾದರೆ ಮಾತ್ರ, He will come to our rescue ಇಲ್ಲದಿದ್ದರೆ ಅವರವರ ಭಾಷೆಯಲ್ಲಿಯೇ ಮಾತನಾಡುತ್ತಾರೆ. ನಮ್ಮಲ್ಲಿ ಹಾಗಲ್ಲ. ತಮಿಳನವರು ಕನ್ನಡ ಕಲಿಯುವುದಕ್ಕೆ ಅವರು ಕನ್ನಡದಲ್ಲಿ ಕಲಿಯುವುದಕ್ಕೆ ಎನ್ನಪ್ಪಾ ಎಲ್ಲಿಗೆ ಹೋಗುತ್ತಿದ್ದೀಯಾ ಎಂದು ಅವರು ಹೇಳಿರುವುದಕ್ಕೆ ಹೋದರೆ 'ಎನ್ನಡಾ, ಎಂಗಿಂಧ ವಂದೆ' ಎಂದು ಇವರೇ ತೋರಿಸಿ ಕೊಡುತ್ತಾರೆ. ಈ ಮುಂದೆ ಮಕ್ಕಳು ಕನ್ನಡದವರಿಗೆ ಅತೀ ಹೆಚ್ಚು ಔದಾರ್ಯ ಆಗಿ

ಬಿಟ್ಟು ಕಲಬೆರೆಕೆ ಕನ್ನಡ ಆಗಿದೆ. ಇವತ್ತು ನಮ್ಮ ಔದಾರ್ಯ ಪರಮಾವಧಿ ಆಗಿದೆ. ಕ್ಷಮಿಸಬೇಕು ಸಭಾಧ್ಯಕ್ಷರೆ, ಅಷ್ಟು ಔದಾರ್ಯದ ಪರಮಾವಧಿಗೆ ನಾವೇ ಕಾರಣ. ಫ್ಯಾನಿಟಿಸಂನಿಂದ ನಾನು ಮಾತನಾಡುತ್ತಿಲ್ಲ. ಕರ್ನಾಟಕದಲ್ಲಿರತಕ್ಕಂಥ ಜನ ಬಹುಶಃ ಬೇರೆ ಯಾವುದೇ ರಾಜ್ಯದಲ್ಲಿಲ್ಲ. ಕರ್ನಾಟಕ ರಾಜ್ಯದವರು ಅದಕ್ಕೇ ರಿಸೀವಿಂಗ್ ಅಂಡ್ ಕೇರಳದವರು ಎಷ್ಟು ಮಂದಿ ಇಲ್ಲಿದ್ದಾರೆ? ಇರಲಿ ಸಂತೋಷ. ಅವರೂ ಭಾರತೀಯರು. ಬೇರೆ ಯಾರೇ ಭಾಷೆಯವರನ್ನು ತೆಗೆದುಕೊಳ್ಳಿ, ಇವತ್ತು ಅಷ್ಟೊಂದು ಜನ ಇದ್ದಾರಲ್ಲ ಕರ್ನಾಟಕ ರಾಜ್ಯದಲ್ಲಿ. ನಾವ್ಯಾರದರೂ ಅವರನ್ನು ಬೇರೆ ರೀತಿಯಿಂದ ಕರಿದಿದ್ದೇವೆಯೇ? ಅದೇ ಕನ್ನಡಿಗ ಬೇರೆ ರಾಜ್ಯದಲ್ಲಿ ಆತ ಅಸ್ಪೃಷ್ಯ ಅನ್‌ಟಚಬಲ್. ನಿಮಗೆ ಗೊತ್ತಿದೆಯೋ? ಆದರೆ ನಮ್ಮ ಔದಾರ್ಯವನ್ನು ಬೇರೆಯವರು ಕಾಪಿ ಮಾಡಲಿ ಎಂದು ನಾನು ಈ ಮೂಲಕ ಹೇಳುವುದೇ ಹೊರತು ಅವರ ಫ್ಯಾನಿಟಿಸಂ ನಮಗೆ ಬರುವುದು ಬೇಡ. ಮಾನ್ಯ ಸಭಾಧ್ಯಕ್ಷರೆ, ತಮ್ಮ ಮೂಲಕ ಸರ್ಕಾರಕ್ಕೆ ಪ್ರತಿ ಒಂದು ಅರ್ಜಿ ಅವರು ಎಲ್ಲೆಲ್ಲೇ ಕೊಡಲಿ ಎಂಎಲ್‌ಎ ಕೊಡಲಿ ಪಂಚಾಯತಿ ಸಂಸ್ಥೆಗೆ ಕೊಡಲಿ ಅದು ಕನ್ನಡದಲ್ಲಿ ಇದ್ದರೆ ಮಾತ್ರ ನಾವು ಉತ್ತರಿಸುತ್ತೇವೆ, ಉತ್ತರ ಕೊಡುತ್ತೇವೆ ಎನ್ನತಕ್ಕ ಕಟ್ಟುನಿಟ್ಟಾದ ನಿರ್ಬಂಧ ಬಂದರೆ ಮಾತ್ರ ಕನ್ನಡ ಆಡಳಿತ ಜಾರಿಗೆ ಬರುವುದಕ್ಕೆ ಸಾಧ್ಯ. ಅನಿವಾರ್ಯವಾದಾಗ ಬೇರೆ ಕಡೆ ನಾವು ತಾಂತ್ರಿಕವಾಗಿ ಮೆಡಿಕಲ್ ವರ್ಡ್ ಅಥವಾ ಇಂಜಿನಿಯರಿಂಗ್ ವರ್ಡ್‌ನಲ್ಲಿ ಇಂಗ್ಲೀಷ್ ಬಳಸಬೇಕಾದಂಥ ಒಂದು ಸಂದರ್ಭ ಇರಬಹುದೇನೋ ......

ಶ್ರೀ ಬಿ.ಬಿ. ಶಿವಪ್ಪ : ಇಷ್ಟು ಫೆನಾಟಿಸಂ ಆದರೆ we will be away from acquisition of knowledge. ಇಷ್ಟು ಮತಾಂಧರು ಆದರೆ ಬಹಳ ಕಷ್ಟ. ನಾವು ಬೇರೆ ರಾಜ್ಯಗಳಿಂದ, ದೇಶಗಳಿಂದ ತಿಳುವಳಿಕೆಯನ್ನು ಹೊರಗಿಡಬೇಕಾಗುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾವು ಬೇರೆ ರಾಜ್ಯದಲ್ಲಿ ಕನ್ನಡ ಕೇಳುತ್ತಿಲ್ಲ. ನಮ್ಮ ರಾಜ್ಯದಲ್ಲಿ ಕನ್ನಡಕ್ಕೆ ಇರಬೇಕಾದಂತ ಆದ್ಯತೆ ಕೊಡಬೇಕಾದದ್ದು ಪ್ರತಿ ಒಬ್ಬರ ಕರ್ತವ್ಯ.

ಅಧ್ಯಕ್ಷರು : ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ, ಆದರೆ ಸಮಯ ಇಲ್ಲವಲ್ಲಾ ಏನು ಮಾಡುವುದು?

ಶ್ರೀ ಜಿ.ಬಿ. ಶಿವಕುಮಾರ್ : ತಮ್ಮ ಸೂಚನೆ ಗೊತ್ತಾಯಿತು ಅಧ್ಯಕ್ಷರೇ. ಬಹಳ ಸೂಕ್ಷ್ಮವಾಗಿ ಗ್ರಹಿಸಿಕೊಂಡೆ. ನನ್ನದು ಇಷ್ಟೇ. ಬೇರೆ ಭಾಷೆ ಬಗ್ಗೆ ನನಗೆ ದುರಭಿಮಾನ ಇಲ್ಲ. ನನ್ನ ಮಾತೃಭಾಷೆ ಬಗ್ಗೆ ಅಭಿಮಾನ ಇಟ್ಟುಕೊಳ್ಳುವುದಕ್ಕೆ ಕೊರತೆ ಏನು? ಇವತ್ತು ಅಪ್ಪ, ಅಮ್ಮ ಎನ್ನುವುದು ಎಷ್ಟು ಚೆನ್ನಾಗಿ ಕಾಣುತ್ತದೆ ಡ್ಯಾಡಿ, ಮಮ್ಮಿ ಎಂದು ಕರೆಯುವುದು ಎಷ್ಟು ಚೆನ್ನಾಗಿ ಕಾಣುತ್ತದೆ ಎಂದು ನೀವೇ ಯೋಚನೆ ಮಾಡಿ ಹೇಳಿ. ನಮ್ಮ ಅಪ್ಪ, ಅಮ್ಮ ಎಂದು ಕರೆಯುವುದು ಎಷ್ಟು ಚೆನ್ನಾಗಿ ಕೇಳಿಸುತ್ತದೆ ಹೆತ್ತ ತಂದೆ ತಾಯಿಗಳಿಗೆ ಅದೇ ಡ್ಯಾಡಿ ಮಮ್ಮಿ ಎಂದು ಕರೆಯುವುದು ಎಷ್ಟು ಚೆನ್ನಾಗಿ ಕೇಳುತ್ತದೆ ಇಷ್ಟೇ ತಿಳಿದುಕೊಳ್ಳಿ. ಈ ಇನ್‌ಫ್ಲುಯೆನ್ಸ್ ಎಷ್ಟರ ಮಟ್ಟಿಗೆ ಆಗಬೇಕು? ಅದನ್ನು ಅಷ್ಟಕ್ಕೇ ನಿಲ್ಲಿಸೋಣ. ನೀವು ಮಂತ್ರಿಗಳು, ಅಧಿಕಾರಿಗಳು, ಕನ್ನಡದಲ್ಲಿ ಅರ್ಜಿ ಬರಬೇಕು, ಟಿಪ್ಪಣಿ ಬರಬೇಕು ಎನ್ನುವುದನ್ನು ಕಟ್ಟುನಿಟ್ಟಾಗಿ ಮಾಡಿದರೆ ಹಂತ ಹಂತವಾಗಿ ಇದನ್ನು ಬೆಳೆಸಬೇಕೇ ಹೊರತು, ಭಾಷಣದಿಂದಲ್ಲ

ಅಥವಾ ಪ್ರತಿಗಳನ್ನು ಅಚ್ಚು ಹಾಕಿಸುವುದರಿಂದಲ್ಲ. ಮತ್ತೊಂದು ಉಪಯುಕ್ತವಾದ ಕಾರ್ಯಕ್ರಮ ಗಂಗಾ ಕಲ್ಯಾಣ ಎನ್ನತಕ್ಕ ಯೋಜನೆಯನ್ನು ಹಿಂದೆ ನಮ್ಮ ಸರ್ಕಾರ ಇದ್ದಾಗಲೂ ಕೂಡ ತಂದಿದ್ದರು. ಮತ್ತೆ ಸರ್ಕಾರ ಇವತ್ತು ಒತ್ತು ಕೊಟ್ಟಿದೆ, ನನ್ನ ಕ್ಷೇತ್ರದಲ್ಲಿ ನಾನು ಎರಡು ಬಾರಿ ಸೋತಾಗಲೂ ಸಹ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿದ್ದೇನೆ. ಇವತ್ತು ಇದು ವಿಶೇಷವಾಗಿ ಹರಿಜನರಿಗೆ, ಅಕ್ಕಪಕ್ಕದಲ್ಲಿ ಹಿಂದುಳಿದ ಸಣ್ಣ ಹಿಡುವಳಿದಾರರಿಗೆ ಈ ಒಂದು ಕಾರ್ಯಕ್ರಮ ಅತ್ಯಂತ ಅನುಕೂಲಕರವಾಗಿದೆ. ಈ ಕಾರ್ಯಕ್ರಮಕ್ಕೆ ಸರ್ಕಾರ ಹೆಚ್ಚು ಒತ್ತು ಕೊಟ್ಟು ಪ್ರತಿ ಕ್ಷೇತ್ರದಲ್ಲಿ ಕೂಡ ನನ್ನ ಶಾಸಕ ಮಿತ್ರರು ಈ ಕಾರ್ಯಕ್ರಮವನ್ನು ಹೆಚ್ಚು ಉಪಯೋಗಿಸಿಕೊಂಡು ಹಿಂದುಳಿದವರಿಗೆ, ಹರಿಜನರಿಗೆ ಈ ಒಂದು ಕಾರ್ಯಕ್ರಮದ ಯಶಸ್ಸು ದೊರಕಿಸಿಕೊಡಲಿಕ್ಕೆ ಸಹಾಯ ಆಗಬೇಕು ಎನ್ನತಕ್ಕದ್ದನ್ನು ಹೇಳುತ್ತೇನೆ. ಮಾನ್ಯ ಅರ್ಥ ಸಚಿವರಿಗೆ ಒಂದೇ ಒಂದು ವಿಷಯ ಹೇಳುತ್ತೇನೆ. ಸಣ್ಣ ನೀರಾವರಿ ಇಲಾಖೆಯಿಂದ ಮಂಡ್ಯ ವಿಭಾಗದಲ್ಲಿ ಸುಮಾರು ಎಂಟು ಲಕ್ಷ ರೂಪಾಯಿ ಬಿಲ್ ಬಾಕಿ ಇದೆ, ಅದನ್ನು ಈಗ ತೆಗೆದುಕೊಂಡು ಬೇರೆ ಯಾವುದೋ ಇಲಾಖೆಗೆ, ಹೇಮಾವತಿಗೋ ಅಥವಾ ಬೇರೆ ಯಾವುದಕ್ಕೋ ಮರ್ಜ್ ಮಾಡಿದ್ದಾರೆ. ಆ ಇಲಾಖೆಯವರು ಹೇಳುತ್ತಾರೆ ಬಿಲ್ ಯಾರು ಕೊಡಬೇಕು ಎನ್ನತಕ್ಕ ಪ್ರಶ್ನೆ ಇದೆ. ಈ ಮೂಲಕ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ, ನಮ್ಮ ಮಂಡ್ಯ ವಿಭಾಗದಲ್ಲಿ ಬರಬೇಕಾದ ಸುಮಾರು ಎಂಟು ಲಕ್ಷ ರೂಪಾಯಿ ಬಿಲ್ ಬಾಕಿಯನ್ನು ಪಾವತಿ ಮಾಡಿ ಬಿಟ್ಟು ಆ ಇಲಾಖೆಯನ್ನು ಬೇರೆ ಯಾರಿಗಾದರೂ ಕೂಡ ವರ್ಗಾಯಿಸಿ ಕೊಡಿ ಎಂಬುದನ್ನು ಹೇಳಿ ತಾವು ಸಮಯ ಕಡಿಮೆ ಕೊಟ್ಟಿರುವುದರಿಂದ ನಾನು ಎಕ್ಸ್‌ಪ್ರೆಸ್ ಆಗಿ ಹೋಗು ತ್ತಿದ್ದೇನೆ. ಮತ್ತೊಮ್ಮೆ ಅವಕಾಶ ತೆಗೆದುಕೊಳ್ಳುತ್ತೇನೆ. ತಾವು ಅವಕಾಶ ಕೊಟ್ಟದ್ದಕ್ಕೆ ಧನ್ಯವಾದಗಳು.

ಅಧ್ಯಕ್ಷರು : ಡಾ. ಎಂ.ಪಿ. ಕರ್ಕಿಯವರು ಬಹಳ ಫಾಸ್ಟಾಗಿ ಮಾತನಾಡಿಡುತ್ತಾರೆ.

ಡಾ. ಎಂ.ಪಿ. ಕರ್ಕಿ : ನನಗೆ ಹೆಚ್ಚು ಮಾತನಾಡಲಿಕ್ಕೆ ಬರುವುದಿಲ್ಲ.

ಅಧ್ಯಕ್ಷರು : ಮೈಸೂರಿನಲ್ಲಿ ತಾವು ನನಗೆ ಪರಿಚಯ ಆಗಿದ್ದೀರಲ್ಲ.

+ಡಾ. ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಅಧ್ಯಕ್ಷರೆ, ತಮಗೆ ಆಶ್ವಾಸನೆ ಕೊಟ್ಟಂತೆ ನನ್ನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಂದೆರಡು ಮಾತುಗಳನ್ನು ಆಡುತ್ತೇನೆ. ನಾನು ಮುನಿಸಿಪಲ್ ಅಧ್ಯಕ್ಷನಾಗಿದ್ದೆ 1972 ಎಂದು ಕಾಣುತ್ತದೆ. ನಮ್ಮ ನೀರಾವರಿ ಯೋಜನೆ ಸಲುವಾಗಿ ಇಲ್ಲಿ ಬೆಂಗಳೂರಿಗೆ ಮಂತ್ರಿಗಳನ್ನು ಕಾಣಲಿಕ್ಕೆ ಬಂದಿದ್ದೆ. ಆಗ ಆ ಮಂತ್ರಿಗಳು ಹೇಳಿರತಕ್ಕ ಮಾತು ನನಗೆ ಈ ಬಜೆಟ್‌ನ್ನು ನೋಡಿದಾಗ ನೆನಪು ಆಗುತ್ತದೆ. ನೀವು ಕಾರವಾರ ಜಿಲ್ಲೆಯವರು, ಹೆಗಡೆ ಅವರ ಜಿಲ್ಲೆಯವರು ಎಂದರೆ ರಾಮಕೃಷ್ಣ ಹೆಗಡೆಯವರ ಜಿಲ್ಲೆಯವರು. ಅದಕ್ಕಾಗಿ ನಿಮಗೆ ನಾನು ಏನನ್ನೂ ಕೊಡುವುದಿಲ್ಲ ಎನ್ನುವ ಮಾತನ್ನು ಹೇಳಿದ್ದರು. ಅದೇ ರೀತಿ ಮಾನ್ಯ ಸಿದ್ಧರಾಮಯ್ಯನವರಿಗೆ ಆ ರೀತಿ ಇರಲಿಕ್ಕಿಲ್ಲ ಎಂದು ನನ್ನ ಭಾವನೆ. ಉತ್ತರ ಕನ್ನಡ ಜಿಲ್ಲೆಯನ್ನು ಏಕೆ ಈ ರೀತಿ ನಿರ್ಲಕ್ಷ್ಯ ಮಾಡಿದ್ದಾರೆ ಎಂದು ನನ್ನ ಗಮನಕ್ಕೆ ಬರುತ್ತಿಲ್ಲ. ನಮ್ಮದು ಕರಾವಳಿ ಜಿಲ್ಲೆ, ಉತ್ತರ ಕನ್ನಡ, ದಕ್ಷಿಣ ಕನ್ನಡ ಇವೆರಡು ಕರಾವಳಿ ಜಿಲ್ಲೆಗಳು. ಈ ಕರಾವಳಿ ಜಿಲ್ಲೆಯಲ್ಲಿ ಮೀನುಗಾರಿಕೆ ಪ್ರಾಶಸ್ತ್ಯವನ್ನು ಹೊಂದಿರತಕ್ಕ ಉದ್ಯೋಗ. ಈ ಮೀನುಗಾರರ ಬಗ್ಗೆ ಮೀನುಗಾರರ ತೊಂದರೆ ಬಗ್ಗೆ; ಮೀನುಗಾರರಿಗೆ ಕೊಡತಕ್ಕ ಸೌಲಭ್ಯದ ಬಗ್ಗೆ ಈ ಬಜೆಟ್‌ನಲ್ಲಿ ಒಂದು

ಮಾತು ಕೂಡ ಇಲ್ಲ, ಒಂದು ಅಕ್ಷರ ಕೂಡ ಇಲ್ಲ. ಮೀನುಗಾರರು ನಮ್ಮಲ್ಲಿ ಅನೇಕ ಸಮಸ್ಯೆಗಳನ್ನು ಇಡುತ್ತಿದ್ದಾರೆ. ನಾವು ಹೇಗೆ ರೈತರಿಗೆ ಅನುಕೂಲ ಆಗತಕ್ಕ ವಾತಾವರಣವನ್ನು ಕಲ್ಪಿಸಿಕೊಡುತ್ತೀರೋ ಅದೇ ರೀತಿ ಮೀನುಗಾರರಿಗೆ ಕೂಡ ಕಲ್ಪಿಸಿಕೊಡತಕ್ಕ ಮಾತನ್ನು ಹೇಳುತ್ತಿದ್ದೇನೆ. ನಮ್ಮ ಬಲೆ ಹರಿದು ಹೋದರೆ ಬಲೆಗೆ ಸಬ್ಸಿಡಿ ಸೌಲಭ್ಯ ಸಿಗುತ್ತಾ ಇಲ್ಲ. ಬಲೆಯನ್ನು ರೀಪ್ಲೇಸ್ ಮಾಡುತ್ತಿಲ್ಲ. ಕೃಷಿಕನಿಗೆ ತಾನು ಬಿತ್ತಿದ ಬೆಳೆ ಬಾರದೆ ಹೋದರೆ ತೆರಿಗೆ ಮಾಫಿ ಮಾಡುತ್ತೀರಿ. ನಮಗೇನು ಮಾಡುತ್ತೀರಿ? ಎಂಬ ಪ್ರಶ್ನೆ ಕೇಳುತ್ತಿದ್ದೇನೆ. ಮೀನುಗಾರರು ಉಪಯೋಗಿಸತಕ್ಕ ಬಂದರುಗಳಲ್ಲಿ ಹೂಳು ತುಂಬಿ ಅವರ ಉದ್ಯೋಗ ನಷ್ಟವಾಗುವ ಪ್ರಸಂಗಗಳಿವೆ. ಈ ಪರಿಸ್ಥಿತಿ ವಿಶೇಷವಾಗಿ ಭಟ್ಕಳದಲ್ಲಿದೆ. ಮೀನುಗಾರರು ಸಮುದ್ರಕ್ಕೆ ಹೋಗಿ ಮೀನುಗಳನ್ನು ಹಿಡಿದು ತಂದು ಇಳಿಸುವ ಸಮಯದಲ್ಲಿ 3-4 ತಾಸುಗಳಷ್ಟು ಕಾಲ ಅವರುಗಳು ಹೊರಗೆ ನಿಂತು ಒಳಗೆ ಬರಬೇಕಾದ ಸನ್ನಿವೇಶಗಳಿವೆ. ಅಲ್ಲಿ ಹೂಳೆತ್ತುವ ಕೆಲಸ ಮಾಡುತ್ತಿಲ್ಲ. ದಕ್ಷಿಣ ಕನ್ನಡದಲ್ಲಿ ನಾನು ತಿಳಿದುಕೊಂಡಂತೆ ಅಲ್ಲಿನ ಕಾಪು ಮತ್ತು ಮಲ್ಪೆ ಬಂದರುಗಳಲ್ಲಿ ಮೀನುಗಾರರು ಸಮುದ್ರಕ್ಕೆ ಹೋಗಿ ತಿರುಗಿ ಬರುವುದು ಕೂಡ ಅಪಾಯಕಾರಿಯಾದ ಸಂಗತಿಯಾಗಿದೆ. ಕರಾವಳಿ ದಂಡೆಯಲ್ಲಿ ಹೂಳು ತುಂಬಿಕೊಂಡಿರುವುದರಿಂದ ಪ್ರತಿ ವರ್ಷವೂ ಅನೇಕ ಜನರು ಸಾವಿಗೀಡಾಗಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎನ್ನುವ ಭಾವನೆ ನನ್ನದಾಗಿದೆ. ಹೂಳೆತ್ತುವ ಕೆಲಸದ ಸಲುವಾಗಿ ಅನೇಕ ಸಲ ಸಂಬಂಧಪಟ್ಟ ಅಧಿಕಾರಿಗಳನ್ನು, ಮಂತ್ರಿಗಳನ್ನು ಸಂಪರ್ಕಿಸಿದರೂ ಸಹ ಆ ಕೆಲಸಕ್ಕೆ ಒಂದು ನಯಾ ಪೈಸೆ ಖರ್ಚಾಗಿಲ್ಲ, ಮತ್ತು ಆ ಕೆಲಸಕ್ಕೆ ಬಜೆಟ್‌ನಲ್ಲಿ ಒಂದು ನಯಾ ಪೈಸೆಯೂ ನಮೂದಾಗಿಲ್ಲ. ಇನ್ನೊಂದು ವಿಷಯ ವೇನೆಂದರೆ, ನಮ್ಮ ಜಿಲ್ಲೆಯ ಬಂದರುಗಳಲ್ಲಿ ವಿದೇಶದ "ಡೀಪ್ ಸೀ ಫಿಶಿಂಗ್ ಬೋಟ್‌ಗಳು" ಕೆಲಸ ನಿರ್ವಹಿಸುತ್ತಿವೆ. ಈ "ಡೀಪ್ ಸೀ ಫಿಶಿಂಗ್ ಬೋಟ್‌ಗಳ" ಮೂಲಕ ಮೀನುಗಳನ್ನು ಹಿಡಿದು, ಅವುಗಳನ್ನು ಸಂಸ್ಕರಿಸಿ ಪ್ಯಾಕೆಟ್ ಮಾಡಿ ಮಾರಾಟ ಮಾಡುತ್ತಿದ್ದಾರೆ. ಇವುಗಳ ಜೊತೆ ನಮ್ಮ ನಾಡ ದೋಣಿಗಳು, ಟ್ರಾಲರ್‌ಗಳು, ಜಿಲ್ಲೆಟ್‌ಗಳು ಯಾವ ರೀತಿ ಸ್ಪರ್ಧಿಸುವುದಕ್ಕೆ ಸಾಧ್ಯ? ಇವರುಗಳು ಬದುಕಬೇಕೇ ಅಥವಾ ಬೇಡವೇ? ಪರದೇಶದ ಡೀಪ್ ಸೀ ಫಿಶಿಂಗ್ ಬೋಟ್‌ಗಳಿಗೆ ಪ್ರವೇಶಾವಕಾಶ ಕೊಡತಕ್ಕ ಕೇಂದ್ರ ಸರ್ಕಾರದ ನೀತಿ ಬಗ್ಗೆ, ಇದು ನಿಮ್ಮ ನೀತಿ ಎಂದು ನಾನು ಹೇಳುವುದಿಲ್ಲ. ಕೇಂದ್ರ ಸರ್ಕಾರದ ನೀತಿ ಬಗ್ಗೆ ನೀವೇನಾದರೂ ಪ್ರತಿಭಟನೆ ಸಲ್ಲಿಸಿದ್ದೀರಾ? ಪ್ರತಿಭಟನೆಯನ್ನು ಏಕೆ ಸಲ್ಲಿಸ ಬಾರದು? ಪ್ರತಿಭಟನೆ ಸಲ್ಲಿಸಿದರೆ ನಮ್ಮ ಮೀನುಗಾರರ ಜೀವನಕ್ಕೆ ಅನುಕೂಲವಾಗುತ್ತದಾದ್ದರಿಂದ ಇದನ್ನು ತಾವು ಮಾಡಬೇಕು. ನಮ್ಮ ಜಿಲ್ಲೆಯ ಮತ್ತೊಂದು ಪ್ರಮುಖ ಬೆಳೆಯಾಗಿರುವ ಅಡಿಕೆ ಮೇಲೆ ತಾವು ಕಣ್ಣಿಟ್ಟಿದ್ದೀರಿ. ಅದಕ್ಕೆ ಶೇಕಡ 5 ರಿಂದ 6ಕ್ಕೆ ಸುಂಕ ಏರಿಸಿದ್ದೀರಿ. ಅಡಿಕೆಯಲ್ಲಿ ಸೆಕೆಂಡ್ ವ್ಯಾಪಾರ ನಡೆಯುತ್ತಿದೆ. ಅಂದರೆ, ಅಡಿಕೆ ಮಾರುಕಟ್ಟೆಗೆ ಬಾರದೆ, ಅಡಿಕೆ ವ್ಯಾಪಾರಸ್ಥರ ಮನೆಗೆ ಹೋಗಿ ಖರೀದಿಸಿ, ನಂತರ ಅದನ್ನು ಉತ್ತರ ಪ್ರದೇಶದಂಥ ಸ್ಥಳಗಳಿಗೆ ರವಾನಿಸುವಂಥ ಕೆಲಸ ನಡೆಯುತ್ತಿದೆ. ಇದರಿಂದ ಎರಡು ರೀತಿಯ ಪರಿಣಾಮಗಳಾಗುತ್ತವೆ. ಮೊದಲನೆಯದು, ಇದರ ಉತ್ಪನ್ನ ಕಡಿಮೆಯಾಗುವುದಲ್ಲದೆ, ಸರ್ಕಾರಕ್ಕೆ ತೆರಿಗೆ ಬರುವುದು ಕಡಿಮೆಯಾಗುತ್ತದೆ. ಮತ್ತೊಂದು, ಅಡಿಕೆ ಬೆಳೆಗಾರರ ಮಾರುಕಟ್ಟೆ ಏನಿದೆ, ಅದು ಕುಸಿಯುವುದಕ್ಕೆ ಕಾರಣವಾಗುತ್ತದೆ. ಅಡಿಕೆ ಮಾರುಕಟ್ಟೆಗೆ ಬರುವುದಿಲ್ಲ, ಟೆಂಡರ್ ಹಾಕದಿದ್ದಾಗ ಮಾರುಕಟ್ಟೆ ಕುಸಿಯುತ್ತದೆ. ಇದರಿಂದ ರೈತರಿಗೆ ಅಪಾರ

ನಷ್ಟವುಂಟಾಗುತ್ತದೆಂಬ ಮಾತನ್ನು ಹೇಳುತ್ತೇನೆ. ಅಡಿಕೆ ಬೆಳೆಗೆ ಸುಂಕವನ್ನು ಶೇಕಡ 5 ರಿಂದ 2ಕ್ಕೆ ಇಳಿಸಿದರೂ ಕೂಡ ಸರ್ಕಾರದ ಬೊಕ್ಕಸಕ್ಕೆ ಬರತಕ್ಕಂಥ ಹಣ ಅಷ್ಟೇ ಆಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲವೆನ್ನುವ ಆಶ್ವಾಸನೆಯನ್ನು ನಾನು ಕೊಡುತ್ತೇನೆ. ದಯವಿಟ್ಟು ಆ ಕೆಲಸ ಮಾಡಿ ಉಪಕಾರ ಕಟ್ಟಿಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಇದು ಸರ್ಕಾರದ ದೃಷ್ಟಿಯಿಂದಲ್ಲ, ರೈತರ ದೃಷ್ಟಿಯಿಂದ ಹೇಳುತ್ತಿದ್ದೇನೆ. ಮಾರುಕಟ್ಟೆ ಕುಸಿದರೆ ಬೆಳೆ ಬೆಳೆಯುವಂಥ ರೈತರಿಗೆ ಅಪಾರ ಹಾನಿಯಾಗುತ್ತದೆನ್ನುವ ಉದ್ದೇಶದಿಂದ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ನಮ್ಮ ಜಿಲ್ಲೆ ಮೂಲತಃ ಅರಣ್ಯ ಜಿಲ್ಲೆಯಾಗಿದ್ದು, ಅರಣ್ಯ ಬೆಳೆಸಬೇಕೆಂದು ಈಗಿನ ಸರ್ಕಾರ ಮತ್ತು ಕೇಂದ್ರ ಸರ್ಕಾರ ಹೇಳುತ್ತದೆ. ಅರಣ್ಯ ಬೆಳೆಸುವ ಕಾರ್ಯಕ್ರಮದಲ್ಲಿ ಅನೇಕ ಸರ್ಕಾರಗಳಿಂದಲೂ ಕೂಡ ಅರಣ್ಯ ಕಡಿತವಾಗುತ್ತದೆ. ಅನೇಕ ಯೋಜನೆಗಳ ಸಲುವಾಗಿ ಅರಣ್ಯ ಬೇಕಾಗಿರಬಹುದು, ಸರ್ಕಾರಕ್ಕೆ ಬೇಕಾಗಿರಬಹುದು, ಬೇಡದಿರಬಹುದು ಜನರಿಗೆ ಬೇಕಿರಬಹುದು, ಆದರೆ ನಮ್ಮ ಜಿಲ್ಲೆಯ ವಲಯದಲ್ಲಿ ಯಾವುದೇ ದೊಡ್ಡ ಕಾರ್ಖಾನೆ ಬರುವುದಕ್ಕೆ ಅವಕಾಶವಿಲ್ಲ. ಏಕೆಂದರೆ, ಪರಿಸರದ ದೃಷ್ಟಿಯಿಂದ ಈ ದೊಡ್ಡ ಉದ್ದಿಮೆಗಳ ಬರುವುದಕ್ಕೆ ಸಾಧ್ಯವಿಲ್ಲದಿರತಕ್ಕಂಥ ಸ್ಥಳಗಳಲ್ಲಿ ದೊಡ್ಡ ಉದ್ದಿಮೆಗಳು ತಲೆಯೆತ್ತಿದರೆ ಜನರನ್ನು ಅಲ್ಲಿಂದ ಎಬ್ಬಿಸತಕ್ಕಂಥ ಪ್ರಮೇಯ ಬರುತ್ತದೆ. ಅವರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಿಕೊಡುವುದಕ್ಕೆ ನಮ್ಮ ಜಿಲ್ಲೆಯಲ್ಲಿ ಸ್ಥಾನವಿಲ್ಲ. ಆದರೆ, ನಮ್ಮ ಇಡೀ ಜಿಲ್ಲೆಯನ್ನು 'ಪ್ರವಾಸೋದ್ಯಮ ಜಿಲ್ಲೆ'ಯನ್ನಾಗಿ ಪರಿವರ್ತಿಸಬಹುದು. ಇದು ನಿಸರ್ಗ ಸಂಪದ್ಭರಿತವಾಗಿರುವ ಜಿಲ್ಲೆ, ಅನೇಕ ಕರಾವಳಿಗಳು, ಅನೇಕ ತರಹದ ವೈವಿಧ್ಯಮಯ ಜಲಪಾತಗಳು, ಧಾಮಗಳು, ಪುಣ್ಯಕ್ಷೇತ್ರಗಳಿರತಕ್ಕಂಥ ನಮ್ಮ ಜಿಲ್ಲೆಯಲ್ಲಿ ಪ್ರವಾಸಿಗರ ದರ್ಶನಕ್ಕೆ ಅತ್ಯಂತ ಉತ್ತಮವಾಗಿರುವ ಜಿಲ್ಲೆಯಾಗಿದೆ. ಈ ಜಿಲ್ಲೆಗೆ ಇನ್‌ಫ್ರಾಸ್ಟ್ರಕ್ಚರ್ ಒದಗಿಸಿಕೊಡತಕ್ಕ ಯಾವುದೇ ಕಾರ್ಯಕ್ರಮ ತಮ್ಮಲ್ಲಿಲ್ಲ. ನಮ್ಮ ಜಿಲ್ಲೆಯ ಹೊನ್ನಾವರದಲ್ಲಿ ಒಂದು ಐ.ಟಿ.ಐ. ಸಂಸ್ಥೆ ಇದೆ, ಈ ಶಾಲೆಯ ಸಲುವಾಗಿ ದೊಡ್ಡ ಕಟ್ಟಡ ಕಟ್ಟಿದ್ದು, ಅಲ್ಲಿ ಎರಡು ವೊಕೇಶನ್‌ಗಳಿವೆ. ಸದನದಲ್ಲಿ ಕೈಗಾರಿಕಾ ಸಚಿವರು ಕುಳಿತಿದ್ದಾರೆ. ಕೈಗಾರಿಕೆಗೆ ಪೂರಕವಾಗಿರತಕ್ಕ ಮಾನವ ಸಂಪನ್ಮೂಲ ಒದಗಿಸತಕ್ಕಂಥ ಒಂದು ಅವಕಾಶ ಈ ಐಟಿಐನಲ್ಲಿದೆ. ಇನ್ನು 4-8 ಎಲೆಕ್ಟ್ರಾನಿಕ್ಸ್, ಅಟೋಮೊಬೈಲ್ ಇಂಜಿನಿಯರಿಂಗ್, ಮುಂತಾದ ಅನೇಕ ವೊಕೇಶನಲ್ ಕೋರ್ಸ್‌ಗಳನ್ನು ಪ್ರಾರಂಭಿಸುವುದಕ್ಕೆ ಅನುಕೂಲತೆ ಇದೆ. ಆದರೂ ಸರ್ಕಾರ ಮಾಡುತ್ತಿಲ್ಲ. ಡೀಸೆಲ್ ಮೆಕಾನಿಕ್ ಎನ್ನುವ ಒಂದು ವೊಕೇಶನ್ ಇದೆ. ಈ ವೊಕೇಶನ್ ಅನ್ನು ಪ್ರಾರಂಭ ಮಾಡಿದ 9 ತಿಂಗಳಲ್ಲಿ ಭೋದಿಸಲು ಯಾವುದೇ ಒಬ್ಬ ಅಧ್ಯಾಪಕ ಕೂಡ ಇರಲಿಲ್ಲ. ನಾನು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಈ ದಿಸೆಯಲ್ಲಿ ವ್ಯವಹರಿಸಿದ ಬಳಿಕ ಕೇವಲ ಎರಡು ತಿಂಗಳಿನಲ್ಲೇ ನೇಮಕ ಮಾಡಿಕೊಳ್ಳಲಾಗಿದೆ, ಇದು ಖಾಯಂ ಅಲ್ಲ. ಐ.ಟಿ.ಐ. ಇರುವುದು ಪ್ರಯೋಗ ಮಾಡುವುದಕ್ಕಾಗಿ. ಆ ಸಂಸ್ಥೆಯಲ್ಲಿ ವಿದ್ಯೆ ಕಲಿಸುವಂತಹ ಶಿಕ್ಷಕರು ಇಲ್ಲದೆ ಹೋದರೆ ಆ ವಿದ್ಯಾರ್ಥಿಗಳು ಏನು ಕಲಿಯುತ್ತಾರೆ? ಇನ್ನು ತಾವು ಅಸಂಘಟಿತ ಕಾರ್ಮಿಕರ ಕಲ್ಯಾಣದ ಬಗ್ಗೆ ವಿಚಾರ ಮಾಡಿದ್ದೀರಿ. ಜೀತದಾಳುಗಳಾಗಿ ದುಡಿಯುವ ಕೆಲಸಗಾರರ, ಕಾರ್ಮಿಕರ ಬಗ್ಗೆ ಏನು ಯೋಚಿಸಿದ್ದೀರಿ? ಅನೇಕ ವರ್ಷಗಳಿಂದಲೂ 300 ರೂಪಾಯಿಗಳ ಸಂಬಳ ಪಡೆದುಕೊಂಡು ದುಡಿಯತಕ್ಕಂಥವರಿದ್ದಾರೆ, ಬಟ್ಟೆ ತಯಾರಿಕೆ ಸಂಸ್ಥೆಯಲ್ಲಿ ಕಳೆದ ಹತ್ತು ವರ್ಷಗಳಿಂದ 500 ರೂಪಾಯಿ ಸಂಬಳಕ್ಕೆ ದುಡಿಯತಕ್ಕಂಥವರಿದ್ದಾರೆ, ಹಾಗೆಯೇ 100 ರಿಂದ 600

ರೂಪಾಯಿಗಳವರೆಗೆ ಸಂಬಳ ಪಡೆದು ದುಡಿಯುವ ಅರೆಕಾಲಿಕ ಉಪನ್ಯಾಸಕರಿದ್ದಾರೆ, ಕಳೆದ 10-12 ವರ್ಷಗಳಿಂದ ದುಡಿಯುತ್ತಿರುವ ಅನೇಕ ದಿನಗೂಲಿ ನೌಕರರಿದ್ದಾರೆ ಈ ರೀತಿ ಸರ್ಕಾರದಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿಗಳಿಗೆ ಯಾವ ಪರಿಹಾರ ಸೂಚಿಸುತ್ತೀರಿ? ಅಸಂಘಟಿತ ಕಾರ್ಮಿಕರ ಮೇಲೆ ನಿಮಗೆ ಯಾವ ರೀತಿ ಕನಿಕರವಿದೆಯೋ ಅದೇ ರೀತಿಯ ಕನಿಕರ ಸರ್ಕಾರದ ಕೆಲಸ ಮಾಡುತ್ತಿರುವ ಉದ್ಯೋಗದಲ್ಲಿರುವ ಜನರ ಮೇಲೂ ಕೂಡ ಇರಲೆಂಬ ವಿಚಾರವನ್ನು ತಮ್ಮ ಮುಂದಿಡುತ್ತೇನೆ. ಇನ್ನು ಒಂದೆರಡು ಮಾತುಗಳನ್ನು ಹೇಳಿ ಮುಗಿಸುತ್ತೇನೆ. ಇತ್ತೀಚೆಗೆ ಕಾಲೇಜುಗಳು ಮುಗಿದು, ಅಧ್ಯಾಪನ ಕಾರ್ಯ ಮುಗಿದು, ಪರೀಕ್ಷೆ ಸನ್ನಿಹಿತವಾಗಿರುವ ಸಮಯದಲ್ಲಿ ನಾಲ್ಕನೆಯ ಗ್ರೂಪ್ ವಿದ್ಯಾರ್ಥಿಗಳ ವಿಚಾರದಲ್ಲಿ ಭೋದನಾ ಶುಲ್ಕ ಮತ್ತು ಪ್ರಯೋಗಾಲಯ ಶುಲ್ಕ, ಇವೆರಡನ್ನೂ ಕಾಲೇಜುಗಳು, ವಿದ್ಯಾ ಸಂಸ್ಥೆಗಳು ಕಡ್ಡಾಯವಾಗಿ ವಸೂಲು ಮಾಡಬೇಕೆಂಬ ಒಂದು ನೀತಿಯನ್ನು ತಾವು ಅನುಸರಿಸಿದ್ದೀರಿ. ಅವರ ಕಾಲೇಜು ಮುಗಿದಿದೆ, ಅಧ್ಯಾಪನ ಮುಗಿದಿದೆ, ಮುಂದಿನ ತಾಂತ್ರಿಕ ಪರೀಕ್ಷೆಗೆ ಕುಳಿತುಕೊಳ್ಳುವವರಿದ್ದಾರೆ, ಅವರಿಂದ ಯಾವ ರೀತಿ ಹಣವನ್ನು ವಸೂಲು ಮಾಡುತ್ತೀರಿ? ಯಾವುದು ಅಮಲ್ದಾರಿ ಆಗುವುದಿಲ್ಲವೋ, ಅಂತಹ ಕಾನೂನು, ಆದೇಶಗಳಿಗೆ ಕಿಮ್ಮತ್ತಿಲ್ಲ. ಅದಕ್ಕೋಸ್ಕರ, ಇದನ್ನು ಈ ವರ್ಷಕ್ಕಾದರೂ ಹಿಂತೆಗೆದುಕೊಳ್ಳಬೇಕು. ಮತ್ತೊಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ನಾಲ್ಕನೇ ದರ್ಜೆಯಲ್ಲಿರುವ, ಪಾಠ ಕಲಿಯತಕ್ಕಂಥ ಬಡ ವಿದ್ಯಾರ್ಥಿಗಳು ಯಾವ ರೀತಿ ಅನ್ಯಾಯ ಮಾಡಿದ್ದಾರೆ? ಎಲ್ಲಾ ಗ್ರೂಪ್‌ಗಳಿಗೂ ತಾವು ಶುಲ್ಕದ ವಿನಾಯಿತಿ ಕೂಡ ಕೊಡುತ್ತೀರಿ, ಈ ಗ್ರೂಪ್‌ನಲ್ಲಿರುವ ಬಡವರಿಗೇಕೇ ವಿನಾಯಿತಿ ಕೊಡುತ್ತೀರಿ, ಈ ಗ್ರೂಪ್‌ನಲ್ಲಿರುವ ಬಡವರಿಗೇಕೇ ವಿನಾಯಿತಿ ಕೊಡುತ್ತಿಲ್ಲ ಎಂಬ ಪ್ರಶ್ನೆಯನ್ನು ನಾನು ತಮ್ಮ ಮುಂದಿಡುತ್ತಿದ್ದೇನೆ. ಇದನ್ನು ಕೂಡ ಅಳವಡಿಸಿಕೊಂಡು, ಯೋಚಿಸಿ ಕೆಲಸ ಮಾಡಬೇಕು ಮತ್ತು ನಮ್ಮ ಜಿಲ್ಲೆ ಮೇಲೆ ಸ್ವಲ್ಪ ಕನಿಕರವಿರಲೆಂದು ಕೇಳಿಕೊಳ್ಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಉಪಾಧ್ಯಕ್ಷರಾದ ಶ್ರೀ ಎಲ್.ಎಸ್. ಪಾಟೀಲ್‌ರವರು ಪೀಠವನ್ನಲಂಕರಿಸಿದರು.)

+ ಶ್ರೀ ಬಾಳಪ್ಪ ಭೀಮಪ್ಪ ಚಿಮ್ಮನಕಟ್ಟಿ (ಬಾದಾಮಿ) : ಸನ್ಮಾನ್ಯ ಉಪಾಧ್ಯಕ್ಷರೆ, ಹಣಕಾಸು ಹಾಗೂ ಯೋಜನಾ ಸಚಿವರಾದ ಸನ್ಮಾನ್ಯ ಸಿದ್ಧರಾಮಯ್ಯನವರು ಪ್ರಥಮ ಬಾರಿಗೆ ಆಯವ್ಯಯ ಪತ್ರವನ್ನು ಮಂಡಿಸಿರುವಂಥಾದ್ದಕ್ಕೆ ನಾನು ಕೆಲವು ವಿಚಾರಗಳಲ್ಲಿ ಸಹಮತ ವ್ಯಕ್ತಪಡಿಸಿ, ಇನ್ನು ಕೆಲವು ವಿಚಾರಗಳಿಗೆ ನನ್ನ ವಿರೋಧ ವ್ಯಕ್ತಪಡಿಸಬೇಕಾಗುತ್ತದೆ. ಆದರೂ ಕೂಡ ಕಾಲವಕಾಶ ಕಡಿಮೆ ಇರುವುದರಿಂದ, ಸಾಧ್ಯವಾದಷ್ಟು ಮಟ್ಟಿಗೆ ಕೆಲವು ವಿಚಾರಗಳನ್ನು ಪ್ರಸ್ತಾಪಿಸಿ, ಉಳಿದಿರುವ ವಿಚಾರಗಳನ್ನು ನಾಳೆ ಕಾಲಾವಕಾಶ ಸಿಕ್ಕಾಗ ಮಾತನಾಡಬೇಕೆಂದು ತೀರ್ಮಾನಿಸಿದ್ದೇನೆ. ಇವೊತ್ತಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನತೆಯು ಅವರ ಪಕ್ಷಕ್ಕೆ ಮಾನ್ಯತೆ ನೀಡಿ, ಐದು ವರ್ಷಗಳ ಕಾಲ ರಾಜ್ಯದ ಆಡಳಿತ ನಡೆಸಲು ಅಧಿಕಾರ ಕೊಟ್ಟಿದ್ದಾರೆಂದ ಮಾತ್ರಕ್ಕೆ ಅವರು ಒಂದು ವಿಚಾರ ತಿಳಿದುಕೊಳ್ಳಬೇಕು. ಏನೆಂದರೆ, 'ನಾವು ಮಾಡಿರುವ ಸಾಧನೆಗೆ ಜನರು ಮಾನ್ಯತೆ ಕೊಟ್ಟಿದ್ದಾರೆ' ಎಂದು ಏನು ತಿಳಿದುಕೊಂಡಿದ್ದಾರೆ, ಅದು ತಪ್ಪು. ನಾನು ಇದರ ಬಗ್ಗೆ ಸ್ಪಷ್ಟವಾಗಿ ಹೇಳುವುದಾದರೆ ಜನತಾದಳ ಬೇಕು ಎಂದೇನು ಅವರು ಆರಿಸಲಿಲ್ಲ. ಕಾಂಗ್ರೆಸ್ ಬೇಡವಾಗಿತ್ತು, ಅದಕ್ಕೋಸ್ಕರ ಪರ್ಯಾಯವಾದ

ಪಕ್ಷಬೇಕಾಗಿತ್ತು, ನಾನೇ ಒಬ್ಬ ಪಕ್ಷದವನಾಗಿ ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ನಮ್ಮ ಪಕ್ಷದಲ್ಲಿರತಕ್ಕ ಅಸಮತೋಲನ, ನ್ಯೂನತೆಗಳನ್ನು ಜನರು ನೋಡಿ ಬೇಸತ್ತು ಇದಕ್ಕೆ ಏನಾದರೂ ಪರ್ಯಾಯವಾದ ವ್ಯವಸ್ಥೆ ನಮ್ಮ ರಾಜ್ಯಕ್ಕೆ ಬೇಕು ಎಂದು ಇವರಿಗೆ ಮತವನ್ನು ಹಾಕಿದ್ದಾರೆ. ಬಹುಶಃ ಜನತಾದಳದವರಿಗೂ ಸಹ ಇಷ್ಟೊಂದು ಬೆಂಬಲ ಸಿಗುವ ಬಗ್ಗೆ ಅನುಮಾನವಿದ್ದರೂ ಸಹ ಜನರು ಅವರಿಗೆ ಬೆಂಬಲವನ್ನು ಕೊಟ್ಟಿದ್ದಾರೆ. ಬಹಳ ಸಂತೋಷ. ಅವರು ಜನರಿಗೆ ಒಳ್ಳೆಯ ಅಧಿಕಾರವನ್ನು ಈ ಐದು ವರ್ಷಗಳಿಗೆ ಕೊಟ್ಟು ಒಳ್ಳೆಯ ಹೆಸರನ್ನು ಪಡೆಯಲಿ ಎಂದು ಅಭಿಮಾನದ ಮಾತುಗಳನ್ನು ಪ್ರಜಾಪ್ರಭುತ್ವದ ನೀತಿಯಲ್ಲಿ ಹೇಳಲೇ ಬೇಕಾಗುತ್ತದೆ. ಇವತ್ತು ಸರ್ಕಾರದ ಬಗ್ಗೆ ಮಾತನಾಡುವಾಗ ನಾವು ವಿಧಾನಸೌಧದ ಮೂರನೆಯ ಮಹಡಿಯಿಂದ ವಿಚಾರವನ್ನು ಮಾಡಿದರೆ ತಪ್ಪಾಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅನೇಕ ಮಂತ್ರಿಗಳ ಕೊಠಡಿಗಳನ್ನು ನಾವು ನೋಡಿದಾಗ, ಬಹುಶಃ ರಾಮಕೃಷ್ಣ ಹೆಗಡೆಯವರಿದ್ದ ಕಾಲದಲ್ಲಿ, ಹಿಂದಿನ ಸರ್ಕಾರವಿದ್ದಾಗ ಮಂತ್ರಿಗಳು ತಮಗೆ ಬೇಕಾದಂಥ ಸಿಬ್ಬಂದಿಯನ್ನು ತೆಗೆದುಕೊಳ್ಳತಕ್ಕ ಸಮಯದಲ್ಲಿ ಸ್ವಜಾತಿಯವರನ್ನಾಗಲಿ, ಅವರಿಗೆ ಬೇಕಾಗಿರತಕ್ಕವರನ್ನಾಗಲಿ P.A.ಗಳನ್ನಾಗಿ ತೆಗೆದುಕೊಳ್ಳಬಾರದೆಂದು ಕಟ್ಟು ನಿಟ್ಟಾದ ನಿಲುವು ಇತ್ತು. ಅದು ಈಗ ಸಡಿಲಗೊಂಡು, ಈ ಮೂರು ತಿಂಗಳುಗಳಲ್ಲಿ ಈ ವ್ಯವಸ್ಥೆಯನ್ನು ನೋಡಿದಾಗ ಅಧಿಕಾರಿಗಳು ಮಂತ್ರಿಗಳ ಕೊಠಡಿಗಳು ಬದಲಾಗಿ ಅವರು ಯಾವ್ಯಾವ ಸಮಾಜಕ್ಕೆ ಸೇರಿದ್ದಾರೋ ಅದರ ರೂಪ ಅವರ ಕೊಠಡಿಯಲ್ಲಾಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ನಾವು ಯಾವುದಾದರೊಬ್ಬರು ಮಂತ್ರಿಗಳ ಕೊಠಡಿಗೆ ಹೋದಾಗ, ಮಂತ್ರಿಗಳ ಹತ್ತಿರ ಹೋದಾಗ ಅವರ ಸಮಾಜದವರೇ ಆದP.A.ಗಳು, ಅವರದ್ದೇ ಸಮಾಜದವರಾದ P.S.ಗಳು ಅವರದ್ದೇ ಸಮಾಜದವರು ಅವರ ಮಂತ್ರಿಗಳನ್ನು ಭೇಟಿ ಮಾಡುವುದಾದರೆ ಸರ್ಕಾರವನ್ನು ನಡೆಸತಕ್ಕ ನಿಮಗೆ ಇದು ಒಳ್ಳೆಯ ಲಕ್ಷಣವನ್ನು ತರತಕ್ಕದಲ್ಲವೆಂದು ನನ್ನ ಭಾವನೆ. ಆ ದೃಷ್ಟಿಯಿಂದ ತಾವೂ ಸಹ ಒಂದು ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಿ ತಮ್ಮ ಸ್ವಜಾತಿಯವರನ್ನು ಪಿಎ, ಪಿಎಸ್‌ಗಳಾಗಿ ತೆಗೆದುಕೊಳ್ಳಬಾರದೆಂಬ ನಿಯಮವನ್ನು ಮಾಡಿದರೆ ಬಹುಶಃ ಸರ್ಕಾರಕ್ಕೆ ಇದರಿಂದ ಒಳ್ಳೆಯ ಹೆಸರು ಬಂದೀತು ಎಂದು ನನ್ನ ಭಾವನೆ. ಇಂಥ ಕೆಲವೊಂದು ವಿಚಾರಗಳನ್ನು ನೋಡಿದಾಗ, ಹಿಂದೆ ರಾಜಮಹಾರಾಜರ ಕಾಲದಲ್ಲಿ ಗೂಡಾಚಾರದ ವ್ಯವಸ್ಥೆ ಇತ್ತು. ಈಗಲೂ ಸಹ ಇಂಟಲಿಜೆನ್ಸ್ ವಿಂಗ್ ಎನ್ನತಕ್ಕ ವಿಭಾಗ ನಮ್ಮಲ್ಲಿದೆ. ಅದರ ದುರುಪಯೋಗವಾದಾಗ ಸರ್ಕಾರ ಕೈಬಿಟ್ಟು ಹೋಗುವ ಮಟ್ಟಕ್ಕೆ ಸಹ ಬರುತ್ತದೆ. ಆದರೆ ಈ ಇಂಟಲಿಜೆನ್ಸ್ ವಿಂಗನ್ನು ಚೆನ್ನಾಗಿ ಉಪಯೋಗ ಮಾಡಿಕೊಂಡರೆ ಸರ್ಕಾರಕ್ಕೆ ಒಳ್ಳೆಯದಾಗುತ್ತದೆ. ನಾವು ಸದನದಲ್ಲಿ ಹೇಳತಕ್ಕ ವಿಚಾರಗಳು ಬೇರೆ. ಆದರೆ ಸರ್ಕಾರದ ವೈಫಲ್ಯಗಳೇನಿವೆ ಅದರ ಬಗ್ಗೆ ಜನಪ್ರತಿನಿಧಿಗಳಲ್ಲಿ ಇರತಕ್ಕಂಥ ಸುಖದುಃಖಗಳನ್ನು ತಿಳಿದುಕೊಳ್ಳುವುದಕ್ಕೆ ಬಹುಶಃ ಈ ಇಲಾಖೆಯಿಂದ ಸಾಧ್ಯವಾಗಬಹುದು. ಉದಾಹರಣೆಗೆ ಅನೇಕ ಕಡೆ ದರೋಡೆಗಳಾಗುತ್ತದೆ, ಕಾನೂನು ವ್ಯವಸ್ಥೆ ಹದಗೆಡುತ್ತದೆ, ಅನೇಕ ಗುಂಪುಗಾರಿಕೆ, ವ್ಯತ್ಯಾಸಗಳಾಗಿ ಜಾತಿಯ ಗಲಭೆಗಳಾಗಿ ಏನು ಆಗುತ್ತದೆ ಅದನ್ನು ರಾಷ್ಟ್ರದಲ್ಲಿ ಸಂಪೂರ್ಣವಾಗಿ ತೆಗೆಸಿ ಹಾಕಲು ಈ ಇಂಟಲಿಜೆನ್ಸ್ ವಿಂಗ್‌ನ್ನು ಚೆನ್ನಾಗಿ ಅಭಿವೃದ್ಧಿಪಡಿಸಬೇಕಾಗುತ್ತದೆ. ಇದಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟರೆ ಸರ್ಕಾರಕ್ಕೆ ಅನೇಕ ಸಹಾಯವನ್ನು ಕೊಡಲು ಸಹ ಅದು ಸಹಾಯ ವಾಗಬಹುದೆಂದು ನನ್ನ ಅನಿಸಿಕೆ. ಅದರಿಂದಾಗಿ ಸರ್ಕಾರವಾಗಲಿ, ಮಂತ್ರಿಗಳಾಗಲಿ ಇದರ ಬಗ್ಗೆ ಬಹಳ ಒತ್ತಕೊಟ್ಟು ಮಹತ್ವವನ್ನು ನೀಡಿದ್ದರೆ

ಅದರಿಂದ ದುರುಪಯೋಗವಾಗಿರತಕ್ಕ ಹಲವಾರು ಘಟನೆಗಳು ಸಹ ಇದೆ. ಆದರು ಸಹ ನಾವು ಒಳ್ಳೆಯದನ್ನು ಆ ಒಂದು ಇಲಾಖೆಯಿಂದ ಪಡೆದುಕೊಳ್ಳಲು ಸಹ ಸಾಧ್ಯವಿದೆ. ಆ ದೃಷ್ಟಿಯಿಂದ ಇಂದು ಬಹಳ ಅನುಭವವಿರತಕ್ಕ ದೇವೇಗೌಡರೇನು ಮುಖ್ಯಮಂತ್ರಿಗಳಾಗಿ ಬಂದಿದ್ದಾರೆ ಅವರ ಆಡಳಿತ ಒಳ್ಳೆಯ ರೀತಿಯಿಂದ ಯಶಸ್ವಿಯಾಗಬೇಕಾಗಿದ್ದರೆ ಆ ಇಂಟಲಿಜೆನ್ಸ್ ವಿಂಗ್ ಎಂದು ಏನಿದೆ ಅದನ್ನು ಬಲಪಡಿಸಬೇಕಾಗುತ್ತದೆ. ಸಿಬ್ಬಂದಿಯನ್ನು ಸಹ ಹೆಚ್ಚುಗೊಳಿಸಬೇಕಾಗುತ್ತದೆ. ಇನ್ನು ಸರ್ಕಾರವನ್ನು ನಡೆಸುವವರ ಬಗ್ಗೆ ಎಲ್ಲಾ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ನಮ್ಮ ಬಜೆಟ್‌ನಲ್ಲಿ ಈಗಾಗಲೇ 60 ಪರ್ಸೆಂಟ್ ಭಾಗವನ್ನು ಸರ್ಕಾರದ ಅಧಿಕಾರಿಗಳಿಗೆ ಕೊಡುತ್ತಿರುವ ವಿಚಾರದಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ನನ್ನ ವೈಯುಕ್ತಿಕವಾದ ವಿಚಾರವೇನೆಂದರೆ, ಸರ್ಕಾರದ ಎಲ್ಲಾ ಕಾರ್ಯಕ್ರಮಗಳು ಬಹುಶಃ ನಾನು ಸಹ ಈ ಅಧಿವೇಶನದಲ್ಲಿ ಭಾಗವಹಿಸಿ, ನನ್ನ ಅನುಭವದಲ್ಲಿ ಅರ್ಥ ಮಂತ್ರಿಗಳು ಇದನ್ನು ಇಲ್ಲಿ ಮಂಡನೆ ಮಾಡುತ್ತಾರೆ ವಿರೋಧ ಪಕ್ಷದವರಾದ ನಾವೆಲ್ಲರು ಅದಕ್ಕೆ ವಿರೋಧವನ್ನು ವ್ಯಕ್ತಪಡಿಸುತ್ತೇವೆ. ಅದೇ ಯೋಜನೆಗಳು ಅದೇ ವಿಚಾರಗಳನ್ನು ಕೇಳಿ ಕೇಳಿ ನನಗೇನಾಗುತ್ತಿದೆ ಎಂದರೆ ಬಹುಶಃ ಹೊಸದಾಗಿ ಆಡಳಿತವನ್ನು ನಡೆಸತಕ್ಕಂಥ ಸರ್ಕಾರದವರು ದಿಟ್ಟ ಹೆಜ್ಜೆಯನ್ನಿಟ್ಟರೆ ಒಳ್ಳೆಯದೆಂದು ಹೇಳುತ್ತೇನೆ. ನಮಗೆಲ್ಲ ಆಗಿರುವ ಕಹಿಯಾದ ಅನುಭವವೇನೆಂದರೆ, ನಾವು ಸದನದಲ್ಲಿ ಮುಖ್ಯ ಕಾರ್ಯದರ್ಶಿಯವರಿಂದ ಪ್ರಾರಂಭವಾಗಿ ತಾಲ್ಲೂಕು ಮಟ್ಟದಲ್ಲಿರುವ ಅಧಿಕಾರಿಗಳ ಬಗ್ಗೆ ಕೇಳಿದ್ದೇವೆ. ಆ ಎಲ್ಲಾ ಅಧಿಕಾರಿಗಳ ಬಗ್ಗೆ ಎಲ್ಲಾ ಕ್ಷೇತ್ರ ದಲ್ಲಿರತಕ್ಕ ಅನುಭವದ ಆಧಾರದ ಮೇಲೆ ಇದನ್ನು ತೆಗೆದುಕೊಂಡು ಇದನ್ನು ಪರಾಮರ್ಶಿಸಬೇಕಾದ ಅಗತ್ಯ ಇವತ್ತು ನಮಗೆ ಇವತ್ತು ಬಂದಿದೆ. ನಾವು ಇಂದು ಯಾವುದೆ ಬಸ್ಸ್‌ನಲ್ಲಿ ಹೋಗಲಿ, ಬಸ್ ಸ್ಟ್ಯಾಂಡ್‌ಗೆ ಹೋಗಲಿ, ರೈಲ್‌ನಲ್ಲಿ ಹೋಗಿ ಕುಳಿತುಕೊಂಡರೂ ಸಹ ರಾಜಕೀಯವನ್ನು ದ್ವೇಷಿಸಿತ, ರಾಜಕಾರಣಿಗಳನ್ನು ಬೈಯತಕ್ಕ ಮಾತುಗಳನ್ನು ಬಿಟ್ಟರೆ ಬಹುಶಃ ಉಳಿದವರ ಬಗ್ಗೆ ದ್ವೇಷದಿಂದ ಕಾಣತಕ್ಕ ವಾತಾವರಣವಿಲ್ಲ. ಇವತ್ತು ನಾವು ಇದರ ಬಗ್ಗೆ ಪರಾಮರ್ಶಿಸಬೇಕಾಗಿದೆ. ರಾಜಕಾರಣ ಮಾಡತಕ್ಕವರೆಷ್ಟು ಇದರಲ್ಲಿ ಭಾಗಿಗಳಾಗಿ ಆ ನ್ಯೂನ್ಯತೆಗಳಿಗೆ ಕಾರಣರಾಗಿದ್ದಾರೆ ಎಂಬುದು ಕೂಡ ಇಲ್ಲಿ ಪರೀಕ್ಷೆಯಾಗಬೇಕು. ಇವತ್ತು ನಾನು ದುರಾದೃಷ್ಟದಿಂದ ಹೇಳುವುದಾದರೆ, ಈ 40 ವರ್ಷಗಳ ಇತಿಹಾಸದಲ್ಲಿ ಸರ್ಕಾರದ ಅಧಿಕಾರಗಳೇನು ಅನುಭವಿಸಿಕೊಂಡು ಬಂದಿದ್ದಾರೆ ಅವರ ದುರಾದೃಷ್ಟದಿಂದ ಇವತ್ತು ಅನೇಕ ಯೋಜನೆಗಳು ವಿಫಲಗೊಂಡಿದೆ. ಅದರ ಬಗ್ಗೆ ಧೈರ್ಯವಾಗಿ ನಾವು ಯಾರೂ ಮಾತನಾಡಲು ಹೋಗಿಲ್ಲವೆಂದರೆ ತಪ್ಪಾಗುವುದಿಲ್ಲ. ಆ ದೃಷ್ಟಿಯಿಂದ ನಮ್ಮಲ್ಲಿ ಕಳಕಳಿಯ ವಿನಂತಿ ಏನೆಂದರೆ, ಅಧಿಕಾರಿಗಳ ಮಟ್ಟದಲ್ಲಿರುವ ಈ ವಿಚಾರಗಳು ಸಮಗ್ರವಾಗಿ ಚರ್ಚೆಯಾಗಬೇಕಾಗಿದೆ. ಆ ರೀತಿ ಮಾಡಬೇಕೆಂದಿದ್ದರೆ ಇದರ ಬಗ್ಗೆ ವಿಶೇಷ ಅಧಿವೇಶನವನ್ನು ಕರೆದು ನಮ್ಮಲ್ಲಿರತಕ್ಕ ಕಹಿ ಅನುಭವಗಳನ್ನು, ಇವತ್ತು ಯಾವ್ಯಾವ ಯೋಜನೆಗಳನ್ನು ಎಷ್ಟರಮಟ್ಟಿಗೆ ಕಾರ್ಯಗತಗೊಳಿಸಬೇಕಾಗಿದೆ ಅದರಲ್ಲಿ ಅಧಿಕಾರಿಗಳ ಪಾತ್ರವೇನು ಎಂಬುದರ ಬಗ್ಗೆ, ಈ ಆಯವ್ಯಯವು ಸದುಪಯೋಗವಾಗ ಬೇಕೆಂದಿದ್ದರೆ, ಅದರ ಸಲುವಾಗಿಯೇ ಒಂದು ಅಧಿವೇಶನವನ್ನು ಕರೆದರೆ ಸಮಗ್ರವಾಗಿ ಚರ್ಚೆಯಾಗಿ ಒಳ್ಳೆಯ ಆಡಳಿತಕ್ಕೆ ಕನ್ನಡಿಯಾಗುತ್ತದೆ ಎಂದು ನನ್ನ ಅನಿಸಿಕೆಯನ್ನು ವ್ಯಕ್ತಪಡಿಸುತ್ತೇನೆ. ಅನೇಕ ವಿಚಾರಗಳನ್ನು ಈ ಆಯವ್ಯಯದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಅದು ನೀರಾವರಿ ವಿಚಾರಗಳನ್ನು ಈ ಆಯವ್ಯಯದಲ್ಲಿ

ಪ್ರಸ್ತಾಪ ಮಾಡಿದ್ದೀರಿ. ಅದು ನೀರಾವರಿ ವಿಚಾರದಲ್ಲಾಗಲೀ, ವಿದ್ಯುಚ್ಛಕ್ತಿ ವಿಚಾರ ದಲ್ಲಾಗಲೀ ಅವನ್ನು ನಾನು ಬೇರೆ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ಇನ್ನು ಗ್ರಾಮೀಣ ನಿರುದ್ಯೋಗಿಗಳ ಬಗ್ಗೆಯಾಗಲಿ, ಬಹಳ ಬಡತನವಿರತಕ್ಕ ವಿದ್ಯಾರ್ಥಿಗಳ ಬಗ್ಗೆಯಾಗಲಿ ತಾವು ಕಳಕಳಿಯಿಂದ ಕೆಲವು ವಿಚಾರಗಳನ್ನು ಹೇಳಿದ್ದೀರಿ. ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಪ್ರಸ್ತಾಪ ಮಾಡದಿದ್ದರೆ ತಪ್ಪಾದೀತು ಎಂದು ಹೇಳುತ್ತೇನೆ. ಇವತ್ತು ರಾಜ್ಯದಲ್ಲಿ 200 ಖಾಸಗಿ ಐಟಿಐಗಳಿವೆ. 40 ಸರ್ಕಾರಿ ಐಟಿಐ ಗಳಿವೆ. ಈ ಐಟಿಐ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಸುಮಾರು 15 ಸಾವಿರ. ಅದರಲ್ಲಿ 3000 ಜನ ಉಪನ್ಯಾಸಕರು, ಬಹುಶಃ 7-8 ವರ್ಷಗಳಿಂದ ಇವರುಗಳು ಬೇರೆ ಬೇರೆ ಸಂಸ್ಥೆಗಳ ಅಧೀನದಲ್ಲಿ ಅವರು ಕೊಡತಕ್ಕ ಹಣದಲ್ಲಿ ಕೆಲಸವನ್ನು ಮಾಡುತ್ತಾ ಬಂದಿದ್ದಾರೆ. 8-10 ವರ್ಷಗಳಿಂದ ಸುಮಾರು 15-20ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡಿದಮೇಲೆ ಬೇರೆ ಬೇರೆ ಕೈಗಾರಿಕೆಗಳಲ್ಲಿ ಸೇರಿಕೊಂಡು ನೌಕರಿಯನ್ನು ಪಡೆಯತಕ್ಕ ಅವಕಾಶವಿದೆ. ಮತ್ತು ತಮ್ಮ ಕಾಲಮೇಲೆ ನಿಲ್ಲತಕ್ಕ ಸಾಮರ್ಥ್ಯವನ್ನು ಹೊಂದುತ್ತಾರೆಂದು ಹೇಳಿದರೆ ತಪ್ಪಾಗುವುದಿಲ್ಲ. ಇಂಥ ಸಮಯದಲ್ಲಿ ಅವರು ಅವರ ಭವಿಷ್ಯವನ್ನು ನಿರ್ಮಾಣ ಮಾಡಿಕೊಳ್ಳತಕ್ಕ ಕೋರ್ಸ್‌ಗಳಿಗೆ, ಅವರ ಅನ್ನವನ್ನು ಅವರು ಹುಡುಕಿಕೊಳ್ಳತಕ್ಕಂಥ ಕೋರ್ಸ್‌ಗಳಿಗೆ ಸರ್ಕಾರ ಇಲ್ಲಿಯವರೆಗೂ ಒಂದು ಪೈಸೆ ಸಹ ಅನುದಾನವನ್ನು ಕೊಟ್ಟಿಲ್ಲ. ಅವರು 8-10 ವರ್ಷಗಳಿಂದಲು ಸಹ ಹೋರಾಟ ಮಾಡಿ ಇವತ್ತೂ ಸಹ ಹೋರಾಟ ಮಾಡುತ್ತ ಕುಳಿತಿದ್ದಾರೆ. ಅರ್ಥ ಮಂತ್ರಿಗಳು ಮನವೊಲಿಸಿ ಬಡಮಕ್ಕಳು, ಬಡ ವಿದ್ಯಾರ್ಥಿಗಳ ಬಗ್ಗೆ ತಾವೇನು ಚಿಂತನೆಯನ್ನು ಮಾಡುತ್ತಿದ್ದೀರಿ ಅದರ ರೂಪದಲ್ಲಿ ಐಟಿಐ ವಿದ್ಯಾರ್ಥಿಗಳಿಗೆ, ಉಪನ್ಯಾಸಕರುಗಳಿಗೆ ಗ್ರಾಂಟ್ ಇನ್-ಏಡ್‌ನ ಸೌಲಭ್ಯ ವನ್ನು ಕೊಟ್ಟು ಸ್ವಲ್ಪಮಟ್ಟಿಗೆ ಉಪಕಾರವಾಗುವಂತೆ ಮಾಡಿದರೆ ಸರ್ಕಾರ ಅವರಿಗೆ ಸಂದಿಗ್ಧ ಪರಿಸ್ಥಿತಿಯಲ್ಲಿ ಸಹಾಯ ಮಾಡಿದಂತಾಗುತ್ತದೆ. ತಾವು ಇನ್ನು ಅನೇಕ ಯೋಜನೆಗಳನ್ನು ತಂದಿದ್ದೀರಿ. ಇದಕ್ಕೆ ವಿಶೇಷವಾಗಿ ತಮ್ಮನ್ನು ಮತ್ತು ಸರ್ಕಾರವನ್ನು ಅಭಿನಂದಿಸುವುದೇನೆಂದರೆ, ಈಗ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಕನಕ ಅಧ್ಯಯನ ಪೀಠವೆಂದು ಬಹಳ ವರ್ಷಗಳಿಂದ ಅದು ಆಗಬೇಕೆಂದು ನಮ್ಮ ಆಗ್ರಹವಿತ್ತು. ದಾಸಶ್ರೇಷ್ಠರಲ್ಲಿ ಕನಕದಾಸರು ಅವರ ವಿಚಾರಗಳು ಕನ್ನಡ ನಾಡಿನ ಜನರಿಗೆ ಎಲ್ಲರಿಗೂ ಸಹ ತಲುಪಬೇಕು ಎನ್ನತಕ್ಕ ವಿಚಾರದಲ್ಲಿ ಇಂಥ ಪೀಠವನ್ನು ಮಾಡಿದ್ದೀರಿ, ಅದಕ್ಕಾಗಿ ನಾನು ಅಭಿನಂದಿಸುತ್ತೇನೆ, ಸ್ವಾಗತಿಸುತ್ತೇನೆ.

5.40 ಪಿ.ಎಂ.

ಇನ್ನು ಪಶುಸಂಗೋಪನಾ ಇಲಾಖೆಯಿಂದ ಬಹಳ ದೊಡ್ಡ ಸಹಾಯ ಸಹಕಾರ ಸರ್ಕಾರದಿಂದ ಆಗಬೇಕಾಗಿದೆ. ಆ ದೃಷ್ಟಿಯಿಂದ ತಾವು ಕೂಡ ಹೆಚ್ಚಿನ ಹಣವನ್ನು ಒದಗಿಸಿ ಏನು ಮೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ ಮತ್ತು ಅವರ ಸಲುವಾಗಿ ತೆರಿಗೆಯೊಳಗೆ ಏನು ರಿಯಾಯಿತಿ ಕೊಟ್ಟಿದ್ದೀರಿ, ಅದಕ್ಕೂ ಕೂಡ ನಾನು ಬಹಳ ಅಭಿಮಾನದಿಂದ ಸ್ವಾಗತಿಸುತ್ತೇನೆ. ಕೆಲವೊಂದು ವಿಚಾರಗಳಿಗೆ ನೀವು ಬಹುಶಃ ಸಮಾಜವಾದದ ತಳಹದಿಯಿಂದ ಬಂದಿರತಕ್ಕಂತಹವರು ಬಹುಶಃ ಕ್ರಾಂತಿಕಾರಿ ವಿಚಾರಗಳನ್ನು ಇಟ್ಟುಕೊಂಡಿರುವವರು. ಈ ಆಯವ್ಯಯದ ಒಳಗೆ ತಮ್ಮ ರೂಪ ತಮ್ಮ ಪ್ರದರ್ಶನ ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೆ. ಬಹುಶಃ ಇದು ಆಗಲಿಲ್ಲ. ರಿಸೋರ್ಸ್‌ಸ್ ಮೊಬಿಲೈಸೇಷನ್ ಒಳಗೆ ಏನು ಟ್ಯಾಕ್ಸ್ ಹಾಕಿದರೆ ಬಡ ಜನರ ಮೇಲೆ ಭಾರವನ್ನು ಸಹಿಸುವುದಕ್ಕೆ

ಹೋಗುವುದಕ್ಕಿಂತ ಮೊದಲು ತಾವು ಈ ರಿಸೋರ್ಸ್‌ಸ್ ಮೊಬಲೈಸೇಷನ್ ಇರತಕ್ಕಂಥ ಅಧಿಕಾರಿಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡು ಬಹುಶಃ ಸರ್ಕಾರದಲ್ಲಿ ಸೋರಿ ಹೋಗತಕ್ಕಂತಹ ಆದಾಯ ಏನು ಇದೆ ಅದನ್ನು ತಾವು ತಮ್ಮ ಹಿಡಿತದಲ್ಲಿಟ್ಟುಕೊಂಡು ಅದನ್ನು ಒಂದು ಕಡೆ ಕೂರಿಸಿದರೆ ಬಹುಶಃ ತಾವು ಅರ್ಥ ಮಂತ್ರಿಗಳು ಆಗಿದ್ದಕ್ಕೆ ಸಾರ್ಥಕವಾಗುತ್ತದೆ. ಎಲ್ಲರೂ ಅರ್ಥ ಮಂತ್ರಿಗಳಾಗುತ್ತಾರೆ, ಎಲ್ಲರೂ ಆಯವ್ಯಯವನ್ನು ಮಾಂಡನೆ ಮಾಡುತ್ತಾರೆ, ಆದರೆ ನಿಮ್ಮದೀಗ ಒಂದು ವಿಶೇಷತೆ ಇರಬೇಕಾದರೆ ಆಗ ನಿಮಗೆ ಒಂದು ಒಳ್ಳೆಯ ಹೆಸರು ಬರುತ್ತದೆ. ಆ ಒಳ್ಳೆಯ ಹೆಸರು ಬರುವುದಕ್ಕೆ ಕೂಡ ತಮಗೆ ಕಾಲಾವಕಾಶ ಇದೆ. ನಾನು ಸರ್ಕಾರದಿಂದ ಅನೇಕ ಸಾರ್ವಜನಿಕ ಕೆಲಸಗಳು ಒಳ್ಳೆಯ ರೀತಿಯಿಂದ ಆಗಲಿ ಎಂದು ಹಾರೈಸಿ ತಾವು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಯು.ಆರ್. ಸಭಾಪತಿ (ಉಡುಪಿ) : ಸನ್ಮಾನ್ಯ ಉಪಾಧ್ಯಕ್ಷರೆ, ನೂತನ ಸರ್ಕಾರ ನೂತನ ಅರ್ಥ ಸಚಿವರು ತಮ್ಮ ಚೊಚ್ಚಲ ಮುಂಗಡ ಪತ್ರವನ್ನು ನಮ್ಮ ಮುಂದಿಟ್ಟಿದ್ದಾರೆ. ಕರ್ನಾಟಕದ ಜನತೆ ಇವತ್ತು ಬಹಳಷ್ಟು ಭರವಸೆಗಳಿಗೆ ಒಂದು ಆದರಣೀಯವಾದಂತಹ ಚುಂಬನವನ್ನು ಸಿದ್ಧರಾಮಯ್ಯನವರಿಗೆ ಕೊಟ್ಟರೆ, ಪ್ರಥಮ ಚುಂಬನದಲ್ಲೇ ಅವರು ಧಂತ ಭಗ್ನ ಮಾಡಿ ಬಿಟ್ಟಿದ್ದಾರೆ. ಏಕೆಂದರೆ ಅನೇಕ ಬಡವರ ಬಗ್ಗೆ, ಕಾರ್‍ಯಕ್ರಮಗಳ ಬಗ್ಗೆ ತಮ್ಮ ಚುನಾವಣಾ ಪ್ರಚಾರದಲ್ಲಿ ಸಾಕಷ್ಟು ರೀತಿಯ ಮಾತುಗಳನ್ನು ಒಂದು ಪಕ್ಷ ಅವರು ಆಡಿದ್ದರೂ ಕೂಡ ಇವತ್ತು ಬಡ್ಜೆಟ್‌ನ್ನು ನೋಡುವಾಗ ಬಡವರ ಬಗ್ಗೆ, ಕಾರ್ಮಿಕರ ಬಗ್ಗೆ, ಮೀನುಗಾರರ ಬಗ್ಗೆ, ಮೂರ್ತೆದಾರರ ಬಗ್ಗೆ, ನೇಕಾರರ ಬಗ್ಗೆ ಯಾವುದೇ ರಚನಾತ್ಮಕವಾದ ಕಾರ್ಯಕ್ರಮ ಒಂದೂ ವ್ಯಕ್ತವಾಗುತ್ತಿಲ್ಲ. ಇಷ್ಟೇ ಅಲ್ಲ ನಾವು ಬಹಳ ಚಿಂತನೆ ಮಾಡದೆ ಹೋದರೆ ನಮಗೆ ಮಾತನಾಡುವುದಕ್ಕೂ ಕೂಡ ಇಲ್ಲಿ ಅವಕಾಶವಿಲ್ಲ. ಏಕೆಂದರೆ ಈಗಾಗಲೇ ಅವರ ಆಯವ್ಯಯದ ಒಂದು ತಿರುವಿನ ಮೊದಲ ಪುಟದ ಮೂರನೆಯ ಒಂದು ಪ್ಯಾರಾದಿಂದ ನಾವು ಸುಮಾರು ಆರು ಗಂಟೆ ಕಳೆದುಕೊಂಡಿದ್ದೇವೆ. ಒಂದೇ ಒಂದು ಪೂರ್ವಗ್ರಹ ಪೀಡಿತವಾದ ಒಂದು ಪದ 1989ರ ನಂತರ ನಿಂತು ಹೋದ ಅಂತ ಇವತ್ತು ಯಾವ ಪಕ್ಷದಿಂದ ಅಧಿಕಾರ ರೂಢರು ಇರುತ್ತಾರೊ ಆ ಪಕ್ಷದವರು ಏನಾದರೂ ತಪ್ಪು ಮಾಡಿದ್ದರೆ ಅದಕ್ಕೆ ಜನತೆ ಶಿಕ್ಷೆ ಕೊಟ್ಟಿದ್ದಾರೆ, ಒಂದು ವೇಳೆ ಜನತೆ ಶಿಕ್ಷೆ ಕೊಡಲಿಲ್ಲ ಎಂದರೂ ಕೂಡ ಅಧಿಕಾರದಿಂದ ಅವರು ಕೆಳಗೆ ಬಂದ ಮೇಲೆ ಯಾವುದೋ ಭರವಸೆಯನ್ನು ಕೊಟ್ಟು ಅಧಿಕಾರಕ್ಕೆ ಜನತಾದಳ ಬಂದಿದೆ. ಇವತ್ತು ನೀವು ಏನು ಕಾರ್ಯಕ್ರಮ ಮಾಡುತ್ತೀರಿ, ಸಂಪ್ರದಾಯ ಮಾತ್ರ ಇದನ್ನು ಯಾವ ಪಕ್ಷದವರು ಕೂಡ ಇನ್ನು ಮುಂದೆ ಕೊಂಡು ಹೋಗಬಾರದು. ನನ್ನ ಕಳಕಳಿಯ ವಿನಂತಿ. ಇದನ್ನು ಪ್ರಥಮದಲ್ಲೇ ಚುನಾವಣಾ ಪ್ರಣಾಳಿಕೆಯ ತರ ಪೂರ್ವಗ್ರಹಪೀಡಿತರಾಗಿ 'ಹಿಂದಿನ ಸರ್ಕಾರ' ಎಂದು ನೀವು ಹೇಳಿದ ಒಂದು ಮಾತಿನಿಂದಾಗಿ ಹಿಂದಿನ ಎರಡು ಮಾಜಿ ಮುಖ್ಯಮಂತ್ರಿಗಳು ಮೂರು ಗಂಟೆಗಳ ಕಾಲ ಭಾಷಣ ಮಾಡಿದರೆ ಅದು ಏನೇ ಇರಲಿ, ಇಷ್ಟು ಬಡವರ ಬಗ್ಗೆ ಹೇಳಿದವರು ಹೋಗಿ ಹೋಗಿ ಇವರು ಅಡಿಕೆ ಮೇಲೆ ತೆರಿಗೆ ಹಾಕಿದರು. ಆ ಮೇಲೆ ಒಂದು ಕಡೆ ಅಕ್ಕಿಗೆ 3.20 ಪೈಸೆ ಪ್ರಕಾರ 10 ಕೆ.ಜಿ. ಕೊಡುತ್ತೇವೆಂದು ಹೇಳಿದರು. ಮತ್ತೊಂದು ಕಡೆ ಗೋದಿ, ಮೈದಾ ಹಿಟ್ಟು, ಸೋಜಿ, ಸರ್ಚಾರ್ಜ್ ಒಂದು ಕಡೆಯಿಂದ ಕಿಂಚಿತ್ತು ತೆಗೆದಿದ್ದಾರೆ. ಆದರೆ ಏಕದಮ್ಮಾಗಿ ನಾಲ್ಕು ಪರ್ಸೆಂಟ್ ತೆರಿಗೆಯನ್ನು ಗೋದಿ, ಮೈದ ಹಿಟ್ಟು, ಸೋಜಿಗೆ ಹಾಕುವ ಉದ್ದೇಶ ಬಡವರ ಬಗ್ಗೆ ಇವರಿಗೆ ಚಿಂತನೆ

ಇದೆ ಎಂದು ಹೇಳಲೇ ಅಥವಾ ಇಲ್ಲಾ ಎಂದು ಹೇಳಲೇ ಇದರಿಂದಾಗಿ ಒಂದು ರೀತಿ ಸಂಶಯ ಬರುತ್ತದೆ. ಇದೆಲ್ಲಾ ನೋಡುವಾಗ ನಾನು ಪ್ರಥಮವಾಗಿ ರಾಜ್ಯಪಾಲರ ಭಾಷಣದ ಮೇಲೆ ನಾನು ಅನೇಕ ಎಚ್ಚರದ ಮಾತುಗಳನ್ನು ಕೊಟ್ಟಿದೆ. ನೂತನ ಸರ್ಕಾರದ ಉದ್ದೇಶಗಳು ಯಾವುದೂ ಸ್ಪಷ್ಟವಾಗಿಲ್ಲ, ಅನೇಕ ಕಾರ್ಯಕ್ರಮಗಳು ಈ ರಾಜ್ಯಕ್ಕೆ ಅವಶ್ಯಕತೆ ಇವೆ ಎನ್ನುವಂತಹ ಮೂಲಭೂತವಾದಂತಹ ಸಮಸ್ಯೆಗಳ ಬಗ್ಗೆ ನೀವು ಗಮನ ಕೊಡಬೇಕು. ಜನ ನಿಮ್ಮನ್ನು ನೋಡುತ್ತಾರೆ ಎನ್ನುವಂತಹ ಮಾತನ್ನು ನಾನು ಹೇಳಿದ್ದೆ. ಕರಾವಳಿಯ ಉದ್ದಕ್ಕೂ ಕರ್ನಾಟಕದಲ್ಲೂ ಒಂದು ಕರಾವಳಿ ಉಂಟು ಎನ್ನುವುದನ್ನು ನಮ್ಮ ಅರ್ಥ ಸಚಿವರು ಮರೆತಿದ್ದಾರೆ ಅಂದರೆ ಇದು ಬಹಳ ಆಶ್ಚರ್ಯದ ಸಂಗತಿ. ಸುಮಾರು ಎರಡು ನೂರು ಕೋಟಿ ಮೀನು ಉತ್ಪನ ಆಗುತ್ತದೆ. ಸುಮಾರು 50 ಕೋಟಿ ವಿದೇಶಿ ವಿನಿಮಯ ಈ ಮೀನು ಉತ್ಪಾದಕರಿಂದ ನಮ್ಮ ಸರ್ಕಾರಕ್ಕೆ ಬರುತ್ತದೆ. ಇಷ್ಟಾದರೂ ಸರ್ಕಾರದವರು ಒಂದುವರೆ ಎರಡು ಲಕ್ಷ ಬಡ ಮೀನುಗಾರರು ಆ ಸಮುದ್ರದಲ್ಲಿ ಹೋಗಿ ಕೆಲಸ ಮಾಡಿಕೊಂಡು ದುಡಿದು ಪ್ರಕೃತಿ ವಿಕೋಪಕ್ಕೆ ಬಲಿಯಾಗಿ ಅವರು ಸಂಪಾದನೆ ಮಾಡಿಕೊಂಡು ಬಂದರೆ ಆ ಬಡ ಮೀನುಗಾರರಿಗಾಗಿ ಒಂದೇ ಒಂದು ಕಾರ್ಯಕ್ರಮವನ್ನು ರೂಪಿಸಿಲ್ಲ. ಮೀನುಗಾರಿಕಾ ಮಂತ್ರಿಯನ್ನು ನಮ್ಮ ಜಿಲ್ಲೆಗೇ ಕೊಟ್ಟಿದ್ದಾರೆ. ಅವರು ನಮ್ಮ ಜಿಲ್ಲೆಯವರು ಆಗಿದ್ದರಿಂದ ಅವರು ಮೀನುಗಾರ ಮಂತ್ರಿ. ಆದರೆ ಮೀನುಗಾರಿಕಾ ಮಂತ್ರಿಗಾಗಿ ಒಂದು ಲಕ್ಷವನ್ನೂ ತೆಗೆದು ಇಡಲಿಲ್ಲ. ಅಂದರೆ ಅವರಿಗೆ ಮಂತ್ರಿ ಪದವಿ ಏಕೆ? ಖಾಲಿ ನಮ್ಮ ಜಿಲ್ಲೆಯ ಉಸ್ತುವಾರಿ ಮಾಡಲಿಕ್ಕೆ ಮಾತ್ರವೇ? ಅವರು ಏತಕ್ಕಾಗಿ ಇದ್ದಾರೆ? ಇವತ್ತು 75 ಲಕ್ಷ ರೂಪಾಯಿಯಲ್ಲಿ ಮಲ್ಪೆ ಹಾರ್ಬರ್‌ನಲ್ಲಿ ಜಂಟಿ ನಿರ್ಮಾಣದ ಪ್ರಸ್ತಾವನೆಗೆ ಮಂಜೂರಾತಿ ದೊರೆತಿದೆ. ಎರಡು ತಿಂಗಳಿನಿಂದ ಮಲ್ಪೆ ಹಾರ್ಬರಿನಲ್ಲಿ ಮೀನುಗಾರಿಕಾ ಸಚಿವರನ್ನು ಕರೆದುಕೊಂಡು ಹೋಗಿ ಅಲ್ಲಿನ ಮೀನುಗಾರರ ಯೂನಿಯನ್‌ನ ಅಧಿಕಾರಿಗಳು ಯಾರಿದ್ದಾರೆ ಎಲ್ಲರೂ ಹೋಗಿ ಬಂದು ಮೊಬಲೈಸೇಷನ್ ಫಂಡ್ ಎಂದು ಹೇಳಿ ಒಂದು 10 ಲಕ್ಷ ಎಲ್.ಒ.ಸಿ. ಕೊಡಿ ಎಂದು ಹೇಳಿ ನಾವು ಎರಡು ತಿಂಗಳಿಂದ ಭಿಕ್ಷೆ ಬೇಡಿದ ಹಾಗೆ ಬೇಡುತ್ತಿದ್ದೇವೆ. ಇವತ್ತಿನವರೆಗೂ ಆ 10 ಲಕ್ಷ ಬಿಡುಗಡೆ ಮಾಡಲು ನಮ್ಮ ಸರ್ಕಾರದಿಂದ ಆಗಿಲ್ಲ. ಹಾಗೆ ಆದರೆ ನಮಗೆ ಕರಾವಳಿಯಲ್ಲಿರತಕ್ಕ ಜನರ, ಬಗ್ಗೆ ಚಿಂತನೆ ಇಲ್ಲವೇ? ಇಷ್ಟೊಂದು ದೊಡ್ಡ ಉದ್ಯಮ ವನ್ನು ಕಡೆಗಾಣಿಸುತ್ತಿದ್ದಾರೆ. ಸುಂದರವಾದ ಒಂದು ಬಂದರು ಮಲ್ಪೆ ಬಂದರು, ಒಂದು ಒಳ್ಳೆಯ ಪ್ರಕೃತಿ ಸುಂದರ, ಇರುವಂತಹ ಬಂದರು ಯಾರು ಮಂತ್ರಿಗಳು ಬಂದರೂ ಸಹಿತ ಅಲ್ಲಿಗೆ ಹೋಗಿ ನೋಡಿಕೊಂಡು ಬರುತ್ತಾರೆ. ಜನರೂ ನೋಡಿಕೊಂಡು ಬರುತ್ತಾರೆ. ಆದರೆ ಅಲ್ಲಿ ಮೀನುಗಾರರು ಪಡುವಂತಹ ಅವಸ್ಥೆ ಏನಿದೆ ಅದರ ಬಗ್ಗೆ ಒಂದಿಷ್ಟು ಕಾಳಜಿ ಇಲ್ಲವೆ? ಹಾಗಿದ್ದರೆ ಮೀನುಗಾರಿಕಾ ಮಂತ್ರಿಗಳನ್ನು ದಯವಿಟ್ಟು ತೆಗೆದು ಅವರಿಗೆ ಬೇರೆ ಏನಾದರೂ ಪದವಿ ಕೊಟ್ಟು ಬಿಡಿ. ಏಕೆ ಸುಮ್ಮನೆ ಅದಕ್ಕೋಸ್ಕರ ಅಷ್ಟು ಖರ್ಚುಮಾಡುತ್ತೀರಿ? ದಯವಿಟ್ಟು, ಮೀನುಗಾರಿಕೆಗೆ ಒಂದು ನೂರು ಕೋಟಿ ರೂಪಾಯಿ ಆದರೂ ವಿಂಗಡಿಸಿ ಇಡಬೇಕೆಂದು ನಾನು ಈ ಹಿಂದಿನ ನನ್ನ ರಾಜ್ಯಪಾಲರ ಭಾಷಣದ ವಂದನಾರ್ಪಣಾ ಚರ್ಚೆಯಲ್ಲಿ ಹೇಳಿದ್ದೆ. ಒಂದು ಲಕ್ಷ ರೂಪಾಯಿ ಅದಕ್ಕೆ ಇಡುವಂತಹ ಒಂದು ಮನಸ್ಸನ್ನು ನೀವು ಮಾಡದೆ ಇದ್ದುದು ಅರ್ಥಸಚಿವರೇ ಇದು ನಮ್ಮ ದುರ್ದೈವ. ಹೀಗೆ ನೀವು ಒಂದು

ದೊಡ್ಡ ತಪ್ಪನ್ನು ಮಾಡಿದ್ದೀರಿ. ಇದನ್ನು ನೀವು ಸರಿಪಡಿಸಬೇಕೆಂದು ನಾನು ಕಳಕಳಿಯಿಂದ ಕೇಳುತ್ತಿದ್ದೇನೆ. ಇನ್ನು ದಕ್ಷಿಣ ಕನ್ನಡ ಜಿಲ್ಲೆಯ ಮೂರ್ತೆದಾರರು, ಈಗಾಗಲೇ ನಮಗೆ ಒಂದು ಉತ್ತರ ಸರ್ಕಾರದಿಂದ ಬಂದಿದೆ. ಮೂರ್ತೆದಾರರು ಸೇಂದಿಯನ್ನು ಏನು ಸರ್ಕಾರಕ್ಕೆ ಕೊಡುತ್ತಾರೋ ಅದಕ್ಕೆ ಅಧಿಕಾರಿಗಳ ವಲಯದಿಂದ ಮುಕ್ತಗೊಳಿಸಬೇಕು ಎನ್ನುವಂತಹ ಒಂದು ಬೇಡಿಕೆಯ ಬಗ್ಗೆ ನಾವು ಹೋರಾಟ ಮಾಡಿದೆವು. ಆ ಬಗ್ಗೆ ಸೇಂದಿಯನ್ನು ಅಬಕಾರಿಯಿಂದ ಮುಕ್ತ ಮಾಡಿ, ಲೀಟರ್ ಫೀಯನ್ನು ಮನ್ನ ಮಾಡಿ, ಆ ಮೇಲೆ ಅದನ್ನು ಕಾನೂನು ರೀತಿ ಮಾರಬೇಕು ಎನ್ನುವಂತಹ ನಿಯಮದ ಮೇಲೆ ಒಂದು ರೀತಿಯಲ್ಲಿ ಸರ್ಕಾರ ದೃಢವಾದ ನಿರ್ಣಯವನ್ನು ತೆಗೆದುಕೊಂಡಿತ್ತು. ಆದರೆ ಏನು ಮಾಡುವುದು ಇವತ್ತು ಅವರು ಉತ್ತರ ಕೊಡುತ್ತಿದ್ದಾರೆ. "ಜಿಲ್ಲೆಯಲ್ಲಿ ಸೇಂದಿಯ ಮಾರಾಟವು ಕಾನೂನಿನ್ವಯ, ಮೂರ್ತೆದಾರರು ಸಹಕಾರಿ ಸಂಘಗಳ ಮೂಲಕ ಮಾರಾಟ ಮಾಡಲು ಅವಕಾಶವಿರುತ್ತದೆ. ಹಾಗೂ ಕರ್ನಾಟಕ ಅಬಕಾರಿ ಕಾನೂನು ಹಾಗೂ ನಿಯಮಗಳು ಅನ್ವಯಿಸುತ್ತವೆ." ಎಂದು ಉತ್ತರ ಕೊಟ್ಟಿದ್ದಾರೆ. ಲೀಟರ್ ಫೀ ಮನ್ನ ಮಾತ್ರ ಅಲ್ಲ, ಮೂರ್ತೆದಾರರಿಗೆ, ಅಬಕಾರಿ ಕಾಯಿದೆಯಿಂದ ಹೊರ ತರಬೇಕೆಂಬುದು ನಮ್ಮ ಬೇಡಿಕೆ. ಇವತ್ತು ಏನು ಮೂರ್ತೆದಾರರು ಮೂರ್ತೆ ಮಾಡುವಂತಹ ಸೇಂದಿ ಇದೆ ಅದರಲ್ಲಿ ಮಾದಕ ಅಂಶ ಇರುವುದು ಕೇವಲ ಮೂರು ಪರ್ಸೆಂಟ್ ಮಾತ್ರ. ಇವತ್ತು ಸಾರಾಯಿ ಏನಿದೆ ಅದನ್ನು ಇಳಿಸಬಾರದು ಎನ್ನುವಂತಹ ಚಳುವಳಿ ನಡೆಯುವಾಗ ಕಷ್ಟಪಟ್ಟು ನೀವು ಸೇಂದಿಗೆ ಸ್ವಲ್ಪ ಪ್ರಬೋದನೆ ಕೊಡುತ್ತಿದ್ದೀರಿ. ಸಾರಾಯಿ ಮಾರಾಟ ಮಾಡುವ ಪ್ರಶ್ನೆಯೇ ಇಲ್ಲ. ನಾವು ನಮ್ಮ ಹೋರಾಟ ಸಮಯದಲ್ಲಿ ಹೇಳುತ್ತಿದ್ದೆವು ಬಡಮೀನುಗಾರರು ಸಮುದ್ರಕ್ಕೆ ಹೋಗಿ ಮೀನು ತರಲಿಕ್ಕೆ ಹೋಗುವಾಗ ಅವರು ಸೇಂದಿ ಕುಡಿದರೆ ಒಂದಿಷ್ಟು ಟನ್ ಹೆಚ್ಚಿಗೆ ಮೀನು ತರುತ್ತಿದ್ದರು. ಆದರೆ ಸಾರಾಯಿ ಕುಡಿದು ಹೋದರೆ ಅಲ್ಲಿ ಮೀನು ಇಲ್ಲ, ದೋಣಿ ಇಲ್ಲ, ಏನೂ ಇಲ್ಲದಾಗಿ ಬರುತ್ತಿದ್ದಾರೆ ಅಂತ ನಾವು ಹೇಳುತ್ತಿದ್ದೆವು. ಸರ್ಕಾರ ಹಂತ ಹಂತವಾಗಿ ಮದ್ಯ ಪಾನೀಯವನ್ನು ನಿಷೇಧ ಮಾಡಲು ಫ್ರೋರ್ಪಡೆಯವರು ಬಹಳಷ್ಟು ಚೆನ್ನಾಗಿ ತಮ್ಮ ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ. ಹಂತ ಹಂತವಾಗಿ ಈ ಮದ್ಯಪಾನ ನಿಷೇಧ ಮಾಡುತ್ತಾ ಬರುವಾಗ ಸೇಂದಿಗೆ ನೀವು ಪ್ರಬೋದನೆ ಕೊಟ್ಟರೆ ಖಂಡಿತವಾಗಿಯೂ ಸಾರಾಯಿ ಕುಡಿಯುವವರ ಸಂಖ್ಯೆ ಕಡಿಮೆಯಾಗುತ್ತದೆ ಎಂದು ನಾನು ಹೇಳುತ್ತೇನೆ. ಈ ದೃಷ್ಟಿಯಿಂದ ಆದರೂ ಮುಕ್ತ ಮಾರಾಟಕ್ಕೆ ಅಬಕಾರಿ ಕಾಯಿದೆಯಿಂದ ಸೇಂದಿಯನ್ನು ಹೊರ ತರಬೇಕೆಂದು ಹೇಳಿ ನನ್ನ ಕಳಕಳಿಯ ವಿನಂತಿ.

ನಾನು ಏನು ಮಾಡುವುದು ನಮ್ಮ ದುರ್ದೈವ. ಸನ್ಮಾನ್ಯ ಶಿವಕುಮಾರ್‌ರವರು ಆಡಳಿದ ಪಕ್ಷದ, ಸರ್ಕಾರದ ಎಲ್ಲಾ ರಾಜಕಾರಣಿಗಳು ಆತ್ಮ ವಿಮರ್ಶೆ ಮಾಡುವಂತಹ ಒಂದು ಮನವಿಯನ್ನು ಮಾಡಿದ್ದಾರೆ. ಆತ್ಮ ವಿಮರ್ಶೆ ಅಥವಾ ಆತ್ಮಾವಲೋಕನ. ಒಂದು ಕಡೆಯಿಂದ ನಂಜೇಗೌಡರು ಇವತ್ತು ಬಹಳ ಸ್ವಾರಸ್ಯಕರವಾದ ಪ್ರಕರಣವನ್ನು ತಂದಿದ್ದಾರೆ. ಮುಖ್ಯ ಕಾರ್ಯದರ್ಶಿಗಳ ಮೇಲೆ ಒಂದು ನೇರವಾದಂತಹ ಆರೋಪ. ಇವತ್ತು ಅಧಿಕಾರ ವರ್ಗ ಏನಿದೆ, ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಅಧಿಕಾರಿಗಳು ಸರ್ಕಾರವನ್ನು ತಪ್ಪುದಾರಿಗೆ ಎಳೆಯುತ್ತಾರೆ ಎನ್ನುವಂತಹ ಎಚ್ಚರಿಕೆಯನ್ನು ಮಾನ್ಯ ನಂಜೇಗೌಡರು ಅವರ ಪ್ರಾಮಾಣಿಕವಾದಂತಹ ಒಂದು ಆರೋಪದ ಮೇಲೆ ಹೊಂದಿಕೊಂಡು

ಬಂದಿದೆ. ಯಾವುದೇ ಸರ್ಕಾರ ಇರಲಿ, ಇನ್ನೊಂದು ಬೇರೆ ಸರ್ಕಾರ ಬರಬಹುದು. ಆದರೆ ಅಧಿಕಾರಿಗಳು ಒಬ್ಬರೆ. ಅದೇ ಕಡತವನ್ನು ಅದೇ ಅಧಿಕಾರಿಗಳಿಗೆ ರುಜು ಹಾಕಲು ಕಳುಹಿಸುತ್ತೇವೆ. ಯಾರಾದರೂ ಬರಬಹುದು. ಅದರಲ್ಲಿ ಏನೂ ಇಲ್ಲ. ಆದರೆ ನಿಜವಾಗಿ ಪ್ರಾಮಾಣಿಕವಾಗಿ ನಾವು ಇವತ್ತು ಆತ್ಮವಿಮರ್ಶೆ ಮಾಡಬೇಕು. ಆತ್ಮ ವಿಮರ್ಶೆ ಮಾಡದೆ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಇನ್ನು ತೆರಿಗೆ ವಿಷಯದಲ್ಲಿ ಮಾತ್ರ ನಾನು ಒಂದೆರಡು ಸೂಚನೆಗಳನ್ನು ಕೊಡುತ್ತೇನೆ. ಕೆಎಸ್‌ಆರ್‌ಟಿಸಿ ಬಗ್ಗೆ ನಿಮಗೆ ಗೊತ್ತಿದೆ. ಸಾಕಷ್ಟು ದಕ್ಷಿಣ ಕನ್ನಡ ಜಿಲ್ಲೆ ಇನ್ನು ಕೆಲವು ಜಿಲ್ಲೆಗಳಲ್ಲಿ ಖಾಸಗೀ ವಲಯದ ಏನು ಬಸ್ಸುಗಳು ಸಂಖ್ಯೆ ಇದೆ ಇವುಗಳೆಲ್ಲಾ ಸ್ಥಗಿತಗೊಂಡು ಸಾಕಷ್ಟು ಗಲಾಟೆ ನಡೆದಿದೆ. ರಾಜ್ಯದ ಸಾರಿಗೆ ಸಂಸ್ಥೆಯ ಬಗ್ಗೆ ನಾವು ಬೇಕಾದಷ್ಟು ಮಾತನಾಡುತ್ತೇವೆ. ಇದರ ಮೂಲಕ 245 ಕೋಟಿ ರೂಪಾಯಿ ತೆರಿಗೆ ಹಾಕುವಂತಹ ಅಗತ್ಯ ಇಲ್ಲ. ಸೋರಿ ಹೋಗುವಂತಹ ತೆರಿಗೆ ಏನು ಇದೆ ಅದನ್ನು ಉಳಿಸಿದರೆ ಸಾಕು. ನಮಗೆ ಏನೂ ಬೇಕಾಗಿಲ್ಲ. ರಾಜ್ಯದ ಸಾರಿಗೆ ಸಂಸ್ಥೆ ಇರಲಿ, ವಾಣಿಜ್ಯ ತೆರಿಗೆ ಇರಲಿ,ಅಬಕಾರಿ ತೆರಿಗೆ ಇರಲಿ. ಇವತ್ತು ನಾನು ಕೇಳುತ್ತೇನೆ ಕಳೆದ 3 ತಿಂಗಳಿನಿಂದ ವಾಣಿಜ್ಯ ತೆರಿಗೆಯಾಗಲಿ ಅಬಕಾರಿ ತೆರಿಗೆಯಾಗಲಿ ಅಥವಾ ಬೇರೆ ಯಾವುದೇ ಸಂಸ್ಥೆಗಳು ತೆರಿಗೆಯನ್ನು ವಸೂಲು ಮಾಡುವುದಕ್ಕೆ ಯಾವ ಕಾರ್ಯಕ್ರಮಗಳನ್ನು ಮಾಡಿದ್ದೀರಿ? ಬಜೆಟ್‌ನಲ್ಲಿ ಯಾವುದಾದರೂ ವಸೂಲು ಪ್ರಕರಣಕ್ಕೆ ಬೇಕಾದಂತಹ ಕಾರ್ಯಕ್ರಮಗಳು ಇವೆಯೇ? ಇರುವುದಿಲ್ಲ. ಇವತ್ತು ನೀವು ಗೋದಿ ಹಿಟ್ಟು, ಗೋದಿಯಿಂದ ಮಾಡತಕ್ಕಂಥ ಮೈದಾ ಸೋಜಿ ಏನಿದೆ ಅದರ ಮೇಲೆ ಹಾಕಿದಂತಹ ತೆರಿಗೆ 4 ಪರ್ಸೆಂಟ್ ಏನಿದೆ ಅದನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಿ. ಕರ್ನಾಟಕ ರಾಜ್ಯದ ಸಾರಿಗೆ ಸಂಸ್ಥೆಯಲ್ಲಿ ಸಾಕಷ್ಟು ಆದಾಯ ಬೆಳೆಸಬಹುದು. ಇದು ಖಾಸಗಿ ಬಸನಿಂದಲೇ ಏನೂ ನಷ್ಟವಾಗಿಲ್ಲ. ಇವರೇ ಕೊಟ್ಟಿದ್ದಾರೆ, ಆಲ್ ಇಂಡಿಯಾ ಪರ್ಮಿಟ್ ಎಂದು ಮಂಗಳೂರು ಬೆಂಗಳೂರು, ಮಂಗಳೂರು ಬೊಂಬಾಯಿ ಎಂದು ಹೋಗುವಂತಹ ಬಸ್ಸುಗಳು ಬಂದು ಕೆಎಸ್‌ಆರ್‌ಟಿಸಿ ಬಸ್‌ಗಳು ಬಂದು ಕುಳಿತುಕೊಂಡಿವೆ. ಏಕೆ ಅಂತ? ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಎಕ್ಸ್‌ಪ್ರೆಸ್ ಬಸ್‌ಗೆ ಕೊಡುವಂತಹ ಮಂಗಳೂರಿನಿಂದ, ಕುಂದಾಪುರಕ್ಕೆ ಹೋಗುವಂತಹ ಬಸ್ಸುಗಳಿಗೆ ಸರ್ಕಾರದ ಪರವಾನಿಗೆ ಏನು? ಅದರಲ್ಲಿ ಎಷ್ಟು ಅಕ್ಸಿಡೆಂಟ್ ಆದವು? ಸರ್ಕಾರ ಇದರ ಕಡೆಗೆ ಎಷ್ಟು ಗಮನ ಕೊಟ್ಟಿದೆ? ಸರ್ಕಾರಿ ಬಸ್ಸುಗಳನ್ನು ಹೆಚ್ಚು ಮಾಡಿಸಿ. ಖಾಸಗೀ ಬಸ್ಸುಗಳನ್ನು ಸ್ವಲ್ಪ ಕಡಿಮೆ ಮಾಡಿಸಿ. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಬೇಕು ಎಂದು ಉಡುಪಿಯವರು ಕೇಳಿದರೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರೇ ಉಡುಪಿಗೆ ಬಸ್ ನಿಲ್ದಾಣದ ಅವಶ್ಯಕತೆ ಇಲ್ಲ ಎನ್ನುವಂತಹ ಪ್ರಸ್ತಾವನೆ ಇಲ್ಲಿಗೆ ಬಂದು ಹೋಗಿದೆ. ಇದರ ಬಗ್ಗೆ ಹಿಂದಿನ ಸರ್ಕಾರದವರು ಬಹಳಷ್ಟು ಆರೋಪಕ್ಕೆ ಒಳಗಾಗಿದ್ದಾರೆ. ನಾನು ಕೇಳುವುದಿಷ್ಟೇ ಕೆಎಸ್‌ಆರ್‌ಟಿಸಿ ಬಸ್‌ನ ಸಂಚಾರ ಏನಿದೆ ಅದನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೂ ಅನ್ವಯ ಮಾಡಿಕೊಡಿ. ಗ್ರಾಮೀಣ ಪ್ರದೇಶದ ಜನಕ್ಕೆ ಸುವ್ಯವಸ್ಥಿತವಾದಂತಹ ಸಾರಿಗೆ ಮಾಡಿಕೊಡುತ್ತೇವೆ ಎಂದು ಹೇಳಿದ್ದೀರಿ. ಇದರ ಬಗ್ಗೆ ಮೂಲಭೂತವಾಗಿ ನೀವು ನಿರ್ಣಯ ತೆಗೆದುಕೊಳ್ಳಿ.

ಉಪಾಧ್ಯಕ್ಷರು : ನೀವು ರಾಜ್ಯಪಾಲರ ಭಾಷಣದಲ್ಲಿ ಮಾತನಾಡಬಹುದು, ಅದಕ್ಕೆ ಅವಕಾಶ ಮಾಡಿಕೊಡುತ್ತೇವೆ. ಎಲ್ಲರಿಗೂ ಅವಕಾಶ ಮಾಡಿಕೊಡಬೇಕಾಗುತ್ತದೆ.

ಶ್ರೀ ಯು.ಆರ. ಸಭಾಪತಿ : ನನಗೆ ಡಿಟೇಲಾಗಿ ಹೇಳಬೇಕು ಎಂದರೆ 2 ಗಂಟೆ ಬೇಕು. ಪ್ಯಾರ ನಂ.17ರಲ್ಲಿ ವಾಹನಗಳ ಮಾರಾಟದ 2ನೇ 3ನೇ ಮತ್ತು ತರುವಾಯ ಪ್ರತಿ ವರ್ಗಾವಣೆ ಮೇಲೆ ನೀವು ಟ್ಯಾಕ್ಸ್ ಹಾಕಿದ್ದೀರಿ. ಇದು ತಪ್ಪು ಇದನ್ನು ನೀವು ಸರಿಪಡಿಸಬೇಕು. ನೀವು ಇದನ್ನು ಹೀಗೆ ಮಾಡಬೇಡಿ, ಎಲ್ಲದಕ್ಕಿಂತ ಮುಖ್ಯವಾಗಿ ಕಲ್ಯಾಣ ಮಂಟಪಗಳ ಮೇಲಿನ ವೃತ್ತಿ ತೆರಿಗೆ, ಇದನ್ನು ದಯವಿಟ್ಟು ತೆಗೆದು ಹಾಕಬೇಕು. ಒಬ್ಬ ಸಾಮಾನ್ಯ ಜನ ಒಬ್ಬ ಪುರೋಹಿತನ ಮನೆಗೆ ಹೋಗಿ ಅಲ್ಲಿ ಕಲ್ಯಾಣ ಮಾಡಿಸಿದ್ದಾರೆ. ಅವರ ಮಗಳಿಗೆ ಮದುವೆ ಮಾಡಿಸಿದ್ದಾನೆ. ಅಂತಹವರಿಗೆ ಕೂಡ ನೀವು ವೃತ್ತಿ ತೆರಿಗೆಯನ್ನು ಹಾಕಿದರೆ ಅದು ಹೇಗೆ ಆಗುತ್ತದೆ? ಅದನ್ನು ದಯವಿಟ್ಟು ಹಿಂದಕ್ಕೆ ತೆಗೆದುಕೊಳ್ಳಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ರಾಷ್ಟ್ರಕವಿ ಕುವೆಂಪುರವರ ಸರಳ ವಿವಾಹವನ್ನು ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಜಾರಿಗೆ ತಂದಿದ್ದೇವೆ. ಈ ರೀತಿ ಸರಳ ವಿವಾಹವನ್ನು ತಂದರೆ ಈ ರೀತಿಯ ಆಡಂಬರಗಳು, ಎಲ್ಲವೂ ಕೂಡ ತಪ್ಪುತ್ತವೆ.

ಶ್ರೀ ಯು.ಆರ್. ಸಭಾಪತಿ : ಅದು ನಿಮ್ಮ ನಿಮ್ಮ ಜೀವನ, ನಮ್ಮ ನಮ್ಮ ಜೀವನ ಹಾಗೆ ಆಗುತ್ತದೆ. ಆದರೆ ಒಬ್ಬ ಸಾಮಾನ್ಯ ಬಡವ ಒಬ್ಬ ಪುರೋಹಿತನ ಮನೆಯಲ್ಲಿ ಮದುವೆ ಮಾಡಿಸಿದ್ದಾನೆ. ಅವನ ಮನೆಯಲ್ಲಿ ಎರಡು ಮೂರನೇ ಮದುವೆ ಮಾಡಿಸಿದ ಎಂದರೆ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಹೋಗಿ ವೃತ್ತಿ ತೆರಿಗೆ ಎರಡೂವರೆ ಸಾವಿರ ರೂಪಾಯಿ ಕೊಡಿ ಎಂದು ಕೇಳುತ್ತಾರೆ. ಆದ್ದರಿಂದ ಕಲ್ಯಾಣ ಮಂಟಪದ ಮೇಲೆ ನೀವು ಏನು ತೆರಿಗೆಯನ್ನು ಇಟ್ಟಿದ್ದೀರಿ ಆ ತೆರಿಗೆಯನ್ನು ತೆಗೆಯಿರಿ ಎಂದು ಹೇಳುತ್ತಿದ್ದೇನೆ. ಮೊದಲು ಆ ತೆರಿಗೆಯನ್ನು ತೆಗೆಯಬೇಕು ಎಂದು ಹೇಳುವುದು. ನೀವು ತೆರಿಗೆ ಹಾಕಿದರೆ 5 ಸಾವಿರ ರೂಪಾಯಿಗಳ ಮೇಲೆ ಬಾಡಿಗೆ ತೆಗೆದುಕೊಳ್ಳುವಂತಹ ಕಲ್ಯಾಣ ಮಂಟಪಗಳ ಬಗ್ಗೆ ನಾನು ಹೇಳುತ್ತಿಲ್ಲ. ಪುರೋಹಿತರ ಮನೆಯಲ್ಲಿ ಒಂದು ಹಾಲ್ ಇರುತ್ತದೆ. ಯಾರೋ ಬಡವ ಬಂದು ಮದುವೆ ಮಾಡಿಸುತ್ತಾನೆ. ಒಂದು ತಿಂಗಳಲ್ಲಿ 4-5 ಮದುವೆ ಆಗುತ್ತವೆ. ಕೇವಲ ಒಂದು ಮದುವೆ ಮಾಡಿಸಿಯಾಗಿ ಎರಡನೇ ಮದುವೆ ಅವನ ಮನೆಯಲ್ಲಿ ಆದ ಕೂಡಲೇ ವೃತ್ತಿ ತೆರಿಗೆ ಅಧಿಕಾರಿಗಳು ಬಂದು ಅವರ ಹತ್ತಿರ ಎರಡೂವರೆ ಸಾವಿರ ಮೂರು ಸಾವಿರ ವಸೂಲು ಮಾಡುತ್ತಾರೆ. ಆದ್ದರಿಂದ ದಯವಿಟ್ಟು ಅದನ್ನು ಎಲ್ಲಾ ಹಿಂದೆ ತೆಗಯಬೇಕು. ಅಷ್ಟೇ ಅಲ್ಲ ಅನೇಕ ಕಾರ್ಯಕ್ರಮಗಳು ಇವೆ. ನಾನು ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಬಡವರಿಗೆ ಸಂಬಂಧಪಟ್ಟ ಯಾವುದೇ ಕಾರ್ಯಕ್ರಮಗಳನ್ನು ನೀವು ಅನ್ವಯ ಮಾಡಬೇಕು. ಗ್ರಾಮೀಣ ಪ್ರದೇಶದ ಕಾರ್ಮಿಕ ಜನಾಂಗದ ಜನ ಯಾರಿದ್ದಾರೆ ಅವರಿಗೆ ಅನುಕೂಲ ಮಾಡಿಕೊಡಬೇಕು. ರೆಡಿಮೇಡ್ ಉಡುಪುಗಳಿಗೆ ಟ್ಯಾಕ್ಸ್ ಹಾಕಿದ್ದೀರಿ. ಆದರೆ ಇವತ್ತು ಅಲ್ಲಿ ರೆಡಿಮೇಡ್ ಉಡುಪುಗಳನ್ನು ಮಾಡತಕ್ಕಂಥವರು ಯಾರಿದ್ದಾರೆ ಅವರುಗಳು ಬಹಳ ಕಷ್ಟದಲ್ಲಿದ್ದಾರೆ, ಅವರುಗಳು ಕೇವಲ 200 ರೂಪಾಯಿಗಳಿಗೆ ಕೆಲಸ ಮಾಡುತ್ತಿದ್ದಾರೆ. ಅವರಿಗೆ ನೀವು ಯಾವ ವ್ಯವಸ್ಥೆ ಮಾಡಿದ್ದೀರಿ? ಕಾರ್ಮಿಕರ ಕಲ್ಯಾಣಕ್ಕಾಗಿ ಯಾವ ವ್ಯವಸ್ಥೆ ಮಾಡಿದ್ದೀರಿ? ಪ್ರಾಥಮಿಕ ಆರೋಗ್ಯ ಕೇಂದ್ರಗಳ ಐಬಿಟಿ ಪ್ರೋಗ್ರಾಂನಲ್ಲಿ 114 ಕೋಟಿ ರೂಪಾಯಿ ಬಂದಿದೆ. ಅದನ್ನು ಬೇರೆ ಯಾವುದಕ್ಕೋಸ್ಕರ ವ್ಯಯ ಮಾಡುತ್ತಿದ್ದೀರಿ. ಪ್ರಾಥಮಿಕ ಆರೋಗ್ಯ ಕೇಂದ್ರ, ಸರ್ಕಾರಿ ಆಸ್ಪತ್ರೆಗಳಿಗೆ ನೀವು ವಿಂಗಡಣೆ ಮಾಡಿದ ಹಣ ಸಾಲದು. ದಯವಿಟ್ಟು ಆರೋಗ್ಯ ಕೇಂದ್ರಗಳಿಗೆ ಇನ್ನು ಹೆಚ್ಚಿನ ಸಹಾಯ ಬರುವ ಹಾಗೆ

ನೀವು ಮಾಡಬೇಕು. ಅಷ್ಟೇ ಅಲ್ಲದೆ ವಿದ್ಯಾ ಶಾಲೆಗಳು ಅಗತ್ಯದ ಬಗ್ಗೆ ಹೇಳುವುದಾದರೆ ನಮ್ಮ ಹಳ್ಳಿಗಾಡಿನಲ್ಲಿ ಅನೇಕ ಜಿಲ್ಲಾ ಪರಿಷತ್ತು ಶಾಲೆಗಳಿಗೆ ಕಟ್ಟಡಗಳು ಆಗಬೇಕಾಗಿದೆ. ಅವುಗಳಿಗೆ ಶಿಕ್ಷಕರನ್ನು ಕಳುಹಿಸಿಕೊಡಬೇಕು. ಏಕೋಪಾಧ್ಯಾಯ ಶಾಲೆಗಳು ಇವೆ. ಅವರ ಬಗ್ಗೆಯೂ ಸಾಕಷ್ಟು ಗಮನ ಹರಿಸಿಲ್ಲ. ಅದಕ್ಕೆ ನಿಜವಾಗಿ ಹೇಳುವುದಾದರೆ ನೀವು ಪ್ರಥಮವಾಗಿ ಮಂಗಡಪತ್ರವನ್ನು ಮಂಡಿಸಿದ್ದೀರಿ. ತಪ್ಪುಗಳು ಆಗುತ್ತವೆ ಹೋಗುತ್ತವೆ, ಇಲ್ಲ, ಎಂದು ಹೇಳುವುದಿಲ್ಲ. ಒಂದು ಮಾತು ನಾನು ಸ್ಪಷ್ಟವಾಗಿ ಹೇಳುತ್ತೇನೆ, ನೀವು ಪ್ರಥಮದಲ್ಲಿ ಹಾಕಿದ ಒಂದು ಮಾತು ಏನಿದೆ, ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. 1989ರ ನಂತರ ಎಂದು ಹೇಳುವುದನ್ನು. ಇದ್ದಿರಬಹುದು, ಆದರೆ ನೀವು ಹಾಕಬೇಕಲ್ಲ. ಅದು ಒಂದು ರೀತಿ ಪೂರ್ವಗ್ರಹ ಆಯಿತು. ನಿಮಗೆ ಅಧಿಕಾರವನ್ನು ಜನತೆ ಕೊಟ್ಟಾಗಿದೆ. ಮತ್ತೆ ನೀವು ಅದನ್ನು ಹಾಕಬೇಕಾದ ಅವಶ್ಯಕತೆ ಇಲ್ಲ. ಎಲ್ಲರೂ ತೀರ್ಮಾನ ನೀಡಿದ್ದಾರೆ. ಎಲ್ಲರೂ ಕೇಳಿದ ವಿಷಯ. ಅದರ ಜೊತೆಗೆ ಗ್ರಾಮೀಣ ಪ್ರದೇಶದ ಜನರಿಗೆ ನೀವು ಅವಕಾಶ ಮಾಡಿಕೊಡಬೇಕು. ಮೀನುಗಾರರಿಗೆ ನೀವು ಅವಕಾಶ ಮಾಡಿಕೊಟ್ಟಿಲ್ಲ. ಮೂರ್ತೆದಾರರಿಗೆ ನೀವು ಅವಕಾಶ ಮಾಡಿಕೊಟ್ಟಿಲ್ಲ. ಇದೆಲ್ಲಾ ಗ್ರಾಮೀಣ ಪ್ರದೇಶದ ಜನರ ಹಿತಚಿಂತನೆಯನ್ನು ಮಾಡತಕ್ಕಂಥ ಕಾರ್ಯಕ್ರಮಗಳು. ದಯವಿಟ್ಟು ನಿಮ್ಮ ಮುಂಗಡ ಪತ್ರವನ್ನು ಮರು ಪರಿಶೀಲನೆ ಮಾಡಿ ಇದಕ್ಕೆ ಹಣವನ್ನು ಏನಾದರೂ ಒದಗಿಸಿಕೊಟ್ಟರೆ ಒಳ್ಳೆಯದು ಎಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ದೇವೇಗೌಡರ ನೇತೃತ್ವ ದಲ್ಲಿರುವಂತಹ ಈ ಸರ್ಕಾರದಲ್ಲಿ ಸಿದ್ಧರಾಮಯ್ಯನವರು ಆರ್ಥಿಕ ಸಚಿವರಾಗಿ ತಮ್ಮ ಚೊಚ್ಚಲು ಬಜೆಟನ್ನು ಮಂಡಿಸಿದಾಗ, ಮಂಡಿಸುವ ಪೂರ್ವದಲ್ಲಿ ನಮ್ಮೆಲ್ಲರಿಗೂ ಗ್ರಾಮೀಣ ಭಾಗದ ಜನರಿಗೆ ಬಹಳಷ್ಟು ಅನುಕೂಲತೆಗಳನ್ನು ಕಲ್ಪಿಸುತ್ತಾರೆ ಎನ್ನುವ ಒಂದು ಆಶಯ ಮೂಡಿತ್ತು. ಆದರೆ ಆ ಆಸೆಗೆ ಎಲ್ಲಾ ತಣ್ಣೀರನ್ನು ಎರಚಿ ತಾವು ಕೂಡಿಸುವ 244 ಕೋಟಿ ರೂಪಾಯಿಗಳ ಹೆಚ್ಚಿನ ತೆರಿಗೆಯ ಹೊರೆಯನ್ನು ರೈತರ ಸಬ್ಸಿಡಿಗೆ ಮತ್ತು ಬಡ್ಡಿ ಮನ್ನಾಕ್ಕೆ ಉಪಯೋಗ ಮಾಡಿಕೊಂಡು ಬಿಟ್ಟರು. ಹೀಗಾಗಿ ಇದರು ಹೋದ ಸರ್ಕಾರಕ್ಕಿಂತ ಯಾವುದೇ ಹೆಚ್ಚಿನ ಕಾರ್ಯಕ್ರಮಗಳನ್ನು ಗ್ರಾಮೀಣ ಭಾಗದ ಜನತೆಗೆ ಅನುಕೂಲತೆ ಮಾಡಿಕೊಡುತ್ತಿಲ್ಲ ಎನ್ನುವುದನ್ನು ಅವರ ಅಂಕೆ ಸಂಖ್ಯೆಗಳೇ ತೋರಿಸಿ ಕೊಟ್ಟಿವೆ. ಅವರ ಭಾಷಣದಲ್ಲಿ ಅವರ ಆದ್ಯತೆಗಳು ಬಗ್ಗೆ ಹೇಳಿರುವುದನ್ನು ನೋಡಿ ನನಗೆ ನಿರಾಶೆಯಾಯಿತು. ಆರ್ಥಿಕ ಸೇವೆಗಳ ವಲಯದಲ್ಲಿ ನೀರಾವರಿ, ಇಂಧನ, ಕೈಗಾರಿಕೆಗಳನ್ನು ಮುಂಬರುವ ವರ್ಷಗಳಲ್ಲಿ ತನ್ನ ಆದ್ಯತೆಯಾಗಿ ಎನ್ನುವ ಮಾತನ್ನು ಹೇಳಿದರು. ಕೃಷಿಯನ್ನು ಅವರು ಮರೆತು ಬಿಟ್ಟರು. ನೀವೆಲ್ಲಾ ಗ್ರಾಮೀಣ ಭಾಗದ ಜನರಿಗೆ 80 ಪರ್ಸೆಂಟ್ ಹೆಚ್ಚು ಸಂಪನ್ಮೂಲಗಳನ್ನು ಈ ಬಜೆಟ್‌ನಲ್ಲಿ ತೆಗೆದಿರಿಸಿರಿ ಎಂದು ಹೇಳಿದರು. ಕೃಷಿ ಎಂದರೆ ಬರೀ ನೀರಾವರಿ ಪ್ರದೇಶದಲ್ಲಿ ಇರುವಂತಹ ಕೃಷಿ ಎನ್ನುವಂತಹ ಭಾವನೆ ತಮಗೆ ಬಂದಿದೆ. ಏನೋ ಒಣ ಪ್ರದೇಶದಲ್ಲಿ ಕೃಷಿ ಮಾಡುವಂತಹ ಜನ ಈ ರಾಜ್ಯದಲ್ಲಿ ಬಹಳಷ್ಟು ಇದ್ದಾರೆ. ಸುಮಾರು ಪ್ರತಿಶತಃ 80ರಷ್ಟು ಕೃಷಿಕರು ಮಳೆಯನ್ನು ಆಧಾರಿಸಿದ ಕೃಷಿ ಮೇಲೆ ಅವಲಂಬಿತರಾಗಿದ್ದಾರೆ. ಅವರ ಸಲುವಾಗಿ ವಿಶೇಷ ಕಾರ್ಯಕ್ರಮಗಳನ್ನು ಏನೂ ಹಾಕಲಿಲ್ಲ. ಪ್ರತಿಶತ 20ರಷ್ಟು ಇರುವಂತಹ ಪ್ರದೇಶಗಳ ಅಭಿವೃದ್ಧಿಗಾಗಿ ಸಾವಿರಾರು ಕೋಟಿ ರೂ.ಗಳ ಹಣವನ್ನು

ಖರ್ಚುಮಾಡುವಂತಹ ಈ ಸರ್ಕಾರ 80ರಷ್ಟು ಪ್ರದೇಶದಲ್ಲಿ ಕೃಷಿ ಮಾಡುವಂತಹ ಒಣ ಬೇಸಾಯದ ಕೃಷಿಕರ ಏಳಿಗೆಗಾಗಿ 50 ಕೋಟಿ ರೂಪಾಯಿ ಪ್ರೋಗ್ರಾಂ ಹಾಕಿದ್ದರೂ ಸಹ ಸಂತೋಷವಾಗುತ್ತಿತ್ತು. ದಯವಿಟ್ಟು ಇವನ್ನು ಅವರು ಬದಲು ಮಾಡಿಕೊಳ್ಳಬೇಕು. ಈ ಕರ್ನಾಟಕ ಸರ್ಕಾರ ಹಿಂದೆ ಒಂದು ತಜ್ಞರ ಸಮಿತಿಯನ್ನು ನೇಮಿಸಿತ್ತು. ಏಕೆ ನಮ್ಮ ಕೃಷಿಯಲ್ಲಿ ಉತ್ಪಾದಕತೆ ಕುಂಠಿತವಾಗುತ್ತಿದೆ. ಎನ್ನುವುದನ್ನು ಕಂಡುಹಿಡಿಯುವ ಸಲುವಾಗಿ. ಅಲ್ಲಿ ಹೇಳಿದ್ದಾರೆ ಮಳೆ ಆಧಾರಿತ ಕೃಷಿಯಲ್ಲಿ ಉತ್ಪಾದಕತೆಯನ್ನು ಹೆಚ್ಚು ಮಾಡುವ ಸಲುವಾಗ ಸಾಕಷ್ಟು ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಳ್ಳಬೇಕು ಎನ್ನುವ ಉಪದೇಶವನ್ನು ಆ ತಜ್ಞರು ಹೇಳಿದ್ದಾರೆ. ನೀವು ದಯವಿಟ್ಟು ಆ ಕೆಲಸ ಮಾಡಿ. ಆ ಕೆಲಸ ಮಾಡುವುದರಿಂದ ಬರಿ ನಮಗೆ ಅಷ್ಟೆ ಅನುಕೂಲ ಇಲ್ಲ, ಒಣ ಪ್ರದೇಶದಲ್ಲಿ ಬೇಸಾಯ ಮಾಡುವಂತಹ ರೈತರಿಗೆ ಅಷ್ಟೆ ಅನುಕೂಲ ಅಲ್ಲ ಅದು ಈ ನೀರಾವರಿ ಪ್ರದೇಶದಲ್ಲಿ ಬೇಸಾಯ ಮಾಡುವಂತಹ ರೈತರಿಗೂ ಅನುಕೂಲವಾಗುತ್ತದೆ. ಏಕೆಂದರೆ ನಾವು ಕಟ್ಟುವಂತಹ ಅಣೆಕಟ್ಟು ಹೂಳು ಆಗಿ ಹೋಗಬಾರದು ಎನ್ನುವುದಾದರೆ ಅಲ್ಲಿ ಹಿನ್ನಾಡಿನಲ್ಲಿ ಎಲ್ಲಾ ಹೊಲಗಳಿಗೆ ಬದುವು ಒಳಗಟ್ಟೆ ಬೇಕು. ಅಲ್ಲಲ್ಲಿ ಸೆಳವುಗಳಿಗೆ ಚಕ್ಕಡ ಬೇಕು. ಇದೆಲ್ಲವನ್ನು ಮಾಡುವುದರಿಂದ ಆ ನೀರನ್ನು ತಡೆಗಟ್ಟುತ್ತೀರಿ, ಜೊತೆಗೆ ಮಣ್ಣನ್ನು ತಡೆಗಟ್ಟಿ ಈ ಹೂಳು ತುಂಬುವುದು ತಪ್ಪುತ್ತದೆ. ಇಲ್ಲದಿದ್ದರೆ ಇನ್ನು 5-10 ವರ್ಷಗಳಲ್ಲಿ ಈ ಹೂಳನ್ನು ತೆಗೆಯುವಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಆಗ ಅನಿವಾರ್ಯವಾಗಿ ಒಣ ಪ್ರದೇಶದ ಬೇಸಾಯ ಮಾಡುವಂಥವರಿಗೆ ಅನುಕೂಲವಾಗುವಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವಂತಹ ಪರಿಸ್ಥಿತಿ ಬರುತ್ತದೆ. ಅನಿವಾರ್ಯತೆ ಬಂದಾಗ ನಮ್ಮ ಕಡೆ ಕಾರ್ಯಕ್ರಮವನ್ನು ತೆಗೆದುಕೊಳ್ಳುವಂತಹ ಕೆಲಸವನ್ನು ತಾವು ಮಾಡಬಾರದು. ದಯಮಾಡಿ ನಿಮ್ಮ ಆದ್ಯತೆಯಲ್ಲಿ ಒಣ ಬೇಸಾಯ ಕೃಷಿಗೂ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಈ ಸಾರಿ ನೀವು ನೀರಾವರಿಗೆ ಸುಮಾರು 800 ರಿಂದ 850 ಕೋಟಿ ರೂ.ಗಳನ್ನು ಇಟ್ಟಿದ್ದೀರಲ್ಲಾ ಅದರಲ್ಲಿ 80 ಕೋಟಿ ರೂ.ಗಳನ್ನಾದರೂ ಒಣ ಪ್ರದೇಶದ ಕೃಷಿಯ ಅಭಿವೃದ್ಧಿಗಾಗಿ ಮೀಸಲಿಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಇನ್ನು ತಾವು ತೆರಿಗೆಯನ್ನು ಹಾಕುವಾಗ ಗ್ರಾಮೀಣ ಜನರು, ಬಡ ಜನರು ಹೆಚ್ಚಾಗಿ ಉಪಯೋಗ ಮಾಡುವಂಥ ಸಾಮಾನುಗಳ ಮೇಲೆ ಹೆಚ್ಚು ತೆರಿಗೆಯನ್ನು ಹಾಕಿದ್ದೀರಿ. ಬೆಲ್ಲ, ರವೆ, ಮೈದಾ, ಗೋಧಿ ಹಿಟ್ಟು ಇದರ ಮೇಲೆ ಬಹುತೇಕ ಹಾಕಿದ್ದೀರಿ. ಇದರ ಬಗ್ಗೆ ತಾವು ಆಯವ್ಯಯದ ಮೇಲೆ ಮಾತನಾಡುವಾಗ ಇದನ್ನು ಗಣನೆಗೆ ತೆಗೆದುಕೊಳ್ಳುತ್ತಿರೋ ಏನೊ ಎಂಬ ಭಾವನೆ ನನಗೆ ಇದೆ. 1991ರಲ್ಲಿ ನಮ್ಮ ಸರ್ಕಾರವು ಮೈದಾ, ಗೋಧಿ ಹಿಟ್ಟು, ರವೆ, ಸೋಜಿ, ಇದರ ಮೇಲೆ ತೆರಿಗೆ ಹಾಕಿತ್ತು. ಆಗ ಅದರ ಮೇಲೆ ಸಾಕಷ್ಟು ಪ್ರತಿಕ್ರಿಯೆ ಬಂದಿದ್ದರಿಂದ ಅದನ್ನು ಹಿಂದಕ್ಕೆ ತೆಗೆದುಕೊಂಡಿತ್ತು. ಆದುದರಿಂದ ತಾವು ಸಹ ಇದನ್ನು ಹಿಂದಕ್ಕೆ ತೆಗೆದುಕೊಳ್ಳಿ. ಇನ್ನು ಉತ್ತರ ಕರ್ನಾಟಕದಲ್ಲಿ ಫ್ಲೋರ್ ಮಿಲ್ಸ್‌ಗಳಿವೆ. ಫ್ಲೋರ್ ಮಿಲ್ಸ್ ಎಂದರೆ ದೊಡ್ಡ ಫ್ಲೋರ್ ಮಿಲ್ಸ್‌ಗಳಲ್ಲ. ನಮ್ಮ ಕಡೆ ಅದನ್ನು ಚಕ್ಕಿ ಮಿಲ್ಸ್ ಎಂದು ಕರೆಯುತ್ತೇವೆ. ಬಹಳ ಸಣ್ಣ ಮಿಲ್ಸ್‌ಗಳು ಇಂತಹ ನೂರಾರು ಮಿಲ್ಸ್‌ಗಳು ಇವೆ. ಒಂದೊಂದು ನಗರದಲ್ಲೂ ನೂರಾರು ಇಂತಹ ಮಿಲ್ಸ್‌ಗಳು ಇವೆ. ಇವರು ಉತ್ತಮವಾದ ಗುಣಮಟ್ಟದ ಮೈದಾ ರವೆ, ಸೊಜಿ, ಗೋಧಿ ಹಿಟ್ಟನ್ನು ಜನರಿಗೆ ಸರಬರಾಜು ಮಾಡುತ್ತಾರೆ. ಅಷ್ಟೇ ಅಲ್ಲದೆ ಬೇರೆ ರಾಜ್ಯಗಳಿಗೂ ಅವುಗಳನ್ನು ಕಳುಹಿಸುತ್ತಾರೆ. ಅವರಿಗೆ ಅನುಕೂಲವಾಗಬೇಕಾದರೆ ಆ ಉದ್ಯಮಗಳು

ಸರಿಯಾಗಿ ನಡೆಯಬೇಕಾದರೆ ಅವರು ಪರ ರಾಜ್ಯಗಳೊಂದಿಗೆ ಪೈಪೋಟಿ ನಡೆಸಬೇಕಾದರೆ ಈ ತೆರಿಗೆಯನ್ನು ಹಿಂದಕ್ಕೆ ತೆಗೆದುಕೊಳ್ಳುವಂತಹ ಕೆಲಸವನ್ನು ತಾವು ದಯಮಾಡಿ ಮಾಡಬೇಕು. ಇವತ್ತು ನಾವೆಲ್ಲಾ ಕೃಷಿ ಎಂದ ಕೂಡಲೇ ರಸಗೊಬ್ಬರ ಅದಕ್ಕೆ ಸಬ್ಸಿಡಿ, ಕ್ರಿಮಿನಾಶಕ, ಅದಕ್ಕೆ ಸಬ್ಸಿಡಿ, ಇದರ ಬಗ್ಗೆ ನಾವು ಸಾಕಷ್ಟು ಮಾತನಾಡುತ್ತೇವೆ. ಈ ರಾಸಾಯನಿಕ ಗೊಬ್ಬರವನ್ನು ಉಪಯೋಗಿಸುವುದರಿಂದ ನಮ್ಮ ಭೂಮಿಯ ಫಲವತ್ತತೆ ಹಾಳಾಗಿದೆ ಎಂದು ಎಲ್ಲಾ ತಜ್ಞರು ಹೇಳುತ್ತಿದ್ದಾರೆ. ರಸಾಯನಿಕ ಗೊಬ್ಬರ ಹೇಗೆ ಎಂದರೆ ಜನರಿಗೆ ಸೇಂದಿ ಮತ್ತು ಸೆರೆ ಹೇಗೆ ನಮ್ಮನ್ನು ಹಾಳು ಮಾಡುತ್ತದೆಯೋ ಹಾಗೆ ಈ ಗೊಬ್ಬರ ಭೂಮಿಯನ್ನು ಹಾಳು ಮಾಡುತ್ತದೆ. ತತ್ಕಾಲಕ್ಕೆ ಅದರಿಂದ ನಮಗೆ ಲಾಭವಾದರೂ ಮುಂದೆ ಇದರಿಂದ ಬಹಳಷ್ಟು ಭೂಮಿ ಹಾಳಾಗಿ ಅದರ ಫಲವತ್ತತೆ ಹೋಗಿ ಭೂಮಿ ಬರಡಾಗಿ ನಮ್ಮ ಮುಂದಿನ ಜನಾಂಗ ನಮ್ಮನ್ನು ಶಪಿಸುವಂತಹ ಒಂದು ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದುದರಿಂದ ದಯಮಾಡಿ ನೀವು ಈ ಫಲವತ್ತತೆಯನ್ನು ಉಳಿಸಿಕೊಳ್ಳಬೇಕಾದರೆ ನಾವು ಹೆಚ್ಚು ನೈಸರ್ಗಿಕ ಕೃಷಿಗೆ ಹೆಚ್ಚಿನ ಮಹತ್ವವನ್ನು ಕೊಡಬೇಕು. ಕಾಂಪೋಸ್ಟ್ ಗೊಬ್ಬರ, ಎರೆಹುಳು ಗೊಬ್ಬರವನ್ನು ಉಪಯೋಗ ಮಾಡುವಂತಹ ಕಾರ್ಯಕ್ರಮಗಳಿಗೆ ಹೆಚ್ಚಿನ ಸಹಾಯವನ್ನು ಅನುಕೂಲವನ್ನು ಕಲ್ಪಿಸಿಕೊಡಬೇಕು. ರಸಾಯನಿಕ ಗೊಬ್ಬರದ ಮೇಲೆ ಸಬ್ಸಿಡಿಯನ್ನು ನೀವು ಕಟ್ ಮಾಡಿದಾಗ ರಾಜಕೀಯವಾಗಿ ನಿಮಗೆ ಅನುಕೂಲವಾಗುತ್ತದೆ ಎಂಬ ದೃಷ್ಟಿಯಿಂದ ಅದಕ್ಕೆ ವಿರೋಧವಾದಂತಹ ಕೆಲಸವನ್ನು ನೀವು ಮಾಡಬೇಡಿ. ಅದನ್ನು ತಾವು ವಿರೋಧ ಮಾಡಿದರೆ ಈ ರೈತಾಪಿ ಜನಾಂಗಕ್ಕೆ ಶಾಪವನ್ನು ಮಾಡಿದ ಹಾಗೆ ಎಂಬುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಈ ಸಬ್ಸಿಡಿ ಪೂರ್ತಿ ಹೋಗಿ ಗೊಬ್ಬರದ ಬೆಲೆ ಜಾಸ್ತಿಯಾದಾಗ ಅದನ್ನು ಉಪಯೋಗ ಮಾಡದ ಹಾಗೆ ಪರಿಸ್ಥಿತಿ ನಿರ್ಮಾಣವಾದಾಗ ಮಾತ್ರ ಈ ರೈತ ಕಾಂಪೋಸ್ಟ್ ಗೊಬ್ಬರ ಮತ್ತು ಎರೆಹುಳು ಗೊಬ್ಬರಕ್ಕೆ ಹೋಗುತ್ತಾರೆ. ಆದುದರಿಂದ ಮೊದಲನೆಯದಾಗಿ ಈ ಕೃಷಿ ಪದ್ಧತಿಯಿಂದಾಗಿ ಆ ಭೂಮಿಯ ಫಲವತ್ತತೆಯನ್ನು ಕಾಪಾಡುವುದಕ್ಕೆ ಸಾಧ್ಯವಾಗುತ್ತದೆ. ಬಡವರ ಕುಟುಂಬಗಳು ಅಭಿವೃದ್ಧಿಯಾಗುತ್ತದೆ. ಇಲ್ಲದಿದ್ದರೆ ನಾವೆಲ್ಲ ಬೆಳೆಯುವುದು ಗೊಬ್ಬರ ಖರೀದಿ ಮಾಡುವ ಸಲುವಾಗಿ ಮತ್ತು ದಲ್ಲಾಳಿಗಳಿಗೆ ಬಡ್ಡಿ ಕೊಡುವ ಸಲುವಾಗಿ, ಈ ಕ್ರಿಮಿನಾಶಕ ಖರೀದಿ ಮಾಡುವ ಸಲುವಾಗಿ ಎಂಬ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ನಮ್ಮ ನವಲಗುಂದ ತಾಲ್ಲೂಕ್‌ನಲ್ಲಿ ನಾವೇ ಮೊದಲು ಡಿ.ಸಿ.ಹೆಚ್. ಪ್ರತಿ ಎಕರೆಗೆ 15-20 ಕ್ವಿಂಟಾಲ್ 25 ಕ್ವಿಂಟಾಲ್ ಬೆಳೆ ತೆಗೆದಿದ್ದೇವೆ. ರಾಯಚೂರ್ ಜಿಲ್ಲೆಯ ವರಾದ ಮಾನ್ಯ ಉಪಸಭಾಪತಿಗಳೆ ತಮಗೆ ಗೊತ್ತಿರಬಹುದು. ಎಕರೆಗೆ 15-20 ಕ್ವಿಂಟಾಲ್ ತೆಗೆಯುವಂತಹ ರೈತ ಈಗ 4-5 ಕ್ವಿಂಟಾಲ್ ಸಹ ತೆಗೆಯದಂತಹ ಪರಿಸ್ಥಿತಿಯಾಗಿದೆ. ನವಲಗುಂದದಲ್ಲಿ ಕೇವಲ 3 ಕ್ವಿಂಟಾಲ್ ಎಂದು ಹೇಳುತ್ತಾರೆ. ಈ ರೀತಿ ಇಳುವರಿ ಕಡಿಮೆಯಾಗುವುದಕ್ಕೆ ಕಾರಣ, ಈ ಕೃಷಿ ಪದ್ಧತಿ. ನಾವು ಏನು ರಸಾಯನಿಕ ಗೊಬ್ಬರ ಉಪಯೋಗ ಮಾಡಿ ಮತ್ತು ಕ್ರಿಮಿನಾಶನ ಉಪಯೋಗ ಮಾಡಿ ನಮ್ಮ ಭೂಮಿಯ ಫಲವತ್ತತೆಯನ್ನು ಕಡಿಮೆ ಮಾಡುತ್ತಿದ್ದೆವಲ್ಲಾ ಇದರಿಂದ ನಮ್ಮ ಇಳುವರಿ ಕಡಿಮೆಯಾಗುತ್ತಿದೆ. ಈ ವಿಚಾರ ಎಲ್ಲರ ಗಮನಕ್ಕೂ ಬಂದಿದೆ. ಈಗ ಅಲ್ಲಲ್ಲಿ ನೈಸರ್ಗಿಕ ಕೃಷಿಯನ್ನು ಬಹಳ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಅದರಿಂದ ಬಡವರ ಕುಟುಂಬಗಳು ಆರ್ಥಿಕವಾಗಿ ಸಾಕಷ್ಟು ಅಭಿವೃದ್ಧಿಯಾಗಿವೆ. ಈ ದಿಸೆಯಲ್ಲಿ ಕೃಷಿ ವಿಶ್ವಾವಿದ್ಯಾನಿಲಯದ ಮುಖಾಂತರ, ಕೃಷಿ ತಜ್ಞರ ಮುಖಾಂತರ, ಮತ್ತು ನಿಮ್ಮ ಗ್ರಾಮೀಣ ಸೇವಕರ

ಮುಖಾಂತರ ಈ ನೈಸರ್ಗಿಕ ಕೃಷಿಗೆ ಸರಿಯಾದ ತಿಳುವಳಿಕೆಯನ್ನು ಜನರಿಗೆ ಕೊಟ್ಟು ಅವರು ಈ ಕಾಂಪೋಸ್ಟ್ ಗೊಬ್ಬರ, ಎರೆಹುಳು ಗೊಬ್ಬರವನ್ನು ಉಪಯೋಗ ಮಾಡುವಂಥದ್ದನ್ನು ಕಲ್ಪಿಸಿಕೊಡಬೇಕೆಂದು ನಮ್ಮ ಸಲಹೆಯನ್ನು ಕೊಡುತ್ತಾ ಇದ್ದೇನೆ. ಇನ್ನು ಅಕ್ಕಿಗೆ 720 ಕೋಟಿ ರೂ.ಗಳನ್ನು ತಾವು ಏನು ಸಬ್ಸಿಡಿಯನ್ನು ಕೊಡುತ್ತಾ ಇದ್ದೀರಿ ಅದನ್ನು ನಾನು ಬೇಡವೆಂದು ಹೇಳುವುದಿಲ್ಲ. ಆದರೆ ಎಲ್ಲರೂ ಅಕ್ಕಿಯನ್ನು ತಿನ್ನುವುದಿಲ್ಲ. ನಾವು ಉತ್ತರ ಕರ್ನಾಟಕದಲ್ಲಿ ಹೆಚ್ಚು ಅಕ್ಕಿಯನ್ನು ತಿನ್ನುವುದಿಲ್ಲ. ಯಾವಾಗಲಾದರೂ ಒಮ್ಮೆ ಅಂದರೆ ಬೀಗರು, ಹಬ್ಬಹರಿದಿನಗಳಲ್ಲಿ, ಮಾತ್ರ ನಾವು ಅಕ್ಕಿಯನ್ನು ತಿನ್ನುತ್ತೇವೆ. ಉಳಿದ ಸಮಯದಲ್ಲಿ ಜೋಳ ಗೋದಿಯನ್ನು ತಿನ್ನುತ್ತೇವೆ. ಸಾಮಾನ್ಯವಾಗಿ ನಾವು ಜೋಳ ವನ್ನು ಹೆಚ್ಚಾಗಿ ತಿನ್ನುತ್ತೇವೆ. ನೀವು ಪಡಿತರ ಅಂಗಡಿಗಳಲ್ಲಿ ಗೋಧಿಯನ್ನು ಕೊಡುವುದರಿಂದ ನಾವು ತಿನ್ನುತ್ತೇವೆ. ನೀವು ಅಕ್ಕಿಗೆ ಕೊಡುವ ಸಬ್ಸಿಡಿಯನ್ನು ಕೊಟ್ಟು ಕೆಲವು ಭಾಗಕ್ಕೆ 10 ಕೆ.ಜಿ. ಅಕ್ಕಿಯನ್ನು ಕೊಡುತ್ತಿದ್ದೀರಿ. ನಮಗೆ ಅದರಲ್ಲಿ 5 ಕೆ.ಜಿ. ಅಕ್ಕಿ ಮತ್ತು 5 ಕೆ.ಜಿ. ಜೋಳವನ್ನು ಕೊಡಿ. ಇದಕ್ಕೆ ಹೇಗೂ ಹಣ ಖರ್ಚಾಗುತ್ತಿದೆ, ಜೋಳಕ್ಕೂ ಸಬ್ಸಿಡಿ ಕೊಡಿ. ಈ ಜೋಳ ರಾಗಿ ಉಳಿದ ರಾಜ್ಯಗಳಿಗೆ ಉಪಯೋಗವಿಲ್ಲವೆಂದು ಕೇಂದ್ರ ಸರ್ಕಾರದಿಂದಲೂ ಮತ್ತು ರಾಜ್ಯ ಸರ್ಕಾರದಿಂದಲೂ ಇದಕ್ಕೆ ಸಬ್ಸಿಡಿ ಇಲ್ಲ. ನೀವು ಅಕ್ಕಿಯ ಜೊತೆಗೆ ರಾಗಿಯನ್ನು ತಿನ್ನುತ್ತೀರಿ. ನಾವು ಜೋಳದ ಜೊತೆಗೆ ಅನಿವಾರ್ಯವೆಂದು ಅಕ್ಕಿಯನ್ನು ತಿನ್ನುತ್ತೇವೆ. ಆದುದರಿಂದ ನಾನು ಹೇಳಿದ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವೇ? ಎಂಬುದು ನೋಡಿ. ಇಲ್ಲಿ ನಮಗೇ ಚಾಯ್ಸ್ ಕೊಟ್ಟರೆ ಒಳ್ಳೆಯದು ನಿಮಗೆ ಅಕ್ಕಿ ಬೇಕೊ, ಜೋಳ ಬೇಕೊ ರಾಗಿ ಬೇಕೊ ಎಂದು ಈ ರೀತಿ ಆರಿಸಿಕೊಳ್ಳುವ ಚಾಯ್ಸ್‌ನ್ನು ನಮಗೆ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ತಾವು ಅಕ್ಕಿಗೆ ಈಗ 3 ರೂ.ಗಳನ್ನು ಸಬ್ಸಿಡಿ ಕೊಡುತ್ತೀರಿ, ಅದೇ ರೀತಿ ಜೋಳಕ್ಕೂ 3 ರೂ.ಗಳನ್ನು ಸಬ್ಸಿಡಿ ಕೊಟ್ಟರೆ ಈಗ ಜೋಳದ ಬೆಲೆ 7-8ರೂ.ಗಳು ಇದೆ. ಸಬ್ಸಿಡಿ ಕೊಟ್ಟರೆ ಅದು ಕೆ.ಜಿ. 5 ರೂ.ಗಳಿಗೆ ಸಿಕ್ಕುತ್ತದೆ. ಆದುದರಿಂದ ನಮಗೆ ಬಹಳ ಅನುಕೂಲವಾಗುತ್ತದೆ. ನೀವು ಹಾಗೆ ಮಾಡಿದಲ್ಲಿ ನಮ್ಮ ಗ್ರಾಮೀಣ ಜನರು, ಬಡ ಜನರು ನಿಮ್ಮ ಕೆಲಸವನ್ನು ಸ್ಮರಿಸಿಕೊಳ್ಳುತ್ತಾರೆ. ಆದುದರಿಂದ ಈ ರೀತಿಯಾದ ಬದಲಾವಣೆಯನ್ನು ತರಬೇಕೆಂದು ಹೇಳುತ್ತೇನೆ. ಇನ್ನು ಗ್ರಾಮೀಣ ಭಾಗಗಳಲ್ಲಿ ಇರುವಂತಹ ರೈತರು ಕೇಂದ್ರ ಸರ್ಕಾರದ ಅಥವಾ ರಾಜ್ಯಸರ್ಕಾರದ ಧನಸಹಾಯವನ್ನು ಅಪೇಕ್ಷಿಸುವುದಿಲ್ಲ. ನಾವು ಅಪೇಕ್ಷೆ ಮಾಡುವುದು ಕೇಂದ್ರ ಸರ್ಕಾರವಿರಲೀ ರಾಜ್ಯ ಸರ್ಕಾರವಿರಲೀ ನಮಗೆ ಅನುಕೂಲ ವಾಗುವಂಥ ಮಾರುಕಟ್ಟೆಯನ್ನು ರೂಪಿಸಿಕೊಡಿ ಎಂದು ಹೇಳುತ್ತಾರೆ. ಇವತ್ತು ಎ.ಪಿ.ಎಂ.ಸಿ.ಗಳು ರೆಗ್ಯೂಲೆಟಡ್ ಮಾರ್ಕೆಟ್‌ಗಳ ರೈತರ ಹಿತರಕ್ಷಣೆಗಾಗಿ, ರೈತರ ಶೋಷಣೆಯನ್ನು ತಪ್ಪಿಸುವ ಸಲುವಾಗಿ ಸ್ಥಾಪಿತವಾಗಿವೆ. ಮಾನ್ಯ ಜಾಲಪ್ಪನವರು ಹಿಂದೆ ಮಾರುಕಟ್ಟೆಯ ಸಚಿವರಾಗಿದ್ದಾಗ ದಲ್ಲಾಲರು ಅನ್ನು ರೈತರಿಂದ ದಲ್ಲಾಳಿಯನ್ನು ವಸೂಲು ಮಾಡಬಾರದೆಂದು ಒಂದು ಕಾನೂನನ್ನು ಜಾರಿಗೆ ತಂದರು. ಆದರೆ ಇವತ್ತು ಬಹಳ ದುರ್ದೈವದಿಂದ ಹೇಳಬೇಕಾಗುತ್ತದೆ. ಸಚಿವರು ಆಗ ಕಾನೂನನ್ನು ತಂದದ್ದೇ ತಪ್ಪಾಯಿತೇನೋ ಎಂಬುದು ನಮ್ಮ ಲಕ್ಷ್ಯಕ್ಕೆ ಬರುತ್ತದೆ. ನಮ್ಮ ಕಡೆ ಈಗಂತೂ ರೈತರ ಪ್ರತಿನಿಧಿಗಳು ಆ ಎ.ಪಿ.ಎಂ.ಸಿ.ಯವರ ಆಡಳಿತದಲ್ಲಿ ಇಲ್ಲವೇ ಇಲ್ಲ ಎಲ್ಲಾ ಅಡ್‌ಮಿನಿಸ್ಟ್ರೆಟರ್‌ನ್ನೇ ನೇಮಕ ಮಾಡಿದ್ದಾರೆ. ಮಾನ್ಯ ಜಾಲಪ್ಪನವರೇ, ನಮ್ಮ ಕಡೆ ಹತ್ತಿಯನ್ನು ಮಾರಾಟ ಮಾಡಬೇಕಾದರೆ ರಾಣಿಬೆನ್ನೂರುನಲ್ಲಿ payment ಮಾಡಬೇಕಾದರೆ ಶೇ. 20ರಷ್ಟು ದಲ್ಲಾಳಿಯನ್ನು ಹಿಡಿದುಕೊಳ್ಳುತ್ತಾರೆ.

ಶ್ರೀ ಆರ್.ಎಲ್. ಜಾಲಪ್ಪ : ಇದು ಬಹಳ ಜಾಸ್ತಿಯಾಯಿತು. ತಾವು ಅಮೆಂಡ್‌ಮೆಂಟ್ ಬಗ್ಗೆ ಹೇಳಿದ್ದೀರಿ. ತಮಗೆ ಚೆನ್ನಾಗಿ ಗೊತ್ತಿದೆ. ತಾವು ರೆಗ್ಯೂಲೇಟಿಂಗ್ ಮಾರುಕಟ್ಟೆಯ ಛೇರ್ಮನ್ ಬಹಳ ಎಫೆಕ್ಟೀವಾಗಿ ಬಂತು. ಇದರಲ್ಲಿ ತಪ್ಪು ಏನಾಯಿತು ಎಂದರೆ ಸರ್ಕಾರ ಕ್ರಮ ಕೈಗೊಳ್ಳುವುದಕ್ಕೆ ಮೊದಲೇ ಚುನಾವಣೆ ಮಾಡಬೇಕಾಗಿತ್ತು ಅದನ್ನು ನಾವು ಮಾಡಲಿಲ್ಲ. 5-6 ತಿಂಗಳುಗಳನ್ನು ಕಳೆದೆವು. ನಂತರ ನಮ್ಮ ಸ್ನೇಹಿತರ ಸರ್ಕಾರ ಬಂದಾಗ ಅವರೂ ಕೂಡ ಈ ಮಾರುಕಟ್ಟೆಯ ಚುನಾವಣೆಯನ್ನು ಮಾಡದಿರುವುದರಿಂದ ಯಾರು ಹೇಳುವವರು ಕೇಳುವವರು ಇಲ್ಲದೆ ಹೀಗಾಗಿದೆ. ರೈತರ ಹತ್ತಿರ ಶೇ. 10ರಷ್ಟು ದಲ್ಲಾಳಿಯನ್ನು ತೆಗೆದುಕೊಳ್ಳುತ್ತಿದ್ದಾರೆ. ಕೊಳ್ಳುವವರಿಂದಲೂ ಹತ್ತು ಪರ್ಸೆಂಟ್ ತೆಗೆದು ಕೊಳ್ಳುತ್ತಾರೆ, ನಮ್ಮನ್ನು ಅಪಹಾಸ್ಯ ಮಾಡುತ್ತಾರೆ, ಜಾಲಪ್ಪನವರ ಫೋಟೋ ಹಾಕಿಕೊಂಡು ಪೂಜೆ ಮಾಡಬೇಕು ಎಂದು. ಈ ಸ್ಥಿತಿಗೆ ನಮ್ಮನ್ನು ತಂದುಬಿಟ್ಟರು ನಮ್ಮ ಸ್ನೇಹಿತರು. ಈಗ ನಾವು ಬಂದಿದ್ದೇವೆ, ಇನ್ನು ಆರು ತಿಂಗಳಲ್ಲಿ ಎ.ಪಿ.ಎಂ.ಸಿ. ಚುನಾವಣೆ ಮಾಡಿ ಅದಕ್ಕೆ ಏನಾದರೂ ಒಂದು ವ್ಯವಸ್ಥೆಯನ್ನು ಖಂಡಿತವಾಗಿ ಮಾಡುತ್ತೇವೆ ಎಂದು ಹೇಳಿ ನಾನು ನಮ್ಮ ಸ್ನೇಹಿತರಿಗೆ ಭರವಸೆ ಕೊಡುತ್ತೇನೆ.

6.10 ಪಿ.ಎಂ.

ಶ್ರೀ ಡಿ. ಆರ್. ಪಾಟೀಲ್ : ಸನ್ಮಾನ್ಯ ಉಪಾಧ್ಯಕ್ಷರೆ, ಜಾಲಪ್ಪನವರು ಹೇಳಿದಹಾಗೆ ಗದಗ್‌ನಲ್ಲಿ ನಾನು ಎಪಿಎಂಸಿ ಛೇರ್ಮನ್ ಆದಾಗ ಈ ಕೆಲಸ ಮಾಡಿದ್ದೆವು. ಆದರೆ ಅದನ್ನು ಮಾಡಬೇಕಾದರೆ ನಮಗೆ ಎಷ್ಟು ತೊಂದರೆಯಾಯಿತು ಎನ್ನುವ ಅನುಭವವೂ ಅವರಿಗೆ ಇದೆ, ನಮ್ಮ ಮೇಲೆ ಎಂತಹ ಒತ್ತಾಯ ಬರುತ್ತದೆ, ರಾಜಕೀಯವಾಗಿ ಎಂತಹ ಗಟ್ಟಿವುಳ್ಳವರು ವಿರೋಧವನ್ನು ಅನುಭವಿಸಬೇಕಾಗುತ್ತದೆ ಎನ್ನುವುದು. ಅದಕ್ಕೆ ಒಂದು ಮಾತನ್ನು ತಮಗೆ ಹೇಳುತ್ತೇನೆ,

ಶ್ರೀ ಆರ್.ಎಲ್. ಜಾಲಪ್ಪ : ರೈತರ ಹಿತದೃಷ್ಟಿಯಿಂದ ನಾವು ವಿರೋಧ ಪಕ್ಷದಲ್ಲಿದ್ದಾಗ ಪೂರ್ಣವಾದ ಬೆಂಬಲವನ್ನು ಕೊಟ್ಟಿದ್ದೆವು.

ಶ್ರೀ ಡಿ.ಆರ್. ಪಾಟೀಲ್ : ನೀವು ಬೆಂಬಲ ಕೊಟ್ಟಿದ್ದರಿಂದ ನಾನು ಅದನ್ನು ಮಾಡಲಿಕ್ಕೆ ಸಾಧ್ಯವಾಯಿತು. ಇಲ್ಲದಿದ್ದರೆ ನಿಮ್ಮ ಮುಖ್ಯಮಂತ್ರಿಗಳು ನನ್ನನ್ನು ಛೇರ್ಮನ್ ಪದವಿಯಿಂದ ತೆಗೆಯಬೇಕು ಎಂದು ಪ್ರಯತ್ನಮಾಡಿದ್ದರು ಅದೂ ತಮಗೆ ಗೊತ್ತಿದೆ. ಈಗ ಜಾಲಪ್ಪನವರೆ ದಯವಿಟ್ಟು ಗಮನ ಕೊಡಬೇಕು, ಒಂದು ಸಲಹೆಯನ್ನು ನಾನು ತಮಗೆ ಮಾಡುತ್ತೇನೆ, ಇವತ್ತು ದಲ್ಲಾಳಿಗಳ ಹತ್ತಿರ ಹೋಗಿ ಪಟ್ಟಿ ತೆಗೆದುಕೊಂಡು ಬಂದರೆ ನಮ್ಮ ದಲ್ಲಾಳಿಯನ್ನು ಅವರು ಮುರಿದುಕೊಳ್ಳುತ್ತಾರೆ, ಆದರೆ ರೈತರಿಗೆ ಹಾಗೆ ದುಡ್ಡನ್ನು ಕೊಟ್ಟು ಹೋಗಿರುತ್ತಾರೆ. ದಲ್ಲಾಳಿಯನ್ನು ನಮಗೆ ಮುರಿದುಕೊಂಡು ದುಡ್ಡು ಕೊಡುತ್ತಾರೆ. ಅವರು ನೇರವಾಗಿ ರೈತರಿಗೆ ಪಟ್ಟಿಯನ್ನು ಕೊಡುವ ಮೊದಲು ಅದನ್ನು ಎಪಿಎಂಸಿ ಮುಖಾಂತರ ಕೊಡುವಂಥ ಒಂದು ವ್ಯವಸ್ಥೆಯನ್ನು ತಾವು ಕಾನೂನು ಪ್ರಕಾರ ತಂದುಬಿಟ್ಟರೆ ಅವರು ದಲ್ಲಾಳಿಯನ್ನು ಮುರಿದುಕೊಳ್ಳುವ ಪರಿಸ್ಥಿತಿ ನಿಂತುಬಿಡುತ್ತದೆ. ನಾವು ಜನಪ್ರತಿನಿಧಿಗಳನ್ನು ಅಲ್ಲಿ ಆಡಳಿತದಲ್ಲಿ ತಂದರೆ ಈ ವ್ಯವಸ್ಥೆ ಬರುತ್ತದೆ ಎಂದಲ್ಲ. ಇದು ಎಪಿಎಂಸಿ ಮುಖಾಂತರ ಪೇಮೆಂಟ್ ಆದಾಗ ಮಾತ್ರ ದಲ್ಲಾಳಿ ಮುರಿದುಕೊಳ್ಳುವುದನ್ನು ನಾವು ನಿಲ್ಲಿಸುವುದಕ್ಕೆ

ಸಾಧ್ಯ ಇದೆ. ಇದರಿಂದ ಯಾರಿಗೂ ತೊಂದರೆ ಇಲ್ಲ, ಇದು ಎಪಿಎಂಸಿ ಒಳಗೆ ಸ್ವಲ್ಪ ಕೆಲಸ ಜಾಸ್ತಿಯಾಗುತ್ತದೆ, ಆದರೆ ಆಗಲೇ ಈಗೇನು ಕಂಪ್ಯೂಟರ್ಸ್ ಅವೆಲ್ಲಾ ಬಂದಿದ್ದಾವೆ ಅದರಿಂದ ಅಕೌಂಟಿಂಗ್‌ಗೆ ಬೇಕಾದಷ್ಟು ಅನುಕೂಲ ಆಗುತ್ತದೆ. ಅದಕ್ಕೆ ತಾವು ದಯವಿಟ್ಟು ರೈತರಿಗೆ ದಲ್ಲಾಳಿ ಕೊಡಬೇಕಾದರೆ ಎಪಿಎಂಸಿ ಮುಖಾಂತರರ ಕೊಡುವಂಥ ಒಂದು ವ್ಯವಸ್ಥೆಯನ್ನು ತಾವು ತಂದುಬಿಟ್ಟರೆ ಈ ಶೋಷಣೆ ಸಂಪೂರ್ಣವಾಗಿ ನಿಲ್ಲುತ್ತದೆ. ಅವತ್ತು ಈ ಕಾನೂನು ತರುವ ಮುಂಚೆ ಏನು ಉದ್ದೇಶವನ್ನು ಇಟ್ಟಿದ್ದೀರಿ ಆ ಉದ್ದೇಶ ಈಡೇರುತ್ತದೆ. ದಯವಿಟ್ಟು ಈ ಕೆಲಸವನ್ನು ತಾವು ಕ್ಯಾಬಿನೆಟ್‌ನಲ್ಲಿ ತಂದು ಅದನ್ನು ಅನುಕೂಲ ಮಾಡಿಕೊಡಬೇಕು ಎಂಬು ಸೂಚನೆಯನ್ನು ನಾನು ತಮಗೆ ಕೊಡ ಬಯಸುತ್ತೇನೆ. ನೀವು ಯಾವ ಹಳ್ಳಿಗೆ ಹೋಗಿ, ಯಾವ ಹಳ್ಳಿಯೊಳಗೂ, ನಮ್ಮ ಊರಿನೊಳಗೆ ತಲಾಟಿ ಇದ್ದಾನೆ, ನಮ್ಮ ಮನೆಗೆ ಗ್ರಾಮಸೇವಕ ಆಗಾಗ ಬರುತ್ತಾನೆ, ನಮ್ಮ ಶಾಲೆಯ ಮಾಸ್ತರು ಎಲ್ಲರೂ ಸರಿಯಾಗಿ ಬರುತ್ತಾರೆ ಫ಼ನ್ನುವಂಥ ಮಾತನ್ನು ನಾವು ಕೇಳಿಯೇ ಇಲ್ಲ. ಎಲ್ಲಿಗೆ ಹೋದರು ತಲಾಟಿ ಸಿಗುವುದಿಲ್ಲ, ಗ್ರಾಮಸೇವಕರು ಬರುವುದಿಲ್ಲ, ಮಾಸ್ತರರು ನಮ್ಮ ಹುಡುಗರಿಗೆ ಸರಿಯಾಗಿ ಕಲಿಸುವುದಿಲ್ಲ ಎಂಬ ಮಾತನ್ನು ನಾವು ಕೇಳುತ್ತೇವೆ, ಅದಕ್ಕೆ ಒಂದು ಕೆಲಸ ಸರ್ಕಾರ ಮಾಡಿತು ಅಂದರೆ ನಮಗೆ ಹೆಚ್ಚು ಅನುಕೂಲ ಆಗುತ್ತದೆ. ಸ್ವಾಮಿ, ಈ ಗ್ರಾಮಸೇವಕರಿಗೆ, ತಲಾಟಿಯವರಿಗೆ, ಮತ್ತು ಶಾಲಾ ಮಾಸ್ತರಿಗೆ ಸಂಬಳವನ್ನು ನೀವೇನು ಕೊಡುತ್ತೀರಲ್ಲ ಅದನ್ನು ಸರ್ಕಾರದಿಂದ ನೇರವಾಗಿ ಕೊಡುವುದರ ಬದಲು ಪಂಚಾಯಿತಿ ಮೂಲಕ ಕೊಡುವ ವ್ಯವಸ್ಥೆ ಆದರೆ ಆಗ ಅದನ್ನು ನೋಡಿ. ಆಮೇಲೆ ಅವರು ಕಾನಫಿಡೆನ್ಷಿಯಲ್ ರಿಪೋರ್ಟನ್ನು ಬರೆಯುವುದಕ್ಕೆ ಏನಾದರೂ ಅವಕಾಶ ಸಿಕ್ಕಿತು ಅಂದರೆ, ಅದನ್ನು ದಯವಿಟ್ಟು ಆ ಗ್ರಾಮಸಭೆಯೊಳಗೆ ಆ ಅಧಿಕಾರಿ ಬಗ್ಗೆ, ಆ ಮಾಸ್ತರ್ ಬಗ್ಗೆ, ಆ ತಲಾಟಿಯ ಬಗ್ಗೆ ಅಭಿಪ್ರಾಯ ತಿಳಿದುಕೊಂಡು ಆ ಅಭಿಪ್ರಾಯವನ್ನು ಕಾನ್‌ಫಿಡೆನ್ಷಿಯಲ್ ರಿಪೋರ್ಟ್‌ನಲ್ಲಿ ಬರುವಹಾಗೆ ಒಂದು ವ್ಯವಸ್ಥೆಯನ್ನು ನೀವು ಮಾಡಿದರೆ ಇವರ ಇತಿಹಾಸದ್ದು ಸ್ವಲ್ಪ ಮುಗಿದಾಗ ಅದು ಆ ಜನರ ಕೈಯೊಳಗೆ ಸಿಗುತ್ತದೆ. ಇವತ್ತು ಅಧಿಕಾರಿಗಳನ್ನು ಹೊಂದಿಸಿಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಬಹಳಷ್ಟು ತೊಂದರೆ ನಮಗೆ ಆಗುತ್ತದೆ ಎನ್ನುವ ಅನುಭವ ತಮಗೂ, ಗ್ರಾಮೀಣ ಭಾಗದಿಂದ ಬಂದವರೆಲ್ಲರಿಗೂ ಆಗಿರಬೇಕು. ಸ್ವಾಮಿ ಇವತ್ತು ಬಡ್ಡಿಯನ್ನು ಮನ್ನಾ ಮಾಡಿದಿರಿ, ಬಡ್ಡಿ ಮನ್ನಾ ಮಾಡುವುದರಿಂದ ಹಿಂದೆ ನೀವು ಸಾಲ ಮನ್ನಾ ಮಾಡಿದಾಗ ಏನೇನು ತೊಂದರೆ ಆಗಿದೆ ಎನ್ನುವುದರ ಅನುಭವ ತಮಗೆಲ್ಲರಿಗೂ ಇದೆ. ಮಾನ್ಯ ಜಾಲಪ್ಪನವರು ಸಹಕಾರ ಚಳುವಳಿಯಲ್ಲಿ ಕೆಲಸ ಮಾಡಿದ್ದಾರೆ. ಹಿಂದೆ ಸಾಲ ಮನ್ನಾ ಆದಂಥ ರೈತರಿಗೆ ಇವತ್ತು ಸಹಕಾರಿ ಸಂಸ್ಥೆಗಳಿಂದ ಸಾಲ ಸಿಗುತ್ತಿಲ್ಲ. ಅವರು ದಲ್ಲಾಳಿಗಳ ಹತ್ತಿರ ಸಾಲ ತೆಗೆದುಕೊಂಡು ಬರಬೇಕು. 1 ಪರ್ಸೆಂಟ್‌ನೊಳಗೆ ಸಾಲ ಸಿಗುವಂಥ ರೈತರಿಗೆ ನಾವು 36 ಪರ್ಸೆಂಟ್ 48 ಪರ್ಸೆಂಟ್ ಬಡ್ಡಿ ಕೊಟ್ಟು ದಲ್ಲಾಳಿಗಳ ಹತ್ತಿರ ನೀವು ಸಾಲ ತೆಗೆದುಕೊಳ್ಳುವಂಥ ಪರಿಸ್ಥಿತಿ ನಿರ್ಮಾಣ ಮಾಡಿದ್ದೇವೆ.

ಶ್ರೀ ಸಿ.ಎಂ. ಉದಾಸಿ : ಅಧ್ಯಕ್ಷರೆ, ಇವರು ಏನು ಹೇಳತ್ತಿದ್ದಾರೆ? ಹಿಂದೆ 1983 ರಿಂದ 1989ರವರೆಗಿನ ಸಾಲಕ್ಕೆ ಬಡ್ಡಿ ಮನ್ನಾ ಮಾಡಿದಿರಲ್ಲ, ಆ ಬಡ್ಡಿ ಮನ್ನಾ ಮಾಡಿದ ರೈತರಿಗೆ ಸಾಲ ಸಿಗುತ್ತಿಲ್ಲ ಎಂದು ಹೇಳುತ್ತಿರುವ ಮಾತು ಸತ್ಯಕ್ಕೆ ದೂರವಾದುದು. ಏಕೆಂದರೆ, ಇವತ್ತು ಅನೇಕ ಜನರಿಗೆ

ಹಳೆಯ ಸಾಲದ ಮೇಲೆ ನಾವು ಸಾಲವನ್ನು ಕೊಡಿಸಿ, ವಿತರಣೆ ಮಾಡಿದ್ದೇವೆ. ಏಕೆ ಈ ರೀತಿ ಹೇಳುತ್ತಾರೆ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ದಯವಿಟ್ಟು, ಸಾಲ ಮನ್ನಾ ಬಡ್ಡಿ ಮನ್ನಾ ಎಂದು ನಾನು . ಹೇಳುವುದಿಲ್ಲ. ಸಾಲ ಮನ್ನಾದೊಳಗೆ ಯಾರಿಗೆ ಲಾಭವಾಗಿದೆ ಆ ರೈತರಿಗೆ ಇವತ್ತಿಗೂ ಸಾಲ ಸಿಗುತ್ತಾ ಇಲ್ಲ. ನೀವು ಇದನ್ನು ಚೆಕ್ ಮಾಡಿಸಿ ಎಸ್.ಎಸ್. ಪಟೇಲರು ಹೇಳಿದ್ದಾರೆ ಎಂದು ತರಿಸಿ ಚೆಕ್ ಮಾಡಿ. ಕೆ.ಸಿ.ಸಿ. ಬ್ಯಾಂಕಿನಲ್ಲೂ, ಇದು ನಮೆಲ್ಲರಿಗೂ ಅನುಭವ ಇದೆ. ಇದು ಏನು ತಿಳಿದುಕೊಂಡಿರಿ, ಸಹಕಾರ ಸಚಿವರು ಇಲ್ಲಿಯೇ ಇದ್ದಾರೆ ಅವರು ಸಾಲ ಮನ್ನಾ ಆದಂಥ ರೈತರಿಗೆ ನಾವು ಸಾಲ ಕೊಡುತ್ತೇವೆ ಎಂಬುದನ್ನು ಎಂದು ಹೇಳಲಿ. ನೀವು ಹೇಳುವುದು ಬೇಡ. ಅವರು ಹೇಳಲಿ. ದಯವಿಟ್ಟು ಆ ಪರಿಸ್ಥಿತಿ ಇಲ್ಲ,

ಶ್ರೀ ಎಸ್.ಎಸ್. ಪಾಟೀಲ್ : ನೀವು ಹೇಳುವ ಮಾತು, ಅದು ಕೆಲವು ಕಡೆ ಏನಾಗಿದೆ ಆ ಬ್ಯಾಂಕಿನ, ಸೊಸೈಟಿ ಸರಿ ಇಲ್ಲದೆ ಕೊಟ್ಟಿಲ್ಲ, ಎಲ್ಲೆಲ್ಲಿ ಸೊಸೈಟಿ ಸರಿ ಇದೆ ಅಲ್ಲಿ ಕೊಟ್ಟಿದ್ದಾರೆ ನಿಮ್ಮ ತಾಲ್ಲೂಕಿನಲ್ಲಿ ಕೆಲವು ಸೊಸೈಟಿಗಳಲ್ಲಿ ಸಿಕ್ಕಿಲ್ಲ ಅದು ನಿಜ ಇದೆ. ಎಲ್ಲೆಲ್ಲಿ ಸೊಸೈಟಿಗಳು ಸರಿ ಇದೆ ಅಲ್ಲಿ ಕೊಟ್ಟಿದ್ದಾರೆ. ಉಳಿದ ಕಡೆ ಸೊಸೈಟಿ ರಿಕವರಿ ಸರಿ ಇಲ್ಲ ಅದಿಲ್ಲ ಇದಿಲ್ಲ ಅಂಥ ಕೊಟ್ಟಿಲ್ಲ ಕೊಡಬಾರದು ಎಂದು ಏನೂ ಇಲ್ಲ, ಬ್ಯಾಂಕಿನವರು ತಪ್ಪು ಇದೆ ಕೆಲವು ಕಡೆ ಕೊಟ್ಟಿಲ್ಲ.

ಶ್ರೀ ಎ.ಬಿ. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುವುದು ಬೇಡ. ನನಗೆ ಗೊತ್ತಿರುವ ಹಾಗೆ ನಮ್ಮ ತಾಲ್ಲೂಕಿನಲ್ಲಿ ನಾವು ಸಾಲವನ್ನು ಸಹಕಾರಿ ಸಂಘಗಳ ಮೂಲಕ ಕೊಡಿಸಿ ಆಗಿದೆ. ಎಲ್ಲಿ ಸಹಕಾರಿ ಸಂಘಗಳ ಕ್ಷೀಣವಾಗಿ ಹಾನಿಯನ್ನು ಅನುಭವಿಸುತ್ತಾ ಇದೆ, ಯಾವುದು ಸರಿಯಾಗಿ ವ್ಯವಸ್ಥೆಯನ್ನು ಮಾಡಿಕೊಂಡು ಬಂದಿಲ್ಲ, ಅನೇಕ ತೊಂದರೆಗಳಿವೆ, ಕಾರಣ ಏನೆಂದರೆ ಆ ಅವ್ಯವಸ್ಥೆಯಿಂದ ಕೆಲವು ಸಹಕಾರಿ ಸಂಘಗಳು ಹಿಂದಿನ ದುರಾಡಳಿತದಿಂದ ಮಾಡಿಕೊಂಡು ಬಂದಿದ್ದಾರೆ ಅಂತಹ ಸಂದರ್ಭದಲ್ಲಿ ಇದು ಆಗಲಿಕ್ಕೆ ಸಾಧ್ಯವಾಗಿರಬಹುದೇ ಹೊರತು ಉಳಿದ ಎಲ್ಲಾ ಸಹಕಾರಿ ಸಂಘಗಳಿಗೆ ಕೊಡುತ್ತಿದ್ದಾರೆ.

ಶ್ರೀ ಡಿ.ಆರ್. ಪಾಟೀಲ್ : ಬಹಳಷ್ಟು ಸಹಕಾರಿ ಸಂಘಗಳು ಈ ಸಾಲ ಮನ್ನಾ ಬಡ್ಡಿ ಮನ್ನಾದಿಂದ ಹಾಳಾಗುವುದು ನಮಗೂ ನಿಮಗೂ ಅನುಭವಕ್ಕೆ ಬಂದಿದೆ. ಕೆಲವೊಂದು ಸಹಕಾರಿ ಸಂಘಗಳಲ್ಲಿ ಸಹಿತ ಸಾಲ ಮನ್ನಾದಲ್ಲಿ ಲಾಭ ಪಡೆಯುವಂಥ ರೈತರಿಗೆ ಇವತ್ತು ಸಾಲ ಸಿಕ್ಕಿರದ ಅನೇಕ ಘಟನೆಗಳು ನಮ್ಮ ನಜರಿಗೆ ಬಂದಿದೆ. ಬೇಕಾದರೆ ನಿಮ್ಮ ನಜರಿಗೆ ಕಳುಹಿಸಿಹಿ ಅಂದರೆ ಕಳುಹಿಸುತ್ತೇನೆ. ಆದರೆ ಸಿಗುವ ಹಾಗೆ ವ್ಯವಸ್ಥೆಯನ್ನು ನೀವು ಮಾಡಿ. ಸ್ವಾಮಿ, ಈ ಸಹಕಾರಿ ವ್ಯವಸ್ಥೆ ಬಂದದ್ದು ಏತಕ್ಕೆ? ಖಾಸಗೀ ಮೂಲದೊಳಗೆ ರೈತರ ಶೋಷಣೆಯಾಗುತ್ತದೆ ಅದನ್ನು ನಿಲ್ಲಿಸಬೇಕು. ಅದನ್ನು ಸಹಕಾರಿ ಸಂಘದ ಮುಖಾಂತರ ಸರಳ ಬಡ್ಡಿಯೊಳಗೆ ಸಾಲ ಸಿಗಬೇಕು ಎನ್ನುವ ದೃಷ್ಟಿಯಿಂದ ಈ ವ್ಯವಸ್ಥೆಯನ್ನು ನಾವು ತಂದೆವು. ಇವೊತ್ತು ಅದೇ ವ್ಯವಸ್ಥೆಯನ್ನು ದುರ್ದೈವದಿಂದ ರೈತರನ್ನು ಖಾಸಗೀಯವರು ಹತ್ತಿರ ಹೋಗುವಂತೆ ಹೊರಗಟ್ಟುವಂಥ ಒಂದು ಪರಿಸ್ಥಿತಿ ಇವರು ಮಾಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ : ಅಧ್ಯಕ್ಷರೆ, ಪಾಟೀಲರು ಹೇಳುವುದು ಏನು ಇದೆಯಲ್ಲ ಆ ಮಾತು ಕೆ.ಸಿ.ಸಿ. ಬ್ಯಾಂಕಿನಲ್ಲಿ ನಡೆದಿರುವುದು, ನಿಜ ಇದೆ. ಏನೆಂದರೆ ಅವರು ಸೂಪರ್‌ಸೀಡ್ ತಮ್ಮ ಕೈಗೆ ತೆಗೆದುಕೊಂಡು ಆದ್ದರಿಂದ ಆ ರೀತಿ ಆಯಿತು. ಆಡಳಿತಾಧಿಕಾರಿಗಳನ್ನು ಕರೆಸಿ ಯಾರಿಗೂ ಸಾಲ ಕೊಡಿಸಿಲ್ಲ. ಈಗ ಸಾಲವನ್ನು ಖಂಡಿತವಾಗಿ ಎಲ್ಲರಿಗೂ ಕೊಡಿಸುತ್ತೇವೆ.

ಶ್ರೀ ಟಿ.ಹೆಚ್. ನಾರಾಯಣ ಸ್ವಾಮಿ : ಮಾನ್ಯ ಅಧ್ಯಕ್ಷರೆ, ಬಿ.ಆರ್. ಪಾಟೀಲ್‌ರವರು ಹೇಳುವಂಥದ್ದನ್ನು ನಾನು ಒಪ್ಪುತ್ತೇನೆ. ಕಾರಣ ಏನೆಂದರೆ, ಸಾಲ ಮನ್ನಾ, ಬಡ್ಡಿ ಮನ್ನಾ ಮಾಡಿ ....

ಉಪಾಧ್ಯಕ್ಷರು : ಅವರು ಧಾರವಾಡ ಜಿಲ್ಲೆಗೆ ಸೀಮಿತವಾಗಿ ಮಾತನಾಡುತ್ತಿದ್ದಾರೆ.

ಶ್ರೀ ಟಿ.ಹೆಚ್. ನಾರಾಯಣ ಸ್ವಾಮಿ : ದಯಮಾಡಿ, ಇದು ಸಹಕಾರಿ ಸಂಸ್ಥೆಗಳು ಎಲ್ಲಾ ಕಡೆ ಇವೆ. ಆದ್ದರಿಂದ ಎಲ್ಲೆಲ್ಲಿ ಯಾರು ಯಾರು ಹಣ ಕಟ್ಟಬೇಕಾಗಿತ್ತೋ ಅವರುಗಳು ಹಣವನ್ನು ಕಟ್ಟಲಿಲ್ಲ. ಸಾಲ ಮನ್ನಾ ಆಗುತ್ತದೆ, ಇವರ ಸರ್ಕಾರ ಬಂದರೆ ಸಾಲ ಮನ್ನಾ ಆಗುತ್ತದೆ ಎಂದು ಎಲ್ಲಾ ಸಹಕಾರಿ ಸಂಸ್ಥೆಗಳು, ಎಲ್ಲಾ ಕೆ.ಸಿ.ಸಿ. ಬ್ಯಾಂಕುಗಳು ಇವೊತ್ತು ಮುಳುಗತಕ್ಕಂಥ ಪರಿಸ್ಥಿತಿ ಆಗಿದೆ. ಅದನ್ನು ನಾನು ಒಪ್ಪುತ್ತೇನೆ. ಆದ್ದರಿಂದ ಈಗ ಎಲ್ಲರೂ ಒಪ್ಪತಕ್ಕ ವ್ಯವಸ್ಥೆ ಆಗಬೇಕಾಗಿದೆ.

ಶ್ರೀ ಬಿ.ಆರ್. ಪಾಟೀಲ್ : ಸನ್ಮಾನ್ಯ ಉಪಾಧ್ಯಕ್ಷರೆ, ಸಹಕಾರ ಸಚಿವರು ಈ ವರ್ಷವಾದರೂ ಸಾಲ ಮನ್ನಾದಿಂದ ಲಾಭ ಪಡೆದವರಿಗೆ ನಮ್ಮಲ್ಲಿ ಸಾಲವನ್ನು ಕೊಡಿಸುವ ವ್ಯವಸ್ಥೆಯನ್ನು ಮಾಡಿಸುತ್ತೇನೆ ಎಂದರು, ಅದಕ್ಕೆ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದು ಆದರೆ ಬಹಳ ಅನುಕೂಲ. ಆದರೆ ದಯವಿಟ್ಟು ಇನ್ನು ಮೇಲೆ ಬಡ್ಡಿ ಮನ್ನಾ, ಸಾಲ ಮನ್ನಾ ಇಂತಹವನ್ನು ಮಾಡುವುದಕ್ಕೆ ಹೋಗಬೇಡಿ. ಅದೇ ದುಡ್ಡನ್ನು ಪ್ರತಿ ಕುಟುಂಬಕ್ಕೆ ಇನ್ನೊಂದು ಸಂಪನ್ಮೂಲವನ್ನು ಹುಡುಕಿಕೊಳ್ಳುವುದರ ಸಲುವಾಗಿ ಅನುಕೂಲತೆಗಳನ್ನು ಕಲ್ಪಿಸಿಕೊಡುವುದರ ಸಲುವಾಗಿ ತಾವು ಉಪಯೋಗಿ ಮಾಡಿ. ಸುಮಾರು ನೂರು ಕೋಟಿ ರೂಪಾಯಿಗಳನ್ನು ನೀವು ಈಗ ಸಾಲ ಮನ್ನಾ ಅಂತ ಕೊಟ್ಟಿರಿ. ಅದರ ಬದಲು ನೀವು ಸಬ್ಸಿಡಿ, ಈ ರಿಯಾಯಿತಿ ಇದನ್ನು ಕೊಡುವ ಬದಲು ಆ ಕುಟುಂಬಕ್ಕೆ ಇನ್ನೊಂದು ಸಂಪನ್ಮೂಲವನ್ನು ದೊರಕಿಸಿಕೊಟ್ಟರೆ ಅವನು ಕೃಷಿಕನೆ ಇರಲೀ ಕೃಷಿಕಾರ್ಮಿಕನೆ ಇರಲೀ ಅಥವಾ ಯಾರಾದರೂ ಆಯಸಾರನೇ ಇರಲಿ, ಅವನಿಗೆ ಇನ್ನೊಂದು ಸಂಪನ್ಮೂಲವನ್ನು ನಾವು ಹುಡುಕಿಕೊಟ್ಟೆವು ಅಂದರೆ ಈ ಎಲ್ಲಾ ರಿಯಾಯಿತಿಗಳನ್ನು ನೀವು ಕೊಡದಿದ್ದರೂ ಸಹಿತ ಅವನೇ ತೀರಿಸುವಂಥ ಶಕ್ತಿ ಅವನಿಗೆ ಬರುತ್ತದೆ. ಅಂತಹ ಒಂದು ವ್ಯವಸ್ಥೆ ಇವತ್ತು ಗ್ರಾಮೀಣ ಭಾಗದೊಳಗೆ ಆಗಬೇಕಾಗಿದೆ. ಸಭಾಧ್ಯಕ್ಷರೆ, ನನಗೆ ಒಂದು ನಮ್ಮ ಹಾನಗಲ್ ತಾಲ್ಲೂಕಿನೊಳಗೆ ತರಳಬಾಳು ಹುಣ್ಣಿಮೆ ಆಯಿತು. ಆ ಹುಣ್ಣಿಮೆಯಲ್ಲಿ ಮುಖ್ಯಮಂತ್ರಿಗಳು ಬಂದು ನಾವು ಹಂತಹಂತವಾಗಿ ಈ ರಾಜ್ಯದಲ್ಲಿ ಪಾನನಿರೋಧವನ್ನು ಜಾರಿಗೆ ತರುತ್ತೇವೆ ಎಂಬು ಭರವಸೆಯನ್ನು ಅಲ್ಲಿಯ ಜನಕ್ಕೆ ಕೊಟ್ಟಿದ್ದರು. ಆಮೇಲೆ ಜೆ.ಹೆಚ. ಪಾಟೀಲರು ಬೇರೆ ಬೇರೆ ಹೇಳಿಕೆ ಮುಖಾಂತರ ಪ್ರಾಹಿಬಿಷನ್ ತರಬೇಕು ಎನ್ನುವಂಥ ಮಾತನ್ನು ಹೇಳಿದರು. ಕೆಲವರು ನಮಗೆ ಏನು ಕಲ್ಪನೆ ಕೊಡುತ್ತಿದ್ದರು ಎಂದರೆ ಜೆ.ಹೆಚ್. ಪಟೇಲ್‌ರು ಇರುವವರೆಗೆ ಈ ಪ್ರಾಹಿಬಿಷನ್ ಬರುವುದಿಲ್ಲ ಎಂಬ ಕಲ್ಪನೆಯನ್ನು ನಮಗೆ ಕೊಟ್ಟಿದ್ದರು. ಅವರು ಆ

ಮಾತನ್ನು ಹೇಳಿದಮೇಲೆ ಬಹುತೇಕ ಈ ಸರ್ಕಾರದೊಳಗೆ ಪ್ರಾಹಿಬೀಷನ್ ತರಲಿಕ್ಕೆ ಏನಾದರೂ ಒಂದು ಹೆಜ್ಜೆಯನ್ನು ಈ ಬಜೆಟ್‌ನಲ್ಲಿ ಇಡುತ್ತಾರ ಎಂದು ಹೇಳಿ ನಾನು ಅಪೇಕ್ಷೆ ಪಟ್ಟಿದೆ. ದುರ್ದೈವ ಅದರ ಬಗ್ಗೆ ಚಕಾರ ಶಬ್ದವನ್ನು ಇವರು ಎತ್ತಲಿಲ್ಲ. ಇವೊತ್ತು ಒಂದು ಮಾತು ತಮಗೆ ಹೇಳುತ್ತೇನೆ, ಯಾವ ಗ್ರಾಮದೊಳಗೆ, ಗ್ರಾಮಸಭೆಯೊಳಗೆ, ನಮ್ಮ ಗ್ರಾಮದೊಳಗೆ ಸಂಪೂರ್ಣ ಪಾನನಿಷೇಧ ಬೇಕು ಎಂದು ಜನ ಘೆರಾವ್ ಮಾಡುತ್ತಾರೊ ಅಲ್ಲಾದರೂ ದಯವಿಟ್ಟು ಪಾನನಿಷೇದವನ್ನು ಜಾರಿಗೆ ತನ್ನಿ. ಎಲ್ಲಿ ಜನ ಬಯಸುತ್ತಾರೆ ಅಲ್ಲಾದರೂ ನೀವು ಪಾನನಿಷೇದವನ್ನು ಜಾರಿಗೆ ತಂದರೆ ಒಂದು ಸಮೃದ್ಧಿಯ ಬದುಕನ್ನು ನಾವು ನಮ್ಮ ಕುಟುಂಬದೊಳಗೆ, ನಮ್ಮ ಸಮಾಜದೊಳಗೆ, ನಮ್ಮ ಗ್ರಾಮದಲ್ಲಿ ತರಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ತಮಗೆ ಗೊತ್ತಿದೆಯೋ ಇಲ್ಲವೋ ಹಳ್ಳಿಗಳ ಕಡೆ ಸಂಜೆಯಾದರೆ ಯಾವ ಹೆಣ್ಣು ಮಕ್ಕಳೂ ಹೊಲದಿಂದ ಸರಳವಾಗಿ ತಮ್ಮ ತಮ್ಮ ಮನೆಗಳಿಗೆ ಬಂದು ಮುಟ್ಟುತ್ತಾರೆಂಬ ಪರಿಸ್ಥಿತಿ ಇಲ್ಲ. ಇವರು ಯಾರಿಗೆ ತಲೆ ಹೊಡೆಯುತ್ತಾರೆಂದು ಗೊತ್ತಾಗುತ್ತಿಲ್ಲ. ಇನ್ನು ಹೆಣ್ಣುಮಕ್ಕಳೇ ರೊಚ್ಚಿಗೆದ್ದು ಅವರೇ ಮುಂದಾಗಿ ಈ ಸೆರೆ ಸೇಂದಿಯನ್ನು ನಿಲ್ಲಿಸಬೇಕು ಎಂಬ ಒತ್ತಾಯವನ್ನು ಸರ್ಕಾರದಮೇಲೆ ತರುವವರೆಗೂ ಇದು ಹೀಗೆಯೇ ಮುಂದುವರಿಯಬಹುದು ಈ ದುಶ್ಚಟದಿಂದ ಸಮಾಜ ಮತ್ತು ಕುಟುಂಬ ಹಾಳಾಗುವುದನ್ನು ನಿಲ್ಲಿಸುವ ಸಲುವಾಗಿ ಒಂದು ಭರವಸೆಯನ್ನು ಬಜೆಟ್ ಮೇಲೆ ಉತ್ತರ ಕೊಡುವ ಸಂದರ್ಭದಲ್ಲಿ ಮಾನ್ಯ ಸಿದ್ದರಾಮಯ್ಯನವರಿಗೆ ನಿರೀಕ್ಷೆ ಮಾಡುತ್ತೇವೆ. ಇದರಲ್ಲಿ ತಪ್ಪಿಲ್ಲವೆಂದು ಅನಿಸುತ್ತದೆ. ಒಮ್ಮೊಮ್ಮೆ ನನಗೇನು ಅನಿಸುತ್ತದೆಂದರೆ, ನಮ್ಮ ಹಳ್ಳಿಯ ಜನ ಆರ್ಥಿಕವಾಗಿ ಸ್ವಲ್ಪಮಟ್ಟಿಗೆ ಚೈತನ್ಯಯುತವಾಗಿ ಆದರು ಎಂದರೆ ಅವರನ್ನು ಹೇಗೆ ಹಾಳುಮಾಡಬೇಕೆಂದು ಬಹುಶಃ ಎಲ್ಲಾ ರಾಜಕಾರಣಿಗಳೂ ವಿಚಾರ ಮಾಡುತ್ತಿರುತ್ತಾರೇನೋ ಎಂದು ನನಗನಿಸುತ್ತದೆ. ಏಕೆಂದರೆ, ಈ ದುಶ್ಚಟಕ್ಕೆ ನಾವು ಬಿದ್ದರೆ ಆರ್ಥಿಕವಾಗಿ ನಾವು ಬಹಳ ದುರ್ಬಲರಾಗುತ್ತೇವೆ. ಆಗ ನಿರ್ಭಿಡೆಯ ಬದುಕು ನಮ್ಮ ಹಳ್ಳಿಯ ಜನರದ್ದು ಏನಿದೆ, ಯಾರ ಬಿಡೆಯೂ ಇಲ್ಲದ ಬದುಕುವಂಥ ಸಂಸ್ಕೃತಿಯಲ್ಲಿ ಏನು ನಾವು ಬೆಳೆದು ಬಂದಿದ್ದೇವೆ ಆಗ ಮತ್ತೊಬ್ಬರ ಮುಂದೆ ಕೈ ಒಡ್ಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದನ್ನು ಮುದ್ದಾಂ ಮಾಡುತ್ತಾರೆಂದು ನನಗನಿಸುತ್ತದೆ. ಏಕೆಂದರೆ ಪಟ್ಟಣಗಳಲ್ಲಿರುವ ಜನರು ಸರ್ಕಾರದಿಂದ ಬೇರೆ ಬೇರೆ ರೀತಿಯಿಂದ ನೀತಿ ನಿಯಮಗಳಿಂದ ಲಾಭವನ್ನು ತೆಗೆದುಕೊಂಡು ತಮ್ಮ ಉದ್ಯೋಗವನ್ನು ಮಾಡುವಂಥ ಜನರಿದ್ದಾರೆ. ಗ್ರಾಮೀಣ ಭಾಗದಲ್ಲಿ ನಿಮ್ಮ ನೀತಿ ನಿಯಮಗಳೇನನ್ನೂ ನಾವು ಅಪೇಕ್ಷೆ ಮಾಡುವುದಿಲ್ಲ. ನಮ್ಮಷ್ಟಕ್ಕೆ ನಮ್ಮನ್ನು ಬಿಡಿ. ನಾವು ಬೆಳೆದ ಮಾಲಿಗೆ ಯೋಗ್ಯ ಬೆಲೆಯನ್ನು ಕೊಡಿ. ಇಷ್ಟು ಮಾತ್ರ ನಾವು ನಿಮ್ಮಿಂದ ಅಪೇಕ್ಷೆ ಮಾಡುವುದು. ಯೋಗ್ಯ ಬೆಲೆ ಎಂದರೆ ಅತಿ ಹೆಚ್ಚಿನ ಬೆಲೆಯನ್ನು ಕೊಡಿ ಎಂದು ನಾವೇನೂ ಅಪೇಕ್ಷೆ ಮಾಡುವುದಿಲ್ಲ. ಇವತ್ತು ಮಾರ್ಕೆಟ್‌ನಲ್ಲಿ ಯೋಗ್ಯ ಬೆಲೆ ಸಿಕ್ಕುತ್ತಿದೆ ಇದು ನಮ್ಮ ರೈತರಿಗೆ ಬಹಳ ಸಂತೋಷವನ್ನು ತಂದಿದೆ. ಕಳದೆ 2-3 ವರ್ಷಗಳಲ್ಲಿನಮ್ಮ ಸಾಲಸೋಲಗಳನ್ನೆಲ್ಲಾ ಕಳೆದು ನಾವೂ ಬ್ಯಾಂಕ್‌ಗಳಲ್ಲಿ ಸ್ವಲ್ಪಮಟ್ಟಿಗೆ ಡಿಪಾಜಿಟ್ ಇಡುವ ಪರಿಸ್ಥಿತಿ ನಮ್ಮ ಭಾಗದ ಪ್ರತಿಯೊಬ್ಬ ರೈತನಿಗೂ ಬಂದಿದೆ. ನಾವು ಉಳ್ಳಾಗಡ್ಡೆ ಬೆಳೆದಿದ್ದಕ್ಕೆ ಬಹಳ ಛಲೋ ರೇಟ್ ಬಂದಿದೆ. ಈ ವರ್ಷ ಸ್ವಲ್ಪ ಮಟ್ಟಿಗೆ ಬಿದ್ದಿದೆ. ಮೆಣಸಿನಕಾಯಿಗೆ ಛಲೋ ರೇಟು, ಹತ್ತಿಗೆ ಛಲೋ ರೇಟು, ಶೇಂಗಾಕ್ಕೆ ಛಲೋ ರೇಟು, ಕಡ್ಲೆಗೆ ಛಲೋ ರೇಟು ಬಂದಿದೆ. ಇವತ್ತು

ನಮ್ಮ ಎಲ್ಲಾ ಕೃಷಿಕ ಕುಟುಂಬಗಳೂ ಬಹಳ ಸ್ವಾಭಿಮಾನಿಗಳಾಗಿ, ಸಮೃದ್ಧವಾಗಿ ಬದುಕುವ ಸ್ಥಿತಿ ಇದೆ. ಈ ದುಶ್ಚಟವನ್ನು ನಿಲ್ಲಿಸಿದರೆ ನಮಗೆ ಇನ್ನೂ ಒಳ್ಳೆಯದಾಗುತ್ತದೆ. ಗ್ರಾಮೀಣ ಭಾಗದಲ್ಲಿ ಸೆರೆ, ಸೇಂದಿ ಸರಳವಾಗಿ ಸಿಕ್ಕುವಂಥ ವ್ಯವಸ್ಥೆಯನ್ನು ಏನು ಮಾಡಿದ್ದೀರಿ ಇದನ್ನು ದಯವಿಟ್ಟು ಬಂದ ಮಾಡಿ. ವ್ಯಸನಮುಕ್ತ ಕುಟುಂಬವನ್ನು, ವ್ಯಸನಮುಕ್ತ ಸಮಾಜವನ್ನು ರಚನೆ ಮಾಡುವುದರಲ್ಲಿ ಸರ್ಕಾರ ನಮಗೆ ಅನುಕೂಲ ಮಾಡಿಕೊಡಬೇಕೆಂದು ಸಲಹೆ ಕೊಡಬಯಸುತ್ತೇನೆ.

ಇನ್ನು ಗ್ರಾಮ ಸಭೆಗಳ ಬಗ್ಗೆ ಹೇಳುವುದಾದರೆ, ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಸಭೆಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದೇವೆ. ಇವು ಕಾನೂನು ಬದ್ಧವಾದ ರೀತಿಯಲ್ಲಿ ನಡೆದುಕೊಂಡು ಹೋಗುವಂಥ ರೀತಿಯಲ್ಲಿ ರೂಪಿಸುವ ಜವಾಬ್ದಾರಿ ನಮ್ಮ ನಿಮ್ಮ ಮೇಲಿದೆ. ನಮ್ಮ ಅನುಭವದಲ್ಲಿ ನೋಡಿದರೆ ಗ್ರಾಮ ಸಭೆಗಳು ನಡೆಯುತ್ತಲೇ ಇಲ್ಲ. ಅಲ್ಲಿಯ ಅಧ್ಯಕ್ಷರು ಬಡಿದುಕೊಳ್ಳುತ್ತಾರೆ. ಯಾವ ಊರಿನಲ್ಲೂ ಗ್ರಾಮ ಸಭೆಗಳನ್ನು ಮಾಡುತ್ತಿಲ್ಲ. ತಾಲ್ಲೂಕು ಪಂಚಾಯಿತಿಗೆ, ಜಿಲ್ಲಾ ಪಂಚಾಯಿತಿಗೆ ತಾವು ಕೋರಂ ಇಟ್ಟಿದ್ದೀರಿ. ಅದೇ ರೀತಿ ಗ್ರಾಮ ಸಭೆಗೂ ಒಂದು ಕೋರಂ ಎಂದು ಇಡಿ. ಕನಿಷ್ಟ 100-150-200 ಜನರಾದರೂ ಆ ಗ್ರಾಮದಲ್ಲಿ ಸೇರಿ ನಿರ್ಣಯ ಮಾಡಿ ಗ್ರಾಮಸಭೆಯನ್ನು ತನ್ನಿ. ಗ್ರಾಮಸಭೆಗಳು ಸರಿಯಾಗಿ ನಡೆಯುತ್ತಿವೆಯೋ ಅಥವಾ ಇಲ್ಲವೋ ಎಂಬದನ್ನು ತಿಳಿದುಕೊಳ್ಳಬೇಕಾದರೆ ವಿಡಿಯೋ ಮುಖಾಂತರ ಆದರೂ ಚಿತ್ರೀಕರಣ ಮಾಡಿಸಿ ಇಲ್ಲವೇ ಟೇಪ್‌ರಿಕಾರ್ಡ್ ಮೂಲಕವಾಗಿ ಆಗಲಿ ಅಲ್ಲಿ ನಡೆಯುವ ಪ್ರೊಸೀಡಿಂಗ್ಸ್‌ನ್ನು ರೆಕಾರ್ಡ್ ಆಗುವಂತೆ ಮಾಡಿಸಿ. ಇದಕ್ಕೆ ಹೆಚ್ಚು ಖರ್ಚೇನೂ ಬರುವುದಿಲ್ಲ. ಆಗ ವ್ಯವಸ್ಥಿತವಾಗಿ ಗ್ರಾಮಸಭೆಗಳು ನಡೆಯುತ್ತವೆ. ಆಗ ಗ್ರಾಮಸಭೆಗಳ ಮುಖಾಂತರ ವಿವಿಧ ಫಲಾನುಭವಿಗಳನ್ನು ಆರಿಸುವಾಗ ಪ್ರಾಮಾಣಿಕವಾಗಿ ಅರ್ಹ ಫಲಾನುಭವಿಗಳನ್ನು ಆರಿಸಬಹುದು. ಇಲ್ಲದಿದ್ದರೆ ಗ್ರಾಮ ಸಭೆಗಳಲ್ಲಿ ಇವರು ಆಯ್ಕೆಯಾಗಿದ್ದಾರೆಂದು ಅಧ್ಯಕ್ಷರಾದ ನಾವು ಬರೆದು ಕೊಡುತ್ತೇವೆ. ಅದನ್ನು ಎಲ್ಲರೂ ಒಪ್ಪಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ಈ ಕೆಲವು ಸೂಚನೆಗಳನ್ನು ಕಾರ್ಯರೂಪಕ್ಕೆ ತರಲು ಯಾವುದೇ ಹಣಕಾಸಿನ ಖರ್ಚು ಬರುವುದಿಲ್ಲ. ವ್ಯವಸ್ಥೆಯನ್ನು ಬದಲಾವಣೆ ಮಾಡುವುದು ಅಷ್ಟೆ. ಇದನ್ನು ಮಾಡಿದರೆ ಸಾಕು ಗ್ರಾಮೀಣ ಬದುಕು ಸಾಕಷ್ಟು ಹಸನಾಗುವುದಕ್ಕೆ ಸಹಾಯ ಮಾಡಿದಂತಾಗುತ್ತದೆ, ಅಂಥ ನಿರ್ಣಯಗಳು ನಾಳೆ ತಮ್ಮ ಉತ್ತರ ರೂಪದಲ್ಲಿ ಬರಲೆಂದು ಆಶಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು.

+ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಸನ್ಮಾನ್ಯ ಅಧ್ಯಕ್ಷರೆ, ಹೊಸ ಸರ್ಕಾರದ ನೂತನ ಅರ್ಥ ಮಂತ್ರಿಗಳು ತಮ್ಮ ಮೊದಲ ಬಜೆಟನ್ನು ಮಂಡನೆ ಮಾಡುವಾಗ ಈ ರಾಜ್ಯದ ಬಹಳಷ್ಟು ಜನರ ನಿರೀಕ್ಷೆ ಬಹಳ ದೊಡ್ಡದಾಗಿತ್ತು. ನಾನೂ ಕೂಡ ಮಾನ್ಯ ಸಿದ್ಧರಾಮಯ್ಯನವರನ್ನು ಕೇಳಿದ್ದೇನೆ, ಅವರ ಆದರ್ಶವನ್ನು ಅನೇಕ ವರ್ಷಗಳಿಂದ ಮೆಲುಕು ಹಾಕುತ್ತಿದ್ದೆ ಆ ಆದರ್ಶ ಇವರ ಬಜೆಟ್‌ನಲ್ಲಿ ಕಾರ್ಯ ಗತವಾಗಬಹುದೆಂದು ನಿರೀಕ್ಷಿಸಿದೆ. ಆದರೆ ಈ ಯುಗಾದಿಯ ಸಂದರ್ಭದಲ್ಲಿ ಮಂಡಿಸಿರತಕ್ಕ ಬಜೆಟ್ ಬೆಲ್ಲವಿಲ್ಲದೇ ಇರತಕ್ಕ ಬಜೆಟನ್ನು ಉಣಸಿದ್ದಾರೆಂದು ನನಗನಿಸುತ್ತದೆ. ಕಾರಣ ಒಂದು ಸರ್ಕಾರ

ಹೊಸದಾಗಿ ಜನರ ಅಪೇಕ್ಷೆ ಮತ್ತು ನಿರೀಕ್ಷೆಗನುಗುಣವಾಗಿ ಆರಿಸಿ ಬಂದಿದೆ. ಆಯ್ಕೆ ಮಾಡಿ ಕಳುಹಿಸಿರತಕ್ಕ ಜನತೆಯ ಮಟ್ಟಕ್ಕೆ ಅದು ಏರಬೇಕು ಈ ವ್ಯವಸ್ಥೆಯನ್ನು ಚೆನ್ನಾಗಿ ನಡೆಸಿ ಜನತೆ ಸುಖವಾಗಿ ಜೀವನ ಮಾಡುವಂತಾಗಬೇಕೆಂದು ನಿರೀಕ್ಷೆ ಮಾಡುವ ಈ ಸಂದರ್ಭದಲ್ಲಿ ಮಾನ್ಯ ಅರ್ಥ ಸಚಿವರು ಈ ಬಜೆಟ್‌ನ್ನು ಮಂಡಿಸುವಾಗ ಯಾರ ಕಿಸೆಗೆ ಕೈ ಹಾಕಬೇಕು ? ಹೇಗೆ ಹಾಕಬೇಕು ? ಎಂದು ಯೋಚಿಸಿ ಆತ್ಮನಿರೀಕ್ಷಣೆ ಮಾಡಿಕೊಂಡು ಈ ತೆರಿಗೆಯನ್ನು ವಿಧಿಸಬೇಕಾಗಿತ್ತೆಂದು ಅನಿಸುತ್ತದೆ. ನಾನು ಬೇರೆ ಎಲ್ಲಾ ವಿಚಾರಗಳ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಿನ್ನೆಯಿಂದ ನಮ್ಮ ಅನೇಕ ಮಾನ್ಯ ಮಿತ್ರರು ಎಲ್ಲಾ ವಿಚಾರಗಳನ್ನೂ ಬಹಳ ಸವಿಸ್ತಾರವಾಗಿ ಮಾತನಾಡಿದ್ದಾರೆ. ನಾನು ಮತ್ತೆ ಅದೇ ವಿಚಾರಗಳನ್ನು ಹೇಳುವುದಕ್ಕೆ ಹೋದರೆ ಅದು ಚರ್ವಿತಚರ್ವಣವಾಗುತ್ತದೆ. ಯಾವುದೋ ರವೆಯ ಮೇಲೆ, ಗೋಧಿಯ ಮೇಲೆ ನಾವು ತೆರಿಗೆಯನ್ನು ಹಾಕುತ್ತೇವೆ, ಸೆಕೆಂಡ್ ಸೇಲ್ ಮೋಟಾರು ವಾಹನಗಳ ಮೇಲೆ ಹಾಕುತ್ತೇವೆಂದು ಹೇಳಿದರೆ ನೀವು ಎಲ್ಲಿಗೆ ಹೋಗಿ ಮುಟ್ಟುತ್ತೀರೆಂದು ನಮಗೆ ಅರ್ಥವಾಗುವುದಿಲ್ಲ. ಲಕ್ಷಾಂತರ ಜನರು ನಿರುದ್ಯೋಗಿಗಳು ಯಾರಿದ್ದಾರೆ ಅವರಿಗೆ ಯಾವುದೇ ಸರ್ಕಾರ ಬಂದರೂ ಉದ್ಯೋಗವನ್ನು ಕೊಡುವುದಕ್ಕಾಗುವುದಿಲ್ಲ. ನೇರವಾಗಿ ಸರ್ಕಾರೀ ಉದ್ಯೋಗವನ್ನು ಕೊಡಿ, ಅಥವಾ ಕಾರ್ಖಾನೆಗಳಲ್ಲಿ ಉದ್ಯೋಗವನ್ನು ಕೊಡಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಆದರೆ ಜನರು ತಮ್ಮ ಕಾಲ ಮೇಲೆ ತಾವು ನಿಲ್ಲುವಂಥ ವಾತಾವರಣವನ್ನು ಅಥವಾ ಪರಿಸ್ಥಿತಿಯನ್ನು ಈ ಸರ್ಕಾರ ತನ್ನ ನೀತಿಯಲ್ಲಿ ನಿರ್ಮಾಣಮಾಡಬೇಕಾಗುತ್ತದೆ. ಇವತ್ತು ಅದನ್ನು ಕೈಬಿಟ್ಟು ಎಲ್ಲವನ್ನೂ ಮೊಟಕು ಮಾಡುವುದು ಸರಿಯಲ್ಲ. ನನ್ನ ಕಾಲಮೇಲೆ ನಾನು ನಿಲ್ಲುತ್ತೇನೆ, ನನಗೆ ಯಾವುದೇ ಸರ್ಕಾರೀ ಉದ್ಯೋಗವೂ ಬೇಡವೆಂದು ಹೇಳುವಂಥವರಿಗೂ ಕೂಡ ಗಧಾ ಪ್ರಹಾರವನ್ನು ಈ ಸರ್ಕಾರ ವ್ಯವಸ್ಥಿತವಾಗಿ ಮಾಡಿದೆ ಎಂದು ನನಗನಿಸುತ್ತದೆ. ಒಬ್ಬ ರೈತನ ಮಗ ತಾನು ಬೆಳೆಯನ್ನು ಬೆಳೆಯುವುದಕ್ಕೆ ಹೋದರೆ ನನಗೆ ಲುಕ್ಸಾನಾಗುತ್ತದೆ ಆದ್ದರಿಂದ ಸರ್ಕಾರೀ ಕೆಲಸವನ್ನು ಕೊಡಿ, ಕೊನೆಯ ಪಕ್ಷ ಕಸವನ್ನು ಗುಡಿಸುವ ಕೆಲಸವನ್ನಾದರೂ ಕೊಡಿ ಎಂದು ಕೇಳಿದಾಗ ನಾನಾಗಲಿ, ಅಥವಾ ಮಾನ್ಯ ಮಂತ್ರಿಗಳೇ ಆಗಲಿ ಕಸ ಗುಡಿಸುವ ಕೆಲಸವನ್ನೂ ಕೊಡುವುದಕ್ಕಾಗುವುದಿಲ್ಲ. ಕಾರಣ ಎಲ್ಲೆಲ್ಲಿ ಎಷ್ಟೆಷ್ಟು ಜನರನ್ನು ತುಂಬ ಬೇಕೋ ಅದಕ್ಕಿಂತ ಹೆಚ್ಚು ಜನರನ್ನು ಈಗಾಗಲೇ ತುಂಬಿಬಿಟ್ಟಿದ್ದಾರೆ. ಎಲ್ಲೂ ಕೂಡ ಉದ್ಯೋಗವನ್ನು ಸೃಷ್ಟಿ ಮಾಡಿಕೊಡುವುದಕ್ಕಾಗುವುದಿಲ್ಲ. ಇಂಥ ಸಂದರ್ಭದಲ್ಲಿ ಯಾರು ಹಳ್ಳಿಗಾಡಿನಲ್ಲಿ ತಮ್ಮ ರೈತಾಪಿ ವ್ಯವಸಾಯದ ಕೆಲಸವನ್ನು ಮಾಡಿಕೊಂಡು ಬದುಕುತ್ತಿದ್ದಾರೆ ಅವರು ಅದೇ ಬದುಕನ್ನು ಮುಂದುವರಿಸಿಕೊಂಡು ಹೋಗುವಂಥ ರೀತಿಯಲ್ಲಿ ಪ್ರೋತ್ಸಾಹವನ್ನು ಇಲ್ಲಿ ಕೊಡಬೇಕಾಗಿತ್ತು. ಇಲ್ಲಿ ಪ್ರಮುಖವಾಗಿ ನಾನು ಪ್ರಸ್ತಾಪ ಮಾಡಬೇಕಾಗಿರತಕ್ಕದ್ದು ಏನೆಂದರೆ ಈ ರಾಜ್ಯದ ಅತ್ಯಂತ ಪ್ರಮುಖವಾಗಿರತಕ್ಕದ್ದು ವಾಣಿಜ್ಯ ಬೆಳೆ ಎಂದರೆ ಅದು ಅಡಿಕೆ. ಬಹಳ ವರ್ಷಗಳಿಂದ ಅತ್ಯಂತ ಹೆಚ್ಚಿನ ಆದಾಯವನ್ನು ಈ ಬೆಳೆ ಸರ್ಕಾರಕ್ಕೆ ಕೊಡುತ್ತಿದೆ. ಇದನ್ನು ಬೆಳೆಯುತ್ತಿರುವುದರಿಂದ ಕೆಲವು ರೈತರ ಜೀವನ ಮಟ್ಟ ಸ್ವಲ್ಪಮಟ್ಟಿಗೆ ಉತ್ತಮವಾಗುವುದಕ್ಕೆ ಮೇಲೆ ಬರುವುದಕ್ಕೆ ಸಾಧ್ಯವಾಯಿತು. ಇದನ್ನು ನೀವು ಸಹಿಸುತ್ತೀರೋ ಸಹಿಸುವುದಿಲ್ಲವೋ ನಮಗೆ ಗೊತ್ತಾಗುತ್ತಿಲ್ಲ. ಏಕೆಂದರೆ ಈ ತೆರಿಗೆಯನ್ನು ಹಾಕಿರತಕ್ಕ ರೀತಿಯನ್ನು ನೋಡಿದರೆ ಬಹುಶಃ ನಿಮಗೆ ಸಹನೆ ಇಲ್ಲವೆ, ಆ ರೈತ ಒಳ್ಳೆಯ ಬಟ್ಟೆ

ಹಾಕಿಕೊಳ್ಳುವುದು, ಆ ರೈತ ಜೀವನದಲ್ಲಿ ಮೇಲೆ ಬರತಕ್ಕದ್ದು, ಅಥವಾ ಅವನ ಮಗನಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಿಸತಕ್ಕದ್ದು, ಯಾರ ಹಂಗೂ ಇಲ್ಲದೆ ತನ್ನ ಜೀವನವನ್ನು ತಾನು ಸಾಗಿಸುತ್ತೇನೆ, ಸುಖವಾಗಿ ಬದುಕುತ್ತೇನೆಂಬ ಒಂದು ವ್ಯವಸ್ಥಿತ ಕುಟುಂಬ ಜೀವನ ನಿಮಗೆ ಸಹಿಸುವುದಕ್ಕೆ ಸಾಧ್ಯ ಇಲ್ಲವೇ ಎಂದು ನನಗನಿಸುತ್ತದೆ. ಕಾರಣ ಇಷ್ಟೆ. ನಾನೊಬ್ಬ ಅಡಿಕೆ ಬೆಳೆಗಾರ. ನಾನು ಬೆಳೆಯುವಂಥ ಪ್ರತಿಯೊಂದು ಕೆ.ಜಿ. ಅಡಿಕೆಯ ಮೇಲೂ ಕೂಡ 6 ರೂ. ತೆರಿಗೆಯ ರೂಪದಲ್ಲಿ ಬರುತ್ತಿದೆ. ಹಿಂದೆ 5 ರೂ. ಇದ್ದುದು ಇವತ್ತು 6 ರೂ. ಆಗಿದೆ. ಇವತ್ತು ಒಂದು ಕೆ.ಜಿ. ಅಡಿಕೆಯ ಬೆಲೆ 100 ರೂ. ಇದೆ. ಒಂದು ಕೆ.ಜಿ. ಅಡಿಕೆಯನ್ನು ನಾನು ಬೆಳೆದರೆ ಸರ್ಕಾರಕ್ಕೆ 6 ರೂ. ತೆರಿಗೆ ಬರಬೇಕೆಂದರೆ ಇದರ ಅರ್ಥವಾದರೂ ಏನು? ನಾನು ಏತಕ್ಕೆ ಕೊಡಬೇಕು? ನೀವು ನಮಗೇನು ವಾಪಸ್ಸು ಕೊಡುತ್ತಿದ್ದೀರಿ? ಅಡಿಕೆ ಬೆಳೆ ಪರಿಸ್ಥಿತಿ ಏನಾಗಿದೆ? ಮಾನ್ಯ ಗೋವಿಂದೇಗೌಡರು ಇಲ್ಲಿಯೇ ಇದ್ದಾರೆ; ಅವರ ಶೃಂಗೇರಿ ಕ್ಷೇತ್ರಕ್ಕೆ ಹೋಗಿ ಬನ್ನಿ. ಹಳದಿ ಎಲೆ ರೋಗ ಬಂದು 50 ಕ್ವಿಂಟಾಲ್ ಅಡಿಕೆ ಬೆಳೆಯತಕ್ಕ ಬೆಳೆಗಾರ ಒಂದು ಕ್ವಿಂಟಾಲ್ ಅಡಿಕೆಗೆ ಬಂದಿದ್ದಾನೆ. ಇತ್ತೀಚೆಗೆ ನಾನು ಆ ಭಾಗದಲ್ಲಿ ಪ್ರವಾಸ ಮಾಡಿದ್ದೇನೆ. ಹೀಗಾದರೆ ಪರಿಸ್ಥಿತಿ ಏನಾಗಬೇಕು? ಹಳದಿ ಎಲೆ ರೋಗ ಏನಿದೆ ಅದರ ಸಂಶೋಧನೆಗೆ ಬಜೆಟ್‌ನಲ್ಲಿ ಎಷ್ಟು ಹಣ ಕೊಟ್ಟಿದ್ದೀರಿ? ಒಂದು ಬಾದೆ ಅಲ್ಲ, ಬೇರು ಹುಳುವಿನ ಬಾದೆ ಬೇರೆ. ಒಂದು ಕಡೆಯಿಂದ ಅಡಿಕೆ ತೋಟಗಳು ಸರ್ವನಾಶದ ಅಂಚಿಗೆ ಬರುತ್ತಿದೆ. ನಿಮಗೆ ಇದರಲ್ಲಿ ಭಾರಿ ದೊಡ್ಡ ಆದಾಯ ಬರುತ್ತದೆಂದು ಕಾಣಬಹುದು. ಸರ್ಕಾರಕ್ಕೆ ಇದರಿಂದ ಯಾವ ರೀತಿ ಆದಾಯ ಬರುತ್ತದೆಂದರೆ, ಒಂದು ಕಾಲದಲ್ಲಿ 8 ಪರ್ಸೆಂಟ್ ಕಾರಭಾರ ಇತ್ತು. ಆಗ ಕೇರಳ ರಾಜ್ಯದಲ್ಲಿ 5 ಪರ್ಸೆಂಟ್‌ಗೆ ಇಳಿಸಿದರು ಇದರ ಪರಿಣಾಮ ಏನಾಯಿತು ಎಂದರೆ, ಇಲ್ಲಿಂದ ಪ್ರತಿಯೊಬ್ಬ ರೈತರೂ ಕೂಡ ಅಲ್ಲಿಗೆ ತೆಗೆದುಕೊಂಡು ಹೋಗಿ ಮಾರುವುದಕ್ಕೆ ಪ್ರಾರಂಭ ಮಾಡಿದರು. ವ್ಯಾಪಾರಿಗಳು ಕೂಡ ಚೀಲ ಹಿಡಿದು ಕೊಂಡು ಹೋಗಿ ಲಾಭವನ್ನು ಕಂಡರು. ಹೀಗಾಗಿ ಅಡಿಕೆಯ ಮಾರುಕಟ್ಟೆಯ ವಹಿವಾಟು ಸ್ಥಗಿತವಾಯಿತು. ನಮ್ಮ ವಹಿವಾಟು ಸ್ಥಗಿತವಾಯಿತು. ದಕ್ಷಿಣ ಕನ್ನಡ ಇರಬಹುದು, ಉತ್ತರ ಕನ್ನಡ ಇರಬಹುದು, ಶಿವಮೊಗ್ಗ ಇರಬಹುದು, ಇಡೀ ಕರ್ನಾಟಕ ರಾಜ್ಯದ ವಹಿವಾಟು ಬಹಳ ದೊಡ್ಡ ರೀತಿಯಿಂದ ಸ್ಥಗಿತವಾಯಿತು. ನೀವು ಬೇಕಾದರೆ ಮಾರುಕಟ್ಟೆ ಇಲಾಖೆಯಿಂದ ಅಂಕಿಅಂಶಗಳನ್ನು ತೆಗೆಸಿ ನೋಡಿ, ಏನಾಗಿದೆ ಎಂದು ಗೊತ್ತಾಗುತ್ತದೆ. ಇದರ ಪರಿಣಾಮವನ್ನು ನಾವು ಅನುಭವಿಸುತ್ತಿದ್ದೇವೆ. ಈ ರೀತಿ ಆಗುತ್ತಿದೆ ಎಂದು ಮನಗಂಡು ವ್ಯಾಪಾರಿಗಳು ರೈತರು, ರೈತ ಪ್ರತಿನಿಧಿಗಳು ಅಡಿಕೆ ಬೆಳೆಗಾರರ ಸಹಕಾರ ಸಂಘದ ಅಧ್ಯಕ್ಷರು ಬಂದು ಸರ್ಕಾರವನ್ನು ಭೇಟಿ ಮಾಡಿ ಪರಿಸ್ಥಿತಿ ಹೀಗಾಗಿದೆ ಎಂದು ವಿನಂತಿಸಿ ಕೊಂಡರು. ಅದನ್ನು ಮನಗಂಡ ಸರ್ಕಾರ 8 ಪರ್ಸೆಂಟ್ ಇರತಕ್ಕ ಅಡಿಕೆ ಟ್ಯಾಕ್ಸನ್ನು ಮೊಯಿಲಿಯವರ ಕಾಲದಲ್ಲಿ ಎಂದು ಕಾಣುತ್ತದೆ, 5 ಪರ್ಸೆಂಟ್‌ಗೆ ಇಳಿಸಿದರು. ಇದರ ಪರಿಣಾಮವನ್ನು ನಾವು ನೋಡಿದೆವು. ಬರೀ ಮಂಗಳೂರು ಮಾರುಕಟ್ಟೆ ಒಂದರಲ್ಲೇ 55 ಸಾವಿರದ 200 ಕ್ವಿಂಟಾಲ್ ಅಡಿಕೆ ಒಂದು ವರ್ಷದಲ್ಲಿ ಮಾರಾಟವಾಯಿತು. ಅದರಿಂದ 29.5 ಕೋಟಿ ರೂಪಾಯಿಗಳ ವ್ಯವಹಾರ ಜಾಸ್ತಿಯಾಯಿತು. ಇದು ಒಂದೇ ವರ್ಷದಲ್ಲಿ ಆಗಿರತಕ್ಕದ್ದು. ಟ್ಯಾಕ್ಸ್ ಎಷ್ಟು ಜಾಸ್ತಿ ಬರುತ್ತದೆಂದು ತಾವು ಅವಲೋಕನ ಮಾಡಿ. ನಾವು ಬರೀ ಟ್ಯಾಕ್ಸ್ ಜಾಸ್ತಿ ಮಾಡಿದೆವು ಎಂದು ಅಲ್ಲ. ನೀವು 6 ಪರ್ಸೆಂಟ್

ಮಾಡಿದ್ದೀರಿ, ಕೇರಳದಲ್ಲಿ 5 ಪರ್ಸೆಂಟ್ ಇದೆ. ಇದರಿಂದ ಏನಾಗುತ್ತದೆಂದರೆ ಎಲ್ಲಾ ಅಲ್ಲಿಗೆ ಹೋಗುತ್ತಾರೆ. ಮೋಟಾರು ವಾಹನ ಕೂಡ ಅದೇ ಪರಿಸ್ಥಿತಿ ಆಗಿದೆ. ಒಂದು ಮೋಟಾರು ಸೈಕಲ್ ನಮ್ಮ ಊರಿನಲ್ಲಿ ತರಬೇಕೆಂದರೆ ಗೋವಾಕ್ಕೆ ಹೋಗುತ್ತಿದ್ದಾರೆ. ಏಕೆ? ಅಲ್ಲಿ ಟ್ಯಾಕ್ಸ್ ಕಡಿಮೆ ಇದೆ ಎಂದು. ಇದರಿಂದ ನಮ್ಮ ವಹಿವಾಟು ಎಷ್ಟು ಸ್ಥಗಿತವಾಗುತ್ತದೆ. ನಿಮಗೆ ತೆರಿಗೆ ಬರಬೇಕೆಂದರೆ, ತೆರಿಗೆ ಜಾಸ್ತಿ ಮಾಡುವುದರಿಂದ ಬರುವುದಿಲ್ಲ. ತೆರಿಗೆಯನ್ನು ಸರಳ ಮಾಡಬೇಕು ಮತ್ತು ಅದನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರಬೇಕು. ಹಾಗೆ ಮಾಡಿದರೆ ಮಾತ್ರ ಸರಿ ಆಗುತ್ತದೆ. ಅಡಿಕೆ ಬೆಳೆಗೆ ವಿಷವಾಗಿ ಕಾಂಪಿಟಿಷನ್ ಇದೆ. ಅಡಿಕೆ ಬೆಳೆಗೆ ಮಾರುಕಟ್ಟೆ ಎಂದರೆ ಉತ್ತರ ಪ್ರದೇಶ, ಬಂಗಾಳ, ಬಿಹಾರ್, ಡೆಲ್ಲಿ, ಮಧ್ಯ ಪ್ರದೇಶ ಹಾಗೂ ಒರಿಸ್ಸಾ. ನಮಗೆ ಇದು ಮಾರುಕಟ್ಟೆ ಇರತಕ್ಕದ್ದು. ನಿಮಗೆ ಕಾಂಪಿಟಿಷನ್ ಮಾಡತಕ್ಕವರು ಯಾರು? ಬರ್ಮ, ಥೈಲ್ಯಾಂಡ್, ಮಲೇಶಿಯ, ಇಂಡೋನೇಶಿಯ ಇವು. ಅಲ್ಲಿ ತೋಟದಲ್ಲಿ ನಮ್ಮ ಹಾಗೆ ಗೊಬ್ಬರ ಹಾಕಿ ಔಷಧಿ ಸಿಂಪರಣೆ ಮಾಡಿ ಬೆಳೆ ಬೆಳೆಯುವುದಿಲ್ಲ. ಅಲ್ಲಿ ಕಾಡಿನಲ್ಲಿ ಉತ್ಪತ್ತಿಯಾಗುತ್ತಿದೆ ಇಲ್ಲಿ ಹೇಗೆ ಸೀಗೆ, ಮತ್ತಿತರ ಕಾಡು ಉತ್ಪತ್ತಿಗಳನ್ನು ಹರಾಜು ಹಾಕುತ್ತೇವೆ ಹಾಗೆ ಅಲ್ಲಿ ಅಡಿಕೆಯನ್ನು ಅಲ್ಲಿನ ಸರ್ಕಾರಗಳು ಹರಾಜು ಹಾಕುತ್ತವೆ. ಅಲ್ಲಿ ಅಡಿಕೆಯನ್ನು ಕಲೆಕ್ಟ್ ಮಾಡಿ ಮಾರಾಟ ಮಾಡುತ್ತಾರೆ, ಅವರಿಗೆ ಯಾವುದೇ ರೀತಿಯಿಂದ ಕಾಸ್ಟ್ ಆಫ್ ಪ್ರೊಡಕ್ಷನ್ ಇಲ್ಲ. ಪುಕಸಟ್ಟೆ ಬಂದಿರತಕ್ಕದ್ದನ್ನು ತಂದು ನಮ್ಮಲ್ಲಿ ಮಾರುತ್ತಾರೆ. ನೇಪಾಳದಿಂದ ವ್ಯವಸ್ಥಿತವಾಗಿ ಇದು ಕಳ್ಳ ಮಾರುಕಟ್ಟೆಯಲ್ಲಿ ಉತ್ತರ ಪ್ರದೇಶ, ಲಕ್ನೋ ಮಾರುಕಟ್ಟೆಗೆ ಬರುತ್ತಿದೆ. ಅಸ್ಸಾಮಿನಲ್ಲಿ ಕೂಡ ಕಾಡು ಉತ್ಪತ್ತಿ ರೀತಿಯಲ್ಲಿ ಬೆಳೆಯುತ್ತಿದ್ದಾರೆ. ಕರ್ನಾಟಕ ರಾಜ್ಯದ ಅಡಿಕೆಗೆ ಬಹಳ ದೊಡ್ಡ ಕಾಂಪಿಟಿಷನ್. ಅಸ್ಸಾಂ ಅಡಿಕೆ ಶಿವಮೊಗ್ಗ ಮಾರುಕಟ್ಟೆಗೆ ಬರುತ್ತಿದೆ. ಅವರಿಗೆ ಅದು ಪುಕಸಟ್ಟೆ ಸಿಗುತ್ತದೆ. ನಮ್ಮ ಹಾಗೆ ಅವರು ವ್ಯವಸ್ಥಿತವಾಗಿ ತೋಟ ಮಾಡಿ ಬೆಳೆ ಬೆಳೆಯುವುದಿಲ್ಲ. ಹೀಗೆ ಬರುವಾಗ ನಾವು ತೆರಿಗೆ ಜಾಸ್ತಿ ಮಾಡಿಕೊಂಡು ಕುಳಿತರೆ ಯಾವ ವ್ಯಾಪಾರಿಗಳು ಇಲ್ಲಿ ಬರುತ್ತಾರೆ? ಯಾರು ಅಡಿಕೆ ತಿನ್ನತಕ್ಕ ಜನರು ಕೊಂಡು ತಿನ್ನುತ್ತಾರೆ ಯೋಚನೆ ಮಾಡಿ. ಅಡಿಕೆ ತಿನ್ನತಕ್ಕವರು ಹೆಚ್ಚು ಬಡವರು. ತೆವಲಿಗೋಸ್ಕರ ಜಗಿಯುತ್ತಾರೆ, ಉಗಿಯುತ್ತಾರೆ. ಬೇರೆ ಯಾವುದಕ್ಕೂ ಉಪಯೋಗವಾಗುವುದಿಲ್ಲ ಅದು. ಈಗ ಇದಕ್ಕೋಸ್ಕರ ಎಷ್ಟು ಹಣವನ್ನು ಅವರಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಡಿ.ಟಿ. ಜಯಕುಮಾರ್ : ಮೊನ್ನೆ ದಕ್ಷಿಣ ಕನ್ನಡ ಜಿಲ್ಲೆಯ ಅಡಿಕೆ ಬೆಳೆಗಾರರ ಸಹಕಾರ ಸಂಘದ ವತಿಯಿಂದ ಬಂಟ್ವಾಳ ಪ್ರಗತಿಶೀಲ ಅಡಿಕೆ ಬೆಲೆಗಾರರ ಸಂಘದ ಒಂದು ವಿಚಾರ ಸಂಕೀರ್ಣವನ್ನು ನಾವು ಹಮ್ಮಿಕ್ಕೊಂಡಿದ್ದೆವು. ನಮ್ಮ ತೋಟಗಾರಿಕೆ ಇಲಾಖೆ ಮತ್ತು ಇತರೆ ಇಲಾಖೆಗಳ ವತಿಯಿಂದ ಆ ಒಂದು ಸಂಕೀರ್ಣ ನಡೆದಿತ್ತು. ಅಲ್ಲಿ ಯಾವುದೇ ರೈತರು ಅಡಿಕೆ ಬೆಳೆಗಾರರು ನಮಗೆ ತೆರಿಗೆ ಜಾಸ್ತಿ ಆಯಿತು, ತೆರಿಗೆ ಕಡಿಮೆ ಮಾಡಿ ಎಂದು ಒಂದು ಬೇಡಿಕೆಯನ್ನೂ ನಮ್ಮ ಮುಂದೆ ಇಡಲಿಲ್ಲ. ನೀವು ಎಲ್ಲಾ ರೀತಿಯ ರೋಗಗಳು ಏನಿವೆ ಅವರನ್ನು ಕಂಟ್ರೋಲ್ ಮಾಡುವುದಕ್ಕೆ, ಎಲೆ ರೋಗವನ್ನು ನಿಯಂತ್ರಿಸುವುದಕ್ಕೆ ನೀವು ಅವಕಾಶ ಮಾಡಿಕೊಡಿ, ನಾವು ತೆರಿಗೆಯನ್ನು ಕೊಡುವುದಕ್ಕೆ ಅಭ್ಯಂತರವಿಲ್ಲವೆಂದು ಅವರು ಹೇಳಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅಡಿಕೆ ಬೆಳೆಗಾರರು ಬಂದು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದಾರೆ. ತಾವು ಬೇಕಾದರೆ ಮುಖ್ಯಮಂತ್ರಿಗಳನ್ನು ಕೇಳಿ.

ಶ್ರೀ ಡಿ.ಟಿ. ಜಯಕುಮಾರ್ : ಮಾತನಾಡುವವರು ಎಲ್ಲರೂ ಕೂಡ ಸರ್ಕಾರ ಯಾವ ಬಾಬಿಗೆ ತೆರಿಗೆ ಹಾಕಬೇಕೆಂಬುದನ್ನು ಹೇಳುವುದಿಲ್ಲ. ಒಬ್ಬರಾದರೂ ಹೇಳುತ್ತಾರೆಯೇ ಕೇಳಿ. ಎಲ್ಲರೂ ತೆರಿಗೆ ಹಾಕಬಾರದೆಂದೇ ಹೇಳುತ್ತಾರೆ. ನೀವು ಕೂಡ ಸರ್ಕಾರವನ್ನು ನಡೆಸಿದ್ದೀರಿ. ಅವರೂ ಕೂಡ ಸರ್ಕಾರವನ್ನು ನಡೆಸಿದ್ದಾರೆ. ಯಾವುದಾದರೂ ಒಂದು ಬಾಬಿನಲ್ಲಿ ನೀವು ತೆರಿಗೆ ಹಾಕಿ ಯಾರಾದರೂ ಒಬ್ಬರೂ ಹೇಳುತ್ತೀರೋ?

ಅಧ್ಯಕ್ಷರು : ಸ್ನೇಹಿತರು ಎಂದು ಅವರು ಡಿಫೆಂಡ್ ಮಾಡಿಕೊಳ್ಳುತ್ತಾರೆ ಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವುದೇ ಒಂದು ಬೇಡಿಕೆಯನ್ನು ಇಟ್ಟುಕೊಂಡು ಮುಖ್ಯಮಂತ್ರಿಗಳನ್ನು ಭೇಟಿ ಆಗಿಲ್ಲ, ನಮಗೂ ಭೇಟಿ ಆಗಿಲ್ಲ. ನಿನ್ನೆ ಸಾರಿಗೆ ನಡೆದಾಗಲೂ ಇದೇ ರೀತಿ ಹೇಳಿದರು. ಈಗ ಅಡಿಕೆ ಮೇಲೆ ತೆರಿಗೆ ಕಡಿಮೆ ಮಾಡಿ ಎಂದು ಮುಖ್ಯಮಂತ್ರಿಗಳನ್ನು ಭೇಟಿ ಆಗಿಲ್ಲ, ನನಗೂ ಭೇಟಿಯಾಗಿಲ್ಲ.

ಅಧ್ಯಕ್ಷರು : ಅದು ನಿಮ್ಮದೇ ತಪ್ಪು. ಏಕೆಂದರೆ ನೀವು ಬಹಳ ಕಾಲ ಆಡಳಿತ ಮಾಡಿದ್ದೀರಿ. ಅವರಿಗೆ ಇಂಥ ಸಂದರ್ಭದಲ್ಲಿ ಹೇಗೆ ಹೇಳಬೇಕೆಂದು ಗೈಡ್ ಮಾಡಬೇಕು. ನೀವು ಹೇಳುವುದಿಲ್ಲ, ಅಬ್ಜೆಕ್ಟ್ ಮಾಡುತ್ತೀರಿ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಸಚಿವರು ಹೇಳಿದರು, ಜನವರಿ 18ರಂದು ಶಿವಮೊಗ್ಗದಲ್ಲಿ ರಾಜ್ಯ ಕೃಷಿಕ ಮಂಡಲಿ ವತಿಯಿಂದ ಒಂದು ದೊಡ್ಡ ವಿಚಾರ ಸಂಕೀರ್ಣವನ್ನು ಏರ್ಪಡಿಸಿದ್ದೆವು ಎಂದು. ಅದರ ನಿರ್ಣಯವನ್ನು ತಮಗೆ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದಾರೆ. ಅದನ್ನು ತಾವು ತೆಗೆದು ನೋಡಿ. ಅದರಲ್ಲಿ ಬಹಳ ದೊಡ್ಡ ಚರ್ಚೆಯಾಗಿದೆ. ಇಡೀ ರಾಜ್ಯದ ಸಾಕಷ್ಟು ಅಡಿಕೆ ಬೆಳೆಗಾರರು ಅಲ್ಲಿ ಸೇರಿದ್ದರು. ಬಹಳ ದೊಡ್ಡ ವಿಚಾರ ಸಂಕೀರ್ಣ ಅಲ್ಲಿ ನಡೆಯಿತು. ಅಲ್ಲೇ ಹೇಳಿದ್ದಾರೆ, ಈ ಎಲ್ಲಾ ಅಡಿಕೆ ವಹಿವಾಟಿನಿಂದ ಸರ್ಕಾರಕ್ಕೆ ಹೆಚ್ಚು ಆದಾಯವನ್ನು ನಾವು ಕರದ ಮೂಲಕ ಕೊಡುತ್ತೇವೆ. ಆದರೆ ಯಾವುದೇ ತೆರಿಗೆ ಜಾಸ್ತಿ ಮಾಡುವುದರಿಂದ ಅಲ್ಲ ಎಂದು ಹೇಳಿದ್ದಾರೆ. 5 ಪರ್ಸೆಂಟ್ ಇರತಕ್ಕದ್ದನ್ನು ಅರ್ಧ ಪರ್ಸೆಂಟ್‌ಗೆ ಇಳಿಸಿ, ನಾವು ಹೆಚ್ಚು ವಾರ್ಷಿಕ ವರಮಾನ ನಿಮಗೆ ತೋರಿಸುತ್ತೇವೆಂಬ ಮಾತನ್ನು ಚಾಲೆಂಜ್ ಮಾಡಿದರು. ಅಲ್ಲಿರತಕ್ಕ ಬೆಳೆಗಾರರು ವ್ಯಾಪಾರಿಗಳು ಸಹಕಾರ ಸ್ಯಾಂಪ್ಕೋ, ಮ್ಯಾಂಕೋ ಎಂದು ಯಾವ ಸಂಸ್ಥೆಗಳು ಇದ್ದವು ಅವುಗಳ ಅಧ್ಯಕ್ಷರು ಮತ್ತು ನಿರ್ದೇಶಕರು ಅಲ್ಲಿ ಸೇರಿದ್ದರು. ಒಂದೂವರೆ ಪರ್ಸೆಂಟ್ ಅದರ ಮೇಲೆ ಹಾಕಿದರೆ ಅದೇ ಹೆಚ್ಚಿನ ಆದಾಯ ಕೊಡುತ್ತದೆ. ಈಗ ಇಡೀ ವಹಿವಾಟಿನಲ್ಲಿ ಒಂದು ಪರ್ಸೆಂಟ್ ಬರುತ್ತಿದೆ. ನಿಮಗೆ ಬರತಕ್ಕ ಒಟ್ಟು ತೆರಿಗೆಯ ಆದಾಯದಲ್ಲಿ ಒಂದು ಪರ್ಸೆಂಟ್ ನಿಮಗೆ ಅಡಿಕೆಯಿಂದ ಬರುತ್ತಿದೆ. ಅವರು ಮೊನ್ನೆ ವಿಚಾರ ಸಂಕೀರ್ಣದಲ್ಲಿ

ಚಾಲೆಂಜ್ ಮಾಡಿದರು. ಒಂದೂವರೆ ಪರ್ಸೆಂಟ್ ಒಟ್ಟು ಆದಾಯ ಆಗುವ ಹಾಗೆ ಮಾಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ಈ ಬಗ್ಗೆ ಮಾನ್ಯ ಸಚಿವರು ಗಮನ ಕೊಡಬೇಕು. ಇದು ಹೇಗೆ ಹೋಗುತ್ತಿದೆ ಎಂದರೆ ಟ್ರಾನ್ಸ್‌ಪೋರ್ಟ್ ಕಂಟ್ರಾಕ್ಟರಿಗೆ ಹತ್ತು ಸಾವಿರ ಎಕ್ಸ್‌ಟ್ರಾ ಕೊಡುತ್ತಾರೆ ಟ್ರಾನ್ಸ್‌ಪೋರ್ಟ್ ಜೊತೆಗೆ ಹತ್ತು ಸಾವಿರ ರೂಪಾಯಿ ಹೆಚ್ಚಿಗೆ ಹತ್ತು ಸಾವಿರ ರೂಪಾಯಿ ಹೆಚ್ಚಿಗೆ ಕೊಡುತ್ತಾರೆ, ಅದೂ ಕೂಡ ಬಿಲ್ ಇಲ್ಲದೆ ಕೊಡುತ್ತಿದ್ದಾರೆ, ತೆಗೆದುಕೊಂಡು ಹೋಗಿ ಲಕ್ನೋಗೆ ಕೊಟ್ಟೆವು ಎಂದು ಹೇಳುತ್ತಾರೆ. ಇದರಿಂದ ನಮ್ಮ ಸರ್ಕಾರಕ್ಕೆ ಆದಾಯ ಬರುತ್ತದೆಯೇ? ಅಲ್ಲಿ ಹೇಗೆ ಸೋರಿ ಹೋಗುತ್ತದೆ ನೋಡಿ. ಏಕೆಂದರೆ ಹತ್ತು ಸಾವಿರ ರೂಪಾಯಿ ಕೊಟ್ಟರೆ 25 ಸಾವಿರ ರೂಪಾಯಿ ಉಳಿಯುತ್ತದೆ ಒಂದು ಲೋಡು ಅಡಿಕೆ ಕಳ್ಳತನದಿಂದ ಹೋದರೆ. ಗೇಟ್‌ನಲ್ಲಿ ಚೆಕ್ ಆಗುತ್ತದೆಯೋ ನೋಡಿ. ಹೀಗಾದರೆ ನಿಮಗೆ ಎಲ್ಲಿ ಆದಾಯ ಬರುತ್ತದೆ? ಈ ರೀತಿ ನೀವು ತೆರಿಗೆಯನ್ನು ಏರಿಸದೇ ತೆರಿಗೆಯನ್ನು ಸರಳವಾಗಿ ಮಾಡಿ ಅವರು ಕೊಡುವ ಹಾಗೆ ಮಾಡಿದರೆ ಖಂಡಿತವಾಗಿ ತೆರಿಗೆ ಕೊಡುತ್ತಾರೆ, ಕೊಡದೆ ಎಲ್ಲಿ ಹೋಗುತ್ತಾರೆ? ಮಾನ್ಯ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಮೊಯಿಲಿಯವರು ರೈತರಿಗೆ ಮತ್ತು ವ್ಯಾಪಾರಿಗಳಿಗೆ ಭರವಸೆ ಕೊಟ್ಟಿದ್ದರು. ಮುಂದಿನ ವರ್ಷ 3 ಪರ್ಸೆಂಟ್ ಮಾಡುತ್ತೇವೆಂದು ಹೇಳಿದ್ದರು. ನೀವು 3 ಪರ್ಸೆಂಟ್ ಹೋಗಿ 6 ಪರ್ಸೆಂಟ್ ಮಾಡಿದಿರಿ. ಇದನ್ನು ದಯವಿಟ್ಟು ತಾವು ಅವಲೋಕನ ಮಾಡಿ. ಯಾವುದೋ ರೀತಿಯಿಂದ ಆಲೋಚನೆ ಮಾಡಬೇಡಿ. ಕರಭಾರ ಸೋರಬಾರದು. ಅತ್ಯಂತ ಆದಾಯ ಬರತಕ್ಕ ಸಂದರ್ಭದಲ್ಲಿ, ಕೋಳಿ ಚಿನ್ನದ ಮೊಟ್ಟೆ ಇಡುತ್ತದೆಂದು ಒಂದೇ ಸಾರಿ ಕೋಳಿಯನ್ನೇ ಕೊಯ್ದರೆ ಹೇಗೆ? ಮೊಟ್ಟೆಯನ್ನು ಸ್ವೀಕಾರ ಮಾಡುವುದು ಬಿಟ್ಟು ಕೋಳಿಯನ್ನೇ ಕೊಯ್ದ ಹಾಗೆ ಆಗುತ್ತದೆ. ಆ ದೃಷ್ಟಿಯಿಂದ ಆಲೋಚನೆ ಮಾಡಿ. ಮಾನ್ಯ ಸಚಿವರು ಇಲ್ಲೇಯೇ ಇದ್ದಾರೆ, ತಮ್ಮ ಮೂಲಕ ನಾನು ಅವರ ಗಮನಕ್ಕೆ ತರುತ್ತೇನೆ. ಈ ಬೆಳೆಗೆ ರೋಗ ಏನು ಬಂದಿದೆ ಇದನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ಸಂಶೋಧನೆಗೆ ಲ್ಯಾಬ್‌ಗೆ ಹೆಚ್ಚು ಹಣ ಕೊಡಬೇಕು. ಇಲ್ಲದಿದ್ದರೆ ಹಳದಿ ಎಲೆ ರೋಗ, ಬೇರು ಹುಳು ರೋಗಗಳು ಬಯಲು ಸೀಮೆ ಮತ್ತು ಮಲೆನಾಡಿನಲ್ಲಿ ಇತ್ತೀಚೆಗೆ ಹೆಚ್ಚಾಗಿವೆ. ನಮ್ಮ ತಾಲ್ಲೂಕು, ಹೊನ್ನಾಳಿ, ಚಿತ್ರದುರ್ಗ, ದಾವಣಗೆರೆ ಭಾಗಗಳಲ್ಲಿ ಅಡಿಕೆ ಬೆಳೆ ಬೆಳೆಯುತ್ತಿದ್ದಾರೆ. ಅಲ್ಲಿ ಸುಂಡೆ ಕೊರೆಯುವಂಥ ರೋಗಗಳು ಬರುತ್ತಿವೆ. ಇದು ನಾಶದ ಅಂಚಿಗೆ ಹೋಗಬಾರದು. ಆದಾಯ ತರತಕ್ಕ, ರೈತರ ಜೀವನ ಮಟ್ಟ ಸುಧಾರಿಸುವ ಈ ಬೆಳೆ ಸರ್ವವ್ಯಾಪಿಯಾಗಿ ಚೆನ್ನಾಗಿ ಬರಬೇಕು, ರೈತರ ಜೀವನ ಉತ್ತಮವಾಗಬೇಕು ಮತ್ತು ಸರ್ಕಾರಕ್ಕೆ ಕೈಕೂಡ ಚೆನ್ನಾಗಿ ಬರಬೇಕು, ರೈತರ ಜೀವನ ಉತ್ತಮವಾಗಬೇಕು ಮತ್ತು ಸರ್ಕಾರಕ್ಕೆ ಕೂಡ ಆದಾಯ ಬರಬೇಕೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇನ್ನು ಟ್ಯಾಕ್ಸೇಷನ್ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನನಗೆ ಹೆಚ್ಚಿಗೆ ಸಮಯ ಕೊಟ್ಟಿಲ್ಲ. ನನ್ನ ವಿನಂತಿ ಇಷ್ಟೆ. ನಾವು ಹೊಸಬರು ಇದ್ದೇವೆ. ಅನೇಕ ಭಾವನೆಗಳನ್ನು ಹೊತ್ತು ಬಂದಿದ್ದೇವೆ. ಸೀನಿಯರ್ಸ್ ತುಂಬಾ ಸಮಯ ತೆಗೆದು ಕೊಳ್ಳುತ್ತಿದ್ದಾರೆ. ನಿಮ್ಮ ಕೈ ಅವರು ಮಾತನಾಡುವಾಗಲೂ ಬೆಲ್ ಮೇಲೆ ಹೋಗಲಿ ಎಂದು ನಾನು ಆಶಿಸುತ್ತೇನೆ. ನಮಗೆಲ್ಲರಿಗೂ ಹೆಚ್ಚಿನ ಕಾಲಾವಕಾಶ ಮಾಡಿಕೊಡಿ. ನಮ್ಮ ಭಾವನೆಗಳನ್ನು ವ್ಯಕ್ತ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ನಾವು ಹೊಸ ಹೊಸ ವಿಚಾರಗಳನ್ನು ಹೊತ್ತು ಬಂದಿದ್ದೇವೆ. ನಾವು ಹೇಳುವುದಕ್ಕೆ ಯಾವ ವೇದಿಕೆ ಹೇಳಿ. ದಯಮಾಡಿ ಅವಕಾಶ ಕೊಡಬೇಕು.

ಅಧ್ಯಕ್ಷರು : ನೀವು ಅವರಿಗಿಂತ ಸೀನಿಯರ್ ಆಗಿ ಮಾತನಾಡಿದಿರಿ, ಬಹಳ ಚೆನ್ನಾಗಿ ಮಾತನಾಡಿದಿರಿ.

6.40 ಪಿ.ಎಂ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್ಕಲ್) : ಸನ್ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಸಿದ್ಧರಾಮಯ್ಯನವರು ಮಂಡಿಸಿದಂಥ ಈ ಬಜೆಟನ್ನು ವಿರೋಧಿಸಿ ಕೆಲವು ಸಲಹೆಗಳನ್ನು ನಾನು ಕೊಡುತ್ತಿದ್ದೇನೆ. ಮುಖ್ಯವಾಗಿ ನಾನು ಅಪೇಕ್ಷೆ ಪಟ್ಟಿದ್ದು ಏನೆಂದರೆ ಸಿದ್ಧರಾಮಯ್ಯನವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಅನೇಕ ವೇದಿಕೆಗಳ ಮೇಲೆ ಮತ್ತು ಅನೇಕ ಜಿಲ್ಲೆಗಳಲ್ಲಿ ಪ್ರವಾಸವನ್ನು ಕೈಗೊಂಡಾಗ ನಾವು ಹೆಚ್ಚಿನ ಆದ್ಯತೆಯನ್ನು ನೀರಾವರಿಗೆ ಕೊಡುತ್ತೇವೆ ಮತ್ತು ಹಳ್ಳಿಯ ಜನರ ಬದುಕನ್ನು ಹಸನು ಮಾಡುತ್ತೇವೆ ಮತ್ತು ಹೆಚ್ಚಿನ ಪ್ರಾಮುಖ್ಯತೆಯನ್ನು ಈ ಕೃಷಿ ಕಾರ್ಮಿಕರಿಗೆ ಮತ್ತು ಕೃಷಿಕರಿಗೆ ಕೊಡುತ್ತೇವೆ ಎಂದು ಅವರು ಹೇಳಿಕೊಂಡು ಬಂದಿದ್ದು ನಿಜ. ಮತ್ತು ಈ ಬಜೆಟ್‌ನಲ್ಲಿ ಕೂಡ ಸಾಕಷ್ಟು ಅದರ ಪ್ರತಿಬಿಂಬ ಇದೆ ಎಂದು ಅನೇಕ ಸದಸ್ಯರು ಮಾತನಾಡಿದರು ಮತ್ತು ಅವರೂ ಕೂಡ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಮಾಡುವಾಗ ಪತ್ರಿಕೆಯಲ್ಲಿ ಕೂಡ ಹೇಳಿದ್ದಾರೆ. ಆದರೆ ನನಗನ್ನಿಸಿದ ಮಟ್ಟಿಗೆ ಯಾವ ಉತ್ಸಾಹದಿಂದ ಇದನ್ನು ಹೇಳಿದ್ದರು ಹಿಂದೆ ಆ ಉತ್ಸಾಹ ಬಜೆಟ್‌ನಲ್ಲಿ ಏನೂ ಕಾಣಲಿಲ್ಲ. ಮತ್ತು ಕೆಲವು ಅನಾವಶ್ಯಕವಾದಂಥ ವಿಷಯಗಳನ್ನು ಈ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಕೇಂದ್ರ ಸರ್ಕಾರದ ಮೇಲೆ ಮಾಡತಕ್ಕ ಟೀಕೆ ಅನಾವಶ್ಯಕ ಇತ್ತು. ಮತ್ತು ಕೆಲವು ಕೇಂದ್ರ ಸರ್ಕಾರದ ಧೋರಣೆಗಳನ್ನು ಒಪ್ಪಿಕೊಂಡು ಆ ಒಂದು ಧೋರಣೆಗಳ ಮೇಲೆ ಟೀಕೆ ಮಾಡಿ ಹೆಚ್ಚುಕಡಿಮೆ ನಾಲ್ಕೈದು ಪೇಜ್ ಇದರಲ್ಲಿ ಹಾಳು ಮಾಡಿದ್ದಾರೆ. ನಾನು ಕೇಳತಕ್ಕದ್ದು ಇಷ್ಟೆ. 1983ಕ್ಕಿಂತ ಹಿಂದೆ ಮತ್ತು 83ರಿಂದ 1989ರವರೆಗೆ ಅವರ ಸರ್ಕಾರ ಯಾವ ರೀತಿಯಾಗಿ ಕೆಲಸ ಮಾಡಿದೆ, ಎಷ್ಟರಮಟ್ಟಿಗೆ ಅವರ ಕಾರ್ಯಕ್ರಮಗಳು ಇದ್ದವು, ಆ ಕಾರ್ಯಕ್ರಮಗಳು ಕುಂಠಿತವಾದವು, ಏಕೆಂದರೆ ಮುಂದೆ ಬಂದಂಥ ಸರ್ಕಾರಗಳು ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. ಯಾವ ಕಾರ್ಯಕ್ರಮಗಳು ಕುಂಠಿತವಾಗಿವೆ ಅಥವಾ ಹೊಸ ಕಾರ್ಯಕ್ರಮ ಕಾಂಗ್ರೆಸ್ ಪಕ್ಷದ ಸರ್ಕಾರ ಏನು ತೆಗೆದುಕೊಂಡಿತ್ತು ಅದರ ಬಗ್ಗೆ ಏನೂ ಕೂಡ ಹೇಳಲಿಲ್ಲ. ಸುಮ್ಮನೆ ಸಾರಾಸಗಟಾಗಿ ಹೇಳಿಬಿಟ್ಟರು. ಅನೇಕ ಒಳ್ಳೆ ಒಳ್ಳೆಯ ಕಾರ್ಯಕ್ರಮಗಳನ್ನು ತೆಗೆದುಹಾಕಿದರು, ಈಗ ನಾವು ಅದನ್ನು ಪುನಃ ಜಾರಿ ಮಾಡಿದ್ದೇವೆ ಎಂದು. ಅದೇನೂ ನನಗೆ ಕಾಣಲಿಲ್ಲ. ಇದರಲ್ಲಿರತಕ್ಕ ಓಲ್ಡ್ ಏಜ್ ಪೆನ್‌ಷನ್ ಕಾರ್ಯಕ್ರಮ ಶ್ರೀಮಾನ್ ದೇವರಾಜಅರಸ ಅವರ ಕಾಲದಲ್ಲೇ ಪ್ರಾರಂಭ ಆಗಿತ್ತು. ಹೌಸಿಂಗ್ ಪ್ರೋಗ್ರಾಂ ನಮ್ಮ ಕಾಲದಲ್ಲಿ 1972ರಲ್ಲಿ ಶ್ರೀಮಾನ್ ದೇವರಾಜಅರಸ ಅವರು ಇದ್ದಾಗಲೇ ಪೀಪಲ್ಸ್ ಹೌಸಿಂಗ್ ಸ್ಕೀಂ ಎಂದು ಇತ್ತು. ದಿವಂಗತ ಬಸವಲಿಂಗಪ್ಪನವರ ಕಾಲದಲ್ಲಿ ಪ್ರಾರಂಭವಾಗಿತ್ತು. ಹೌಸ್ ಸೈಟ್ಸ್ ಕಾರ್ಯಕ್ರಮ ಕೂಡ ಆಗ ಪ್ರಾರಂಭವಾಗಿದೆ. ಭೂಸುಧಾರಣೆ ಕಾನೂನಿನ ಬಗ್ಗೆ ಸ್ಪಷ್ಟವಾಗಿ ಹೇಳಿಬಿಟ್ಟಿದ್ದೀರಿ. ಯಾರೇ ಕೈಗಾರಿಕೋದ್ಯಮಿಗಳು ಬಂದರೂ ಕೂಡ ಅವರಿಗೆ ನಾವು ಪ್ರೋತ್ಸಾಹ ನೀಡುವುದಕ್ಕೋಸ್ಕರ ಕಾನೂನನ್ನು ಬದಲಾವಣೆ ಮಾಡುತ್ತೇವೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ. ಮತ್ತು ಕಾಫಿ ಪ್ಲಾಂಟರ್ಸ್ ಬಗ್ಗೆ ನಾನು

ಹೇಳುವುದಿಲ್ಲ. ಏಕೆಂದರೆ ಅವರ ಟ್ಯಾಕ್ಸೇಷನ್ ಬಗ್ಗೆ ನನ್ನ ಅಭ್ಯಂತರ ಇಲ್ಲ. ಅವರು ಟ್ಯಾಕ್ಸ್ ಕಡಿಮೆ ಮಾಡಿಕೊಳ್ಳುವುದಕ್ಕೆ ಕೇಳಿಕೊಳ್ಳಲಿ. ಆದರೆ ಅನೇಕ ಜನ ಒತ್ತುವರಿ ಮಾಡಿದ್ದನ್ನು ನಾವು ರೆಗ್ಯುಲರೈಸ್ ಮಾಡುತ್ತೇವೆ ಎಂಬ ಮಾತನ್ನು ತಾವು ಹೇಳಿದ್ದೀರಿ. ಅದೇ ರೀತಿಯಾಗಿ ಅನೇಕ ವಿಷಯಗಳನ್ನು ತಾವು ಏನು ಪ್ರಸ್ತಾಪ ಮಾಡಿದ್ದೀರಿ ಇದನ್ನು ನೋಡಿದರೆ ನಾನು ಹೇಳಬೇಕಾಗುತ್ತದೆ. ನಿಜವಾಗಿಯೂ ಈ ಬಜೆಟ್‌ಗೂ ಮತ್ತು ನಿಮ್ಮ ಹೇಳಿಕೆಗೂ ಅಜಗಜಾಂತರ ವ್ಯತ್ಯಾಸ ಇದೆ. ಮತ್ತು ನೀವು ಶ್ರೀಮಂತರ ಪರ ಇದ್ದೀರಿ ಎಂಬುದಕ್ಕೆ ಇದಿಷ್ಟೇ ಸಾಕು. ಮತ್ತೇನೂ ಬೇಕಾಗಿಲ್ಲ. ಇವತ್ತು ಹೇಳತಕ್ಕದ್ದು ಒಂದು ಮಾಡತಕ್ಕದ್ದು ಒಂದು ಎಂಬುದನ್ನು ಸ್ಪಷ್ಟಪಡಿಸಿದ್ದೀರಿ. ಮತ್ತು ಬಹಿರಂಗವಾಗಿ ಹೇಳುತ್ತಾ ಇದ್ದೀರಿ ನಾನು ಯಾರಿಗೂ ಕೂಡ ಹೆದರುವುದಿಲ್ಲ, ಒಳ್ಳೆಯದಿದ್ದರೆ ನಾನು ಮಾಡಿಯೇ ತೀರುತ್ತೇನೆ, ಎಷ್ಟೇ ಜನ ವಿರೋಧ ಮಾಡಲಿ ಎಷ್ಟೇ ಜನ ಇದಕ್ಕೆ ತಮ್ಮ ಪ್ರತೀಕಾರವನ್ನು ವ್ಯಕ್ತಪಡಿಸಲಿ ನಾನು ನನ್ನ ಧಾಟಿಯಲ್ಲೇ ಹೋಗುತ್ತೇನೆ ಎಂದು ತಾವು ಹೇಳಿದ್ದೀರಿ. ಇದೆಲ್ಲಾ ನೋಡಿದಾಗ ನೀವು ಸತ್ಯಾಂಶವನ್ನು ಮರೆಮಾಚುತ್ತಿದ್ದೀರಿ ಎನ್ನತಕ್ಕದ್ದು ಇದರಿಂದ ಸ್ಪಷ್ಟವಾಗಿ ಕಾಣುತ್ತಿದೆ. ಕೆಲವು ಉದಾಹರಣೆಗಳನ್ನು ನಾನು ಹೇಳುತ್ತೇನೆ. ಈಗ ಸೇಲ್ಸ್ ಟ್ಯಾಕ್ಸ್ ಬಗ್ಗೆ ತಾವು ತೆಗೆದುಕೊಂಡಂಥ ಧೋರಣೆ. ಕೆಲವು ವಿಷಯಗಳ ಮೇಲೆ ತಾವು ಟ್ಯಾಕ್ಸ್ ಹಾಕಿದ್ದೀರಿ. ಅದನ್ನು ಯಾರು ಕೂಡ ಬೇಡ.ಎಂದು ಹೇಳುವಹಾಗಿಲ್ಲ. ಏಕೆಂದರೆ ಯಾರೂ ಕೂಡ ಟ್ಯಾಕ್ಸ್ ಇಲ್ಲದೇ ಸರ್ಕಾರ ನಡೆಸಿ ಎಂದು ಹೇಳುವುದಕ್ಕಾಗುವುದಿಲ್ಲ. ನಮಗೂ ಆಗುವುದಿಲ್ಲ, ನಿಮಗೂ ಆಗುವುದಿಲ್ಲ. ಇನ್ನು ಯಾರು ಬೇರೆಯವರು ಬಂದರೂ ಅವರಿಗೆ ಕೂಡ ಆಗುವುದಿಲ್ಲ. ಆದರೆ ಎಂಥ ವಸ್ತುಗಳ ಮೇಲೆ ಹಾಕಬೇಕು ಎಂಬುದನ್ನು ಕೂಡ ನಾವು ಯೋಚನೆ ಮಾಡಬೇಕು. ಈಗ ತಮಗೆ ಗೊತ್ತಿರುವ ಹಾಗೆ ನೀರು ಸರಬರಾಜು ಮಾಡುವುದಕ್ಕೆ ರೈತರು ಪಿ.ವಿ.ಸಿ. ಪೈಪ್ ಉಪಯೋಗ ಮಾಡುತ್ತಾರೆ. ಅದನ್ನು ಅನೇಕ ಕಡೆ ಬೋರ್‌ವೆಲ್‌ಗೂ ಕೂಡ ಉಪಯೋಗ ಮಾಡುತ್ತಾರೆ. ಆದರೆ ಅನೇಕ ಕಡೆ ಪಿ.ವಿ.ಸಿ. ಪೈಪನ್ನು ರೈತರು ಪರ್ಚೇಸ್ ಮಾಡುತ್ತಾರೆ. ಮತ್ತು ತಮ್ಮ ಕಳಕಳಿ ರೈತರ ಬಗ್ಗೆ ಇದೆ. ಅದಕ್ಕೆ 3 ಪರ್ಸೆಂಟ್‌ನಿಂದ 4 ಪರ್ಸೆಂಟ್ ಮಾಡುತ್ತೀರಿ. ಅದೇ ರೀತಿ ಖಾದಿ ಮತ್ತು ಕಾಟೇಜ್ ಇಂಡಸ್ಟ್ರೀಸ್‌ಗೆ ಮಾಡಿದ್ದೀರಿ. ಅನೇಕ ಜನ ಲೋನನ್ನು ಪಡೆದುಕೊಂಡು ನಿರುದ್ಯೋಗಿ ಪದವೀಧರರು, ಹಳ್ಳಿಯಲ್ಲಿರತಕ್ಕ ಯುವಕರು ಮುಂದೆ ಬಂದು ಕೆಲವು ಸಣ್ಣಪುಟ್ಟ ಕೈಗಾರಿಕೆಗಳನ್ನು ಮಾಡುತ್ತಾರೆ. ಕೈಯಿಂದ ತಯಾರು ಮಾಡಿದ ಬಟ್ಟೆ, ಸಾಬೂನಿಗೂ ಕೂಡ 3 ರಿಂದ 4ರವರೆಗೆ ಏರಿಸಿದ್ದೀರಿ. ಅದೇ ರೀತಿಯಾಗಿ ಪಂಪ್‌ಸೆಟ್ ಮೇಲೆ .. ಒಂದು ಕಡೆ ಪವರ ಸಬ್ಸಿಡಿ ತಾವು ಕೊಡುತ್ತಾ ಇದ್ದೀರಿ. ಅಂದರೆ ಹಿಂದಿನ ಸರ್ಕಾರ ಕೊಡುತ್ತಿತ್ತು ಅದನ್ನು ಮುಂದುವರೆಸುತ್ತಾ ಇದ್ದೀರಿ. ಅನೇಕ ಕಡೆ ತಾವು 5 ಎಚ್.ಪಿ. ಮೇಲೆ ಮತ್ತು 10 ಎಚ್.ಪಿ. ಒಳಗೆ ಇರತಕ್ಕ ಪಂಪ್‌ಸೆಟ್‌ಗೆ 5ರಿಂದ 10ಕ್ಕೆ ಟ್ಯಾಕ್ಸ್ ಏರಿಸಿದ್ದೀರಿ. ಇದನ್ನು ರೈತರು ಉಪಯೋಗ ಮಾಡುವುದಿಲ್ಲವೆ? ಪಿ.ವಿ.ಸಿ. ಪೈಪ್ ರೈತರು ಉಪಯೋಗ ಮಾಡುವುದಿಲ್ಲವೆ? ಕೈಯಿಂದ ತಯಾರು ಮಾಡಿದಂಥ ಸಾಬೂನನ್ನು ರೈತರು ಉಪಯೋಗ ಮಾಡುವುದಿಲ್ಲವೆ? ಆಮೇಲೆ ರೂಫಿಂಗ್ ಮೆಟಿರಿಯಲ್ಸ್. ಇದೆಲ್ಲಾ ಮಧ್ಯಮ ವರ್ಗದವರು ಉಪಯೋಗ ಮಾಡುವುದು. ಇದಕ್ಕೂ ಕೂಡ ತಾವು 13 ರಿಂದ 15 ಪರ್ಸೆಂಟ್‌ಗೆ ಅಂದರೆ 2

ಪರ್ಸೆಂಟ್ ಟ್ಯಾಕ್ಸ್‌ನ್ನು ಜಾಸ್ತಿ ಮಾಡಿದ್ದೀರಿ. ಇದು ಲೋಯರ್ ಮಿಡ್ಲ್‌ಕ್ಲಾಸ್ ಮತ್ತು ಮಿಡ್ಲ್ ಕ್ಲಾಸ್‌ಗೂ ಕೂಡ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ಮತ್ತು ಇದಲ್ಲದೆ ಲಿಕ್ವಿಡ್ ಗ್ಲೂಕೋಸ್, ಇದು ರೋಗಿಗಳಿಗೆ ಅತ್ಯಾವಶ್ಯಕವಾಗಿರುವಂಥ ವಸ್ತು. ಇದರ ಮೇಲೆ ಕೂಡ ತಾವು ಸುಮಾರು 3 ರಿಂದ 4 ಅಂದರೆ ಒಂದು ಪರ್ಸೆಂಟ್ ಟ್ಯಾಕ್ಸ್ ಜಾಸ್ತಿ ಮಾಡಿದ್ದೀರಿ. ಯಾವುದು ರೋಗಿಗಳಿಗೆ ಅವಶ್ಯಕವೋ ಅಂಥದ್ದು ಕೂಡ ಬಿಟ್ಟಿಲ್ಲ. ಆಮೇಲೆ ಕೈಗಾರಿಕೆಗಳ ಅನಿಲ, ಅದರ ಮೇಲೆ ಕೂಡ 13ರಿಂದ 15 ಪರ್ಸೆಂಟ್ ಅಂದರೆ 2 ಪರ್ಸೆಂಟ್ ಜಾಸ್ತಿ ಮಾಢಿದ್ದೀರಿ. ಕೈಗಾರಿಕಾ ಘಟಕಗಳು ಅದರಲ್ಲೂ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗೆ ಇದರಿಂದ ತೊಂದರೆಯಾಗುತ್ತದೆ. ಆದರೆ ದೊಡ್ಡ ದೊಡ್ಡ ಇಂಡಸ್ಟ್ರೀಸ್‌ಗೆ ಇಂತಿಷ್ಟು ಟರ್ನ್‌ಓವರ್ ಅಥವಾ ಅವರ ಬೇಡಿಕೆ 100 ಲೀಟರೋ ಸಾವಿರ ಲೀಟರೋ ಪ್ರತಿದಿನ ತಂದಾಗ ಅದಕ್ಕೆ ಬೇಕಾದರೆ ಒಂದು ಕಡಿವಾಣ ಹಾಕಿ ಒಂದು ಲಿಮಿಟ್ ಹಾಕಿ ಏರಿಸಿದರೆ ತಪ್ಪಿಲ್ಲ. ಆದರೆ ಈ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ಗೆ ಕೂಡ ತೊಂದರೆಯಾಗುವಂಥ ರೀತಿಯಲ್ಲಿ ಇದನ್ನು ಹಾಕಿದ್ದೀರಿ. ಆಮೇಲೆ ಮಾನ್ಯ ಕಮರಲ್ ಇಸ್ಲಾಂ ಅವರು ಮತ್ತು ಶ್ರೀಮಾನ್ ವೀರಪ್ಪ ಮೊಯಿಲಿಯವರು ಮತ್ತು ಅನೇಕ ಜನರು ಮಾತನಾಡುವಾಗ ಇದನ್ನು ಹೇಳಿದ್ದಾರೆ. ಮೈದಾ ಹಿಟ್ಟು ಇದರ ಮೇಲೆ 4 ಪರ್ಸೆಂಟ್ ಹಾಕಿದ್ದೀರಿ. ತಮಗೆ ಹೇಳಬೇಕಾದರೆ ಅಧ್ಯಕ್ಷರೆ, ನಮ್ಮ ಕಡೆ ವಿಶೇಷವಾಗಿ ಗುಲ್ಬರ್ಗ, ಬೀದರ್, ರಾಯಚೂರು ಮತ್ತು ಬಿಜಾಪುರ ಈ ಕಡೆ ಏನು ಮಾಡುತ್ತಾರೆಂದರೆ ಮುಂಜಾನೆ ಎದ್ದಕೂಡಲೇ ಚಹಾ ಜೊತೆಯಲ್ಲಿ ಡಬ್ಬಲ್ ರೋಟಿ ಎಂದು ಹೇಳುತ್ತಾರೆ, ಅದನ್ನು ನಮ್ಮ ಕಡೆ ಮೈದಾದಿಂದ ಮಾಡತಕ್ಕದ್ದು, ಕೆಲಸಕ್ಕೆ ಹೋಗುವ ಲೇಬರರ್ಸ್, ಮಿಲ್ ವರ್ಕರ್ಸ್ ಯಾರೇ ಇರಲಿ ಅವರಿಗೆ ಮುಂಜಾನೆ ನಾಷ್ಟ ಮಾಡುವುದಕ್ಕೆ ಏನೂ ಇರುವುದಿಲ್ಲ. ಕೊನೆಗೆ ಏನು ಮಾಡುತ್ತಾರೆಂದರೆ ಯಾವುದೋ ಸಣ್ಣಪುಟ್ಟ ಹೋಟೆಲ್‌ನಲ್ಲಿ ಉದ್ರಿ ಇಟ್ಟು ತಿಂಗಳಿಗೊಮ್ಮೆ ಪೇಮೆಂಟ್ ಕೊಟ್ಟು ಒಂದು ಟೀ ತೆಗೆದುಕೊಂಡು ಡಬ್ಬಲ್ ರೋಟಿ ತಿಂದು ಕೆಲಸಕ್ಕೆ ಹೋಗುತ್ತಾರೆ. ಆದ್ದರಿಂದ ತಾವು ಹಾಕಿರತಕ್ಕ ಈ ತೆರಿಗೆ ಸಾಮಾನ್ಯ ಜನರ ಮೇಲೆ ಬೀಳತಕ್ಕದ್ದು. ಮೈದಾ ಹಿಟ್ಟಿನಿಂದ ಚಪಾತಿ ಮಾಡಿ ಬಹುತೇಕ ಯಾರೂ ದೊಡ್ಡದೊಡ್ಡವರು ತಿನ್ನುವುದಿಲ್ಲ. ಅವರೆಲ್ಲಾ ಗೋಧಿ ಹಿಟ್ಟಿನಿಂದ ಮಾಡಿದ್ದನ್ನು ತಿನ್ನುತ್ತಾರೆ. ಇದು ಚೀಪ್ ವರೈಟಿ. ಇದಕ್ಕೆ ನೀವು ಈ ರೀತಿಯಾಗಿ ನಾಲ್ಕು ಪರ್ಸೆಂಟ್ ಒಮ್ಮೆಲೇ ಹಾಕಿದರೆ ಯಾರಿಗೂ ಕೂಡ ಖಂಡಿತವಾಗಿ ಬಡವರಿಗೆ ಸಹಾಯ ಮಾಡಿದಂತಾಗುವುದಿಲ್ಲ. ಮತ್ತು ಕಾರ್ಮಿಕರು, ಬಡತನ ರೇಖೆಯ ಕೆಳಗೆ ಇರತಕ್ಕವರು, 41 ಪರ್ಸೆಂಟ್ ಎಂದು ಏನು ಅಂಕಿಸಂಖ್ಯೆ ಕೊಟ್ಟಿದ್ದೀರಿ ಆ 41 ಪರ್ಸೆಂಟ್ ಜನ ಇದನ್ನು ಉಪಯೋಗಿಸತಕ್ಕದ್ದು. ಬಡತನ ರೇಖೆಯ ಕೆಳಗೆ ಇರತಕ್ಕ ಜನ ಇದನ್ನು ತಿನ್ನತಕ್ಕದ್ದು. ಇದಕ್ಕು ಕೂಡ ಇವತ್ತಿನ ದಿವಸ ಹಾಕಿಬಿಟ್ಟು ತೊಂದರೆಗೆ ಈಡು ಮಾಡಿದ್ದೀರಿ. ಇದಲ್ಲದೆ ಈಗಾಗಲೇ ಕಮರಲ್ ಇಸ್ಲಾಂ ಭಾಷಣ ಮಾಡುವಾಗ ಹೇಳಿದರು ಟರ್ನ್ ಓವರ್ ಟ್ಯಾಕ್ಸ್, ಟ್ರಾನ್ಸ್‌ಪೋರ್ಟ್‌ಗೆ, ಹಾಕಿರತಕ್ಕಂಥ ಸೇಲ್ಸ್ ಟ್ಯಾಕ್ಸ್, ಇದೆಲ್ಲಾ ಹಿಡಿದುಕೊಂಡರೆ 50 ರೂಪಯಿ ಒಂದು ಕ್ವಿಂಟಾಲ್‌ಗೆ ಜಾಸ್ತಿಯಾಗುತ್ತದೆ ಎಂಬ ಒಂದು ವಾದ ಇದೆ. ಆದ್ದರಿಂದ ಇದನ್ನು ದಯವಿಟ್ಟು ತೆಗೆದುಹಾಕಿ. ಇದರಿಂದ ನಿಮಗೆ ಭೂಷಣ ಬರುವುದಿಲ್ಲ. ತದನಂತರ ಬಾಗಿಲುಗಳು, ಕಿಟಕಿಗಳು, ಬೋಲ್ಟು ನಟ್ಟು, ಇವಕ್ಕೂ ಕೂಡ ಒಂದಕ್ಕೂ ಬಿಟ್ಟಿಲ್ಲ. ಪೇಪರ್‌ನಲ್ಲಿ ನಾನು ನೋಡಿದೆ. ಈ ಬೆಗ್ಗರ್ಸ್

ಒಬ್ಬರನ್ನು ಬಿಟ್ಟು ಬಾಕಿ ಎಲ್ಲರ ಮೇಲೆ ಟ್ಯಾಕ್ಸ್ ಹಾಕಿದ್ದಾರೆ ಎನ್ನತಕ್ಕ ಒಂದು ಮಾತನ್ನು ಇವತ್ತಿನ ಪೇಪರ್‌ನಲ್ಲಿ ಹಾಕಿದ್ದಾರೆ. ಹಾಗೆ ಆಗಿದೆ. ಕಿಟಕಿ ಮೇಲೆ, ಬೋಲ್ಟ್ ಮೇಲೆ, ನಟ್ ಮೇಲೆ ಆಮೇಲೆ ಮೈದಾ ಮೇಲೆ ಪಂಪ್‌ಸೆಟ್ಟಿಗೆ ಉಪಯೋಗಿಸತಕ್ಕ ಪಿ.ಯು.ಸಿ. ಪೈಪ್ ಮೇಲೆ, ಅಡಿಕೆ ಮೇಲೆ, ಕಾಫಿ ಮೇಲೆ ಎಲ್ಲದರ ಮೇಲೆ ಹಾಕಿದ್ದಾರೆ. ಹೀಗಾಗಿ ಸಾಮಾನ್ಯ ಜನರು ಉಪಯೋಗಿಸತಕ್ಕ ವಸ್ತುಗಳ ಮೇಲೆ ತಾವು ತೆರಿಗೆಯನ್ನು ಹಾಕಿದ್ದೀರಿ. ಇದರಿಂದ ನಾವು 242 ಕೋಟಿ ರೂಪಾಯಿಗಳ ಹೆಚ್ಚು ಜೇಬಿನಿಂದ ತೆಗೆದುಕೊಳ್ಳುವುದು. ಇನ್ನೊಂದು ಕಡೆಯಿಂದ ರೈಸ್ ಸಬ್ಸಿಡಿ ಕೊಡುತ್ತೇವೆ, ಇಂಟ್ರೆಸ್ಟ್ ಸಬ್ಸಿಡಿ ಕೊಡುತ್ತೇವೆಂದು ಹೇಳುವುದರಲ್ಲಿ ಅರ್ಥ ಇದೆಯೇ? ನೀವು ಇದನ್ನು ಬಿಟ್ಟುಬಿಡಿ. ಆ ಸಬ್ಸಿಡಿಯನ್ನು ಕೊಡುವುದನ್ನೇ ಬಿಟ್ಟುಬಿಡಿ. ಅದು ಬೇಡ. ಈ ರೀತಿ ಮಾಡುವುದರಿಂದ ಇದರ ಅವಶ್ಯಕತೆ ಇಲ್ಲ. ಇದರ ಬಗ್ಗೆ ತಾವು ಯೋಚನೆ ಮಾಡಿ. ಮೀನುಗಾರರ ಬಗ್ಗೆ ಮಾನ್ಯ ಸದಸ್ಯರಾದ ಸಭಾಪತಿಯವರು ಮಾತನಾಡಿದರು. ಈ ಕಡೆ ಮಿತ್ರರೂ ಕೂಡ ಮಾತನಾಡಿದರು. ಸಣ್ಣ ಸಣ್ಣ ದೋಣಿಗಳನ್ನು ತಯಾರು ಮಾಡುತ್ತಾರೆ. ಅದರ ಮೇಲೂ ಕೂಡ ಸುಮಾರು ಒಂದು ಪರ್ಸೆಂಟ್ ಟ್ಯಾಕ್ಸ್ ಹೆಚ್ಚಿಗೆ ಮಾಡಿದ್ದೀರಿ. ಫಿಷರ್‌ಮೆನ್ ಉಪಯೋಗ ಮಾಡತಕ್ಕ ದೋಣಿಗಳು, 3 ಚಕ್ರಗಳ ವಾಹನಗಳ ಮೇಲೂ ಕೂಡ 5 ಪರ್ಸೆಂಟ್‌ನಿಂದ 8 ಪರ್ಸೆಂಟ್‌ಗೆ ಏರಿಸಿದ್ದೀರಿ. ದೊಡ್ಡ ದೊಡ್ಡ ವಾಹನಗಳ ಮೇಲೆ ಮಾಡಿದರೆ ಅದು ಒಂದು ತರಹ. ಆಟೋರಿಕ್ಷಾ, ಸ್ಕೂಟರ್ ಒಂದೂ ಬಿಡದ ಹಾಗೆ ಟ್ಯಾಕ್ಸ್‌ನ್ನು ಏರಿಸಿ ನಾವು ಬಡವರಿಗೆ ಸಹಾಯ ಮಾಡತಕ್ಕಂಥ ಮತ್ತು ರೈತರಿಗೆ ಸಹಾಯ ಮಾಡತಕ್ಕಂಥ ಬಜೆಟ್‌ನ್ನು ಮಂಡಿಸಿದ್ದೇವೆ ಅಂದರೆ ಅದು ಎಷ್ಟರಮಟ್ಟಿಗೆ ಸಾರ್ಥಕವಾಗುತ್ತದೆ ತಾವೇ ಹೇಳಬೇಕು. ಎರಡನೆಯದಾಗಿ 242 ಕೋಟಿ ಹೆಚ್ಚುವರಿ ಟ್ಯಾಕ್ಸ್‌ನ್ನು ತೆಗೆದುಕೊಂಡಿದ್ದೀರಿ. 10 ಹಣಕಾಸಿನ ಆಯೋಗದಿಂದ ಸುಮಾರು 342 ಕೋಟಿ ರೂಪಾಯಿ ಹೆಚ್ಚಿಗೆ ಅಂದರೆ 23 ಪರ್ಸೆಂಟ್ ಇದ್ದುದ್ದು, 27 ಪರ್ಸೆಂಟ್ ಆಗಿದೆ, ಅಂತ ನಿನ್ನೆ ಇಲ್ಲೇ ಚರ್ಚೆ ಮಾಡಿದ್ದಾರೆ.

ಅಧ್ಯಕ್ಷರು : 304 ಕೋಟಿ ರೂಪಾಯಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದೇ ಈ 304 ಕೋಟಿ ರೂಪಾಯಿ. ಆಮೇಲೆ ಇದು 242 ಕೋಟಿ ರೂಪಾಯಿ. ಎರಡನ್ನೂ ಸೇರಿಸಿದರೆ ಸಮೀಪ 546 ಕೋಟಿ ರೂ. ಹೆಚ್ಚುವರಿ ಆದಾಯ ಬರುತ್ತದೆ. ಈ 546 ಕೋಟಿ ರೂಪಾಯಿಗಳ ಆದಾಯವನ್ನು ನೀವು ತೆಗೆದುಕೊಳ್ಳುವಾಗ, ಇದರ ಜೊತೆಗೆ ಎಲ್ಲೆಲ್ಲಿ ಸೋರಿ ಹೋಗುತ್ತದೆ. ಸೇಲ್ಸ್ ಟ್ಯಾಕ್ಸ್ ಇರಬಹುದು, ಎಕ್ಸೈಜ್ ಇರಬಹುದು, ಮೋಟಾರ್ ವೆಹಿಕಲ್ ಟ್ಯಾಕ್ಸ್ ಇರಬಹುದು, ಮತ್ತು ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಷನ್ ಡ್ಯೂಟಿ ಇರಬಹುದು. ಈ ಟ್ಯಾಕ್ಸ್ ಎಲ್ಲಾ ಕೂಡಿ ಸೇರಿಸಿದರೆ, 700-800 ಕೋಟಿ ರೂಪಾಯಿಗಳನ್ನು ಮೊಬಲೈಸ್ ಮಾಡುತ್ತೀರಿ ಎನ್ನತಕ್ಕ ವಿಶ್ವಾಸ ತಮಗೆ ಇದೆ. ಇಷ್ಟು ವಿಶ್ವಾಸ ಇರತಕ್ಕಂತಹವರು, ಇಷ್ಟು ಹಣ ತಮಗೆ ಹೆಚ್ಚಿಗೆ ಸಿಕ್ಕಾಗ, ತಮ್ಮ ಅಲೋಕೇಷನ್ ಏನಿದೆ ಸ್ವಾಮಿ? ತಮ್ಮ ಅಲೋಕೇಷನ್ ಎಲ್ಲಾ ಸೆಕ್ಟಾರ್‌ನಲ್ಲೂ ಹಿಂದಿನ ಸರ್ಕಾರಕ್ಕೆ ಹೋಲಿಸಿ ನೋಡಿದಾಗ ಬಹಳಷ್ಟು ಸೆಕ್ಟಾರ್‌ನಲ್ಲಿ ಕಡಿಮೆ ಇದೆ. ಉದಾಹರಣೆಗೆ ಕೃಷಿ ಮತ್ತು ಸಂಬಂಧಪಟ್ಟ ಸೇವೆಗಳಿಗೆ ತಮ್ಮ ಅಲೋಕೇಷನ್ 6.47% ಹಿಂದಿನ

ಸರ್ಕಾರದ ಅಲೋಕೇಷನ್ 6.94 ಪರ್ಸೆಂಟ್. ಅಗ್ರಿಕಲ್ಚರ್ ಸೆಕ್ಟಾರ್‌ನಲ್ಲಿ. ಅಂದರೆ ಕೃಷಿಕರಿಗೆ ನೇರವಾಗಿ ಸಂಬಂಧಿಸಿದಂಥ ಇಲಾಖೆ. ಈ ಇಲಾಖೆಯಲ್ಲಿ ತಮ್ಮ ಅಲೋಕೇಷನ್ ಏನಿದೆ ಅಂದರೆ 6.47% ಹಿಂದಕ್ಕೆ 6.94 ಪರ್ಸೆಂಟ್. ಆಮೇಲೆ ಗ್ರಾಮೀಣ ಅಭಿವೃದ್ಧಿಗೆ ನಾವು ಹೆಚ್ಚಿಗೆ ಹಣವನ್ನು ಇಟ್ಟಿದ್ದೇವೆ ಅಂತ ಹೇಳುತ್ತೀರಿ. ಅದಕ್ಕೆ ತಾವು ಇಟ್ಟಿರುವುದು 5.62 % ಹೋದ ಸರ್ಕಾರ 6.70 ಪರ್ಸೆಂಟ್ ಇಟ್ಟಿತ್ತು. ತುಲನೆಯನ್ನು ನಾನು ಕೊಡುತ್ತಾ ಇದ್ದೇನೆ. ಏಕೆಂದರೆ ಅದಕ್ಕಿಂತ ಹೆಚ್ಚಿನ ಹಣವನ್ನು ಕೊಟ್ಟಿದ್ದೇನೆ. ಹೆಚ್ಚಿನ ಆಸಕ್ತಿಯನ್ನು ವಹಿಸಿಕೊಂಡು ಬಜೆಟ್ಟನ್ನು ತಯಾರು ಮಾಡಿದ್ದೇನೆ ಅಂತ ಹೇಳುತ್ತಿದ್ದೀರಲ್ಲಾ, ಅದಕ್ಕಾಗಿ ಆ ವಿವರವನ್ನು ಕೊಡುತ್ತಿದ್ದೇನೆ. ಈ ಬಗ್ಗೆ ಎರಡೂ ಕಾಪಿಗಳೂ ಇಲ್ಲೇ ಇವೆ. ಇಷ್ಟೇ ಅಲ್ಲ. ನಿಮ್ಮ ಎಕನಾಮಿಕ್ ಸರ್ವೆಯಲ್ಲೂ ಕೂಡ ತಾವೇ ಕೊಟ್ಟ ಅಂಕಿ ಅಂಶಗಳಲ್ಲೂ ಹೆಚ್ಚು ಕಡಿಮೆ ಇವೇ ಇವೆ. ಆಮೇಲೆ ಹೈದರಾಬಾದ್ ಕರ್ನಾಟಕ ತಮಗೆಲ್ಲಾ ಗೊತ್ತಿದೆ. ಮತ್ತು ಗಡಿನಾಡಿನಲ್ಲಿರತಕ್ಕ ತಾಲ್ಲೂಕುಗಳು ಅವು ಬಹಳ ಹಿಂದುಳಿದವುಗಳು ಇವೆ, ಅವು ಅಭಿವೃದ್ಧಿಯಾಗಬೇಕು ಅಂತ ಹೇಳಿ ನಾವು 3 ಅಭಿವೃದ್ಧಿ ಯೋಜನೆಗಳನ್ನು ಮಾಡಿದ್ದೆವು. ಅದನ್ನು ತಮ್ಮ ಗಮನಕ್ಕೂ ತರುತ್ತಿದ್ದೇನೆ. ಇವತ್ತು ಇವರು ಕೊಟ್ಟಿದ್ದು 2.66 ಕೋಟಿ. ಹಿಂದಕ್ಕೆ ಯಾರಿಗೆ ಆಸಕ್ತಿ ಇರಲಿಲ್ಲ ಅಂತ ಹೇಳಿದ್ದೀರಲ್ಲಾ, ಅವರು ಕೊಟ್ಟಿದ್ದು 3.46 ಕೋಟಿ. ಯಾರದ್ದು ಹೆಚ್ಚಾಯಿತು ಸ್ವಾಮಿ? ಯಾವ ಹೈದರಾಬಾದ್ ಕರ್ನಾಟಕ ಬೇರೆ ಭಾಗದಷ್ಟೇ ಮುಂದುವರಿಯಬೇಕು, ಆ ಬಗ್ಗೆ ಹಿಂದೆ ಶ್ರೀಮಾನ್ ಧರ್ಮಸಿಂಗ್‌ರವರ ಸಮಿತಿ ಏನು ಇತ್ತು, ಆ ಕಮಿಟಿಯ ಕೆಲವು ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು, ಆ ವರದಿಯ ಆಧಾರದ ಮೇಲೆ ಕೆಲವು ಯೋಜನೆಗಳನ್ನು ತಯಾರು ಮಾಡಿದ್ದು. ಪ್ರತಿ ವರ್ಷ 10 ಕೋಟಿ 10 ಕೋಟಿ ರೂಪಾಯಿ ಜಾಸ್ತಿ ಕೊಡಬೇಕೆಂಬ ಯೋಜನೆ ಅವರಲ್ಲಿತ್ತು. ಆದರೆ ಇವತ್ತು ಏನಾಗಿದೆ. 10 ಕೋಟಿಯನ್ನು ಜಾಸ್ತಿ ಕೊಡುವುದಕ್ಕೆ ಬದಲು ಇದ್ದದ್ದನ್ನು ಕಡಿಮೆ ಮಾಡಿ ಇವತ್ತು ತಾವು ಇಲ್ಲಿ ಬಜೆಟ್ಟನ್ನು ಮಂಡನೆ ಮಾಡಿದ್ದೀರಿ. ಅಲ್ಲಿರತಕ್ಕಂತಹವರು ಹಳ್ಳಿ ಜನರಲ್ಲವೇನು? ಗುಲ್ಬರ್ಗ, ಬೀದರ್, ಬಿಜಾಪುರ ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳ ಜನರು? ಆಮೇಲೆ ಕೋಲಾರದವರು ಬಾರ್ಡರ್‌ನಲ್ಲಿದ್ದಾರೆ. ಮೈಸೂರಿನವರು ಬಾರ್ಡರ್‌ನಲಿದ್ದಾರೆ. ಬೆಳಗಾಂ ನವರು ಬಾರ್ಡರ್‌ನಲ್ಲಿದ್ದಾರೆ. ಹೀಗೆ ಅನೇಕ ಬಾರ್ಡರ್ ತಾಲ್ಲೂಕುಗಳಲ್ಲೂ ಕೂಡ ಹೆಚ್ಚಿನ ಅಭಿವೃದ್ಧಿಯಾಗಲಿ ಅಂತ ಹೇಳಿ ಅಲ್ಲೂ ಕೂಡ ನಾವು 18 ಕೋಟಿ ರೂಪಾಯಿ ಕೊಟ್ಟಿದ್ದರೆ, ನೀವು 10 ಕೋಟಿಗೆ ಇಳಿಸಿದ್ದೀರಿ. ಅದು ಬೆಂಗಳೂರಿಗೆ ಅನುಕೂಲವಾಗುತ್ತದೆಯೇ? ಆಮೇಲೆ ಮಲೆನಾಡು ಅಭಿವೃದ್ಧಿ ಬಗ್ಗೆಯೂ ಅದೇ ಪರಿಸ್ಥಿತಿ ಇದೆ. ಹೀಗೆ ಹೇಳುವುದು ಒಂದು ಇಲ್ಲಿ ಬಜೆಟ್‌ನಲ್ಲಿ ಮಂಡಿಸುವುದು ಒಂದು. ಅಂದರೆ ಇದಕ್ಕೆ ಏನು ಹೇಳಬೇಕು? ಏಕೆಂದರೆ ಬೇರೆಯವರ ಹಾಗೆ ಬಯ್ಯುವುದಕ್ಕೆ ಅಂಥಾ ಪದಗಳು ನಮಗೆ ಬೇಗನೆ ಬರುವುದಿಲ್ಲ. ಬಹಳ ದಿವಸಗಳು ಈ ಕಡೆ ಕುಳಿತಿಲ್ಲ ನೋಡಿ. ಅದೂ ಕೂಡ ನನಗೆ ಕಷ್ಟ. ನಾನು ಹೇಳುವುದೇನೆಂದರೆ, ಏಕೆ ನೀವು ಆತ್ಮವಂಚನೆ ಮಾಡಿಕೊಳ್ಳುತ್ತಿದ್ದೀರಿ? ಏಕೆ ಡಿಫಿಸಿಟ್ ಬಜೆಟ್ ಇಡುತ್ತೀರಿ ಮತ್ತೊಂದು ತಾವು ಹೇಳುವುದು. ನಾವು ಹಿಂದುಳಿದ ಭಾಗಗಳನ್ನು ಅಭಿವೃದ್ಧಿಗೊಳಿಸುತ್ತೇವೆ ಹೇಳುವುದು. ಅದಕ್ಕೆ ಏನೇ ಬರಲಿ, ಯಾವುದೇ ತೊಂದರೆ ಬಂದರೂ ಕೂಡ ಬೇರೆಯದ್ದನ್ನು ಬದಿಗಿಟ್ಟು ಇಂತಹ ಕಡೆ ಲಕ್ಷ್ಯ ಕೊಡುತ್ತೇವೆಂದು ಹೇಳಿದ್ದೀರಿ. ನಿಮ್ಮ ಲಕ್ಷ? ಆಮೇಲೆ ನಿಮ್ಮ ಕಳಕಳಿ ಹಿಂದುಳಿದ ವರ್ಗದವರ ಕಲ್ಯಾಣದ ಬಗ್ಗೆ ಹೇಳುವುದಾದರೆ, ಹೋದ ಸಲ ಎಷ್ಟು ಇತ್ತು? ಈ ಸಲ 3.66 ಹೋದ ಸಲ 3.50.

ಅಂದರೆ ನಿಮ್ಮ ಕಳಕಳಿ ಎಷ್ಟು ಜಾಸ್ತಿಯಾಯಿತು ಎಂದರೆ 0.80. ಹಿಂದುಳಿದವರ ಬಗ್ಗೆ, ಹರಿಜನ-ಗಿರಿಜನರ ಬಗ್ಗೆ ನಿಮ್ಮ ಕಳಕಳಿ ಎಷ್ಟು ಜಾಸ್ತಿಯಾಯಿತು ಅಂದರೆ 0.8 ಅಂದರೆ ಯಾವುದು? ಹಿಂದುಳಿದಂತಹ ಭಾಗಕ್ಕೂ ಹೆಚ್ಚಿನ ಆದ್ಯತೆ ಇಲ್ಲ. ಮತ್ತು ಹಿಂದುಳಿದ ವರ್ಗದವರ ಬಗ್ಗೆಯೂ ಕೂಡ ಆಸಕ್ತಿ ಇಲ್ಲ. ಪರಿಶಿಷ್ಟ ಜಾತಿ-ಪಂಗಡವರಿಗೆ ಸಹಾಯ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಅದರಲ್ಲೂ ಆದ್ಯತೆ ಇಲ್ಲ. ಮತ್ತೆ ಯಾವುದೇ ಹೆಚ್ಚಿನ ಹಣವನ್ನು ಇಟ್ಟಿದ್ದೀರಿ? ಬೆಂಗಳೂರು ತೋರಿಸಿಕೊಳ್ಳೋಣವೇ? ನೀವು ಹೇಳಿದ ರೀತಿಯಲ್ಲಿ ನಾನೂ ಹೇಳೋಣವೆ? ಬಾಂಬೆ ನೋಡು, ದಿಲ್ಲಿ ನೋಡು ಎಂದು ಹೇಳುತ್ತಾರಲ್ಲಾ ಅದೇ ರೀತಿಯಾಗಿ ಬೆಂಗಳೂರು ಎಕ್ಸ್‌ಪ್ರೆಸ್ ಹೈವೇಸ್, ಅಥವಾ ಸರ್ಕ್ಯುಟ ರೈಲ್ವೇಸ್ ಇವುಗಳನ್ನು ತೋರಿಸೋಣವೇ ನಮ್ಮ ಹಳ್ಳಿ ಜನರಿಗೆ? ನೀವು ಹೇಳಿ.

ಅಧ್ಯಕ್ಷರು : ತಾವು ರಾಜ್ಯಪಾಲರ ಭಾಷಣದ ಮೇಲೂ ಮಾತನಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇಡ ಅಂದರೆ ಕೂಡುತ್ತೇನೆ. ಏಕೆಂದರೆ ಈ ಬಜೆಟ್ ಹಳ್ಳಿ ಜನರ ಬಗ್ಗೆ ಇದೆ ಅಂತ ಅವರು ಹೇಳಿದರು. ಅದಕ್ಕಾಗಿ ನಾನು ಈ ಉದಾಹರಣೆಗಳನ್ನು ಕೊಟ್ಟೆ. ಇನ್ನು ಶಿಕ್ಷಣದ ಬಗ್ಗೆ .....

ಶ್ರೀ ಆರ್. ಕೃಷ್ಣಪ್ಪ : ಮಾನ್ಯ ಖರ್ಗೆಯವರು ಹಿಂದುಳಿದ ವರ್ಗದವರ ಬಗ್ಗೆ ಬಜೆಟ್‌ನಲ್ಲಿ ಒದಗಿಸಿರತಕ್ಕ ಮಾಹಿತಿ ಬಗ್ಗೆ ಮಾತನಾಡುತ್ತಿದ್ದಾರೆ. ನಮಗೆ ಈಗ ಕೊಟ್ಟಿರತಕ್ಕ ಮಾಹಿತಿ ಪ್ರಕಾರ ಅವರು ಹಿಂದೆ ಇದೇ ಬಾಬಿನ ಮೇಲೆ 20 ಕೋಟಿ 22 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ನಾವು 49.49 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ದಯಮಾಡಿ ನೋಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 1995-96ನೇ ಸಾಲಿನದ್ದು ಹೇಳಿ. 1994-95ರದ್ದನ್ನು ಹೇಳಬೇಡಿ.

ಶ್ರೀ ಆರ್. ಕೃಷ್ಣಪ್ಪ : ತಾವೇ ಕೊಟ್ಟಿರುವಂಥದ್ದು. ಪರಿಶಿಷ್ಟ ಜಾತಿಯವರಿಗೆ ಇಟ್ಟಿರುವುದು 87.95 ಕೋಟಿ ರೂ. ಹಿಂದುಳಿದ ವರ್ಗದವರ ಅಲ್ಪಸಂಖ್ಯಾತರ ಬಗ್ಗೆ ಮಾತನಾಡುವಾಗ 29.22 ಇಟ್ಟಿದ್ದೋ ಅದನ್ನು 22ಕ್ಕೆ ಇಳಿಸಿದ್ದೀರಿ ತಾವು. ಅದನ್ನು ರಿವೈಸ್ ಮಾಡಿದ್ದೀರಿ. ಆದರೆ ನಾವು ಎಷ್ಟು ಕೊಟ್ಟಿದ್ದೇವೆಂದರೆ, 49.49 ಕೋಟಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಒಪ್ಪಿಕೊಂಡೆ. ರಿವೈಸ್ಡ್ ಎಲ್ಲಕ್ಕೂ ಮಾಡಿದ್ದೀರೋ? ನಾವು ಏನೇನು ಇಟ್ಟಿದ್ದೇವೆ ಇದು ಒಂದೇ ಅಲ್ಲ. ಸೋಷಿಯಲ್ ವೆಲ್‌ಫೇರ್ ಮಾಡಬಹುದು, ಬ್ಯಾಕ್‌ವರ್ಡ್ ಕ್ಲಾಸ್‌ದು ಮಾಡಬಹುದು, ಎಜುಕೇಷನ್‌ದು ಮಾಡಬಹುದು. ನಾವು ಇಟ್ಟಿದ್ದನ್ನು ನೀವು ಮುಂದೆ ರಿವೈಸ್ ಮಾಡುವುದಕ್ಕೆ ನಿಮಗೆ ಅಧಿಕಾರವಿದೆ. ಅದು ಕಡಿಮೆ ಮಾಡಬಹುದು ಹೆಚ್ಚಿಗೆ ಮಾಡಬಹುದು. ನಾವು ಇಟ್ಟಿದ್ದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಆರ್. ಕೃಷ್ಣಪ್ಪ : ಮಾನ್ಯ ಖರ್ಗೆಯವರು ಬೇಜಾರು ಮಾಡಿಕೊಂಡು ಹೇಳುತ್ತಿದ್ದಾರೆ. ಮಾನ್ಯ ಖರ್ಗೆಯವರು ಕಾಂಗ್ರೆಸ್ ಸರ್ಕಾರ ಹಿಂದುಳಿದವರು ಅಲ್ಪಸಂಖ್ಯಾತರು ಮತ್ತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರ ಪರವಾಗಿದ್ದೇವೆಂದು ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೂರ್‍ನಾಲ್ಕು ತಿಂಗಳು ಏನೂ ಖರ್ಚುಮಾಡದೆ, ನೀವು ರಿವೈಸ್ ಮಾಡಿದ್ದೇವೆಂದು ಹೇಳಿಕೊಂಡು ಕುಳಿತರೆ ಹೇಗೆ? ತಮಗೆ ಗೊತ್ತಿದೆ ಮಾರ್ಚಿ ಎಂಡ್‌ನಲ್ಲಿ ಎಷ್ಟು ಬಿಲ್‌ಗಳು ಪಾಸಾಗುತ್ತವೆಂದು, ಎಷ್ಟು ದುಡ್ಡು ರಿಲೀಸ್ ಆಗುತ್ತದೆ, ಕೋಟಿ ಗಟ್ಟಲೆ ಹಣ ಮಾರ್ಚಿನಲ್ಲಿ ಬಿಡುಗಡೆಯಾಗುತ್ತದೆ. ಅದನ್ನೆ ಸೇವ್ ಮಾಡಿಕೊಳ್ಳಿ. ನವೆಂಬರ್ ಮತ್ತು ಡಿಸೆಂಬರ್ ತಿಂಗಳಿನಲ್ಲಿ 10 ಕೋಟಿ ಕೊಡುವುದಕ್ಕೆ ಆಗಲಿಲ್ಲ ಮಾರ್ಚಿ ತಿಂಗಳಿನಲ್ಲಿ ನಾವು ಸಾವಿರ ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆಂದು ಹೇಳಿಕೊಳ್ಳಿ ಅದು ಒಂದು ಪ್ರಗತಿ. ನೀವು ಯಾವಾಗಲೂ ಅವರೇಜ್ ತೆಗೆದುಕೊಳ್ಳಬೇಕೇ ಹೊರತಾಗಿ .....

ಅಧ್ಯಕ್ಷರು : ಮಾನ್ಯ ಕೃಷ್ಣಪ್ಪನವರೇ ನೀವು ಏನೋ ಹೇಳುವುದಕ್ಕೆ ಹೋಗಬೇಡಿ ನಾಳೆ ಸಿದ್ದರಾಮಯ್ಯನವರು ಹೇಳುತ್ತಾರೆ ಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ಗೆ 100 ಕೋಟಿ ಕೊಟ್ಟಿದ್ದರೆ ನಾನು ಇದೇ ಕ್ಷಣದಲ್ಲಿ ಕುಳಿತುಕೊಳ್ಳುತ್ತೇನೆ. ಹೇಳಿ ನೀವು ಹೇಳಲಿಲ್ಲ. ನಾವು 75 ಸಾವಿರ ಕೋಟಿ ಕೊಟ್ಟಿದ್ದೇವೆ. ನೀವು 100 ಕೋಟಿ ಕೊಟ್ಟಿದ್ದೇವೆಂದರೆ ನಾನು ಕೂಡುತ್ತೇನೆ ಮಾತನಾಡುವುದಿಲ್ಲ.

ಅಧ್ಯಕ್ಷರು : ಮಾನ್ಯ ಕೃಷ್ಣಪ್ಪನವರೇ ಎಲ್ಲಿ ಹೈದರಾಬಾದ್, ಮೈಸೂರು ಎಲ್ಲಿ ತಾವು ಸುಮ್ಮನಿರಿ.

ಶ್ರೀ ಎಂ. ಮಲ್ಲಿಕಾರ್ಜು ಖರ್ಗೆ : ಆಮೇಲೆ ಇನ್ನೊಂದು ಮೋಟಾರು ವೆಹಿಕಲ್ ಟ್ಯಾಕ್ಸ್ ಅದರ ಮೇಲೆ ಅನೇಕ ಜನರು ಮಾತನಾಡಿದ್ದಾರೆ. ಅದರ ಬಗ್ಗೆ ನಾನು ಹೇಳತಕ್ಕ ಅವಶ್ಯಕತೆ ಇಲ್ಲ. ಆದರೆ ಅಪ್ಪರ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ.

ಅಧ್ಯಕ್ಷರು : ಇನ್ನು ಎಷ್ಟು ಹೊತ್ತು ಆಗಬಹುದು ಒಂದು ಅಂದಾಜು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇನ್ನೊಂದು ಐದು ನಿಮಿಷ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಹಳ ಮಹತ್ವವಾದ ಪ್ರಾಜೆಕ್ಟ್. ಗುಲ್ಬರ್ಗ, ಬಿಜಾಪುರಕ್ಕೆ ಸಂಬಂಧಪಟ್ಟ ಹಾಗೆ, ಅದಕ್ಕೆ ಏನು ಮಾಡಿದ್ದಾರೆಂದರೆ ಸಾವಿರ ಕೋಟಿ ರೂಪಾಯಿ ಕೊಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಸಾವಿರ ಕೋಟಿ ರೂಪಾಯಿ ಕೊಡುತ್ತೇವೆಂದು ಘೋಷಣೆ ಮಾಡಿ, ಕೃಷ್ಣಾ ಜಲಭಾಗ್ಯ ನಿಗಮ ಅದರ ವತಿಯಿಂದ ಬಾಂಡ್‌ಗಳ ಮುಖಾಂತರ ಹಣವನ್ನು ಕಲೆಕ್ಟ್ ಮಾಡಿ ಖರ್ಚು ಮಾಡುತ್ತೇವೆಂದರೆ, ಕನ್ನಡಿಯೊಳಗಿನ ಗಂಟನ್ನು ನಮಗೆ ತೋರಿಸಿದ್ದಾರೆ. ಉಳಿದ ಪ್ರಾಜೆಕ್ಟ್‌ಗಳಿಗೆ ಡೈರೆಕ್ಟಾಗಿ ಹಣವನ್ನು ಇದರಲ್ಲಿ ಕೊಟ್ಟಿದ್ದೀರಿ. ಅದಕ್ಕೆ ಎಷ್ಟು ಕೊಟ್ಟಿದ್ದೀರಿ? ಕೇವಲ 84 ಕೋಟಿ ರೂಪಾಯಿ ಮಾತ್ರ ತೋರಿಸಿದ್ದೀರಿ; ನಾನು ಕೇಳುತ್ತೇನೆ, ನೀವು ಆ ನಿಗಮದಿಂದ ಕಾರ್ಪೊರೇಷನ್‌ನಿಂದ ಅಥವಾ ಕಂಪನಿಯಿಂದ ಬರತಕ್ಕ ಹಣ over and above ಇಡಬೇಕಾಗಿತ್ತು. ಹೋದ ಸಲ 350 ಕೋಟಿ ರೂಪಾಯಿ ಇಟ್ಟಿದ್ದೇವೆ. ಅದು 250 ಕೋಟಿ ಎಂದು ಇಟ್ಟುಕೊಳ್ಳಿ, 250 ಕೋಟಿ ರೂಪಾಯಿ ಕೊಟ್ಟಮೇಲೆ ನೀವು ಆ ಕಂಪನಿ ಕಾರ್ಪೊರೇಷನ್‌ನಿಂದ ಕಲೆಕ್ಟ್ ಮಾಡುವಂತಹ ಹಣ ಅದರ ಮೇಲೆ ಖರ್ಚು ಮಾಡುತ್ತೇವೆಂದು ಹೇಳಿದರೆ ಆ ಭಾಗದ

ಜನರಿಗೆ ವಿಶ್ವಾಸ ಮೂಡುತ್ತಿತ್ತು. ಆದರೆ ಇವತ್ತು ಏನಾಗಿದೆ? ಅಲ್ಲಿ ಯಾವ ಹಣವನ್ನು ಇಡದೆ ನೀವು ಕೇವಲ ಕಾರ್ಪೊರೇಷನ್ ಬರುತ್ತದೆ ಅದರ ಮುಖಾಂತರ ಕಲೆಕ್ಟ್ ಮಾಡುತ್ತೇವೆ ಆಮೇಲೆ ನಾವು ಖರ್ಚು ಮಾಡುತ್ತೇವೆಂದರೆ ಖಂಡಿತವಾಗಿಯೂ ಆ ಭಾಗದ ಜನರಿಗೆ ಇದು ಮೋಸ ಎನ್ನತಕ್ಕ ಮಾತನ್ನು ಸ್ಪಷ್ಟಪಡಿಸುತ್ತೇನೆ. ಇದು ಸಾಧ್ಯವಿಲ್ಲ. ಎಷ್ಟೋ ಸಲ ತಮಗೆ ಗೊತ್ತಿದೆ ಅನೇಕ ಅಧಿಕಾರಿಗಳಿಗೆ ಟಾರ್ಗೆಟ್ ಕೊಡುತ್ತೇವೆ, ಸ್ಮಾಲ್ ಸೇವಿಂಗ್ಸ್, ಮೇಲೆ ಕಲೆಕ್ಟ್ ಮಾಡಿಯೆಂದು ಒಂದೊಂದು ಜಿಲ್ಲೆಗೆ ಸುಮಾರು 10-20 ಕೋಟಿಗಳನ್ನು ಸ್ಮಾಲ್ ಸೇವಿಂಗ್ಸ್‌ನಲ್ಲಿ ಮಾಡಿಯೆಂದು ಒತ್ತಾಯ ಮಾಡಿ ಡೆಪ್ಯುಟಿ ಕಮೀಷನರ್ ಅಸಿಸ್ಟೆಂಟ್ ಕಮೀಷನರ್ ಮೋಟಾರ್ ವೆಹಿಕಲ್ಸ್ ಇನ್ಸ್‌ಪೆಕ್ಟರ್ಸ್ ಅವರಿಗೆ ಒತ್ತಾಯ ಮಾಡಿದರೂ ಕೂಡ ಕೊಟ್ಟಂತಹ ಟಾರ್ಗೆಟನ್ನು ಅಚೀವ್ ಮಾಡುವುದಕ್ಕಾಗುವುದಿಲ್ಲ. ಅಂದ ಮೇಲೆ ಇದರಲ್ಲಿ ಸಾಧ್ಯತೆ ಇದೆಯೆ? ಈಗ ಕೆಲಸ ಪ್ರಾರಂಭವಾಗಬೇಕು, ಕಳೆದ ಮೂರು ತಿಂಗಳುಗಳಿಂದ ಕೆಲಸವೇನು ಇಲ್ಲ. ಪೀಸ್ ವರ್ಕ್ ಕೆಲಸ ನಿಂತಿದೆ. ಬೇರೆ ರೀತಿಯಾಗಿ ಕಂಟ್ರಾಕ್ಟ್ ಇದ್ದದ್ದು ಕೂಡ ಅನೇಕ ಕೆಲಸಗಳು ಪೇಮೆಂಟ್ ಇಲ್ಲದೆ ನಿಂತು ಹೋಗಿಡೆ. 2000ದ ಇಸವಿಯೊಳಗೆ ಬಜಾವತ್ ಆವಾರ್ಡ್ ಪ್ರಕಾರ ಅದನ್ನು ನಾವು ಮುಗಿಸುತ್ತೇವೆಂದು ಗಂಟಾಘೋಷವಾಗಿ ಎಲ್ಲರೂ ಹೇಳುತ್ತೇವೆ. ನೀವು ಹೇಳುತ್ತೀರಿ ನಾವು ಹೇಳುತ್ತಿದ್ದೆವು. ಹಣವನ್ನು ಏಕೆ ಇಡಲಿಲ್ಲ? ಒಂದು ಸಾವಿರ ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳುತ್ತೀರಿ ಸಾವಿರ ಕೋಟಿ ಬಿಟ್ಟು 500 ಕೋಟಿಯೂ ಇಲ್ಲ. ಕೇವಲ ಕಲೆಕ್ಟ್ ಮಾಡುತ್ತೇವೆ ಡಿಬೆಂಚರ್ ಫ್ಲೋಟ್ ಮಾಡಿ ಕಲೆಕ್ಟ್ ಮಾಡುತ್ತೇವೆಂದೂ ಮಾಡಿದ ಮೇಲೆ ಖರ್ಚು ಮಾಡುತ್ತೇವೆಂದರೆ ಎಷ್ಟು ದಿವಸ ಬೇಕು? ಇದನ್ನು ಮಾನ್ಯ ಅಧ್ಯಕ್ಷರೇ ತಾವೇ ಲೆಕ್ಕಹಾಕಿ. ಇವರು ಬಂದು ಮಾಡುವುದು ಯಾವಾಗ? ಜನರ ಹತ್ತಿರ ಹೋಗುವುದು ಯಾವಾಗ? ಹಣವನ್ನು ಕಲೆಕ್ಟ್ ಮಾಡುವುದು ಯಾವಾಗ? ಮತ್ತೆ ಕೆಲಸಕಾರ್ಯಗಳು ಯಾವಾಗ ನಡೆಯಬೇಕು? ಅಂತಹದ್ದು ಇವರು ಕೊನೆಯ ಪಕ್ಷ ಇಲ್ಲಿ 200-300 ಕೋಟಿ ಇಟ್ಟಿದ್ದೇವೆ ಹಣವನ್ನು ಕಲೆಕ್ಟ್ ಮಾಡುವವರೆಗೆ ಎಂದು ಹೇಳಿದರೆ, ಕೊನೆಯ ಪಕ್ಷ ಅದು ರಿಯಲಿಸ್ಟಿಕ್ ಅಪ್ರೋಚ್ ಎಂದು ನಾನು ಹೇಳುತ್ತಿದ್ದೆ. ಈ ಅಪ್ರೋಚ್ ಸರಿಯಿಲ್ಲ. ಬಹುಶಃ ಜನರನ್ನು ವಂಚಿಸಬೇಕೆಂದು ಮಾಡಿದ್ದೀರಾ ಅಥವಾ ಹಾಳಾಗಿ ಹೋಗಲಿಯೆಂದು ಮಾಡಿದ್ದೀರಾ ಏನೋ ಗೊತ್ತಿಲ್ಲ. ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ನಲ್ಲಿ ಅದೇರೀತಿ ಮಾಡಿದ್ದೀರಿ. ಗಡಿನಾಡು ಪ್ರದೇಶಗಳ ಅಭಿವೃದ್ಧಿ ಕೆಲಸಗಳಿಗೆ ಅದೇರೀತಿ ಮಾಡಿದ್ದೀರಿ. ಮಲೆನಾಡು ಅಭಿವೃದ್ಧಿ ಮಂಡಳಿ ಕೆಲಸಕಾರ್ಯಗಳಿಗೆ ಅದೇ ರೀತಿ ಮಾಡಿದ್ದೀರಿ. ಗಡಿನಾಡು ಪ್ರದೇಶಗಳ ಅಭಿವೃದ್ಧಿ ಕೆಲಸಗಳಿಗೆ ಅದೇ ರೀತಿ ಮಾಡಿದ್ದೀರಿ. ಮಲೆನಾಡು ಅಭಿವೃದ್ಧಿ ಮಂಡಳಿ ಕೆಲಸಕಾರ್ಯಗಳಿಗೆ ಅದೇ ರೀತಿ ಮಾಡಿದ್ದೀರಿ. ಇದಕ್ಕೂ ಪೂರ್ತಿ ಇಲ್ಲ. ಅಲ್ಲದೆ ಮೈನರ್ ಇರಿಗೇಷನ್ ಕೂಡ ಇಲ್ಲ ಸಾಕಷ್ಟು ತೊಂದರೆ ಮಾಡಿದ್ದೀರಿ. 71 ಕೋಟಿ ಕೊಟ್ಟು ಆನ್ ಗೋಯಿಂಗ್ ಪ್ರಾಜೆಕ್ಟ್ ಪ್ರಿಂಟ್ ಮಾಡಿದ್ದೀರಿ. ನಾನು ಶ್ರೀಮತಿ ಲಲಿತಾ ನಾಯಕ್‌ರವರಿಗೆ ತೋರಿಸಿದ್ದೇನೆ ಇದರಲ್ಲೂ ಬಿಗ್ ಜಿರೋ. ಅಂದರೆ ನೀವು ಆ ಭಾಗದ ಜನ ಸುಮ್ಮನಿದ್ದಾರೆಂದು ತಿಳಿದಿದ್ದೀರಾ, ಇವತ್ತು ನಾವೆಲ್ಲರೂ ಒಂದೇ ಎನ್ನುವ ಭಾವನೆಯಿಂದ ಇದ್ದರೆ ಅವರನ್ನು ಪ್ರಚೋದನೆ ಮಾಡಬೇಕೆಂದು ಮಾಡಿದ್ದೀರಾ? ಅಥವಾ ಅಲ್ಲಿ ದೊಡ್ಡ ಚಳುವಳಿಯಾಗಲಿಯೆಂದು ಮಾಡಿದ್ದೀರಾ? ಇವತ್ತು ಅಲ್ಲಿ ಲಾ ಅಂಡ್ ಆರ್ಡರ್

ಚೆನ್ನಾಗಿದೆಯೆಂದು ನಿಮಗೆ ಖುಷಿಯಿಲ್ಲವೆ? ಇದು ನಮಗೆ ಅರ್ಥವಾಗುತ್ತಿಲ್ಲ. ಇದರ ಬಗ್ಗೆ ಸೀರಿಯಸ್ಸಾಗಿ ಗಮನವನ್ನು ಕೊಡಬೇಕು. ಇದನ್ನು ನೀವು ಯಾವರೀತಿ ಸೆಟ್‌ರೈಟ್ ಮಾಡುತ್ತೀರಿ ಮಾಡಿ. ಇದರಿಂದ ಆ ಭಾಗದ ಜನರಿಗೆ ಬಹಳ ತೊಂದರೆಯಾಗುತ್ತದೆ. ಫಸ್ಟ್ ಫೇಸ್‌ನಲ್ಲಿ 10 ಲಕ್ಷ ಎಕರೆ ಸೆಕೆಂಡ್ ಸ್ಟೇಜ್‌ನಲ್ಲಿ 10 ಲಕ್ಷ ಎಕರೆ ಅಂದರೆ ಒಟ್ಟು ಯುಕೆಪಿಯಿಂದ 20 ಲಕ್ಷ ಎಕರೆ ಭೂಮಿಯನ್ನು ನೀರಾವರಿ ಮಾಡುತ್ತೇವೆಂದು ಹೇಳಿರುವಂತಹವರು ಇವತ್ತು ಬಜೆಟ್ ಪ್ರಾವಿಜನ್ ನೋಡಿದಾಗ ನಾವು ನಿರಾಸೆಯಿಂದ ಹೇಳಬೇಕಾಗುತ್ತದೆ ಆ ಕಡೆಗೆ ನಿಮ್ಮ ಗಮನವಿಲ್ಲ. ಅದರ ಬಗ್ಗೆ ನಿಮ್ಮ ಲಕ್ಷ್ಯವಿಲ್ಲ. ಬಹುಶಃ ನಿಮ್ಮ ಕಾರ್ಪೊರೇಷನ್ ಹೆಸರಿಗೆ ಮಾತ್ರ ಉಳಿಯುತ್ತದೆ ಎನ್ನತಕ್ಕ ಮಾತನ್ನು ನಾನು ಹೇಳಬೇಕಾಗುತ್ತದೆ. ತಾವು ಸ್ಪಷ್ಟಪಡಿಸಬೇಕು ಫೈನಾನ್ಷಿಯಲ್ ಟಾರ್ಗೆಟ್ ಫಿಜಿಕಲ್ 100 ಕೋಟಿ ರೂಪಾಯಿ ಪ್ರತಿ ತಿಂಗಳು ನಾವು ಬಿಡುಗಡೆ ಮಾಡುತ್ತೇವೆಂದು ಹೇಳಬೇಕು. ಇಷ್ಟು ಕೆಲಸ ಮಾಡುತ್ತೇವೆಂದು ಅದಕ್ಕೆ ಷೆಡ್ಯೂಲ್ ಕೊಡಿ ಹಾಗೆ ಹೇಳಿದರೆ ಅದನ್ನು ನಂಬೋಣ. ಕೇವಲ ಬಡ್ಡಿಗೋಸ್ಕರ 80 ಕೋಟಿ ರೂಪಾಯಿ ಇಟ್ಟು ಹೀಗೆ ಮಾಡಿದರೆ ನಮ್ಮ ಯು.ಕೆ.ಪಿ.ಗೆ ದೊಡ್ಡ ಅನ್ಯಾಯವನ್ನು ಆ ಭಾಗದ ಜನರಿಗೆ ಮಾಡಿದಹಾಗೆ ಆಗುತ್ತದೆ. ಕೃಷ್ಣಾ ಬೇಸಿನ್ ಪ್ರಾಜೆಕ್ಟ್‌ಗಳಿಗೆ ಬಚಾವತ್ ಅವಾರ್ಡ್ ಕೆಳಗೆ ನಮ್ಮ ಪಾಲಿನ ನೀರು ಅಲಾಟ್‌ಮೆಂಟ್ ಮಾಡಿದ್ದಾರೆ ಅದರ ಉಪಯೋಗ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲವೆನ್ನತಕ್ಕ ಮಾತನ್ನು ಹೇಳುತ್ತೇನೆ. ನೀವು ಬಹಳಷ್ಟು ಇದರ ಬಗ್ಗೆ ಆಸಕ್ತಿಯನ್ನು ವಹಿಸಿ ಕೆಲಸ ಮಾಡಬೇಕು. ಬೆಂಗಳೂರಿನ ಬಗ್ಗೆ ಒಂದು ಯೋಜನೆಯನ್ನು ಮಾಡಬೇಕೆಂದು 42 ಕೋಟಿ ರೂಪಾಯಿ ವಿಶೇಷ ಕರಭಾರವನ್ನು ಜನರಿಗೆ ಹಾಕಿ ಇಲ್ಲಿನ ಜನರಿಗೆ ಅನುಕೂಲ ಮಾಡಿ ಕೊಡುವುದಕ್ಕೆ ಅದರ ಬಗ್ಗೆ ತಾವು ಹೇಳಿದ್ದೀರಿ. ಇದೇ ಆಸಕ್ತಿಯನ್ನು ಇರಿಗೇಷನ್ ಬಗ್ಗೆ ಏಕೆ ತೋರಿಸಲಿಲ್ಲ? ಇದರಲ್ಲಿ ಅಲೋಕೇಷನ್ ಎಷ್ಟು ಜಾಸ್ತಿ ಇದೆ? ಹಾರ್ಡ್‌ಲಿ 2 ಪರ್ಸೆಂಟ್ ಜಾಸ್ತಿಯಿಲ್ಲ. ಇರಿಗೇಷನ್‌ನಲ್ಲಿ ನಿಮ್ಮ ಅಲೋಕೇಷನ್ 2 ಪರ್ಸೆಂಟ್ ಕೂಡ ಇಲ್ಲ. ಅಂದರೆ ಯಾವ ವಿಧದಲ್ಲಿ ಹಿಂದಿನ ಸರ್ಕಾರಕ್ಕಿಂತ ನಾವು ಬಹಳಷ್ಟು ಕೆಲಸ ಮಾಡಿದ್ದೇವೆಂದು ಹೇಳುತ್ತೀರಿ? ಹಿಂದಿನ ಸರ್ಕಾರದಲ್ಲಿ ಲ್ಯಾಪ್ಸ್ ಇರಬಹುದು ಅದರ ಬಗ್ಗೆ ಬಹಳ ವ್ಯಥೆಯಿದೆ. ಏಕೆಂದರೆ ಯಾವುದೇ ಸರ್ಕಾರ ಬಂದಾಗ ಕಾನೂನುಗಳು ಇರುತ್ತವೆ. ಲ್ಯಾಂಡ್ ಅಕ್ವಿಜಿಶನ್ ಇರುತ್ತದೆ, ಕಾನೂನು ಪ್ರಕಾರ ಲ್ಯಾಂಡ್ ಅಕ್ವೈರ್ ಮಾಡಲಿಕ್ಕೆ ಪ್ರಾವಿಜನ್ ಇರುತ್ತದೆ. ಡೀನೋಟಿಫೈ ಮಾಡುವ ಪ್ರಾವಿಜನ್ ಇರುತ್ತದೆ. ಡೀನೋಟಿಫೈ ಮಾಡುವಾಗ ಇಲ್ಲೀಗಲ್ ಮಾಡಿದರೆ ಅಥವಾ ಕರಪ್ಷನ್ ತೆಗೆದುಕೊಂಡು ಮಾಡಿದ್ದರೆ ದುಡ್ಡನ್ನು ತೆಗೆದುಕೊಂಡು ಮಾಡಿದ್ದರೆ ....

ಶ್ರೀಮತಿ ಪ್ರಮೀಳ ಎಸ್. ನೇಸರ್ಗಿ : ಒಂದು ನಿಮಿಷ ಕೇಳಬೇಕು. ಪೊಸಿಷನ್ ತೆಗೆದುಕೊಂಡ ಮೇಲೆ ಲ್ಯಾಂಡ್ ಅಕ್ವಿಜಿಶನ್‌ನಲ್ಲಿ ಅಕ್ಟ್ ಡಿನೋಟಿಫೈ ಮಾಡುವುದಕ್ಕೆ ಅಧಿಕಾರವಿಲ್ಲ. ಆದರೆ ನಿಮ್ಮ ಸರ್ಕಾರದಲ್ಲಿ ಮಾಡಿದ್ದೀರಿ.

ಅಧ್ಯಕ್ಷರು : ಏನೋ ಸಾರ್ವಜನಿಕರ ಒತ್ತಾಯಕ್ಕೆ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಯಿತು, ಮಾಡಿದ್ದರೆ ಸೂಲಕ್ಕೆ ಏರಿಸಿ. ಯಾರು ಅಪರಾಧ ಮಾಡಿದ್ದಾರೆ ಆ ಅಧಿಕಾರಿ ಸರಿಯಿಲ್ಲವೆಂದರೆ ಜ್ಯುಡಿಸಿಯಲ್ ಪ್ರೊಬ್ ಮಾಡಿಸಿ.

7.10 ಪಿ.ಎಂ.

ಇಂಥಾದ್ದು ಕೇಸುಗಳಿದ್ದರೆ ಒಂದು ಲಿಸ್ಟ್‌ಮಾಡಿ. ನಾವೇನು ಹೆದರುತ್ತೇವೆ ಅಂತ ತಿಳಿದು ಕೊಂಡಿದ್ದೀರಾ? ಯಾರೋ ಬರುತ್ತಾರೆ, ಕಾನೂನು ಪ್ರಕಾರ ಸಹಾಯ ಮಾಡಿರಬಹುದು. ಅದನ್ನು ಇವರು ಹಿಡಿದುಕೊಂಡು ಅವರು ಪಾಪಿಜನ, ಅವರಿಗೆ ನೀವು ಶಿಕ್ಷೆ ಕೊಡಿ ಎಂದರೆ ಏನದು? ಆಯಿತು, ಇಂತಹ ಹತ್ತು ನೂರು ಕೇಸುಗಳಿದ್ದರೆ ಅದನ್ನು ಲಿಸ್ಟ್‌ಕೊಡಿ ಯಾರ‍್ಯಾರು ತಪ್ಪು ಮಾಡಿದ್ದಾರೆ, ಬೇಕಾದರೆ ನಿಮ್ಮ ಸರ್ಕಾರದಲ್ಲಿ, ಮಾನ್ಯ ಶಿವಕುಮಾರ್ ಅವರು ಹೇಳಿದರಲ್ಲ, ಅವರು ಈಗ ಇಲ್ಲ, ಹೊರಗೆ ಹೋಗಿದ್ದಾರೆ. ಅವರು ಹೇಳಿದಂತೆ ಸೌದಿಅರೇಬಿಯಾದಲ್ಲಿ ಕಳ್ಳತನ ಮಾಡಿದರೆ ಕೈಯನ್ನೇ ಕತ್ತರಿಸುವ ಶಿಕ್ಷೆ ಕೊಡುತ್ತಾರಂತೆ, ಮತ್ತೊಂದು ತಪ್ಪು ಮಾಡಿದರೆ ಮತ್ತೊಂದು ತರಹ ಶಿಕ್ಷೆ ಕೊಡುತ್ತಾರಂತೆ. ಹಾಗೆ ಬೇಕಾದರೆ ನೀವು ಮಾಡಿ. ಯಾರ‍್ಯಾರು ತಪ್ಪುಗಳನ್ನು ಮಾಡಿದ್ದಾರೆ, ಅವರು ಅದನ್ನು ಫೇಸ್ ಮಾಡುತ್ತಾರೆ. ಮತ್ತು ಜನರಿಗೆ ಕೂಡ ಗೊತ್ತಾಗುತ್ತದೆ. ಅದನ್ನು ಬಿಟ್ಟು ಚುಚ್ಚಿ ಚ್ಚುಚ್ಚಿ ಹೇಳಿದ್ದನ್ನೇ ಹೇಳಿದರೆ ಹೇಗೆ?

ಅಧ್ಯಕ್ಷರು : ಹೊತ್ತು ಆಗುತ್ತ ಹೋಗುತ್ತದೆ. ಹೊತ್ತು ಆಗುತ್ತಿದ್ದಂತೆ ನೀವು ಹಾರ್ಶ್ ಆಗುತ್ತಿದ್ದೀರಿ.

ಶ್ರೀ ಎಂ. ನಾರಾಯಣಸ್ವಾಮಿ : ಒಂದು ನಿಮಿಷ. ತಾವು ಒಪ್ಪಿದರೆ ಒಂದು ಮಾತು. ಮಾನ್ಯ ಖರ್ಗೆಯವರು ಈಗ ಏನೋ ಹೇಳುತ್ತಿದ್ದರೆ. ತಾವು ಅಧಿಕಾರಕ್ಕೆ ಬಂದು ಮೂರುತಿಂಗಳಾಗಿಲ್ಲ. ನಾವು ಮಾಡಿದ್ದನ್ನು ನೋಡುವುದಕ್ಕಾದರೂ ಸ್ವಲ್ಪ ತಾಳ್ಮೆ ಬೇಕಲ್ಲ? ಐದು ವರ್ಷ ಅವರು ಕೆಲಸ ಮಾಡಿದ್ದಾರೆ. ನಾವು ಜನರಿಗೆ ಮೋಸ ಮಾಡಿದ್ದೇವೆ ಎಂದು ಹೇಳುವುದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನ ನೇರವಾದ ಅಲಿಗೇಷನ್ ಎಂದರೆ ನೀವು ಹೇಳುವುದು ಒಂದು, ಮಾಡುವುದು ಒಂದು ಎಂದು ಅಷ್ಟೆ. ನೀವು ನುಡಿದಂತೆ ನಡೆಯುತ್ತಿಲ್ಲ ಎಂಬುದೇ ನನ್ನ ಅಲಿಗೇಶನ್. ನಾನು ಯಾವುದೇ ಪರ್ಸನಲ್ ಚಾರ್ಜಸ್‌ನ್ನು ನಿಮ್ಮ ಹಾಗೆ ಮಾಡಿಲ್ಲ.

ಶ್ರೀ ಎಂ. ನಾರಾಯಣಸ್ವಾಮಿ : ನಾನು ಪರ್ಸನಲ್ ಅಂತ ಹೇಳಿಲ್ಲ. ಜನರು ತೀರ್ಪು ಕೊಟ್ಟಿದ್ದಾರೆ. ಅವರು ತೀರ್ಪು ಕೊಟ್ಟು ಮೂರು ತಿಂಗಳಾಗಿದೆ, ಏನು ಮಾಡುತ್ತೇವೆ ಎಂಬುದನ್ನು ನೋಡುವ ತಾಳ್ಮೆ ಇರಲಿ ಎಂದಷ್ಟೇ ನಾನು ಹೇಳಿದ್ದುದು.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ನನಗೆ ಒಂದು ಅನುಮಾನ. ಮಾನ್ಯ ಖರ್ಗೆಯವರು ಹೈದರಾಬಾದ್ ಕರ್ನಾಟಕದ ಬಗ್ಗೆ ಮಾನ್ಯ ಬಂಗಾರಪ್ಪನವರು ಮಲೆನಾಡು ಬಗ್ಗೆ, ಹೇಳಿದರು. ಮತ್ತೊಬ್ಬರು ಹಳೆ ಮೈಸೂರು ಬಗ್ಗೆ ಹೇಳಿದರು. ಆದರೆ ಮುಂಬೈ ಕರ್ನಾಟಕ ಏರಿಯಾ ಕರ್ನಾಟಕದೊಳಗೆ ಇದೆಯೋ ಇಲ್ಲವೋ ಎಂಬ ಅನುಮಾನ ನನಗೆ ಬರುತ್ತಿದೆ. ಮುಂಬೈ ಕರ್ನಾಟಕವನ್ನು ಕರ್ನಾಟಕ ಪ್ರದೇಶಗಳಲ್ಲಿ ಸೇರಿಸುತ್ತೀರೋ ಅಥವಾ ಇಲ್ಲವೋ ಎನ್ನತಕ್ಕಂಥ ಅನುಮಾನ ನನಗಿದೆ. ಇದನ್ನು ದಯವಿಟ್ಟು ತಿಳಿಸಬೇಕು.

ಅಧ್ಯಕ್ಷರು : ನಾನು ಇದ್ದೇನೆ ಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಹೇಳಿದ್ದುದು ಅವರಿಗೆ ಅರ್ಥವಾಗಲಿಲ್ಲ. ನಮ್ಮ ಭಾಷೆ, ನಿಮ್ಮ ಭಾಷೆ ಸ್ವಲ್ಪ ಹತ್ತಿರ ಇದೆ. ನಾನು ಹೇಳಿದ್ದುದು ಬಿಜಾಪುರ ಬಾರ್ಡರ್ ಏರಿಯಾ, ಬೆಳಗಾಂ ಬಾರ್ಡರ್ ಏರಿಯಾ, ಕೋಲಾರ ಬಾರ್ಡರ್ ಏರಿಯಾ, ಮೈಸೂರು ಬಾರ್ಡರ್ ಏರಿಯಾ ಇವುಗಳ ಬಗ್ಗೆ ನಾನು ಹೇಳಿದೆ. ಬಹುಶಃ ಅವರು ತಿಳಿದುಕೊಂಡಿಲ್ಲವೆಂದು ಕಾಣುತ್ತದೆ. ಆದ್ದರಿಂದ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಪ್ಲಾನ್ ಎಕ್ಸ್‌ಪೆಂಡಿಚರ್ ಓಟ್‌ಲೇ, ಇದು ಏನಿದೆ, ಅನೇಕ ಸಾರಿ.....

ಅಧ್ಯಕ್ಷರು : ದಯವಿಟ್ಟು ಕನ್‌ಕ್ಲೂಡ್ ಮಾಡಿಬಿಡಿ. ಇಲ್ಲದಿದ್ದರೆ ತಡವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ 74-75ರಿಂದ 94-95ವರೆಗೆ ಎಕನಾಮಿಕ್ ಸರ್ವೆಯಲ್ಲಿ ಎಲ್ಲಾ ಕೊಟ್ಟಿದ್ದಾರೆ. ನಾನು ಮೇಲೆ ಎರಡು ಮತ್ತು ಕೆಳಗೆ ಎರಡು ಮಾತ್ರ ಓದುತ್ತೇನೆ. ಈಗ ಅಧ್ಯಕ್ಷರೇ, 83-84ರಲ್ಲಿ ಪರ್ ಕ್ಯಾಪಿಟಾ ಎಕ್ಸ್‌ಪೆಂಡಿಚರ್ 195....

ಅಧ್ಯಕ್ಷರು : ನನಗೆ ಏನೂ ಇಲ್ಲ. ನೀವು ಹೀಗೆ ಮಾತನಾಡುತ್ತಾ ಇದ್ದರೆ ಹಿಂದಿನ ಬೆಂಚ್‌ನವರು ಎಲ್ಲಾ ಪಾರ್ಟಿಯವರೂ ಸೇರಿ ನಿಮ್ಮ ಮೇಲೆ ಅಂದರೆ ಫಸ್ಟ್ ಬೆಂಚ್‌ನವರ ಮೇಲೆ ರಿವೋಲ್ಟ್ ಆಗಿ ಬಿಡುತ್ತಾರೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ನಮಗೂ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು : ಪುಟ್ಟೇಗೌಡರೆ, ನಿಮಗೆ ಮುಖ್ಯಮಂತ್ರಿಯವರನ್ನೇ ಕೊಟ್ಟಿದ್ದೇವಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ತಾವು ಒಂದು ಮಾತನ್ನು ಮಾನ್ಯ ಖರ್ಗೆಯವರಿಗೆ ಹೇಳಿದಿರಿ, ಹಿಂದಿನ ಬೆಂಚ್‌ನವರು ನಿಮ್ಮ ಮೇಲೆ ಬಿದ್ದಾರು ಅಂತ. ಹಾಗಾದರೆ ನಾವು ಕುಳಿತು ಕೊಳ್ಳೋಣವೋ, ಅಥವಾ ಹೊರಗೆ ಹೋಗೋಣವೋ? ಹಾಗೇನಾದರೂ ಆದರೆ ನಮಗೆ ನಿಮ್ಮ ರಕ್ಷಣೆ ಬೇಕಲ್ಲ.

ಅಧ್ಯಕ್ಷರು : ನಾನು ಇದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ಹೇಳಿದರೆ ನಾವು ಹೊರಗೆ ಹೋಗಿಬಿಡುತ್ತೇವೆ.

ಅಧ್ಯಕ್ಷರು : ಇಲ್ಲ, ಕುಳಿತುಕೊಳ್ಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಆಮೇಲೆ 1994-95ರಲ್ಲಿ 936 ಅಂದರೆ ಅದನ್ನು ಹೋಲಿಸುವುದಕ್ಕೆ ಆಗುವುದಿಲ್ಲ. ಅದೇರೀತಿ ಇನ್‌ಫ್ಲಮೇಶನ್ ಆಗುತ್ತದೆ. ಆದರೆ ಪರ್ಸೆಂಟೇಜ್‌ನ್ನು ತಾವು ತೆಗೆದುಕೊಂಡಾಗ, ಪರ್‌ಕ್ಯಾಪಿಟಾ ಎಕ್ಸ್‌ಪೆಂಡಿಚರ್‌ನ್ನು ಹೋಲಿಸಿದರೆ, ಬೇರೆ ಯಾವುದೇ ರಾಜ್ಯವನ್ನು ನೋಡಿದರೆ ನಮ್ಮದು ಬೆಸ್ಟ್ ಎಂದು ಎಲ್ಲರೂ ಕೂಡ ಒಪ್ಪಕೊಳ್ಳುತ್ತಾರೆ. ಈಗ ನಾವು ವಿರೋಧ ಪಕ್ಷದಲ್ಲಿದ್ದಾಗ ನೀವು ಶಹಭಾಸಗಿರಿ ಕೊಡುವುದಕ್ಕೆ ತಯಾರಿಲಲ್ಲ. ಅದೇರೀತಿ ಅಪೆಂಡಿಕ್ಸ್ 9.6 ಪೇಜ್ 88 ನೋಡಿ (ಎಕನಾಮಿಕ್ ಸರ್ವೆ) 1983-84ರಲ್ಲಿ ತಾವು 4 ಕೋಟಿ ಮನೆಗಳಿಗೆ ಖರ್ಚು

ಮಾಡಿದ್ದರೆ, ಅದಕ್ಕೆ 4 ಕೋಟಿ ಇಟ್ಟರೆ ಇದನ್ನು 93-94ರಲ್ಲಿ 7ಕೋಟಿ ರೂಪಾಯಿಗೆ ಏರಿಸಿದ್ದೇವೆ. 92-93ರಲ್ಲಿ 3 ಕೋಟಿ, 91-92ರಲ್ಲಿ 3 ಕೋಟಿ. ಅದೇ ರೀತಿ 94-95ರಲ್ಲಿ 4 ಕೋಟಿ 6.1...........

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಹೌಸಿಂಗ್ ಪ್ಲಾನ್‌ನಲ್ಲಿ ಎಕ್ಸ್‌ಪೆಂಡಿಚರ್ ಬಗ್ಗೆ ನಾವು ಟೋಟಲ್ ಅಲೋಕೇಷನ್ 90-91ರಲ್ಲಿ 32 ಕೋಟಿ, 36ಲಕ್ಷ, 91-92ರಲ್ಲಿ 67 ಲಕ್ಷ, 92-93ರಲ್ಲಿ 68ಲಕ್ಷ, 93-94ರಲ್ಲಿ 215 ಕೋಟಿ ಮತ್ತು 94-95ರಲ್ಲಿ ಅಪ್‌ಟು ನವೆಂಬರ್ 155 ಕೋಟಿ. ಆಮೇಲೆ ಹೌಸ್ ಸೈಟ್ಸ್‌ನಲ್ಲಿ ಇದರಲ್ಲಿ ಅಲೊಕೇಶನ್ ಇಲ್ಲ.....

ಶ್ರೀ ಆರ್.ಎಲ್. ಜಾಲಪ್ಪ : ಎಕ್ಸ್‌ಪೆಂಡಿಚರ್ ಅಲೋಕೇಶನ್ ಮಾಡಿದ್ದೀರಿ. ಮೊಯಿಲಿಯವರ ರೆರ್ಕಾಡ್ಸ್ ತರಿಸಿ ನೋಡಬಹುದು. ಐದು ವರ್ಷಕ್ಕೆ ನನ್ನ ತಾಲ್ಲೂಕಿನಲ್ಲಿ 1222 ಮನೆಗಳನ್ನು ಕೊಟ್ಟಿದ್ದೀರಿ, ಎಲ್ಲಾ ಯೋಜನೆಯ ಅಡಿಯಲ್ಲಿ ತೋರಿಸಿದ್ದೀರಿ. ಆಶ್ರಯ, ಇಂದಿರಾಅವಾಸ್, ಅಂಬೇಡ್ಕರ್ ಯೋಜನೆ ಎಲ್ಲ ಸೇರಿ 1222 ಮನೆಗಳು ಐದು ವರ್ಷಕ್ಕೆ ಎಂದು ಇದೆ. ಇದಕ್ಕೆ 240 ಕೋಟಿ ಖರ್ಚು ಆಯಿತು ಎಂದರೆ ಎಲ್ಲೆಲ್ಲಿ ಖರ್ಚಾಯಿತು? ಇದು ನನಗೆ ಗೊತ್ತಾಗಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಬೆನಿಫಿಶರ್ಸ್‌ನ್ನು ನೀವು ಸರಿಯಾಗಿ ಗುರುತಿಸಲಿಲ್ಲ. ಅವರನ್ನು ಆಯ್ಕೆ ಮಾಡಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ನಾನು ಬರೆದುಕೊಡುತ್ತೇನೆ. ಊರಿಗೆ ಹೋದಾಗ ಅವರು ಹೇಳಿದರು ಬರೆದುಕೊಡಿ ಎಂದು. ಬರೆಯುವುದು ನನ್ನ ಕೆಲಸ ಅಲ್ಲ ಎಂದು ಹೇಳಿ, ನಾನು ಊರಿಗೆ ಹೋಗುತ್ತೇನೆ, ಬೇಕಾದರೆ ಬನ್ನಿ ಅಂತ ಹೇಳಿದೆ. ಊರಿಗೆ ಹೋಗಿ ಸೆಲೆಕ್ಟ್ ಮಾಡಿದ್ದೇನೆ, ಅಶ್ವತ್‌ಕಟ್ಟೆ ಮೇಲೆ ಕುಳಿತುಕೊಂಡು ಹೆಸರುಗಳನ್ನು ಕೂಲಿ ಸೆಲೆಕ್ಟ್ ಮಾಡಿಕೊಂಡು ಬಂದಿದ್ದೇನೆ;

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಿವೈಸ್ಡ್ ಎಸ್ಟಿಮೇಟ್ಸ್ ಎಂದು ನೀವೇ ಪ್ರಿಂಟ್ ಮಾಡಿದ್ದುದು. 150 ಕೋಟಿ 95ಕ್ಕೆ ಈಗ ಹೇಳಿದ್ದು. ಇದರಲ್ಲಿ ತಪ್ಪಿದ್ದರೆ ತಿದ್ದಿಕೊಳ್ಳುವುದಕ್ಕೆ ನಾನು ತಯಾರಿದ್ದೇನೆ. ಹೌಸ್ ಸೈಟ್ಸ್‌ನಲ್ಲಿ ಕೂಡ 82-83ರಲ್ಲಿ 1 ಲಕ್ಷ 38 ಸಾವಿರ ಇದ್ದರೆ, 91-92ರಲ್ಲಿ 4 ಲಕ್ಷ ಆಯಿತು.

ಅಧ್ಯಕ್ಷರು : ಮಾನ್ಯ ಮೊಯಿಲಿಯವರು ಎಲ್ಲಾ ಮಾತನಾಡಿದ್ದಾರೆ. ಅವರು ನಿಮಗೆ ಏನೂ ಬಿಟ್ಟಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏನೂ ಆಗಿಲ್ಲವೆಂದು ಸುಮ್ಮನೆ ಬೇರೆಯವರನ್ನು ದೂರತಕ್ಕಂಥ ಕೆಲಸವನ್ನು ಮಾಡಬೇಡಿ. ನಿಮ್ಮ ಬಜೆಟ್ ಕೂಡ ಹಳ್ಳಿ ಜನರಿಗೆ ಹಿಡಿಸತಕ್ಕದ್ದು ಅಲ್ಲ. ಸುಮ್ಮನೆ ಹಳ್ಳಿಯವರು ಹಳ್ಳಿಯವರು ಎಂದು ಹೇಳಿಕೊಂಡು ಮಾತನಾಡುವ ಇವರಿಗೆ ಹಳ್ಳಿಯ ಸಮಸ್ಯೆ ಬಗ್ಗೆ ಗೊತ್ತಿಲ್ಲ. ಹೊಸದಾಗಿ ಬಂದಿರುವ ಸರ್ಕಾರ ಹೊಸದಾಗಿ ಏನೋ ಸೃಷ್ಠಿ ಮಾಡಿದ್ದೇವೆ ಎಂದು ಹೇಳತಕ್ಕಂಥ ಭಾವನೆಯಿಂದ ತಾವು ಏನು ಇದನ್ನು ತರುತ್ತಿದ್ದೀರಿ ಇದು ಸರಿ ಅಲ್ಲ. ಅದನ್ನು

ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ ಅಷ್ಟೆ. ಹಿಂದುಳಿದವರ ಬಗ್ಗೆ ಮಾಡಿರುವಂಥ ಅಲಾಟ್‌ಮೆಂಟ್ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎಂ. ದಿವಾಕರ ಬಾಬು (ಬಳ್ಳಾರಿ) : ಮಾನ್ಯ ಅಧ್ಯಕ್ಷರೇ, ಈ ಬಜೆಟ್‌ನಲ್ಲಿ ಬಹಳಷ್ಟು ಗ್ರಾಮೀಣ ಪ್ರದೇಶಕ್ಕೆ ಒತ್ತು ಕೊಟ್ಟಿದೆ. ಆದರೆ, ಪಟ್ಟಣ ಪ್ರದೇಶಗಳಲ್ಲಿಯೂ ಬಹಳಷ್ಟು ಜನಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಅದರ ಬಗ್ಗೆ ಸ್ವಲ್ಪವೂ ಅಲಾಟ್‌ಮೆಂಟ್ ಏನೂ ಕೊಟ್ಟಿಲ್ಲ. ಇದರಲ್ಲಿ ಪಟ್ಟಣ ಪ್ರದೇಶಗಳಲ್ಲಿ ಈಗಾಗಲೇ 40 ಪರ್ಸೆಂಟ್ ಜನಸಂಖ್ಯೆ ಬಂದಿದೆ. ನಗರ ಸಭೆಗಳಿಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರ, ಬಹಳಷ್ಟು ಧನಸಹಾಯವನ್ನು ಕಡಿಮೆ ಮಾಡಿ, ಅವರಿಂದ ತೆಗೆದುಕೊಳ್ಳುತ್ತಾ ಇದೆಯೆಂದು ನನ್ನ ಅಭಿಪ್ರಾಯ ಏಕೆಂದರೆ, ಇಷ್ಟಕ್ಕೂ ಮುಂಚೆ 90 ಪರ್ಸೆಂಟ್ ಸ್ಥಳೀಯ ಸಂಸ್ಥೆಗಳಿಗೆ ಹೋಗುತ್ತಿತ್ತು. ಮೊನ್ನೆತಾನೆ ಸ್ಲಾಬ್ ಸಿಸ್ಟಂನಲ್ಲಿ ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಹಾಕಿದಮೇಲೆ 36 ಪರ್ಸೆಂಟ್ ಸ್ಥಳೀಯ ಸಂಸ್ಥೆಗಳಿಗೆ ಬರುತ್ತಿದೆ. ಆದ್ದರಿಂದ, ಒಂದೊಂದು ಜಿಲ್ಲೆಗೆ ಕನಿಷ್ಟ ಸರಾಸರಿ 2-3 ಕೋಟಿ ರೂಪಾಯಿಗಳ ಮೇಲೆ ಸ್ಥಳೀಯ ಸಂಸ್ಥೆಗಳಿಗೆ ನಷ್ಟವಾಗುತ್ತಿದೆ. ಈಗ ಪ್ರತಿಯೊಂದು ಹಳ್ಳಿಯವರೂ ಪಟ್ಟಣ ಪ್ರದೇಶಗಳಿಗೆ ಬರಬೇಕು. ಅವರಿಗೆ, ಸ್ಥಳೀಯ ಸಂಸ್ಥೆಯವರ ಸವಲತ್ತುಗಳನ್ನು, ಸೌಲಭ್ಯಗಳನ್ನು ಕೊಡಬೇಕಾಗುತ್ತದೆ. ಇದರ ಬಗ್ಗೆ ಯಾರೂ ಗಮನ ತೆಗೆದುಕೊಂಡಿಲ್ಲ. ನೀರು ಸರಬರಾಜು ಯೋಜನೆಗಳ ಬಗ್ಗೆ, 53 ಯೋಜನೆಗಳನ್ನು ಪೂರ್ಣ ಮಾಡಿದಮೇಲೆ, 31 ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ನನ್ನ ಅಭಿಪ್ರಾಯ. ಏಕೆಂದರೆ, ಒಂದು ಯೋಜನೆ ಪೂರ್ಣವಾದ ಮೇಲೆ, ಇನ್ನೊಂದು ಯೋಜನೆ ತೆಗೆದುಕೊಂಡರೆ, ಚೆನ್ನಾಗಿರುತ್ತದೆ. ಬಹಳಷ್ಟು ಯೋಜನೆಗಳು, ಕೇಂದ್ರ ಸರ್ಕಾರದಿಂದ, ಸ್ಥಳೀಯ ಸಂಸ್ಥೆಗಳಿಗೆ ಗ್ರಾಂಟ್ ಸಿಗುತ್ತವೆ. ಅದರ ಮೇಲೆ, ಕೇಂದ್ರ ಸರ್ಕಾರದಿಂದ ಬಿಡುಗಡೆಯಾದುದನ್ನು, ರಾಜ್ಯ ಸರ್ಕಾರದಲ್ಲಿ ಬಹಳ ಕಾಲ ಬಿಡುಗಡೆ ಮಾಡದೇ ಇಟ್ಟುಕೊಂಡಿರುತ್ತಾರೆ. ಇದರಿಂದ ಅಭಿವೃದ್ಧಿ ಕಾರ್ಯಗಳು ಬಹಳ ನಿಧಾನವಾಗುತ್ತವೆ. ಧನ ಸಹಾಯ ಬಂದಕೂಡಲೇ, ಸ್ಥಳೀಯ ಸಂಸ್ಥೆಗಳಿಗೆ ಕೊಡಬೇಕೆಂದು ನನ್ನ ಅಭಿಪ್ರಾಯ ಮತ್ತು ರಾಜ್ಯಸರ್ಕಾರದ ಷೇರು ಏನಿದೆ, ಅದನ್ನೂ ಕೂಡ ಬಿಡುಗಡೆ ಮಾಡಬೇಕು. ನಾವು ಪಟ್ಟಣದಲ್ಲಿ ನೋಡುತ್ತಿದ್ದೇವೆ. ಬಹಳಷ್ಟು ಕೊಳಚೆ ಪ್ರದೇಶಗಳು ಜಾಸ್ತಿಯಾಗುತ್ತಿವೆ. ಅದರಲ್ಲಿಯೂ ರೆವಿನ್ಯೂ ಜಾಗದಲ್ಲಿಯೇ ಅಲ್ಲದೆ, ಸರ್ಕಾರದ ಜಮೀನಿನಲ್ಲಿಯೂ ಬಹಳಷ್ಟು ಗುಡಿಸಲುಗಳನ್ನು ಹಾಕಿಕೊಳ್ಳುತ್ತಾರೆ, ಹಾಕಿಕೊಂಡಿದ್ದಾರೆ. ಇವರನ್ನು ತೆಗೆಯುವುದು ಬಹಳ ಕಷ್ಟ. ಇವರನ್ನು ರೆಗ್ಯುಲರೈಸ್ ಮಾಡುವುದಕ್ಕೆ, ರೆಗ್ಯುಲರೈಸ್ ಆಫ್ ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ ಜಾರಿಗೆ ಬಂದಿದೆ. ಅದರಲ್ಲಿ ಬಹಳ ದುಬಾರಿಯಾಗುತ್ತದೆ. ಗುಡಿಸಲಿನಲ್ಲಿರುವವರು ಬಡವರು. ಪಟ್ಟಣದಲ್ಲಿ ಈ ರೇಟ್ ನೋಡಿದರೆ ಮತ್ತು ಅವರು ಈ ರೇಟ್ ಕೊಡುವಹಾಗಿದ್ದರೆ, ಆಗಲೇ ಆ ಜಾಗ ತೆಗೆದುಕೊಂಡು ಇರುತ್ತಿದ್ದರು. ಸರ್ಕಾರದ ಜಾಗದಲ್ಲಿ ಇರುತ್ತಾ ಇರಲಿಲ್ಲ. ಆದ್ದರಿಂದ, ನಾವು ಯಾರಿಗೆ, ಏನೇನು ರೇಟ್ ಹಾಕ ಬೇಕೆಂದು ಸರ್ವೆ ಮಾಡಿ, ನಿಗದಿ ಮಾಡಬೇಕು. ಮತ್ತು ಅವರಿಗೆ ರೆಗ್ಯುಲರೈಸ್ ಮಾಡಿ, ಫೈನ್ ಮತ್ತು ಲ್ಯಾಂಡ್ ಕಾಸ್ಟ್ ತೆಗೆದುಕೊಳ್ಳಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ. ಆದಾದಮೇಲೆ, ಲಾ ಅಂಡ್ ಆರ್ಡರ್ ಬಗ್ಗೆ ಸ್ವಲ್ಪಮಾತನಾಡುವುದು ಇದೆ. ಏಕೆಂದರೆ, ಬರೀ ಉನ್ನತ ದರ್ಜೆ ಅಧಿಕಾರಿಗಳನ್ನೇ ಹೆಚ್ಚುಮಾಡಿಕೊಳ್ಳುತ್ತಾ ಹೋಗಿದ್ದೀರಿ. ಲೋಕಲ್‌ನಲ್ಲಿರುವಂಥ

ಕಾನ್‌ಸ್ಟೇಬಲ್‌ಗಳನ್ನು ಜಾಸ್ತಿ ಮಾಡಬೇಕು. ಬರೀ ಉನ್ನತ ದರ್ಜೆಯ ಅಧಿಕಾರಿಗಳಿಂದಲೇ ಲಾ ಅಂಡ್ ಆರ್ಡರ್ ಕಂಟ್ರೋಲ್ ಆಗುವುದಿಲ್ಲವೆಂದು ನನ್ನ ಅಭಿಪ್ರಾಯ. ಇನ್ನು ಯೂತ್ ಸರ್ವೀಸಸ್‌ನಲ್ಲಿ ಪ್ರತಿಯೊಂದು ಕ್ರೀಡಾಪಟುಗಳಿಗೂ ಉದ್ಯೋಗಗಳಲ್ಲಿ ಕೋಟಾ ನಿಗದಿ ಮಾಡಬೇಕೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ, ಪ್ರತಿಯೊಬ್ಬರಿಗೂ ಕೋಟಾ ಇದೆ. ಈ ಕ್ರೀಡಾಪಟುಗಳಿಗೆ ಪರ್ಟಿಕ್ಯುಲರ್ ಆಗಿ, ಉದ್ಯೋಗಗಳಲ್ಲಿ ಕೋಟಾ ಇಲ್ಲ. ಇನ್ನು ಕೆ.ಎಸ್.ಆರ್.ಟಿ.ಸಿ.ಯಲ್ಲಿ ಬಹಳಷ್ಟು ಜನರು ತಾತ್ಕಾಲಿಕವಾಗಿ ಕೆಲಸ ಮಾಡುತ್ತಿದ್ದಾರೆ. ನೀವು ಬೇರೆಯವರಿಗೆ ಕೆಲಸ ಕೊಡುವಾಗ, ಇವರನ್ನು ಖಾಯಂ ಮಾಡಬೇಕು. ಮೊನ್ನೆ ಪ್ರಕಟಣೆ ಮಾಡಿದ್ದೀರಿ, ಪರ್ಸೆಂಟೇಜ್ ಇಲ್ಲದೇ, ಉದ್ಯೋಗ ವಿನಿಮಯ ಕಚೇರಿಯಿಂದ ಸಂದರ್ಶನ ಬರುವಹಾಗೆ ಇಲ್ಲ. ಇವರು ಬಹಳ ವರ್ಷಗಳಿಂದ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರಿಗೂ ಪರ್ಟಿಕ್ಯುಲರ್ ಆಗಿ ಕೋಟಾ ನಿಗದಿ ಮಾಡಬೇಕು. ಮತ್ತು ಇವರನ್ನು ರೆಗ್ಯುಲರೈಸ್ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮತ್ತೆ ನಮ್ಮ ಜಿಲ್ಲೆಯ ಜಿಲ್ಲಾಪರಿಷತ್ತಿನಲ್ಲಿ, ಆರು ನೂರು ಜನ ಶಿಕ್ಷಕರು ತಾತ್ಕಾಲಿಕವಾಗಿ ಕೆಲಸ ಮಾಡುತ್ತಿದ್ದರು. ಈಗ ಮೊನ್ನೆತಾನೆ ಇವರನ್ನು ತೆಗೆದುಹಾಕಬೇಕೆಂದು ಆದೇಶವಾಗಿದೆ. ಆದರೆ, ಇವರು ವಯೋಮಿತಿ ಮೀರಿದ್ದು, ಬಹಳ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಇವರನ್ನು ಖಾಯಂ ಮಾಡಬೇಕೆಂದು ಕೇಳಿಕೊಳ್ಳುತ್ತಾ, ಈ ಅವಕಾಶವನ್ನು ಕೊಟ್ಟಿದ್ದಕ್ಕಾಗಿ, ಅಧ್ಯಕ್ಷರಿಗೆ ಧನ್ಯವಾದಗಳನ್ನರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಆಯನೂರು ಮಂಜುನಾಥ್ (ಹೊಸನಗರ) : ಸನ್ಮಾನ್ಯ ಅಧ್ಯಕ್ಷರೇ, ಸುಮಾರು 8 ವರ್ಷಗಳ ನಂತರ, ಮತ್ತೆ ಈಗಿರತಕ್ಕ ಸರ್ಕಾರ ಪುನರ್ ಪ್ರತಿಷ್ಠಾಪನೆಯಾಗಿದೆ. ಇವತ್ತು ಹಿಂದುಳಿದ ವರ್ಗದ ಒಬ್ಬ ವ್ಯಕ್ತಿ, ಅರ್ಥ ಮಂತ್ರಿಯಾಗಿ ರಾಜ್ಯದ ಅಧಿಕಾರ ಸೂತ್ರವನ್ನು ಹಿಡಿದಿರುವಾಗ, ಬಹಳ ಜನರು, ಬಹಳ ನಿರೀಕ್ಷೆ ಮಾಡಿದ್ದರು. ಎಂಟು ವರ್ಷಗಳಾದ ಮೇಲೆ ಹಳೆಯ ತಪ್ಪುಗಳನ್ನು ಆದರೆ, "ಎಂಟಕ್ಕೆ ದಂಡು ಎಂದಹಾಗೆ, ಮತ್ತೆ ದಂಟು ಎನ್ನುವ ಕೆಲಸವನ್ನು ಮಾಡಿದರೇ ಹೊರತು ಎಂಟು ವರ್ಷವಾದ ಮೇಲೆ ಏನೂ ಬದಲಾವಣೆಯಾಗಲಿಲ್ಲ. ಸ್ವಾಮಿ, ಇದುವರೆಗೂ ಆಗಿರತಕ್ಕ ಚರ್ಚೆಯನ್ನು ನಾನು ಮತ್ತೆ ಚರ್ವಿತ ಚರ್ವಣ ಮಾಡುವುದಿಲ್ಲ. ಇಡೀ ರಾಜ್ಯದೊಳಗೆ ಬಹಳ ದೊಡ್ಡ ಕ್ಷೇತ್ರವಾಗಿರತಕ್ಕಂತಾದ್ದು ಕಾರ್ಮಿಕ ಕ್ಷೇತ್ರ. ಈ ಕಾರ್ಮಿಕರ ಕ್ಷೇತ್ರದಲ್ಲಿರತಕ್ಕ ಬಡವರ ಬಗ್ಗೆ ಕಾಳಜಿ ಇಲ್ಲದೇ ಇರುವುದು ಬಹಳ ನೋವನ್ನು ತರತಕ್ಕ ಸಂಗತಿ. ಇವತ್ತು ರಾಜ್ಯದಲ್ಲಿ ಕೋಟ್ಯಾಂತರ ಕಾರ್ಮಿಕರು ಇದ್ದಾರೆ. ಈ ಕಾರ್ಮಿಕರ ಬಗ್ಗೆ ಮೊದಲನೆಯ ರಾಜ್ಯಪಾಲರ ಭಾಷಣದಲ್ಲಿ ಒಂದೇಒಂದು ಅಕ್ಷರ. ಪ್ರಸ್ತಾಪ ಇಲ್ಲ. ಎರಡನೇ ರಾಜ್ಯಪಾಲರ ಭಾಷಣದಲ್ಲಿಯೂ ಒಂದೇಒಂದು ಅಕ್ಷರ ಪ್ರಸ್ತಾಪ ಇಲ್ಲ. ಈ ಬಾರಿ ಪ್ರಸ್ತಾಪ ಮಾಡಿದ್ದಾರೆ, ಇಡೀ ಕಾರ್ಮಿಕ ಇಲಾಖೆ ಮತ್ತು ಇವರ ಕಲ್ಯಾಣ ಎಲ್ಲದಕ್ಕೂ ಸೇರಿ 2.05 ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ಕೋಟ್ಯಾಂತರ ಜನರು ಇರತಕ್ಕ, ಈ ಕಾರ್ಮಿಕರ ಜೀವನ ಸುಧಾರಣೆ ಮಾಡುವುದಕ್ಕೆ ಬಹಳ ಸಂತೋಷದ ವಿಚಾರ ಹೇಳಿದ್ದಾರೆ. ಇದು ಆದರೆ, ಆ ಸಂತೋಷಪಡುವ ವಿಷಯದಲ್ಲಿ ನಾವೂ ಕೂಡ ಒಬ್ಬರಾಗುತ್ತೇವೆ, ಈ ರಾಜ್ಯದಲ್ಲಿ ಕೈಗಾರಿಕಾ ಬಾಂಧವ್ಯ ಬಂದಿದೆ, ಸರ್ಕಾರದ ಹೊಸ ನೀತಿಗನುಗುಣವಾಗಿ, ಮುಂದುವರಿಸಿಕೊಂಡು

ಹೋಗುತ್ತೇವೆಂದು ಬಜೆಟ್‌ನಲ್ಲಿ ಹೇಳಿದ್ದಾರೆ. ನಿಮ್ಮ ಈ ಮೂರುತಿಂಗಳೊಳಗೆ, ಏನೇನು ಬಾಂಧವ್ಯ ಬಂದಿದೆ, ಸರ್ಕಾರದ ಹೊಸ ನೀತಿಗನುಗುಣವಾಗಿ, ಮುಂದುವರಿಸಿಕೊಂಡು ಹೋಗುತ್ತವೆಂದು ಬಜೆಟ್‌ನಲ್ಲಿ ಹೇಳಿದ್ದಾರೆ. ನಿಮ್ಮ ಈ ಮೂರುತಿಂಗಳೊಳಗೆ, ಏನೇನು ಬಾಂಧವ್ಯ ಮಾಡಿದ್ದೀರಿ. ಕೈಗಾರಿಕಾ ಬಾಂಧವ್ಯದ ಸಲುವಾಗಿ, ಏನೇನು ಜಾರಿಯಾಗಿವೆ, ಎಷ್ಟೆಷ್ಟು ಡಿಸಪ್ಯೂಟ್‌ಗಳನ್ನು ಬಗೆಹರಿಸಿದ್ದೀರಿ, ಬಗೆಹರಿಸುವುದಕ್ಕೋಸ್ಕರ ಯಾವ ಯಾವ ಕ್ರಮಗಳನ್ನು ಕೈಗೊಂಡಿದ್ದೀರಿ? ಕಾರ್ಮಿಕ ನ್ಯಾಯಾಲಯಗಳಲ್ಲಿ, ನ್ಯಾಯಾಧೀಶರು ಬರುವಾಗ, ತಲೆಯ ಮೇಲೆ ಹಮಾಲಿಗಳು ಹೊತ್ತುಕೊಂಡು ಬರುವಹಾಗೆ, ಗಂಟುಗಳನ್ನು ಹೊತ್ತುಕೊಂಡು ಬರುತ್ತಾರೆ. ಯಾವುದೇ ಸರ್ಕಾರ ಅವರಿಗೆ ಕುಳಿತು ಕೊಳ್ಳುವುದಕ್ಕೆ ಜಾಗ ಕೊಟ್ಟಿಲ್ಲ. ಅಲ್ಲಿರತಕ್ಕ ನ್ಯಾಯಾಧೀಶರು, ಜೊತೆಯಲ್ಲಿ ಒಬ್ಬರನ್ನು ಕರೆದುಕೊಂಡು, ಬಸ್ಸುಗಳ ಮೇಲೆ ಲಗೇಜು ಹಾಕಿಕೊಂಡು, ಮೂರು ಮೂರು ಜಿಲ್ಲೆಗಳಲ್ಲಿ ಅಡ್ಡಾಡುತ್ತಿದ್ದಾರೆ. ಕಾರ್ಮಿಕರು, ತಮ್ಮ ಕೇಸುಗಳು ಇತ್ಯರ್ಥವಾಗದೇ, ಕಾರ್ಮಿಕರ ಜೀವನ ಸಂಪೂರ್ಣ ಭಸ್ಮವಾಗ ಬೇಕಾಗುತ್ತದೆ. ಆದ್ದರಿಂದ, ಈ ಕಾರ್ಮಿಕ ನ್ಯಾಯಾಲಯಗಳ ನ್ಯಾಯಾಧೀಶರ ಬಗ್ಗೆ ಏನಾದರೂ ಯೋಚನೆ ಮಾಡಿದ್ದೀರಾ? ಇವತ್ತು ಬೇಕಾದಷ್ಟು ಕೇಸುಗಳು ಪೆಂಡಿಂಗ್ ಇವೆ. ಅವುಗಳನ್ನು ತೀರ್ಮಾನ ಮಾಡುವ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಆ ಕಡೆಗೆ ಗಮನ ಕೊಟ್ಟಿಲ್ಲ. ಈ ಕಾರ್ಮಿಕ ನ್ಯಾಯಾಧೀಶರು ತೀರ್ಮಾನ ಕೊಟ್ಟಮೇಲೆ, ಅದಕ್ಕೆ ಎಕ್ಸಿಕ್ಯುಷನ್ ಪವರ್ ಇಲ್ಲ. 9-10 ವರ್ಷಗಳ ಮೇಲೆ ಒಬ್ಬ ಕಾರ್ಮಿಕ, ಜೀವನದಲ್ಲಿ ಒಂದು ತೀರ್ಪನ್ನು ಪಡೆದುಕೊಂಡರೆ, ಆ ಕಾರ್ಮಿಕ ನ್ಯಾಯಾಲಯದ ತೀರ್ಪನ್ನು ಜಾರಿ ಮಾಡದಿದ್ದರೆ, ಯಾವುದೇ ಮಾಲೀಕರಿಗಾಗಲೀ ಅಥವಾ ಆಡಳಿತ ಮಂಡಳಿ ಯವರಿಗಾಗಲೀ ಅನುಕೂಲವಾಗುವುದಿಲ್ಲ. ಎಕ್ಸಿಕ್ಯುಟಿವ್ ಪವರ್ ಇರತಕ್ಕಂಥಾದ್ದು ಸಿವಿಲ್ ಕೋರ್ಟು ಗಳಿಗೆ. ಅದಕ್ಕೆ ಮತ್ತೆ ಅವನು ಕಾರ್ಮಿಕ ಕಮೀಷನರ್ ಮುಂದೆ ಅಡ್ಡಾಡಬೇಕು. ಪ್ರಾಸಿಕ್ಯೂಟ್ ಮಾಡುವುದಕ್ಕೆ ಪರ್ಮಿಷನ್ ಕೊಡಿ ಎಂದು ಕೇಳಬೇಕು. ಆ ಪ್ರಾಸಿಕ್ಯೂಷನ್ ಪವರ್ ತೆಗೆದುಕೊಂಡು, ಸಿವಿಲ್ ಕೋರ್ಟ್ ಮುಂದೆ ಮತ್ತೆ 5 ವರ್ಷ ಅಡ್ಡಾಡಬೇಕು. ಆದ್ದರಿಂದ, ಈ ಕಾರ್ಮಿಕ ಕಲ್ಯಾಣ ದೊಳಗೆ, ತಾವು ಏನಾದರೂ ಮಾಡಿದ್ದೀರಾ? ಮಾನ್ಯ ಗುರುನಾಥ್‌ರವರು ಇದ್ದಾರೆ, ಅವರು ಕಾರ್ಮಿಕ ಕ್ಷೇತ್ರದಿಂದ ಬಂದಿರತಕ್ಕವರೆಂದು ಕೇಳಿದ್ದೇನೆ. ಅವರು ಕಾರ್ಮಿಕ ಕ್ಷೇತ್ರದಿಂದ ಬಂದಿರುವುದು ನಿಜವೇ ಆಗಿದ್ದರೆ, ಈ ತರಹದ ಬವಣೆಗಳನ್ನು, ಬಗೆಹರಿಸತಕ್ಕಂಥ ಕೆಲಸಗಳನ್ನು ಮಾಡಬೇಕು.

7.40 ಪಿ.ಎಂ

ಕೈಗಾರಿಕಾ ಅಭಿವೃದ್ಧಿ ಚೆನ್ನಾಗಿ ಆಗಬೇಕೆಂದು ನಮ್ಮ ಜಿಲ್ಲೆಯಲ್ಲಿರುವ ಎಂ.ಪಿ.ಎಂ. ಫ್ಯಾಕ್ಟರಿಗೆ ಗೋರೆ ಎನ್ನುವವರನ್ನು ವ್ಯವಸ್ಥಾಪಕ ನಿರ್ದೇಶಕರನ್ನಾಗಿ ಹಾಕಲಾಗಿದೆ. ಅವರು ಬಂದಮೇಲೆ ಇಡೀ ಅಧಿಕಾರಿಗಳು ಸೇರಿಸಿಕೊಂಡು ಅವರನ್ನು ತೆಗಿಸಿ ಹಾಕಬೇಕೆಂದು ಅವರುಗಳು ಒಂದು ಡೆಲಿಗೇಷನ್‌ನನ್ನು ಕಾರ್ಮಿಕರ ಮಂತ್ರಿಯವರ ಹತ್ತಿರ ಬರುತ್ತಿದ್ದಾರೆಂದು ತಿಳಿದು ಬಂದಿದೆ. ತಾವು ಅಲ್ಲಿಗೆ ಬಂದು ಯಾರಾದರೂ ಕಾರ್ಮಿಕರನ್ನು ಅವರ ಬಗ್ಗೆ ಕೇಳಿ. ಅವರು ಬೇಡ ಎಂದರೆ ಬೇಕಾದರೆ ಚೇಂಜ್ ಮಾಡಿ. ಇವತ್ತೋ ನಾಳೆಯೋ ಆ ಅಡ್ಮಿನಿಸ್ಟ್ರೇಟರ್ ಬದಲಾವಣೆ ಆಗಬಹುದೆಂದು ಕಾಣುತ್ತಿದೆ. ಒಳ್ಳೆಯ ಅಧಿಕಾರಿಗಳನ್ನು ಸಾಮಾನ್ಯವಾಗಿ ಹೆಚ್ಚು ದಿವಸ ಪಬ್ಲಿಕ್ ಸೆಕ್ಟಾರ್‌ನಲ್ಲಿ ಇಟ್ಟುಕೊಳ್ಳುವುದಿಲ್ಲ. ಅಂಥಾ

ಅಧಿಕಾರಿಗಳನ್ನು ಬದಲಾವಣೆ ಮಾಡಿದರೆ ಕಾರ್ಮಿಕರಿಗೆ ಮತ್ತು ತೊಂದರೆ ಮಾಡಿದ ಹಾಗಾಗುತ್ತದೆ. ಇನ್ನು ಕನಿಷ್ಠ ಮಜೂರಿ ಬಗ್ಗೆ ಹೇಳುವುದಾದರೆ, ಇವತ್ತು ಕೋಟ್ಯಾವಧಿ ಕಾರ್ಮಿಕರು ಕನಿಷ್ಟ ಕೂಲಿ ಸಿಗದೆ ಬವಣೆ ಪಡುತ್ತಿದ್ದಾರೆ. ಇದುವರೆಗೂ 36 ಶೆಡ್ಯೂಲ್‌ಗಳಲ್ಲಿ ಮಾತ್ರ ಕನಿಷ್ಟ ವೇತನ ನಿಗದಿಯಾಗಿದೆ. ಕನಿಷ್ಠ ವೇತನ ನಿಗದಿಯಾದರೆ ಕೂಡ ಕನ್‌ಸ್ಯೂಮರ್ ಇಂಡೆಕ್ಸ್ ಆಧಾರದ ಮೇಲೆ ತುಟ್ಟಿಭತ್ಯೆಯನ್ನು ಕೊಡುತ್ತಿಲ್ಲ. ಕನ್‌ಸ್ಯೂಮರ್ ಪ್ರೈಸ್ ಇಂಡೆಕ್ಸ್‌ನ್ನು ಕ್ಯಾಲುಕಲೇಟ್ ಮಾಡುವಾಗ ಅಧಿಕಾರಿಗಳು ತಪ್ಪು ಮಾಡಿ ಅಸಂಘಟಿತ ಕಾರ್ಮಿಕರುಗಳಿಗೆ ಬರುವ ತುಟ್ಟಿಭತ್ಯೆಗೆ ವಂಚನೆ ಮಾಡಿದ್ದಾರೆ. ಹೀಗೆ ಮಾಡಿದರೆ ಕಾರ್ಮಿಕರಿಗೆ ಕನಿಷ್ಟ ಮಜೂರಿಗೆ ಹೇಗೆ ಕೊಡಿಸಿದ ಹಾಗಾಯಿತು? ಕನಿಷ್ಠ ವೇತನವನ್ನು ಕಾರ್ಮಿಕರಿಗೆ ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ, ಆದರೆ ಅದನ್ನು ಜಾರಿ ಮಾಡುವುದಕ್ಕೆ ಬೇಕಾದ ಇನ್‌ಫ್ರಾಸ್ಟ್ರಕ್ಚರ್ ಸರ್ಕಾರದಲ್ಲಿ ಇದೆಯೇ? ಒಬ್ಬ ಲೇಬರ್ ಇನ್ಸ್‌ಪೆಕ್ಟರ್ ಅನ್ನು ಒಂದು ತಾಲ್ಲೂಕಿಗೆ ಕೊಟ್ಟಿದ್ದೀರಿ, ಅವನ ಜೊತೆಯಲ್ಲಿ ಒಬ್ಬ ಅಟೆಂಡರ್ ಮತ್ತು ಒಬ್ಬ ಗುಮಾಸ್ಥ ಅಷ್ಟೆ. ಒಬ್ಬ ಇನ್ಸ್‌ಪೆಕ್ಟರ್ ನೂರಾರು ಹಳ್ಳಿಗಳಲ್ಲಿ ಅದ್ದಾಗಿ ಅಸಂಘಟಿತ ಕಾರ್ಮಿಕರಿಗೆ ಯಾವ ರೀತಿ ನ್ಯಾಯ ಕೊಡಿಸುತ್ತಾನೆ? ಯಾವ ರೀತಿ ಮಿನಿಮಮ್ ವೇತನವನ್ನು ಎಕ್ಸಿಕ್ಯೂಟ್ ಮಾಡುತ್ತಾನೆ? ಸೆಕ್ಷನ್ 20 ರೊಳಗೆ ಯಾರು ಕನಿಷ್ಟ ವೇತನವನ್ನು ಕೊಡುವುದಿಲ್ಲವೋ ಅವನಿಗೆ ಪ್ರಾಸಿಕ್ಯೂಟ್ ಮಾಡಬೇಕಾಗುತ್ತದೆ, ಆದರೆ ಅವನು ಮಾಡುತ್ತಾನೆಯೇ? ಜಿಲ್ಲೆಯಲ್ಲಿರುವ ಲೇಬರ್ ಆಫೀಸರಿಗೆ ಮಾತ್ರ ಪ್ರಾಸಿಕ್ಯೂಟ್ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದೀರಿ. ಅವನೇ ತನ್ನ ಸ್ಕೂಟರ್ ತೆಗೆದುಕೊಂಡು ಜಿಲ್ಲೆಯೆಲ್ಲಾ ಅಡ್ಡಾಡಬೇಕು. ಅವನಿಗೆ ವಾಹನ ಸೌಕರ್ಯ ಇಲ್ಲ. ಕಾರ್ಮಿಕ ಕ್ಷೇತ್ರವು ಅತ್ಯಂತ ನಿರ್ಲಕ್ಷಕ್ಕೆ ಒಳಗಾಗಿರತಕ್ಕಂಥಾದ್ದು, ಅಲ್ಲಿರತಕ್ಕಂಥ ಅಧಿಕಾರಿಗಳಿಗೆ ಯಾವುದೇ ಫೆಲಿಸಿಟಿ ಇಲ್ಲ. ಹೀಗಿದ್ದು ಕನಿಷ್ಠ ವೇತನ ಜಾರಿ ಮಾಡುತ್ತೇವೆಂದು ಹೇಳಿದರೆ ಆತ್ಮ ವಂಚನೆಯಾಗುತ್ತದೆ. ಕೋಟ್ಯಾಂತರ ಜನರ ಬಾಳಿನಲ್ಲಿ ಬೆಳಕು ಚೆಲ್ಲುವುದಕ್ಕೆ ಸಾಧ್ಯವಿದ್ದರೆ ಅದು ಕನಿಷ್ಠ ವೇತನ ಜಾರಿ ಆದರೆ ಮಾತ್ರ. ಯಾರು ಮಿನಿಮಮ್ ವೇಜಸ್ ಕೊಡುವುದಿಲ್ಲವೋ ಅಂಥವರ ಮೇಲೆ ಸ್ಥಳೀಯ ಅಧಿಕಾರಿಗಳೇ ಪ್ರಾಸಿಕ್ಯೂಟ್ ಮಾಡುವಂಥ ಅಧಿಕಾರವನ್ನು ಕೊಡಿ. ಕನಿಷ್ಠ ವೇತನವನ್ನು ಕಾರ್ಮಿಕರಿಗೆ ಕೊಡುವುದಕ್ಕೆ ಸಾಧ್ಯವಿಲ್ಲದಿರುವಂಥ ಇಂಡಸ್ಟ್ರೀ ನಮ್ಮ ದೇಶದಲ್ಲಿ ಇರುವುದು ಬೇಡವೆಂದು ಮಾನ್ಯ ಹೆಚ್.ಆರ್. ಖನ್ನಾ ಎನ್ನುವ ಸುಪ್ರೀಮ್ ಕೋರ್ಟ್ ಜಡ್ಜ್ ಹೇಳಿದ್ದಾರೆ. ಆ ಜಡ್ಜ್‌ರವರ ಅಭಿಪ್ರಾಯದ ಬಗ್ಗೆ ಸರ್ಕಾರಕ್ಕೆ ಗೌರವ ಇದ್ದರೆ ನೇರವಾಗಿ ಅಧಿಕಾರಿಗಳಿಗೆ ಪ್ರಾಸಿಕ್ಯೂಟ್ ಮಾಡುವಂಥ ಅಧಿಕಾರವನ್ನು ಕೊಡಿ. ಹಾಗೂ ಅವರಿಗೆ ಫೆಸಿಲಿಟೀಸನ್ನು ಕೊಡಿ. ಆಗ ಅವರು ಕಾರ್ಮಿಕರಿಗೆ ಸ್ವಲ್ಪವಾದರೂ ಅನುಕೂಲ ಮಾಡಿಕೊಡುತ್ತಾರೆ. ಈ ಕಾರ್ಮಿಕರ ಕಲ್ಯಾಣಕ್ಕಾಗಿ ರಾಜ್ಯ ಬಜೆಟ್‌ನಲ್ಲಿ ಇಟ್ಟಿರುವ 7.95 ಕೋಟಿ ರೂಪಾಯಿ ಯಾವ ಮೂಲೆಗೂ ಬರುವುದಿಲ್ಲ. ವರ್ಕ್‌ಮ್ಯಾನ್ ಕಾಂಪನ್‌ಸೇಷನ್‌ನಲ್ಲಾಗಲಿ ಅಥವಾ ಇನ್ನಾವುದರಲ್ಲೇ ಆಗಲೀ ಫ್ಯಾಕ್ಟರಿ ಇನ್ಸಪೆಕ್ಟರ್ಸ್ ಮತ್ತು ಬಾಯಲರ್ಸ್ ಯಾವ ರೀತಿ ಕಾರ್ಮಿಕರ ಜೀವನವನ್ನು ಕಾಯುತ್ತಿದ್ದಾರೆ? ಕಾರ್ಮಿಕರಿಗೆ ಜೀವನದ ವಿರುದ್ಧವಾಗುವ ಪರಿಣಾಮಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ? ಫ್ಯಾಕ್ಟರಿ ಇನ್ಸ್‌ಪೆಕ್ಟರ್ಸ್ ಮತ್ತು ಬಾಯಲರ್ಸ್ ಎಂದರೆ, ಲೈಸನ್ಸ್ ಕೊಟ್ಟು ದುಡ್ಡು ಮಾಡುವಂಥ ಜನರಾಗಿ ಅವರು ಕುಳಿತಿದ್ದಾರೆ. ಪರಿಸರ ವಿಚಾರದಲ್ಲಿ ದುಡ್ಡು ಮಾಡುವಂಥ

ಅಧಿಕಾರಿಗಳಾಗಿ ಅವರು ಕುಳಿತಿದ್ದಾರೆ. ಇಂಥವರ ಬಗ್ಗೆ ಸರ್ಕಾರ ಗಮನಹರಿಸಿದರೆ ಒಳ್ಳೆಯದು. ಇನ್ನು ಅಡಿಕೆ ಮೇಲೆ ಹಾಕಿರುವ ತೆರಿಗೆ ಬಗ್ಗೆ ಈಗಾಗಲೇ ಬೇರೆ ಮಾನ್ಯ ಸದಸ್ಯರು ಮಾತನಾಡಿರುವುದರಿಂದ ಅದರ ಬಗ್ಗೆ ನಾನು ಮಾತನಾಡದೆ, ಅಡಿಕೆ ಸುಲಿಯುವಂಥ ಕೆಲಸ ಮಾಡುವ ಕಾರ್ಮಿಕರಿಗೆ ಏನಾದರೂ ಕನಿಷ್ಠ ವೇತನ ಜಾರಿಯಾಗಿದೆಯಾ? ಅಲ್ಲಿಗೆ ಬರತಕ್ಕಂಥ ಹೆಣ್ಣು ಮಕ್ಕಳು ಹಗಲು ರಾತ್ರಿ ಅಡಿಕೆಯನ್ನು ಆರಿಸುತ್ತಾರೆ. ಯಾರು ಹಗಲು ರಾತ್ರಿ ದೂಳು ಕುಡಿಯುತ್ತಾ ಹೆಣ್ಣು ಮಕ್ಕಳು ಕೆಲಸ ಮಾಡುತ್ತಾರೋ ಅಂಥವರ ಸಲುವಾಗಿ ಕನಿಷ್ಠ ವೇತನವನ್ನು ಜಾರಿ ಮಾಡಬೇಕು ಮತ್ತು ತುಟ್ಟಿ ಭತ್ಯೆಯನ್ನು ನಿಗದಿ ಮಾಡಬೇಕು. ಅಡಿಕೆ ಉದ್ಯಮವು ಬಹಳ ದೊಡ್ಡದಾಗಿ ಬೆಳೆದಿದೆ. ಆ ಉದ್ಯಮದಲ್ಲಿ ಕೆಲಸ ಮಾಡುವ ಕಾರ್ಮಿಕರದ್ದು ಕನಿಷ್ಠ ವೇತನದ ಕ್ಯಾಟಗರಿಯಲ್ಲಿ ಬಿಟ್ಟು ಹೋಗಿದೆ. ದಯಮಾಡಿ ಅದನ್ನು ಪ್ರಕಟ ಮಾಡಬೇಕು. ಕಾರ್ಮಿಕರ ಸಲುವಾಗಿ ಶಿವಮೊಗ್ಗ, ಮಂಗಳೂರು ಮತ್ತು ಚಿಕ್ಕಮಗಳೂರು ಸೇರಿ ಒಂದು ಕಾರ್ಮಿಕರ ನ್ಯಾಯಾಲಯವನ್ನು ಮಾಡಲಾಗಿದೆ. ಅದರಲ್ಲಿ ಒಬ್ಬರು ಜಡ್ಜ್ ಇಬ್ಬರು ಗುಮಾಸ್ತರು. ಇದರಿಂದಾಗಿ ಕಾರ್ಮಿಕರಿಗೆ ನ್ಯಾಯ ಸಿಗುವ ಪ್ರಶ್ನೆ ಇಲ್ಲ. ಈ ಬಡ ಕೂಲಿ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಅಥವಾ ಕಲ್ಯಾಣಕ್ಕೆ ಎಲ್ಲಾದರೂ ಹಣವನ್ನು ಇಡಲಾಗಿದೆಯಾ? ಇದರ ಬಗ್ಗೆ ಮಾನ್ಯ ಕಾರ್ಮಿಕ ಮಂತ್ರಿಯವರು ಹೇಳಬೇಕಾಗಿತ್ತು. ನಾನು ಒಂದು ಮಾತನ್ನು ಹೇಳುತ್ತೇನೆ, ಕಾರ್ಮಿಕ ವರ್ಗವು ಯಾವ ರೀತಿ ನೆಗ್ಲೆಟ್ ಆಗಿದೆಯೋ ಅದೇ ರೀತಿ ಮಾನ್ಯ ಸಚಿವರ ಖಾತೆಯೂ ನೆಗ್ಲೆಟ್ ಆಗುತ್ತಿದೆ. ಈ ರಾಜ್ಯದಲ್ಲಿ ಕಾರ್ಮಿಕ ಮಂತ್ರಿಯವರ ಪ್ರಭಾವಿಯಾಗಿರಬೇಕು. ಏನೂ ಕಲಸ ಇಲ್ಲವಾದ್ದರಿಂದ ಅವರಿಗೆ ಕಾರ್ಮಿಕ ಖಾತೆಯನ್ನು ಕೊಟ್ಟು ಕೂರಿಸೋಣ ಎನ್ನುವ ಹಾಗೆ ಆಗಬಾರದು. ಲಕ್ಷಾಂತರ ಜನರ ಜೀವನದಲ್ಲಿ ಬೆಳಕು ಮತ್ತು ಶಕ್ತಿಯನ್ನು ತರತಕ್ಕಂಥ ಖಾತೆ ಅದು. ದಯಮಾಡಿ ತಮ್ಮ ಅಧಿಕಾರವನ್ನು ಪ್ರಬಲವಾಗಿ ಪ್ರಯೋಗ ಮಾಡಿ ಎಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆಮೇಲೆ ಬಸ್‌ಗಳನ್ನು ಓಡಿಸುವುದಕ್ಕಾಗಿ ಡ್ರೈವರ್‌ಗಳ ತರಬೇತಿ ಶಾಲೆ ಬಗ್ಗೆ ಹೇಳುವುದಾದರೆ, ಈ ಶಾಲೆಗಳು ವಾಹನಗಳ ಮೇಲೆ ಏಕೆ ಟ್ಯಾಕ್ಸ್‌ನ್ನು ಹಾಕಲಾಗಿದೆ.? ಒಂದು ವಾಹನಕ್ಕೆ 200 ರೂಪಾಯಿ ತೆರಿಗೆ ಹಾಕಲಾಗಿದೆ. ಇದನ್ನು ಜೀರೋ ಮಾಡಿ ಎಂದು ನನ್ನ ಸಲಹೆ. ಏಕೆಂದರೆ, ಇವತ್ತು ಡ್ರೈವರ್ ಮತ್ತು ಕಂಡೆಕ್ಟರ್ ಆಗಲಿಕ್ಕೆ ಹೋಗುವವನು ಅನುಕೂಲಸ್ಥರ ಮಗ ಅಲ್ಲ. ಕೂಲಿಕಾರನ ಮಗ ಡ್ರೈವರ್ ಟ್ರೈನಿಂಗ್ ತೆಗೆದುಕೊಳ್ಳುವುದಕ್ಕೆ ಹೋದರೆ, ಅಂಥ ಶಾಲೆಯ ತರಬೇತಿ ಕೊಡುವ ಬಸ್‌ನ ಮೇಲೆ ಟ್ಯಾಕ್ಸ್ ಹಾಕಿದರೆ, ಆ ಶಾಲೆಯವರು ಆ ಹಣವನ್ನು ತರಬೇತಿಗೆ ಬಂದಂಥ ಅಭ್ಯರ್ಥಿಗಳಿಂದ ವಸೂಲಿ ಮಾಡುತ್ತಾರೆ. ಇವತ್ತು ಡ್ರೈವರ್ ಕೆಲಸ ಕಲಿಯುವುದಕ್ಕಾಗಿ ಸಾವಿರಾರು ರೂಪಾಯಿ ಫೀಸ್ ಕಟ್ಟಬೇಕಾಗಿ ಬಂದಿದೆ. ಅದಕ್ಕಾಗಿ ಈ ಟ್ಯಾಕ್ಸ್‌ನ್ನು ಜೀರೋ ಮಾಡಿ. ಆಮೇಲೆ ಇನ್ನೊಂದು ಹೇಳಿದರೆ ತಮಗೆ ಆಶ್ಚರ್ಯವಾಗಬಹುದು, ಮಂಗಳೂರಿನ ಆರ್.ಟಿ.ಓ.ಆಫೀಸಿಗೆ ಹೋಗಿ ದುಡ್ಡು ಹೆಸರನ್ನು ನೋಂದಾಯಿಸಿ ದುಡ್ಡು ಕೊಟ್ಟು ಬಂದರೆ, ಟ್ರೈನಿಂಗ್ ಬೇಡ ಟ್ರಯಲ್ ಬೇಡ 3 ತಿಂಗಳ ಮೇಲೆ ಲೈಸನ್ಸ್ ತೆಗೆದುಕೊಳ್ಳಬಹುದು: ಆಮೇಲೆ ನೋಡಿ ಕೆ.ಎಸ್.ಆರ್.ಟಿ.ಸಿ. ಬಸ್ ಆಕ್ಸಿಡೆಂಟ್, ಮುನ್ನೂರು ಜನ ಸಾವು; ಇದು ಹೇಗೆ ಆಯಿತು? ತರಬೇತಿ ಪಡೆಯುವುದಕ್ಕಾಗಿ ಎಲ್ಲೋ ಸಾಲಸೋಲ ಮಾಡಿ, ಮನೆಯಲ್ಲಿದ್ದ ಒಡವೆಯನ್ನು ಅಡವಿಟ್ಟು ತಂದು ಇಂಥಾ ತರಬೇತಿ ಶಾಲೆಗಳಿಂದ

ತರಬೇತಿ ತೆಗೆದುಕೊಂಡ ಡ್ರೈವರುಗಳಿಂದ ಇಂಥಾ ಆಕ್ಸಿಡೆಂಟ್ ಆಗುತ್ತದೆ. ಆಮೇಲೆ ಬಸ್ ಏಜೆಂಟರು ಎರಡೂವರೆ ಸಾವಿರ ರೂಪಾಯಿಗಳ ಸಾರಿಗೆ ಬಸ್‌ಗಳಲ್ಲಿ ಟಿಕೇಟ್ ಬುಕ್ ಮಾಡಿ ಕಮಿಷನ್ ತೆಗೆದುಕೊಳ್ಳುವವನು ಎರಡೂವರೆ ಸಾವಿರ ರೂಪಾಯಿ ಡಿಪಾಸಿಟ್ ಇಡಬೇಕೇ? ಬಸ್ ಮಾಲೀಕರೇ ಇದರ ಬಗ್ಗೆ ಒತ್ತಾಯ ಮಾಡಿಲ್ಲ. ಸರ್ಕಾರದವರು ಏಕೆ ಒತ್ತಾಯ ಹಾಕಬೇಕು? ದಯಮಾಡಿ ಆ ನಿಯಮವನ್ನು ವಿತ್‌ಡ್ರಾ ಮಾಡಿ. ಮಂಗಳೂರಿನಲ್ಲಿ ಇವತ್ತಿನ ದಿವಸ ಸುಮಾರು ಒಂದೂವರೆ ಸಾವಿರ ರೂಪಾಯಿ ಡಿಸಾಸಿಟ್ ಇಡಬೇಕೆಂದರೆ ಅವರು ಬಡ್ಡಿಗೆ ಸಾಲ ತಂದು ಕಟ್ಟಬೇಕಾಗುತ್ತದೆ. ನಮ್ಮ ಸರ್ಕಾರದವರಿಗೂ ಉದ್ಯೋಗ ಕೊಡುವುದಕ್ಕಾಗಲಿಲ್ಲ, ಉದ್ಯೋಗವನ್ನು ಯಾರು ಸ್ವಯಂ ಹುಡುಕಿ ಕೊಂಡಿದ್ದಾರೆ, ಅವರಿಗೆ ಕಿರುಕುಳ ಕೊಡುವುದನ್ನು ಈ ಸರ್ಕಾರ ದಯಮಾಡಿ ನಿಲ್ಲಿಸಬೇಕು ಆಮೇಲೆ, ಗೋಧಿ ಹಿಟ್ಟಿನ ಮೇಲೆ ತೆರಿಗೆ ಹಾಕಲಾಗಿದೆ. ರೋಗಿಗಳು ತಿನ್ನುವಂಥ ಬ್ರೆಡ್ ಮೇಲೆ ದಯವಿಟ್ಟು ತೆರಿಗೆ ಹಾಕಬೇಡಿ. ಬಡವ ತಿನ್ನುವ ಬ್ರೆಡ್ಡಿಗೆ ಇಷ್ಟು ತೆರಿಗೆ ಏರಿಸಿದರೆ ಹೇಗೆ ಸ್ವಾಮಿ? ಲಿಪ್‌ಸ್ಟಿಕ್, ನೈಲ್ ಪಾಲೀಷ್, ಮುಖಕ್ಕೆ ಹೊಡೆದುಕೊಳ್ಳುವ ಬಣ್ಣ ಇವಕ್ಕೆ ಬೇಕಾದರೆ ತೆರಿಗೆಯನ್ನು ಜಾಸ್ತಿ ಮಾಡಿ. ಬ್ಯೂಟಿ ಪಾರ್ಲರ್‌ಗಳಿಗೆ ತೆರಿಗೆ ಹಾಕಿ, ಮಸಾಜ್ ಪಾರ್ಲರ್‌ಗಳಿಗೆ ತೆರಿಗೆ ಹಾಕಿ, ಮೈಯನ್ನು ಉಜ್ಜಿಸಿ ಕೊಳ್ಳುವುದಕ್ಕೆ ಹೋಗುವುದರ ಮೇಲೆ ಏಕೆ ಟ್ಯಾಕ್ಸ್ ಹೆಚ್ಚಿಗೆ ನೀವು ಹಾಕಿಲ್ಲ? ತಾವು ಕೊಟ್ಟ ಮಾತು ಪ್ರಕಾರ ಮುನಿಸಿಪಾಲಿಟಿ, ಕಾರ್ಪೋರೇಷನ್‌ಗಳ ಚುನಾವಣೆ ಆಗೇ ಆಗಿಯೇ ಆಗುತ್ತಿವೆ. ಪಟ್ಟಣಗಳಲ್ಲಿ ಇರುವವರು ಮಾತ್ರ ಈ ಬಣ್ಣಗಳನ್ನು ಹೊಡೆದುಕೊಳ್ಳುವ ಹಳ್ಳಿಗಳು ಹೊಡೆದುಕೊಳ್ಳುವುದಿಲ್ಲ, ಆ ಚುನಾವಣೆಗೋಸ್ಕರ ಅದನ್ನು ಇಳಿಸಿದ್ದಾರೆಂದು ನಾನು ಭಾವಿಸುತ್ತೇನೆ. ದಯವಿಟ್ಟು ಇದರ ಮೇಲೆ ಇಳಿಸಿರುವ ತೆರಿಗೆಗಳನ್ನು ಏರಿಸಿ ಬಡವರಿಗೆ ಅನುಕೂಲ ಮಾಡಿಕೊಡುವ ಹಾಗೆ ಮಾಡಿ ಎಂದು ನಾನು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಷಯ, ನಮ್ಮ ರಾಜ್ಯದಲ್ಲಿ ಇನ್ನೂ ಗುಲಾಮಗಿರಿ ಇದೆ. ಮೊನ್ನೆ ಮಾನ್ಯ ಸದಸ್ಯರಿಗೊಬ್ಬರಿಗೆ ಉತ್ತರ ಕೊಡುವಾಗ ಸರ್ಕಾರ ತಪ್ಪು ಉತ್ತರ ಕೊಟ್ಟಿದೆ. ಪೋಲಿಸ್ ಇಲಾಖೆಯಲ್ಲಿ ಆರ್ಡರ್ಲಿ ಸಿಸ್ಟಮ ಇಲ್ಲವೆಂದು ಸರ್ಕಾರ ಉತ್ತರ ಕೊಟ್ಟಿದೆ. ಇವತ್ತೂ ಆ ಆರ್ಡರ್ಲಿ ಸಿಸ್ಟಮ್ ಇದೆ, ಆತ್ಮ ವಂಚನೆ ಮಾಡಿಕೊಂಡು ಸರ್ಕಾರ ಹೇಳುವುದು ಬೇಡ. ಒಬ್ಬ ಆರ್ಡರ್ಲಿ ತನ್ನ ಮನೆ ಹೆಂಡತಿ ಸೀರೆ ಜಾಕಿಟ್ಟು ಒಗೆಯದೆ ಉನ್ನತ ಅಧಿಕಾರಿ ಹೆಂಡತಿ ಸೀರೆಯ ಜಾಕೀಟು ಒಗೆಯುವುದೆಂದರೆ ಏನು? ಅಧಿಕಾರಿ ಕೈ ಕೆಳಗೆ ಕೆಲಸ ಮಾಡುತ್ತಾನೆ ಎನ್ನುವ ಒಂದೇ ಕಾರಣಕ್ಕೆ ಎಸ್.ಪಿ.ಗಳ ಮನೆಯಲ್ಲಿ ಡಿ.ಸಿ.ಗಳ ಮನೆಯಲ್ಲಿ, ಡಿ.ವೈ.ಎಸ್.ಪಿ. ಮನೆಗಳಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್‌ಗಳ ಮನೆಗಳಲ್ಲಿ ನೂರಾರು ಜನ ಆರ್ಡರ್ಲಿಗಳಿದ್ದಾರೆ. ಮತ್ತೆ ಏಕೆ ಆ ಹುದ್ದೆಗಳಲ್ಲಿ ಹೊಸದಾಗಿ ಅಪಾಯಿಂಟ್ ಮಾಡುವುದಕ್ಕೆ ಹೋಗುತ್ತೀರಿ? ಅವರನ್ನು ಮೊದಲು ಆ ಸೆರೆಯಿಂದ ಮತ್ತು ಜೀತ ಪದ್ಧತಿಯಿಂದ ಬಿಡಿಸಿ. ಆರ್ಡರ್ಲಿ ಸಿಸ್ಟಮ್‌ನ್ನು ದಯಮಾಡಿ ತೆಗೆದು ಹಾಕಿ. ಬ್ರಿಟಿಷರು ಹೋದ ಮೇಲೂ ಅವರಲ್ಲಿದ್ದ ಪದ್ಧತಿಯನ್ನು ಮುಂದುವರಿಸುವುದು ಸರಿಯಲ್ಲ. ಐ.ಪಿ.ಎಸ್. ಐ.ಎ.ಎಸ್. ಪಾಸ್ ಮಾಡಿದರೆ ಅವರು ನವಾಬರೇನು? ಅಂಥವರ ಹೆಂಡಿರು ಮಕ್ಕಳು ಬಟ್ಟೆಗಳ್ಳು ಒಗೆಯುವುದಕ್ಕೆ ಸರ್ಕಾರಿ ನೌಕರರುಗಳು ಬೇಕೆನು? ದಯಮಾಡಿ ಆ ಪದ್ಧತಿಯನ್ನು ರದ್ದು ಮಾಡಿ. ಆ ಉನ್ನತ ಅಧಿಕಾರಿಗಳಿಗೆ ಸಾವಿರಾರು ರೂಪಾಯಿ ಸಂಬಳ ಕೊಡುವುದರ ಜೊತೆಗೆ ಅಧಿಕಾರವನ್ನು ಕೊಡಲಾಗಿದೆ. ಮುಖ್ಯಮಂತ್ರಿಗಳಿಗಿಂತ ಹೆಚ್ಚು

ಅಧಿಕಾರವನ್ನು ಚೀಫ್ ಸೆಕ್ರೆಟರಿಯವರಿಗೆ ಕೊಡಲಾಗಿದೆ. ಗುಂಡು ಹೊಡೆಯುವ ಅಧಿಕಾರವನ್ನು ಪೋಲೀಸ್ ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಅಂಥಾ ಸಾಹೇಬರು ಪುರುಸೊತ್ತು ಆದಾಗ ಅವರ ಮನೆಯ ಬಟ್ಟೆಯನ್ನು ಅವರೇ ಒಗೆದುಕೊಳ್ಳಲಿ. ಇಲ್ಲವೆಂದರೆ ದುಡ್ಡು ಕೊಟ್ಟು ಕೆಲಸಗಾರರನ್ನು ಇಟ್ಟುಕೊಳ್ಳಲಿ. ಇದಕ್ಕೆ ಉತ್ತರ ಕೊಡುವಾಗ ಗೃಹ ಇಲಾಖೆಯವರು ಆತ್ಮವಂಚನೆ ಮಾಡಿಕೊಂಡು ಸುಳ್ಳು ಹೇಳಬೇಡಿ. ಖಂಡಿತವಾಗಿಯೂ ಆ ಹುದ್ದೆ ಇದೆ. ಆಮೇಲೆ ಪೋಲೀಸ್ ಅಧಿಕಾರಿಗಳ ಬಗ್ಗೆ ಹೇಳುವುದಾದರೆ ಅವರಿಗೆ ಪ್ರತಿ ವರ್ಷ ರಿಫ್ರೆಷರ್ ಕೋರ್ಸ್ ಇಂಟ್ರಡ್ಯೂಸ್ ಮಾಡಿ. ಹೊಸದಾಗಿ ಬಂದಾಗ ಅವರ ಬೆಸ್ಟ್, ವೈಟ್ ಎಲ್ಲಾ ಸರಿ ಇರುತ್ತದೆ. ನಂತರ ಸಬ್ ಇನ್ಸ್‌ಪೆಕ್ಟರ್‌ಗಳ ಹೊಟ್ಟೆ ಗುಡಾಣ ಆದ ಹಾಗೆ ಆಗುತ್ತಿದ. ಅವರು ಪ್ರತಿ ವರ್ಷ ಫಿಟ್‌ನೆಸ್ ಸರ್ಟಿಫಿಕೇಟ್ ತೆಗೆದುಕೊಂಡು ಬರಬೇಕು. ಹಳೆ ಬಸ್‌ಗಳು ರಸ್ತೆ ಮೇಲೆ ಓಡಾಡಬೇಕಾಗಿದ್ದರೆ ಅವಕ್ಕೆ ಫಿಟ್‌ನೆಸ್ ಸರ್ಟಿಫಿಕೇಟ್ ಬೇಕಾದರೆ ಈ ದೇಶವನ್ನು ಕಾಯುವವರಿಗೆ ಫಿಟ್‌ನೆಸ್ ಸರ್ಟಿಫಿಕೇಟ್ ಬೇಡವೇನು? ಇವರು ನಾಯಿಗಳನ್ನು ಹಿಡಿದುಕೊಂಡು ಹೋಗುವುದರೊಳಗೆ ಕಳ್ಳ ಯದ್ವಾತದ್ವಾ ಓಡಿಹೋಗಿರುತ್ತಾನೆ. ಕಳ್ಳರನ್ನು ಹಿಡಿಯುವಾಗ ಓಡುವಾಗ ದುಸ್ಸು ದುಸ್ಸೂ ಉಸಿರು; ಅವರಿಗೆ ಎಷ್ಟೊಂದು ಉಸಿರು ಬರುವುದು? ಬರಬಾರದ ಉಸಿರು ಬರುತ್ತಿದೆ. ಆದ್ದರಿಂದ ದಯವಿಟ್ಟು ಅವರಿಗೆ ರಿಫ್ರೆಷರ್ ಕೋರ್ಸ್ ಇಡಿ. ಡಿಸಿಪ್ಲಿನರಿ ಡಿಪಾರ್ಟ್‌ಮೆಂಟಿಗೆ ಯಾವ ಶಿಕ್ಷಣ ಸಿಗಬೇಕೋ? ಅದು ಸಿಗಬೇಕು. ಅವಾಗದೆ ಯಾರು ಯದ್ವಾ ತದ್ವ ದೇಹವನ್ನು ಬೆಳೆಸಿಕೊಳ್ಳುತ್ತಾರೋ ಅಂತವರಿಗೆ ಇನಕ್ರಿಮೆಂಟ ಕಟ್ ಮಾಡಿ. ಎಫಿಷಿಯೇನ್ಸಿ ಟೆಸ್ಟ್ ಮಾಡಿ. ಈ ದೇಶದಲ್ಲಿ ಕಳ್ಳತನ, ಸುಲಿಗೆಗಳು ತಪ್ಪಿ ಲಾ ಅಂಡ್ ಆರ್ಡರ್ ಮೇಂಟೇನ್ ಆಗಬೇಕಾದರೆ ದಯಮಾಡಿ ಅವರಿಗೆ ಫಿಟ್‌ನೆಸ್ ಸರ್ಟಿಫಿಕೇಟ್ ತೆಗೆದುಕೊಳ್ಳುವ ಕ್ರಮವನ್ನು ಇಂಟ್ರಡ್ಯೂಸ್ ಮಾಡಿ ಇಲ್ಲವೆಂದರೆ ಯದ್ವಾ ತದ್ವ ತಿನ್ನುವುದಲ್ಲದೆ ಯದ್ವಾ ತದ್ವ ದೇಹವನ್ನು ಬೆಳೆಸಿಕೊಳ್ಳುತ್ತಾರೆ. ದಯಮಾಡಿ ಆ ಕೋರ್ಸ್‌ನ್ನು ಇಂಟ್ರಡ್ಯೂಸ್ ಮಾಡಬೇಕು. ಇನ್ನು ಬಹಳ ಮಾತನಾಡುವುದಿದ್ದರೂ ಸಮಯದ ಅಭಾವದಿಂದ ಇಷ್ಟಕ್ಕೇ ನಿಲ್ಲಿಸಿ ರಾಜ್ಯಪಾಲರ ಭಾಷಣದ ಮೇಲೆ ಸ್ವಲ್ಪ ಹೆಚ್ಚು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಈಗಲೇ ಅಧ್ಯಕ್ಷರನ್ನು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಮಣ್ಣಿನ ಮಗನ ಸರ್ಕಾರದಲ್ಲಿ ಮಂಡಿಸಿರತಕ್ಕಂಥ ಬಜೆಟ್‌ನ್ನು ನಾನು ಸ್ವಾಗತಿಸುತ್ತೇನೆ. ಈ ಬಜೆಟ್ ಬಹಳ ಪ್ರಗತಿಪರವಾಗಿದೆ. ಗ್ರಾಮೀಣ ಜನತೆಯ ಆರ್ಥಿಕ, ಶೈಕ್ಷಣಿಕ ಮತ್ತು ನೌಕರಿ ಮುಂತಾದ ಅಭಿವೃದ್ಧಿ ಯಾಗುವಂಥ ಬಜೆಟ್‌ನ್ನು ಅರ್ಥ ಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಮಂಡನೆ ಮಾಡಿದ್ದಾರೆ. ಹಳ್ಳಿಗಾಡಿನಿಂದ ಬರತಕ್ಕಂಥ ವಿದ್ಯಾವಂತ ಯುವಕರಿಗೆ 70 ಪರ್ಸೆಂಟ್‌ನಷ್ಟು ಮೀಸಲಾತಿಯನ್ನು ನೌಕರಿಯಲ್ಲಿ ಕೊಡುವಂಥ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಹಾಕಿಕೊಂಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಇದರ ಬಗ್ಗೆ ಮಾನ್ಯ ಮಂತ್ರಿಯವರ ಗಮನಕ್ಕೆ ತರುವುದೇನೆಂದರೆ, ಪಟ್ಟಣಗಳಲ್ಲಿ ವಾಸಿಸುವ ನೌಕರ ಶಾಹಿಗಳು ಗ್ರಾಮಾಂತರ ಯುವಕರಿಗೆ ಕೊಟ್ಟಿರುವ ಅನುಕೂಲವನ್ನು ಪಡೆಯುವುದಕ್ಕಾಗಿ ಗ್ರಾಮಾಂತರ ಪ್ರದೇಶಗಳಲ್ಲಿರುವ ಹಾಗೆ ಹೆಸರನ್ನು ನೋಂದಾಯಿಸಿಕೊಂಡು ಪಟ್ಟಣಗಳಲ್ಲಿ ಓಡಿ ಕೆಲಸವನ್ನು ತೆಗೆದುಕೊಳ್ಳುವಂಥ ಪ್ರಸಂಗ ಬರಬಹುದು. ಅದಕ್ಕಾಗಿ ಸರ್ಕಾರದವರು ಇದರ ಬಗ್ಗೆ

ಎಚ್ಚರಿಕೆಯನ್ನು ವಹಿಸಬೇಕೆಂದು ನಾನು ತಿಳಿಸುತ್ತೇನೆ. ನೀರಾವರಿ ಬಾಬಿಗೆ ಹಿಂದಿನ ಸರ್ಕಾರದವರು ಹೋದ ವರ್ಷಕ್ಕ 125 ಕೋಟಿ 82 ಲಕ್ಷ ರೂಪಾಯಿಗಳನ್ನು ಇಟ್ಟಿದ್ದರೆ, ಈ ವರ್ಷ ನಮ್ಮ ಸರ್ಕಾರ ನೀರಾವರಿಗಾಗಿ 770 ಕೋಟಿ 50 ಲಕ್ಷ ರೂಪಾಯಿಗಳನ್ನು ಇಡಲಾಗಿದೆ. ಇದನ್ನು ನೋಡಿದಾಗ ನಮಗನಿಸುತ್ತದೆ, ನೀರಾವರಿಗಾಗಿ ಹೆಚ್ಚಿನ ಹಣವನ್ನು ಕೊಟ್ಟು ಈ ರಾಜ್ಯದ ಕಲ್ಯಾಣವನ್ನು ಮಾಡುತ್ತೇವೆಂದು ಏನು ಹೇಳಿದ್ದರೋ ಅದರಂತೆ ಮಾಡಿರುವುದರಿಂದ ನಾವು ನಿಜಕ್ಕೂ ಈ ಬಜೆಟ್‌ನ್ನು ಸ್ವಾಗತಿಸಬಹುದು. ಆಮೇಲೆ ನಾನು ಸರ್ಕಾರಕ್ಕೆ ತಿಳಿಸಬಯಸುವುದೇನೆಂದರೆ, ಹಿಂದೆ ಮಾಡಿರತಕ್ಕಂಥ ಕಾಲುವೆಗಳೆಲ್ಲಾ ಹೂಳಿನಿಂದ ಮುಚ್ಚಿಕೊಂಡಿರುವುದರಿಂದ ನೀರಿನ ಸರಬರಾಜು ಸರಿಯಾಗಿ ಆಗುತ್ತಿಲ್ಲ. ಆದ ಕಾರಣ ಹಳೆ ಕಾಲುವೆಗಳ ದುರಸ್ತಿಗಾಗಿ ಇಂತಿಷ್ಟು ಹಣವನ್ನು ಬಜೆಟ್‌ನಲ್ಲಿ ತೆಗೆದಿಡುವ ರೀತಿಯಲ್ಲಿ ಯೋಜನೆ ತಯಾರು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಆಮೇಲೆ ಹಳ್ಳಿ ಕಡೆ ಇರುವ ರಸ್ತೆಗಳ ರಿಪೇರಿಗಾಗಿ 8 ಕೋಟಿ ರೂಪಾಯಿ ಮಾತ್ರ ಇಡಲಾಗಿದೆ. ಆ ಹಣವನ್ನು ಹೆಚ್ಚು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನಮ್ಮ ಮಾನ್ಯ ದೇವೇಗೌಡರು ಮಣ್ಣಿನ ಮಗ. ಇವರು ಪಾರ್ಲಿಮೆಂಟ್ ಸದಸ್ಯರಾಗಿದ್ದಾಗ ಲೋಕಸಭೆಯಲ್ಲಿ ರಸ ಗೊಬ್ಬರದ ಮೇಲಿನ ಸಬ್ಸೀಡಿ ತೆಗೆದಾಗ ಇವರು ಮಾತನಾಡಿದಂಥ ಶೈಲಿ ಬಹಳ ಮೆಚ್ಚತಕ್ಕಂಥಾದ್ದಾಗಿತ್ತು. ಬೇರೆಯವರೂ ಸಹ ನಾವೂ ಮಣ್ಣಿನ ಮಕ್ಕಳೆಂದು ಹೇಳಿಕೊಂಡವರು ಅದರ ಬಗ್ಗೆ ಒಂದು ಚಕಾರ ಕೂಡ ಎತ್ತಲಿಲ್ಲ. ಏಕೆ ಇವರು ಒಬ್ಬರೇ ಎತ್ತಬೇಕಾಯಿತು ? ಯಾರು ಈ ದೇಶದಲ್ಲಿ ರೈತರಿಗೋಸ್ಕರ ಹೋರಾಟ ಮಾಡುತ್ತಾರೋ ಅಂಥವರ ಮನಸ್ಸಿಗೆ ಮಾತ್ರ ಇಂಥವು ಬರುತ್ತವೆ. ಬೇರೆ ರೀತಿಯಲ್ಲಿ ಮಾತನಾಡುವವರೆಲ್ಲಾ ಮಣ್ಣಿನ ಮಗನಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಆಮೇಲೆ, 18 ಪರ್ಸೆಂಟ್ ನಷ್ಟು ವಿದ್ಯುತ್ ಟ್ರಾನ್ಸ್‌ಮಿಷನ್‌ನಲ್ಲಿ ಲಾಸ್ ಆಗುತ್ತದೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು. ಅವರು ಬಹುಶಃ ಉತ್ಪತ್ತಿಯಾದ ವಿದ್ಯುತ್‌ನಲ್ಲಿ 18 ಪರ್ಸೆಂಟ್ ಟ್ರಾನ್ಸ್‌ಮಿಷನ್ ಲಾಸ್ ಆಗುವಾಗ ಇದನ್ನು ಉಳಿತಾಯ ಮಾಡುವುದಕ್ಕೋಸ್ಕರ ಬೇರೆ ರೀತಿಯಲ್ಲಿ ಟೆಕ್ನಿಕಲ್ ಆಗಿ ಏನು ಸಾಧ್ಯ ಇದೆ ಅದೆಲ್ಲ ಸೌಕರ್ಯ ಮಾಡಿಕೊಂಡು ಈ ಲಾಸ್‌ನ್ನು ತಾವು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಏನು ಸಮುದಾಯ ನೀರಾವರಿ ಯೋಜನೆಯನ್ನು ತಂದಿದ್ದಾರೆ ಇದಕ್ಕೆ ಇವರು ಕೇವಲ 10 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. 200 ಸಮುದಾಯ ನೀರಾವರಿ ಬಾವಿಗಳಿಗೆ ಹತ್ತ ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಏಕೆಂದರೆ ರಾಜ್ಯದಲ್ಲಿರತಕ್ಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನು ಮುಂದುವರಿಸತಕ್ಕ ಈ ಸರ್ಕಾರ ಹೆಚ್ಚಿಗೆ ಹಣ ಕೊಟ್ಟು ನಿಟವಾಗಿ ಇರತಕ್ಕ ಜಲವನ್ನು ಉಪಯೋಗಿಸಿ ಹೆಚ್ಚು ಉತ್ಪತ್ತ ಮಾಡುವುದಕ್ಕೆ ಅವಕಾಶವಾಗುತ್ತದೆ. ಇದಕ್ಕೆ ಹೆಚ್ಚಿಗೆ ಒದಗಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಮಾನ್ಯ ಘೋರ್ಪಡೆಯವರು ಚೆಕ್ ಡ್ಯಾಮ್ಸ್‌ಗಳಿಗೆ ಹೆಚ್ಚು ಹಣ ಒದಗಿಸಬೇಕೆಂದು ಹೇಳಿದರು. ಆದರೂ ಕೂಡ ನಮ್ಮ ಸರ್ಕಾರದವರು ಇದಕ್ಕೆ ಈ ಸಾರಿ ಬಜೆಟ್ಟಿನಲ್ಲಿ ಹೆಚ್ಚಿಗೆ ಹಣ ಇಟ್ಟಿರುವುದನ್ನು ಸ್ವಾಗತಿಸಿ ಹಿಂದೆ ಇಟ್ಟಿರತಕ್ಕ ಹಣಕ್ಕಿಂತ ಹೆಚ್ಚಿಗೆ ಹಣವನ್ನು ಸರ್ಕಾರ ಇಟ್ಟಿದ್ದಾರೆ. ಇದಕ್ಕೆ ಹೆಚ್ಚಿಗೆ ಹಣವನ್ನು ಇಡಬೇಕು ಮತ್ತು ಇದಕ್ಕೆ ಹೆಚ್ಚಿನೂ ಗಮನ

ಕೊಡಬೇಕೆಂದು ಸರ್ಕಾರದವರಲ್ಲಿ ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಗ್ರಾಮೀಣ ಜನರಿಗೆ ಉದ್ಯೋಗವನ್ನು ಒದಗಿಸುವಾಗಲೂ ನಾನು ಹೇಳಿದ ಪ್ರಕಾರ ಹೆಚ್ಚಿಗೆ ಗಮನ ಕೊಟ್ಟು ಹಾಗೂ ವಿದ್ಯಾಭ್ಯಾಸಕ್ಕೆ ಕೊಟ್ಟಿರತಕ್ಕ ಈ ಸೌಕರ್ಯ ಏನಿದೆ ಇದನ್ನು ಇನ್ನೂ ಹೆಚ್ಚಿಗೆ ಮಾಡಬೇಕು. ಸರ್ಕಾರದಲ್ಲಿ ಟೆಕ್ನಿಕಲ್ ಕೋರ್ಸ್ ಮಾಡತಕ್ಕವರಿಗೆ ಹೆಚ್ಚಿಗೆ ಹಣ ಕೊಡುವುದಕ್ಕಾಗುವುದಿಲ್ಲ. ಅದನ್ನು ಸಹ ತಾವು ಹೆಚ್ಚಿಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪಾಪ್ಯುಲೇಷನ್ ಕಂಟ್ರೋಲ್. ಬಡವರಿಗೆ ಯಾವುದೇ ಒಂದು ಯೋಜನೆ ಊರ್ಜಿತವಾಗ ಬೇಕಾದರೆ ಮೊದಲು ಬರ್ತ್ ಕಂಟ್ರೋಲ್ ಆಗಬೇಕಾಗುತ್ತದೆ. ಬರ್ತ್ ಕಂಟ್ರೋಲ್ ಆಗದೆ ಹೋದರೆ ಯಾವ ಯೋಜನೆಯೂ ಕೂಡ ಇವತ್ತಿನ ದಿವಸ ಉದ್ಧಾರವಾಗುವುದಿಲ್ಲ. ಅದಕ್ಕೋಸ್ಕರ ಫ್ಯಾಮಿಲಿ ಪ್ಲಾನಿಂಗ್ ಏನು ತಂದಿದ್ದೀರಿ ಇದರ ಪ್ರಕಾರ ಕೇವಲ ಒಂದು ಮಗುವಿಗೆ ಅಪರೇಷನ್ ಮಾಡಿಸಿಕೊಂಡರೆ ಆ ಮಗುವಿಗೆ ಇನ್‌ಶೂರೆನ್ಸ್ ಮಾಡಿಸತಕ್ಕ, ಅಥವಾ ಆ ಮಗುವಿಗೆ ವಿದ್ಯಾಭ್ಯಾಸ ಮಾಡಿಸತಕ್ಕ ಪ್ರೋತ್ಸಾಹ ಕಾರ್ಯಕ್ರಮವನ್ನು ತೆಗೆದುಕೊಂಡರೆ ನಿಜವಾಗಿಯೂ ಇದರಿಂದ ಹೆಚ್ಚಿಗೆ ಅನುಕೂಲವಾಗುತ್ತದೆ. ಏನೂ ಕ್ರಮ ಕೈಗೊಳ್ಳದಿದ್ದರೆ ಅನ್ಯಾಯವಾಗುತ್ತದೆ. ಯಾರು ಒಂದೇ ಮಗುವಿಗೆ ಆಪರೇಷನ್ ಮಾಡಿಸಿಕೊಳ್ಳುತ್ತಾರೋ ಅಂಥವರಿಗೆ ಹೆಚ್ಚಿನ ಸೌಕರ್ಯ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರವನ್ನು ತಮ್ಮ ಮೂಲಕ ವಿನಂತಿಕೊಳ್ಳುತ್ತೇನೆ.

ಅಧ್ಯಕ್ಷರು : ಇನ್ನೂ ನೀವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕು.

ಶ್ರೀ ಎಸ್. ಕೃಷ್ಣಪ್ಪ : ತಮ್ಮ ಎಚ್ಚರಿಕೆಯನ್ನು ಗಮನಿಸಿ ಒಂದೇ ನಿಮಿಷದಲ್ಲಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಹಳ್ಳಿಗಾಡಿನಲ್ಲಿ ಬೋರ್‌ವೆಲ್ ಮುಖಾಂತರ ನೀರು ಕೊಟ್ಟು ಇವತ್ತಿನ ದಿವಸ ಎಲ್ಲಾ ಹಳ್ಳಿಗಳಲ್ಲಿ ನೀರು ಇದೆ. ನೀರು ಕೊಟ್ಟ ತಕ್ಷಣ ಚರಂಡಿ ವ್ಯವಸ್ಥೆ ಇಲ್ಲದೆ ಹಳ್ಳಿಗಾಡಿನಲ್ಲಿ ಬಹಳ ತೊಂದರೆಯಾಗುತ್ತಿದೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಈ ಒಂದು ವ್ಯವಸ್ಥೆಗೆ ಹೆಚ್ಚಿಗೆ ಹಣವನ್ನು ಗ್ರಾಮೀಣ ಪ್ರದೇಶಕ್ಕೆ ಕೊಟ್ಟು ನೈರ್ಮಲ್ಯ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಾ ತಾವು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟದ್ದಕ್ಕ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಸನ್ಮಾನ್ಯ ಅಧ್ಯಕ್ಷರೆ, ಕರಾವಳಿ ಪ್ರದೇಶ, ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆ, ಅದರಲ್ಲೂ ಮಂಗಳೂರು ನಗರ ಯಾವ ರೀತಿ ತಿರಸ್ಕೃತವಾಗಿದೆ ಈ ಬಜೆಟ್ಟಿನಲ್ಲಿ, ಯಾವ ರೀತಿ ನೆಗ್ಲೆಕ್ಟ್ ಆಗಿದೆ ಎಂಬ ಮಾಹಿತಿಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. ಮೊಟ್ಟಮೊದಲನೆಯದಾಗಿ ಕುಡಿಯುವ ನೀರಿನ ಸೌಲಭ್ಯ. ನಿನ್ನೆ ನನಗೆ ಮಾಹಿತಿ ಸಿಕ್ಕಿತು. ಮಂಗಳೂರಿನಲ್ಲಿ ಕುಡಿಯುವ ನೀರು ಇಲ್ಲ. ವಿದ್ಯುತ್ ಇಲ್ಲ, ಬಸ್ಸು ಇಲ್ಲ. ಇಂಥ ದುಸ್ಥಿತಿ ನಮಗೆ ಏತಕ್ಕೆ ಬಂದಿದೆ. ನಾವು ಏನು ಪಾಪ ಮಾಡಿದ್ದೇವೆ ಮಂಗಳೂರಿನವರು ಎಂದು ಕೇಳುವಂಥ ಪರಿಸ್ಥಿತಿ ಬಂದಿದೆ. ನಾನು ನೇರವಾಗಿ ಹೇಳುತ್ತೇನೆ, ಸರ್ಕಾರ ಅದಕ್ಕೆ ಜವಾಬ್ದಾರಿ ಇದೆ ಎಂದು. ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಕಳೆದ 3 ತಿಂಗಳುಗಳಿಂದ ಮುಖ್ಯಮಂತ್ರಿಗಳಿಂದ ಮುಖ್ಯಮಂತ್ರಿಗಳಿಂದ

ಹಿಡಿದು ಸಂಬಂಧಪಟ್ಟ ಮಂತ್ರಿಗಳೆಲ್ಲರ ಗಮನಕ್ಕೆ ತಂದರೂ ನಮಗೆ ನೀರು ಸರಬರಾಜು ಯೋಜನೆಗೆ ಕೊಡಬೇಕಾದ 2 ಕೋಟಿ 80 ಲಕ್ಷ ರೂಪಾಯಿ ಸಾಲ, ಅದು ಮಂಜೂರಾಗಿದ್ದರೂ ಆ ಸಾಲವನ್ನು ಕೊಡುವುದಕ್ಕೆ ಆಗಿಲ್ಲವೆಂದರೆ ಏನು ಅರ್ಥ ಎಲ್ಐಸಿಯಿಂದ 7 ಕೋಟಿ ರೂಪಾಯಿಗಳ ಸಾಲದಲ್ಲಿ ಎರಡು ಕೋಟಿ ರೂಪಾಯಿ ಮಾತ್ರ ಬಂದಿದೆ; ಇನ್ನು 5 ಕೋಟಿ ರೂಪಾಯಿ ಸಾಲ ಬಂದಿಲ್ಲ. ಇಂಥ ದುಸ್ಥಿತಿಯಲ್ಲಿ ನಮ್ಮ ಸಮಗ್ರ ನೀರು ಸರಬರಾಜು ಯೋಜನೆ ಯಾವ ರೀತಿ ದುಸ್ಥಿತಿಯಲ್ಲಿದೆ ಎಂಬುದನ್ನು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛಿಸುತ್ತೇನೆ. ಇದರ ಜೊತೆಯಲ್ಲಿ ಮಂಗಳೂರಿನಲ್ಲಿ ವಿದ್ಯುತ್ ಸ್ಫೋಟ ಆಯಿತು. ಸುಮಾರು 25 ವರ್ಷಗಳಿಂದ ಅಲ್ಲಿರತಕ್ಕ ಉಪಕರಣವನ್ನು ಬದಲಾವಣೆ ಮಾಡತಕ್ಕದ್ದಕ್ಕೆ ಯಾವ ರೀತಿಯ ಕಾರ್ಯಕ್ರಮವನ್ನು ಮಾಡಿಲ್ಲ. ಅರ್ಧ ಕಿಲೋಮೀಟರ್ ಉದ್ದ ಲೈನು ಉರಿದು ಹೋಯಿತು. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಬೇರೆ ಎಲ್ಲಾ ಕಡೆಗಳಲ್ಲಿ 2 ರಿಂದ 4ನೇ ಹಂತದ ನೀರು ಸರಬರಾಜು ಯೋಜನೆ ಆಗಿದ್ದರೆ, ಬೆಂಗಳೂರಿನಲ್ಲಿ 4ನೇ ಹಂತದ ಯೋಜನೆ ಇದ್ದರೆ ಮಂಗಳೂರಿನಲ್ಲಿ ಇನ್ನೂ 2ನೇ ಹಂತದ ಯೋಜನೆಯನ್ನು ತರುವುದಕ್ಕೆ ಆಗಿಲ್ಲ. ನಮ್ಮನ್ನು ಏತಕ್ಕೆ ದೂರು ಇಟ್ಟಿದ್ದೀರಿ, ನೆಗ್ಲೆಕ್ಟ್ ಮಾಡುತ್ತಿದ್ದೀರೆಂದು ಕೇಳುತ್ತಿದ್ದೇನೆ. ಸಿಕ್ಕಿದ ಕಡೆಗಳಲ್ಲೆಲ್ಲ ಡ್ರೈನೇಜ್ ಸ್ಫೋಟವಾಗುತ್ತಿದೆ. ಇನ್ನು ನಮಗೆ ಯಾವ ರೀತಿ ರೇಷನ್ ಅಕ್ಕಿ ಕೊಡುತ್ತಿದ್ದೀರಿ ಎಂಬುದಕ್ಕೆ ನಮಗೆ ಕೊಡುವ ರೇಷನ್ ಅಕ್ಕಿಯನ್ನು ನಾನು ತಿಂದಿದ್ದೇನೆ. ಅದು ಜನರು ತಿನ್ನುವ ರೇಷನ್ ಅಕ್ಕಿ ಅಲ್ಲ. ದನಗಳು ಕೂಡ ತಿನ್ನುವುದು ಕಷ್ಟ. ಅಂಥ ರೇಷನ್ ಅಕ್ಕಿಯನ್ನು ನಮಗೆ ವಿತರಣೆ ಮಾಡುತ್ತಿದ್ದಾರೆ. ದಯವಿಟ್ಟು ಇದನ್ನು ಪರಿಶೀಲಿಸಿ ಸಂಬಂಧಪಟ್ಟ ಇಲಾಖೆಗೆ ಹೇಳಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಅದೇ ರೀತಿ, ಮಂಗಳೂರು ಮೀನುಗಾರರ ಸಮಸ್ಯೆ. ಈ ಬಗ್ಗೆ ಕಳೆದ 3 ತಿಂಗಳುಗಳಿಂದ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ ಒಂದು ಕೋ-ಅಪರೇಟೀವ್ ಸೊಸೈಟಿ ಮೂಲಕ ವಿಚಾರ ಸಂಕೀರ್ಣ ಮಾಡುವುದಕ್ಕೆ ಅವಕಾಶ ಕೊಡಿ, ಅದರ ಜೊತೆಯಲ್ಲಿ ಮೀನುಗಾರರಿಗೆ ಬೇಕಾದ ಸೌಲಭ್ಯ, ಲ್ಯಾಟ್ರಿನ್ ಸೌಲಭ್ಯ ಇದಕ್ಕೆಲ್ಲ ವ್ಯವಸ್ಥೆ ಮಾಡಿ ಕೊಡಬೇಕೆಂದು ಹಲವಾರು ಬಾರಿ ಹೇಳಿದರೂ ಯಾವುದೂ ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ. ಅದರ ಜೊತೆಯಲ್ಲಿ ನಾನು ಕೇಳುತ್ತಿದ್ದೇನೆ, 5 ಟ್ರಾನ್ಸ್‌ಮಿಟರ್ ಜನರೇಟ್ ಮಾಡಬೇಕೆಂದು ಏನು ಯೋಜನೆಗಳನ್ನು ಹಾಕಿಕೊಂಡಿದ್ದೀರಿ, ಐಟಿಐ ಮೂಲಕ ಎಜುಕೇಷನ್ ಕೊಡುವ ಮೂಲಕ ಏನು ಒಂದು ಅಳವಡಿಸುವಂಥ ವ್ಯವಸ್ಥೆ ಇದೆ ಅದೂ ಕೂಡ ಮಾಡಿಲ್ಲ. ಖಾಸಗೀ ಸಂಸ್ಥೆಗಳು ಇವೆ, ಐಟಿಐ ಸಂಸ್ಥೆಗಳು ಇವೆ, ಇದರ ಬಗ್ಗೆ ವೃತ್ತಿ ತರಬೇತಿ ಶಿಕ್ಷಣ ಕೊಟ್ಟರೆ ಅನುಕೂಲವಾಗುತ್ತದೆ. ಅವರಿಗೆ ಯಾವುದೇ ರೀತಿಯಲ್ಲಿ ಅನುದಾನ ಕೊಟ್ಟಿಲ್ಲ. ಅದರ ಬಗ್ಗೆ ಸೀರಿಯಸ್ ಆಗಿ ಗಮನಿಸಬೇಕು. ವೃತ್ತಿ ತರಬೇತಿ ಕೊಡುವ ವ್ಯವಸ್ಥೆ ಮಾಡಬೇಕು. ಇವತ್ತಿನ ದಿವಸ ಅರೆಕಾಲಿಕ ಶಿಕ್ಷಕರು 600-800 ರೂಪಾಯಿ ಸಂಬಳಕ್ಕೆ ಕೆಲಸ ಮಾಡುತ್ತಿದ್ದಾರೆ. ತಾವು ಕಲಿಸುವ ವಿದ್ಯಾರ್ಥಿಗಳು ಇವತ್ತು 2-3 ಸಾವಿರ ರೂಪಾಯಿ ಸಂಬಳ ಪಡೆಯುವ ದುಸ್ಥಿತಿ ಬಂದಿದೆ. ಏಕೆಂದರೆ ಕಾನೂನು ತೊಡಕುಗಳಿಂದಾಗಿ ಹತ್ತು ವರ್ಷಗಳಿಂದ ಇರತಕ್ಕ ಅರೆಕಾಲಿಕ ಶಿಕ್ಷಕರ ದುಸ್ಥಿತಿ ಆಗಿದೆ. ಅದರ ಬಗ್ಗೆ ತಾವು ಗಮನ ಹರಿಸಬೇಕು. ಅದೇ ರೀತಿ ಇವತ್ತು ಅನಾಥಾಶ್ರಮಗಳಿಗೆ ಪ್ರೋತ್ಸಾಹ ಸಿಗದೆ, ಗ್ರಾಂಟ್ ಸಿಗದೆ ಅನಾಥ ಮಕ್ಕಳಿಗೆ

ಸರಿಯಾಗಿ ಊಟ ಮಾಡುವ ಸ್ಥಿತಿಯಲ್ಲಿ ಇಲ್ಲ. ಅಲ್ಲಿ ಒಂದು ರೀತಿಯ ದುಃಖಕರ ವಾತಾವರಣ ಇದೆ. ಅದರ ಜೊತೆಯಲ್ಲಿ ಕನಿಷ್ಠ ವೃದ್ಧಾಪ್ಯ ವೇತನ, ಅಂಗವಿಕಲರ ವೇತನ ಇವುಗಳನ್ನು ಕನಿಷ್ಠ 150 ರೂಪಾಯಿಗಳಾದರೂ ಏರಿಸಬೇಕು. ಅವರಿಗೆ ಎರಡು ಹೊತ್ತು ಗಂಜಿ ಊಟ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಕ್ರೀಡೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಕ್ರೀಡೆಗೆ ಸಂಬಂಧಪಟ್ಟ ಗ್ರಾಂಟ್ 3 ವರ್ಷಗಳಿಂದ ಕಡಿಮೆಯಾಗುತ್ತಾ ಹೋಗುತ್ತಿದೆ. ಯಾವುದೇ ಅರ್ಹತೆ ಆಧಾರದ ಮೇಲೆ ಹೋಗುತ್ತಿಲ್ಲ. ರಾಜಕೀಯ ಶಿಫಾರಸ್ಸು ಅಥವಾ ಅಧಿಕಾರಿಗಳ ಶಿಫಾರಸ್ಸುಗಳ ಆಧಾರದ ಮೇಲೆ ಇವತ್ತು ಕ್ರೀಡಾಕೂಟಕ್ಕೆ ಹೋಗುವ ದುಸ್ಥಿತಿ ಬಂದಿದೆ. ಅದನ್ನು ನಿವಾರಣೆ ಮಾಡಿ ಇವತ್ತು ಅರ್ಹತೆ ಆಧಾರದ ಮೇಲೆ ಸವಲತ್ತುಗಳನ್ನು ನಮ್ಮ ಕ್ರೀಡಾಪಟುಗಳಿಗೆ ಕೊಡಬೇಕು. ಅದರ ಜೊತೆಯಲ್ಲಿ ವಿಶೇಷವಾಗಿ ಕೇಳುವಂಥದ್ದು, ಯಾರು ರಾಷ್ಟ್ರ ಮಟ್ಟದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುತ್ತಿದ್ದಾರೆ ಅವರಿಗೆ ಕನಿಷ್ಠವಾಗಿ ಬೇಕಾದಂಥ 'ಆನ್‌ಡ್ಯೂಟಿ ಲೀವ್' ಸ್ಯಾಂಕ್ಷನ್ ಮಾಡತಕ್ಕ ವ್ಯವಸ್ಥೆ ಆಗಬೇಕು. ಅವರಿಗೆ ಬೇಕಾದ ಎಲ್ಲಾ ತರಹ ಪ್ರವಾಸ ಭತ್ಯೆಗಳನ್ನು ಮತ್ತಿತರ ಸೌಲಭ್ಯಗಳನ್ನು ಕೊಡತಕ್ಕ ವ್ಯವಸ್ಥೆಯನ್ನು ತಾವು ಮಾಡಬೇಕು. ವಿಶೇಷವಾಗಿ ಸೇಲ್ಸ್ ಟ್ಯಾಕ್ಸ್ ಬಗ್ಗೆ ಹೇಳುವುದಾದರೆ ಬಹುಶಃ 5-10 ವರ್ಷಗಳ ಹಿಂದೆ ಯಾವ ರೀತಿ ಚೆಕ್ ಪೋಸ್ಟ್‌ಗಳಲ್ಲಿ ದಿನಗಟ್ಟಲೆ ಲಾರಿಗಳನ್ನು ನಿಲ್ಲಿಸುತ್ತಿದ್ದರು ಅದೇ ರೀತಿ ವ್ಯವಸ್ಥೆ ಇವತ್ತಿಗೂ ಇದೆ. ಇವತ್ತು ಕಂಪ್ಯೂಟರೈಸೇಷನ್ ಮಾಡಿ ವ್ಯವಸ್ಥೆ ಮಾಡುವಂಥ ಅನೇಕ ಮಾರ್ಗಗಳನ್ನು ಕಾಣುತ್ತಿದ್ದೇನೆ. ಯಾವ ರೀತಿ ಸರಳೀಕರಣ ಮಾಡಬೇಕೆಂದು ತಾವು ಯೋಚನೆ ಮಾಡಬೇಕು. ಸಿಂಗಲ್ ಪಾಯಿಂಟ್‌ಗೆ ಹೋಗುವ ದಿಟ್ಟ ಹೆಜ್ಜೆಯನ್ನು ಇಟ್ಟಿದ್ದೀರಿ. ಲಿಕ್ಕರ್ ಬಿಟ್ಟು ಎಲ್ಲಾ ವಸ್ತುಗಳಿಗೆ ಅದನ್ನು ಅಳವಡಿಸಿಬೇಕೆಂದು ನಾನು ಒತ್ತಾಯಪೂರ್ವಕವಾಗಿ ಅಗ್ರಹಪಡಿಸುತ್ತೇನೆ. ಇನ್‌ಕಂ ಟ್ರಾಕ್ಸ್ ಯಾವುದೇ ಇದೆ ಅದರ ಬಗ್ಗೆ ಹೇಳುವುದಾದರೆ, ಬಹುಶಃ ಪತ್ರಿಕಾ ಪ್ರಚಾರದ ಮೂಲಕ 40 ಸಾವಿರಕ್ಕಿಂತ ಜಾಸ್ತಿ ಸಂಪಾದನೆ ಇದ್ದವರು 1400 ರೂಪಾಯಿ ಕೊಟ್ಟರೆ ಅದು ವರ್ಷಕ್ಕೆ ಬರುತ್ತದೆ. ಯಾವುದೇ ರೀತಿಯ ಹೆರಾಸ್‌ಮೆಂಟ್ ವಾತಾವರಣ ಬರುವುದಿಲ್ಲ. ಆದರೆ ಇವತ್ತು ಸೇಲ್ಸ್ ಟ್ಯಾಕ್ಸ್ ಅಫೀಸ್‌ನಲ್ಲಿ ಯಾವನೇ ಸಣ್ಣ ವ್ಯಾಪಾರಿ ಹೋದರೆ, ಅಲ್ಲಿ ಯಾವ ರೀತಿ ದುಸ್ಥಿತಿ ಇದೆ ಎಂದರೆ ತಮಗೆ ಗೊತ್ತಿರಬಹುದು. ಎಲ್ಲಾ ಕ್ಲರ್ಕ್‌ಗಳಿಂದ, ಅಟೆಂಡರ್‌ಗಳಿಂದ ಹಿಡಿದು ಮೇಲಿನ ಅಧಿಕಾರಿಗಳವರೆಗೆ ಯಾವ ರೀತಿ ವರ್ತಿಸುತ್ತಿದ್ದಾರೆ, ಯಾವ ರೀತಿ ನಿರೀಕ್ಷಿಸುತ್ತಿದ್ದಾರೆಂಬುದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತಿದ್ದೇನೆ. ಅದೇ ರೀತಿ ವಾರ್ಷಿಕ ವಹಿವಾಟು 60 ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿರತಕ್ಕಂಥ ವ್ಯಾಪಾರಸ್ಥರ ಲೆಕ್ಕವನ್ನು ಆಡಿಟ್ ಮಾಡತಕ್ಕಂಥ ಸಲಹೆಯನ್ನು ಇಟ್ಟಿದ್ದೀರಿ. ಅದರ ಬಗ್ಗೆ ತಾವು ಮರುಪರಿಶೀಲನೆ ಮಾಡಬೇಕು. ಏಕೆಂದರೆ 40 ಲಕ್ಷಕ್ಕಿಂತ ಜಾಸ್ತಿ ವಹಿವಾಟು ಇದ್ದವರು ಆದಾಯ ತೆರಿಗೆಯಲ್ಲಿ ಕಡ್ಡಾಯ ಆಡಿಟ್ ಮಾಡಬೇಕೆಂದಿದೆ. ತಾವು ಪುನಃ ಆಡಿಟ್ ಮಾಡಬೇಕಾದರೆ ಡ್ಯೂಪ್ಲಿಕೇಷನ್ ಆಫ್ ವರ್ಕ್ ಆಗುವುದರಿಂದ ಇದರ ಬಗ್ಗೆ ತಾವು ಮರುಪರಿಶೀಲನೆ ಮಾಡಬೇಕು ಅದೇ ರೀತಿ ಕೇರಳದಲ್ಲಿ ಅಡಿಕೆಗೆ 1. ರೂ. 50 ಪೈಸೆ ಮಾತ್ರ ಅಡಿಷನಲ್ ಚಾರ್ಜಸ್ ಎಂದು ತೆಗೆದುಕೊಳ್ಳುತ್ತಿದ್ದಾರೆ. ಅಲ್ಲಿ ಬಹುಶಃ 5-25 ರೂ. ಬರುವುದಾಗಿದ್ದರೆ ಕರ್ನಾಟಕದಲ್ಲಿ ಅಡಿಕೆಗೆ ಸೇಲ್ಸ್ ಟ್ಯಾಕ್ಸ್ 6 ಪರ್ಸೆಂಟ್, ಏಜೆನ್ಸಿ ಮಾರ್ಕೆಟ್ ಸೆಸ್ 1 ಪರ್ಸೆಂಟ್, ಕಮೀಷನ್ 2 ಪರ್ಸೆಂಟ್

ವಹಿವಾಟಿನ ತೆರಿಗೆ 1.25 ಪರ್ಸೆಂಟ್ ಒಟ್ಟು 10.25 ಪರ್ಸೆಂಟ್ ಬರುತ್ತದೆ, ಈ ರೀತಿಯಾಗಿದ್ದರೆ ಹೇಗೆ? ತಾವು ಇದರ ಬಗ್ಗೆ ಯೋಚನೆ ಮಾಡಬೇಕು. ತೆರಿಗೆ ಯಾವ ರೀತಿ ಪೋಲಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಕೇರಳದಲ್ಲಿ 5.25 ಪರ್ಸೆಂಟ್ ಇದ್ದರೆ ಇಲ್ಲಿ 10.25 ಪರ್ಸೆಂಟ್ ಬರುತ್ತದೆ. ಅದರ ಪರಿಣಾಮವಾಗಿ ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲಿ ಮಮೂಲಿ ಲಂಚವನ್ನು ಕೊಟ್ಟು ಸುಮಾರು 70 ಪರ್ಸೆಂಟ್‌ನಷ್ಟು ಅಡಿಕೆ ಹೊರಗೆ ಹೋಗುತ್ತಿರುವ ಬಗ್ಗೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಮ್ಮ ಜಿಲ್ಲೆಗೆ ಇವತ್ತು ಕಾಸರಗೋಡಿನಿಂದ ಸೋಪುಗಳು, ಡಿಟರ್‌ಜೆಂಟ್‌ಗಳು ಸ್ಮಗಲ್ ಆಗಿ ಬರತಕ್ಕ ದುಸ್ಥಿತಿ ಬಂದಿದೆ. ಏಕೆಂದರೆ, ಕೇರಳದಲ್ಲಿ 10 ಪರ್ಸೆಂಟ್ ತೆರಿಗೆ ಇದ್ದರೆ ಇಲ್ಲಿ ಸರ್‌ಚಾರ್ಜ್ 14 ಪರ್ಸೆಂಟ್ ಇದೆ. ಸುಮಾರು ನಾಲ್ಕು ಪರ್ಸೆಂಟ್ ವ್ಯತ್ಯಾಸವಿರುವುದರಿಂದ ಸಾಕಷ್ಟು ಸಮಸ್ಯೆ ಬರುತ್ತಿದೆ. ಇನ್ನು ವೃತ್ತಿತೆರಿಗೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಮುಖ್ಯವಾಗಿ ಆದಾಯ ತೆರಿಗೆಯಲ್ಲಿ ಅಬ್ಜಕ್ಷನ್ ಬರತಕ್ಕ ಅವಕಾಶವಿರುವುದರಿಂದ ನಾನು ತಿಳಿಸುವುದೇನೆಂದರೆ, ಆದಾಯ ತೆರಿಗೆಯಿಂದ ನಮ್ಮ ಪಾಲು 77.5 ಪರ್ಸೆಂಟ್ ಬರುವುದರಿಂದ ಈ ವೃತ್ತಿ ತೆರಿಗೆಯನ್ನು ಏರಿಸತಕ್ಕ ಅವಶ್ಯಕತೆ ಇಲ್ಲ, ಅದನ್ನು ರದ್ದು ಮಾಡಬೇಕು. ಮತ್ತು ವೃತ್ತಿಯು ಪ್ರತಿಯೊಬ್ಬರ ಮೂಲಭೂತವಾದ ಹಕ್ಕು. ಆದ್ದರಿಂದ ವೃತ್ತಿ ತೆರಿಗೆಯನ್ನು ರದ್ದುಪಡಿಸಬೇಕೆಂದು ಹೇಳುತ್ತೇನೆ. ಇನ್ನು ಭ್ರಷ್ಟಾಚಾರ ಮುಕ್ತ ಆಡಳಿತಕ್ಕಾಗಿ ಸರ್ಕಾರವೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಅದೇ ರೀತಿ ಜನಸಂಪರ್ಕ ಕಾರ್ಯಕ್ರಮವನ್ನು ಕಡ್ಡಾಯವಾಗಿ ಮಾಡಬೇಕು. ಆ ಮೂಲಕ ಸುಧಾರಣೆಯನ್ನು ತರಬೇಕು. ಅದೇ ರೀತಿ ಪ್ರತಿಯೊಬ್ಬ ಹಿರಿಯ ಅಧಿಕಾರಿಗಳು ಕೊನೆಯ ಪಕ್ಷ ಎರಡು ತಿಂಗಳಿಗೆ ಒಂದು ಸಾರಿಯಾದರು ಜನಸಂಪರ್ಕ ಕಾರ್ಯಕ್ರಮವನ್ನು ಮಾಡಿಕೊಂಡು ಜನರಿಗೆ ಸ್ಪಂದಿಸತಕ್ಕ ವ್ಯವಸ್ಥೆಯನ್ನು ಮಾಡಿಕೊಡಬೇಕು. ಜನರಿಗೆ ಅಕೌಂಟಬಲಿಟಿಯಾಗತಕ್ಕ ವ್ಯವಸ್ಥೆಯನ್ನು ಮಾಡಿಕೊಡಬೇಕು. ಬಜೆಟ್‌ಗೆ ಅನೇಕ ಇತಿಮಿತಿಗಳ ಅಗತ್ಯವಿದೆ. ಅದನ್ನು ಬಜೆಟ್‌ನಲ್ಲಿ ಅಳವಡಿಸುವ ಬಗ್ಗೆ, ದಕ್ಷತೆಯಿಂದ, ಪ್ರಾಮಾಣಿಕವಾಗಿ ಜಾರಿಗೆ ತರುವ ಬಗ್ಗೆ, ಸೇವಾ ಮನೋಭಾವವನ್ನು ಬೆಳೆಸುವ ಬಗ್ಗೆ ಯಾವ ತರಬೇತಿ ಕಾರ್ಯಕ್ರಮಗಳನ್ನು ತಾವು ಹಾಕಿಕೊಂಡಿದ್ದೀರಿ ಎಂಬುದನ್ನು ಕೇಳುತ್ತೇನೆ. ಇನ್ನು 30 ಪರ್ಸೆಂಟ್‌ಗಿಂತ ಹೆಚ್ಚು ರೆವಿನ್ಯೂ ಆದಾಯ ಸರ್ಕಾರಿ ನೌಕರರ ಸಂಬಳವಾಗಿ ವ್ಯಯ ಮಾಡುವಾಗ, ಸರ್ಕಾರ ಅಧಿಕಾರಿಗಳ ಮೂಲಕ, ಸಿಬ್ಬಂದಿಗಳ ಮೂಲಕ ರಿಸೆಲ್ಟ್ ಓರಿಯೆಂಟೆಡ್ ಕೆಲಸವನ್ನು ಮತ್ತು ಟೈಮ್ ಮೇನೇಜ್‌ಮೆಂಟ್‌ನ್ನು ಸರಿಯಾಗಿ ಪಾಲನೆ ಮಾಡತಕ್ಕ ವ್ಯವಸ್ಥೆ ಸಾಧ್ಯವಾದರೆ ನಿಜವಾಗಿಯೂ ಅವರಿಂದ ಸೇವೆಯನ್ನು ಸರಿಯಾಗಿ ಪಡೆಯಲು ಸಾಧ್ಯವಾಗುತ್ತದೆ. ನನ್ನ ಮಿತ್ರರು ಹೇಳಿದಂತೆ ಮೊದಲು ನಾವು ಪ್ರಾಮಾಣಿಕರಾಗೋಣ. ಜನರಿಗೆ ದಕ್ಷತೆಯನ್ನು ಮೂಡಿಸುವಲ್ಲಿ ಕೆಲಸ ಮಾಡೋಣ ಅದರ ಜೊತೆಯಲ್ಲ ಶಾಂತಿಯುತ ಹಾಗೂ ಸಶಕ್ತ ಕರ್ನಾಟಕ ರಾಜ್ಯವನ್ನು ಕಟ್ಟತಕ್ಕ ಕೆಲಸಕ್ಕೆ ನಾವೆಲ್ಲರೂ ಜೊತೆಯಾಗಿ ಕೆಲಸ ಮಾಡೋಣವೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಸನ್ಮಾನ್ಯ ಅಧ್ಯಕ್ಷರೆ, ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಹೊಸದಾದ ಸರ್ಕಾರ ರಚನೆಯಾದಮೇಲೆ ಹೊಸ ಸರ್ಕಾರದ ಬಜೆಟ್‌ನ

ಬಗ್ಗೆ ಚಿಂತನೆ ಬಹಳಷ್ಟು ನಿರೀಕ್ಷೆಯನ್ನು ಮಾಡಿದ್ದರು. ಆದರೆ ಆ ನಿರೀಕ್ಷೆಯ ಮಟ್ಟಕ್ಕೆ ಈ ಬಜೆಟ್ ಹೋಗಲಿಲ್ಲವೆನ್ನತಕ್ಕ ಅಭಿಪ್ರಾಯದೊಂದಿಗೆ ನಾನು ಒಂದರೆಡು ಮಾತುಗಳನ್ನು ಹೇಳಬಯಸುತ್ತೇನೆ. ಬಜೆಟ್‌ನ ಸರ್ವಾಂಗೀಣ ವಿಮರ್ಶೆ ಈಗಾಗಲೆ ಆಗಿದೆ. ನಾನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಒಂದೆರಡು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಭಾರತದಲ್ಲಿ ಕರ್ನಾಟಕ ರಾಜ್ಯವು ರೇಷ್ಮೆಯಲ್ಲಿ ಮೊದಲ ಸ್ಥಾನವನ್ನು ಪಡೆದುಕೊಂಡಿದೆ. ಕರ್ನಾಟಕದ ಕುಣಿಗಲ್ ತಾಲ್ಲೂಕು, ತುಮಕೂರಿನ ಸ್ವಲ್ಪಭಾಗ ಮತ್ತು ಮಾಗಡಿ ತಾಲ್ಲೂಕು, ಮೈಸೂರು ಬಿತ್ತನೆಯ ವಲಯವೆಂದೇನು ಹೇಳುತ್ತಾರೆ ಇದು ರೇಷ್ಮೆ ಕೃಷಿಕರ ಹೃದಯ ಭಾಗ. ಇವತ್ತು ಸರ್ಕಾರಕ್ಕೆ ರೇಷ್ಮೆ ಕೃಷಿಯಿಂದ ಆದಾಯ, ವಿದೇಶಿ ವಿನಿಮಯ ಬರುತ್ತಿದೆ. ಆದರೆ ರೇಷ್ಮೆ ಕೃಷಿಕರ ಜೀವನ ಉತ್ತಮವಾಗಿಲ್ಲ. ಇದರ ಬಗ್ಗೆ ಬಜೆಟ್‌ನಲ್ಲಿ ನಿರ್ದಿಷ್ಟವಾದ ಯಾವುದೇ ಕಾರ್ಯಕ್ರಮಗಳು ಕಾಣಿಸುತ್ತಿಲ್ಲ. ಮೈಸೂರು ಬಿತ್ತನೆ ವಲಯದಲ್ಲಿ ರೇಷ್ಮೆ ಬೆಳೆಗಾರರು ತಾವು ಬೆಳೆದಂಥ ರೇಷ್ಮೆಯನ್ನು ಕಿತ್ತು ಹಾಕತಕ್ಕ ಪರಿಸ್ಥಿತಿ ಬಂದಿದೆ. ಇವರುಗಳಿಗೆ ಸರಿಯಾದ ಸೌಲಭ್ಯಗಳಿಲ್ಲ. ಅವರು ರೇಷ್ಮೆ ಹುಳುಗಳನ್ನು ಸಾಕಲು ಪ್ರತ್ಯೇಕವಾದ ಮನೆಯನ್ನು ಮಾಡಿಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ. ಅವರಿಗಿರುವ ಜಮೀನುಗಳಲ್ಲಿ ಬೋರ್‌ವೆಲ್‌ನ್ನು ಹಾಕಿಸಿಕೊಳ್ಳುವ ಪರಿಸ್ಥಿತಿಯಲ್ಲಿ ಅವರಿಲ್ಲ. ಇದಕ್ಕಾಗಿ ಸರ್ಕಾರವೇ ಮುಂದೆ ಬಂದು ಬ್ಯಾಂಕ್‌ಗಳ ಮೂಲಕ ಅವರುಗಳಿಗೆ ಸಾಲಸೌಲಭ್ಯವನ್ನು ಒದಗಿಸತಕ್ಕ ಪರಿಸ್ಥಿತಿಯಲ್ಲಿ ಇಲ್ಲ. ಬಜೆಟ್‌ನ 28ನೇ ಪುಟವನ್ನು ನೋಡಿದಾಗ ರೇಷ್ಮೆಗೆ ಯಾವುದೇ ಕಾರ್ಯಕ್ರಮವಿಲ್ಲ. ಕರ್ನಾಟಕಕ್ಕೆ ಭಾರತ ದೇಶದಲ್ಲಿ ಈ ಬೆಳೆಗೆ ಒಂದು ಸ್ಥಾನ ಸಿಕ್ಕಿದ್ದರೂ ಸಹ ನಮ್ಮ ರೇಷ್ಮೆ ಕೃಷಿಕರ ಬಗ್ಗೆ ಚಿಂತನೆ ಮಾಡತಕ್ಕ ಕಾರ್ಯಕ್ರಮಗಳು ಬಜೆಟ್‌ನಲ್ಲಿ ಇಲ್ಲ. ಆದುದರಿಂದ ದಯಮಾಡಿ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ರೇಷ್ಮೆ ಕೃಷಿಕರ ಬಗ್ಗೆ ಚಿಂತನೆ ಮಾಡಬೇಕು. ಕರ್ನಾಟಕಕ್ಕೆ ಗೌರವವನ್ನು ತಂದುಕೊಡತಕ್ಕ ಈ ಕೃಷಿಯ ಪರಿಸ್ಥಿತಿಯನ್ನು ಉತ್ತಮ ಪಡಿಸಬೇಕು, ಇಲ್ಲದಿದ್ದರೆ ಒಂದಲ್ಲಾ ಒಂದು ದಿವಸ ಈ ಉದ್ಯಮವೇನಿದೆ ಇದು ನಾಶವಾಗತಕ್ಕ ಸಾಧ್ಯತೆ ಇದೆ. ಆದುದರಿಂದ ರೇಷ್ಮೆ ಕೃಷಿಕರ ಬಗ್ಗೆ ನನ್ನ ಸಲಹೆ ಇದು. ಇನ್ನು ವಿದ್ಯುಚ್ಛಕ್ತಿಯ ಬಗ್ಗೆ ಸಾಕಷ್ಟು ಚರ್ಚೆ ಇಲ್ಲಿ ಆಗಿದೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಒಂದು ವಿಚಾರವನ್ನು ಹೇಳ ಬಯಸುತ್ತೇನೆ. ತುಮಕೂರು ಜಿಲ್ಲೆಯ ವಿದ್ಯುಚ್ಛಕ್ತಿ ಅಧಿಕಾರಿಗಳನ್ನು ಭೇಟಿ ಮಾಡಿದಾಗ ಅವರು ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನಲ್ಲಿ ಬಹಳಷ್ಟು ಓಲ್ಟೇಜ್ ತೊಂದರೆ ಇಧೆ ಎಂದು ಒಪ್ಪಿಕ್ಕೊಂಡಿದ್ದಾರೆ. ಹಿಂದೆ ಇದ್ದ ಸಚಿವರೂ ಸಹ ಇಲ್ಲಿ ಇದ್ದಾರೆ. ಅವರಿಗೆ ಇದು ಗೊತ್ತಿರಬಹುದು. ಆದ್ದರಿಂದ ಕುಣಿಗಲ್ ತಾಲ್ಲೂಕಿನಲ್ಲಿ 220 ಕೆ.ವಿ.ಯ ಒಂದು ಟ್ರಾನ್ಸ್‌ಮಿಷನ್ ಸ್ಟೇಷನ್‌ನ್ನು ದಯಮಾಡಿ ಮಾಡಿಕೊಡಬೇಕು. ಇಲ್ಲ ಸುಮಾರು ಎಂಟು ಸಾವಿರಕ್ಕಿಂತ ಹೆಚ್ಚಾಗಿ ಐಪಿ ಸೆಟ್ಟುಗಳಿವೆ. ಬೋರ್‌ವೆಲ್‌ಗಳ ಮೋಟಾರ್‌ಗಳನ್ನು ಓಡಿಸಲಾಗದೆ ಬೆಳೆಯನ್ನು ಬೆಳೆಯಲಾಗದೆ ಪರಿತಪಿಸುತ್ತಿದ್ದಾರೆ. ಕುಣಿಗಲ್ ತಾಲ್ಲೂಕಿನಲ್ಲಿ ವಿದ್ಯುತ್ತಿನ ತೀವ್ರವಾದ ಅಭಾವವಿದೆ. ಇಂಥ ಪರಿಸ್ಥಿತಿ ಎಲ್ಲಾ ಕಡೆ ಇರಬಹುದು. ಆದರೆ ಕುಣಿಗಲ್‌ನಲ್ಲಿ ತೀವ್ರವಾಗಿದೆ. ಆದ್ದರಿಂದ ನನ್ನ ಕ್ಷೇತ್ರದಲ್ಲಿ 220 ಕೆ.ವಿ. ಸ್ಟೇಷನ್‌ನ್ನು ದಯಮಾಡಿ ಮಾಡಬೇಕೆಂದು ಅಧ್ಯಕ್ಷರು ಮೂಲಕ ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇರುವುದರಿಂದ ಒಂದು ಮಾತನ್ನು ಕೇಳಲೇ ಬೇಕಾಗುತ್ತದೆ.

ನಾವೇನು ನೀರಾವರಿಯ ಬಗ್ಗೆ ನಿರೀಕ್ಷೆ ಮಾಡಿದೆವೋ ಅದಕ್ಕೆ ಪೂರಕವಾದಂಥ ಬಜೆಟ್ ಈ ವರ್ಷ ಸಿಗಲಿಲ್ಲ. ಅದರಲ್ಲೂ ವಿಶೇಷವಾಗಿ ಅದಕ್ಕೆ ಪೂರಕವಾದಂಥ ಬಜೆಟ್ ಈ ವರ್ಷ ಸಿಗಲಿಲ್ಲ. ಅದರಲ್ಲೂ ವಿಶೇಷವಾಗಿ ಕಾವೇರಿ ಜಲಾಯನ ಪ್ರದೇಶದಲ್ಲಿನ ಹೇಮಾವತಿ ನಾಲೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಾನು ಈ ಹಿಂದೆ ಸದನದಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ ಮುಖ್ಯಮಂತ್ರಿಗಳು ಕೆಲವು ನಿಯಮಾವಳಿಗಳ ಚೌಕಟ್ಟಿನಲ್ಲಿ ಈ ಕಾಮಗಾರಿಯನ್ನು ಸ್ಥಗಿತ ಮಾಡಿದ್ದೇವೆ ಅದನ್ನು ಮಾಡುತ್ತೇವೆಂದು ಹೇಳಿದ್ದರು. ಆದರೆ ಮುಖ್ಯಮಂತ್ರಿಗಳು ಇದರ ಬಗ್ಗೆ ನಿರ್ದಿಷ್ಟವಾದ ನಿಲುವನ್ನು ಹೇಳದೆ ಇರುವುದರಿಂದ ಇವತ್ತು ಈ ಕಾಮಗಾರಿಯ ಬಗ್ಗೆ ಗೊಂದಲ, ಅನುಮಾನ ಉಂಟಾಗಿದೆ. ಬಜೆಟ್‌ನಲ್ಲಿ ಕೃಷ್ಣಾ ಮೇಲ್ದಂಡೆ, ಹಾರಂಗಿ, ಮತ್ತು ಬೇರೆ ಬೇರೆ ಕಾಮಗಾರಿಯ ಬಗ್ಗೆ ನಮೂದಾಗಿರು ವುದರಿಂದ, ಹೇಮಾವತಿ ಕಾಮಗಾರಿಯ ಬಗ್ಗೆ ಒಂದು ಮಾತು ಸಹ ಇಲ್ಲದಿರುವುದರಿಂದ ನಮಗೆ ಇದರ ಬಗ್ಗೆ ಅನುಮಾನವಾಗಿದೆ. ಇದರ ಕೆಲಸ ವಿಳಂಬವಾಗಿರುವುದರಿಂದ, ಕೆಲಸ ಸ್ಥಗಿತವಾಗಿರುವುದರಿಂದ ಹೇಮಾವತಿ ಯೋಜನೆಯ ಅನುಷ್ಠಾನದ ಬಗ್ಗೆ ಅನುಮಾನ ಉಂಟಾಗಿದೆ. ಇದರ ದುರ್ಲಾಭವನ್ನು ಪಡೆದುಕೊಂಡು ಅನೇಕ ಜನರು ಇದರಲ್ಲಿ ರಾಜಕೀಯ ಬೆರೆಸಲು ಪ್ರಯತ್ನ ಪಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಆದುದರಿಂದ ಈ ಸದನದಲ್ಲಿ ಹಾಜರಿರುವ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳು ವುದೇನೆಂದರೆ ಹೇಮಾವತಿ ಕಾಮಗಾರಿಯ ಬಗ್ಗೆ ಸರ್ಕಾರದ ನಿಲುವೇನು ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಏಕೆಂದರೆ ಇದರ ಲಾಭವನ್ನು ಪಡೆದುಕೊಂಡು ರಾಜಕೀಯ ಮಾಡತಕ್ಕ ಕೆಲಸವನ್ನು ನಿಲ್ಲಿಸಬೇಕಾಗುತ್ತದೆ. ಇವತ್ತ ಹೇಮಾವತಿ ಮತ್ತು ನೀರಾವರಿಯ ಬಗ್ಗೆ ಮುಖ್ಯಮಂತ್ರಿಗಳಿಗೆ ಸಾಕಷ್ಟು ಕಾಳಜಿ ಇದೆ ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಹಿಂದೆ ನೀರಾವರಿಗೆ 300 ಕೋಟಿ ರೂ.ಗಳ ಹಣವನ್ನು ಕೊಡಲಿಲ್ಲವೆಂದು ಅವರು ತಮ್ಮ ಸ್ಥಾನವನ್ನು ತ್ಯಾಗ ಮಾಡಿದ್ದರ ಬಗ್ಗೆ ನಮಗೆ ಅಭಿಮಾನ ಇದೆ. ಅವರ ಆ ಕ್ರಮಕ್ಕೆ ನಾವು ಶ್ಲಾಘನೆ ಮಾಡುತ್ತೇವೆ. ಆದುದರಿಂದ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಹೇಮಾವತಿ ಕಾಮಗಾರಿಯ ಬಗ್ಗೆ ಸ್ಪಷ್ಟವಾದ ನಿಲುವನ್ನು ಹೇಳಬೇಕೆಂದು ಅಧ್ಯಕ್ಷರು ಮೂಲಕ ಕೇಳಿಕೊಳ್ಳುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಚ್.ಡಿ. ಬಸವರಾಜ (ವೀರಾಜಪೇಟೆ) : ಸನ್ಮಾನ್ಯ ಅಧ್ಯಕ್ಷರೆ, ಈ ಬಜೆಟ್‌ನ್ನು ಮಾನ್ಯ ಸಿದ್ದರಾಮಯ್ಯನವರು ಇಲ್ಲಿ ಮಂಡನೆ ಮಾಡಿದಾಗ, ಪ್ರಪ್ರಥಮ ಬಾರಿಗೆ ಹಳೆ ಮೈಸೂರು ಭಾಗದ ಜನರು ಜನತಾದಳ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಉಗಾದಿ ಹಬ್ಬವನ್ನು ಆಚರಣೆ ಮಾಡುತ್ತಿದ್ದಾರೆ. ಅಲ್ಲಿ ಮೊದಲು ತಿನ್ನಬೇಕಾಗಿರುವುದು ಬೇವು ಅನಂತರ ಬೆಲ್ಲ. ಬೇವನ್ನು ಹೇಗಾದರೂ ತಿಂದು ಬೆಲ್ಲವನ್ನು ತಿನ್ನುವಾಗ ಸಿದ್ದರಾಮಯ್ಯನವರು ಏರಿಸಿರತಕ್ಕ ಬೆಲ್ಲದ ಬೆಲೆಯಿಂದ ಅವರಿಗೆ ಬೆಲ್ಲವು ಸಹ ಬೇವಿನಷ್ಟೆ ಕಹಿಯಾಗುತ್ತದೆ. ಅನಂತರ ಹಬ್ಬಕ್ಕಾಗಿ ಮಾಡಿರುವ ವಿಶೇಷವಾದ ಒಬ್ಬಟ್ಟನ್ನು ತಿನ್ನೋಣವೆಂದರೆ ಮೈದಾಹಿಟ್ಟಿನ ಬೆಲೆಯನ್ನು ಏರಿಸಿದ್ದಾರೆ. ಬೆಲ್ಲದ ಬೆಲೆಯನ್ನು ಸಹ ಏರಿಸಿದ್ದಾರೆ. ತಾವು ಇದೆ ಏನು ಜನರಿಗೆ ಕೊಟ್ಟಿರುವ ಉಗಾದಿಯ ಉಡುಗೋರೆ?

8.10 ಪಿ.ಎಂ

ಇದರ ಬಗ್ಗೆ ತಾವು ಯೋಚನೆಯನ್ನು ಮಾಡಬೇಕು. ಏರಿಸಿರುವಂಥ ದರವನ್ನು ಇಳಿಸಿ ಬಜೆಟ್ ಯುಗಾದಿ ಹಬ್ಬವನ್ನು ತುಂಬಾ ಸಂತೋಷದಿಂದ ಮಾಡುವಂಥ ಒಂದು ಪ್ರಯತ್ನವನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಷ್ಟು ವರ್ಷ ಕಾಫಿ ಬೆಳೆಗಾರರ ಬಗ್ಗೆ ಯಾವುದೇ ಒಂದು ಚಿಂತನೆಯನ್ನು ಸರ್ಕಾರ ಮಾಡಿರಲಿಲ್ಲ. ಆದರೆ ದಿಢೀರನೆ ಈ ವರ್ಷ ಅವರ ಬಗ್ಗೆ ನಮ್ಮ ಜನತಾ ದಳದ ಸರ್ಕಾರದವರಿಗೆ ಒಂದು ರೀತಿಯಲ್ಲಿ ಅವರ ಬಗ್ಗೆ ಮಮತೆ ಬಂದಿದೆ. ಆ ಮಮತೆ ಏನೆಂದರೆ 15 ಎಕರೆ ಜಮೀನು ತೋಟ ಇಟ್ಟುಕೊಂಡಿರುವಂಥ ವ್ಯಕ್ತಿಗಳು ಇದುವರೆಗೂ ಯಾವುದೇ ಒಂದು ಪೈಸೆ ತೆರಿಗೆಯನ್ನು ನೀಡುತ್ತಿರಲಿಲ್ಲ. ಆದರೆ ಮಾನ್ಯ ಸಿದ್ದರಾಮಯ್ಯನವರು ಕೂಡ ತೆರಿಗೆ ನೀಡಬೇಕು ಎಂದಿದ್ದಾರೆ ಅದು ಎಷ್ಟು? ಯಾವುದೇ ತೆರಿಗೆ ನೀಡದೇ ಇರುವಂಥ ವ್ಯಕ್ತಿಗಳು 11 ಸಾವಿರ ರೂಪಾಯಿ ತೆರಿಗೆಯನ್ನು ನೀಡಬೇಕು. ಕಾಫಿ ಎಷ್ಟು ಬರುತ್ತದೆ, ಅದರ ಬಗ್ಗೆ ಏನಾದರೂ ತಾವು ಚಿಂತನೆಯನ್ನು ಮಾಡಿದ್ದೀರೋ? ಅಷ್ಟು ಇಳುವರಿ ಆ ತೋಟದಲ್ಲಿ ಬರುತ್ತದೆಯೇ ಎನ್ನುವುದನ್ನು ಯೋಚನೆ ಮಾಡಬೇಕು. ತೋಟ ಇದ್ದಮಾತ್ರಕ್ಕೆ ತೆರಿಕೆ ಕಟ್ಟಬೇಕಾಗಿದೆ. ಆದರೆ ಆ ತೋಟದಲ್ಲಿ ಇಳುವರಿ ಇದೆಯೇ ಎಂದು ಯೋಚಿಸಬೇಕು. ಆ ಸಮಸ್ಯೆಗಳನ್ನು ನೀವು ಅರಿತುಕೊಳ್ಳಬೇಕು. ಇಳುವರಿ ಇದ್ದರೆ ಮಾತ್ರ ಅವರಿಗೆ ಆದಾಯ ಬರುತ್ತದೆ, ಸರ್ಕಾರಕ್ಕೆ ತೆರಿಗೆಯನ್ನು ಕಟ್ಟಬೇಕು ಎನ್ನುವ ಉದ್ದೇಶ ಬರುತ್ತದೆ. ಆದರೆ ಇದು ಏಕಾಏಕ ಆ ತೋಟದಲ್ಲಿ ಕಾಫಿ ಗಿಡಿ ಇದೆ ಎಂದಮಾತ್ರಕ್ಕೆ ನೀವು ತೆರಿಗೆ ಕಟ್ಟಿರಿ ಎಂದು ಹೇಳಿದರೆ ಅವರು ಎಲ್ಲಿಗೆ ಹೋಗಬೇಕು? ಇದನ್ನು ತಾವು ಚಿಂತನೆ ಮಾಡಬೇಕು ಏಕಾಏಕಿ ಮಾಡಿರುವುದನ್ನು ತಾವು ಮರುವಿಮರ್ಶೆ ಮಾಡಬೇಕಾಗಿದೆ. ತಮ್ಮಲ್ಲಿ ದಯವಿಟ್ಟು ನಾನು ಕೇಳಿಕೊಳ್ಳುತ್ತಿದ್ದೇನೆ, ತಾವು ಏರಿಸಿರುವ ತೆರಿಗೆ ಯಾವ ರೀತಿ ಎಂದು ಅರ್ಥವಾಗುತ್ತಿಲ್ಲ. ಎಕರೆಗೆ ಕೇವಲ 250 ರೂಪಾಯಿ ಇರತಕ್ಕಂಥ ತೆರಿಗೆಯನ್ನು ಏರಿಸಿದ್ದೀರಿ, ಎಷ್ಟು ಎಂದರೆ 18,500 ರೂಗಳಿಗೆ ಏರಿಸಿದ್ದೀರಿ ಇದು ಯಾವ ರೀತಿ ಅಂದಾಜು? ಪ್ರತಿಶತ ಇಷ್ಟಕ್ಕೆ ಇಷ್ಟು ಎಂದು ಮಾಡಬೇಕು. ಆದರೆ ಕಾಫಿ ಬೆಲೆ ಏನೋ ಹೋದವರ್ಷ ಜಾಸ್ತಿಯಾಯಿತು. ಅದನ್ನು ಈ ವರ್ಷ ಮಾರಾಟ ಮಾಡಿ ಅವರಿಗೆ ಹಣ ಬಂದಿದೆಯೇ? ಅದರ ಬಗ್ಗೆ ತಾವು ಚಿಂತನೆಯನ್ನು ಮಾಡಬೇಕಾಗಿದೆ. ಏಕಾಏಕಿ ಇಷ್ಟು ಏರಿಸಿದರೆ ಅವರು ಎಲ್ಲಿಗೆ ಹೋಗಬೇಕು? 50 ಎಕರೆ ಜಮೀನು ಇರುವವರು ಒಂದು ಲಕ್ಷದ ಎರಡು ಸಾವಿರದ ಏಳುನೂರ ಐವತ್ತು ರೂಪಾಯಿಗಳಂತೆ ಪ್ರತಿವರ್ಷ ಹೊಸದಾಗಿ ತೆರಿಗೆಯನ್ನು ಕಟ್ಟಬೇಕಾಗಿದೆ. ಹಳೆಯ ತೆರಿಗೆಯ ಜೊತೆಗೆ. ಅಷ್ಟೊಂದು ಆದಾಯ ಅವರಿಗೆ ಬರುತ್ತಿದೆಯೇ? ಅದನ್ನು ಚಿಂತನೆ ಮಾಡಬೇಕಾಗಿದೆ. ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಈ ತೆರಿಗೆ ಹಾಕಿರುವುದನ್ನು ಮರುವಿಮರ್ಶೆ ಮಾಡಿ ವೈಜ್ಞಾನಿಕವಾಗಿ ಯಾವ ಯಾವ ತೋಟದಲ್ಲಿ ಎಷ್ಟೆಷ್ಟು ಆದಾಯ ಬರುತ್ತಿದೆ ಎನ್ನುವುದನ್ನು ಸಮೀಕ್ಷೆ ಮಾಡಿ ಅವರಿಗೆ ಸರಿಯಾದ ರೀತಿಯಲ್ಲಿ ತೆರಿಗೆಯನ್ನು ಹಾಕಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ತೆರಿಗೆ ಹಾಕುವುದು ಬೇಡ ಎಂದು ನಾನು ಹೇಳುವುದಿಲ್ಲ. ಕಾಫಿ ಬೆಲೆ ಜಾಸ್ತಿಯಾಗಿದೆ. ಆದರೆ ಅದಕ್ಕೆ ಪ್ರಪೋರ್ಷನೇಟ್ ಆಗಿ ಹಾಕಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮತ್ತೆ 15 ಎಕರೆ ಜಮೀನಿನವರಿಗೆ ಕೊಟ್ಟಿದ್ದ ರಿಯಾಯಿತಿಯನ್ನು ಈ ಸಾರಿ ಕೂಡ

ಮುಂದುವರಿಸಿ. ಏಕಾಏಕಿ ಏರಿಸದೆ ತಾವು ಸಣ್ಣ ರೈತರ ಬಗ್ಗೆ ಯೋಚನೆ ಮಾಡಬೇಕಾಗಿತ್ತು. ಮಣ್ಣಿನ ಮಗ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿಕೊಂಡು ಬಂದಿದ್ದರು. ಸಣ್ಣ ರೈತರು ಕೂಡ ಮಣ್ಣಿನ ಮಕ್ಕಳು, ಕಷ್ಟಪಡುತ್ತಿದ್ದಾರೆ. ಅವರನ್ನು ಮೇಲೆ ಎತ್ತಬೇಕು, ಏಕೆಂದರೆ ಹತ್ತರಿಂದ ಹದಿನೈದು ಎಕರೆ ಇರುವವರಿಗೆ ಎಷ್ಟು ಮಹಾ ಆದಾಯ ಬರುತ್ತದೆ. ಇದರ ಬಗ್ಗೆ ನಾವು ಚಿಂತನೆಮಾಡಬೇಕು. ಮತ್ತೆ ಮಾನ್ಯ ಮುಖ್ಯಮಂತ್ರಿಯವರ ಹೆಸರು ಇನ್ನು ಅಜರಾಮರವಾಗಿ ಅವರು ಮಣ್ಣಿನ ಮಗನಾಗಿಯೇ ಉಳಿಯಬೇಕು ಎಂದರೆ ತಾವು ಇದನ್ನು ಸ್ಥಗಿತಗೊಳಿಸಬೇಕು. ಮತ್ತೆ ತೆರಿಗೆಯನ್ನು ವೈಜ್ಞಾನಿಕ ರೀತಿಯಲ್ಲಿ ಮರುಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ಸಭಾಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಒತ್ತುವರಿ ಮಾಡಿರುವ ಜಮೀನಿನ ಬಗ್ಗೆ ಹೇಗೆ?

ಶ್ರೀ ಎಚ್.ಡಿ. ಬಸವರಾಜು : ಎರಡನೆಯದಾಗಿ ಕುಡಿಯುವ ನೀರಿನ ಕೊಳವೆ ಬಾವಿ ವ್ಯವಸ್ಥೆ ತಾವು ಮಾಡಿದ್ದೀರಿ.

ಅಧ್ಯಕ್ಷರು : ಕಾಫಿ ತೋಟಗಳವರು ಒತ್ತುವರಿ ಮಾಡಿದ್ದಾರಲ್ಲ, ಅದು ಇರಬೇಕೋ ಅಥವಾ ಬೇಡವೋ?

ಶ್ರೀ ಎಚ್.ಡಿ. ಬಸವರಾಜು : ಕುಡಿಯುವ ನೀರಿನ ಬಗ್ಗೆ ಕೊಳವೆ ಬಾವಿಯನ್ನು ಬಹಳಷ್ಟು ಕಡೆ ತಾವು ತೋಡಿಸಿದ್ದೀರಿ. ಆದರೆ ಗುಡ್ಡಗಾಡು ಪ್ರದೇಶದಲ್ಲಿ ಇದು ಎಷ್ಟು ಪ್ರಯೋಜನಕಾರಿಯಾಗಿದೆ ಎನ್ನುವುದನ್ನು ತಾವು ಸಮೀಕ್ಷೆ ಮಾಡಿದರೆ ತಮಗೆ ಅರ್ಥವಾಗುತ್ತದೆ. ಒಂದರೆಡು ಕಡೆ ಮನೆ ಇರುತ್ತದೆ, ಅಲ್ಲಿ ಯಾರೋ ಅಧಿಕಾರಿಗಳು ಬಂದು ಕೊಳವೆ ಬಾವಿ ತೋಡಿಸುತ್ತಾರೆ. ಇನ್ನೊಂದು ಕಡೆ ಗುಡ್ಡ ಮನೆ ಇರುತ್ತದೆ, ಅಲ್ಲಿಗೆ ಹೋಗುವುದೇ ಇಲ್ಲ. ಮತ್ತೆ ರಿಪೇರಿಗೆ ಬಂದಮೇಲೆ ಆ ಕಡೆ ತೋಡಿಸಿದಂಥ ವ್ಯಕ್ತಿಗಳು ಯಾರು ಅಲ್ಲಿಗೆ ರಿಪೇರಿ ಮಾಡುವುದಕ್ಕೆ ಹೋಗುವುದೇ ಇಲ್ಲ. ಮತ್ತೆ ಬಡಜನತೆ, ಗ್ರಾಮಾಂತರ ಜನತೆ ಎಷ್ಟೊಂದು ಬುದ್ಧಿವಂತರು ಎಂದು ತಮಗೆ ಗೊತ್ತಿದೆ, ಎಷ್ಟೊಂದು ವಿಚಾರವಂತರು ಎನ್ನುವುದು ಗೊತ್ತಿದೆ, ನೂರಾರು ಮೈಲಿ ಅಥವಾ ಹತ್ತು-ಹದಿನೈದು ಕಿಲೋಮೀಟರ್ ನಡೆದುಕೊಂಡು ಹೋಗಿ ಅವರು ಅಧಿಕಾರಿಗಳನ್ನು ಕಂಡು ದೂರು ಕೊಡುತ್ತಾರೆಯೇ ಅದನ್ನು ರಿಪೇರಿ ಮಾಡಿಸಿ ಎಂದು. ಹೀಗಾಗಿ ಅದು ರಿಪೇರಿ ಆಗುವುದೂ ಇಲ್ಲ. ಸರ್ಕಾರ ಖರ್ಚು ಮಾಡಿದಂಥ ಕೊಳವೆಬಾವಿಗಳಿಂದ ಯಾವುದೇ ಒಂದು ಪ್ರಯೋಜನವೂ ಜನರಿಗೆ ಸಿಗುವುದಿಲ್ಲ. ನಾನು ಕಳಕಳಿಯಿಂದ ಸಭಾಧ್ಯಕ್ಷರ ಮೂಲಕ ಕೇಳಿಕೊಳ್ಳುವುದೇನೆಂದರೆ ತೆರೆದ ಬಾವಿಯನ್ನು ತಾವು ಮಾಡಿ. ಈ ತೆರೆದ ಬಾವಿಯನ್ನು ಮಾಡುವುದರಿಂದ ಯಾವಾಗಲೂ ನೀರು ಸಮೃದ್ಧಿಯಾಗಿ ಸಿಗುತ್ತದೆ. ಜನರು ಬೋರ್‌ವೆಲ್ ಕೆಟ್ಟುಹೋಯಿತು, ಅದಕ್ಕೋಸ್ಕರ ಅಧಿಕಾರಿಯ ಹತ್ತಿರ ನಾವು ಹೋಗಬೇಕು ಎಂದು ಚಿಂತನೆಯನ್ನು ಮಾಡುವುದಿಲ್ಲ. ಮತ್ತೆ ಐದಾರು ತಿಂಗಳಿಂದ ತಮಗೆ ಗೊತ್ತಿದೆ, ಪಡಿತರ ಚೀಟಿಯಲ್ಲಿ ಒಂದುಕಾಲು ಕೆ.ಜಿ. ಸಕ್ಕರೆ ಕೊಡುತ್ತಿದ್ದಾರೆ. (ಜನತಾ ದಳದ ಸರ್ಕಾರ ಬಂತು, ನಮಗೆ ಇನ್ನೂ ಜಾಸ್ತಿ ಸಕ್ಕರೆ ಕೊಡುತ್ತಾರೆ), ನೀವು ಏಕೆ ಸ್ವಾಮಿ ಜಾಸ್ತಿ ಕೊಡಿಸುವುದಿಲ್ಲ ಎಂದು ಹೋದಕಡೆಯಲ್ಲೆಲ್ಲಾ ನನ್ನನ್ನು ಕೇಳುತ್ತಿದ್ದಾರೆ. ಆದರೆ ಇವರೇನು ಮಾಡಿದರು, ಬೆಲ್ಲದ ರೇಟನ್ನೇ ಏರಿಸಿಬಿಟ್ಟರು. ಸಕ್ಕರೆ ಬಗ್ಗೆ ಇವರ

ಮಾತೇ ಇಲ್ಲ. ಕೆಜಿಗೆ 3-20 ಪೈಸೆಗೆ ಅಕ್ಕಿಯನ್ನು ಹತ್ತು ಕೆಜಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಕೊಡಲಿ. ಆದರೆ ಯಾರಿಗೆ ಕೊಡುತ್ತಾರೆ, ಅತೀ ಬಡವರಿಗೆ, ಅದನ್ನು ಈವರೆಗೆ ನಿರ್ದಿಷ್ಟವಾಗಿ ಅಂಕಿಸಂಖ್ಯೆ ಸಮೇತ ಇವರು ಕಂಡುಹಿಡಿದಿದ್ದಾರೆಯೇ? ನಮ್ಮ ತಾಲ್ಲೂಕಿನಲ್ಲಿ ಮಾಡಿಲ್ಲ. ಇನ್ನು ಯಾವಾಗ ಕೊಡುತ್ತಾರೋ ಕೊಡಲಿ. ಆದರೆ ಈ ಒಂದುಕಾಲು ಕೆಜಿ ಸಕ್ಕರ ನೀವು ಕೊಡುತ್ತಿದ್ದೀರಲ್ಲ, ಹಿಂದೆ ಜನತೆಗೆ ಪಡಿತರ ಚೀಟಿಯಲ್ಲಿ ಎಷ್ಟು ಸಿಗುತ್ತಿತ್ತೋ ಅಷ್ಟಾನ್ನಾದರೂ ಕೊಡಿ. ಎರಡನೆಯದಾಗಿ ನೀವು ನಮಗೆ ಗೋಧಿ ಜಾಸ್ತಿ ಕೊಡುತ್ತಿದ್ದೀರಿ ಕೊಡಗಿನಲ್ಲಿ. ಕೊಡಗಿನಲ್ಲಿ ಗೋಧಿ ಉಪಯೋಗ ಬಹಳಷ್ಟು ಕಡಿಮೆ ಮಾಡುತ್ತಿದ್ದಾರೆ. ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಸ್ವಾಮಿ ಅಕ್ಕಿ ಕೊಡಿಸಿ ಎನ್ನುತ್ತಾರೆ. ದಯವಿಟ್ಟು ಗೋಧಿ ಪ್ರಮಾಣದ ಬದಲು ಅಷ್ಟೇ ಪ್ರಮಾಣಕ್ಕೆ ಅಕ್ಕಿಯನ್ನು ಸರಬರಾಜು ಮಾಡುವ ವ್ಯವಸ್ಥೆ ಮಾಡಬೇಕು. ತಮ್ಮಲ್ಲಿ ಮೂರನೆಯದಾಗಿ ಕೇಳಿಕೊಳ್ಳುವುದೇನೆಂದರೆ ತಾವು ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಹೊಸದಾಗಿ ಮಾದರಿ ಶಾಲೆಯನ್ನು ಮೊರಾರ್ಜಿದೇಸಾಯಿಯವರ ಹೆಸರಿನಲ್ಲಿ ತೆಗೆಯಬೇಕು ಎನ್ನುತ್ತಿದ್ದಾರೆ. ಆದರೆ ನಮ್ಮ ಗ್ರಾಮಾಂತರ ಪ್ರದೇಶದಲ್ಲಿರುವ ಶಾಲೆಗಳನ್ನು ನೋಡಿದ್ದೀರಾ ಸ್ವಾಮಿ ಅವು ಹೇಗೆ ಇವೆ ಎನ್ನುವುದನ್ನು ನೋಡಿದ್ದೀರಾ ಮಾದರಿ ಶಾಲೆ ತೆಗೆಯಿರಿ, ಬೇಡ ಎನ್ನುವುದಿಲ್ಲ. ಆದರೆ ಸಾವಿರಾರು ಗ್ರಾಮಾಂತರ ಪ್ರದೇಶದಲ್ಲಿ ಕಟ್ಟಡಗಳಿಲ್ಲದೆ ದುಸ್ಥಿತಿಯಲ್ಲಿರುವಂಥ ಕಟ್ಟಡಗಳಲ್ಲಿ ಶಿಕ್ಷಕರು ಶಿಕ್ಷಣ ಬೋಧನೆಯನ್ನು ಮಾಡುತ್ತಿದ್ದಾರೆ. ಇಂಥದ್ದರಲ್ಲಿ ನಮಗೆ ಮಾದರಿ ಶಾಲೆ ಅಗತ್ಯವಿದೆಯೇ? ನಮ್ಮ ತಾಲ್ಲೂಕಿನಲ್ಲಿರುವ ಶಾಲೆಗಳಲ್ಲಿ ಶೌಚಾಲಯವೇ ಇಲ್ಲ. ಯಾವುದೇ ಒಂದು ಶಾಲೆಗೆ ಬಂದು ನೋಡಿದರೂ ಹೆಣ್ಣು ಮಕ್ಕಳು ಬಹಳಷ್ಟು ಮುಜುಗರ ಪಡುತ್ತಿದ್ದಾರೆ. ಇಂಥದ್ದಕ್ಕೆ ತಾವು ಏನಾದರೂ ಪರ್ಯಾಯ ವ್ಯವಸ್ಥೆ ಮಾಡಿ. ಆಮೇಲೆ ನಾವು ಉತ್ತಮ ಶಿಕ್ಷಣಕ್ಕೆ ಹೋಗೋಣ. ಆದರೆ ಮೂಲಭೂತವಾಗಿ ಸಿಗುವ ಶಿಕ್ಷಣದಲ್ಲೇ ಇಷ್ಟೊಂದು ಕೊರತೆಯಿರುವಾಗ ನಮಗೆ ಮಾದರಿ ಶಾಲೆ ಏತಕ್ಕೆ ಬೇಕು? ಅದರ ಬಗ್ಗೆ ತಾವು ಒಂದು ಚಿಂತನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಸಂಪರ್ಕ, ರಸ್ತೆ ಬಗ್ಗೆ ತಾವು ಏನು ಯೋಚನೆ ಮಾಡುತ್ತಿದ್ದೀರಿ. ಎಂದರೆ ಬೈಪಾಸ್ ಬೇಕಾಗಿದೆ, ಸ್ಪೀಡ್ ರಸ್ತೆ ಬೇಕಾಗಿದೆ, ಗ್ರಾಮಾಂತರ ರಸ್ತೆ ನೋಡಿದ್ದೀರಾ ಸ್ವಾಮಿ. ಅಲ್ಲಿಗೆ ಯಾವಾಗಲೂ ಹೋಗಿದ್ದೀರಾ? ದಯವಿಟ್ಟು ನಾನು ಹೇಳುತ್ತೇನೆ, ವಿರಾಜಪೇಟೆಗೆ ಬಂದು ನೋಡಿ. 40-50 ವರ್ಷದ ಹಿಂದೆ ಹೇಗಿತ್ತೋ ಈಗಲೂ ಹಾಗೆಯೇ ಇದೆ. ಆ ರಸ್ತೆಯಲ್ಲಿ ಪ್ರಯಾಣ ಮಾಡಬೇಕು ಎಂದರೆ ಜನರು ಜೀವವನ್ನು ಕೈಯಲ್ಲಿ ಇಟ್ಟುಕೊಂಡು ಓಡಾಡುವ ಸ್ಥಿತಿಯಲ್ಲಿದ್ದಾರೆ. ದಯವಿಟ್ಟು ಅದನ್ನು ಸುಧಾರಣೆ ಮಾಡಿ. ನಿಮ್ಮ ಅನಿಸಿಕೆ ಸರಿ ಇದೆ. ಆದರೆ ನಗರವಾಸಿಗಳಿಗೆ ಈ ಸೌಲಭ್ಯ ಸಿಗುತ್ತಿದೆ, ಆದರೆ ಗ್ರಾಮಾಂತರದ ಜನರು ಬದುಕಿದ್ದಾರೆ ಎನ್ನುವುದಕ್ಕೆ ತಾವು ಅರ್ಥಮಾಡಿಕೊಳ್ಳಬೇಕು. ತಮ್ಮ ಯೋಜನೆಯಲ್ಲಿ ಅದಕ್ಕೂ ಆದ್ಯತೆ ಕೊಡಿ. ಬೇಡ ಎಂದು ಹೇಳುವುದಿಲ್ಲ. ಆದರೆ ಸಂಪೂರ್ಣ ಆದ್ಯತೆ ಅದಕ್ಕೇ ಕೊಟ್ಟು ಗ್ರಾಮಾಂತರದವರನ್ನು ನಿರ್ಲಕ್ಷಿಸುತ್ತೇವೆ ಎನ್ನುವುದಾದರೆ ನಮಗೆ ಬಹಳಷ್ಟು ಕಷ್ಟವಾಗುತ್ತದೆ. ಆ ಜನತೆ ಕೂಡ ತೆರಿಗೆದಾರರೇ. ಅವರು ಭಾರತದಲ್ಲಿರುವ ಪ್ರಜೆಗಳೇ. ಅದನ್ನು ತಾವು ಮರೆಯಬಾರದು. ಅವರಿಗೂ ಎಲ್ಲಾ ವಿಧವಾದ ಹಕ್ಕು ಇದೆ. ಬರೀ ನಗರವಾಸಿಗಳಿಗೆ ಅಲ್ಲ ಎನ್ನುವುದನ್ನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಸಭಾಧ್ಯಕ್ಷರು ನನಗೆ ಇಷ್ಟು ಮಾತನಾಡಲು

ಅವಕಾಶ ಕೊಟ್ಟಿದ್ದಕ್ಕೆ ಅವರಿಗೆ ನನ್ನ ಪ್ರತ್ಯೇಕ ವಂದನೆಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಶ್ರೀ ಬಿ.ಆರ್. ಪಾಟೀಲ್ ಕಡೆಯ ಸ್ಪೀಕರ್. ಇನ್ಯಾರಿಗೂ ಅವಕಾಶ ಇಲ್ಲ. ಮಾನ್ಯ ಸಗೀರ್‌ರವರು ಮತ್ತು ಮಂಜುನಾಥ ಕುನ್ನೂರ್‌ರವರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ದಯಮಾಡಿ ತಾವು ನನ್ನ ಒಂದು ಮನವಿಯನ್ನು ಸ್ವೀಕರಿಸ ಬೇಕಾಗುತ್ತದೆ. ನಾನು ಕಾಫಿ ಬೆಳೆಯುವಂಥ ಜಿಲ್ಲೆಯಲ್ಲಿ ಆಯ್ಕೆಯಾಗಿ ಬಂದಿದ್ದೇನೆ. ಕಾಫಿ ಬೆಳೆಗಾರರಿಗೆ ಈ ತೆರಿಗೆಯನ್ನು ವಿಧಿಸಿರುವುದರಿಂದ ಕಾಫಿ ಬೆಳೆಗಾರರು ಒಂದು ಬಹಳ ಚಿಂತಾಜನಕವಾದ ಪರಿಸ್ಥಿತಿಯಲ್ಲಿರುವುದರಿಂದ ತಮ್ಮ ಮುಖಾಂತರ ಸರ್ಕಾರ ಗಮನವನ್ನು ಸೆಳೆಯುವಂಥದ್ದರ ಬಗ್ಗೆ ಎರಡು ನಿಮಿಷಗಳ ಕಾಲ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ಈಗ ಹೇಳಿಬಿಟ್ಟಿರಲ್ಲ. You have already said it. ಅವರು ಕೇಳಿದ್ದರು, ನೀವು ಹೇಳಿರಲಿಲ್ಲ ಎಂದಾಗಿತ್ತು. ಈಗ ನೀವು ಹೇಳಿದಂತೆ ಆಯಿತಲ್ಲ.

+ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಮೇರೆಗೆ ಇವತ್ತು ಕರ್ನಾಟಕ ರಾಜ್ಯಸರ್ಕಾರ ಈ ಬಜೆಟನ್ನು ಮಂಡನೆ ಮಾಡಿರುವಂಥ ಈ ಸಂದರ್ಭದಲ್ಲಿ ನಾನು ನೇರವಾಗಿ ವಿರೋಧ ವ್ಯಕ್ತಪಡಿಸದಿದ್ದರೂ ಸಹ ಇದಕ್ಕೆ ಜನರೇ ವಿರೋಧ ಪಡಿಸುವಂಥ ಒಂದು ಅವಕಾಶ ಅವರಾಗಿಯೇ ಅವರು ಕಲ್ಪಿಸಿಕೊಟ್ಟಿದ್ದಾರೆ. ಬಡವರ ಬಗ್ಗೆ ಚಿಂತನೆ ಮಾಡುವಂಥದ್ದು, ಬಡವರ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವರ ಏಳಿಗೆಗಾಗಿ ದುಡಿಯುವಂಥ ವಾಗ್ದಾನ ಮಾಡಿ ಅಧಿಕಾರಕ್ಕೆ ಬಂದಂಥ ಜನತಾ ದಳ ಸರ್ಕಾರ..........

ಅಧ್ಯಕ್ಷರು : ಅದನ್ನೆಲ್ಲಾ ನಿಮ್ಮವರು ಹೇಳಿಬಿಟ್ಟಿದ್ದಾರೆ. ನೇರವಾಗಿ ವಿಷಯಕ್ಕೆ ಬನ್ನಿ. ಮಾನ್ಯ ಮೊಯಿಲಿಯವರು ಎಲ್ಲರೂ ಹೇಳಿಬಿಟ್ಟಿದ್ದಾರೆ. ನೇರವಾಗಿ ನಾನು ಆ ವಿಚಾರಕ್ಕೆ ಬರುತ್ತೇನೆ, ಅದೂ ಹಾಗೆಯೇ ಆಗುತ್ತಿತ್ತು. ಅವರು ವಿರೋಧ ಪಕ್ಷದಲ್ಲಿ ಇರುವಂಥ ಸಂದರ್ಭದಲ್ಲಿ ಜನ ಕೊಟ್ಟಿರುವ ತೀರ್ಪಿಗೆ ನಾವು ಇಲ್ಲಿದ್ದೇವೆ ಎಂದು ಹೇಳುತ್ತಿದ್ದಿರಿ; ಅದೇ ರೀತಿಯಲ್ಲಿ ನಾವು ವಿರೋಧಪಕ್ಷದಲ್ಲಿ ಇವತ್ತು ಕುಳಿತಿರುವಂತಹ ಸಂದರ್ಭದಲ್ಲಿ ನಾವು ಕನ್ನಡಿಗರ ತೀರ್ಪಿಗೆ ಒಪ್ಪಿದ್ದೇವೆ. ಆದರೆ ತಮ್ಮ ಸರ್ಕಾರದ ಗಮನ ಸೆಳೆಯುವುದರ ಬಗ್ಗೆ ಇವತ್ತು ಬಜೆಟನ್ನು ಮಂಡನೆ ಮಾಡಿರುವಂತಹ ಈ ಸಂದರ್ಭದಲ್ಲಿ ನಾನು ಚಿಕ್ಕಮಗಳೂರು ಜಿಲ್ಲೆ ಹಾಗೂ ಚಿಕ್ಕಮಗಳೂರು ಕ್ಷೇತ್ರದಿಂದ ಪ್ರತಿನಿಧಿಸಿರತಕ್ಕ ಸಂದರ್ಭದಲ್ಲಿ ಚಿಕ್ಕಮಗಳೂರಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಾಫಿ ಬೆಳೆಯುವಂತಹ ವಿಚಾರ ತಮಗೆ ತಿಳಿದಿರುವ ವಿಚಾರ. ಮುಖ್ಯವಾಗಿ ನಮ್ಮ ಕಾಫಿ ಮಂಡಲಿಯ ರೂಪು ರೇಖೆಗಳ ಪ್ರಕಾರ ಶೇಕಡಾ 90ರಷ್ಟು ಕಾಫಿ ಬೆಳೆಗಾರರ ಜನ ಸಂಖ್ಯೆ ಬಡತನದ ರೇಖೆಯಲ್ಲಿ ಬರುವಂತಹ ಜನ ಇದ್ದಾರೆ. ಇವತ್ತು ಹಿಂದಿನ ಸರ್ಕಾರದವರು ಅನೇಕ ಬೇಡಿಕೆಗಳನ್ನು ಕಾಫಿ ಬೆಳೆಗಾರರಿಗೆ ಇಟ್ಟಿದ್ದಂತಹ ಸಂದರ್ಭದಲ್ಲಿ ಅದಕ್ಕೆ ಮಾನ್ಯತೆಯನ್ನು ಕೊಟ್ಟು, ಸಾಕಷ್ಟು ರಿಯಾಯಿತಿಯನ್ನು ಕೊಟ್ಟಿರುವಂತಹ ವಿಚಾರ ಸಹ ಎಲ್ಲಾ

ಸದಸ್ಯರಿಗೆ ಹಾಗೂ ತಮಗೂ ತಿಳಿದಿರುವಂತಹ ವಿಚ್ಛಾರವೇ ಆಗಿದೆ. ಮುಖ್ಯವಾಗಿ ಹೇಳುವಂತಹ ವಿಚಾರ ಅಂದರೆ ಇವತ್ತು ಕಾಫಿ ಬೆಳಗಾರರು ಎಂದು ಹೇಳಿದರು ಅನೇಕರು ಏನು ಹೇಳುತ್ತಾರೆ ಎಂದರೆ ರೈತಕುಟುಂಬದಿಂದ ಬಂದಿರುವಂತಹ ಒಬ್ಬ ವ್ಯಕ್ತಿ ಅವನು ಮಾತ್ರ ರೈತ ಆಗುವುದಕ್ಕೆ ಸಾಧ್ಯ ಆಗುತ್ತದೆ ಎಂದು ಹೇಳಿ ಆ ಭಾವನೆಯಲ್ಲಿ ನಾವು ಮಾತನಾಡುತ್ತೇವೆ. ಒಬ್ಬ ಕಾಫಿ ಬೆಳೆಯುವಂತಹ ಕಾಫಿ ಬೆಳೆಗಾರರು ಸಹ ಇವತ್ತು ರೈತರು ಕಷ್ಟ ಪಟ್ಟು ಯಾವ ರೀತಿಯಲ್ಲಿ ಜೀವನವನ್ನು ನಡೆಸುತ್ತಾರೋ ಅದೇ ರೀತಿಯಲ್ಲಿ ಕಾಫಿ ಬೆಳೆಯುವಂತಹ ಕಾಫಿ ತೋಟವನ್ನು ಮಾಡಿಕೊಂಡು ಒಂದು ಕಾಫಿ ಬೆಳೆ ಹಾಕುತ್ತಾನೆ. ಆದರೆ ಇವತ್ತು ನಮ್ಮ ಮಾನ್ಯ ಅರ್ಥ ಮಂತ್ರಿಗಳಾದಂತಹ ಸನ್ಮಾನ್ಯ ಸಿದ್ದರಾಮಯ್ಯನವರು ಕೇವಲ ಅಲ್ಪಸ್ವಲ್ಪ ಬೆಲೆ ಏರಿರುವುದರಿಂದ, ಈಗ ಕೇಂದ್ರ ಸರ್ಕಾರದಲ್ಲಿ ಸಹ ನಾವು ನಮ್ಮ ಹೋರಾಟದಿಂದಾಗಿ ಸೆಂಟ್ರಲ್ ಎಕ್ಸೈಜ್ ಡ್ಯೂಟಿ ಇವತ್ತು ಏನು ಇತ್ತು ಅದನ್ನೂ ರದ್ದು ಮಾಡಿದ್ದಾರೆ. ಅದರ ಜೊತೆಗೆ ಎಕ್ಸ್ ಪೋರ್ಟ್ ಡ್ಯೂಟಿ ಏನು ಇತ್ತು ಅದನ್ನೂ ರದ್ದು ಮಾಡಿದ್ದಾರೆ. ಹಿಂದಿನ ಸಾಲಿನಲ್ಲಿ ಈ ಒಂದು ಸದನದಲ್ಲಿದ್ದಂತಹ ಸರ್ಕಾರವು ಸಹ ಅನೇಕ ತೆರಿಗೆಗಳ ವಿನಾಯಿತಿ ಕೊಡುವುದರ ಜೊತೆಗೆ ಅವರಿಗೆ ಸಹಾಯ ಆಗುವ ರೀತಿಯಲ್ಲಿ ಸಾಕಷ್ಟು ಸಹಾಯ ಮಾಡಿದ್ದಾರೆ. ಆದರೆ ಈಗ ಅಸ್ತಿತ್ವಕ್ಕೆ ಬಂದಂಥ ಜನತಾ ದಳದ ಸರ್ಕಾರ ಒಂದು ಕಡೆ ಕಾಫಿ ಬೆಳೆಗಾರರಿಗೆ ಸಂತೋಷವನ್ನು ವ್ಯಕ್ತಪಡಿಸುವಂತಹ ಒಂದು ಸ್ಥಿತಿಯನ್ನು ಕೊಟ್ಟಿದ್ದಾರೆ. ಅದು ಏನು ಅಂದರೆ ಅಕ್ರಮವಾಗಿ ಕಾಫಿ ತೋಟವನ್ನು ಮಾಡಿರುವಂತಹ ಜಮೀನುಗಳನ್ನು ನಾವು ನಿಮ್ಮೆಲ್ಲರಿಗೂ ಸಕ್ರಮಗೊಳಿಸಿ ಕೊಡುತ್ತೇವೆ ಎನ್ನತಕ್ಕ ವಿಚಾರವನ್ನು ಹೇಳಿದ್ದಾರೆ. ನಾವು ಅದಕ್ಕಾಗಿ ಜನತಾದಳದ ಸರ್ಕಾರ ಅದರಲ್ಲೂ ಮಣ್ಣಿನ ಮಗ ದೇವೇಗೌಡರ ನೇತೃತ್ವದಲ್ಲಿ ಇರುವಂತಹ ಸರ್ಕಾರಕ್ಕೆ ಕಾಫಿ ಬೆಳೆಗಾರರು ನೂರಕ್ಕೆ ನೂರು ಜನ ಸಂತೋಷ ವ್ಯಕ್ತಪಡಿಸುವುದು ಜೊತೆಗ ಕೃತಜ್ಞತೆಯನ್ನು ಸಹ ಸಲ್ಲಿಸಿದರು. ಆದರೆ ಒಂದು ನಂಬಿಕೆಯನ್ನು ಬರಿಸಿ ಇನ್ನೊಂದು ಕಡೆ ನಮ್ಮ ಕಣ್ಣಲ್ಲಿ ನೀರು ಬರುವಂತೆ ತೆರಿಗೆಯನ್ನು ನಮ್ಮ ಮೇಲೆ ಹೇರಿದ್ದಾರೆ. ಇದರಿಂದ ನಮ್ಮ ಮೂಲಕ ಸರ್ಕಾರದವರಲ್ಲಿ ನಾನು ಮನವಿ ಮಾಡಿಕೊಳ್ಳುವುದು ಏನೆಂದರೆ..

ಅಧ್ಯಕ್ಷರು : ಕಣ್ಣೀರು ಬಿಟ್ಟು ಬಿಡಿ, ತೆರಿಗೆಯನ್ನು ಬಿಟ್ಟುಬಿಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ದಯಮಾಡಿ ಹಿಂದಿನ ಸಾಲಿನಲ್ಲಿ ಯಾವ ರೀತಿಯಲ್ಲಿ ಕಾಫಿ ಬೆಳೆಗಾರರಿಗೆ ಒಂದು ರಿಯಾಯಿತಿಯನ್ನು ಕರ್ನಾಟಕ ಸರ್ಕಾರ ನೀಡಿತ್ತೋ ಅದೇ ರಿಯಾಯಿತಿಗಳನ್ನು ಮುಂದುವರೆಸಿ ಕೊಡಬೇಕೆಂದು ತಮ್ಮ ಮೂಲಕ ಅರ್ಥ ಸಚಿವರಲ್ಲಿ ವಿನಂತಿ ಮಾಡಿಕೊಂಡು ನನಗೆ ಎರಡು ಮಾತನಾಡಲು ಅವಕಾಶ ಕೊಟ್ಟಿದ್ದೀರಿ, ಅದಕ್ಕೆ ವಂದನೆಗಳನ್ನು ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಖಾಸಗಿ ಬಸ್ ಮಾಲೀಕರು ತೆರಿಗೆಗಳನ್ನು ಏನು ಜಾಸ್ತಿ ಹಾಕಿದ್ದೀರಿ ಅದಕ್ಕಾಗಿ ಅವರುಗಳು ಮುಷ್ಕರ ಮಾಡುತ್ತಿದ್ದರು ಈಗ ಏನೋ ಮಾತುಕತೆ ಆಗಿ ಬಗೆಹರಿದಿದೆ ಎಂಬ ಒಂದು ಸುದ್ದಿ ಇದೆ. ಇದ್ದರೆ ಒಂದು ಸ್ಟೇಟ್‌ಮೆಂಟ್ ಮಾಡಿದರೆ ಇಡೀ ರಾಜ್ಯದ ಜನರಿಗೆ ಮಾತುಕತೆ ಆಗಿದೆ, ವಾಪಸ್ಸು ಬಸಗಳನ್ನು ನಾಳೆಯಿಂದ ಬಿಡುತ್ತಾರೆ ಎನ್ನುವುದು ಇದ್ದರೆ. ಸ್ಟೇಟ್‌ಮೆಂಟ್ ಮಾಡಿದರೆ ಅನುಕೂಲ. ಸೆಟಲ್‌ಮೆಂಟ್ ಆಗಿಲ್ಲ ಎನ್ನುವುದಾದರೆ ಅದರ ಬಗ್ಗೆ

ನಮ್ಮದು ಅಭ್ಯಂತರವಿಲ್ಲ.

ಶ್ರೀ ಸಿದ್ದರಾಮಯ್ಯ (ಹಣಕಾಸಿನ ಸಚಿವರು) : ಅವರ ಜೊತೆ ಮಾತುಕತೆ ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರ ಜೊತೆ ಮಾತುಕತೆ ಮಾಡಿದ್ದೀರಾ?

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಅವರು ಬಂದಿದ್ದರು. ಮಾತುಕತೆಯಾಗಿದೆ. ಅವರು ಕಾಲ ಅಂಥ ಮಾಡುತ್ತೇವೆಂದು ಮಧ್ಯಾಹ್ನ ಹೇಳಿದ್ದಾರೆ. ಬಹುಶಃ ಮುಷ್ಕರವನ್ನು ವಾಪಸ್ ತೆಗೆದುಕೊಂಡಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಬಿ.ಆರ್. ಪಾಟೀಲ್ (ಬಿಜಾಪುರ) : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಮಾನ್ಯ ಅರ್ಥಮಂತ್ರಿಗಳು ಆಯವ್ಯಯ ಪಟ್ಟಿಯನ್ನು ಏನು ಮೊನ್ನೆ ಪ್ರಕಟಿಸಿದರು. ಆದರೆ ಬಹಳ ದುಃಖದಿಂದ ಹೇಳಬೇಕಾಗುತ್ತದೆ. ಉತ್ತರ ಕರ್ನಾಟಕವನ್ನು ಸತತವಾಗಿ ಕರ್ನಾಟಕ ಪ್ರಾಂತ್ಯದಲ್ಲಿ ಸೇರಿದ ಮೇಲೆ ನಮ್ಮಲ್ಲಿ ಸತತವಾಗಿ ಅನ್ಯಾಯ ಆಗುತ್ತಾ, ಹೈದರಾಬಾದ್ ಕರ್ನಾಟಕ ಎನ್ನುವ ಭಾಗವನ್ನು ಬಿಟ್ಟರೆ ಬಹುಶಃ ಜಿಲ್ಲೆಯು ಒಂದು ಅನಾಥವಾದ ಜಿಲ್ಲೆ ಆಗಿದೆ. ಯಾವುದೇ ಒಂದು ರಾಜಕೀಯ ಪಕ್ಷದ ಇತಿಹಾಸವನ್ನು ಬದಲಾವಣೆ ಮಾಡಬೇಕಾದರೆ ಬಿಜಾಪುರ ಜಿಲ್ಲೆ ಬಹಳ ಮಹತ್ತರವಾದ ಪಾತ್ರವನ್ನು ಮಾಡಿದರೂ ಸಹ ಬಹುಶಃ ಆಡಳಿತಕ್ಕೆ ಬಂದಂತಹ ಜನರಿಗೆ ಮಾತನಾಡುವಂತಹ ಅವಕಾಶ ಇರಲಾರದು ಎನ್ನುವ ದೃಷ್ಟಿಯಿಂದ ನಮ್ಮ ಜಿಲ್ಲೆಯನ್ನು ಕಡೆಗಣಿಸಿದ್ದೀರೋ ಎಂದು ನಾನು ಪ್ರಾಮಾಣಿಕವಾಗಿ ವಿಚಾರವನ್ನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಯಾವುದೇ ಸರ್ಕಾರ ಬಂದರೂ ಸಹ ನಾವು ಅಕ್ಕಿಯ ವಿಚಾರವನ್ನು ಮಾತನಾಡುತ್ತಿದ್ದೇವೆಯೋ ಹೊರತು ನಮ್ಮ ಭಾಗದ ಪ್ರಮುಖ ಆಹಾರವಾದ ಜೋಳದ ಬಗ್ಗೆ ಸರ್ಕಾರ ಗಮನ ಕೊಡುತ್ತಿಲ್ಲ. ಅಕ್ಕಿಯನ್ನು ಸಬ್ಸಿಡಿಯಲ್ಲಿ ಕೊಡುತ್ತಿರುವ ಸರ್ಕಾರ, ನಮ್ಮ ಕಡೆಯ ಜನ ಅಕ್ಕಿಯನ್ನು ಹೆಚ್ಚಾಗಿ ತಿನ್ನುವುದಿಲ್ಲ. ಜೋಳವು ಒಂದು ಪ್ರಮುಖವಾದ ಊಟ ಎಂಬ ಒಂದು ಪದಾರ್ಥ ಇದ್ದರೂ ಸಹ ಪ್ರತಿ ಒಂದು ಸರ್ಕಾರ ಬಂದರೂ ಸಹ ಈ ಭಾಗದ ಜನರ ಅಭಿವೃದ್ಧಿಗಾಗಿ ಏನು ಸಹಾಯ ಮಾಡುತ್ತಿದೆ,? ಈ ಭಾಗದಲ್ಲಿ ಎಷ್ಟು ಜನರ ಆಗಿದೆ? ಬೆಂಗಳೂರಿನಲ್ಲಿ ಒಂದರೆಡು ದಿವಸ ನೀರು ಬರಲಿಲ್ಲ ಎಂದರೆ ಇಡೀ ವಿಧಾನಸಭೆಯಲ್ಲಿ ಹಾಹಾಕಾರ ಮಾಡುತ್ತಾರೆ. ಈ ಭಾಗದ ಯಾವುದೇ ಒಂದು ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಆದರೆ ಮಹತ್ವದ ಚರ್ಚೆಗಳನ್ನು ಸಹ ಬದಿಗೊತ್ತಿ ಅದನ್ನು ತೆಗೆದುಕೊಳ್ಳುತ್ತೇವೆ. ಆದರೆ ಬಹಳ ದುಃಖದಿಂದ ನಾವು ಹೇಳಬೇಕಾಗುತ್ತದೆ, ಬಿಜಾಪುರದ ಜನ ಅದರಲ್ಲಿಯೂ ವಿಜಾಪುರ ನಗರದ ಜನ 15 ಅಥವಾ 20 ದಿವಸಗಳಿಗೊಮ್ಮೆ ಹೊಲಸು ನೀರು ಕುಡಿಯುವಂತಹ ಪರಿಸ್ಥಿತಿ ಇದ್ದರೂ ಸಹ ನಮ್ಮ ಭಾಗದ ಪ್ರತಿನಿಧಿಗಳು ಸಮರ್ಥವಾಗಿ ಈ ಒಂದು ವಿಧಾನಸಭೆಯಲ್ಲಿ ನಮ್ಮ ಸಮಸ್ಯೆಗಳನ್ನು ಹೇಳಲಿಲ್ಲ. ಅದೇ ರೀತಿ ವಿಜಾಪುರ ವಿಶೇಷವಾಗಿ ತೋಟಗಾರರಿಗೆ ಬಹಳ ಅತ್ಯುತ್ತಮವಾದ ಪ್ರದೇಶವೆಂದು ಇಡೀ ಒಂದು ದೇಶದಲ್ಲಿಯೇ ಹೆಸರು ಪಡೆದಿರುವಂತಹ ಜಿಲ್ಲೆಗೆ ಸತತವಾಗಿ ಅನ್ಯಾಯ ಆಗಿದೆ. ಕೃಷ್ಣಾ ನೀರಾವರಿ ಆಗಲೀ, ಆ ಯೋಜನೆ ಬಗ್ಗೆ ಅನೇಕರು ಸನ್ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಡುತ್ತಿದ್ದಾರೆ. ಈ ಯೋಜನೆಗೆ 6620 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದರೆ ಪ್ರಾಮಾಣಿಕವಾಗಿ ಈ ಯೋಜನೆಗೆ

ಬೇಕಾದಂಥ ಹಣವನ್ನು ತೆಗೆದು ಇಡುತ್ತಿಲ್ಲ. ಅದರಲ್ಲೂ ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ಮುಳುವಾಡಿ ಏತ ನೀರಾವರಿ ಯೋಜನೆ ಮಾಡುತ್ತೇವೆಂದು ಜನರಿಗೆ ಒಂದು ಭರವಸೆಯನ್ನು ಸತತವಾಗಿ ಕೊಡುತ್ತಾ ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಈ ಯೋಜನೆ ಸುಮಾರು 2250 ಕೋಟಿ ರೂಪಾಯಿ ಯೋಜನೆ ಎಂದು ಅನೇಕ ಹಿರಿಯ ತಜ್ಞರು ಹೇಳುತ್ತಾರೆ. ಯಾವ ಒಂದು ಕೃಷ್ಣಾ ನೀರಾವರಿ ಯೋಜನೆ ಆಗಲಿಕ್ಕೆ ಸಿದ್ಧ ಇಲ್ಲ. ಮುಳುವಾಡಿ ಯೋಜನೆ ಬಗ್ಗೆ ನಾವು ಕೇವಲ ಸುಳ್ಳು ಆಶ್ವಾಸನೆಗಳನ್ನು ಕೊಡುವುದನ್ನು ಬಿಟ್ಟು ಬಿಜಾಪುರ ಜಿಲ್ಲೆಯ ಬರಗಾಲ ಪರಿಸ್ಥಿತಿಯನ್ನು ಯಾವ ರೀತಿಯಿಂದ ಮುಕ್ತ ಮಾಡಬೇಕು ಎನ್ನುವುದರ ಬಗ್ಗೆ ಪ್ರಾಮಾಣಿಕ ವಿಚಾರವನ್ನು ಸರ್ಕಾರ ಮಾಡಬೇಕು ಎಂದು ತಮ್ಮ ಮೂಲಕ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿನ ಪರಿಸ್ಥಿತಿಯು ಬೇಸಿಗೆಯಲ್ಲಿ ಬಂದಾಗ ಬೋರ್‌ಗಳನ್ನು ಹೊಡೆಸುತ್ತಾರೆ. ಆದರೆ ಬೋರ್‌ಗಳ ಮುಖಾಂತರ ನಮ್ಮಲ್ಲಿ ನೀರು ಬೀಳುವುದಿಲ್ಲ. ಸುಮಾರು 350-400 ಫುಟ್ ಹೋದರೂ ಸಹ ಒಂದು ಇಂಚು ನೀರು ಬೀಳಲಾರದಷ್ಟು ನಮ್ಮ ಅಂತರ್ಜಲ ಕಡಿಮೆ ಆಗಿದೆ ಕೊಳವೆ ಬಾವಿಗಳು ವಿಫಲವಾಗುತ್ತಿವೆ. ಆದರೆ ಸರ್ಕಾರ ನೀರಾವರಿ, ಕುಡಿಯುವ ನೀರಿನ ಯೋಜನೆಗಳು ಏನು ಇರುತ್ತವೆ, ಅದರ ಬಗ್ಗೆ ಪ್ರಾಮಾಣಿಕವಾಗಿ ಹಣವನ್ನು ಬಿಡುಗಡೆ ಮಾಡಿ ಸಂಬಂಧಪಟ್ಟಂಥ ಯೋಜನೆಗಳನ್ನು ಕಾರ್ಯಗತ ಮಾಡುವುದರ ಮುಖಾಂತರ ನಮಗೆ ನೀರು ಕೊಡಬೇಕೇ ಹೊರತು ಬೋರ್‌ನ್ನು ಹೊಡಿಸಿದ್ದೇವೆ ಎನ್ನುವಂತಹ ಲೆಕ್ಕವನ್ನು ತೋರಿಸುವುದನ್ನು ನಮ್ಮ ಭಾಗದ ನಮ್ಮ ಜಿಲ್ಲೆಯ ಮಟ್ಟಿಗೆ ಅದು ಉಪಯೋಗ ಆಗುವುದಿಲ್ಲ ಎನ್ನುವಂತಹ ಪ್ರಾಮಾಣಿಕ ವಿಚಾರವನ್ನು ತಮ್ಮ ಮುಂದೆ ಇಡಲಿಕ್ಕೆ ಬಯಸುತ್ತಿದ್ದೇನೆ. ಅದೇ ರೀತಿ ವಿದ್ಯುತ್ತಿನ ಕೊರತೆಯಿಂದ ಸಾಕಷ್ಟು ಪ್ರದೇಶದಲ್ಲಿ ಅಭಿವೃದ್ಧಿ ಆಗದೇ ರೈತರು ಕೇವಲ ಒಂದು ಇಂಚು ಎರಡು ಇಂಚು ನೀರಿನಲ್ಲಿ ದ್ರಾಕ್ಷಿ, ದಾಳಿಂಬೆ ಬೆಳೆಯುವಂತಹ ಅಂತರ್ ರಾಷ್ಟ್ರೀಯ ಮಾರುಕಟ್ಟೆಯನ್ನು ಪಡೆಯುವಂತಹ ಒಂದು ಅತ್ಯುತ್ತಮ ಬೆಳೆಯನ್ನು ನಾವು ಬೆಳೆದರೂ ಸಹ ಸರ್ಕಾರ ಸಬ್ಸಿಡಿ ಕೊಡುತ್ತಿಲ್ಲ. ಆದರೆ ಮಹಾರಾಷ್ಟ್ರ ರಾಜ್ಯದಲ್ಲಿ ಹನಿ ನೀರಾವರಿ ಪದ್ಧತಿಗೆ ನೂರಕ್ಕೆ ನೂರರಷ್ಟು ಸಬ್ಸಿಡಿ ಕೊಡುತ್ತಿದ್ದಾರೆ, ಆದರೆ ನಮ್ಮ ರಾಜ್ಯದಲ್ಲಿ ಅದಕ್ಕೆ ಕೇವಲ ಕೇಂದ್ರ ಸರ್ಕಾರದಿಂದ ಬರುವಂತಹ 50 ಪರ್ಸೆಂಟ್ ಸಬ್ಸಿಡಿಯನ್ನು ಅರ್ಥ ಸಚಿವರು ಹನಿ ನೀರಾವರಿ ಪದ್ಧತಿಗೆ ಅಂದರೆ ಡ್ರಿಪ್ ಇರಿಗೇಷನ್ ಸಿಸ್ಟಂಗೆ ಒತ್ತು ಕೊಟ್ಟು ತೋಟಗಾರಿಕೆಗೆ ಹೆಚ್ಚಿನ ಒಂದು ಅವಕಾಶವನ್ನು ಮಾಡಿಕೊಡಬೇಕು. ಅದೇ ರೀತಿಯಾಗಿ ಕುಡಿಯುವ ನೀರಿನ ಒಂದು ಬವಣೆಯನ್ನು ತಪ್ಪಿಸಬೇಕು. ನೀರಾವರಿ ಯೋಜನೆಗಳಿಗೆ ಪ್ರಾಮಾಣಿಕವಾಗಿ ಏನಾಗುತ್ತದೆ ಅಥವಾ ಇಲ್ಲವೇ ಎನ್ನುವಂತಹ ವಿಚಾರವನ್ನು ಹೇಳುವುದರ ಮುಖಾಂತರ ನಮ್ಮ ಜಿಲ್ಲೆಗೆ ಅನೇಕ ವರ್ಷಗಳಿಂದ ಆದಂತಹ ಅನ್ಯಾಯ ವನ್ನು ಸರಿಪಡಿಸದೇ ಹೋದರೆ ಬಹುಶಃ ಉತ್ತರ ಕರ್ನಾಟಕ ಈ ರಾಜ್ಯದಿಂದ ಬೇರೊಂದು ಪ್ರಾಂತ್ಯಕ್ಕೆ ಹೋಗುವಂತಹ ವಿಚಾರವನ್ನು ನಮ್ಮ ಭಾಗದ ಜನರು ಇವತ್ತು ಮಾಡಬೇಕಾಗಿದೆ. ನಮ್ಮ ಭಾಗದ ಅಭಿವೃದ್ಧಿಯನ್ನು ಕಡೆಗಣಿಸಿ ಕೇವಲ ಬೆಂಗಳೂರನ್ನು ಕೇಂದ್ರೀಕೃತ ಮಾಡಿಕೊಳ್ಳುತ್ತಿರುವುದನ್ನು ನೋಡಿ ನಮ್ಮ ಭಾಗದ ಜನರು ಬಹಳ ಚಿಂತಾಕ್ರಾಂತರಾಗಿದ್ದಾರೆ. ಅಲ್ಲಿ ಅನೇಕ ತರಹದ ಸಂಘಟನೆಗಳಿದ್ದು, ಉತ್ತರ ಕರ್ನಾಟಕದ ಬೇಡಿಕೆ ಕುರಿತು ಪ್ರಸ್ತಾವನೆ ಇಡುವಂಥ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಆದುದರಿಂದ, ದಯವಿಟ್ಟು ಸರ್ಕಾರ ಉತ್ತರ ಕರ್ನಾಟಕವನ್ನು ನಿರ್ಲಕ್ಷಿಸಕೂಡದು. ನಿರ್ಲಕ್ಷ್ಯ ಮಾಡಿದರೆ ಮುಂದೆ ಉತ್ತರ ಕರ್ನಾಟಕವನ್ನು ಬಿಟ್ಟುಕೊಡುವಂತೆ ಶಾಸಕರುಗಳು ಮೇಲೆ ಅಲ್ಲಿನ ಜನರು ಅನಿವಾರ್ಯವಾಗಿ ಒತ್ತಡ ತರುವಂಥ ಪರಿಸ್ಥಿತಿ ಉದ್ಭವಿಸಬಹುದು. ನಮ್ಮ ಭಾಗದಲ್ಲಿ ಈ ವಿಚಾರ ಬಹಳ ಗಂಭೀರತೆಯಿಂದ ನಡೆಯುತ್ತಿದೆ. ಇದರ ಬಗ್ಗೆ ಕಳಕಳಿಯ ವಿಚಾರ ಮೂಡಬೇಕು. ಕೇವಲ ರಾಜಕೀಯ ಭಾಷಣ, ನಾಟಕೀಯ ಮಾತುಗಳು, ಸುಳ್ಳು ಆಶ್ವಾಸನೆಗಳು ನಮಗೆ ಬೇಡ, ಪ್ರಾಮಾಣಿಕ ವಿಚಾರಗಳು ಬೇಕು. ಇವೊತ್ತು ಜನ ಇದರಿಂದ ಬೇಸತ್ತು ನಮ್ಮ ಜಿಲ್ಲೆಯಲ್ಲಿ ಹೊಸ ಬದಲಾವಣೆ ತಂದಿದ್ದಾರೆ. ನಮ್ಮ ಜಿಲ್ಲೆ ಯಾವಾಗಲೂ ಪ್ರತಿಯೊಂದು ರಾಜಕೀಯ ಬದಲಾವಣೆಗೆ ಪ್ರಮುಖ ಕಾರಣವಾಗಿದೆಯೆನ್ನುವ ವಿಚಾರದ ಬಗ್ಗೆ ತಾವು ಇತಿಹಾಸ ತೆಗೆದು ನೋಡಿ ತಿಳಿದುಕೊಂಡು, ನಮ್ಮ ಜಿಲ್ಲೆಗಾದ ಅನ್ಯಾಯವನ್ನು ಸರಿಪಡಿಸಬೇಕು. ಮತ್ತು ಇರುವ ಸಮಸ್ಯೆಗಳನ್ನು ಪ್ರಾಮಾಣಿಕವಾಗಿ ಬಗೆಹರಿಸಬೇಕೇ ಹೊರತು ಆಶ್ವಾಸನೆಗಳ ಮೂಲಕ ಬಗೆಹರಿಸಬಾರದೆಂದು ತಮ್ಮಲ್ಲಿ ಕಳಕಳಿಯ ಮನವಿ ಮಾಡುತ್ತಾ ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶ ಕೊಟ್ಟು ತಮಗೆ ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : 1995-96ನೇ ಸಾಲಿನ ಆಯವ್ಯಯ ಪತ್ರದ ಮೇಲಿನ ಸಾಮಾನ್ಯ ಚರ್ಚೆ ಇಲ್ಲಿಗೆ ಮುಗಿಯಿತು. ಸನ್ಮಾನ್ಯ ಹಣಕಾಸು ಹಾಗೂ ಯೋಜನಾ ಸಚಿವರು ನಾಳೆ ಪ್ರಾತಃಕಾಲ 9.30 ಗಂಟೆಗೆ ತಮ್ಮ ಉತ್ತರ ಪ್ರಾರಂಭಿಸಲಿದ್ದಾರೆ. ಈಗ ಸದನವನ್ನು ಮುಂದೂಡಿ ಪುನಃ ನಾಳೆ ಬೆಳಿಗ್ಗೆ 9.30 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ರಾತ್ರಿ 8 ಗಂಟೆ 32 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 30ನೇ ಮಾರ್ಚಿ ಮಾಹೆ 1995ರ ಗುರುವಾರದಂದು ಬೆಳಿಗ್ಗೆ 9.30 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)